ಪ್ರಾಣಲಿಂಗಿಯಂಗವಾಗಿಯೂ ಪ್ರಾಣಲಿಂಗಿಯಲ್ಲಿಯೆ ಅಡಗಿ, ಆಕಾಶ ಶರಣನಂಗವಾಗಿಯೂ ಶರಣನಲ್ಲಿಯೇ ಅಡಗಿ, ಯಾತ್ಮನೈಕ್ಯನಂಗವಾಗಿಯೂ ಐಕ್ಯನಲ್ಲಿಯೆ ಅಡಗಿ, ಯಾಚಾರಲಿಂಗದಂಗಭಕ್ತನಾಗಿಯೂ ಭಕ್ತನಲ್ಲಿಯೆ ಅಡಗಿ ಗುರುಲಿಂಗದಂಗಮಹೇಶ್ವರನಾಗಿಯೂ ಮಾಹೇಶ್ವರನಲ್ಲಿಯೆ ಅಡಗಿ, ಶಿವಲಿಂಗದಂಗ ಪ್ರಸಾದಿಯಾಗಿಯೂ ಪ್ರಸಾದಿಯಲ್ಲಿಯೆ ಅಡಗಿ, ಜಂಗಮಲಿಂಗದಂಗಪ್ರಾಣಲಿಂಗಿಯಾಗಿಯೂ ಪ್ರಾಣಲಿಂಗಿಯಲ್ಲಿಯೆ ಅಡಗಿ, ಪ್ರಸಾದಲಿಂಗದಂಗಶರಣನಾಗಿಯೂ ಶರಣನಲ್ಲಿಯೆ ಅಡಗಿ, ಮಹಾಲಿಂಗದೆಂಗೈಕ್ಯನಾಗಿಯೂ ಐಕ್ಯನಲ್ಲಿಯೆ ಅಡಗಿ ಯಿಂತೀ ಯಾರಂಗವೇ ಕರ್ಪುರವಾಗಿ ಯಿಂತೀಯಾಱು ಲಿಂಗವೆ ಮಹಾಜ್ಯೋತಿಯಾಗಿ ಯುರಿಕರ್ಪ್ಪುರ ಸಂಯೋಂಗ (?) ವಾಗಲು ಶರಣಂಗಂ ಲಿಂಗಕ್ಕಮಭಿನ್ನವಾದ ಕಾರಣ ಯೆಸ್ನಂ ತಾನೆನಿಸಿದ ವರಗುರು ಸೋಮೇಶ್ವರನು ಯೆಂಬ ಶಬ್ದಕ್ಕರ್ಥಂ.

Colophon :—

ಪಂಚೀಕರಣಂ ಸಮಾಪ್ತಂ.

(ವಿ-ವಿ.)—

ಸಮಗ್ರವು. ಸ್ವಲ್ಪಮಟ್ಟಿಗೆ ಶಿಥಿಲವಾಗಿದೆ. ಉತ್ತಮವಾದ ಲಿಪಿ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಸೇರಿವೆ. ಅವಾವು ವೆಂಬುದನ್ನು ೪೪೬ ನೆಯ ನಂಬರಲ್ಲಿ ನೋಡಿ ತಿಳಯುವುದು.

ಇದರಲ್ಲಿ ೧೩ ಪರಿವರ್ಧಿನೀ ಷಟ್ಪದಿಗಳೂ ಅವಕ್ಕೆ ಟೀಕೆಯೂ ಬರೆದಿವೆ. ಮಧ್ಯದಲ್ಲಿ ಒಂದೆರಡು ಸಂಸ್ಕೃತ ಶ್ಲೋಕಗಳೂ ಕಂಡುಬರುವುವು. ಇದರಲ್ಲಿ ಪಂಚಭೂತಗಳ ಸಂಯೋಗವು ನಿರೂಪಿತವಾಗಿದೆ. ಕವಿಯಾರೆಂಬುದು ಈ ಗ್ರಂಥದಿಂದ ಗೊತ್ತಾಗುವುದಿಲ್ಲ.

No. 481. ಪಂಚೀಕರಣ.

PAÑCĪKARAṆA.

Substance, Śrītāḷa. Size, $9\frac{5}{8} \times 2\frac{3}{32}$ inches. Pages, 15. Lines, 10 on a page. Character, Kannaḍa. Condition, very much injured. Appearance, old.

Begins on fol. 1*a* of the manuscript described under No. 451 ante.

Complete.

Same work as the above.

(ವಿ-ವಿ.)—

ಸಮಗ್ರವು. ಅತ್ಯಂತ ಶಿಥಿಲವಾಗಿದೆ. ಲಿಪಿ ಸಾಮಾನ್ಯವಾದುದು. ಇದರೊಡನೆ ಇನ್ನೂ ಕೆಲವು ಗ್ರಂಥಗಳು ಬರೆದು ಸೇರಿಸಿವೆ. ಅವಾವುವೆಂಬುದನ್ನು ೪೫೧ ನೆಯ ನಂಬರಲ್ಲಿ ನೋಡಿ ತಿಳಿಯುವುದು.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 482. ಪಂಚೀಕರಣ.

PAÑCĪKARAṆA.

Substance, palm-leaf. Size, $8\frac{7}{8} \times 1\frac{3}{8}$ inches. Pages, 5. Lines, 6 on a page. Character, Kannaḍa. Condition, injured. Appearance, old.

Begins on fol. 37*b* of the manuscript described under No. 449 ante.

Incomplete.

Same work as the above.

(ವಿ-ವಿ.) —

ಅಸಮಗ್ರವು. ಪಲ್ಲವಿಯೂ ಅದಕ್ಕೆ ಅರ್ಥವೂ ಮೊದಲ ಪದ್ಯವೂ ಇವೆ. ಶಿಥಿಲವಾಗಿದೆ. ಬರೆವಣಿಗೆ ಸಾಮಾನ್ಯವಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಬರೆದು ಸೇರಿಸಿವೆ. ಅವಾವುವೆಂಬುದನ್ನು ೪೪೯ ನೆಯ ನಂಬರಲ್ಲಿ ನೋಡಿ ತಿಳಿಯುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 483. ಪ್ರಭುದೇವರಸೃಷ್ಟಿಯ ವಚನಗಳು.

PRABHUDĒVARASṚṢṬIYA VACANAGAḶU.

Substance, palm-leaf. Size, $7\frac{7}{8} \times 1\frac{1}{16}$ inches. Pages, 3. Lines, 8 on a page. Character, Kannaḍa. Condition, slightly injured. Appearance, old.

Begins on fol. 34*b* of the manuscript described under No. 435 ante.

Complete.

Describes the order of creation, and enumerates the several tattvas or categories according to Vīraśaiva system. The name of the author is Prabhudēva.

Beginning:—

ಪ್ರಥಮದಲ್ಲಿ ವಸ್ತು ಯೇನು ಯೇನೂ ಇಲ್ಲದಂದು ಮಹಾಘನಶೂನ್ಯ ಬ್ರಹ್ಮವಾಗಿದ್ದಿತು. ಅಂತಿರ್ದ ಪರವಸ್ತು ತಾನೇ ತನ್ನ ದಿವ್ಯಾನಂದ ಸ್ವಲೀಲಾ ಸ್ವಭಾವದಿಂದಾದುದು. ಆತ್ಮನೆಂಬ ಅಂಗಸ್ಥಳ. ಅಂತಪ್ಪ ಜೀವಾತ್ಮನೆಂಬಂಗ ಸ್ಥಳಕ್ಕೆ ಸೇರಿಸಿದ ತತ್ವಂಗಳಿಪ್ಪತ್ತೈದು. ಅವಾವುವೆಂದೊಡೆ:—ಶ್ರೋತ್ರಾದಿ ಜ್ಞಾನೇಂದ್ರಿಯಂಗಳೈದು. ವಾಗಾದಿಕರ್ಮೇಂದ್ರಿಯಂಗಳೈದು. ಇಂತೀ ಅಂಗತತ್ವ ಶಬ್ದಾದಿ ವಿಷಯಂಗಳೈದು. ಪ್ರಾಣಾದಿವಾಯುಗಳೈದು. ಮನೋಬುದ್ಧಿ ಚಿತ್ತಾಹಂಕಾರ ಜೀವಂಗಳೈದು. ಇಂತೀ ಅಂಗತತ್ವ ಇಪ್ಪತ್ತೈದು. ತನ್ನೊಳಗೆ ಸಾಮರಸ್ಯೈಕ್ಯವನೆಯ್ದಲೋಸ್ಕರ ಭಕ್ತಿ ತದರ್ಥವಾಗಿ ಮಹಾಘನ ಪರಾತ್ಪರವಪ್ಪ ದಿವ್ಯಲಿಂಗವು ಹನ್ನೊಂದು ತತ್ವವಾಯಿತು ಇಂತೀ ಹನ್ನೊಂದಾದ ಪರಿಕ್ರಮವೆಂತೆಂದೊಡೆ:—ಶಾಂತ್ಯಾದಿ ಕಲೆಗಳೈದು. ಶಿವಾದಿ ಕರ್ತೃಗಳೈದು, ಪರಶಿವ ತತ್ವವೊಂದು, ಇಂತೀ ಲಿಂಗತತ್ವ ಹನ್ನೊಂದು,

End :—

ಅಂಗ ತತ್ವ ಇಪ್ಪತ್ತೈದು. ಲಿಂಗತತ್ವ ಹನ್ನೊಂದು ಇಂತೀಯುಭಯತತ್ವ ಮೂವತ್ತಾಱು ಯೇಕಾರ್ಥವಾಗಿ ಸರ್ವಶೂನ್ಯವನೆಯ್ದಿದ ಪರಿಕ್ರಮದ ನಿರ್ಣಯದ ಬೆಡಗು ತತ್ವಮಸ್ಯಾದಿ ವಾಕ್ಯಾರ್ಥಂಗಳಲ್ಲಿ ಕಾಣಲಾಯಿತ್ತು. ಅದೆಂತೆಂದೊಡೆ :—'ತತ್' ಪದವೆ ಲಿಂಗ, 'ತ್ವಂ' ಪದವೆ ಅಂಗ, ಈ ಯೆರಡರ ಐಕ್ಯವೆ ಅಸಿಯೆಂಬುದಾಗಿ, ಇಂತೀ ಸಕಲನಾಗಬಲ್ಲ. ನಿಷ್ಕಲನಾಗಬಲ್ಲ. ಸಕಲ ನಿಷ್ಕಲಾ ತೀತವಾಗಿ ಯೇನೂ ಇಲ್ಲದಂದು ಮಹಾಘನ ಶೂನ್ಯ ಬ್ರಹ್ಮವಾಗಿರಬಲ್ಲನಯ್ಯಾ ನಮ್ಮ ಗೋ (ಗು) ಹೇಶ್ವರ ಲಿಂಗವು.

ಪ್ರಭೊದೇವರ ಸೃಷ್ಟಿಯ ವಚನವು ಸಮಾಪ್ತವು.

Colophon :—

(ವಿಶೇ.)—

ಸಮಗ್ರವಾಗಿದೆ. ಸ್ವಲ್ಪಮಟ್ಟಿಗೆ ಶಿಥಿಲವಾಗಿದೆ. ಬರೆವಣಿಗೆ ಉತ್ತಮವಾದುದು. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಸೇರಿವೆ. ಅವಾವುವೆಂಬುದನ್ನು ೪೩೫ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು. ಈ ಪುಸ್ತಕದ ಕೊನೆಯಲ್ಲಿ ಕರಣ ಹಸುಗೆಯ ೧೪ ನೆಯ ಓಲೆಯೊಂದಿದೆ.

ಇದು ವಚನದಲ್ಲಿ ಬರೆದಿದೆ. ವೀರಶೈವ ಮತರೀತಿಯಾದ ವೇದಾಂತ ವಿಷಯವು ಇದರಲ್ಲಿ ಬರೆದಿದೆ. ಗ್ರಂಥಾಂತ್ಯದಲ್ಲಿ 'ಗೋಹೇಶ್ವರ' ಎಂಬ ಅಂಕಿತವಿದೆ. ಕವಿ ಪ್ರಭುದೇವನೆಂಬುವನು. ಈತನ ವಿಷಯವಾಗಿ ಕರ್ಣಾಟಕ ಕವಿಚರಿತ್ರೆ (ಸಂಪುಟ ೧, ಪುಟ ೧೪೮) ಯನ್ನು ನೋಡುವುದು.

No. 484. ಪ್ರಭುಲಿಂಗಲೀಲೆ (ಪ್ರಶಸ್ತಿ ಸಹಿತ).
PRABHULIṄGALĪLE (WITH PRAŚASTI.)

Substance, palm-leaf, Size, 10¼ × 1⅜ inches. Pages, 803. Lines, 7 on a page. Character, Kannaḍa. Condition, much injured. Appearance, old. Mode of writing, good but not free from mistakes.

Complete.

On Vīraśaiva system according to the teachings of Allamaprabhu. The particulars regarding the author are not to be found in this manuscript, but from a stanza appearing in other copies of the same work it is presumed that Cāmarasa who lived about 1430 A.D. is the author.

Beginning :—

ಶ್ರೀ ಕೈಲಾಸಪುರವರಾಧೀಶ್ವರನ ಧ್ಯಾನಾರೂಢರುಮಪ್ಪ ಶಿವೈಕ್ಯರೊಪ್ಪವೆಂತೆಂದೊಡೆ :— ಪುತ್ತೊತ್ತಪ್ಪುದುಂ ಸಿದ್ಧರಾಮಯ್ಯ ದೇವರು, ಗೊಗ್ಗಯ್ಯನು, ಹಡಪದಪ್ಪಣ್ಣನು, ಮಡಿವಾಳ ಮಾಚಯ್ಯ, ಕಿನ್ನರ ಬೊಮ್ಮಣ್ಣ, ನಾಗಾಯಕ್ಕನು, ಚೆನ್ನಬಸವಣ್ಣ, ಮುಕ್ತಾಯಕ್ಕನು, ಅಜಗಣ್ಣ, ಮಹಾದೇವಿಯಾಕ್ಕನು, ಮರುಳ ಶಂಕರದೇವರು, ಗೋರಾಕ್ಷನು, ಋಷಿಜನಂಗಳು ಇಂತಿವರಿಗೆ ಮುಖ್ಯ[ವಾ] (ನಾ)ದ ಬಸವದಂಡಾಧೀಶ್ವರನು,ಪ್ರಭುದೇವರು ಬರಲಿದಿರ್ಗೊಂಡು ಕರ

ಣಾವ್ರೊಕ್ಕ್ಯ ಪಾದಾಕ್ರಾಂತನಾಗಿ ಬಿಜಯಂಗೆಯಿಸಲು ಶೂನ್ಯಸಿಂಹಾಸನದ ಮೇಲೆ ಕುಳಿತು ಸರ್ವ ನೈವೇದ್ಯಂಗಳಂ ಕಂಡುಂಡು ಕೊಂಡಾಡಿ ಪರಿಣಾಮಿಸಿ ಸರ್ವರಿಗೆ ತೃಪ್ತಿಯನೆಯ್ದಿಸಿ ಆ ಗಣಂಗಳಿಗೆ ಏಕಲಿಂಗ ಶಿವೈಕ್ಯ ಪದವಿಯನಿತ್ತ ಪ್ರಭುದೇವರ ಶ್ರೀ ಪಾದಂಗಳನನವರತ ನೆನೆದು ಎನ್ನ ಭವಂ ನಾಸ್ತಿಯಂ ಮಾಡುವೆ. ಕೇಳದ ಭಕ್ತರ ಕರ್ಮಕ್ಷಯವೆಂದು ಪ್ರಭುಲೀಲಾಮೃತವ ನೋ[ಡು](ದು)ವೆನು ಚಿತ್ತೈಸಿ ಭಕ್ತಜನಂ:—. . . . ವಚನ ॥ ಸಹಜದಿಂದ ನಿರಾಲಂಬವಾಯಿತ್ತು, ನಿರಾಲಂಬದಿಂದ ನಿರಾಳವಾಯಿತ್ತು, ನಿರಾಳದಿಂದ ನಿರವಯವಾಯಿತ್ತು ನಿರವಯುವದಿಂದ ನಿರಾದಿಯಾಯಿತ್ತು, ನಿರಾದಿಯಿಂದ ಶೂನ್ಯವಾಯಿತ್ತು, ಶೂನ್ಯದಿಂದ ನಿಶ್ಶೂನ್ಯವಾಯಿತ್ತು, ನಿಶ್ಶೂನ್ಯದಿಂದ ಮಹಾಪ್ರಕಾಶವಾಯಿತ್ತು, ಮಹಾಪ್ರಕಾಶದಿಂದ ಬೆಳಗಾಯಿತ್ತು, ಬೆಳಗಿ(ಕಿ)ನಿಂದ ಘೋರಾದ ಸ್ವರೂಪವಾಯಿತ್ತು ಕಾಹಾ ಗೋಹೇಶ್ವರಾ ! ॥ ೧ ॥

* * * *

ಕಂದಂ :—

ಶ್ರೀ ಗುರು ಗೋ ಹೇಶ್ವರ[ನ] ದಿ-।
ವ್ಯಾಗಮ ಲೀಲೆಯಲಿ ಸಂದ ಗತಿಗಳ ಮೊದಲೊಳ್ ॥
ಕೈಗೈದು ಸಂಚಿ[ವಿ] ತಾರ್ಥದ ।
ಭಾಗೆಯನಾನೊರೆವೆನಿಳೆಗೆ ವಸ್ತುಕದಿಂದಂ ॥

ಮತ್ತೇಭ ವಿಕ್ರೀಡಿತ ವೃತ್ತಂ ॥

ವಿನುತ ಶ್ರೀ ಪ್ರಭುಲಿಂಗಲೀಲೆಯೆನಲುಂ ಮೇಣ್ ಲಿಂಗಲೀಲಾಬ್ಧಿಯೆಂ-।
ದೆನುತಂ ಭಾವಿಸೆಬಲ್ಲವರ್ಗೆ ಮುದದಿಂ ಕೈಸಾರ್ದು ತತ್ತ್ರೈವಿಧ-।
ಸ್ವನ ಮೇಕಾರ್ಥತೆಯೆಂದು ಲಾಲಿಸಿ ಮಹೋತ್ಸಾಹಂಗಳಂ ತಾಳ್ದ ಸ।
ಜ್ಜನಮೆಲ್ಲಂ ಸುಖಿಸುತ್ತಮಿರ್ಕೆ ಮೆಱೆಗಾಚಂದ್ರಾರ್ಕತಾರಂಬರಂ ॥

ಕಂದಂ :—

ಪ್ರಭುಲಿಂಗಲೀಲೆಗೊಪ್ಪುವ।
ಶುಭದಿಪ್ಪತ್ತೈದು ಗತಿಗಳಂತಾ ಗತಿಯೊಳ್ ॥
ಪ್ರಭುಲಿಂಗಲೀಲೆ ಗಗನ।
ಪ್ರಭೆ ಕೆಱಗನ್ನಡಿಯೊಳೆಸೆವ ತೆಱದಿಂದೆಸೆಗುಂ ॥

ಮೊದಲ ಗತಿಯೊಳ್ಪುರಾತರ।
ಪದಪದ್ಮಸ್ತುತಿ ಸಮಸ್ತ ಭಕ್ತಾಧೀಶಾ-।
ಸ್ಪದ ದೇವತಾಭವಾವಳಿ।
ಮುದದಿಂ[ದಂ] ಪ್ರಭುಲಿಂಗಲೀಲೆಯೊಳ್ಪಸರಿಸುಗುಂ

ಪಲ್ಲ—

ಭಾಮಿನಿಷಟ್ಪದಿ :—

ಶ್ರೀಮದಮೃತಾಂಶುಪ್ರಮಾಳ।
ಪ್ರೇಮಿಗಳಿಗಾನಂದ ಲೀಲೆಯ।
ನೇಮಿಸಿದನೆಮ್ಮಲ್ಲಮಪ್ರಭು ಗುರುಗುಹೇಶ್ವರನು ॥

ಶ್ರೀಮದಮಲ ಜ್ಞಾನ ಭಕ್ತಿ ।
ಪ್ರೇಮ ವೇದ ಪುರಾಣ ಶಾಸ್ತ್ರ ।
ಸ್ತೋತ್ರಘನತ ನುತಚಾರುಚರಣಾಂಭೋಜ ಘನಮಹಿಮ ।
ನಾಮ ರೂ[ಪ್ರಕ್ರಿ] (ಪಕ್ರಿಯಾ) ಕಳಾಪ [ವಿ] । (?)
ರಾಮನನುಪಮ ದಿವ್ಯತೇಜ ।
ವ್ಯೋಮ ಮೂರುತಿ ಗುರುಗುಹೇಶ್ವರಲಿಂಗ ಶರಣಾರ್ಥಿ ! ॥
ಕಾಯದೊಳು ಗುರು ಲಿಂಗ ಜಂಗಮ ।
ದಾಯತ್ರವನೆಱಿಯಲ್ಕೆ ಸುಲಭೋ ।
ಪಾಯದಿಂದಿದಿರಿಟ್ಟು ಬಾಹ್ಯಸ್ಥಲದ ಕುರುಹಾಗಿ ॥
ದಾಯದೋರಿ ಸಮಸ್ತ ಭಕ್ತನಿ- ।
ಕಾಯವನು ಪಾವನವ ಮಾಡಿದ ।
ರಾಯ ಪೂರ್ವಾಚಾರ್ಯ ಸಂಗನ ಬಸವ ಶರಣಾರ್ಥಿ ॥

* * *

ಅಲ್ಲಮಪ್ರಭು ಸಂಪ್ರದಾಯದ ।
ಸಲ್ಲಲಿತಸನ್ಮಾರ್ಗವನು ನಾ- ।
ನೆಲ್ಲರರಿವಂದದಲಿ ಪೇಳುವೆನುಚಿತವಚನದಲಿ ॥
ಸೊಲ್ಲಿನೊಳಗಣ ಸೊಂಪಿನಿಂಪನು ।
ಬಲ್ಲವರು ಭಾವಕರು ಭಕ್ತಿಯು
ಬಲ್ಲಿದರು ಲಾಲಿಸುವುದೀ ಪ್ರಭುಲಿಂಗಲೀಲೆಯನು ॥

* * * *

ವಿವರಿಸುವಡೀ ಲೀಲೆಯನು ಹೇ- ।
ಳುವನು ದಿಟನಾನಲ್ಲ ಮಿಗೆಕೇ- ।
ಳುವರು ಮಾನವರಲ್ಲವಿದು ಸಾಮಾನ್ಯತರವಲ್ಲ ॥
ಶಿವನ ನಟನಾಟಕದ ಮಹಿಮೆಯ ।
ಶಿವನೆ ಬಲ್ಲವನಂತು ಕಾರಣ ।
ಶಿವನ ಭಕ್ತರು ತಿಳಿವುದೀ ಪ್ರಭುಲಿಂಗಲೀಲೆಯನು ॥

ಬಾಯ ನುಡಿಗಳ ಕೇಳಿ ಕಿವಿಯೊಳ- ।
ಗಾಯೆನುತ ಪರಿಣಮಿಸಿ ಹೋಹ ವಿ- ।
ಡಾಯವಲ್ಲಿದು ತಮ್ಮ ತನುಮನಧನವನೆಲ್ಲವನು ॥
ಬೀಯ ಮಾಡಿಯೆ ಲಿಂಗದಲಿ ನಿಜ ।
ಕಾಯ ನಿಲುಪಡೆ ನಿತ್ಯ ರಪ್ಪಡೆ ।
ದಾ[ಯ] (ಯಿ)ಗರು ಲಾಲಿಸುವುದೀ ಪ್ರಭುಲಿಂಗಲೀಲೆಯನು ॥

* * * *

ಸತ್ತವರ ಕಥೆಯಲ್ಲ ಜನನದ ।
ಕುತ್ತದಲಿ ಕುದಿಕುದಿದು ಕರ್ಮದ ।
ಕತ್ತಲೆಗೆ ಸಿಲುಕುವ[ದೆ] (ರ) ಸೀಮೆಯ ಹೊಲಬು ತಾನಲ್ಲ ॥
ಹೊತ್ತು ಹೋಗದೆ ಪುಂಡರಾಲಿಪ ।
ಮತ್ತಮತಿಗಳ ಗೋಷ್ಠಿಯಲ್ಲಿದು ।
ಸತ್ಯಶರಣರು ತಿಳಿವುದೀ ಪ್ರಭುಲಿಂಗಲೀಲೆಯ[ಲಿ] (ನು) ॥

*   *   *   *

End :—

ಆಲಸಿಕೆಯಿಂದಾ[ದದೊಡಲು] (ದರೋದಲು) । (?)
ನಾಲಗೆಯ . ಭರಬಿಟ್ಟು ಹೋಹುದು ।
ಕೇಳಲನುಕರಿಸಿದೊಡೆ ಕರಣೇಂದ್ರಿಯಕೆ ದಣಿವಹುದು ॥
ಆಲಿಸಿದಪದ ಸರ್ವಮನಸಿನ । (?)
ಮೇಲೆ ನಿಲೆ ನಿತ್ಯತ್ವವಹುದೆನೆ ।
ಲಾಲಿಸುವುದಿವನೊಲಿವುದೀ ಪ್ರಭುಲಿಂಗಲೀಲೆಯಲಿ ॥
ನೋಡಿದರೆ ಭಯ ಭಕ್ತಿಯಲಿ ಕೊಂ- ।
ಡಾಡಿದರೆ ರಾಗದ[ವಿ] (ಲಿ) ರಂಜಿಸಿ ।
ಹಾಡಿದರೆ ಹಾರೈಸಿದರೆ ಕಿವಿಗೊಟ್ಟು ಕೇಳದಡೆ ॥
ಕೂಡೆ ಲೀಲೆಯನರಿದು ಹರುಷವ ।
ಮಾಡಿದರೆ ಭವಬಾಧೆಗಳ ನೀ- ।
ಡಾಡಿ ನಿತ್ಯವ ಹಡೆವರೀ ಪ್ರಭುಲಿಂಗ ಲೀಲೆಯಲಿ ॥
ಒಂದು ಸಾವಿರದೊಂದು ಶತ ಹ- ।
ನ್ನೊಂದು ಪದನೆಂದೆಂಬ ಪರುಷದ ।
ಸಂದ ಶಿಲೆಯನು ಬಳಸಿಯಿಪ್ಪತ್ತೈದು ಗತಿಯೆಂಬಾ
ಹೊಂದಿಗೆಯ ಸೋಪಾನಗಳ ಬಲಿ- ।
ದಂದವಿಸಿಯಲ್ಲಮನ ಪರಮಾ- ।
ನಂದದಲಿ ಲೀಲಾಮೃತಸ[ರೋ ವರ] (ರಸಿ) ಯಾಯ್ತು ಜಗವ್ರೊಗೆಯ ॥ (?)

Colophon :—

ಅಂತು ಗತಿ ೨೫ ಕಂ ೧೧೧೫ ಕಂ ಮಂಗಲ ಮಹಾಶ್ರೀ ವಿಭವ ಸಂವತ್ಸರದ ವೈಶಾಖ ಬ. ೫ ನಿರುದದಲ್ಲು ಮಧುರೆ ಮಾರಸಮುದ್ರದ ಶ್ಯಾನಭಾಗ ಬಾಣವಾಡಿಯಲ್ಲಿ ಓದಿಸುವ ನಂಜಪ್ಪಯ್ಯ ಬರೆದ ಪ್ರಭುಲಿಂಗಲೀಲೆ ಸಮಾಪ್ತ ಮಂಗಳಮಹಾಶ್ರೀ.

(ವಿ-ವಿ.)—

ಸಮಗ್ರ. ಅತಿ ಶಿಥಿಲ. ಲಿಪಿಯು ಚೆನ್ನಾಗಿದೆ. ಅಲ್ಪಸ್ವಲ್ಪ ತಪ್ಪಿದೆ.

ಇದು ವಸ್ತುಕ ಗ್ರಂಥವಾಗಿದೆ. ಇದರಲ್ಲಿ ಮೂರು ಕಂದಗಳೂ, ಒಂದು ಮತ್ತೇಭವಿಕ್ರೀಡಿತವೃತ್ತವೂ ೨೫ ಗತಿಗಳಲ್ಲಿಯೂ ಕೂಡಿ ೧೧೧೧ ಭಾ. ಷಟ್ಪದಿಗಳೂ ಇವೆ. ಗತಿ

ಗಳಾದಿಯುಲ್ಲಿ ಪ್ರಭುದೇವ, ಬಸವ, ಮಹಾದೇವಿಯಕ್ಕ ಇವರೇ ಮೊದಲಾದವರ ಹಲವು ವಚನ ಗಳೂ ಇವೆ. ಗ್ರಂಥಾದಿಯುಲ್ಲಾರೋ ಬರೆದು ಸೇರಿಸಿದೊಂದು ಪ್ರಶಸ್ತಿವಾಕ್ಯವಿದೆ. ಗ್ರಂಥಾ ವತಾರದಲ್ಲಿ ಗುರುಗುಹೇಶ್ವರಲಿಂಗ (ಅಲ್ಲಮ) ಸಂಗನ (ಬಸವ) ಚೆನ್ನ ಸಂಗನ ಬಸವ (ಚೆನ್ನ ಬಸವ) ಸಿದ್ಧರಾಮ, ಮಹಾದೇವಿಯಕ್ಕ, ಮಡಿವಳ ಮಾಚಯ್ಯಾದ್ಯರ ಸ್ತುತಿಯಿದೆ. ಈ ಗ್ರಂಥದಲ್ಲಿ ಪ್ರತಿಪಾದಿಸಲ್ಪಟ್ಟ ವಿಷಯವು—

" ಅಲ್ಲಮಪ್ರಭು ಸಂಪ್ರದಾಯದ ।
ಸಲ್ಲಲಿತ ಸನ್ಮಾರ್ಗವನು ನಾ ।
ನೆಲ್ಲರರಿವಂದದಲಿ ಪೇಳುವೆನುಚಿತ ವಚನದಲಿ " ॥

ಈ ಪದ್ಯಾರ್ಥದಿಂದ ಕ್ರೋಡೀಕರಿಸಲ್ಪಟ್ಟಿದೆ. ಈ ಕೃತಿಯು, ಮರುಳು ಶಂಕರದೇವ, ಸಿದ್ಧರಾಮ ಗೊಗ್ಗಯ್ಯ, ಮಡಿವಳ ಮಾಚಯ್ಯ, ಕಿನ್ನರ ಬೊಮ್ಮಣ್ಣಾದಿಗಳು ಪ್ರಭುದೇವರ ಸಮಕಾಲೀನರೆಂದು ಹೇಳುವುದರಿಂದವರ ಕಾಲನಿರ್ಣಯವನ್ನು ಮಾಡಲು ಬಹಳ ಅನುಕೂಲಿ ಸುತ್ತದೆ.

ಈ ಗ್ರಂಥದಿಂದ ಕರ್ತೃವಿನ ವಿಷಯವಾಗಿ ಯಾವಂಶವೂ ತಿಳಿಯ ಬರುವುದಿಲ್ಲ. ಆದರೆ ೪೯೧ ನಂಬರಿನ ಪುಸ್ತಕದಲ್ಲಿ ಮಾತ್ರವಿರುವ :—

ಕಂ॥ ಶ್ರೀಗುರು ಗುಹೇಶಶರಣಂ ।
ರಾಗದ್ವೇಷಾದಿ ವಿರಹಿತಾಂತಃ ಕರಣಂ ॥
ಯೋಗಮತಕಾರಣಂ ನಿಖಿ- ।
ಲಾಗಮನಿಪುಣಂ ಸನಾಮಸೀಮಾಚಾಮಂ

ಎಂಬೀ ಪದ್ಯದಿಂದ ಚಾಮ ಅಥವ ಚಾಮರಸನು ಇದರ ಕೃರ್ತವೆಂದು ತಿಳಿದು ಬರುವುದು. ಈತನ ಕಾಲವು ಸುಮಾರು ಕ್ರಿ.ಶ. ೧೪೩೦ ಎಂದು ಕವಿಚರಿತೆಯುಲ್ಲಿ ಹೇಳಿದೆ.

No. 485. ಪ್ರಭುಲಿಂಗಲೀಲೆ (ಪ್ರಶಸ್ತಿ ಸಹಿತ).
PRABHULIṄGALĪLE (WITH PRAŚASTI)

Substance, paper. Size, 11⅛ × 7⅛ inches. Pages, 204. Lines, 18 on a page. Character, Kannaḍa. Condition, good. Appearance, old. Mode of writing, not bad and full of mistakes.

Complete.

Same work as the above.

(ವಿ.ವಿ.)—

ಸಮಗ್ರ. ಬರೆವಣಿಗೆಯು ಸಾಮಾನ್ಯವಾಗಿದೆ. ತಪ್ಪಿಗೆ ಮೇರೆಯೇ ಇಲ್ಲ.

ಇದು ಹಿಂದೆ ವಿವರಿಸಿದ ಗ್ರಂಥವೇ ಆಗಿದೆ.

No. 486. ಪ್ರಭುಲಿಂಗಲೀಲೆ (ಪ್ರಶಸ್ತಿ ಸಹಿತ).
PRABHULIṄGALĪLE (WITH PRAŚASTI).

Substance, paper. Size, 12¼ × 7¼ inches. Page, 171. Lines, 19 on a page. Character, Kanarese. Condition, good. Appearance, old. Mode of writing, good but not free from mistakes.

Complete.

Same work as the above.

(ವಿ-ವಿ.)—

ಸಮಗ್ರ. ಬರೆವಣಿಗೆಯು ಚೆನ್ನಾಗಿದೆ. ಅಲ್ಪಸ್ವಲ್ಪ ತಪ್ಪಿದೆ.

ಇದು ಹಿಂದೆ ವರ್ಣಿತವಾದ ಗ್ರಂಥವಾಗಿದೆ.

No. 487. ಪ್ರಭುಲಿಂಗಲೀಲೆ (ಪ್ರಶಸ್ತಿ ಸಹಿತ).

PRABHULIṄGALĪLE (WITH PRAŚASTI).

Substance, paper. Size, $12\frac{1}{4} \times 7\frac{1}{4}$ inches. Pages, 256. Lines, 19 on a page. Character, Kannaḍa. Condition, good. Appearance, old. Mode of writing, bad not free from mistakes.

Begins on fol. 4*a*. The other work herein is—(1) Ṣaṭliṅganirvacana 135*a*.

Complete.

Same work as the above.

(ವಿ-ವಿ.)—

ಸಮಗ್ರ. ಪ್ರತಿಯು ಚೆನ್ನಾಗಿದೆ. ಬರವಣಿಗೆಯು ಏನೂ ಚೆನ್ನಾಗಿಲ್ಲ. ತಪ್ಪಿದೆ.

ಇದು ಹಿಂದೆ ವಿವರಿಸಿದ ಗ್ರಂಥವೇ ಆಗಿದೆ.

No. 488. ಪ್ರಭುಲಿಂಗಲೀಲೆ (ಪ್ರಶಸ್ತಿ ರಹಿತ).

PRABHULIṄGALĪLE (WITHOUT PRAŚASTI).

Substance, Śrītāḷa. Size, $10\frac{3}{4} \times 1\frac{2}{16}$ inches. Pages, 228. Lines, 8 on a page. Character, Kannaḍa. Condition, injured. Appearance, old. Mode of writing, good but not free from mistakes.

Complete.

Same work as the above.

(ವಿ-ವಿ.)—

ಸಮಗ್ರ. ಶಿಥಿಲ. ಬರೆವಣಿಗೆಯು ಚೆನ್ನಾಗಿದೆ. ತಪ್ಪಿದೆ ಗ್ರಂಥಾಂತ್ಯದಲ್ಲಿ ಷಡ-ಕ್ಷರಿ ಲಿಂಗದ ಮತ್ತು, ಅಲ್ಲಮ ಪ್ರಭುವಿನ ಸ್ತುತಿರೂಪವಾದ ಐದೈದು ಪದ್ಯಗಳು ಬರೆದು ಸೇರಿಸಲ್ಪಟ್ಟಿವೆ.

ಇದು ಹಿಂದೆ ವಿವರಿಸಿದ ಗ್ರಂಥವೇಸರಿ.

No. 489. ಪ್ರಭುಲಿಂಗ ಲೀಲೆ (ಪ್ರಶಸ್ತಿ ರಹಿತ).

PRABHULIṄGALĪLE (WITHOUT PRAŚASTI).

Substance, palm-leaf. Size, $18\frac{3}{16} \times 1\frac{5}{16}$ inches. Pages, 195. Lines, 6 on a page. Character, Kannaḍa. Condition, much injured. Appearance, old. Mode of writing, good and free from mistakes.

Complete.

Same work as the above.

(ವಿ-ವಿ.)—

ಸಮಗ್ರ. ಅತಿಶಿಥಿಲ. ಹಲವೆಡೆಗಳಲ್ಲಿ ಓಲೆಗಳ ಅಲ್ಪಸ್ವಲ್ಪ ಭಾಗಗಳು ಮುರಿದು ಹೋಗಿವೆ. ಲಿಪಿಯು ಉತ್ತಮವಾಗಿದೆ. ಶುದ್ಧವಾದ ಪ್ರತಿ.

ಇದು ಹಿಂದೆ ವಿವರಿಸಿದ ಗ್ರಂಥವೆ ಆಗಿದೆ.

No. 490. ಪ್ರಭುಲಿಂಗಲೀಲೆ (ಪ್ರಶಸ್ತಿ ಸಹಿತ).

PRABHULIṄGA LĪLE (WITH PRAŚASTI)

Substance, paper. Size, $11\frac{3}{8} \times 7\frac{1}{8}$ inches. Pages, 295. Lines, 20 on a page. Character, Kannaḍa. Condition, fair. Appearance, old. Mode of writing, not bad and not free from mistakes.

Begins on fol. 1*a*. The other work herein is (1) Bijjaḷa caritre (Sāṅgatya) 157*a*.

Complete.

Same work as the above.

(ವಿ-ವಿ).—

ಸಮಗ್ರ. ಪ್ರತಿಯು ಚೆನ್ನಾಗಿದೆ. ಲಿಪಿಯು ಸಾಮಾನ್ಯವಾಗಿದೆ. ತಪ್ಪಿದೆ. ಇದರೊಡನೆ ಬಿಜ್ಜಳಚರಿತ್ರೆಯಿದೆ.

ಇದು ಹಿಂದೆ ವರ್ಣಿತವಾದ ಗ್ರಂಥವಾಗಿದೆ.

No. 491. ಪ್ರಭುಲಿಂಗಲೀಲೆ (ಪ್ರಶಸ್ತಿ ರಹಿತ).

PRABHULIṄGALĪLE (WITHOUT PRAŚASTI).

Substance, paper. Size, $12\frac{13}{16} \times 7\frac{7}{8}$ inches. Pages, 285. Lines, 19 on a page. Character, Kannaḍa. Condition, good. Appearance, old. Mode of writing, not bad and not free from mistakes.

Complete.

Same work as the above.

(ವಿ.ವಿ.)—

ಸಮಗ್ರ. ಬರೆವಣಿಗೆಯು ತಕ್ಕಮಟ್ಟಿಗಿದೆ. ತಪ್ಪಿದೆ.

ಇದು ಹಿಂದೆ ವಿವರಿಸಿದ ಗ್ರಂಥವೇ ಸರಿ.

No. 492. ಪ್ರಭುಲಿಂಗಲೀಲೆ (ಪ್ರಶಸ್ತಿ ರಹಿತ).

BRABHULIṄGALĪLE (WITHOUT PRAŚASTI).

Substance, palm-leaf. Size, $14\frac{1}{8} \times 1\frac{5}{16}$ inches. Pages, 228. Lines, 7 on a page. Character, Kannaḍa. Condition, badly injured. Appearance, old. Mode of writing, good and free from mistakes

Incomplete.

Same work as the above.

(ವಿ.ವಿ.)—

ಒಂದರಿಂದ 24 ಗತಿಗಳು ಸಮಗ್ರವಾಗಿವೆ. 25 ನೆಯ ಗತಿಯ ಆದಿಯ ನಾಲ್ಕು ಪದ್ಯಗಳಿವೆ. ಅತ್ಯಂತ ಶಿಥಿಲ. ಹಲವೆಡೆಗಳಲ್ಲಿ ಓಲೆಗಳು ಮುರಿದು ಚೂರು ಚೂರಾಗಿವೆ. ಉತ್ತಮವಾದ ಲಿಪಿ. ತಪ್ಪಿಲ್ಲ.

ಇದು ಹಿಂದೆ ವಿವರಿಸಿದ ಗ್ರಂಥವೇ ಆಗಿದೆ.

No. 493. ಪ್ರಭುಲಿಂಗಲೀಲೆ (ಪ್ರಶಸ್ತಿ ಸಹಿತ)-
PRABHULIṄGALĪLE (WITH PRAŚASTI).

Substance, paper. Size, $12\frac{5}{16} \times 8$ inches. Pages, 68. Lines, 18 on a page. Character, Kannaḍa. Condition, injured. Appearance, new. Mode of writing, good but not free from mistakes.

Incomplete.
Same work as the above.

(ವಿ-ವಿ.)—

ಅಸಮಗ್ರ. ಶಿಥಿಲ. ಬರೆವಣಿಗೆಯು ಚೆನ್ನಾಗಿದೆ. ತಪ್ಪಿದೆ.

ಪ್ರಥಮಗತಿಯಿಂದ ಐದನೆಯ ಗತಿಯವರೆಗೆ ಸಮಗ್ರವಾಗಿದೆ. ಆರನೆಯ ಗತಿಯಲ್ಲಿ ೨೬ ಪದ್ಯಗಳಿವೆ.

ಇದು ಹಿಂದೆ ವಿವರಿಸಿದ ಗ್ರಂಥವಾಗಿದೆ.

No. 494. ಪ್ರಭುಲಿಂಗ ಲೀಲೆ (ಪ್ರಶಸ್ತಿ ರಹಿತ.)
PRABHULIṄGALĪLE WITHOUT PRAŚASTI)

ubstance, paper. Size, $8\frac{1}{8} \times 6$ inches. Pages, 17. Lines, 27 on a page. Character, Kannaḍa. Condition, slightly injured. Appearance, old. Mode of writing, bad and not free from mistakes.

Begins on page 106. The other works herein are—(1) Kālajñāna 18. (2) Vidyāraṇyaśaka 22. (3) Kālajñāna, etc. (4) Kālajnāna 51. (5) Kālajñāna 52. (6) Viparyayashthiti 53. (1 to 6 are Sanskrit works.) (7) Puṣkarakhaṇḍādhyāyagaḷu 56. (8) Kōtagrāma Mahājanaśāsana 67. (9) Pāṇḍyarāyavamśāvaḷi 101. (10) Bhairadēviyavamśāvaḷi 103.

Incomplete.
Same work as the above.

(ವಿ-ವಿ.)—

ಅಸಮಗ್ರ. ಆದಿಯಿಂದ ಏಳನೆಯ ಗತಿಯವರೆಗಿರುವ ಗ್ರಂಥಭಾಗದಿಂದ ಆಯ್ದು ತೆಗೆದುಕೊಂಡ ೧೦೪ ಪದ್ಯಗಳಿವೆ. ಅಲ್ಪ ಶಿಥಿಲ. ಬರೆವಣಿಗೆಯು ಏನೂ ಚೆನ್ನಾಗಿಲ್ಲ. ತಪ್ಪುಗಳಿವೆ.

ಇದು ಹಿಂದೆ ವಿವೃತವಾದ ಗ್ರಂಥವಾಗಿದೆ.

No. 495. ಪ್ರಭುಲಿಂಗ ಲೀಲೆ-
PRABHULIṄGALĪLE.

Substance, palm-leaf. Size, $15\frac{3}{4} \times 13$ inches. Pages, 200. Lines, 6 on a page. Character, Kannaḍa. Condition, very much injured. Appearance, old. Mode of writing, good and free from mistakes.
Incomplete.
Same work as the above.

(ವಿ-ವಿ.)—

ಅಸಮಗ್ರ. ಒಂದನೆಯ ಮತ್ತು ಎರಡನೆಯ ಗತಿಗಳನ್ನುಳಿದು ಮಿಕ್ಕ ಗತಿಗಳಿವೆ. ಬಹಳ ಶಿಥಿಲ. ಅಲ್ಲಲ್ಲಿ ಓಲೆಗಳು ಚೂರಾಗಿವೆ. ಲಿಪಿಯು ಚೆನ್ನಾಗಿದೆ. ತಪ್ಪಿಲ್ಲ.

ಇದು ಹಿಂದೆ ವಿವರಿಸಿದ ಗ್ರಂಥವಾಗಿದೆ.

No. 496. ಪ್ರಭುಲಿಂಗ ಲೀಲೆ (ಪ್ರಶಸ್ತಿ ರಹಿತ).

PRAḂHULIṄGALĪLE (WITHOUT PRAŚASTI).

Substance, paper. Size, $11\frac{1}{8} \times 5$ inches. Pages, 394. Lines, 11 on a page. Character, Kannaḍa. Condition, badly injured. Appearance, old. Mode of writing, bad and not free from mistakes.

Incomplete.

Same work as the above.

ಅಸಮಗ್ರ. ಶಿಥಿಲತಮ. ಬರೆವಣಿಗೆಯು ಚೆನ್ನಾಗಿಲ್ಲ. ತಪ್ಪಿದೆ.

(ಶಿ-ವಿ.)—

ಚೆನ್ನಾಗಿರುವ ಪತ್ರವೊಂದೂ ಇದರಲ್ಲಿ ಕಣ್ಣಿಗೆ ಬೀಳುವಂತಿಲ್ಲ. ಹಳೆಯ ಕಾಗದಗಳ ತುಮುರುತುಮುರಾದ ಚೂರುಗಳ ಸಂಗ್ರಹವೆಂದು ಈ ಪುಸ್ತಕಕ್ಕೆ ಹೆಸರಿಡುವಷ್ಟು ದುಸ್ಥಿತಿಯಲ್ಲಿದೆ. ಪುಸ್ತಕದ ಕಡೆಯಲ್ಲಿರುವ ಪುಟಸಂಖ್ಯೆಯನ್ನು ಇಲ್ಲಿ ಕೊಡಲಾಗಿದೆ. ಇದರಲ್ಲಾವ ಭಾಗವಿದೆ ಎಂದು ಹೇಳಲು ಸಾಧ್ಯವಿಲ್ಲ.

ಇದು ಹಿಂದೆ ವಿವರಿಸಿದ ಗ್ರಂಥವೇ ಆಗಿದೆ.

No. 497. ಪ್ರಸಾದ ಚರಿತೆ.

PRASĀDACARITE.

Substance, palm-leaf. Size, $11\frac{1}{2} \times 1\frac{3}{16}$ inches. Pages, 28. Lines, 6 on a page. Character, Kannaḍa. Condition, injured. Appearance, old. Mode of writing, good but not free from mistakes.

Begins on fol. 22*a*. The other work herein is (1) Vīrēśvara carite 2*a*.

Complete.

The Prasāda or grace of Liṅga through worship is stated in this work as essential for self-realization.

The name of the author is Vīraṇārya, who was the son of Śāntīśvara (younger brother of Rēvaṇārādhya) grandson of Rēṇukā and the great grandson of Kollipāki Sōmēśvara. He was a disciple of Siddhaliṅgārya and seems to be a native of Mysore.

Beginning :—

ಸಾಂಗತ್ಯ.

ಶ್ರೀಪರಮೇಶನುಮಾಪಯೋಧರಗಂಧ । ಲೇಪಿತವಕ್ಷ ! ಭಾಲಾಕ್ಷ !
ಗೋಪಕೇತನ ! ಗಿರಿಚಾಪ ! ಸೋಮೇಶ ! ದ- । ಯಾಪೂರ ! ಸಲಹೆನ್ನನೊಲಿ [ದು ॥
ಫುಲ್ಲಶರಾರಿ ! ಪೂತಾಂಗ ! ಭವಾನೀ । ವಲ್ಲಭನಿಂದ್ರಾದಿಗಳ ॥
ದಲ್ಲಣ ! ತ್ರಿಣಪುರವಾಸ ! ಮಹೇಶ್ವರ ! । ಮಲ್ಲಿಕಾರ್ಜುನ ! ಪಾಲಿಪುದು ॥
ಫಣಿಕಂಕಣ ! ಪಾವಕ್ಷೆಯನಗಜಾ । ಪ್ರಣಯ ! ಪರಾಪರಮೂರ್ತಿ ! ।
ಗಣನಾಥಪಿತ ! ಗಂಗಾಧರ ! ಮೈಸೂರ । ತ್ರಿಣಯ ! ಪಾಲಿಪುದೆನ್ನುವನು ।

* * * *

ಈ ಮಹಾಕೃತಿಯಾವುದೆನೆ ಚರಲಿಂಗದು । ದ್ದಾಮಪ್ರಸಾದ ಶಂಕರಗೆ
ಪ್ರೇಮದೆ ಕುಡಬಹುದೆಂದು ವೇದಾಗಮ । ಸ್ತೋಮ ರಾಜಿಪ ಚಾರು ಚರಿತೆ ॥
ಈ ಕವಿತೆಯ ಪೇಳ್ವನಾರೆನೆ ವರಕೊಲ್ಲಿ- । ಪಾಕಿಯ ಸೋಮೇಶ್ವರನ ॥
ಶ್ರೀಕುಕ್ಷಿಯೊಳಗವತರಿಸಿ ಯೊಪ್ಪಿದ ಜಗ । ದೇಕಸದ್ಗುರು ರೇಣುಕೇಂದ್ರ ॥
ಆರೇವಣಸಿದ್ಧೇಶವಂಶಾರ್ಣವ । ತಾರಾಧೀಶನೆಂದೆನಿಪ ॥
ಸೂರಿಜನೇಕನೊಪ್ಪಿದ ರೇವಣಾರಾಧ್ಯ । ಪಾರಪೌರಾಣಕೋವಿದನು ।
ಆ ಮಹಾರೇವಣಾರಾಧ್ಯನನುಜನು- । ದ್ದಾಮಶ್ರೀಶಾಂತೇಶ್ವರನ ।
ರಾಮಣೀಯಕವಾದ ಸುತ ವೀರಣಾರ್ಯನು । ಪ್ರೇಮದೊ ಳೊರೆದ ನೀಕೃತಿಯ ।

* * * *

ಶಿಲೆಯ ಲಿಂಗವ ಸದ್ಭಕ್ತಿಯಿಂದಲಿ ಬ್ರಹ್ಮ ।
ಸಲೆಕಾಲ ಪೂಜೆಯನೆಸಗಿ ॥
ಒಲಿಸಿ ಬ್ರಹ್ಮತ್ವವ ಪಡೆದನೆಂದಾ ಯತಿ ।
ತಿಳುಹಿದ ರಾಮದೀಕ್ಷಿತನಾ ॥

ಸಾಕ್ಷಿ. “ ಬ್ರಹ್ಮಾ ಪೂಜಯತೇ ನಿತ್ಯಂ ।
ಲಿಂಗಂ ಶೈಲಮಯಂ ಶುಭಂ ॥
ತಸ್ಯ ಸಂಪೂಜನಾತ್ತೇನ ।
ಪ್ರಾಪ್ತಂ ಬ್ರಹ್ಮತ್ವಮುತ್ತಮಂ ॥ ”

* * * *

ಚರಪ್ರಸಾದ ಪಾದಾಂಬುವ ಪ್ರಾಣಾಂ । ತರದೊಳು ಕೊಂಡ ಮಾನವಗೆ ॥
ಮರಳ ಜನ್ಮಾಂತರವಿಲ್ಲಾಗಿ ಗುರುಚರ- । ದುರುಶೇಷವ ಕೊಳ್ಳಬೇಕು ॥

ಸಾಕ್ಷಿ.

(ಸ್ವಚ್ಛಂದ ಭೈರವೀ).

ಪಾದತೀರ್ಥಪ್ರಸಾದಂಚ । ಪ್ರಾಣಾತ್ಯಂತ್ಯಂತಕಾಲಷು ? ॥
ಪುನರ್ಜನ್ಮವಿನಾಶಶ್ಚ । ತಸ್ಮಾತ್ಪ್ರಸಾದ ಸೇವನಾತ್ ॥

* * * *

End :—

ಚಾರುಮಹಿಮ ಚರಾಚರವರಸೂತ್ರ । ಧಾರ ಶ್ರೀಸಿದ್ಧಲಿಂಗೇಶ ।
ವೀರಣಾರಾಧ್ಯನ ಸಲಹಿದ ವೈರಾಗಿ । ಸೂರಿ ಯತೀಶನೊಪ್ಪಿದನು ॥
ಗಂಗೆಯನಾಳ್ದನ ಸನ್ನಿಭನೊಪ್ಪಿದನು ಸಿದ್ಧ । ಲಿಂಗಾರ್ಯ ನೊಲಿದೊಪ್ಪಿದನು ॥
ತುಂಗಗಣೊಳಸಂಧಿಯೊಳಗೊಪ್ಪಿದ । ಮಂಗಲಮಸ್ತು ಶ್ರೀ ಶ್ರೀ ಶ್ರೀ ॥

ಚಂಪಕಮಾಲಾವೃತ್ತಂ.

ಭಕುತ ಮಹೇಶನೊಪ್ಪುವ ಪ್ರಸಾದಿಯನುದ್ಘತ ಪ್ರಾಣಲಿಂಗಿ ಸಾ ।
ತ್ವಿಕಶರಣ್ಯೈಕ್ಯನಾಚರಗುರುಂ ಶಿವಲಿಂಗಜಂಗಮ ಸತ್ಪ್ರಸಾ । (?)
ಧಕರೆನಿಪಾಱು ಲಿಂಗದನುವಂ ತಿಳಿದಾ ಮೊಗಕಂ ಸುಚಿತ್ತ ಹ ।
ಸ್ತಕ ಮೊದಲಾಱರೊಳ್ ಭಜಿಪ ರಕ್ಷಿಸುಗೆಮ್ಮವ ಸಿದ್ಧಲಿಂಗವೇ ! ॥

Colophon :—

ಮಂಗಲಮಹಾ ಶ್ರೀ ಶ್ರೀ.

(ವಿ-ವಿ)—

ಸಮಗ್ರ. ಬಹಳಶಿಥಿಲ, ಗ್ರಂಥಮಾತವಿದೆ. ಬರೆವಣಿಗೆಯು ಚೆನ್ನಾಗಿದೆ. ತಪ್ಪಿದೆ.

ಇದು ಸಾಂಗತ್ಯದಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ಮೂರುಸಂಧಿಗಳಿವೆ. ಒಟ್ಟು ೩೫೩ ಪದ್ಯಗಳಿವೆ. ಆಧಾರವಾಗಿ ಬೇರೆ ಗ್ರಂಥಗಳಿಂದ ಆಯ್ದು ತೆಗೆದುಕೊಂಡ ಸಂಸ್ಕೃತ ಶ್ಲೋಕಗಳು ಹೆಚ್ಚು ಕಡಿಮೆ ೨೦೦ ಕ್ಕೆ ಮಿಕ್ಕಿವೆ.

ಇದರಲ್ಲಿ ಪ್ರತಿಪಾದಿತವಾದ ವಿಷಯವನ್ನು ಕವಿಯು :—

" ಈ ಮಹಾಕೃತಿಯಾವುದೆನೆ ಚರಲಿಂಗದು ।
ದ್ದಾಮಪ್ರಸಾದ ಶಂಕರಗೆ ।
ಪ್ರೇಮದೆ ಕಾಣಬಹುದೆಂದು ವೇದಾಗಮ ।
ಸ್ತೋಮ ರಾಜಿಪ ಚಾರು ಚರಿತೆ " ॥

ಈ ಪದ್ಯದಲ್ಲಿ ಸೂಚಿಸಿರುವನು.

ಕವಿಯು ವೀರಣಾರ್ಯನು. ಈತನು ಮೈಸೂರಿನವನೆಂದು ತೋರುತ್ತದೆ. ಇವನ ಗುರು ಸಿದ್ಧಲಿಂಗಾರ್ಯನು. ಇವನು ತನ್ನ ವಂಶಪರಂಪರೆಯನ್ನು ಹೀಗೆ ಹೇಳಿಕೊಂಡಿರುವನು :— ಕೊಲ್ಲಿಪಾಕೆಯ ಸೋಮೇಶ್ವರ ; ಮಗರೇಣುಕೇಂದ್ರ ; (ರೇಣು) ಮಗ ರೇವಣಾರಾಧ್ಯ । ಇವನ ತಮ್ಮ ಶಾಂತೇಶ್ವರ, ಇವನ ಮಗ ಕವಿ ವೀರಣಾರ್ಯ.

ಈತನು ಸುಮಾರು ೧೬೫೦ (A.D.) ರಲ್ಲಿದ್ದನೆಂದು ಕವಿಚರಿತ್ರೆಯಲ್ಲಿ (ಸಂಪುಟ ೨ ಪುಟ ೪33) ಬರೆದಿದೆ.—

No. 498. ಪ್ರಸಾದಿಭೋಗಣ್ಣ ವಚನ.

PRASĀDIBHŌGAṆṆA VACANA.

Substance, palm-leaf. Size, 12 × $1\frac{1}{8}$ inches. Pages, 4. Lines, 5 on a page. Character, Kannaḍa. Condition, much injured. Mode of writing, not bad and free from mistakes.

Begins on fol. 60*a*. The other works here in are (1) Mōḷigayyana vacana 4*a*, (2) Kalyāṇada Bhaṇḍāriśāntana vacana 32*a*, (3) Kōlaśāntayya vacana 34*b*, (4) Madavayyavacana 37*b*, (5) Bibbibācayya vacana 38*b*, (6) Meremindayyana vacana 40*b*, (7) Arivina Māritndeya vacana 42*b*, (8) Sivaleṅkamañcaṇṇavacana 48*a*, (9) Dakkeya Bommaṇṇa vacana 51*b*, (10) Manumunigummaṭavacana 55*a*, (11) Mārayyavacana 59*b*, (12) Āsarada Rēkaṇṇavacana 62*a*, (13) Bāhūra Bommaṇṇavacana 63*a*, (14) Turugāhirāmaṇṇavacana 64*a*, (15) Dāsōhada saṅgaṇṇa vacana 65*b*, (16) Goggavveya vacana 66*b*, (17) Gāvudimācayya vacana 67*a*, (18) Taḷavārakāmidēvayyavacana 67*b*, (19) Gāṇada Kaṇṇappavacana 68*b*, (20) Mēdara Kekkayyavacana 70*a*, (21) Rāyasada Mañcaṇṇvacana 71*a*, (22) Sāgarada Bommaṇṇavacana 72*a*, (23) Guptamañcaṇṇavacana 73*a*, (24) Nagarada Bommaṇṇavacana 75*b*, (25) Dasarayyavacana 77*a*, (26) Kambhada Māritandeya vacana 79*a*, (27) Sattigeya Kāyakadavara vacana 80*b*, (28) Rakkasa-bommaṇṇavacana 81*b*, (29) Kadira Remmavveya vacana 82*b*, (30) Kannada Māritandeya vacana 83*b*, (31) Nijaguṇana vacana 84*a*, (32) Ekāntarāmitandeya vacana 84*b*, (33) Anāmikuāgayyavacana 85*b*, (34) Jōdara Māyaṇṇavacana 86*b*, (35) Kalakētayyavacana 87*b*, (36) Dēvamūrtisaṅgaṇṇavacana 88*b*, (37) Muktayyavacana 89*b*, (38) Soddaḷabācarasa vacana 92*a*, (39) Akkagaḷa vacana 107*a*, (40) Dāsayyavacana 118*b*, (41) Candimarasara vacana 127*b*, (42) Yōgināthana vacana 134*a*.

Incomplete.

Contains three vacanas on Vīraśaiva philosophy by Prasādi Bhōgaṇṇa.

Beginning :—

ತತ್ವಸೂತ್ರ ಶಕ್ತಿಸಂಬಂಧವಾಗಿಹುದು. ಜ್ಞಾನಸೂತ್ರ ಬಿಂದುಸಂಬಂಧವಾಗಿಹುದು. ಕಳಾ ಸೂತ್ರ ದಿವ್ಯತೇಜ : ಪ್ರಕಾಶವಾಗಿಹುದು. ವರ್ತುಳಗೋಮುಖ ಗೋಳಕಾಕಾರದಲ್ಲಿ ಲಿಯಲ್ಪಟ್ಟುದು(?) ಲಿಂಗಭೇದ ಆಹ್ವಾನದಿಂದ ಆರೂಪಿಸಿ ಸ್ವಯುವಾದುದು(?) ಆ ಪರಮಾನಂದದಲ್ಲಿ ಪರವಶವಾಗದೆ ನಿಂದಱಿವು ತಾನೆ ಚೆನ್ನಬಸವಣ್ಣ ಪ್ರಿಯಭೋಗ ಮಲ್ಲಿಕಾರ್ಜುನ ಲಿಂಗವು.

End :—

ಲಿಂಗೋದ್ಭವ ಐವತ್ತೆರಡಕ್ಷರಂಗಳಲ್ಲಿ ವರ್ತುಳಗೋಮುಖ ಗೋಳಕಾಕಾರಕ್ಕೆ ಸಂಬಂಧಿಸುವಲ್ಲಿ ಅಕಾರ ವರ್ತುಳಾಕಾರಕ್ಕೆ, ಉಕಾರ ಗೋಮುಖಕ್ಕೆ, ಮಕಾರ ಗೋಳಕಾಕಾರಕ್ಕೆ, ಇಂತೇ ಆದ್ಯಾಧಾರಾತ್ಮಬೀಜ ಓಂಕಾರದಿಂದುದ್ಭವವಾದ ಅಕ್ಷರಾತ್ಮಕವಸ್ತುವನಱಿದು ಬ್ರಹ್ಮ ವರ್ತುಳದಲ್ಲಡಗಿ ವಿಷ್ಣು ಗೋಮುಖದಲ್ಲಿನಿಂದು ರುದ್ರಗೋಳಕಾಕಾರಕ್ಕೆ ಸಂಬಂಧಿಯಾಗಿ ಉತ್ಪತ್ತಿಸ್ಥಿತಿಲಯಂಗಳ ಲಕ್ಷಿಸುತ್ತಾ ಜಗದ್ಹಿತಾರ್ಥವಾಗಿ ಸ್ವಯಂಭೂ ಉಮಾಪತಿಯಾದ ಚೆನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗ [ವಾದೆಹೆ] (ವಾಗಿಹೆ) ನೆಂದು ॥ ೨ ೬

(ವಿ-ವಿ.)—

ಅಸಮಗ್ರ. ಶಿಥಿಲ. ಬರೆವಣಿಗೆಯು ತೃಪ್ತಿಕರವಾಗಿಲ್ಲ. ತಪ್ಪೂ ಇದೆ.

ಇದು ವಚನಗ್ರಂಥವಾಗಿದೆ. ಇದರಲ್ಲಿ "ಚೆನ್ನಬಸವಣ್ಣ ಪ್ರಿಯ ಭೋಗಮಲ್ಲಿಕಾರ್ಜುನ ಲಿಂಗಾ"ಂಕಿತಗಳಾಗಿರುವ ಮೂರು ವಚನಗಳಿವೆ. ಇವು ವೀರಶೈವ ವೇದಾಂತ ಪ್ರತಿಪಾದಕಗಳಾಗಿರುವುವು. ಈ ವಚನಗಳನ್ನು ಬರೆದವನು ಪ್ರಸಾದಿಭೋಗಣ್ಣನೆಂಬಾತನು. ಈತ ಯಾವ ಕಾಲದವನೋ ತಿಳಿಯದು.

No. **499.** ಬಲ್ಲಾಳರಾಯನ ಕತೆ.

BALLĀḶARĀYANAKATE.

Substance, palm-leaf. Size, $13\frac{1}{4} \times 1\frac{3}{16}$ inches. Pages, 56. Lines, 5 on a page. Character, Kannaḍa. Condition, much injured. Appearance, old.

Complete.

But the third fol. which contains the stanzas 25th to 38th, is not found.

Describes the story of Bāllaḷārāya, a great devotee of Śiva.

The story runs thus—God Siva, in the form of a jaṅgama, came to Ballāḷarāya to test the firmness of his devotion, and asked for the hand of his wife to which Ballāḷarāya consented. Siva was much pleased with him and took him to Kailāsa. The name of the author is not known.

Beginning :—

ದಿವದೀಶನು ದಯದಲಿಭುವನಪತಿ ಬಲ್ಲಾಳ ।
ಶಿವಪ್ರೂಜೆಯನುಮಾಡಿ ಮುದದಿಂದ ಚಾವಡಿಗೆ ।
ರವಿಕುಲರಾಯ ನಡೆತಂದ ॥

ಭೂವರನಂದೆಳವೆಟಿತೆ ಚಾಪೆಯರೆಡಬಲದಲ್ಲಿ (?)
ಸೇವಕಸತಿಯರಿ ದಿರಲಿ ಸಾಹೊಯೆನುತ ।
ಚಾವಡಿಗೆ ರಾಯ ನಡೆತಂದ ॥

. . . . . . ಗದ್ದುಗೆಯಲ್ಲಿ ಪೊಡವಿಪ ಕುಳ್ಳಿರೆ ।
ಹಡಪ ಬೊಕ್ಕಸವು ಕುಡಿನೀರ ಗಿಂಡಿಯು ।
ಪಿಡಿದವರೆಡಬಲದೊಳಗಿರೆ ನಿಂದು ॥

ಇತ್ತರದಲಿ ಚಾಮರ . . . . ಸುವರು ।
ಮತ್ತೆಕಾಳಾಂಜಿ ಕಡಹರವ ಪಿಡಿದಿಹರು ।
ಕ್ಷತ್ರಿಯರಾಯನಿದಿರಲ್ಲಿ ॥

ಅಂಗ ಬಂಗಾಳರು ಮು . . . . . . ।
. . . . ವಿಯು ಮಾಲೆಯಾಳ್ದರಸುಗಳು ।
ಹಿಂಗದೋಲೈಸುತಿಹರಲ್ಲಿ ॥

ಲಾಳ ಗುಜ್ಜರ ಗುಳ್ಳು ಕಾಳಿಂಗ ಕಾಶ್ಮೀರ।
ಚೋಳಮಂಡಲವು ಕಲಹ . . . . .
ನೋಲಗದೊಳಗಿರೆ ನಿಂದು ॥

ಹಿಮಸೇತಿಕೊಳಗಾಗಿ ಅವನಿವನೆನ್ನದೆ। (?)
ಅವನಿಯನಾಳ್ವ ದೊರೆಗಳು ನಿಂದಿರ್ದರು।
ಭುವನಪತಿರಾಯನಿದಿರಲ್ಲಿ ॥

. . . . ಣಾಗಳ ತೊಲಗಿಸುತ।
ಬಂದ ಕರಣಿಕರು ಯಿದಿರಾಗಿ ಕೈಮುಗಿದು।
ನಿಂದು ವ್ರೋಲಗಳ ಬರೆವುತ ॥

ಎಕ್ಕಟಿಗರು ಪಾಯಕರು ಯಿಕ್ಕೆಲ . . ಯರು।
ರಕ್ಕಸತುಳುವ ತುರುಕರು ವ್ರೊಪ್ಪಿಹರು।
ಅರ್ಕಕುಲ [ದ] ರಾಯನಿದಿರಿನಲಿ ॥
ವೀರರು ಕಾಳಗಕೆ ಹಾರರು ಪ್ರಾಣವ।
ಧೈರ್ಯರು(?) ರಣದ . ಕರಿಗಳು . . . ಳಧು।
ಧೀರನೋಲಗದೊಳಗಿರೆ ನಿಂದು ॥
ಅರಿರಾಯದಲ್ಲಣ ಪರರಾಯಮಸ್ತಕಶೂಲ।
ಧುರಧೀರ ಕದನ ಕೋಲಾಹಲನೆಂದು ಬಲ್ಲಾಳನ।
ಬಿರುದ ಕೊಂಡಾಡಿದರು ಭಟಜನ ॥
ಕರಿತುರಗಪರಿವಾರ ದೊರೆಗಳೆಡಬಲದಲ್ಲಿ।
ಉರುತರವಾಗಿಮಿರೆ ನಿಂದು ವ್ರೋಲಗದ।
ಪರಿಯುನಾನಿನ್ನು - ಉಸುರುವೆ ॥

ಕ್ಷತ್ರಿಯನೆಡಬಲದಲ್ಲಿ ಕರ್ತೃ, ಹರ ಜಂಗಮರು।
ಭಕ್ತಜನ ಕುಳಿತು ಮುದದಿಂದ ಶಿವಕಾವ್ಯವ।
ವಿಸ್ತರಿಸಿಯೋದುತಿಹರಲ್ಲಿ ॥

ನವರಸದಲಿ ಯೋದುವರು . . . ಸು ಜಾಣ।
ಕವಿಗಮಕಿಗಾನನಿಪುಣರು ವ್ರೊಪ್ಪಿಹರು।
ಭುವನಪತಿರಾಯನಿದಿರಲ್ಲಿ ॥
ಧರೆಯಲಿ ಭಕ್ತಿಯಲಿ ಗಿರಿಜೆಯ ರಮಣನನೊಲಿಸಿ।
ಹರಶರಣರ . . ಜದ ಕಥೆಯನು ಬಲ್ಲಾಳಗೆ।
ಕರಬಣ್ಣಿಸಿಯೋದುತಿಹರಲ್ಲಿ ॥

ಅಗಜಾವಲ್ಲಭಗೆ . . . . ಕತೆಗೇಳಿ।
ಮಿಗೆ ಮೆಚ್ಚಿರಾಯ ನಗುತಿರ್ದ ॥
ಮೃಡ ಕದ್ದು ಮಟಿಕಿಹೊಗಲು ಹೊಡದೆ ಗುಂಡಬೊಮ್ಮಗಳು ॥
ನಡೆಮ ಸೂ . . . . ಪವ।
ಪೊಡವಿಪತಿ ಕೇಳಿ ಬೆರಗಾದ ॥

ಹೇರೂರ ಪುರದೊಳಗೆ ನಾರಿ ಜೈನರ ಕೂಡೆ।
ಹೋರಿ ಭಕ್ತಿಯನು ಗೆಲಿದುದ ಹೇಳದರೆ।
. . . . ದಿಂ ॥

ಕೋಳೂರ ಕೊಡಗೂಸು ಭಾಳಲೋಚನ ಶಿವಗೆ।
ಪಾಲನೆಱೆ (?ಊಱೆ) ದೊಲಿಸಿ ಮೆರೆದುದ ಹೇಳದರೆ।
ಕೇಳ ಭೂಪಾಲ ನಸುನಕ್ಕ ॥
ಭಾಸು . . . . . . ರೂಪನು ಮಾಡಿ।
ದೂಸಕರಿಗೆ ತೋಱೆ ಮೆಱೆದುದ ಹೇಳದರು। (?)
ವೇಶ್ಯೆ ಬೊಮ್ಮಲೆಯರ ಕಥೆಯನು ॥

ಇಂತು ದೃಢಭಕ್ತಿಗೆ ಕಂತುಹರ ಮಿಗೆ ಮೆಚ್ಚಿ।
. . . . . ಡಿ ಮನದಲ್ಲಿ ಯಾವರಿಗೆ।
ಸಂತತ್ವಪದವ ಶಿವನಿತ್ತ ॥
ಹರಶರಣರ ಕತೆಯನು ಅರಸು ಬಲ್ಲಾಳ ಕೇಳ।
ಹರಹರಯೆನುತ ಮನದಲ್ಲಿ ಬಲ್ಲಾಳ।
ಧರಣಿಪನು . . . . . . ದ ॥

ಈ ಪರಿಯಲಿ ಬಲ್ಲಾಳನೋಲಗವಿರಲು।
ಕಾಪಾಲಿಯಲ್ಲಿಗೆಯ್ತಂದ ಪರಿಯನು।
ನಾಪ್ರೇಮದಲಿನ್ನುಸುರುವೆ॥
ರತಿಪತಿಯ ರೂಪಿಗೆ ಅ (ತಿಶ) ಯವೆಂಬಂತೆ।
ಅತಿಶಯವಾದ ರೂಪ ಶಿವ ತಾಳ ಯರಮನೆಗೆ।
ಮಾಥನಕ್ಕೆ ಮೆಲ್ಲನೆ ನಡೆತಂದ ॥

End :—

ಧರೆ ಮೂರು ಲೋಕದಲಿ ಸರಿಯಲ್ಲ ಶಿವಗೆಂದು।
ಬಿರಿದಿನ ಕಾಳೆ ಹಿಡಿದರು ಅರಮನೆಯ।
ಪರವೆ . . . . ॥

. . ಕರಕರ ಸಂತೋಷದಲಿ ಕಳುಹಿ ಗಣಸ್ತೋಮವನು।
ವ್ರೊಳಕ್ಕೆ, ದೇವ ಕರುಣಿಸಿ ದೇವಿಯರೊಡನೆ॥
ಸಲೆ ಸುಖದೊಳಗೆ . . . . ॥

. . . . ಬಿಟ್ಟು ಯೇಕ ಚಿತ್ತದಲಿ।
ಯಿೂ ಕಥೆಯ ಕೇಳದವರಿಗೆ ಶಿವ ಕೊಡುವ।
ಲೋಕವನಾಳುವ ಪದವಿಯ ॥

ಭಾ . . . . . . ಸದೆ।
ಭಾಷೆಯಿಂದ ಶಿವನೊಲಿಸಿದ ಬಲ್ಲಾಳ ಕೈ।
ಲಾಸಕ್ಕೆ ಹೋದ ಕತೆಯಿದು ॥

ಅಜಹರಿಸುರರಿಗೆ . . . .
. . . . ಬಲ್ಲಾಳ ॥
ನಿಜ ಭಕ್ತರಿಗೆ ಶರಣು ಶರಣಾರ್ಥಿ ॥

Colophon :—

ಸಮಾಪ್ತಂ. ಮಂಗಳ ಮಹಾಶ್ರೀ.

(ಪಿ-ಪಿ.)—

ಸಮಗ್ರವು. ಅತ್ಯಂತ ಶಿಥಿಲಪ್ರತಿ. ಒಳ್ಳೆಯ ಲಿಪಿ. ಪುಸ್ತಕದ ಮೊದಲಲ್ಲಿ 'ಸ್ಥಲಗಳ ಸಂಧಿ' ಎಂದು ಬರೆದಿದೆ.

ಇದು ತ್ರಿಪದಿಯಲ್ಲಿ ಬರೆದಿದೆ. ಪದ್ಯಗಳು ೩೦೬. ಜಂಗಮರೂಪಿಯಾದ ಶಿವನು ಬಲ್ಲಾಳ ರಾಜನೆಡೆಗೆಯ್ದಿ ಅವನ ಭಕ್ತಿಪರೀಕ್ಷಣಾರ್ಥವಾಗಿ ಆತನ ಪಟ್ಟದರಸಿಯನ್ನು ಯಾಚಿಸಲು ಶಂಕರಭಕ್ತನಾದ ರಾಜನು ಒಪ್ಪಿ ಆ ಬಯಕೆಯನ್ನು ಸಲಿಸಿಕೊಡಲಾಗಿ ಆತನ ದೃಢ ಭಕ್ತಿಗೆ ಮೆಚ್ಚಿ ಭಕ್ತವರದನಾದ ಮಲ್ಲಿಕಾರ್ಜುನನು ಅವರನ್ನು ಕೈಲಾಸಕ್ಕೆ ಕರೆದೊಯ್ದನೆಂಬುದೇ ಕಥಾಸಾರಾಂಶವು. ಕವಿಯುಂತಾದ ವಿಷಯಗಳಾವುವೂ ಈ ಗ್ರಂಥದಿಂದ ತಿಳಿದು ಬರುವುದಿಲ್ಲ.

No. 500. ಬಸವತ್ರಿವಿಧಿ.
BASAVATRIVIDHI.

Substance, Śrītāla. Size, 8 × 1⅔ inches. Pages, 16. Lines, 12 on a page. Character, Kannaḍa. Condition, slightly injured. Appearance, old.

Begins on fol. 79*a* of the manuscript described under No. 440 ante.

Complete.

A Vīraśaiva work written in praise of Basava. As all the stanzas end with 'ಯೋಗಿನಾಥ' it is considered likely that Siddharāma who wrote Aṣṭāvaraṇa Stōtra, may be the author also of this work.

Beginning :—

ಕಂ ॥ ಬಸವೇಶ[ನೆ] ಬಸವರಾಜನೆ ।
ಬಸವಣ್ಣನೆ ಬಸವ ತಂದೆ ಬಸವ ಕೃಪಾನಿಧಿ ॥
ಬಸವ ಪರಮೇಶ್ವರೇಶ್ವರ ।
ಬಸವ ಪ್ರಮಥಾಧಿದೇವ ರಕ್ಷಿಸು ಬಸವಾ ॥

ಸಾ. ॥ ಪ್ರಥಮಂತು ಬಸವಣ್ಣ ದ್ವಿತೀಯಂತು ಲಿಂಗವು ।
ತೃತೀಯಂತು ತತ್ವ ಬ್ರಹ್ಮಾಂಡವೆಲ್ಲ ॥
ಅಕಳಂಕ ಗುಣನಿಧಿ ಚಿದಾನಂದ ಬಸವಂಗೆ ।
ಭಕುತನಾದೆನು ಗುರುವೆ ಯೋಗಿನಾಥ ॥
ವಸುಧೆಯಿಲ್ಲದ ಮುನ್ನ ದೆಸೆಯೆಂಟ ನಿರ್ಮಿಸಿದೆ
ಶಶಿರವಿಗಳೆಂಬ ವರನಾಮವಿಲ್ಲ ॥

ವಿಶವಲ್ಲದಾನತದ ದೆಸೆಗೆಟ್ಟ ಲಿಂಗವನು ।
ಹೆಸರಿಟ್ಟ ಗುರುಬಸವ ಯೋಗಿನಾಥ ॥
ವಸುಧೆ ಕುಟ್ಟದ ಮುನ್ನ ಬಸವಣ್ಣ ಹುಟ್ಟಿದನು ।
ಶಶಿಧರನು ಶಿವಮೂರ್ತಿ ವರದನಯ್ಯ ।
ಅಸಮಾಕ್ಷನವತಾರ ಮೂರ್ತಿಯು ತಾಳಿದ ಗುರು ॥
ಬಸವಣ್ಣ ಬಸವಯ್ಯ ಯೋಗಿನಾಥ ॥

End :—

ಮೂಱುಱು ಭೇದವನು ! ಜಾಱಿನಿಜದಲಿ ನಿಂದು ।
ಬೇರ ತೊಟ್ಟನೆ ಕಡಿದು ಖಂಡಿಸಿದನು ॥
ವೀರ ನಿಷ್ಪತಿಯಾದ ನಿರ್ವಯಲ ಪದದಲ್ಲಿ ।
ಆಱುಥ ಬಸವನ್ನೈ ಯೋಗಿನಾಥ(?) ॥
ಮೂಱು ಬೆಟ್ಟವ ದಾಂಟಿ ಮುಕ್ತಿರಾಜ್ಯವ ಕೂಡಿ !
ತೋಱುವ ಶಿಖಿ ಕರ್ಪುರಯೋಗದಂತೆ ॥
ಬಯಲ ಬಯಲನೆ ಬೆರಸಿ ಬಯಲಾದ ಬಸವನ ನಿ ।
ರ್ವಯಲ ಪದವೆನಗೆ ಯೋಗಿನಾಥ ॥
ಇಂತು ಬಸವಸ್ತವವ ಸಂತತಂ ನೆನೆದೀಗ ನಿ ।
ಶ್ಚಿಂತ ನಾದೆನ್ನೈ ಸುಖತರದಲ್ಲಿ ॥
ಸಚ್ಚಿದಾನಂದ ಗುರು ಬಸವಣ್ಣ ನಾಣತಿಯಲಿ ।
ಪಚ್ಚಾತ ನಿನಗಾನು ಯೋಗಿನಾಥ ॥ (?)

Colophon :—

ಬಸವಸ್ತೋತ್ರ ತ್ರಿವಿಧಿ ಸಮಾಪ್ತಂ.

(ವಿ-ವಿ·)—

ಸಮಗ್ರ. ಸ್ವಲ್ಪಶಿಥಿಲ. ಲಿಪಿ ಸಾಮಾನ್ಯ. ಇದರೊಡನೆ ಇನ್ನೂ ಅನೇಕ ಪುಸ್ತಕಗಳು ಬರೆದು ಸೇರಿಸಿವೆ. ಅವಾವುವೆಂಬುದನ್ನು ಹಿಂದೆ ವರ್ಣಿತವಾಗಿರುವ ೪೪೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದರಲ್ಲಿ ೧೨೫ ಪದ್ಯಗಳಿವೆ. ಈ ಪದ್ಯಗಳಲ್ಲಿ ಸಾಂಗತ್ಯದಂತೆ ಓಟವು ತೋರಿಬಂದರೂ ಲಕ್ಷಣವು ವ್ಯತ್ಯಸ್ತವಾಗಿದೆ. ಆದಿಯಲ್ಲಿ ಒಂದು ಕಂದಪದ್ಯವಿದೆ. ಬಸವಸ್ತುತಿಯೇ ಇಲ್ಲಿ ವಿಷಯವು. ಎಲ್ಲ ಪದ್ಯಗಳೂ ಪ್ರಾಯಶಃ 'ಯೋಗಿನಾಥ' ಎಂಬ ಅಂಕಿತದಿಂದ ಮುಗಿಯುತ್ತವೆ. ಆದಕಾರಣ ಈ ಗ್ರಂಥಕರ್ತನು ಅಷ್ಟಾವರಣ ಸ್ತೋತ್ರವನ್ನು ವಿರಚಿಸಿರುವ ಸಿದ್ಧರಾಮನಾಗಿರ ಬಹುದೆಂದು ತೋರುತ್ತದೆ.

No. 501. ಬಸವರಗಳೆ.

BASAVARAGAḶE.

Substance, palm-leaf. Size, 6¼ × 1⅜ inches. Pages, 14. Lines, 7 on a page. Character, Kannaḍa. Condition, very much injured. Appearance, old. Mode of writing, fair.

Begins on fol. 9*a* of the manuscript described under No. 465 ante.

Complete.

A Vīraśaiva work written in praise of Basava. It is understood that Pālkurike Sōma is the author of this work.

Beginning :—

ವೃ ॥ ದೇವರಾಜ ದೇವರಾಜ ಸಿದ್ಧಸಾಧ್ಯ ಯಕ್ಷರ ।
ಕ್ಷಾವಿಹಂಗರಾಟ್ಪತಂಗ ಸೋಮ ಧೂಮ . . ರ . .
ಜೀವಿತೇಶ ವಿಧೃತಪಾಶ ಸೇ . . ವಿದ್ಯಾಂಘ್ರಿ ರಾ ।
ಜೀವ ನಿಮ್ಮನಾಂ ಪೊಗಳ್ವೆ ಶ್ರೀವೃಷಾಧಿನಾಯಕಾ ! ॥

ರಗಳೆ ॥ ಶ್ರೀ ವೃಷಾಧಿನಾಯಕ ಪ್ರಸಿದ್ಧಭಾವ ಶರಣು ಬಸವ ।
ಆವಕಾಂಘ್ರಿ ಸೇವಕಾಘ ಧಾವ ಧಾವ ಶರಣು ಬಸವ ॥
ನಂದಿತದ್ವಿತೀಯ ಶಂಭು ನಾಮಧೇಯ ಶರಣು ಬಸವ ।
ವಂದಿತತ್ರಿಲೋಕ ವಿಬುಧ ವಂದಿತಾಯ ಶರಣು ಬಸವ ॥
ಅಚಲ ಶೈವಧರ್ಮ ನಿರ್ಣಯಾವತಾರ ಶರಣು ಬಸವ ।
ಪ್ರಚುರ ಯುಗತಾಂಘ್ರಿ ಧರ್ಮಪದವಿಹಾರ ಶರಣು ಬಸವ ॥ (?)
ಪ್ರಮಥ ಗಣ ಪದಪ್ರಸಿದ್ಧ ಪಟ್ಟಬದ್ಧ ಶರಣು ಬಸವ ।
ಪ್ರಮಥ ಶಾಶ್ವತಪ್ರಭಾವ ಭವ ಸಮೃದ್ಧ ಶರಣು ಬಸವ ॥

End :—

ರಸಿಕಮುಕುರ ಶರಣು ಬಸವ ರಾಗಸುಕರ ಶರಣು ಬಸವ ।
ಅಸಮಗಾನ ಶರಣು ಬಸವ ಅಪ್ರಮಾಣ ಶರಣು ಬಸವ ॥
ಶರಣು ಶರಣು ಶರಣು ಬಸವ ಶರಣು ಶರಣಾರ್ತಿ ಬಸವೇಶಾ ॥

ಕಂ ॥ ಶರಣಸ್ತವಕಲ್ಪ ಕುಜಾಂ ।
ಕುರಪದ ಸಭಾಭಿಜಾತ ನವಕು . . . . ॥
ತ್ರರ ನಾಮಂಗಳ ಬಸವರ ।
ಸರಿಗರ್ಪಿಸಿದ(ನು) ಪಾಲ್ಕುರಿಕೆ ಸೋಮಾಂಕಂ ॥
ಬಸಿರೊಳ್ ಬರಲೀಯದು ಬಾ ।
ಶಶಿಧರನಂ ಸಾರಿಸುವುದು ಸಾವಿರ ಪದಮಂ ॥
ವಶವೃತ್ತಿಯ ಮಾ[ಡುವುದು] (ಳ್ಪುದು) ವಾ ।
ಬಸವಾ ಶರಣೆಂಬುದಕ್ಕೆ ಫಲವಿದು ಬಸವಾ ॥
ಬಾಗಿರು ಬಹಳ ಬ್ರಹ್ಮಂ ।
ಕಾಗುರು ಸಾಕಾರ ತತ್ವ ಸಂಪದ ವೀವುದು ॥
ವಾಗುರು ವಚನಮಹ ತ್ವ . .
ಕ್ಯಾಗರ ಬಸವಾಕ್ಷರತ್ರಯಂ ಬಸವೇಶಾ ॥
ಪ್ರಣವದ ಬಳ್ಳಿ ಬಕಾರಂ ।
ಪ್ರಣವದ ನಾದಾನುಸಾರ ಸಕಾರ । (?)

ಪ್ರಣವದ ಬಿಂದು ವಕಾರಂ ।
ಪ್ರಣವಂ ಬಸವಾಕ್ಷರತ್ರಯಂ ಬಸವೇಶಾ ॥
ಮಧುರಂ ಶ್ರುತಿಗಳು . . . ಗೆ ।
ಮಧುರಂ ಮಂತ್ರಂಗಳವಕೆ ಪಂಚಾಕ್ಷರಿ ತಾಂ ।
ಮಧುರಂ ಪಂಚಾಕ್ಷರಿಗಂ ।
ಮಧುರಂ ಬಸವಾಕ್ಷರತ್ರಯಂ ಬಸವೇಶಾ ॥
ಮರೆದೊಮ್ಮೆ ಬಸವ ಎಂದೊಡೆ ।
ಮರು ಜನ್ಮಗಳ . ದುರಿತ ವಿಗ್ರಹ . . ॥
ಕರೆಕಂಠಸೊಲಿದು ಸಲಹುವ ।
ಬರಿಜಿಹ್ವೆಯೊಳರದೆ ಬಸವ[ನ] ನಾನುವ ಜಪಿಸಿರೆ ॥ (?)
ಬಸವಾ ಎಂಬ ತ್ರ್ಯಕರ । (?)
ಪೊಸತೆನಿಸುವ ರಜತಗಿರಿಯ ಮಹಿಮೆಯ ತೋರ್ಪ್ಪಂ ॥
ಶಶಿಧರನ ಶರಣ ಸಂಕುಳ ।
ದೊಸಗೆಯ ನಡುವಿರಿಸಿ ತೋರ್ಪುದು ಬಸವನ ನಾಮಂ ॥ (?)
ಒಮ್ಮೆ ಕಳವಳಿಸಿ ಬಸವನ ।
ಸುಮ್ಮನೆ ಪ್ರಿಯದಿಂದ ಬಸವನಾಮವ ನೆನೆದೊಡೆ ॥
. ಮ್ಮವು ಪುಯ್ದಿರಲಿ ದುರಿತವು ।
ಕರ್ಮವು ಸನಿಹರಿದು ಹೋಗುವುದು ನಿಶ್ಚಯದಿಂ ॥ (?)
ಅಘವನ ದಹನಂ ಬಸವಂ ।
ಅಘಕುಲನಿಸ್ಸೀಮಭೀಮನಾಮಂ ಬಸವಂ ॥
ಅಘಜಲವಡಬಂ ಬಸವಂ ।
ಅಘತಿಮಿರದ್ಯುಮಣಿ ಬಸವ ಅವ . ಬಸವಂ ॥
ಭಕ್ತಿಗೆ ವದನ ಕಳಾಜ್ಞಂ ।
ಶಕ್ತಿಗೆ ಮಂತ್ರಂಗಳವಕೆ ಪಂಚಾಕ್ಷರಿ ತಾಂ ॥
ಶಕ್ತಿಗೆ ಭಕ್ತಿಗೆ ಯುಕ್ತಿಗೆ ।
ಮುಕ್ತಿಯು ಬಸವಾಕ್ಷರ ತ್ರಯ ಬಸವೇಶಾ ॥
ಬಸವಾ ಎಂದೊಡೆ ಪಾಪಂ ।
ದೆಸೆಗೆ[ಟ್ಟು ಬ]ಟ್ಟೋ[ಡಿ] ಹೋಹು(ದುವು)ದು ಕರ್ಮ ನಿರ್ಮಳವಹುದಾ ॥
ಶಶಿಧರನೆ . ವ ವಾಹನ ।
ದೆಸೆದಿಕ್ಕಿನ ಪ್ರಮಥರೊಡೆಯ ಸಂಗನ ಬಸವಾ ॥
ಬಸವನ ನಾಮಾಮೃತ ರಸವ ಪರ । (?)
ವಶನಾಗಿ ಸವಿದು ತುದಿಮೊದಲರಿಯದೆ ನಾಂ ॥
ಬಸವಾ ಬಸವಾ ಬಸವಾ ।
(ಬಸವಾ) ಎನುತಿರ್ದೆನಯ್ಯ (ಶ್ರೀ) ಬಸವೇಶಾ ॥
" ಬಾ "ಯೆನೆ ಬಂಧನವಳಿವುದು'।
'ನಾ 'ಯೆನೆ ಸಾಯುಜ್ಯ ಸಕಲ ಸಂಪದವಕ್ಕುಂ ॥

ಮಾಯೆನೆ ನಿರ್ಣಯ ಪದಮುಂ ।
ಮಾಯಾರಹಿತ ಬಸವ ನಿಮ್ಮಯ ನಾಮಂ ॥ (?)

ಶರಣಸ್ತ್ರನಮೆನೆಲೊಪ್ಪುವ ।
ಶರಣಗಣೋತ್ಸಾಹ ರಗಳೆಯಂ ಪಠಿಸಿ . . ತಾಂ
ಬರೆದೋದಿದೊಡೆ ವಿ । (?)
ಸ್ಮರಿಸಿದೊಡೆ ಸದ್ಭಕ್ತಿಯ ಬಸವನೀವಂ ಕಾಯ್ವಂ ॥ (?)

Colophon :—

ಬಸವರಗಳೆ ಸಮಾಪ್ತಂ.

(ವಿ-ವಿ.)—

ಸಮಗ್ರವಾಗಿದೆ. ಅಂತ್ಯಂತ ಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಗ್ರಂಥಗಳಿವೆ. ಅವಾವು ವೆಂಬುದನ್ನು ಹಿಂದಣ ೪೬೫ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ರಗಳೆಯಲ್ಲಿ ಬರೆದಿದೆ. ಗ್ರಂಥದಾದಿಯಲ್ಲಿ ಒಂದು ವೃತ್ತವಿದೆ. ಅಂತ್ಯದಲ್ಲಿ ೧೪ ಕಂದ ಪದ್ಯಗಳಿವೆ. ಬಸವಸ್ತುತಿರೂಪವಾದ ಗ್ರಂಥ. ಕವಿ ಪಾಲ್ಕುರಿಕೆ ಸೋಮನೆಂದು ಗೊತ್ತಾಗುತ್ತದೆ.

No. 502. ಬಸವಷಟ್ಸ್ಥಲವಚನ.

BASAVAṢAṬSTHALA VACANA.

Substance, Śrītāla. Size, 10⅝ × 1$\frac{13}{16}$ inches. Pages, 229. Lines, 8 on a page. Character, Kannaḍa. Condition, slightly injured. Appearance, old. Mode of writing good but not free from mistakes.

Complete.

Contains 958 maxims bearing on Vīraśaiva philosophy. The name of the author is Basava.

Beginning :

ಪ್ರಥಮದಲ್ಲಿ ಭಕ್ತಸ್ಥಲ. ಪಿಂಡಸ್ಥಲದ ವಚನ :—

ಉದಕದೊಳಗೆ ಬೈಚಿಟ್ಟ ಬೈಕೆಯ ಕಿಚ್ಚಿನಂತೆ ಇದ್ದಿತ್ತು. ಶಶಿಯೊಳಗಣ ರಸದ ರುಚಿಯಂತೆ ಇದ್ದಿತ್ತು. ನನೆಯೊಳಗಣ ಪರಿಮಳದಂತೆ ಇದ್ದಿತ್ತು. ಕೂಡಲ ಸಂಗಮದೇವಾ! ಕನ್ನೆಯ ಸ್ನೇಹದಂತೆ ಇದ್ದಿತ್ತು. ॥ ೧ ॥

ಪಿಂಡಜ್ಞಾನಸ್ಥಲ :—

ಕಾಳಿಯ ಕಂಕಾಣದಿಂದ ಮುನ್ನ, ತ್ರಿಪುರಸಂಹಾರದಿಂದ ಮುನ್ನ, ಹರಿವಿರಿಂಚಿಗಳಿಂದ ಮುನ್ನ, ಉಮೆಯ ಕಲ್ಯಾಣದಿಂದ ಮುನ್ನ ಮುನ್ನ, ಅಂದಿಂಗೆಳೆಯ ನೀನು ಹಳೆಯ ನಾನು ಮಹಾದಾನಿ ಕೂಡಲ ಸಂಗಮದೇವಾ! ॥

ಅಯ್ಯಾ ! ನೀನು ನಿರಾಕಾರನಾಗಿದ್ದಲ್ಲಿ ನಾನು ಜ್ಞಾನವೆಂಬ ವಾಹನವಾಗಿದ್ದೆ ಕಾಣಾ ! ಅಯ್ಯಾ ! ನೀನು ನಾಟ್ಯಕ್ಕೆ ನಿಂದಲ್ಲಿ ನಾನು ಚೈತನ್ಯವೆಂಬ ವಾಹನವಾಗಿದ್ದೆ ಕಾಣಾ ! ಅಯ್ಯಾ ! ನೀನು ಆಕಾರವಾಗಿದ್ದಲ್ಲಿ ನಾನು ವೃಷಭನೆಂಬ ವಾಹನವಾಗಿದ್ದೆ ಕಾಣಾ ! ಅಯ್ಯಾ ! ನೀನೆನ್ನ ಭವವ ಕೊಂಡಹೆನೆಂದು ಜಂಗಮ ಲಾಂಛನವಾಗಿ ಬಂದರೆ ನಾನು ಭಕ್ತನೆಂಬ ವಾಹನವಾಗಿದ್ದೆ ಕಾಣಾ ! ಕೂಡಲ ಸಂಗಮದೇವಾ ! ॥ ೩ ॥

ಅಯ್ಯಾ ! ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿದ್ದರೆ ನಿಮ್ಮಾಣೆ. ನಿಮ್ಮ ಪ್ರಮಥರಾಣೆ. ನಿಮ್ಮ ಪ್ರಸಾದಕ್ಕಲ್ಲದೆ ಬಾಯಿದೆರೆಯೆನಯ್ಯಾ ! ಪ್ರಥಮ ಭವಾಂತರದಲ್ಲಿ ಶಿಲಾದನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮ್ಮ ಭೃತ್ಯನ ಮಾಡಿ ಎನ್ನನಿರಿಸಿಕೊಂಡಿದ್ದಿರಯ್ಯಾ ! ಎರಡನೆಯ ಭವಾಂತರದಲ್ಲಿ ಸ್ಕಂದನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮ್ಮ ಕಾರುಣ್ಯವ ಮಾಡಿಕೊಂಡಿದ್ದಿರಯ್ಯಾ ! ಮೂರನೆಯ ಭವಾಂತರದಲ್ಲಿ ನೀಲಲೋಹಿತನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮ್ಮ ಲೀಲಾವಿನೋದದಿಂದಿರಿಸಿಕೊಂಡಿದ್ದಿರಯ್ಯಾ ! ನಾಲ್ಕನೆಯ ಭವಾಂತರದಲ್ಲಿ ಮನೋಹರನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮ್ಮ ಮನಃ ಪ್ರೇರಕನಾಗಲೆಂದು ಇರಿಸಿಕೊಂಡಿದ್ದಿರಯ್ಯಾ ! ಐದನೆಯ ಭವಾಂತರದಲ್ಲಿ ಕಾಲಲೋಚನನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ಸರ್ವಕಾಲಸಂಹಾರವ ಮಾಡಿಸುತ್ತಿದ್ದಿರಯ್ಯಾ ! ಆರನೆಯ ಭವಾಂತರದಲ್ಲಿ ವೃಷಭನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮಗೇರಲು ವಾಹನವಾಗಲೆಂದಿರಿಸಿಕೊಂಡಿದ್ದಿರಯ್ಯಾ ! ಏಳನೆಯ ಭವಾಂತರದಲ್ಲಿ ಬಸವನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮ್ಮ ಒಕ್ಕುದು ಮಿಕ್ಕುದಕ್ಕೆ ಯೋಗ್ಯನಾಗಲೆಂದಿರಿಸಿಕೊಂಡಿದ್ದಿರಯ್ಯಾ ! ನಿಮ್ಮ ಶರಣರ ಮರ್ತ್ಯಕ್ಕೆ ತಂದೆಯಾಗಿ ನೆನೆದು ಸುಖಿಯಾಗಿ ಆನು ಬದುಕಿದೆನಯ್ಯಾ ! ಅದೇನು ಕಾರಣ ತಂದೆಯೆಂದರಿದೆನಯ್ಯಾ ! ಅರಿದು ಅರಿದು ನಿಮ್ಮ ಶರಣರು ಆಚರಿಸುವ ಆಚರಣೆಯ ಕಂಡು ಕಣ್ದೆರೆದೆನಯ್ಯಾ ! ಕೂಡಲ ಸಂಗಮದೇವ ! ‟ ೪ ”

* * * *

ಕೊಲುವನೆ ಮಾದಿಗ. ಹೊಲಸ ತಿಂಬವನೆ ಹೊಲೆಯ. ಕುಲವೇನೋ ಅವದಿರ ಕುಲವೇನೋ ? ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲ ಸಂಗಮದೇವನ ಶರಣರೆ ಕುಲಜರು.

* * * *

End :—

ಸಮಸ್ತ ಕತ್ತಲೆಯ ಮುಸುಕವ ಕಳೆದಿಪ್ಪ ಇರವ ನೋಡಾ ! ಬೆಳಗಿಗೆ ಬೆಳಗು ಸಿಂಹಾಸನವಾಗಿ ಬೆಳಗು ಬೆಳಗು ಬೆಳಗ ಕೂಡಿದ ಕೂಟವ ಕೂಡಲ ಸಂಗಯ್ಯ ತಾನೆ ಬಲ್ಲ.

ಅಂತರಂಗ ಬಹಿರಂಗ ಆತ್ಮ ಸಂಗವೊಂದೆ ಅಯ್ಯಾ ! ನಾದಬಿಂದು ಕಲಾತೀತ ಆದಿ ಆಧಾರ ನೀನೆ ಅಯ್ಯಾ ! ಆರೂಢದ ಕೂಟದ ಸುಖವ ಕೂಡಲ ಸಂಗಯ್ಯ ತಾನೆ ಬಲ್ಲ.

Colophon :—

ಐಕ್ಯಸ್ಥಲ, ಸಮಾಪ್ತಂ ಮಂಗಳ ಮಹಾಶ್ರೀ. ಭಕ್ತ ಸ್ಥಲಕ್ಕೆ ಸೇರಿದ ವಚನ ೫೨೫. ಮಾಹೇಶ್ವರ ಸ್ಥಲಕ್ಕೆ ಸೇರಿದ ವಚನ ೨೪೦, ಪ್ರಸಾದಿ ಸ್ಥಲಕ್ಕೆ ಸೇರಿದ ವಚನ ೩೦, ಪ್ರಾಣಲಿಂಗಿ ಸ್ಥಲಕ್ಕೆ ಸೇರಿದ ವಚನ ೫೮, ಶರಣ ಸ್ಥಲಕ್ಕೆ ಸೇರಿದ ವಚನ ೬೫, ಐಕ್ಯ ಸ್ಥಲಕ್ಕೆ ಸೇರಿದ ವಚನ ೪೦ ; ಅಂತು ಸ್ಥಲವಾರಕ್ಕಂ ವಿಶ್ರ ಮೂವತ್ತಾರಕ್ಕೆ ಸೇರಿದ ವಚನ ೯೫೮ ಕ್ಕಂ. ಮಂಗಲ ಮಹಾಶ್ರೀ.

(ವಿ-ವಿ.)—

ಸಮಗ್ರ. ಅಲ್ಪ ಶಿಥಿಲ. ಉತ್ತಮವಾದ ಲಿಪಿ. ತಪ್ಪಿದೆ.

ಇದು ವಚನ ಗ್ರಂಥವಾಗಿದೆ. ಇದರಲ್ಲಿ “ ಭಕ್ತ ಸ್ಥಲ ವಚನ ೫೦೫, ಮಾಹೇಶ್ವರ ಸ್ಥಲ ವಚನ ೨೪೦, ಪ್ರಸಾದ ಸ್ಥಲ ವಚನ ೩೦, ಪ್ರಾಣಲಿಂಗಿ ಸ್ಥಲ ವಚನ ೫೮. ಶರಣ ಸ್ಥಲ ವಚನ ೬೫, ಐಕ್ಯಸ್ಥಲ ವಚನ ೪೦, ಅಂತೂ ಸ್ಥಲ ೬ ಕ್ಕೆ ಸೇರಿದ ಮಿಶ್ರ ೩೬ ಕ್ಕೆ ವಚನ ೯೫೮ ” ಇದೆ. ಪ್ರಾಯಿಕವಾಗಿ, ಪ್ರತಿಯೊಂದು ವಚನವೂ “ ಕೂಡಲ ಸಂಗಮ ದೇವಾಂಕಿತ ” ವಾಗಿರುವುದು. ಪ್ರಮಾಣತ್ವೇನ ಅನ್ಯ ಗ್ರಂಥಗಳಿಂದುದ್ಧರಿಸಿ ಬರೆದ ಸಂಸ್ಕೃತ ಪದ್ಯಗಳೂ ಅಲ್ಲಲ್ಲಿ ಕಾಣಿಸಿಕ್ಕುವುವು. ಈ ಗ್ರಂಥವು ವೀರಶೈವ ಸಿದ್ಧಾಂತ ಪ್ರತಿಪಾದಕವಾಗಿದೆ. ಇದರ ಕರ್ತನು ವೀರಶೈವರಲ್ಲಿ ಅತ್ಯಂತಗಣ್ಯನೂ ಮಾನ್ಯನೂ ಆದ ಬಸವನು. ಇವನು ಸುಮಾರು ೧೧೬೦ (A.D.) ರಲ್ಲಿದ್ದಂತೆ ತಿಳಿದು ಬರುತ್ತದೆ. ಇವನ ಭವಾಂತರಗಳನ್ನು ೪ ನೆಯ ವಚನದಲ್ಲಿ ನೋಡಿ ತಿಳಿಯುವುದು.

ಈ ಗ್ರಂಥದೊಡನೆ ಕ್ರಮವಾಗಿ ಮಾರಮರ್ದನ ಶಂಭುಲಿಂಗ, ಗುರುಶಾಂತಯ್ಯ, ಶಂಕರಲಿಂಗ, ಎಂಬಂಕಿತಗಳಿರುವ ಮೂರು ಹಾಡುಗಳೂ ಶಿವನ ದ್ವಾದಶನಾಮಸ್ತೋತ್ರವೂ ಬರೆದು ಸೇರಿಸಲ್ಪಟ್ಟಿವೆ.

No 503. ಬಸವಸ್ತೋತ್ರ.

BASAVA-STOTRA.

Substance, Śrītāla. Size, 8 × 1⅜ inches. Pages, 24. Lines, 11 on a page. Character, Kannaḍa. Condition, slightly injured Appearance, old.

Begins on fol. 28*a* of the manuscript described under No. 440 ante.

Complete.

A work written in praise of Basava, who was the minister of Bijjaḷa. The name of the author is not known.

Beginning :—

ಭಾ. ಷಟ್ಪದಿ ॥ ಬಸವ ಶರಣೆನೆ ಪಾಪವಳಿವುದು ।

ಬಸವ ಶರಣೆನೆ ತಾಪವಾರುಗು ।
ಬಸವ ಶರಣೆನೆ ಪರಮಪಾವನ ಜಾತಿ ಸಂಧಿಸುಗು ॥
ಬಸವ ಶರಣೆನೆ ಭಕ್ತಿ ದೊರಕುಗು ।
ಬಸವ ಶರಣೆನೆ ಸಾಗರ್ು ಸುಸ್ಥಿತಿ ।
ಬಸವ ಶರಣೆನೆ ವಚನರಚನಾಸಿದ್ಧಿ ವರ್ಧಿಸುಗು ॥

* * * *

ವಾ. ಷಟ್ಪದಿ ॥ ಮಡಿವಳಯ್ಯನೆ ಪ್ರಾಣ ಕಿನ್ನರಯ್ಯನೆ ಕಾಯ ।
ಹಡಪದಪ್ಪಣ್ಣನೇ ಭಾವ ಬಾಚರಸರೇ ।
ನುಡಿವ ನಾಲಗೆ ಪ್ರಭುವೆ ಕಳೆ ಮರುಳ ಶಂಕರನು ಸಿದ್ಧರಾಮನು ಕಂಗಳು ॥

ಒಡನೆ ಬಂದೇೞು ನೂಱೆಪ್ಪತ್ತು ಗಣಸಹಿತ ।
ಮೃಡಶರಣರೆಲ್ಲರುಂ ಕೂಡಿಯೊಂದೊಡಲಾಗಿ ।
ನಡೆವ ಬಸವನ ಭಕ್ತಿಯುಂ ಬಣ್ಣಿಪಡಲು ಬಿಜ್ಜಳನೆ ಪೊರೆಗಟ್ಟಿದನು ॥
ನಿಚ್ಚಲಕ್ಕವು ತೊಂಬತಾಱು ಸಾವಿರ ಜಂಗ ।
ಮಾರ್ಚನೆಯ ಮಾಡುತ್ತ ನೇಮದ ಮಹಂತರಿಗೆ ।
ಯಿಚ್ಚೆಬೋನವ ನೀಡಿ ಮಿಂಡ ಜಂಗಮಕೆ(ಲ್ಲ) ಬೇಡಿದರ್ಥಗಳ ಕೊಡುತ ॥
ಮಚ್ಚಿ ಮೂವತ್ತಾಱು ಸಾವಿರ ಚರಕೆ ತನ್ನ ।
ನೊಚ್ಚತಂಗೊಟ್ಟು ಸಮಯಾಚಾರಕೆಂದೆನುತ ।
ನಿಶ್ಚಿಂತ ನಿಜಲಿಂಗ ಮುಖದೊಳೋಲಾಡುತಿಹ ಬಸವಂಗೆ ಶರಣೆಂಬೆನು ॥

* * * *

ಶಾ. ಷ. ॥ ಮಿಗೆ ಬಿಜ್ಜಳಂ ಪ್ರಾರ್ಥನೆಂ ಗೆಯ್ಯೆ ಬಂದವನ ।
ನೆಗಳ್ದ ಭಂಡಾರಮಂ ರಕ್ಷಿಸಿದ ಬಸವನಿದೆ :
ಸೊಗಸಿಂದೆ ಬಂದನೀಗಳ್ಕಂಡ ಜಂಗಮಂ ಜೇಡೆ ಧನನಿಕರಂಗಳಂ ॥
ಬಗೆಯದೇನಂ ಬಿಜ್ಜಳನ ಕೋಶದಿಂದೆ ತೊ ।
ಟ್ಟಗೆ ವಸ್ತುವಿತ್ತ ಬಸವಂ ಬಂದನೆಂದು ಪದು ।
ಮೊಗಸಿಯುಟ್ಟಿರ್ದ ಹುಟ್ಟುಗೆಯ ಜಂಗಮಕಿತ್ತ ಬಸವಣ್ಣನೀಗ ಬಂದಂ ॥
ವರಮುಗ್ಧ ಸಂಗಯ್ಯನಂ ಬೊಜಗನಂ ಮಾಡಿ ।
ದುರು ಬಸವನೀಗಳಿದೆ ಬಂದನಾ ವೃಂತಾಕ ।
ದಿರವಳಿದು ಬಾಣಲಿಂಗಂ ಮಾಡಿದಾ ಬಸವನೇಳ್ತಂದನಳ್ಕಿಯಿಂದೆ ॥
ಚರಲಿಂಗದಸುವಿನೊಡನೆಡೆಯಾಡುತಿರ್ಪ ಸಲೆ ।
ಶರಣವ್ರುಳ್ಳಾ ಬಸವನೆಯ್ತಂದನಭವಂಗೆ ।
ಹರುಷದಿಂ ಕಣ್ಣೆತ್ತ ಬಸವನೆನ್ನಯ ಸ್ನೈಪಿನಿಂ ಬಂದನೊಸೆದು ಮನೆಗೆ ॥
ಪೊಸಜೋಳರಾಸಿಯಂ ಮುತ್ತುವಣೆ ಮಾಡಿದಾ ।
ಬಸವನೆಯ್ತಂದಪಂ ಹಿರಿಯ ಭಕ್ತನ ಕರದೊ ।
ಳೊಸೆದು ಪಾಲಂ ಕಱೆದು ಮೆಱೆದ ಬಸವಂ ಬಂದನೆನ್ನ ಮನೆಗೀಗಳೀಗ ॥
ಅಸಮಪ್ರಸಾದಮನ್ಯರ್ಗೆ ಸಲ್ಲದೆನುತ್ತೆ ।
ಪೊಸ ಬಿಸಮನೀಂಟಿದಾ ಬಸವವಿಭು ಬಂದನಿದೆ ।
ಪೆಸರುಳ್ಳ ಗೊಲ್ಲಿತಿಯ ಕೊಡನ ಪಿಡಿದಾ ಬಸವನೆಯ್ತಂದ ಕರುಣದಿಂದೆ ॥
ಗುರು ಸಿದ್ಧರಾಮಯ್ಯ ನೊಸೆದೀಕ್ಷಿಸುತ್ತಮಿರೆ ।
ಹರನುದರದೊಳಗಿರ್ದ ಬಸವೇಶ್ವರಂ ಬಂದ ।
ನುರುದಯಾ ಕೂಪಾರದೊಳಗೆನ್ನ ಮುಳುಗಿಸಲ್ಮುಗ್ಧ ಬಾಲಕರೂಪದಿಂ ॥
ಕರವೊಸೆವುತೆನ್ನ ಪುಣ್ಯೋದಯದಿನೀಗಳೀ ।
ವರ ಬಸವ ನೆಯ್ತಂದಪಂ ಕರುಣದಿಂದೆನುತೆ ।
ಹರುಷದಿಂ ಕೀರ್ತಿಸುತೆ ನಮಿಸುತ್ತೆ ನೋಡುತ್ತೆ ಶಿಶುರೂಪ ಬಸವೇಶನಂ ॥

* * * *

ವಾ. ಷ. ॥ ಬಸವಪದ ಬಿಸಜನವ ಮಕರಂದರೋಲಂಬ ।
ಬಸವಪದ ಸೇವಾನುರಕ್ತ ಶೋಭನ ಚಿತ್ತ ।
ಬಸವಪದನಖರ ಚುಂಬಿತವಿಮಲ ಕೋಟೀರ ಬಸವಪದವನಮಯೂರ ॥
ಬಸವಪದ ಭೃತ್ಯಗತದುರಿತ ಸೂರಾಮಾತ್ಯ ।
ಮಿಸುಪಿದು ಪುರಾತನ ಪ್ರಕರಣಮಿದಂ ಕೇಳ್ದ ।
ವಸುಮತಿಯ ಜನರ್ಗೆ ಬಸವೇಶ ನಿಷ್ಕ್ರಾರ್ಥಮಂ ಬಿಡದೆ ಕೊಡುತಿರ್ಕೆ ಮುದದಿಂ ॥

End :—

ಭಾ. ಷ. ॥ ಬಸವಣ ಕೃಪಾವರಣ ಸಂಗನ ।
ಬಸವರಸ ಸದ್ಭಕ್ತಿಕರಣ ।
ಪ್ರಸರ ಬಸವಣ ದಂಡನಾಯಕ ಶಮದಮಾಭರಣ! ॥
ಬಸವ ಶಾಂತಿವಿಹರಣ ಸಂಗನ ।
ಬಸವ ಜಲಜಾತಪ್ರಚರಣ ವಿ
ಲಸಿತ ಬಸವಣ್ಣ ಸ್ವಸಮಯೋದ್ಧರಣ ಭವಹರಣ! ॥
ಬಸವ ಸಂಚಿತ್ರಶೌರ್ಯ ಸಂಗನ ।
ಬಸವ ರಸಚರಿತಾರ್ಥ ವರ್ಯ ।
ಪ್ರಸರ ಬಸವ ಸುನೀತ ಧುರ್ಯನೆ ಸಹಜಗಂಭೀರ ॥
ಅಸಮ ಸಂಗನ ಬಸವ ಮಂಗಳ ।
ಮಿಸುಪ ಪಾನಚರಿತಾರ್ಥದಾರ್ಯ ।
ಬಸವ ಸಂಗನ ಬಸವ ಸಂತತ ಶಾಂಭವಾಚಾರ್ಯ ॥
ಬಸವ ಸತ್ತಭಂಗ ಸಂಗನ ।
ಬಸವ ಶೌರ್ಯಪ್ರಸಂಗ ವಿಲಸಿತ ।
ಬಸವ ಸದ್ಭೃತಪುಂಗ (?) ಬಸವಾ ಸತ್ಕೃಪಾಪಾಂಗ ॥
ಬಸವ ಸದ್ಗುರುಲಿಂಗ ಸಂಗನ ।
ಬಸವ ರಸ ಸಕ್ಷತಿ ಶಿವಾಂಗನೆ।
ಬಸವಾಚಾರ್ಯ ಸಗಂತರಂಗ ಬಸವಹೃತಾನಂಗ ॥ (?)

Colophon :—

ಬಸವೇಶ್ವರನ ಸ್ತೋತ್ರದ ಷಟ್ಪದಿ ಸಮಾಪ್ತಂ ಮಂಗಳ ಮಹಾಶ್ರೀ.

(ವಿ-ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಸಾಮಾನ್ಯ. ಇದರೊಡನೆ ಇನ್ನೂ ಅನೇಕ ಪುಸ್ತಕಗಳು ಬರೆದು ಸೇರಿಸಿವೆ. ಅವಾವುವೆಂಬುದನ್ನು ಹಿಂದೆ ವರ್ಣಿತವಾಗಿರುವ ೪೪೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಭೋಗ, ಭಾಮಿನೀ, ಪರಿವರ್ಧಿನೀ, ವಾರ್ಧಿಕ ಷಟ್ಪದಿಗಳಲ್ಲಿ ಬರೆದಿದೆ. ವಾರ್ಧಿಕ ಷಟ್ಪದಿಯೇ ಹೆಚ್ಚು. ಪದ್ಯಗಳು ೧೨೯. ಕಲ್ಯಾಣ ಪಟ್ಟಣದಲ್ಲಿ ಹುಟ್ಟಿ ಬಿಜ್ಜಳನಿಗೆ ಮಂತ್ರಿಯಾಗಿದ್ದ ಬಸವನ ಸ್ತೋತ್ರವು ಇದರಲ್ಲಿ ಉಕ್ತವಾಗಿದೆ. ಕವಿ ಮುಂತಾದ ವಿಷಯುಗಳು ಈ ಗ್ರಂಥದಿಂದ ಗೊತ್ತಾಗುವುದಿಲ್ಲ.

No. 504. ಬಸವೇಶ್ವರನ ಪವಾಡಗಳು.

BASAVĒŚVARANAPAVĀḌAGAḶU.

Substance, palm-leaf. Size, 7⅝ × 1¼ inches. Pages, 45. Lines, 7 on a page. Character, Kannaḍa. Condition, very much injured. Appearance, old.

Begins on fol. 34*a* of the manuscript described under No. 450 ante.

Complete.

Similar to the above.

Beginning :—

ಧರೆಗೊಡೆಯ ಬಿಜ್ಜಳನ ಮನ . ಚ್ಚ . ಱಿದಂ ।
ಹರಯುಕ್ತಿ ಬಸವದಂಡೇಶಂ ಪವಾಡಗಳ ।
ಪರಮ ಮಂಗಳವೆನಿಪ ಚಾರಿತ್ರವಿದ (ನೋದಿ) ನರ (ರು) ಕೃತಕೃತ್ಯರಹರು ॥
ಲಿಂಗಲಾಂಛನವಿಡಿದು ಬಂದೊಡಾರಾದೊಡಂ ।
ಲಿಂಗವೆಂದೆಯೆ ಕಂಡು ನಂಬಿಬೇಡಿದ ಪಾದ ।
. . ಗಳಕೊಟ್ಟು ಮನ್ನಿಪ ಪಾರ್ತಗೇಳ್ಗುತ್ತಂ ಬಂದರಾ ಹಗರಣಿಗರು ॥
ಕಂಗೊಳಿಪ ಸರ್ವಾಂಗಭಸಿತ ವರ್ತಕಾ . ಲ ।
ಲಿಂಗ ಕುರವಣೆಯು ಜಡೆಗಳ ಧರಿಸಿ ಬರಲು ನಿಜ ।
ಲಿಂಗ ಜಂಗಮವೆನಿಸಿ ಮೆಱೆದ ಬಸವೇಶ್ವರನ ಚರಣಾಂಬುಜಕ್ಕೆ ಶರಣು ॥
ಸುರರಲೋಕದ ಮರುಗ ಕರಿಯ ಮಲ್ಲಿಗೆ ಕಮಲ ।
ಸುರುಚಿರದ ಪಚ್ಚಕರ್ಪೂರ ಹೇಮದಕ್ಷತೆಯು ।
ಮುರಗನ ಫಣಾಮಣಿಯು ಗಜಮಸ್ತಕದ ಮುತ್ತು ಜಲಚರವು ಮುಟ್ಟದುದ
[ಕಾ ॥
ವರಭಸಿತ ಕಾಮದಹನದ ರನ್ನದಂಡೆಗಳು ।
ಕರವೀರ[ವೀರ] ಮೋಕಮುಖರುದ್ರಾಕ್ಷಿಯಿರುವಂತಿ ।
ತ್ವರಿತವೆಮಗೀವುದೆನಲಿತ್ತ ಬಸವೇಶ್ವರನ ಚರಣಾಂಬುಜಕ್ಕೆ ಶರಣು ॥

*   *   *   *

ಬಸವ ದಂಡೇಶ್ವರನು ಬಿಜ್ಜಳನು ವೈಹಾಳ ।
ಯೆಸಕದಿಂ ಪೋಗುತಿರಲೊಬ್ಬ ಶಿವಭಕ್ತ ಯೆಲೆ ।
ಬಸವಣ್ಣ ಬಸವಯ್ಯ ಬಸವೇಶ ಶಿವನ ಪ್ರಸಾದವಿದೆ ಕೊಳ್ಳೆನುತ್ತ ॥
ಒಸೆದೊಸೆದು ಸುತನನತಿ ಮೋಹದೊಳು ಕರೆಯುತಿರೆ ।
ಬಸವೇಶ್ವರಂ ಕೇಳ್ದು ಕೈಯ್ಯೊಡ್ಡುತಿರೆ ನೃಪಂ ।
ನಸುನಗುತ್ತಿರೆ ಮೆಚ್ಚಿ ಮೆಱೆದ ಬಸವೇಶ್ವರನ ಚರಣಾಂಬುಜಕ್ಕೆ ಶರಣು ॥

ಕತ್ತಳನನೇಱಿ ಬಜ್ಜಳನೃಪಂ ಪೋಗುತಿರೆ ।
ಯೊತ್ತಿನಂಗಡಿಯ ಕಜ್ಜಾಯಮಂ ಬಲ್ಲಹದಿ ।
ಕೆತ್ತಿಸುತ ಬಸವ ಕೊಳ್ಳೆನಲದಂ ನಾಯ್ಗೆ ಹಾಕೆನಲದುವೆ ಯುರುಳ ಬೀಳೆ ॥
ಮತ್ತೊಂದು ಕಜ್ಜಾಯಮಂ ಪಿಡಿದು ಬಲ್ಲಹಬೊ ।
ಳೆತ್ತುತುಂ ಶಿವನ ಪ್ರಸಾದವಿದು ಕೊಳ್ಳೆನಲು ।
ಚಿತ್ತೈಸಿ ತಕೊಂಡು ಮೆರೆವ ಬಸವೇಶ್ವರನ ಚರಣಾಂಬುಜಕ್ಕೆ ಶರಣು ॥

End :—

ಕಲ್ಯಾಣದಲಿ ಸಿದ್ಧಿ ಸೆಟ್ಟಿ ಯೆಂಬವನಲ್ಲಿ ।
ಬಲ್ಲಹಂ ಪದಕಮಂ ಕಳುಹಿಧನಮಂತರಿಸಿ ।
ಯಿಲ್ಲನ್ನುವಂತೆ ಕಟ್ಟಳೆಯ ಜಂಗಮಕೆ ದಾಸೋಹಮಂ ಮಾಡುತಿರಲು ॥
ಕುಲ್ಲ ಮಂಚಣ್ಣ ಪದಕವ ನೃಪಗೆ ತೋಱಿ ನಿಮ್ಮ ಸೊಲ್ಲೆ । (?)
ಮೆಲ್ಲವಂ ನೋಡೆನುತ ಪೇಳಲು ಬಿಜ್ಜಳಂ । (?)
ಬಲ್ಲೆನಾ ಪದಕಮಂ ತೋಱಿಮೆನೆ ತಿಳಿಪವರ ಚರಣಾಂಬುಜಕ್ಕೆ ಶರಣು ॥
ಬಸವರಸರಂ ಕರೆಸಿ [ಯೊ] ಪದಕಮಂ ತೋಱಿಮೆನೆ ।
ವಿಶದ ಕಾಳೋರಗಂ ಮುದ್ರೆಯಿಂ ಪೊರಮಡಲು ।
ವಸುಧೇಶ ಬೆದರಿ ಮತ್ತದುವೆ ಮಾಣವುದಾಗೆ ಬೆರಗಾದನಾ ಬಿಜ್ಜಳಂ ॥
ಒಸಗೆ ದುಂದುಭಿಗಳಿಂ ಸುರರು ಪೂಮಳೆಗರೆಯೆ ।
ಬಸವನಡಿಗೆಱಗಿ ಕೊಟ್ಟರು ಮುದ್ರೆಯುಂಗುರವ
ಪಶುಪತಿಯು ಕಳೆದೋಱಿ ಮೆಱೆದ ಬಸವೇಶ್ವರನ ಚರಣಾಂಬುಜಕ್ಕೆ ಶರಣು ॥
ಇದು ಬಸವ ದಂಡೇಶ ಬಿಜ್ಜಳ ಕ್ಷೋಣಿಪಗೆ ।
ಪೊದವಿದೋಱಿದ ಪವಾಡಗಳ ವಿಸ್ತರಿಸಿದಂ ।
ಸದುಹೃದಯರಪ್ಪರವಧಾನದಿಂದೋದೆ ಫಲಸಿದ್ಧಿಯಹುದು ॥ (?)
ಒದಗುವುದು ಸಾಲೋಕ್ಯ ಸಾಮಿಪ್ಯ ಶಿವಲೋಕ [ವಾಗಳಗಣ] ।
ಪದವಿ ದೊರಕುವುದು ಮದನಹರನಾಜ್ಞೆಯಿದುನಿಜ ।
ದರಿವವರ ಚರಣಾಂಬುಜಕ್ಕೆ ಶರಣು ॥
[ವೆಂದು ನಂಬಿಹುದು] ಸಕಲಾಗಮದ ಸಾರವೆಂ ದಿದನು

Colophon :

ಬಸವಪವಾಡಂ ಸಮಾಪ್ತಂ.

(ವಿ-ವಿ.)—

ಸಮಗ್ರವಾಗಿದೆ. ಶಿಥಿಲವಾಗಿದೆ. ಲಿಪಿ ಸಾಮಾನ್ಯವಾದುದು. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಸೇರಿವೆ. ಅವಾವುವೆಂಬುದನ್ನು ೪೫೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ವಾರ್ಧಿಕಷಟ್ಪದಿಯಲ್ಲಿ ಬರೆದಿದೆ. ಪದ್ಯಗಳು ೪೬. ಪ್ರತಿ ಪದ್ಯವೂ ಬಸವನ ಪೆರ್ಮೆಯ ವರ್ಣನೆಯನ್ನೊಳಗೊಂಡಿರುವುದು. ಕವಿ ಮುಂತಾದ ಸಂಗತಿಗಳೊಂದೂ ತಿಳಿದು ಬರುವುದಿಲ್ಲ. ಪದ್ಯಬಂಧವು ಸಾಮಾನ್ಯವಾದುದು.

No. 505. ಬಸವೇಶ್ವರನ ಪವಾಡದ ರಗಳೆ.

BASAVĒŚVARANA PAVĀḌADARAGAḶE.

Substance, palm-leaf. Size, $6\frac{1}{4} \times 1\frac{3}{16}$ inches. Pages, 23. Lines, 7 on a page. Character, Kannaḍa. Condition, very much injured. Appearance, old.

Begins on fol. 58*a* of the Ms. described under No. 465 ante. Complete.

God Śiva once directed Vṛṣabha to be born in the mortal world and there by his deeds to establish devotion to Śiva. Vṛṣabha though reluctant to be separated from his master came down at last to the mortal world and was born as Basava, son of Mādalāmbikā. The 88 great deeds of Basava are described in this work.

Beginning :—

ಕಂ ॥ ಶ್ರೀಮದಪ್ರತಿಮ ಬಸವನ । (?)
ನಾಮವ ಮನವಚನ ಕಾಯ[ದೊಳಗ](ದಲ್ಲ)ನವರತಂ ॥

ತಾಮಸವಿಲ್ಲದೆ ನೆನೆವರ ।
ಪ್ರೇಮಿಗಳಾಳಯ್ಯ ಹಂಪೆಯ ವಿರೂಪಾಕ್ಷಾ ! ॥

ಬಸವಣ್ಣನು ಕಲ್ಯಾಣದೊ ।
ಳೆಸೆವ ಪವಾಡವನು ಮೆರೆದ ಯೆಂಬತ್ತೆಂಟುಂ ॥

ವಸುಧಾಧಿಪ ಬೆರಗಾಗಲು ।
ಅಸಮಾಕ್ಷಂ ದೇವ ಹಂಪೆಯ ವಿರೂಪಾಕ್ಷಾ ! ॥

ರಗಳೆ ॥ ಶ್ರೀಮದಮಲ ಶಿವನು ರಜತಗಿರಿಯೊಳೊಪ್ಪಿ ಬೆಳಗುತಿರಲು ।
ಸೋಮಧರನು ಶಾಂತಮಾಯನು ವೃಷಭನಿದಿರೊಳೊಪ್ಪುತಿರಲು ।

ಕಾಮಹರನು ಧರ್ಮರೂಪನೊಡನೆ ತನ್ನ ಲೀಲೆ ಮಿಗಲು ।
ಪ್ರೇಮದಿಂದ ಧರೆಯೊಳೆನ್ನ ಭಕ್ತಿಯನುವ ತೋರ್ಪುದೆನಲು ॥

ದೇವ ನಿಮ್ಮನಗಲಿ ಮರ್ತ್ಯ[ಲೋಕ]ದೊಳಗೆ ಜನಿಸಲಾರೆನೆನಲು ।
ಭಾವಭರಿತವಾಗಿ ನಿಮ್ಮೊಳಪ್ಪ ನಂಬಿ ಹೋಹುದೆನಲು ॥

ನಾವದಳಿಗ ಹರನ ಚರಣಕೆರಗಿ ದರನೀವ್ರು ಆನಲು । (?)
ಯೊವದಾಗಿ ಶರಣ ಸಂಗವಾಗಬೇಕುಕರುಣಿಸೆನಲು ॥

ಎಳನೂರು ಯೆಪ್ಪತ್ತು ಅಮರಗಣಂಗಳೊಳಗೆ ಶಿವನು ।
ಮೇಳವಾಡಿ ಕಳುಪಿ ಹರನ ಚರಣಕೆರಗಿ ವೃಷಭವರನು ॥

ಬೀಳುಕೊಂಡು ಮರ್ತ್ಯ(ಲೋಕ)ದೊಳಗೆ ಬಾಗವಾಡಿಯೊಳಲ್ಲಿ ।
ಭಾಳನಯನನಂಘ್ರಿವಿಡಿದು ರಾಜ ಬಾಳುತಲ್ಲಿ ॥

ಅರಸಿ ಮಾದಲಾಂಬಿಕೆಯು ಸುಗರ್ಭದಿಂದಲೊಗೆದೊಡಾಗ ।
ಹರುಷದಿಂದ ಶಿವನು ಬಂದು ದರುಶನವನು ತೋರಿ ಬೇಗ ॥

ಪರಮಪುರುಷನಿಂತು ಯೇಳು ವತ್ಸರಂಗಳಾಗುತಿರಲು ।
ಹರುಷದಿಂದ ಜನನಿ ಜನಕ[ನೃಪನು](ರುಪನಯನ)ವ[ನ್ನು]ಮಾಡುತಿರಲು ।

*　　*　　*　　*

ನೆರೆದ ವಿಪ್ರರೆಲ್ಲ ಬೆರಗನೆಯ್ದಿ ಸಕಲ ವೇದಗಳನು ।
ಹರುಷದಿಂದ ವ್ರೋದೆ ಪರಮ ಪುರುಷ ಬಸವನೆಂದು ಪೊಗಳೆ ॥

ಹಿರಿಯ ತುರಿಯದಿಂದ ಸಂಗಮೇಶ್ವರಂಗೆ ಬರಲು ಮುಂದೆ।
ಹರಿವ ನದಿಯನೆರಡು ಭಾಗವನ್ನು ಮಾಡಿ ಮೆರೆದ ಬಸವ ॥

ಹರುಷದಿಂದ ಶರಣ ಶಿವ ಪೂಜೆ ಮಾಡಿ ವಿಪ್ರರೆಯ್ದಿ ।
ನೆರೆದು ತಂದು ಬೇಡವೆನಲು ಶಿವನ ನುಡಿಸಿ ಮೆರೆದ ಬಸವ ॥

ತಂದು ಸಂಗಮೇಶ್ವರಂಗೆ ಬೋನನಿಡಲು ಉಣ್ಣದಿರಲು ।
ಅಂದು ಮೊದಲು ಜಂಗಮಕ್ಕೆ ಮಾಡಿ ತೋರಿ ಮೆರೆದ ಬಸವ ॥

ಚಂದ್ರಧರಗೆ ನಮಿಸಿ ಬಿಜ್ಜಳನು ಪುರಕೆ ಬಂದು ಯಿರಲು ।
ಅಂದು ಮೊದಲು ಜಂಗಮಕ್ಕೆ ಮಾಡಿ ತೋರಿ ಮೆರೆದ ಬಸವ ॥

End :—

ಪರಮ ಪುರುಷ ಪ್ರಭುವು ಬರಲು ತನ್ನ ಹೃದಯ ಕಮಲದೊಳಗೆ ।
ಸುರುಚಿರಪ್ರಸಾದವಿತ್ತು ನಲಿವುತೊಪ್ಪಿ ಮೆರೆದ ಬಸವ ॥

ಇಂತು ಯೆಂಬತ್ತೆಂಟು ಪವಾಡಗಳ ತೋರಿ ಮಿಗೆ ನಲಿದು ।
ಸಂತತಂ ಶಿವಾನು ಭಾವದೊಳಗೆ ಯೊಪ್ಪಿ ಮೆರೆದ ಬಸವ ॥

ಅಂಗ ಲಿಂಗವಾದ ಪ್ರಾಣಲಿಂಗವಾದ ಭ . . . . ।
ಹಿಂಗದಂತೆ ತೋರಿ ಭಕ್ತಜನವ ನಿಲಿಸಿ ಮೆರೆದ ಬಸವ ॥

ಮಂಗಳಾಂಗ ತನ್ನ ಪ್ರಾಣಲಿಂಗ ಸಂಗಮೇಶನೊಳಗೆ ।
ಅಂಗವರತು ವಿರೂಪಾಕ್ಷನೊಳಗೆ ಬೆರೆದು ಮೆರೆದ ಬಸವ ॥

ಕಂ ॥ ಪರಮಗುರು ಬಸವರಾಜಂ ।
ಮೆರೆದ ಪವಾಡಗಳ ನಿಮ್ಮ ಕೃಪೆಯಿಂದೆನಗಂ ॥
ಪರಮತಿಯನಿತ್ತು ರಕ್ಷಿಸ ।
ತೊರೆದೆಂ ಸಲಹಯ್ಯ ಹಂಪೆಯ ವಿರೂಪಾಕ್ಷಾ ! ॥

Colophon :—

ಬಸವೇಶ್ವರನ ಪವಾಡದರಗಳೆ ಸಮಾಪ್ತಂ.

(ವಿ.ವಿ.)—

ಸಮಗ್ರವಾಗಿದೆ. ಅತಿ ಶಿಥಿಲವಾಗಿದೆ. ಬರೆವಣಿಗೆ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಸೇರಿವೆ. ಅವಾವುವೆಂಬುದನ್ನು ಹಿಂದಣ ೪೬೫ ನೆಯ ನಂಬರನ್ನು ನೋಡಿ ತಿಳಯುವುದು.

ಇದು ರಗಳೆಯಲ್ಲಿ ಬರೆದಿದೆ. ಗ್ರಂಥದ ಅದ್ಯಂತ್ಯಗಳಲ್ಲಿ 'ಹಂಪೆಯ ವಿರೂಪಾಕ್ಷಾ' ಎಂದು ಮುಗಿಯುವ ಒಂದೊಂದು ಕಂದಪದ್ಯವಿದೆ. ಈ ಗ್ರಂಥವು ಬಸವೇಶ್ವರನ ಪೆರ್ಮೆಯನ್ನು ಬೋಧಿಸುತ್ತದೆ. ಬಸವೇಶ್ವರನು ಮಾಡಿರುವ ೪೪ ಪವಾಡಗಳು ಇದರಲ್ಲಿ ವರ್ಣಿತವಾಗಿವೆ. ಕವಿಯಾರೆಂಬುದು ಈ ಗ್ರಂಥದಿಂದ ತಿಳಿದು ಬರುವದಿಲ್ಲ.

No. 506. ಬಾಹೂರ ಬೊಮ್ಮಣ್ಣ ವಚನ.
BĀHŪRA BŌMMAṆṆAVACANA.

Substance, palm-leaf. Size, 12 × 1½ inches. Pages, 2. Lines, 5 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 63 a. of the manuscript described under No. 498 ante.

Incomplete.

Similar to the above ; deals mainly with devotion and renunciation according to Vīraśaiva system By Bāhūra Bommaṇṇa.

Beginning :—

ಬೀಜ ಹುಟ್ಟುವ ತತ್ಕಾಲವೆಂದೊಡೆ ಹೊಯಿದಿರ ಹೊಯ್ಗಲದಲ್ಲಿಯೆ ಬೇರು ಬಿಟ್ಟು ಸಸಿ ಬೆಳೆದು ಎಲೆ ನೀಡಿ ಫಲಗಳಾದುದುಂಟೆ ? ಕರಸ್ಥಲಕೊಲವನಱಿತ ಬ್ರಹ್ಮ ನಾನೆಂದೊಡೆ ಅರ್ಚನೆ ಅಱಿತು ಪೂಜೆ ನಿಂದು ಸತ್ಯ ಕೆಟ್ಟು ಭಕ್ತಿ ಹರಿದಲ್ಲಿ ನಿಜತತ್ವನಪ್ಪಗೆ ಇದು [ಈಸ್ವಾಸದ] (ವಿಶ್ವಾಸದ) ಭಿತ್ತಿ. ವಿರಕ್ತಿಯು ನಿಳೆಯ, ಸಂಗನ ಬಸವಣ್ಣ ಭಕ್ತಿ ವಿರಕ್ತಿ ಸಿಕ್ಕಿ ಕಟ್ಟು ಬ್ರಹ್ಮೇಶ್ವರಲಿಂಗವ ಮುಟ್ಟುವ ಮುಟ್ಟು.

* * * *

End :—

ಗುರುವಳಿದಲ್ಲಿ ಗುರುಪಟ್ಟವೆಂದು ಕಟ್ಟಿ ಪರಮಗುರುವೆಂದು ಶರಣೆಂಬಲ್ಲಿ ಲಿಂಗ ಬಾಹ್ಯವಾಗಿ ಅಂಗವ ಹರಿದು ಹೋದಲ್ಲಿ ಮತ್ತೊಂದು ಲಿಂಗವುಂಟೆಂದು ಕಟ್ಟಿಕೊಳ್ಳರೇತಕ್ಕೆ ? ಗುರು ಪೂರ್ವ, ಲಿಂಗ ಉತ್ತರವೆ ? ಗುರು ಆದಿ, ಲಿಂಗ ಅನಾದಿಯು [ಈದು](ಈ) ಕಾರಣ ದಲ್ಲಿ ಗುರುಭಕ್ತಿ ಆಗಿ ಬಿರಿದು ಲಿಂಗ ಭಕ್ತಿಯೆತ್ತಲಾನೊಬ್ಬ ಜಂಗಮಭಕ್ತಿಗೆ ಸಂಗನ ಬಸವಣ್ಣನಲ್ಲದಿಲ್ಲ. ಬ್ರಹ್ಮೇಶ್ವರಲಿಂಗವು ಸಾಕ್ಷಿಯಾಗಿ.

(ವಿ-ವಿ.)—

ಅಸಮಗ್ರ. ಅತಿಶಿಥಿಲ. ಲಿಪಿಯು ಸಾಮಾನ್ಯವಾಗಿದೆ. ತಪ್ಪುಗಳಿವೆ.

ಈ ವಚನಗ್ರಂಥವು ಬ್ರಹ್ಮೇಶ್ವರ ಲಿಂಗಾಂಕಿತವಾದ ವಚನತ್ರಯವನ್ನೊಳಗೊಂಡಿದೆ. ವೀರಶೈವ ವೇದಾಂತ ಬೋಧಕವಾದ ಈ ಗ್ರಂಥವನ್ನು ಬರೆದವನು ಬಾಹೂರ ಬೊಮ್ಮಣ್ಣ ನೆಂಬುವನು. ಈತನು ತನ್ನ ವಚನಗಳಲ್ಲಿ ಸಂಗನ ಬಸವಣ್ಣನನ್ನು (ಬಸವನನ್ನು) ಪ್ರಸ್ತಾ

೬: ಸಿರುವದರಿಂದಲೂ ಬಸವನು ಬಿಜ್ಜಳನಿಗೆ ಈತನ (ಬಸವಪುರಾಣೋಕ್ತಬಾಹೂರ ಬೊಮ್ಮಣ್ಣನೂ ಇವನೂ ಒಬ್ಬನೇ ಎಂದಾದರೆ) ಪವಾಡವನ್ನು ಹೇಳಿಸುವುದರಿಂದಲು (ಬಸವಪುರಾಣ ಸಂಧಿ ೨೨.) ಇವರಿಬ್ಬರೂ ಸಮಕಾಲೀನರೆಂದು ತಿಳಿದು ಬರುತ್ತದೆ.

No. 507. ಬಿಬ್ಬಿಬಾಚಯ್ಯನವಚನ. BIBBIBĀCAYYAVACANA.

Substance, palm-leaf. Size, 12 × 1⅛ inches. Pages, 3. Lines, 4 on a page. Character, Kannaḍa. Condition, injured. Appearance, old. Mode of writing, not bad but free from mistakes.

Begins on fol. 37 b. of the manuscript described under No 498 ante.

Incomplete.

Contains seven passages on Vīraśaiva Philosophy. Every passage ends with 'Sōmēśvara liṅga'. The author is Bibbi Bācayya.

Beginning :—

ಓಂಕಾರ ಪ್ರಥಮದಲ್ಲಿ ದಿವ್ಯನಿರಾಲಂಬಮೂರ್ತಿ ಜಗದ್ಧಿತಾರ್ಥವಾಗಿ ತತ್ವಾದಲ್ಲಿ ಪಂಚಬ್ರಹ್ಮಸಾಕಾರಮೂರ್ತಿ ಲೀಲಾಸಂಭವವಾದಲ್ಲಿ ಅಣುವಿಂಗಣು ಮಹತ್ತಿಂಗೆ ಮಹತ್ತಾದಲ್ಲಿ ಲಿಂಗಕರಂಡ ಆತ್ಮ ಸುಗಂಧ ನೀನಾದೆಯಲ್ಲಾ "ಪಿಣಾಂಕಧರ ಸೋಮೇಶ್ವರಲಿಂಗ."

* * *

End :—

ಎನ್ನಯ . . . ಹೊಲಬನೆ ಕಂಡು ಶಿಲೆಕುಲದಲ್ಲಳಿದು ಅನ್ನ ಅರ್ಪಿತದಲ್ಲಿ ಹಿಂಗಿ ಉದಕ ಮಜ್ಜನದಲ್ಲಿ ಸಂದು ಪ್ರಸಾದ ಪ್ರಸನ್ನದಲ್ಲಿ ಐಕ್ಯವಾಗಿ ಬಿಬ್ಬನ ಮನದಲ್ಲಿ ಒಬ್ಬುಳಯಾಯಿತ್ತು. "ಪಿಣಾಂಕಧರ ಸೋಮೇಶ್ವರಲಿಂಗ".

(ವಿ.ವಿ.)—

ಅಸಮಗ್ರ. ಶಿಥಿಲ. ಗ್ರಂಥಪಾತವಿದೆ. ಲಿಪಿಯು ಸಾಮಾನ್ಯವಾಗಿದೆ. ತಪ್ಪಿಲ್ಲ.

ಇದು ವಚನಗ್ರಂಥವಾಗಿದೆ. ಇದರಲ್ಲಿ ವಚನಸಪ್ತಕವಿದೆ. ಪ್ರತಿಯೊಂದು ವಚನವೂ "ಪಿಣಾಂಕಧರ ಸೋಮೇಶ್ವರಲಿಂಗ" ಎಂದಂತ್ಯವಾಗುವುದು. ವೀರಶೈವ ಮತಾಚಾರಗಳನ್ನು ಪ್ರತಿಪಾದಿಸುವ ಈ ವಚನಗಳನ್ನು ಬರೆದವನು ಬಿಬ್ಬಿಬಾಚಯ್ಯನೆಂಬುವನು.

No. 508. ಭಕ್ತಿಬಿನ್ನಹದ ರಗಳೆ.

BHAKTIBINNAHADA RAGAḶE.

Substance, palm-leaf. Size, 6¼ × 1 3/16 inches. Pages, 23. Lines, 7 on a page. Character, Kannaḍa. Condition, very much injured. Appearance, old. Mode of writing, fair.

Begins on fol. 35*a* of the manuscript described under No. 465 ante.

Complete.

A devotional work in praise of God Śiva. Like other works of this kind it presupposes that the world is full of miseries and teaches that by devotion to Śiva one can get over them. It is probable that the author of this work is Śaṅkaradēva.

Beginning :—

ವೃ॥ ಹಿಂದೆ ಸಹಸ್ರಲಕ್ಷ ಶತಕೋಟಿಭವಾಂತರ ಹೀನಯೋನಿಯೊಳ್ ।
ಬಂದೆನು ಭಾಗ್ಯದಿಂ ದೊರಕೆ . ಂತಕೆ . . . ಜನ್ಮ ವಿನ್ನುನಾಂ ॥
ಮುಂದಿದಱಿಂದೆ ಸದ್ಗತಿಯನೆಯ್ದುವೆನೋ ಕಡೆಗೆಯ್ದದಿರ್ಪೆನೋ ।
ಎಂದಿರುಳುಂ ಪಗಲ್ ಮರುಗಿ ಚಿಂತಿಸುತಿರ್ದೆನೆ ತಂದೆ ಶಂಕರಾ ! ॥

ರಗಳೆ.॥ ಶ್ರೀಮನ್ಮಹಾ ಪ್ರಮಥರಾಯ ನಿರುಪಮಕಾಯ ।
ನಾಮರೂಪ ಕ್ರಿಯಾದೂರ ವಿರಹಿತಮಾಯ ॥
ದೇವ ಭವಭಯರೋಗವೈದ್ಯ ನಿಗಮಾಭೇದ್ಯ ।
ದೇವ ಲೋಕಾದಿಲೋಕಕ್ಕೆ ಪರಮಾರಾಧ್ಯ ॥
ದೇವ ಮಾಂಗಲ್ಯ ಕೈವಲ್ಯ ಕಂ . ರೂಢ ।
ದೇವ ಘನತಾಂಡವಾಡಂಬರ ಮಹಾ [ಪ್ರಭು](ಪ್ರೌ)ಢ ॥
ಪರದೈವಸೇಶ್ಯಾಭುಜಂಗ ನಿರುಪಮಲಿಂಗ ।
ಶರಣಶಾಂತೋ . ಂತರಂಗ ಸಜ್ಜನ ಸಂಗ ॥
ರಸಗಂಧ ರೂಪಾದಿವಿಷಯ ವಿದ್ಯಾತೀತ ।
ಪಶುಪಾಶಹತಜಗತ್‍ಖ್ಯಾತ ಗಿರಿಜಾನಾಥ ॥
ಎನ್ನಬಿನ್ನಪವ ಮನ್ನಿಸು ಮನೋರಾಗದಿಂ ।
ಚೆನ್ನಾಗಿ ಚಿತ್ತೈಸು ಸಂಸಾರರೋಗದಿಂ ॥

End :—

ಧರ್ಮಾರ್ಥಗಳನೊಲ್ಲೆ ಕಾಮಮೋಕ್ಷವನೊಲ್ಲೆ ।
ನಿಮ್ಮ ಸಾಲೋಕ್ಯಾದಿ ಪದವಿಗಳನಾನೊಲ್ಲೆ ॥
ಭಕ್ತಿ ಭಿಕ್ಷವನಿಕ್ಕು ಮಿಕ್ಕ ವರಗಳನೊಲ್ಲೆ ।
ಭಕ್ತಿಯಿಂದಧಿಕವಿಲ್ಲೆಂಬುದಂ ನಾಂ ಬಲ್ಲೆ ॥
ಶರಣು ಶರಣಾರ್ತಿ ಶರಣಾರ್ತಿ ಶಂಕರಲಿಂಗ ।
ಶರಣಾರ್ತಿ ಶರಣಾರ್ತಿ ಶರಣು ಶಂಕರಲಿಂಗ ।

ಕಂ ॥ ಅಗಜೇಶ ನಿಮ್ಮ ಪಾದವ ।
ಮಿಗೆ ಸಾರುವೆನೆಂಬ ಸರ್ವಜೀವರ ಮನಮಂ ॥
ತೆಗೆದುಕೊಂಡಿರ್ಪ ಮಾಯೆಯು । (?)
ಜಗಹಂ ಬಿಡಿಸಾ ಪ್ರಸನ್ನ ಶಂಕರಲಿಂಗಾ ! ॥

Colophon :—

ಭಕ್ತಿಭಿನ್ನಹದ ರಗಳೆ ಸಮಾಪ್ತಂ.

(ವಿ-ವಿ.)—

ಸಮಗ್ರವಾಗಿದೆ. ಅತ್ಯಂತ ಶಿಥಿಲವಾಗಿದೆ. ಲಿಪಿ ಉತ್ತಮವಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಕೂಡಿವೆ. ಅವಾವುವೆಂಬುದನ್ನು ಹಿಂದಣ ೪೬೫ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ರಗಳೆಯಲ್ಲಿ ಬರೆದಿದೆ. ಗ್ರಂಥದಾದಿಯಲ್ಲಿ ಒಂದು ವೃತ್ತವೂ ಅಂತ್ಯದಲ್ಲಿ ಒಂದು ಕಂದಪದ್ಯವೂ ಇವೆ. ಕಡೆಯಲ್ಲಿ 'ಪ್ರಸನ್ನ ಶಂಕರಲಿಂಗ' ಎಂಬ ಅಂಕಿತವಿದೆ. ಕವಿ ಶಂಕರದೇವನಾಗಿರಬಹುದು.

No. 509. ಭೀಮಕವೀಶ್ವರ ರಗಳೆ-
BHĪMAKAVĪŚVARA RAGAḶE.

Substance, palm-leaf. Size, $6\frac{1}{4} \times 1\frac{3}{16}$ inches. Pages, 11. Lines, 7 on a page. Character, Kannaḍa. Condition, very much injured. Appearance, old. Mode of writing, fair.

Begins on fol. 20*b* of the manuscript described under No. 465 *ante*. Complete.

A Vīraśaiva work written in praise of Śiva in 100 Ragaḷes. Each line ends with ಓನ್ನಮಶ್ಶಿವಾಯ. The author is Bhīmakavi son of Sukavidēva.

Beginning :—

ಕಂ ॥ ಸ್ತ್ರೀವಶ್ಯಂ ನೃಪವಶ್ಯಂ ।
ಭೂವಶ್ಯಂ ಸರ್ವವಶ್ಯವೆನಿಸಿ ಶಿವಂ ಕ ॥
ರ್ಪವಶ . . ಳಿತ
. . ರೊ . . ಂ ನಮಶ್ಶಿವಾಯನೆ ಪೇಳ್ವೆಂ ॥

ರಗಳೆ ॥ ಶ್ರೀಗುರೂಪದೇಶವಾಗಿ ಯೋಗವ್ರೋನ್ನಮಶ್ಶಿವಾಯ ।
ಆಗಮೋಪನಿಷದುಪರಿವಿಭಾಗವ್ರೋನ್ನಮಶ್ಶಿವಾಯ ॥
ಸರ್ಪಧರನ ಭಕ್ತಿ • ತಿ . ಕೂರ್ಪ ಓನ್ನಮಶ್ಶಿವಾಯ ।
ದರ್ಪರಿಪು · ಜವನೊಸೆದು ತೋರ್ಪ ಓನ್ನಮಶ್ಶಿವಾಯ ।
ಸಕಲಮಂತ್ರತಂತ್ರವಿಧದ ಮುಕುರ ಓನ್ನಮಶ್ಶಿವಾಯ ।
ವಿಕಟಮೋಕ್ಷಕಾಂಕ್ಷಿತರ್ಗೆ ಸುಕರ ಓನ್ನಮಶ್ಶಿವಾಯ ॥
ಇಂದುಧರನ ಮೊಗದೊಳೊಗೆದು ಬಂದು ಓನ್ನಮಶ್ಶಿವಾಯ ।
ಒಂದಿದಮಲ ಶೈವತತಿಗೆ ಸಂದುದೋನ್ನಮಶ್ಶಿವಾಯ ॥

ವೇದ . ದವ್ರುಗ್ಸ್ಮಡಿಸುವ ನಾದ ಓನ್ನಮಶ್ಶಿವಾಯ ।
ನಾವ ಬಿಂದುಕಳಿಗಳನುವ . . ದ ಓನ್ನಮಶ್ಶಿವಾಯ ॥

End :—

ಶಾಂತಿ ಓನ್ನಮಶ್ಶಿವಾಯ ಕಾಂತಿ ಓನ್ನಮಶ್ಶಿವಾಯ ॥
ಧರ್ಮ ಓನ್ನಮಶ್ಶಿವಾಯ ವರ್ಮ ಓನ್ನಮಶ್ಶಿವಾಯ ॥
ಸೌಖ್ಯ ಓನ್ನಮಶ್ಶಿವಾಯ ಮುಖ್ಯ ಓನ್ನಮಶ್ಶಿವಾಯ ।
ಶುದ್ಧ ಓನ್ನಮಶ್ಶಿವಾಯ ಸಿದ್ಧ ಓನ್ನಮಶ್ಶಿವಾಯ ॥

ಕಂದ ॥ ಜ್ಯೋತಿ ಸಿದ್ಧೇಶನಾಮವಿ- ।
ಖ್ಯಾತರ ಶತವನೊಲ್ದು ಪಠಿಯಿಸುತಿ-।
ರ್ಪಾತನ ಬೀಜಾಕನೂತ್ತಮ ।
ದಾತಂ ಪರಿಪ್ರೂತನಮಿತಪುಣ್ಯಾಸಮೇತಂ ॥ (?)
ಈ ಯಾಷ್ಟೋತ್ತರ ಶತಮಂ ।
ಆಯುಕ್ತಂ ಸುಕವಿದೇವ ಸುತ ಭೀಮಂ ಶ್ರೀ ॥
ವ್ಯಯಂ ಭಕ್ತಿಯೊಳೊರೆದನ ।
ಜೇಯಂ ಶರಣರ್ಕಳೊಲ್ದು ಲಾಲಿಸುವುದಿದಂ ॥ (?)

Colophon :—

ಭೀಮಕವೀಶ್ವರ ರಗಳೆ ಸಮಾಪ್ತಂ.

(ವಿ-ವಿ.)—

ಸಮಗ್ರವಾಗಿದೆ. ಅತ್ಯಂತ ಶಿಥಿಲವಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳವೆ. ಅವಾವುವೆಂಬುದನ್ನು ಹಿಂದಣ ೪೪೭ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ರಗಳೆಯಲ್ಲಿ ಬರೆದಿದೆ. ಗ್ರಂಥದಾದಿಯಲ್ಲಿ ಒಂದು ಕಂದಪದ್ಯವೂ ಅಂತ್ಯದಲ್ಲಿ ಎರಡು ಕಂದಪದ್ಯಗಳೂ ಇವೆ. ರಗಳೆಗಳು ೧೦೦. ಶಿವಸ್ತುತಿ ರೂಪವಾದುವು. ಪದ್ಯಗಳು ಓನ್ನಮಶ್ಶಿವಾಯ ಎಂದು ಮುಗಿಯುತ್ತವೆ. ಈ ಗ್ರಂಥವನ್ನು ಸುಕವಿದೇವಸುತ ಭೀಮಕವಿಯು ಬರೆದಿದ್ದಾನೆ.

No. 510. ಭುವನಕೋಶದವಾಚ್ಯ.
BHUVANAKŌŚADAVĀCYA.

Substance, palm-leaf. Size, $12\frac{5}{8} \times 1\frac{3}{16}$ inches. Pages, 25. Lines, 5 on a page. Character, Kannaḍa. Condition, very much injured. Appearance, old. Mode of writing, fair.

Begins on fol. 1*a* of the manuscript described under No. 447 ante.

Complete.

Describes the order of creation according to Vīraśaiva system. The name of the author is not known.

Beginning :—

ಒಕ್ಕಲಿಗನು ಮಳೆಯಾಗುವ ಭೂಮಿಯು ಬೆದೆಯಾನರಿದು ಹದಿನೆಂಟುಧಾನ್ಯಗಳನ್ನು ಬಿತ್ತಿ ಬೆಳೆದು ಕೊಯ್ದು ಒಕ್ಕಿ ತೂರಿ ರಾಶಿಯ ಮಾಡಿ ನೆಲ್ಲುಯಿಷ್ಟು, ಗೋದುವೆಯಿಷ್ಟು, ಉದ್ದು ಕಡಲೆ ಹೆಸರು ಯಿಷ್ಟಿಷ್ಟೆಂದು ಅಳೆದು ಹಸಿಗೆಯ ಮಾಡುವ ಹಾಗೆ ಪರಶಿವನು ತನ್ನ ಪಂಚ ಮುಖಂಗಳಿಂದ ಪಂಚಭೂತಂಗಳಂ ಪುಟ್ಟಿಸಿಯಾಪಂಚಭೂತಂಗಳ ಮಿಶ್ರದಿಂದ ಯಿಪ್ಪತ್ತೈದು ತತ್ವಂಗಳ ಪುಟ್ಟಿಸಿ ಆ ತತ್ವಾತ್ಮಕ ಶರೀರವನ್ನು ತನ್ನಂಶವಾದಾತ್ಮಂಗೆ ಸಂಬಂಧಿಸಿದನಾಗಿ. ಜೀವ ಮೞತಿದು (?) ಹುಟ್ಟುಖರುವಲ್ಲಿ ಪುಣ್ಯದಿಂ ದೇವಾತ್ಮಜನ್ಮ. ಪಾಪದಿಂದ ಸ್ಥಾವರ ಜನ್ಮ. ಪುಣ್ಯಪಾಪಂಗಳ ಸಮಾನತ್ವದಿಂದ ಮನುಜ ಜನ್ಮವಹುದು. ಆ ಸ್ಥೂಲವಲ್ಲದ ಸೂಕ್ಷ್ಮವಲ್ಲದ ಪ್ರಮಾಣವಾದ ದೇಹದಲ್ಲಿ ಮೂಱುಮಾನ ಪಿತ್ತ, ಆಱು ಮಾನ ಶ್ಲೇಷ್ಮ, ಆಱು ಬಳ್ಳ ರಕ್ತ, ಸೊಲಗೆ ಶುಕ್ಲ, ಮತ್ತಮಾದೇಹದಲ್ಲಿ ಅಱುವತ್ತಾಱು ಕೋಟಿ ಕರಣಂಗಳು ಇಪ್ಪತ್ತೆರಡು ಸಾವಿರ ನಾಡಿಗಳು ಎಂಟು ಸಾವಿರ ಸಂದುಗಳು ಮೂವತ್ತು ಮೂಱು ಕೋಟಿ ಯಿಂದ್ರಿಯಂಗಳು, ಆ ದೇಹದ ಹೊರವಳೆಯದಲ್ಲಿ ಮೂಱುವರೆ ಕೋಟಿ ರೋಮಂಗಳು ಮತ್ತಮಾದೇಹದಲ್ಲಿಹ ಕಾರಣಂಗಳ ಬೇಱೆ ಬೇಱೆ ವಿಸ್ತಾರವಾಗಿ ಪೇಳುವ ಕಾರಣ ಈ ಶಾಸ್ತ್ರಕ್ಕೆ ತತ್ವವಿಭಾಗವೆಂಬ ನಾಮವಾಯ್ತು. ಈ ಶಾಸ್ತ್ರಕ್ಕೆ ಮೊದಲಾವುದೆಂದೊಡೆ ಪ್ರಣವದುತ್ಪತ್ತಿ, ಅದು ಹೇಗೆಂದರೆ.—ಬ್ರಹ್ಮ, ವಿಷ್ಣು, ರುದ್ರ, ಇಂದ್ರಾದಿ ದೇವತೆಗಳು, ಅಷ್ಟತನುಗಳು, ದಶದಿಕ್ಕು, ಕಾಲಯಜ್ಞಂಗಳು ವೇದಂಗಳಾದಿಯಾದ ಬ್ರಹ್ಮಾಂಡ ಚತುರ್ದಶಭುವನ ತೋಱುವ ತೋಱಿಕೆಗಳೇನು . . . ಯಿಲ್ಲದೆಂದು ನಿರವಯವಾಗಿದ್ದಿತು. ಅಂತಪ್ಪ ನಿರವಯುವ ಬ್ರಹ್ಮವು ನಿರಂಜನ ಬ್ರಹ್ಮವಾಯಿತು.

End :—

ಬಳಿಕಾ ಸತ್ಯಲೋಕದಿಂ ಮೇಲೆ ನಾಲ್ಕು ಕೋಟಿ ಯೋಜನದಲ್ಲಿ ವೈಕುಂಠವಿಹುದು. ಬಳಿಕಲ್ಲಿಂದ ಮೇಲೊಂದು ಕೋಟಿ ಯೋಜನದಲ್ಲಿ ಷಣ್ಮುಖಲೋಕವಿಹುದು. ಮತ್ತಲ್ಲಿಂದ ಮೇಲೊಂದು ಕೋಟಿ ಯೋಜನಾಂತರದಲ್ಲಿ ಉಮಾಲೋಕವಿಹುದು. ಮತ್ತಮಲ್ಲಿಂದ ಮೇಲೊಂದು ಕೋಟಿ ಯೋಜನಾಂತರದಲ್ಲಿ ಕಾಮಧೇನುವಿನ ಲೋಕವಿಹುದು. ಬಳಿಕಲ್ಲಿಂದ ಮೇಲೆ ಮೂಱು ಕೋಟಿ ಯೋಜನದಲ್ಲಿ ಜ್ಯೋತಿರ್ಮಯವಾದ ಮುಕ್ತಿಸ್ಥಾನವಪ್ಪ ರುದ್ರಲೋಕವಿಹುದು. ಮತ್ತಮಾ ರುದ್ರಲೋಕದಿಂ ಬ್ರಹ್ಮಾಂಡದೂರ್ಧ್ವಕಟಾಹಾಂತಮಾಗೊಂದು ಕೋಟಿ ಯೋಜನ ಅಳವಿಯಿರ್ಕುಂ. ಅನಂತರದೊಳಾ ಬ್ರಹ್ಮಾಂಡದ ಹೊರವಳೆಯದ ನೃಪಪ್ರದೇಶದಲ್ಲಿ ಮೂವತ್ತೆರಡು ಕೋಟಿ ಯೋಜನ ವಿಶಾಲೋನ್ನತವಾಗಿ ಶಿವಲೋಕವಿಹುದು. ಇಂತು ಭೂವ್ಯಾದಿ ಬ್ರಹ್ಮಾಂಡದೂರ್ಧ್ವಕಟಾಹಾಂತವಾಗೈವತ್ತು ಕೋಟಿ ಯೋಜನದಳವಿಯಕ್ಕುಂ. ಬಳಿಕ್ಕದ ಕಟಾಹಾಂತದೆ ಭೂಪೃಷ್ಠಾಂತಮಾಗೈವತ್ತು ಕೋಟಿಯೋಜನದಳತೆಯಹುದಿಂತುಭಯಂಗೂಡಿ ಬ್ರಹ್ಮಾಂಡಗೋಳಕಂ ನೂರು ಕೋಟಿ ಯೋಜನ ಪ್ರಮಾಣೋನ್ನತಮೆಂದು ವಿವೇಚಿಸಲ್ವೇೞ್ಕುಂ ಇಂತಪ್ಪ ಬ್ರಹ್ಮಾಂಡಗಳನಂತ ಕೋಟಿಗಳುಂಟೆಂದು ನಿಶ್ಚೈಸಲ್ವೇೞ್ಕುಂ.

Colophon :—

ಭುವನಕೋಶದ ವಾಚ್ಯಂ ಸಮಾಪ್ತಂ.

(ವಿ.ವಿ.)--

ಸಮಗ್ರವಾಗಿದೆ. ಶಿಥಿಲವಾಗಿದೆ. ಉತ್ತಮವಾದ ಲಿಪಿ. ಇದರೊಡನೆ ಕೆಲವು ಪುಸ್ತಕಗಳು ಸೇರಿವೆ. ಅವಾವುವೆಂಬುದನ್ನು ೪೪೩ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು

ಇದು ಗದ್ಯದಲ್ಲಿ ಬರೆದಿದೆ. ಗ್ರಂಥದಾದಿಯಲ್ಲಿ ‘ ಕರಣಹಸುಗೆಯು ಸಾರವಾದ ವಾಚ್ಯ ಗ್ರಂಥಗಳು ’ ಎಂದಿದೆ. ಈ ‘ ಭುವನಕೋಶದ ವಾಚ್ಯ ’ ವೆಂಬುದು ಒಂದು ವೇಳೆ ಇದರ ಅಂಗವಾಗಿರಬಹುದೋ ಏನೊ ? ಇದರಲ್ಲಿ ಪ್ರಪಂಚ ಸ್ಥಿತಿ ವರ್ಣಿತವಾಗಿದೆ. ಕವಿ ಮುಂತಾದ ವಿಷಯಗಳೊಂದೂ ಈ ಗ್ರಂಥದಿಂದ ಗೊತ್ತಾಗುವುದಿಲ್ಲ.

No. 511. ಭೈರವೇಶ್ವರ ಕಾವ್ಯದ ಕಥಾ ಸೂತ್ರ ರತ್ನಾಕರ.

BHAIRAVĒŚVARAKĀVYADA KATHĀSŪTRA RATNĀKARA.

Substance, paper. Size, 9 × 5⅝ inches. Pages, 556. Lines, 20 to 34 on a page. Character, Kannaḍa. Condition, much injured. Appearance, old. Mode of writing, not good.

Complete in three volumes.

A Vīraśaiva work written in prose. Containing 618 stories meant to illustrate the greatness of Śiva and his devōtees.

The name of the author is Śāntilaṅgadēśika a disciple of Guru-virakta namaśśivāyadēva. He states that he compiled this work in the Śaka year 1595 Parābhava. But the Śaka year 1595 does not correspond to Parābhava.

According to the request of Nārada, God Śiva sends Kālasamhāra, the head of the Gaṇas, with instructions to establish Vīraśaiva religion in this world. Kālasamhāra was born as the son of Saṅgamarāja and Haimavati who ruled at Mōpūru in Andhradēśa, and was known as Bhairavēśvara. The great deeds that he did to establish Vīraśaiva religion are described in this work.

Beginning:—

ಪ್ರಥಮದಲ್ಲಿ ಪೀಠಿಕಾ ಸೂಚನೆಯೆಂತೆಂದೊಡೆ ಪೇಳುತ್ತಿಹನು :—ಶ್ರೀ ಗುರುಸದಮಲ ನಿತ್ಯನಿರಂಜನ ಪರಮಪಾವನ ನಿರ್ಗುಣ ನಿರಾವರಣ ನಿರವಯುವ ನಿರಾಮಯ, ನಿರ್ದ್ವಂದ್ವ ನಿರ್ಭೇದ್ಯ ನಿಪ್ಪ್ರಪಂಚ ನಿಷ್ಪ್ರತ್ಯ ಉಪಮಾತೀತ ನಿರುಪಾಧಿಕ ನಿರ್ವಿಕಾರ ನಿರ್ವಿಕಲ್ಪ ನಿಶ್ಚಲ ನಿಷ್ಕಳಂಕ ಮಹಿಮಾನಂದಾರ್ಣವ ಕೃಪಾಮೃತೇಕ್ಷಣ ಪರಶಿವನುಂ ನಿಷ್ಕಲ ನಿರಂಜನ ನಿಶ್ಶೂನ್ಯ ಮಹಾಲಿಂಗ ಸದಾಶಿವೇಶ್ವರ ಮಹೇಶ್ವರ ರುದ್ರರೆಂಬ ಪ್ರಭಾಮೂರ್ತಿಗಳಂ ತಾಳ್ದಂಥ ಪರಶಿವನುಂ ತಾನೆ ತನ್ನ ಪಂಚಮುಖದಿಂದ ಪಂಚಭೂತಾಪ್ರ್ಯತನುವಿನಿಂದ ಪಂಚವಿಂಶತಿ ತತ್ವಾತ್ಮಕವಾದ ಸಚರಾಚರ ನಾನಾಲೋಕ ಬ್ರಹ್ಮಾದಿ ತೃಣಾಂತವಾದನೇಕ ಪಿಂಡ ಬ್ರಹ್ಮಾಂಡ

ಗಳಂ ಕಲ್ಪಿಸಿಯದರೊಳಗೆ ಚತುರ್ದಶಭುವನಾಂಕಿತ ಮಧ್ಯದಲೊಪ್ಪುವ ರಜತಪರ್ವತಾಗ್ರದಲ್ಲಿ ನವರತ್ನಖಚಿತಮಪ್ಪ ದಿವ್ಯಸಿಂಹಾಸನ ಪೀಠದಲ್ಲಿ ಉಮೆಯಸಮೇತನಾಗಿ ಮೂರ್ತಂಗೊಳ್ಳಿದ್ದರುವನು.

*   *   *   *

ಇತ್ತ ಭೂಲೋಕದಲ್ಲಿ ವೀರಶೈವಾಚಾರವೆಲ್ಲವೂ ಮಸುಳಿಸಿ ಪೋಗಲು ನಾರದನೆಂಬ ಮುನಿರಾಜ ಮರ್ತ್ಯಲೋಕಕ್ಕೆಯ್ತಂದು ಭೂಲೋಕದಲ್ಲಿ ಸ್ಥಿತಿಗತಿಯನರಿದು ಕೈಲಾಸಕ್ಕುರವಣಿಸಿ ಪೋಗಿ ಶಿವನಿಗೆ ಸಾಷ್ಟಾಂಗವೆರಗಿ ನಿಂತು ದೇವ ದೇವ! ಶರಣಜನಮನೋವಲ್ಲಭ! ಭಕ್ತೈಕದೇವ! ಎನ್ನಪರಾಧವ ಅವಧರಿಸು. ಎನಲು ಶಿವನು ಲಾಲಿಸುತ್ತಿರೆ ಬಿನ್ನವಿಸಿದನು. ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭುದೇವರು ಮುಖ್ಯರಾದ ಪ್ರಮಥ ಗಣರು ಭೂಲೋಕದೊಳು ಶಿವಭಕ್ತಿಯನುದ್ಧರಿಸಿ ನಿಮ್ಮೊಳಗೆ ಬೆರಸಿದಂದಿನಿಂದ ಭೂಲೋಕದಲ್ಲಿ ವೀರಶೈವಾಚಾರ ಕುರುಹಿಲ್ಲದಂತಾಯಿತು. ಪರಶಿವನೇ ನೀನೇ ಬಿಜಯಂಗೆಯ್ದು ಭೂಮಿಯಲ್ಲಿ ವೀರಶೈವಾಚಾರವನುದ್ಧರಿಸಬೇಕು, ದೇವ! ಎನಲಾತನಂ ಮನ್ನಿಸಿ ಆ ಮುನಿಯ ಬಿನ್ನಪವಂ ಕೇಳ್ದು ಪರಶಿವ ನಸುನಗುತ್ತ ಸುತ್ತಲಿರ್ದ ಪ್ರಮಥಗಣದ ಮೊತ್ತಮಂ ನೋಡುತ್ತ ಕಾಲಸಂಹಾರನೆಂಬ ಗಣಾಧೀಶ್ವರನಂ ಕರೆದು ಮನ್ನಿಸುತ್ತ ಮರ್ತ್ಯದೊಳು ನೀಪೋಗಿ ವೀರಶೈವಾಚಾರವನುಂಟುಮಾಡಿ ಪರವಾದಿಗಳ ವಾದಮಂ ಖಂಡಿಸಿ ಗೆಲಿದು ನೀನಿರುತಿರಲ್ಕೆ ನಾನು ಬಂದು ಕೈಲಾಸಕ್ಕೆ ಕರೆದುಕೊಂಡು ಬರುವೆನು. ಪೋಗೆನಲು, ಶಿವನಿಗೆ ಎರಗಿ ಎನಗೆ ಜನ್ಮಸ್ಥಲವಾವುದು ದೇವ! ಎನಲು, ಭೂಲೋಕದೊಳು ಆಂಧ್ರದೇಶದಲ್ಲಿ ಮೋಪೂರೆಂಬ ಪಟ್ಟಣದರಸು ಸಂಗಮರಾಜ ಹೈಮಾವತಿ ಯೆಂಬ ಸತಿಯುಳ್ಳ ಕ್ಷತ್ರಿಯ ಭೂಪಾಲಕನು ಪುತ್ರನ ಕಾಂಕ್ಷೆಯಿಂದೆಮ್ಮ ಶ್ರೀಪಾದವ ಧ್ಯಾನಿಸುತಿರ್ಪನು. ಆತನಿಗೆ ಪುತ್ರನಾಗು ಪೋಗೆಸಲು, ಶಿವನಿಗೂ ಪ್ರಮಥರಿಗೂ ಎರಗಿ ಬೀಳ್ಕೊಂಡು ಭೂಲೋಕಕ್ಕೆಯ್ದಿ ಅವರಿಗೆ ಪುತ್ರನಾಗುದಯಿಸಿ ಭೈರವರಾಜನೆಂಬ ನಾಮದಿಂದೊಪ್ಪುತ್ತ ಬಾಲಲೀಲೆಯಂ ಕಳೆದು ಕರಿತುರಗಸಾರ ಶಸ್ತ್ರಾಭ್ಯಾಸ ಚತುಃಷಷ್ಟಿ ಕಳಾವಿದ್ಯೆಯಿಂದ ಪರಿಣತನಾಗಿ ಸುಲಕ್ಷಣ ಸಂಪೂರ್ಣವಪ್ಪ ಕನ್ನಿಕೆ ಮಹಾದೇವಿಯೆಂಬ ಸ್ತ್ರೀಯುಕ್ತನಾಗಿ ಸಕಲೈಶ್ವರ್ಯನಿಯೋಗವೆರಸಿ ಚತುರಂಗಬಲದಿಂದೊಪ್ಪುತ್ತ * * * * ವೇದಶಾಸ್ತ್ರಾಗಮ ಪುರಾಣೇತಿಹಾಸಾದಿಕೋವಿದನಾದ ಪ್ರೌಢಾಚಾರ್ಯನೆಂಬ ಪೌರಾಣಿಕನಂಕರೆಸಿ, ತ್ಯಾಗ, ಬೋಗ, ವೀರ್ಯ, ವಿತರಣ, ಪರಹಿತ ಚರಿತ್ರದಿಂದ ರಾಜ್ಯವನಾಳದರಸುಗಳಾರೆಂದು ಕೇಳಲು ಭೈರವರಾಜನಿಗೆ ಪೇಳುತ್ತಿರ್ದನದೆಂತೆನೆ:

ವಸಂತಪುರದರಸಾದ ಖೇಚರನೆಂಬ ಗಂಧರ್ವರಾಜನು ತನ್ನ ಸ್ತ್ರೀಯರೊಡನೆ ಚಿತ್ರಮುನಿಯಾಶ್ರಮಕ್ಕೆ ಬಂದು ಅವನನ್ನು ಕಂಡು ನಮಿಸದೆ ಆ ಮುನಿಯನ್ನು ಕೇಳದೆಯಲ್ಲಿದ್ದ ಕೊಳದಲ್ಲಿ ಜಳಕೇಳಿಯನಾಡುವಾಗಾ ಕೊಳದ ಕಮಲ ಕುಮುದ ಗಣೆಗಿಲ ಮೊದಲಾದ ಬಳ್ಳಿಗಳು ಪರಿದು ಬಿದ್ದು ನೀರು ಕಲ್ಮಷವಾಗಲು ಕರ್ಕಟ ಮತ್ಸ್ಯಕೂರ್ಮ ಮಂಡೂಕಗಳು ಮರಣವಾದುದನ್ನು ಮುನಿಯು ಕಂಡು, ನಾವು ಶಿವಾರ್ಚನೆಯನ್ನು ಮಾಡುವ ಕೊಳದ ಜಲವನ್ನು ಅಶುಚಿಯನ್ನು ಮಾಡಬಹುದೆ ಎಂದು [ಮುನಿಯು] ಮುನಿದು ಶಪಿಸಲು ಆ ನೀರು ಕತ್ತರಿವಾ[ಣಿ](ಹಿನಿ)ಯಾಗಿ ರಾಣಿಯರು ಮೊದಲಾದ ಖೇಚರರ ಕೈಕಾಲು ಬೆರಳುಗಳನ್ನು ಕತ್ತರಿಸಲು ಅವನ ಬಲವು ಬಂದು ಹೊತ್ತುಕೊಂಡು ಹೋಯಿತು.

* * * *

ಆಯ್ದಕ್ಕಿಮಾರಯ್ಯನು ತನ್ನ ನಾರಿಯುಟ್ಟುದನ್ನು ಜಂಗಮಕ್ಕೆ ಕೊಟ್ಟ ಕತೆ :—ಕಲ್ಯಾಣಪಟ್ಟಣದಲ್ಲಿ ಮಾರಯ್ಯನೆಂಬ ಸದ್ಭಕ್ತನ ಸತಿಯಾದ ಅಕ್ಕಮ್ಮನು ಜಂಗಮ ಭಕ್ತಿಯನು ಮಾಡುವುದಕ್ಕೆ ಅಕ್ಕಿಯನಾಯ್ದುಕೊಂಡು ಬಂದು ಜಂಗಮಕ್ಕೆ ನೀಡುವುದೇ ಕಾಯಕವಾಗಿರಲು ಅದರಿಂದ ಆಯ್ದಕ್ಕಿ ಮಾರಯ್ಯನೆಂಬ ಹೆಸರಿನಿಂದ ವರ್ತಿಸುತ್ತಿದ್ದನು. ಇಂಥ (ಇಂತು) ಕಾಯಕದಿಂದ ದಾಸೋಹವನ್ನು ಮಾಡುತ್ತಿರುವಾಗ ಬಸವಣ್ಣನೆ ಮೊದಲಾದ ಪ್ರಮಥರು ಆಶ್ಚರ್ಯಪಟ್ಟು ಕೀರ್ತಿಸುತ್ತಿದ್ದರು.

End :—

ಮುನ್ನ ಶಿವನ ನಿರೂಪದಿಂದ ಧರೆಗೆ ಬಂದು ಶಿವಭಕ್ತಿಯುಪವಾಡವನ್ನು ನೆರೆ ಮೆರೆದು ಅನ್ಯದೈವವಾದವನ್ನು ಕಡೆಮೆಟ್ಟಿ ಶಿವಾಚಾರವನ್ನುದ್ಧರಿಸಿ ಶಿವನೊಡನೆ ಎರಡು ಸಲ ಕಾದಿ ಗೆದ್ದು ಗುರುಲಿಂಗ ಜಂಗಮಕ್ಕೆ ಇಷ್ಟಾರ್ಥಪದಾರ್ಥವನ್ನು ಕೊಟ್ಟು ತೃಪ್ತಿಪಡಿಸಿ ಪರಶಿವನ ಪ್ರಸನ್ನತ್ವವನ್ನು ಎರಡು ಬಾರಿ ಪಡೆದು ಶಿವಭಕ್ತರೆಯಧಿಕರೆಂಬುದನ್ನು ಸರ್ವಜನರ ಸಾಕ್ಷಿಯಾಗಿ ಶಿವನ ವಾಕ್ಯದಲ್ಲಿ ನುಡಿಸಿ ಆಚಾರಸಂಪತ್ತಿನಲ್ಲಿ ಸುಖದಿಂದಿರುತ್ತ ಭುವನದಲ್ಲಿರುವ ಭಕ್ತಜಂಗಮಾದಿಗಳನ್ನು ಕರೆಸಿ ಗಣಪರ್ವವಂ ಮಾಡಿ ಅವರ ಕರುಣಾಮೃತ ಶರಧಿಯಲ್ಲಿ ಓಲಾಡುತ್ತಿದ್ದು ಮರ್ತ್ಯಲೋಕದ ಸಮಸ್ತ ಮಹಾಗಣಗಳ ಬೆಸನದಿಂದ ಸೋಸಲ ಸೋಮೇಶ್ವರನೆಂಬ ತನ್ನಿಷ್ಟವಾದ ಮಹಾಲಿಂಗದಲ್ಲಿ ನಿಜಪ್ರಸನ್ನೈಕ್ಯವಂ ಪಡೆದು ಲಿಂಗದೊಡನೊಪ್ಪಿ ನಿರ್ವಯಲಾದನು ಭೈರವದೇವನೆಂದು ನೂತನ ಪುರಾತನರಾದ ಸಮಸ್ತರೂ ಜಯಜಯ ಎಂದು ಕೊಂಡಾಡಿ ಕೀರ್ತಿಸುತ್ತ ಹರ್ಷಾನಂದದಲ್ಲಿ ಓಲಾಡುತ್ತಿದ್ದರನವರತವು.

ಶ್ರೀಮದನೇಕಲೋಕಾಧಿಲೋಕನಾಯಕನಾದ ಶಿವನ ಸಚ್ಚಿದಾನಂದ ನಿತ್ಯಪರಿಪೂರ್ಣಸ್ವರೂಪವೇ ಬಹಿಷ್ಕರಿಸಿದ * * * ನಂದೀಶ್ವರನ ಚಿದಂಶವೆ ಧರೆಗೆಯ್ತಂದು ಭಕ್ತಿಜ್ಞಾನ ವೈರಾಗ್ಯ ರೂಪವನು ಪಡೆದ ಷಟ್ಸ್ಥಲಾಚಾರ್ಯ ವಿರಕ್ತನಮಶ್ಶಿವಾಯರೆಂಬ ಸದ್ಗುರುಮೂರ್ತಿಯಲ್ಲಿ ಅವರ ಮಹಾನುಭಾವ ವಾಕ್ಯಪ್ರಸನ್ನ ಪ್ರಸಾದವನ್ನು ಸ್ವೀಕರಿಸಿ ತೃಪ್ತನಾದ ಶಾಂತಲಿಂಗದೇಶಿಕನು ಸಕಲವೀರಮಾಹೇಶ್ವರರ ನಿರೂಪದಿಂದ ಭೈರವದೇವನ ಕಾವ್ಯದಲ್ಲಿ ಸೂಚನೆಯಾಗಿರ್ದ ಕತೆಗಳನ್ನು ವಿಶಾಲವಾಗಿ ಸಂಗ್ರಹಿಸಿ ಬರೆದು ಮೂಲಾಧಾರವಾದ ಕತೆಗಳಿಗೆ ದೃಷ್ಟಾಂತಪಾದ[ವ] ಕತೆಗಳನ್ನು ಸಂಗ್ರಹಿಸುವುದಕ್ಕೆ ಸಕಲವೇದಾಗಮ ಪುರಾಣೇತಿಹಾಸಗಳಲ್ಲಿ ಶೃಂಗಾರಾದಿ ನವರಸಾರ್ಥ ಲಕ್ಷಣ ಶುದ್ಧವಾಗಿ ಪೇಳುವ; ಛಂದಸ್ಸುಧಾತು ನಾನಾರ್ಥ ಕವಿಕಂಠಾಭರಣ ದಶನಿಘಂಟುಕಾರಕೋಕ್ತಿಗಳಲ್ಲಿ ತರ್ಕವಾದ ಭಟ್ಟ ಚಿಂತಾಮಣಿ ಶಬ್ದಮಣಿ (ದರ್ಪಣ] ಸೂತ್ರವ್ಯಾಖ್ಯಾಕರಣದಿಂದ ಲಕ್ಷಣ ಶುದ್ಧವಾಗಿ ಪೇಳಲ್ಪಟ್ಟ ವೀರಮಾಹೇಶ್ವರ ಸಿದ್ಧಾಂತ, ವೀರಮಾಹೇಶ್ವರ ತಂತ್ರ, ವೀರಮಾಹೇಶ್ವರಾಚಾರ ಸಂಗ್ರಹ, ಸೋಮನಾಥ, ವಿವೇಕ ಚಿಂತಾಮಣಿ ವೀರಶೈವ ಶುದ್ಧಾರ್ಣವ, ಗಣಭಾಷ್ಯರತ್ನಮಾಲೆ, ಮೊದಲಾದ ಸಂಸ್ಕೃತ ಕನ್ನಡ . . . ಆಂಧ್ರಭಾಷೆ ದ್ರಾವಿಡಭಾಷೆ ಪ್ರಾಕೃತ ಇಂತೀ ಭಾಷೆಗಳಿಂದ ಸಂಗ್ರಹಿಸಿ ಪ್ರಕರಣದಲ್ಲಿ ಪೇಳುತ್ತಿದ್ದ ಕತೆಗಳನ್ನು ಮಹಾಭಾರತ, ರಾಮಾಯಣ, ಮಹಾಭಾಗವತ ಪಂಚಕಾವ್ಯ; ಪಂಚತಂತ್ರ ಬತ್ತೀಸ ಪುತ್ಥಳಿ . . . . ಕತೆಗಳಲ್ಲಿಯೂ ಸೂಪಶಿಲ್ಪ . . . . ವೈದ್ಯ ಮಂತ್ರ ಗಾರುಡಮಂತ್ರ ಶಕುನಶಾಸ್ತ್ರ ಷಡ್ದರ್ಶನ ಶಾಸ್ತ್ರ ಎಂಟು ವೇದ ಹದಿನೆಂಟು ಪುರಾಣ ಇಪ್ಪತ್ತೆಂಟಾಗಮ ಮೂವತ್ತೆರಡು ಉಪನಿಷತ್ತುಗಳಲ್ಲಿ ಹೇಳಿರುವ ಕತೆಗಳನ್ನೊಳಕೊಂಡು ಒಪ್ಪುತ್ತಿದ್ದ

ಬಸವೇಶ್ವರ ಪುರಾಣ, ಗಿರಿಜಾಕಲ್ಯಾಣ, ವೀರಶೈವಾಮೃತ ಪುರಾಣ ಆರಾಧ್ಯ ಚರಿತ್ರ ನನ್ನಯ್ಯನ ಕಾವ್ಯ ಬಸವ ಚರಿತ್ರ ಸಿಂಗಿರಾಜನ ಕೃತಿ ಮೊದಲಾದ ಸಮಸ್ತ ಸಂಗೀತ ಚಾರಿತ್ರಗಳಿಗೆ ಮಾತೃಸ್ಥಾನವಾಗಿರುವುದು. ಬಸವಾದಿ ಪುರಾತನರು ನಿರೂಪಿಸಿದ ಶೂನ್ಯಸಂಪಾದನೆ ಮೊದಲಾದ ವಚನಾಮೃತಸಾಗರದಲ್ಲಿ ಬೇಳುತ್ತಿದ್ದ ಕಂದ ವೃತ್ತ ಗ್ರಂಥ ಶ್ರುತಿ ಸ್ಮೃತಿ ಪದ, ಪದ್ಯ, ವಚನ, ರಗಳೆ, ಷಟ್ಪದಿ, ತ್ರಿಪದಿ, ಚೌಪದಿ, ದ್ವಿಪದಿ, ದಂಡಕ, ಅಷ್ಟಕ, ವಿಷಮ ಪದ ಪ್ರಬಂಧ ಉದ್ದಂಡ ಪಂಚರತ್ನ ಸ್ವರಪದ ತಾರಾವಳಿಗಳು ಮೊದಲಾದುವುಗಳಲ್ಲಿ ಹೇಳಲ್ಪಟ್ಟ ಕತೆಗಳನ್ನು ನೋಡಿ ಪುರಾತನರ ವಚನದ ಮೇಲು ಪಙ್ತಿಯನ್ನು ಹಿಡಿದು ಕಾವ್ಯದ ಕಥಾಸಂಗ್ರಹಕ್ಕೆ ಬೇಕಾದುವುಗಳನ್ನು ತೆಗೆದುಕೊಂಡು ಸಂಗ್ರಹಿಸಿದೆನು. ಇದು ಶರಣರಾರತಿಯ ಸಂಯೋಗಕ್ಕೆ ಪತಿ ಶಿವಲಿಂಗವೆಂಬ ರ್ರತಿಮಕಂದರ್ಪನೆಂತೆಸೆವ ಚತುರ ನೂತನ ಬಾಣವಿಧವಾಗಿ ಸಂದ ಶಾಲಿವಾಹನ ಶಕ ೧೭೬೮ ನೆಯ ಪರಾಭವ ಸಂವತ್ಸರದ ಆಷಾಢಶುದ್ಧ ಚತುರ್ಥೀ ಜ್ಯೇಷ್ಠಾ ನಕ್ಷತ್ರದ ಬೃಹಸ್ಪತಿವಾರದಲ್ಲಿ ಸಂಗ್ರಹಿಸಿ ಬರೆದು ಸಂಪೂರ್ಣವಾಯಿತು.

ಇದನ್ನು ಬರೆದೋದಿ ಲಾಲಿಸಿ ರಚಿಸುವ ಮಹಾನುಭಾವರಾದ ಸಕಲ ಸದ್ಭಕ್ತವೀರ ಮಾಹೇಶ್ವರರ ಶ್ರೀಪಾದಕಮಲಯುಗಳಕ್ಕೆ ಕಾವ್ಯಕಥಾಸೂತ್ರರತ್ನಾಕರವೆಂಬ ಪುಷ್ಪವನ್ನು ಸಮರ್ಪಿಸಿ ನಮಿಸುತ್ತ . . . ನೂರೊಂದು ವಿರಕ್ತರು ಆದ್ಯರು ವೇದ್ಯರು ಸಾಧ್ಯಗಣಗಳು ಇವರೆ ಮೊದಲಾದವರಿಗೆ ನಮಿಸುತ್ತ ತ್ರಿಭುವನ ಪಾವನರಾದ ವೀರಮಾಹೇಶ್ವರರುಗಳ ಶ್ರೀಪಾದಕ್ಕೆ ನಮೋನಮೋ ಎನ್ನುತ್ತ ಶ್ರೀಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರದ ಸಮಸ್ತ ಕತೆಗಳೂ ಸಂಪೂರ್ಣವಾದುವು.

Colophon :

(ಸಂಪೂರ್ಣಂ).

(ವಿ-ವಿ.)—

ಸಮಗ್ರವಾಗಿದೆ.

ಕಡೆಯಲ್ಲಿ ' ಈ ಕಥಾಗರ್ಭವು ಮುಗಿದ ಪ್ರಮಾಣ.—ಶಾಲಿವಾಹನ ಶಕ ೧೭೩೯ ರಲ್ಲಿ ಈಶ್ವರನಾಮ ಸಂ. ದ. ಶ್ರಾ॥ ಶು॥ ೭ ॥ ಶುಕ್ರವಾರ । ಮೂ. ನ॥ ವಿ. ಯೋ॥ . . . ಪ್ರಹರದಲ್ಲಿ ಮುಗಿಯಿತು. ಚಂದ್ರಹೋರದಲ್ಲಿ ಸಂಪೂರ್ಣಂ. ಸನ, ಭಾರಸತ್ತಾವೀಸು ೧೦೭೩ ಮಾಯೆ ಶಾವ್ವಲ ಕಿಟವಿ (?) ತಾರೀಕಿನಲ್ಲಿ ಸಂಪೂರ್ಣಂ.

ಕಂದ ॥ ಕಥಾಗರ್ಭಂ ಬರೆದೋದಿದೊಡಂ ।
ಅತಿಶಯದೈಶ್ವರ್ಯ ಪುತ್ರಸಂಪದವಕ್ಕುಂ ॥
ಶಿತಿಕಂಠನೊಲಿದು ರಕ್ಷಿಪ ।
ಮಿತ್ರಕಳತ್ರ ಧನಧಾನ್ಯ ಸಮೃದ್ಧಿಗಳಕ್ಕುಂ ॥ (?)
ಪ್ರಮಥಗಣ ತ್ರಿಕಾಲಪರಿಸೆ ।
ಯಮಬಾಧೆ ಮೃತ್ಯುವಿನ ಬಾಧೆ ಹೊಂದಲಮ್ಮವು ॥
ಉಮೆಯು ವರದಯವಾಗಿ ಮಾಳ್ಪಂ ।
ಅಮರೇಂದ್ರನೈಶ್ವರ್ಯ ಮೃಳ್ಪ್ಪ ಸಮಭೋಗಂ ॥ (?)
ಭಾರತಭಾಗವತ ರಾಮಾಯಣ ।
ಭೈರವರಾಜನ ಧರ್ಮಕಾವ್ಯಾಗಮವಂ ॥
ಪೌರಾಣವೇದಶಾಸ್ತ್ರೋಪನಿಷತ್ತು ।
ಪರಮಾಮೃತಸಾರವೆನಿಪುದು ಕಥಾಗರ್ಭಸ್ತೋತ್ರಂ ॥ (?)

ಈ ಕಥಾಗರ್ಭವನ್ನು ಬರೆದವನು ಕಲ್ಯಾಣದ ಕಲುಬುರ್ಗಿಯ ನಡುಮಧ್ಯದ ಗ್ರಾಮವಾದ ಗೌಡನ ಹಳ್ಳಿಯ ಕಿನ್ನರಿ ಬ್ರಹ್ಮಯ್ಯನ ಸಾಂಪ್ರದಾಯಕರಾದ ಮಲ್ಲಪ್ಪನವರ ಪುತ್ರನಾದ ಬಸವಪ್ಪನು ಬರೆದ ಹಸ್ತಾಕ್ಷರದಲ್ಲಿ ಅಪ್ಪ ತಪ್ಪಿದ್ದರೆ ನಿಮ್ಮ ಕಂದನು ಬರೆದಿರುವನೆಂದು ಬಲ್ಲ ಮಹಾತ್ಮರು ಬಯ್ಯಲಾಗದು. ತಿದ್ದಿ ಓದುವುದು. ಮಂಗಳಂ ಮಹಾ ಶ್ರೀ ' ಎಂದಿದೆ.

ಇದು ಗದ್ಯರೂಪವಾಗಿದೆ. ಇದರಲ್ಲಿ ವೀರಶೈವ ಭಕ್ತ, ಕವಿ, ಗ್ರಂಥಗಳ ವಿಷಯವಾದ ಇತಿಹಾಸವು ಉಕ್ತವಾಗಿದೆ. ಕಥಾಗರ್ಭ :— ಪರಶಿವನ ಆಜ್ಞೆಯಿಂದ ಪ್ರಮಥಗಣಾಧೀಶ್ವರನಾದ ಕಾಲಸಂಹಾರನೆಂಬುವನು ಆಂಧ್ರ ದೇಶದಲ್ಲಿ ಮೋಪೂರೆಂಬ ಪಟ್ಟಣಕ್ಕೆ ಅರಸು ಅರಸಿತಿಯರಾದ ಸಂಗಮರಾಜ ಹೈಮವತಿಯರ ಬಸಿರಿನಲ್ಲಿ ಭೈರವರಾಜನೆಂಬ ಹಸರಿನಿಂದ ಹುಟ್ಟಿ ಭೂಮಿಯಲ್ಲಿ ವೀರಶೈವಾಚಾರವನುಂಟು ಮಾಡಿದನು ಎಂಬುದು. ಆಂಧ್ರದೇಶಸ್ಥನಾದ ಶ್ರೀನಾಥಕವಿಯ ಕ್ರೀಡಾಭಿರಾಮ ಪ್ರಬಂಧದಲ್ಲಿ ಕೀರ್ತನಾಗಿರುವ ಭೈರವೇಶ್ವರಸ್ವಾಮಿಯೂ ಅವನಿಗೆ ವಾಸಸ್ಥಾನವಾದ ಮೋಪೂರೂ, ಇದರಲ್ಲಿ ಹೇಳಿರುವ ಭೈರವರಾಜ ಮತ್ತು ಮೋಪೂರುಗಳೂ ಒಂದೇ ಆಗಿರಬಹುದು. ಈ ಮೋಪೂರು ಮುರಿಕಿನಾಡಿಗೆ ಸೇರಿದುದಾಗಿದೆ. ಇದರಲ್ಲಿ ೬೧೮ ಕತೆಗಳಿವೆ. ಕವಿ ಶಾಂತಲಿಂಗ ದೇಶಿಕನು. ಈತನ ಗುರು ವಿರಕ್ತ ನಮಶ್ಶಿವಾಯದೇವನು. ಕವಿ ಇದನ್ನು ಶಾಲಿವಾಹನ ಶಕ ೧೫೯೪ ನೆಯ ಪರಾಭವದಲ್ಲಿ ಸಂಗ್ರಹಿಸಿ ಬರೆದುದಾಗಿ ಹೇಳಿದ್ದಾನೆ. ಆದರೆ ಮೇಲೆ ಹೇಳಿರುವ ಶಕವರ್ಷವೂ, ಪರಾಭವವೂ ಒಂದಾಗುವುದಿಲ್ಲ. ಪರೀಧಾವಿ ಎಂಬುದಕ್ಕೆ ಪರಾಭವ ಎಂದು ತಪ್ಪು ಬಿದ್ದಿದೆಯೋ ಏನೋ ? ಹಾಗಿದ್ದರೆ ಕವಿಯ ಕಾಲವು ಸು ಕ್ರಿ.ಶ. ' ೧೬೭೨ ' ಎಂದು ಆಗುತ್ತದೆ.

No. 512. ಭೈರವೇಶ್ವರ ಕಾವ್ಯದ ಕಥಾ ಸೂತ್ರ ರತ್ನಾಕರ.

BHAIRAVĒŚVARAKĀVYADA KATHĀ SŪTRA RATNĀKARA.

Substance, paper. Size, $9\frac{7}{16} \times 8\frac{1}{2}$ inches. Pages, 1161. Lines, 20 on a page. Character, Kannaḍa. Condition, good. Appearance, new. Mode of writing, good.

Complete in three vols.

Same work as the above.

(ವಿ.ವಿ.)—

ಸಮಗ್ರವಾಗಿದೆ. ಉತ್ತಮವಾದ ಲಿಪಿ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 513. ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ.

BHAIRAVĒŚVARAKĀVYADA KATHĀSŪTRA RATNĀKARA.

Substance, paper. Size, $12\frac{3}{8} \times 7\frac{3}{4}$ inches. Pages, 699. Lines, 23 on a page. Character, Kannaḍa. Condition, good. Appearance, not new. Mode of writing, good.

Contains 1 to 342 stories complete.

Same work as the above.

(ವಿ.ವಿ.)—

ಇದರಲ್ಲಿ ೧ ರಿಂದ ೩೪೨ ಕತೆಗಳಿವೆ. ಲಿಪಿ ಚೆನ್ನಾಗಿದೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 514. ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ.

BHAIRAVĒŚVARAKĀVYADA KATHĀSŪTRA RATNĀKARA.

Substance, paper. Size, $12\frac{7}{8} \times 7\frac{3}{4}$ inches. Pages, 182. Lines, 23 on a page. Character, Kannaḍa. Condition, good. Appearance, not old. Mode of writing, good.

Contains the stories 1 to 266 complete. In the end there is an index for the stories.

Same work as the above.

(ವಿ.ವಿ.)—

ಮೊದಲಿಂದ ೨೬೬ ಕತೆಗಳಿವೆ. ಉತ್ತಮವಾದ ಲಿಪಿ. ಕೊನೆಯಲ್ಲಿ ಕತೆಗಳ ಸೂಚೀ ಪತ್ರವೊಂದಿದೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 515. ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ.

BHAIRAVĒŚVARAKĀVYADA KATHĀSŪTRA RATNĀKARA.

Substance, paper. Size, $8\frac{15}{16} \times 6\frac{1}{2}$ inches. Pages, 216. Lines, 20 on a page. Character, Kannaḍa Condition, very much injured. Appearance, not new.

Contains 1 to 117 stories complete.

Same work as the above.

(ವಿ.ವಿ.)—

ಇದರಲ್ಲಿ ಮೂರ್ಖನಯನಾರ್ ಮುಕ್ತಿಯನ್ನು ಪಡೆದ ಕತೆ (ಅಚ್ಯುತನಳವಕೇಳ್ ಭೈರವಾಂಕನೆಂಬುದಕ್ಕೆ ಕಥೆ. ೧೧೭) ಯು ವರೆಗಿದೆ. ಅತ್ಯಂತ ಶಿಥಿಲವಾಗಿದೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 516. ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ.

BHAIRAVĒŚVARAKĀVYADA KATHĀSŪTRA RATNĀKARA.

Substance, paper. Size, $8\frac{5}{16} \times 7\frac{5}{16}$ inches. Pages, 267. Lines 24 to 26 on a page. Character, Kannaḍa. Condition, good. Appearance, not new. Mode of writing, fair.

Contains the stories 1 to 117 complete.

Same work as the above.

(ವಿ-ವಿ.)—

• ಇದರಲ್ಲಿ ೧ ರಿಂದ ೧೧೭ ಕತೆ (ಅಚ್ಯುತ ನಳವಕೇಳ್ಭೈರವಾಂಕನೆಂಬುದಕ್ಕೆ ಕತೆ) ಗಳವೆ. ಲಿಪಿ ಚೆನ್ನಾಗಿದೆ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯಪ್ರತ್ರಿಕೆಯು. ಈ ಪುಸ್ತಕದ ಕೊನೆಯಲ್ಲಿ ಕತೆಗಳ ಸೂಚೀಪತ್ರವೊಂದಿದೆ

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 517. ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ.

BHAIRAVĒŚVARAKĀVYADA KATHĀ SŪTRA RATNĀKARA.

Substance, paper. Size, $12\frac{1}{4} \times 7\frac{1}{2}$ inches. Pages, 122. Lines, 22 on a page. Character, Kannaḍa. Condition, slightly injured. Appearance, not new. Mode of writing, not bad.

Contains the stories 114th to 217th in which the first and the last stories of this manuscript are incomplete.

Same work as the above.

(ವಿ-ವಿ.)—

ಇದರಲ್ಲಿ ಕತೆ ೧೧೪ ರಿಂದ ೨೧೭ ರ ವರೆಗಿದೆ. ಇವುಗಳಲ್ಲಿ ಮೊದಲ ಮತ್ತು ಕಡೆಯ ಕತೆಗಳು ಅಸಮಗ್ರವಾಗಿವೆ. ಈ ಪುಸ್ತಕವು ಸ್ವಲ್ಪ ಮಟ್ಟಿಗೆ ಶಿಥಿಲವಾಗಿದೆ. ಲಿಪಿ ಸಾಮಾನ್ಯವಾದುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 518. ಮದವಯ್ಯ ವಚನ

MADAVAYYA VACANA.

Substance, palm-leaf. Size, 12 × 2⅛ inches. Pages, 3. Lines, 4 on a page. Character, Kannaḍa. Condition, injured. Appearance, old. Mode of writing, not bad and not free from mistakes.

Begins on fol. 37*b* of the manuscript desecribed under No. 498 *ante*.

Incomplete.

Contains five vacanas on Vīraśaiva philosophy. By Madavayya.

Beginning :—

ಮೂವರು ಸಮಗಾರರ ಬಾಗಿಲಲ್ಲಿ ಐವರು ಹಾರುವರು ಹರಸುತ್ತ ಇದ್ದಾ . . . ಒಬ್ಬನಿಗೆ ಕೊಂಬಕೊಟ್ಟು ಒಬ್ಬನಿಗೆ ಕೊಳಗವ ಕೊಟ್ಟು, ಒಬ್ಬನಿಗೆ ಕರುಳ ಕೊಟ್ಟು ಒಬ್ಬನಿಗೆ ಗರ್ಭವ ಕೊಟ್ಟು, ಒಬ್ಬನಿಗೆ ಏನೂ ಯಿಲ್ಲದೆ ತಬ್ಬಿಬ್ಬಿಯಾಯಿತು. ಆ ಮಾದಿಗನ ಮನೆಯ ಹೊಕ್ಕ ಮಾದಿಗಿತ್ತಿಯ ಆ . . . ದತಿಂದ "ಅರ್ಕೇಶ್ವರಲಿಂಗ" ವನಱಿತ ಕಾರಣ."

*   *   *   *

End :—

ತನು ನಿರ್ವಾಣ, ಮನ ಸಂಸಾರ, ಮಾತು ಪರಬ್ರಹ್ಮ, ನೀತಿ ಅಧಮ, ಅದೇತಱಱಿವು. ಘಾತಕನ ಕೈಯ ಕತ್ತಿಯಂತೆ. ಇದು ವಿಹಿತವಲ್ಲ "ಅರ್ಕೇಶ್ವರಲಿಂಗವನಱಿವುದಕ್ಕೆ.

(ವಿ.ವಿ.)—

ಸಮಗ್ರ. ಶಿಥಿಲ. ಬರೆವಣಿಗೆಯು ಸಾಮಾನ್ಯವಾಗಿದೆ. ತಪ್ಪುಗಳೂ ಇವೆ.

ಈ ಗ್ರಂಥವು ವಚನರೂಪವಾಗಿದೆ. ಇದರಲ್ಲಿ "ಅರ್ಕೇಶ್ವರಲಿಂಗ" ಎಂಬಂಕಿತವನೊಳಗೊಂಡ ವಚನಪಂಚಕವಿದೆ. ಇದು ವೀರಶೈವರ ಮತಕ್ಕೆ ಸಂಬಂಧಿಸಿದ ವಿಷಯಗಳನ್ನು ತಿಳಸುತ್ತದೆ. ಈ ಗ್ರಂಥವನ್ನು ಬರೆದವನು ಮದವಯ್ಯನೆಂಬುವನು. ಇವನ ದೇಶ, ಕಾಲಗಳ ವಿಷಯವಾಗಿ ಈ ಗ್ರಂಥದಿಂದಾವಂಶವೂ ತಿಳಿಯಬರುವುದಿಲ್ಲ.

No. 519. ಮನುಮುನಿ ಗುಮ್ಮಟ ವಚನ-

MANUMUNIGUMMAṬA VACANA.

Substance, palm-leaf. Size, 12 × 1⅛ inches. Pages, 8. Lines, 4 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 55*a* of the manuscript described under No. 498 *ante*.

Incomplete.

Contains nine vacanas condemning sleep, vain controversy etc. By Manumuni Gummata.

Beginning :—

ವೇದಂಗಳು ನಾಲ್ಕು ಭೇದಿಸಲಱಿಯದೆ ಹದಿನಾಱು ಶಾಸ್ತ್ರ . . . ಅಱಿಯದೆ ಇಪ್ಪತ್ತೆಂಟು ಪುರಾಣ ನಿಮ್ಮ ಪುಣ್ಯದ ಪುಂಜವನಱಿಯದೆ ತೊಳಲಿ ಬಳಲುವುದಕ್ಕ ಚರ್ಚೆ ಮಾಡಿ ಕೆಟ್ಟೆ. ಹುಚ್ಚುಗೊಂಡ ನಾಯಿ ಒಡೆಯನ ಕಚ್ಚಿದಂತೆ ಕೆಟ್ಟೆ. ಆಗಮಂಗಳಲ್ಲಿ ಹೋಗಿ ದೃಷ್ಟವ ಕಾಣದೆ ಹೊತ್ತುಹೊತ್ತು . . . ದೆನಯ್ಯ । ಎನಗದು ಕುಱಿಹಾಯಿತು ತಿರುಗುವ ಮೃಗವನೆಚ್ಚಂತೆ ಎನ್ನ ಗೂಡಿನ ಗುಮ್ಮಟನೊಡೆಯ ! ಅಗಮೇಶ್ವರಲಿಂಗ ! "

* * * *

End :—

ಪಿಂಡಜ್ಞಾನಸಂಬಂಧದ ಇರವು, ಪೃಥ್ವಿಯಿಂದಾದ ರೂಪು, ಅಪ್ಪುವಿಂದಾದ ಗಟ್ಟಿ, ತೇಜದಿಂದಾದ ರಜಸ್ಸು, ವಾಯುವಿನಿಂದಾದ ಸರ್ವಾತ್ಮ, ಆಕಾಶದಿಂದಾದ ನಿರವಯವ ಇಂತೀ ಪಾಂಚಭೌತಿಕದಿಂದಾದ ಆತ್ಮನಿಪ್ಪ ಪಿಂಡಸ್ಥಲದಲ್ಲಿ ಸೂಕ್ಷ್ಮದಿಂದಱಿತು, ಕಾರಣದಿಂದ ಕಂಡು ಇಂತೀ ತ್ರಿವಿಧಾತ್ಮನ ಆಧಾರವಾವುದೆಂದಱಿತು ಬ್ರಹ್ಮನ ಪುಟ್ಟಿತ, ವಿಷ್ಣುವಿನ ಶಾಂತಿ, ರುದ್ರನ ಘಟಿತ, ಇವು ಮೂಱು ಹೊದ್ದದಿಪ್ಪುದು ಪಿಂಡ . . . . ಅಂಗದ ನಿರಸನ ಗುರುವಿನ ಕರಕಮಲದಲ್ಲಿ, ಮನದ ನಿರಸನ ಲಿಂಗದ ಯೋಗದಲ್ಲಿ, ಸರ್ವೇಂದ್ರಿಯದ ನಿರ್ಸನ ಶರಣ ಸಂಸರ್ಗದಲ್ಲಿ, ಇಂತಿದನಱಿತು ಮನಬಂದಂತೆ ನಡೆಯದೆ, ವಿಕಾರವೆಂದಂತೆ ಪ್ರಕೃತಿಗೊಳಗಾಗದೆ, ಮಧುರದಂಡದೊಳಗಡಗಿದ ಸುಧೆಯ ತೆಗೆದು ತೆಗೆದು ಸಲೆಯ . . . ಕಳೆದುಳಯಬೇಕು ಪಿಂಡಪ್ರಾಣಲಿಂಗಯೋಗವ. ಇಂತಿವು ಅಱಿವವರ ಹುಱಿಕರಿಗೊಂಡವರ ತೆಱ. ಅಱಿಕೆಯಿ ತಾ ಗುಡಿಯೊಡೆಯ ಗುಮ್ಮಟನ ಅಗಮೇಶ್ವರಲಿಂಗವ ಅವಗವಿಸಿದ ಸದಮಲಾಂಗನಿರವು.

(ವಿ-ವಿ.)—

ಅಸಮಗ್ರ. ಅತಿ ಶಿಥಿಲ. ಗ್ರಂಥಘಾತವಿದೆ. ಲಿಪಿಯು ಸಾಮಾನ್ಯವಾಗಿದೆ ತಪ್ಪುಗಳಿವೆ.

ಇದು ವಚನಗ್ರಂಥವಾಗಿದೆ. ಇದರಲ್ಲಿ ಒಂಬತ್ತು ವಚನಗಳಿವೆ. ವಚನಗಳೆಲ್ಲವೂ "ಗುಡಿಯೊಡೆಯ ಗುಮ್ಮಟನ, "ಅಗಮ್ಯೇಶ್ವರಲಿಂಗ" ಎಂಬಂಕಿತವನ್ನೊಳಗೊಂಡಿವೆ. ಈ ಗ್ರಂಥವು ನಿದ್ರಾನಿರಸನ, ವಿದ್ಯಾವಾದನಿರಸನ, ಪಿಂಡಸ್ಥಲ, ಇವುಗಳನ್ನು ನಿರೂಪಿಸುತ್ತದೆ. ಗ್ರಂಥಕರ್ತನು ಮನುಮುನಿಗುಮ್ಮಟನು. ಇವನು ತನ್ನ ವಿಷಯವಾಗಿ ಯಾವುದನ್ನೂ ಹೇಳಿಕೊಳ್ಳದಿರುವುದರಿಂದ ಈತನನ್ನವಲಂಬಿಸಿ ಏನನ್ನೂ ಬರೆಯಬರುವುದಿಲ್ಲ.

No. 520. ಮನೋವಿಕಾರನಿರಸನ ರಗಳೆ.

MANŌVIKĀRANIRASANA RAGAḶE.

Substance, palm-leaf. Size, $6\frac{1}{4} \times 1\frac{1}{16}$ inches. Pages, 18. Lines, 7 on a page. Character, Kannada. Condition, very much injured. Appearance, old.

Begins on fol. 26*a* of the manuscript described under No. 465 ante.

Complete.

A work in ragaḷe written in praise of God Śiva Each line ends with ಶಂಕರಲಿಂಗ. It is presumed that the author is Saṅkaradēva.

Beginning :—

ವೃ ॥ ದಿಷ್ಟಮನಂಕನಿಷ್ಕಕಪಿಚೇಷ್ಟೆಯೊಳರ್ದಪುದಲ್ಲದೊರ್ಮೆಯುಂ ।
ಮುಟ್ಟಿ ಮಹೇಶ ನಿಮ್ಮನೊಲಿದರ್ಚಿಸಲೊಲ್ಲದು ಕೆಟ್ಟೆ ಕೆಟ್ಟೆನಾಂ ॥
ಬಟ್ಟೆಯ ಕಾಣದೆ ಬಾಯಬಿಡುತ್ತೈದೆನೆ ಚಿತ್ತವಿಕಾರದೇಳ್ಗೆಯುಂ । (?)
ಮೆಟ್ಟಿ ಕೆಲಕ್ಕೆ ಜಾರಿಸಿ [ನಿಮ್ಮ]ನಿಜಾಂಘ್ರಿಯ ತೋರಿಸು ತಂದೆ ಶಂಕರಾ ! ॥

ರಗಳೆ ॥ ಶ್ರೀದಿವಿಜರಾಜಪೂಜಿತ ಜಿತಮನೋಜಾತ ।
ಮೂದೇವಮುಖವನಜಭಾನು ಶಂಕರಲಿಂಗ ॥

ಆದಿತಾಂಡವ ಮೂರ್ತಿ ದಶದಿಶಾಮಯ ಕೀರ್ತಿ ।
ವೇದನುತಶರಣ ಸುರಧೇನು ಶಂಕರಲಿಂಗ ॥

ಅಂಧಕಾಸುರವಿಜಯ ರಜತಗಿರಿ ನಿಜವಾಸ ।
ಬಂಧುರ ಭಜಕ ಸಮುದ್ಧರಣ ಶಂಕರಲಿಂಗ ॥

ಗಂಧಸಿಂಧೂರ ದಹನ ವೇಂದ್ರವೆ ಜನವಿಲಾಸ । (?)
ಕಂದರ್ಪದರ್ಪ ಸಂಹರಣ ಶಂಕರಲಿಂಗ ॥

ಶೈಲಕನ್ಯಾ(ವಯುವ) (ವದನ)[ಮಾನ]ಕುವಲಯ ಸುಧಾಕಿರಣ ।
ಮೂಲೋಕಪಾಲ ಗತಕಾಲ ಶಂಕರಲಿಂಗ ॥

ಕೈಲಾಸಪುರವರಾಧೀಶ ಸೂನೃತವೇಷ । ?
ಶೂಲಧರ ಪಾರ್ವತೀಲೋಲ ಶಂಕರಲಿಂಗ ॥

ಕೇಳಿನ್ನವ ನದ ಮಾಮಸಕದ ವಿಕಾರಮಂ ।
ಹೇಳಬಾರದು ತಾಳಲಾರಿದು ಶಂಕರಲಿಂಗ ॥

End :—

ನರಸುರರ ಮತಿಗೆ ಸಿಲುಕದನೆ ಸಿಲುಕದನೆ ಘನ- ।
ಗರಳಕಂಧರನೆ ಸೌಂದರನೆ ಶಂಕರಲಿಂಗ ॥

ನಾದಮೂರ್ತಿ ದಯಾ ವಿನೋದಿ ಶಂಕರಲಿಂಗ ।
ಆದಿಗ . ದಿಯಭೇದ ಶಂಕರಲಿಂಗ ॥

ಖಿಲ್ಲನೆಂಬವರೊಳಲ್ಲದನೆ ಶಂಕರಲಿಂಗ ।
ಎಲ್ಲಿಯು ತೆರಹಿಲ್ಲದವನೆ ಶಂಕರಲಿಂಗ ॥

ಭಕ್ತಿಯೆ ಪ್ರಾಣನಾಗಿರ್ಪ ಶಂಕರಲಿಂಗ ।
ಭಕ್ತರಿಗೆ ವಶವಾಗಿ ತೋರ್ಪ ಶಂಕರಲಿಂಗ ॥

ದಾನಿ ಶಂಕರಲಿಂಗ ಧರ್ಮಿ ಶಂಕರಲಿಂಗ ।
ಮಾನಿ ಶಂಕರಲಿಂಗ ಮಹಿಮ ಶಂಕರಲಿಂಗ ॥

ಕರುಣಿ ಶಂಕರಲಿಂಗ ಶರಣು ಶಂಕರಲಿಂಗ ।
ಶರಣು ಶರಣಾರ್ತಿ ಶಂಕರಲಿಂಗವೆ ॥

ಕಂ ॥ ಜನನ(ದ) ಕಾಲದೊಳೊಂದಿಸಿ ।
ಘನತರ ಯೌವನದೊಳೊಂದಿಸಿ ನಿಮಗೆ ಮು- ॥
ಪ್ಪಿನಿ ವಂದಿಸುವೆನು ನೀನಿದ ।
ಮನ . . . ಾರದಿರು ತಂದೆ ಶಂಕರಲಿಂಗ ॥

Colophon :—

ಮನೋವಿಕಾರ ನಿರಸನರಗಳೆ.

(ಬಿ-ಬಿ.)—

ಸಮಗ್ರವಾಗಿದೆ. ೩೭-೫೧ ಪದ್ಯಗಳಿರುವ ಓಲೆಯೂ ೬೫-೭೫ ಪದ್ಯಗಳಿರುವ ಓಲೆಯೂ ಮುರಿದಿವೆ. ೨೫-೩೭ ಪದ್ಯಗಳಿರುವ ಓಲೆಯು ಹೋಗಿದೆ. ಅತ್ಯಂತ ಶಿಥಿಲವಾಗಿದೆ. ಲಿಪಿ ಉತ್ತಮವಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಕೂಡಿವೆ. ಅವಾವುವೆಂಬುದನ್ನು ಹಿಂದೆ ವರ್ಣಿತವಾಗಿರುವ ೪೬೫ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ರಗಳೆಯಲ್ಲಿ ಬರೆದಿದೆ. ಗ್ರಂಥದಾದಿಯಲ್ಲೊಂದು ವೃತ್ತವೂ, ಅಂತ್ಯದಲ್ಲೊಂದು ಕಂದಪದ್ಯವೂ ಇವೆ. ಪ್ರತಿಪದ್ಯವೂ ಶಂಕರಲಿಂಗ ಎಂದು ಮುಗಿಯುತ್ತದೆ. ಕವಿ ಶಂಕರದೇವನಾಗಿರಬಹುದು.

No. 521. ಮರುಳದೇವರು ನಿರೂಪಿಸಿದ ವಚನ.

MARUḶUDĒVARU NIRŪPISIDA VACANA.

Substance, palm-leaf. Size, $11\frac{1}{4} \times 1\frac{5}{16}$ inches. Pages, 14. Lines, 6 on a page. Character, Kannaḍa Condition, injured. Appearance, old.

Begins on fol. 65*a* of the manuscript described under No. 436 ante.

A work written in the form of songs, giving out some of the principles of Vīraśaiva religion. The name of the author is Maruḷadēva. It is stated in the "Lives of Kannaḍa poets" that Maruḷadēva came from Kaliṅga and remained for twelve years at Kalyāṇa.

Beginning :—

॥ ರಾಗ ॥ ಮುಖಾರಿ ॥

ಸುರುಚಿರ ಚಿದಂಬರೋ ।
ದ್ಧರಣದಾಯುತವಡೆದು ।
ಧರಿಸುವುದು ಮಸ್ತಕದಿ ಶಿವಶರಣರು ॥
ಪದ ॥ ಪರಮ ಭಕ್ತನ ಹೃದಯ ।
ಚರಮುಕುಟ ಶೂನ್ಯದಿಂ- ।
ದುರು ಚಿದಂಬರವದಱ ತೆಱನನೆಱೆದು ॥
ಬರೆವುದುತ್ತರದಿಂದ । ದಕ್ಷಿಣಾಶಾಗಿ ॥ ।

ನ್ನೆರಡು ರೇಖೆಯು ಪೂರ್ವ ಪಶ್ಚಿಮಕ್ಕೆ ॥
ಬರೆ ಬಾರಹವ ತುದಿಗಳೊಳು ತ್ರಿಶೂಲಂಗೆಯಿದ- ।
ವಱೆತೊಳೇರಿಸು ತ್ರಿಕಾಷಳಿಯು ನಾಲ್ವತ್ತೆಂಟ ॥
ವರಚೌಕ ಮಧ್ಯದೊಳು । ಬರೆವೃತ್ತವೆರಡನು ।—
ದ್ಧರಿಸು ದಶಪಂಚ ವರ್ಣವನ[ಲಿ]ದಱೆತೊಳೌ ॥
೧೪ ॥ ರಾಗ ॥ ದೇಶಿ ॥

End :—

ಪಲ್ಲ ॥ ಬರಿದೆ ಭ್ರಾಂತಿಗೊಳದೆ ತನ್ನ ನಿಜವ ತಾ ॥
ನೆಱಿದು ಮಱೆದೊಡಱಿವಿನ ನೆರಿಗೆ ॥
ಪದ ॥ ಸಕಲ ಬ್ರಹ್ಮಾಂಡದಾಗಿನ ನೆನಹೆ ತನ್ನ ।
ಸಕುತಿಯಾದ ನಿಷ್ಕಲ ನಿಜವು ।
ಪ್ರಕಟಿಸಿ ಲಿಂಗಾಂಗ ವಾಱೂಱೂದುದು ।
ಸುಕರ ಸದಾಚಾರ ಲಿಂಗವೆಂದರಿಯದೆ ॥ (೧)
ಆಱೂಱೂಗಿ ಯಿನ್ನೂಱು ಷೋಡಶವಾಗಿ ।
ಆಱೂಱು ಆಱು ಮೂಱೂಗಿ ತಾನೆ ।
ತೋಱಿ ದ್ವಿವಿಧವೇಕವಾದ ಸ್ವಯಂಜ್ಯೋತಿ ।
ಬೇಱಿಲ್ಲ ತನ್ನಯ ನಿಜವೆಂದಱಿಯದೆ ॥ (೨)
ಶಶಿರವಿಗಳ ಪ್ರಭೆ ಕುಸುಮ ಕರ್ಪುರದಂಗ ।
ವಸುಬಣ್ಣ ಸ್ಫಟಿಕ ನಿರ್ಮಲ ರತ್ನದೊ— ।
ಳೆಸೆದಿರ್ಪ ಕಾಂತಿಯಾಗಸ ಮಾರುತರಂ—
ತೊಸೆದಿರ್ಪ ತನ್ನ ನಿಜೇಷ್ಟವನಱಿಯದೆ ॥ (೩)
(ಆ) [ಅದು] ಮಹಾಘನ ನಿಜದಿಂದಲುದಯವಾದ ।
ಭೂವ್ಯಾದಿ ತತ್ವಪದಾರ್ಥಗಳ ।
ತಾಮೊದಲಾದವೆಲ್ಲವ ಲಿಂ(ಗ)ಕರ್ಪಿಸಿ ।
ಆ ಮಹಾಘನ ನಿಜತಾನೆಂದಱಿಯದೆ ॥ (೪)
ತನಗನ್ಯ ಶಿವ ಶಿವನಿಗೆ ತಾನನ್ಯನೆಂ ।
ದೆನಿಪ[ವಿವ] ಸಕಲ ಭ್ರಮೆಯನುಳಿದು ।
ಘನ ನಿಜಗುರುಸಿದ್ಧ ಶಾಂತನು ತಾನೆಂ ।
ಬನುವ ನೆಱಿದು ಅಱಿದೊಡೆ ಅಱಿವು ॥ (೫)
೧೫ ॥ ರಾಗ ॥ ಶಂಕರಾಭರಣ ॥

(ವಿ.ವಿ.)—

ಅಸಮಗ್ರ. ಶಿಥಿಲ. ಲಿಪಿ. ಸಾಮಾನ್ಯ.

ಇದು ಹಾಡಿನಲ್ಲಿ ಬರೆದಿದೆ. ಕವಿ ಮರುಳದೇವನು, ಈತನಿಗೆ ಮರುಳ ಶಂಕರದೇವ ಎಂಬ ಹೆಸರೂ ಇದ್ದಂತೆಯೂ, ಇವನು ಮರುಳು ದೇವರ ಕಂದ ಎಂಬ ಗ್ರಂಥವನ್ನೂ ಬರೆದಿರುವಂತೆಯೂ ಕಾಳಿಂಗದೇಶದಿಂದ ಬಂದು ಕಲ್ಯಾಣದಲ್ಲಿ ಹನ್ನೆರಡು ವರ್ಷ ವಾಸ ಮಾಡಿದಂತೆಯೂ ಕವಿ ಚರಿತ್ರೆ ಸಂಪುಟ ೧, ಪುಟ ೧೫೮ ರಲ್ಲಿ ಬರೆದಿದೆ.

No. 524. ಮಲುಹಣ ರಗಳೆ.

MALUHAṆA RAGAḶE.

Substance, palm-leaf. Size, $14\frac{1}{8} \times 1\frac{7}{8}$ inches. Pages, 19. Lines, 6 on a page. Character, Kannaḍa. Condition, much injured. Appearance, old.

Begins on fol. 137*b* of the manuscript described under No. 456 ante.

Incomplete.

Gives an account of Maluhaṇa, a devotee of God Śiva. The name of the author is not clearly made out from this work.

Beginning :—

ಕಂ ॥ ಧಾರಿಣಿಯೊಳ್ ಮಲುಹಣನಂ ।
ಕಾರುಣ್ಯಾವರನುದಾರವಾರಿಧಿ ಮೆರೆದಂ ॥
ಗೌರೀ ಕುಚಕುಂಕುಮರಸಿ ।
ತೋರಸ್ಥಳನೆಮ್ಮ ಹಂಪೆಯ ವಿರೂಪಾಕ್ಷಂ ॥ (?)

ರಗಳೆ. ॥ ಶ್ರೀವಸುಮತೀ ವದನಮುಕುರವೆಂದೆನಿಪ ।
ಪಾವನಂ ಸಕಲದೇಶಕ್ಕೆ ತಾನೆನಿಸಿರ್ಪ ॥
ಶಾರದಾದೇವಿ ಪ್ರಸನ್ನೆಯಾಗಿರುತಿರ್ಪ ।
ಚಾರುತರನೂತನ ಕಳಾ ವಿದದೊಳಿರುತಿರ್ಪ ॥
ಊರೂರ್ಗೆ ತೀವಿದ ತಟಾಕ ನಿಕರಂಗಳಿಂ ।
ಊರೂರ್ಗೆ ಕಿಕ್ಕಿರಿದುಬ್ಬಿದ ವನಂಗಳಿಂ ॥
ವನದೊಳಗೆ ಸುಳಿವುತಿಹ ಕಸ್ತೂರಿ ಮೃಗಗಳಿಂ ।
ದೇವಮಾತೃಕ ನದೀಮಾತೃಕದ ಬೆಳೆಗಳಿಂ ॥

* * * *

ಆದೇಶದೊಳು ರಾಜಧಾನಿಯೆನಲೊಪ್ಪುವುದು ।
ಭೂದೇವತೆಯ ನೊಸಲ ತಿಲಕವೆನಲೊಪ್ಪುವುದು ।
ಭಾರತೀ ಪೀಠವೆಂಬುದು ಪಟ್ಟಣದ ನಾಮ ।
ಈರೇಳು ಜಗಕೆಲ್ಲ ಕೀರ್ತಿವಡೆದುದು ನಾಮ ।

* * * *

ಪಟ್ಟಣವ ನಾಳ್ವನಪ್ರತಿಮ ಭೂಪಂ ನೋಡ! ।
ಕಟ್ಟಧಿಕನುತ್ತಮಂ ಪ್ರೇಮ ಸೇನಂ ನೋಡ ।

* * * *

ಅಪ್ರವ . . . . ಹೊಂಯಿ . ಯೆನಿಸಿ ।
ವಿಪ್ರನೊಪ್ಪುವನಾ ಪುರಕ್ಕೆ ಧನಪತಿಯೆನಿಸಿ ॥

ತನ್ನ ಬೆಸರೊಪ್ಪುವ ಸುವರ್ಣಭಟ್ಟಂ ನೋಡೆ ।
ತನ್ನ ಸಂಪನ್ನತೆ ಕುಬೇರಂಗೆ ಸರಿನೋಡೆ ॥

* * * *

ಇಂತೆಸೆವ ವಿಪ್ರಂಗೆ ಸುತನೊಬ್ಬನೊಪ್ಪುವಂ।
ಸಂತತ ಸುವರ್ಣಭಟ್ಟನ ಮನವನಪ್ಪುವಂ ॥

ಆತನ ಬೆಸರ್ಪುರಕೆ ಮೆರೆವ ಮಲುಹಣನೆಂದು ।
ಆತನ ವಿಳಾಸದೊಳು ಪಿತನ ಚಿತ್ತಂ ಸಂದು ॥

ಉಪನಯನ ವೈವಾಹ ವಿಭವದಿಂದಂ ಮಾಡಿ ।
ವಿಪುಳವೇದಂ ಸಕಳ ಶಾಸ್ತ್ರಂಗಳಂ ಕೂಡಿ ॥

* * * *

ಸುರಕುಜದ ಚಂದನದ ಕರ್ಪುರದ ಸಸಿಯಂತೆ ।
ಪ . . . . ಕಾಂತಿ ಕುರುವಿಟ್ಟಂತೆ ॥

ಬೆಳೆಯುತಿರ್ದನು ಸುಖಕ್ಕೆಳಸಿ ಮಲುಹಣನಿತ್ತ ।
ಬೆಳೆಯುತಿರ್ದಳು ಕು[ಭಾ](ಭದೆ)ಕಾಂತೆ ಮಲುಹಣಿಯಿತ್ತ ॥

ಆದೇಶಕರಿದ್ದೈದ ವೆನಿಪಜಯೆ ಕರದ । (?)
ವೇದಕ್ಕಗಮ್ಯನೆಂದೆನಿಪ . . . . ।

. . ಪುರವನೀಕ್ಷಿಸಿದ ವಿಜಯೇಶ್ವರದ ।
ಕಾಲನಂ ಕಾಮನಂ ಗೆಲಿದ ವಿಜಯೇಶ್ವರದ ।

ಪಾತ್ರದ ವಿಳಾಸನಿಯೆನಿಪ ಪದ್ಮಾವತಿಯ ।
ಚಿತ್ರತರ ಮಧುರಮಯ ನಾಟಕಕ . . . . ।

ಎಸೆವ ಬಸಿರೊಳು ಬಂದು ಶಿಶುಭಾವಮಂ ತಳೆದು ।
ಕುಸುಮಬಾಣನ ಕೀರ್ತಿ ಬೆಳೆದಂದದಿಂ ಬೆಳೆದು ।

ಮಲುಹಣಿಯ ಯೌವನವನೇನೆಂದು ಬಣ್ಣಿಪೆಂ ।
ಮಲುಹಣನ ಸಕಲ ಸುಖನಿಧಿಯ ನೇನೆಂದಪೆಂ ॥

* * *

ಬೆಳೆವ ಮಲುಹಣಿಯ ರೂಪ(ಮ)ಂ ಜನನಿ ಮಿಗೆ ನೋಡಿ
ಅಳವಲ್ಲದಕ್ಕಱಿಂ ಸುಖದೊಳೋಲಾಡಿ ॥

ನವಯೌವನದ ನೆಲೆಗೆ ಮನದೊಳಗೆ ತೂಪಿರಿದು ।
ಅವಯವದ ಚಲುವಿಕೆಗೆ ಕಂಗಳಂ ತೂಪಿರಿದು ॥

ಕಡುನೇಹದಿಂದೆನಲ್ಲಾಸ್ಯಮಂ ಮೆಯ್ಗೊಳಸಿ ।
ಮೃಡನೊಲಿದ ರಸನಾದಮಂ ನೆರೆ ಕೊರಳ್ಗೊಳಸಿ ।

ಮಗಳನೋವ್ರುತ್ತ ಕಣ್ಣೊಳಗಿಕ್ಕಿ ಮುಚ್ಚುತಿರೆ ।
ಮಿಗೆ ವಿಳಾಸಿನಿಯರಿಂ ಶೃಂಗರಿಸುತಿರೆಯಿರೆ ॥ (?)

Colophon :— ಪ್ರಥಮ ಸ್ಥಲ.

ಕಂ ॥ ಹೊಸನಡೆ ಹೊಸನುಡಿ ಹೊಸಮುಡಿ ।
ಹೊಸಹೊಸ ಸೌಭಾಗ್ಯಮೆಸೆವ ಹೊಸ ಲಾವಣ್ಯಂ ॥
ಹೊಸನೋಟಂ ಹೊಸ ಹರೆಯಂ ।
ಹೊಸ ಜೌವನದೇಳ್ಗೆ . . . ಮಲುಹಣಿಗತಿ ಚಿತ್ರಂ ॥

ಗದ್ಯ.—ಇಂತೊಪ್ಪಿ ಚರಣಂ ತೀವಿದ ಮಂದಗತಿಯಿಂ ಪರಭಾಗಂ ತೀವಿದ ನಿತಂಬದಿಂ ಉರಂ ತೀವಿದ ಬೆರ್ಮೊಲೆಯಿಂ ಮೊಗಂ ತೀವಿದ ವಿಲೋಚನದಿಂದವಯವಂ ತೀವಿದ ಚಲುವಿನಿಂ ಮೆಯ್ ದೀವಿದ ಯೌವನದಿಂ ಮನಂ ದೀವಿದ ಸುಖದಿಂ ಮೆರೆದು ಮನಸಿಜಂ ಮುದ್ರಿಸಿದ ನನೆ ಗಣೆಯಂತಿರ್ದ ಮಲುಹಣಿಗೆ ಹೊಸ ಹರಯದೊಡನೆ ರಸಮಯವೆನಿಪ್ಪ ಲಾಸ್ಯ (?) ಸಂಪದಂ ಕೈ ಗೂಡಿತೆಂಬುದಂ ಪದ್ಮಾವತಿಯರಿದು ವಸಂತ ಮಾಸದೊಳೊಂದು ದಿನಂ ವಿಜಯೇಶ್ವರ ದೇವರ ಕೇಳಸಲೆಂದು ಕ್ಷಣಮಂ ಕೈಗೊಂಡು ಮಲುಹಣಿಗೆ ಶೃಂಗಾರಂ ಮಾಡಲ್.

End :—

ಮಲುಹಣಿಯ ನುಡಿಗೇಳ್ದು ಕಿವಿಗೆ ಮಾರಾಗುತಂ ।
ಕೆಳದಿಯರು ಪೊರಮಡಲು ಚರಣದೊಳು ಪೊ . . . ।
. . . . ತವಕದೊಳು ಮಲುಹಣಿಯ ನರಸುತ್ತೆ ।
ಬಂದೆಂ ಜಲಂ ಚಲುವ್ರೊಂದು ಹೊ . . ಣಿಯೊಳಗೆ ।
. . . ಉದಕಮಂ ಚಲ್ಲಿದರೆ ಮಲುಹಣನ ಮೇಲೊಗಲು ।
ಪದೆದು ಪುಳಕಪ್ರತತಿ ತನ್ನ ಮೆಯ್ಯೊಳು ಬ . . . .
. . . . . . ನೆನೆದೆ ತಂದು ।
ಮಲುಹಣನಿದೇಕೆಂತು ನೀನೆಂದು . . ನೀನೆನಿಂ . . . . . .
. .

(ವಿ ವಿ.)—

ಅಸಮಗ್ರ. ೧, ೨ ನೆಯ ಸ್ಥಲಗಳು ಸಮಗ್ರವಾಗಿವೆ. ೩ ನೆಯದು ಅಪೂರ್ಣವಾ ಗಿದೆ. ಓಲೆಗಳು ಹೆಚ್ಚಾಗಿ ಹುಳುತಿಂದು ಹೋಗಿಯೂ ಇವೆ. ಉತ್ತಮವಾದ ಲಿಪಿ. ಇದ ರೊಡನೆ ಇನ್ನೂ ಹಲವು ಪುಸ್ತಕಗಳು ಕೂಡಿವೆ. ಅವಾವುವೆಂಬುದನ್ನು ೪೫೬ ನೆಯ ನಂಬರಿ ನಲ್ಲಿ ನೋಡಿ ತಿಳಿಯುವುದು.

ಇದು ರಘಟಾ ರೂಪವಾದುದು. ಅಲ್ಲಲ್ಲಿ ಗದ್ಯ ಕಂದಪದ್ಯ ವೃತ್ತಗಳೂ ಸಹ ಇರು ವುವು. ಮಲುಹಣನೆಂಬ ಶಿವಭಕ್ತನ ವಿಷಯವು ಇದರಲ್ಲಿ ಉಕ್ತವಾಗಿದೆ. ಕವಿ ಹರಿಹರನಾ ಗಿರಬಹುದೆ ? ಹಾಗಿದ್ದರೆ ಇವನ ವಿಷಯವಾಗಿ 'ಕರ್ಣಾಟಕ ಕವಿ ಚರಿತ್ರೆ (ಸಂಪುಟ ೧. ಪುಟ ೧೬೫) ಯನ್ನು ನೋಡುವುದು.

No. 523. ಮಲುಹಣ ರಗಳೆ.

MALUHAṆA RAGAḶE.

Substance, paper. Size, $10\frac{9}{16} \times 9\frac{1}{2}$ inches. Pages, 13. Lines, 20 on a page. Character, Kannaḍa. Condition, fair. Appearance, new.

Begins on page 234 of the manuscript described under No. 457 ante.

Incomplete.

Same work as the above.

(ವಿ.ವಿ.)—

ಅಸಮಗ್ರವಾಗಿದೆ. ಕಾಗದದ ಪ್ರತಿ. ಹಿಂದಿನ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯು ಇದಕ್ಕೆ ಮಾತೃಕೆಯು. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಸೇರಿವೆ. ಅವಾವುವೆಂಬುದನ್ನು ೪೫೭ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 524. ಮಹಿಮ ರಗಳೆ.

MAHIMA RAGAḶE.

Substance, palm-leaf. Size, $14\frac{5}{16} \times 1\frac{7}{16}$ inches. Pages, 8. Lines, 6 on a page. Character, Kannaḍa. Condition, most injured. Appearance, old.

Begins on fol. 73*a* of the manuscript described under No. 456 ante.

Complete.

A Vīraśiva work written in praise of Virūpākṣa (śiva) worshipped at Hampi (Vijayanagar) in Bellary district.

Beginning :—

ಉ॥ ಮಾ॥ ವೇದದೊಳಂ ಪುರಾಣನಿಕರಂಗಳೊಳಂ ಘನಶಾಸ್ತ್ರಛಂದದೊ ।
ಳ್ವೇದಿನೊಳಂ ಶ್ರುತಿಪ್ರಕರದೊಳ್ಸಕಲಾಗಮ ಮಂತ್ರತಂತ್ರದೊಳ್ ॥
ಮೇದಿನಿಯೊಳ್ ಪುರಾತರ ಕುಲಂ ನೆಱೆ ತೋಱಿದನೇಕದೃಷ್ಟದೊ (?) ।
ಳಾದಮಯಂ ಮಹೇಶನೆ ಘನಂ ಘನವೆಮ್ಮಯ ಹಂಪೆಯೀಶ್ವರಂ ॥

ಮ॥ ವಿ॥ ಜಲಜಾಕ್ಷಾಂಬಕ ಪಾದನೆ ಘನಂ ಶಿರೋಮಾಲಾವಿಶಾಲಂ ಘನಂ ।
ಜಲಜಾಕ್ಷಾತ್ಮದ ಮಸ್ತಹಸ್ತನೆಘನಂ ನಿನಾಶಂನಾಶಂ ಘನಂ (?) ।
ಜಲಜಾಕ್ಷಾತ್ಮಜ ವೈರಿಯೆ ಘನಂ ಕೇಳತ್ಯತಿಷ್ಮಶಾಂ (?) ।
ಗುಲನೆಮ್ಮಪ್ರಭು ಹಂಪೆಯಾಳ್ದನೆ ಘನಂ ಬ್ರಹ್ಮಾಂಡಸಂದೋಹದೊಳ್ ॥

ರಗಳೆ॥ ಶ್ರೀಪರಮಗುರು ಶಂಕರ ಪ್ರಭುವಿನಂಘ್ರಿಯೊಳು ।
ಭಾಪು[ವೆ] ನೆಗಳ್ದುದಾ ಮಾದಿರಾಜಾಂಘ್ರಿಯೊಳು ॥
ಶ್ರೀಗುರು ಮಹಾದೇವರಾಜ್ಞೆಯಂ ಕೈಕೊಂಡು ।
ಬಾಗಿ ಹಂಪೆಯ ವಿರೂಪಾಕ್ಷನ ಮನಂಗೊಂಡು ॥
ಪೇಳಲುದ್ಯೋಗಿಸಿದೆ ಯೀಶ್ವರನ ಮಹಿಮೆಯಂ ।
ಶೂಲಿ ಮೆಱೆದಂ ಪುರಾತ(ನ)ರಭಕ್ತಿ ಮಹಿಮೆಯಂ ।
ಆದೊಡೆನ್ನಕ್ಕರಿಂ ಬಲ್ಲಂತೆ ಬಣ್ಣಿಪೆಂ ।
ಆದಿಯ ಪುರಾತನರುಸಿರ್ದುದಂ ನೆನೆದಪೆಂ ॥
ಸಕಲ ವೇದಂಗಳುಂ ಬೊಬ್ಬಿಟ್ಟುದುಂಟಾಗಿ ।
ಸಕಲ ಮುಖದಿಂದ ಬಣ್ಣಿಸುತಿಪ್ಪುದುಂಟಾಗಿ ॥
ಅದುಕಾರಣ ವಿರೂಪಾಕ್ಷನೆ ಘನಂ । (?)
ಸದಮಳಂ ಪಂಪಾವಿರೂಪಾಕ್ಷನೇ ಘನಂ ॥

End :—

ಅಂತಿಂತು ಯೆಂತಿಂತು [ವಿರೂ](ರು)ಪಾಕ್ಷನೇ ಘನಂ ।
ಸಂತತಂ ಶ್ರೀವಿರೂಪಾಕ್ಷ ಲಿಂಗನೆ ಘನಂ ।
ಎಂದಿಂತು ಪೇಳ್ದಸಾ ಮಹಿಮಾವಿಡಂಬವಂ ।
ಇಂದುಧರ ನಿಮ್ಮ ಸಾಮರ್ಥ್ಯಸಂದೋಹವಂ ।
ಹರಿಬ್ರಹ್ಮರರಸಿ ಕಾಣರು ದೇವ ಎನ್ನಳವೆ ।
ನೆರೆದ ವೇದಪ್ರತತಿ ಯಱಿಯದೈ ಎನ್ನಳವೆ ।
ಕೋಟಿ ಕೋಟ್ಯಾಯುಷಂಗಳು ಕೋಟಿಯಾದೊಡಂ ।
ಕೋಟಿ ಜಿಹ್ವೆಗಳಿಂದ ಸಲೆ ಹೊಗಳುತಿರ್ದೊಡಂ ।
ನಿಮ್ಮ ಮಹಿಮಾಂಬುಧಿಯ ಪೊಲವಿಂಗೆ ಬರ್ಪುದೇ ।
ನಿಮ್ಮ ಮಹಿಮಾಂಬುಧಿಯ ತಡಿವರಂ ಬರ್ಪುದೇ ॥
ಸ್ತುತಿಯಿಸಿದ ನೆಪದಿಂದ ನಿಂದಿಸಿದನೆನಬೇಡ ।
ಮತಿಯ ಪವಣಿಂಗೆ ಯಾ॥ ನೆಂದೆ . ಂದಂ ಗೋಡ
ಆದೊಡೆನ್ನೀ ತಪ್ಪನೊಪ್ಪವಿಡುವುದು ತಂದೆ ।
ಆದಿಯ ಪುರಾತನರ ತೊತ್ತೆಂಬುದೆಲೆ ತಂದೆ ।
ದೇವದೇವರೆ ಗತಿಯೆ ದೇವದೇವರೆ ಮತಿಯೆ ।
ರಕ್ಷಿಸು ವಿರೂಪಾಕ್ಷ ಶಿಕ್ಷಿಸು ವಿರೂಪಾಕ್ಷ :
ದಯೆಗೆಯ್ ವಿರೂಪಾಕ್ಷ ಜಯಜಯ ವಿರೂಪಾಕ್ಷ ।
ಜಯತು (?) ವಿರೂಪಾಕ್ಷ ಜಯಜಯ [ನಮಸ್ತೇ] ನಮಸ್ತೇ ॥

ಕಂ॥ ಅರರೆ ವಿರೂಪಾಕ್ಷನ ನಿಜ ।
ಭರಣದೊಳೆದೆ ವಿಷ್ಣುನಯನ ಬ್ರಹ್ಮಕಪಾಲಂ ॥
ಕರದೊಳದೆ ಹರನ ಸರಿಯೆನೆ ।
ಸುರಿಯುವೆ ದಳದಳನೆ ಬಾಲವುಳಿಗಳ್ ಬಾಯೊಳ್ ॥

ಅದು ಕಾರಣದಿಂ ಹರಿಗಿರಿ ।
ಪದುಮಜ ಗಿದುಮಜರು ಹಂಪೆಯಾಳ್ದನ ಸರಿಯೆಂ ॥
ದೊದರುವ ವಿಪ್ರರ ತಲೆಗಳ್- ।
ನೊದೆಚೆಂಡಾಡಲು ಶತಕ್ರತುವ ಬೇಳ್ದ ಫಲಂ ॥

Colophon :—

ಮಹಿಮರಗಳೆ ಸಮಾಪ್ತಂ.

(ವಿ-ವಿ.)—

ಸಮಗ್ರವಾಗಿದೆ. ಅತ್ಯಂತ ಶಿಥಿಲವಾಗಿದೆ. ಇದರೊಡನೆ ಇನ್ನೂ ಅನೇಕ ಪುಸ್ತಕಗಳು ಸೇರಿವೆ. ಅವಾವುವೆಂಬುದನ್ನು ಹಿಂದೆ ವರ್ಣಿತವಾಗಿರುವ ೪೪೭ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ರಗಳೆಯಲ್ಲಿ ಬರೆದಿದೆ. ಗ್ರಂಥದಾದಿಯಲ್ಲಿ ಎರಡು ವೃತ್ತಗಳೂ, ಅಂತ್ಯದಲ್ಲಿ ಎರಡು ಕಂದ ಪದ್ಯಗಳೂ ಇವೆ. ಇದು ಈಶ್ವರನ ಮಹಿಮೆಯನ್ನು ಬೋಧಿಸುವ ಗ್ರಂಥವಾಗಿದೆ. ಕವಿ ಹರಿಹರನಾಗಿರಬಹುದು.

No. **525.** ಮಹಿಮ ರಗಳೆ.

MAHIMA RAGALE.

Substance, paper. Size, $10\frac{9}{16} \times 9\frac{1}{2}$ inches. Pges, 7. Lines, 20 on a page. Character, Kannaḍa. Condition, fair. Appearance, new.

Begins on page 123 of the manuscript described under No. 447 ante.

Complete.

Same work as the above.

(ವಿ-ವಿ.)—

ಸಮಗ್ರವಾಗಿದೆ. ಕಾಗದದ ಪ್ರತಿ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೃತಿಯು. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿರುವುವು. ಅವಾವುವೆಂಬುದನ್ನು ೪೪೭ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. **526.** ಮಾರಯ್ಯ ವಚನ.

MĀRAYYAVACANA

Substance, palm-leaf. Size, $12 \times 1\frac{1}{8}$ inches. Pages, 16. Lines, 10 on a page. Character, Kannaḍa. Condition, much injured. Appearance, old.

Begins on fol. 59*b* of the manuscript described under No. 498 **ante.**

Incomplete.

Similar to the above, contains three Vacanas. By Mārayya.

Beginning:—

ಕೈದ ಕೊಡುವರಲ್ಲದೆ ಕಲಿತನವ ಕೊಡುವರುಂಟೆ ಮಾರಯ್ಯಾ! ಹೆಣ್ಣ ಕೊಡುವರಲ್ಲದೆ ಕೂಡಿಕೊಳ್ಳಗಾದವರುಂಟೆ? ಮಾರಯ್ಯಾ! ಕಳುವ ಚೋರಂಗೆ ಬಡವರೆಂದೂ ಧನಿಕರೆಂದೂ ಉಂಟೆ? ಮಾರಯ್ಯಾ! ಮನವನೊರೆದು ಭಕ್ತಿಯನೋಡಿದೆನೆಂಬವಂಗೆ ಎಮ್ಮಲ್ಲಿ ಗುಣವ ಸಂಪಾದಿಸಲಿಲ್ಲ ಮಾರಯ್ಯಾ . . . ನಿಂದಲ್ಲಿ ಮತ್ತಿನ್ನಾರಿಗೆ ಹಂಗುಪಡಲೇಕೆ? ಮಾರಯ್ಯಾ! "ಅಮಲೇಶ್ವರ ಲಿಂಗ" ನೀನೆ ಬಲ್ಲೆ.

* * * *

End:—

ಮಾಡಿ ನೀಡಿ ಹೋದಹೆನೆಂಬಾಗ ಕೈಲಾಸಕ್ಕೆ ಕೂಲಿಯೆ ಮುಂದೊಂದ ಕಲ್ಪಿಸದೆ ಹಿಂದೊಂದ ಭಾವಿಸದೆ ಸತೆ ಸಂದಿದ್ದಾಗವೆ ಮಾರಯ್ಯ ಪ್ರಿಯ ಅಮಲೇಶ್ವರಲಿಂಗವಿದ್ದ ಠಾವೆ ಕೈಲಾಸ.

(ವಿ-ವಿ.)—

• ಅಸಮಗ್ರ. ಅತಿ ಶಿಥಿಲ. ಗ್ರಂಥಪಾತವಿದೆ. ಲಿಪಿಯು ಸಾಮಾನ್ಯವಾಗಿದೆ. ತಪ್ಪಿದೆ.

ಈ ಗ್ರಂಥವು ವಚನರೂಪವಾಗಿದೆ. ಇದರಲ್ಲಿ ಮೂರು ವಚನಗಳಿವೆ. ವಚನಗಳೆಲ್ಲವೂ ಅಮಲೇಶ್ವರಲಿಂಗ ಎಂಬಂಕಿತವನೊಳಗೊಂಡಿವೆ. ವೀರಶೈವಮತಾಚಾರ ಬೋಧಕವಾದ ಈ ಗ್ರಂಥವು ಮಾರಯ್ಯ ವಿರಚಿತವೆಂದು ತಿಳಿಯಬರುತ್ತದೆ.

No. 527. ಮಿಶ್ರಸ್ತೋತ್ರ.
MIŚRASTŌTRA.

Substance, Śrītāla. Size, 8 × 1$\frac{11}{16}$ inches. Pages, 16. Lines, 10 on a page. Character, Kannaḍa. Condition, slightly injured. Appearance, old. Mode of writing, not bad.

Begins on fol. 71*a* of the manuscript described under No. 440 ante.

A work written in praise of some of the founders of the Vīraśaiva religion. The name of the author is not known.

Beginning:—

ದಾ॥ ನಂದಿಕೇಶ್ವರ ಭೃಂಗಿ ಸ್ಕಂದಮುಖ್ಯಾಮರಾಳಿ।
ಬಂದೆನ್ನ ಹೃತ್ಕಮಲದೊಳು॥
ನಿಂದು ನಿಮ್ಮಯ ಭೃತ್ಯನೆಂದೀಕೃತಿಯೊಳು ತ।
ಪ್ಪೊಂದಿಲ್ಲವೆನೆ ನಡೆಸುವುದು॥
ಬಸವನಲ್ಲಮ ಚೆನ್ನ ಬಸವಮುಖ್ಯರು ನಿಮ್ಮೊ।
ಳೊಗೆದೊಂದಿ ಬೆರಸಿದಂದಿಂದ॥

ವಸುಧಾತಳದೊಳು ಭಾವಿಸೆ ವೀರಶೈವದ ।
ಹೆಸರಿಲ್ಲವೆನೆ ನಸುನಗುತ ॥
ಸಿರಿವಂತನೀರಾಜ್ಯದರಸಾಗು ಚೋಳ ಭೂ ।
ವರಚಕ್ರವರ್ತಿಯಾಗು ನಿಮ್ಮ ॥
ಭರಭಾರಗಳ ಪೊತ್ತು ಚರನಾಗಿ ಸೇವೆಗೆ- ।
ಯ್ದಿರು ತಿರ್ಪನೆಂದೀಶ ನುಡಿಯೆ ॥
ಇತ್ತಲೈವಡಿಯ ಭೂಪೋತ್ತಮನಿಗೆ ದೊರೆ ।
ವೆತ್ತ ಷೋಡಶಪ್ರಾಯವಾಗೆ ।
ಚಿತ್ತದಿ ಹರುಷಗೊಳುತ್ತ ವಿಕ್ರಮಚೋಳ ।
ಬಿತ್ತರಪಟ್ಟಗಟ್ಟಿದನು ॥

* * *

ಜನನ ಸೂತಕವೆಂಬುದಿನಿಸಿಲ್ಲದನಘ ಪಾ ।
ವನ ಶೀಲ ಸಿಂಧುಮರಾಯ ॥
ಘನಪ್ರೇತಸೂತಕವನು ಬಗೆಯದೆ ಶಂಕ ।
ರನ ನುಡಿಸಿದಳು ನಿಂಬವ್ವೆ ॥
ಶರಣಾಳಿ ಸವಿದೊಕ್ಕ ಪರಮಪ್ರಸಾದದಿ ।
ಪರವಿನ್ನೊಂದಿಲ್ಲಿಲ್ಲವೆಂದು ॥
ಚಿರಕಾಲ ಬಸವೇಶನರಮನೆಯೊಳಗಿರ್ದ ।
ಮರುಳುಶಂಕರ ಯತಿವರನು ॥
ಸಕಲೇಂದ್ರಿಯವೆ ಲಿಂಗಮುಖವೆಂದಱಿದು ನಿಜ ।
ಸುಖವಿತ್ತನೆನಗೆ ಚೆನ್ನಯ್ಯ ॥
ಪ್ರಕಟವೆನಿಸುವ ಶೈವಕಳಾದಿಭೇದದೊಳ್ ।
ಭಕುತಿಮಾಡಿದೆ ಚೋಳ ನೀನು ॥

End :—

ನಿಜದೋಱಿ ಚೋಳನ ರಜತಾದ್ರಿಗೊಯ್ದನು ।
ಭುಜಗಭೂಷಣ ಸೋಮನಾಥ ॥
ತ್ರಿಜಗವೆಲ್ಲರಿಯೆ ಭೂಭುಜ ಪಾಂಡ್ಯ ಚೊಕ್ಕ
ರಜಿಪ ಲಿಂಗವ ನುತಿಗೆಯ್ದ ॥ (?)
ತಾರಗೆಗಳನಿತ್ತ ಭೂರಮರಿರೆ ನಂಬಿ
ತಾರಲಕೆ ಪೋದನೆಂಬ ॥ (?)
ವಾಗತೆಗೇಳುತ ಚೇರಮನೃಪ ಹರ- ।
ನೂರಿಗೆ ದಾಳಿ ಮಾಡಿದನು ॥
ನೆಟ್ಟನೆ ಪಟ್ಟವ ಕಟ್ಟಿದ ದುರಿತಘ- ।
ಱಟ್ಟನು ಭೈರವಾಂಕನಿಗೆ ॥

ಕೊಟ್ಟನು ಮಹದೇವಿಗಿಟ್ಟೋಲೆ ಸ್ಥಿರವೆಂದು ।
ಕಟ್ಟಿಸಕಡ ನಿಜಪದವ ॥
ಹರುಷದಿಂದವೆ ನೋಡಿ ಬರೆದೋದಿದೊಡೆ ವಿ-
ಸ್ತರಿಸಿ ಪೇಳ್ದೊಡೆ ಪಠಿಸಿದೊಡೆ ॥
ಗುರುಸೋಮೆನಾಥ(ನ) ಕರುಣ ಸಂಭವಿಪುದು ।
ಧರೆಯೊಳಗಿದು ಸಿದ್ಧವೆಂದು ॥

Colophon :—

ಮಿಶ್ರ[ಷಟ್ಪದಿ]ಸ್ತೋತ್ರ ಸಮಾಪ್ತಂ.

(ವಿ-ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಸಾಮಾನ್ಯ. ಇದರೊಡನೆ ಇನ್ನೂ ಅನೇಕ ಪುಸ್ತಕಗಳು ಬರೆದು ಸೇರಿಸಿವೆ. ಅವಾವುವೆಂಬುದನ್ನು ಹಿಂದೆ ವರ್ಣಿತವಾಗಿರುವ ೪೪೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಸಾಂಗತ್ಯದಲ್ಲಿ ಬರೆದಿದೆ. ಗ್ರಂಥದಾದಿಯಲ್ಲಿ 'ಕುಸುಮ ಷಟ್ಪದಿ' ಎಂದಿದೆ. ಷಟ್ಪದಿಗೆ ಲಕ್ಷಣವು ಸರಿಹೋಗುವುದಿಲ್ಲ. ಕವಿಯಾರೆಂಬುದು ತಿಳಿಯಬರುವುದಿಲ್ಲ. ಹೆಚ್ಚು ವಿಷಯಗಳಿಗಾಗಿ ಕರ್ಣಾಟಕ ಕವಿಚರಿತ್ರೆ (ಸಂಪುಟ ೧, ಪುಟ ೩೧೪ ಪ್ರಥಮ ಮುದ್ರಣ ಮತ್ತು ಸಂಪುಟ ೩, ಪುಟ 279), ಯನ್ನು ನೋಡುವುದು.

No. 528 ಮಿಶ್ರಸ್ತೋತ್ರ.

MIŚRASTŌTRA.

Substance, Śrītāla. Size, 8 × $1\frac{13}{16}$ inches. Pages, 28. Lines, 11 on a page. Character, Kannaḍa. Condition, slightly injured. Appearance, old. Mode of writing, not bad.

Begins on fol. 40*a* of the manuscript described under No. 440 ante.

Complete.

Similar to the work described under the previous No.

Beginning :—

ಭಾ. ಷ. ॥ ಬಸವರಾಜನು ಭಕ್ತಿಯಿಂದಲಿ ।
ಬೆಸಸಿದೊಡೆಯಪ್ಪಣ್ಣನತಿ ಭರ ।
ವಸದಲೆಯ್ತಂ ದಲ್ಲಮಪ್ರಭು ಸಿದ್ಧರಾಮರಿಗೆ ॥
ಒಸೆದು ಮಿಗೆ ಶರಣಾರ್ತಿಯೆನುತಲಿ ।
ಸಸಿನೆ ಸಮ್ಮುಖದಲ್ಲಿ ಕರಯುಗ ।
ಬಿಸರುಹಂಗಳ ಮುಗಿದು ಬಿನ್ನಹ ಮಾಡಲನುಗೆಯ್ದು ॥
ಎನ್ನಱಿವೆ ಬಸವಣ್ಣ ಯೆನಗಾ
ಚೆನ್ನಬಸವನೆ ಗುರುವಲಾ ದಿಟ ।
ವೆನ್ನ ಲಿಂಗವೆ ನೀವು ಜಂಗಮವೆನಗೆ ರಾಮಯ್ಯ ॥

ಎನ್ನ ತನುವೇ ಮಡಿವಳಯ್ಯನು ।
ಯಿನ್ನು ಸುಖಿಯಹುದೇನು ಸೋಜಗ ।
ನಿನ್ನ ದಾಸರ ದಾಸಿಯಾನೆಂದಳ್ ಮಹಾದೇವಿ ॥

ಪರಮ ಪೂರ್ವಾಚಾರ್ಯ ಬಸವೇ- ।
ಶ್ವರನು ಘನಗುರು ಚೆನ್ನಬಸವನು ।
ನಿರುಪಮಜ್ಞಾನೈಕನಿಧಿ ಮಡಿವಾಳಮಾಚಯ್ಯ ॥

ವರಮಹಾಗಣ ತಿಂಥಿಣಿಯೊಳನಿ ।
ಬರೊಳು ಗಣಿಸುವೊಡಾಸದೇಸಱ ।
ಹುರುಳು ಹೇಳಾ ದೇವ ! ಎಂದನು ಸಿದ್ಧರಾಮಯ್ಯ ॥

ಘೂತು ಮಜರೇ ಸಿದ್ಧರಾಮನ ।
ಮಾತು ತಪ್ಪದು ಭಕ್ತರುಪಮಾ ।
ತೀತರಹುದೈ ಬಸವ ಮಡಿವಳ ಚೆನ್ನಬಸವಣ್ಣ ॥

ಈತಗಳು [ಸಾಕ್ಷಾತಃ ಲೋಕ] (ಸಾಕ್ಷಾಜ್ಜಗದ್ವಿ) ।
ಖ್ಯಾತ ಪುರುಷರು ಸತ್ಯವೆನುತ ಪು ।
ರಾತನರ ಮಿಗೆ ಹೊಗಳುತಾ ಪ್ರಭುರಾಯನಿಂತೆಂದ ॥

ಮರುಳು ಶಂಕರದೇವರಿಗೆ ಕಿ ।
ನ್ನರಿಯ ಬೊಮ್ಮಣ್ಣಂಗೆ ಯೆಲೆ । (?)
ಪರದ ಕೇತಯ್ಯಂಗೆ ಗಾಣದ ಕಣ್ಣಪಯ್ಯಂಗೆ ॥

ಕಿರಿಪರಿಯ ಶಿವಲಿಂಗ ಭಕ್ತಿಯ ।
ಪರುಠವಿಸಿ ಕಾಲನ ನಿವಾರಿಸಿ ।
ಹರನ ನೊಚ್ಚತಗೊಂಡ ಶಿವಶರಣರ್ಗೆ ಶರಣಾರ್ತಿ ॥

* * * *

ವಾ. ಷ ॥ ಇನ್ನಾಲಿಸ್ಸೆ ಸಿದ್ಧರಾಮ ಹೆಂಡದ ಮಾರ ।
ತನ್ನ ಕಯ್ಯಂ ಕಡಿದು ಕೋಲಶಾಂತಂ ಚಿತ್ರ- ।
ಮಂ ನೋಡಿ ಜಂಗಮವನಿಱಿದನಂ ಕೊಂದು ಕಕ್ಕಯ್ಯನಾ ಶಂಕರನನು ॥
ಪನ್ನಗಾರಿಧ್ವಜನ ಭಜಕನೆಂದೆನಲಱಿದು ।
ಮುನ್ನ ಪ್ರಭಾತಯ್ಯನಣುಗನಳಿವಿಗೆ ಸತ್ತ !
ಕನ್ನೆಗಸುವಂ ಕೊಟ್ಟು ಮಹಿಮೆಯಂ ಮೆಱೆದನದನೇನೆಂಬೆನುಚ್ಚರಿಯನು ॥
ಹರಿಯನುಭವಂಗೆ ವಂದನೆಗೆಯ್ಸಿ ಶಿಖಿಯನಂ- ।
ಬರದಲ್ಲಿ ಕಟ್ಟಿಯೂರ್ಧ್ವಾಕ್ಷಿಗಳ ಪಡೆದು ನಿ- ।
ಷ್ಠುರ ಮಂದವಕ್ರತೀವ್ರದ ದುರ್ಗುಣ ವೈಷ್ಣವ ಜೈನವಿಪ್ರರೆಂಬ ॥ (?)
ವರವಾತಪಿತ್ಥದುಶ್ಲೇಷ್ಮವಂ ಕೆಡಿಸಿ ಶಂ- ।
ಕರಲೆಂಕಮಂಚಣ್ಣ ಶ್ರೀಪತೀಶ್ವರದೇವ ।
ಗುರು ಮಲ್ಲಿಕಾರ್ಜುನಂ ಪಂಡಿತತ್ರಯವಾದರೆಮ್ಮ ಭವರೋಗವಳಗೆ ॥ (?)

End :—

ವಿಲಸತ್ಪ್ರಮಥಗಣಾಂಗಳೆ ರುದ್ರ ಗಣಾವಳಿ । (?)
ಗಲಘುತರ ವೃಷಭಯೋಗೀಚಾರ್ಯ ಕುಲಕೆ ನಿ- ।
ರ್ಮಲಿನರಾದಱುವತ್ತು ಮೂವರ್ಗೆ ಷೋಡಶಗಣಾಂಗಳ್ಗೆ ತೇರಸರ್ಗೆ . ॥

ಸುಲಭರೆನಿಸಿದ ದಶಗಣಾಂಗಳ್ಗಮರಗಣಾ ।
ವಳಿಗುಳಿದಸಂಖ್ಯಾತಭಕ್ತರ್ಗೆ ಮನ್ಮನದ ।
ಛಲನಮಂ ತೊಲಗಿಸಿ ಶಿವಾಂಘ್ರಿಯೊಳ್ಬೆಚ್ಚಂತೆ ನಿಲಿಸುಗೆಂದಾಂ ವಂದಿಪೆಂ ॥

ಪಿರಿದು ಮಿಶ್ರಸ್ತೋತ್ರಮಂ ಪಠಿ[ಸುತಿರೆ] (ಸೆ) ದುಷ್ಕರ್ಮ ।
ವಿರದಳಗುವಾವಗಂ ದುಸ್ವಪ್ನ ದುಶ್ಶಕುನ ।
ಪರಮದುರ್ಗ್ರಹ ದೋಷ ಪಾವಕಾಹಿಜ್ವರಂಗಳ ಭೀತಿಸಂದೋಹವು ॥
ಮರಳಿ ವೃಶ್ಚಿಕ ಚೋ[ರಾ](ರರ) ಪಮೃತ್ಯುವಿನ ಬಾಧೆ ।
ಯಿರದಳಗುಮರಿ ಪವನ ಭೂತಪವಿದಾರಿದ್ರ್ಯ ।
ನೆರಪರಿಂದೊಗೆದ ಭಯವಿತತಿಗಳು ನಿಮಿಷಾರ್ಧದೊಳ್ಕೆಟ್ಟುಪೋಕುವು
ನಿಶಂ ॥ (?)

ಚಂ ॥ ಪ್ರಭು ಬಸವೇಶ ಚೆನ್ನ ಬಸವಣ್ಣನು ಕಿನ್ನರ ಮಾಚಿ ತಂದೆಯೂ ।
ಶುಭಗನು ಸತ್ಯನಿಂಬಿ ಮಹದೇವಿಯು ನಾಗಲೆ ನೀಲನೇತ್ರೆ ಮ- ॥

ದ್ವಿಭು ಶಿವ ಸಿದ್ಧರಾಮನಜಗಣ್ಣ ಶಿವಾತ್ಮಕ ಗಟ್ಟಿವಾಳ(ರೆಂ) ।
ಬಭವಗಣಾಂಗಳೆನ್ನ ಹೃದಯಾಂಬುಜ ಮಧ್ಯದೊಳಿಕ್ಕೆ ಸಂತತಂ ॥

Colophon :—

ಮಿಶ್ರಷಟ್ಪದಿಸ್ತೋತ್ರ(ಂ) ಸಮಾಪ್ತಂ ಮಂಗಳ ಮಹಾ.

(ವಿ-ವಿ.) —

ಸಮಗ್ರ. ಸ್ವಲ್ಪಶಿಥಿಲ. ಲಿಪಿ ಸಾಮಾನ್ಯ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಬರೆದು ಸೇರಿಸಿವೆ. ಅವಾವುವೆಂಬುದನ್ನು ಹಿಂದೆ ವರ್ಣಿತವಾಗಿರುವ ೪೪೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಭಾಮಿನೀ ವಾರ್ಧಿಕವುಂತಾದ ಷಟ್ಪದಿಗಳಲ್ಲಿ ಬರೆದಿದೆ. ಕೊನೆಯಲ್ಲಿ ಒಂದು ಚಂಪಕಮಾಲಾವೃತ್ತವಿದೆ. ಪದ್ಯಗಳು ೧೧೨. ಶಿವಶರಣರ ಸ್ತುತಿಯೂ ಪವಾಡವೂ ಹೇಳಿದೆ. ಕವಿಯಾರೆಂಬುದು ಈ ಗ್ರಂಥದಿಂದ ಗೊತ್ತಾಗುವುದಿಲ್ಲ.

No. 529. ಮಿಶ್ರಸ್ತೋತ್ರತ್ರಿವಿಧಿ.

MIŚRASTŌTRATRIVIDHI.

Substance, Śrītāla. Size, 8 × 1 $\frac{11}{16}$ inches. Pages, 14. Lines, 11 on a page. Character, Kannaḍa. Condition, slightly injured. Appearance, old.

Bigins on fol. 95*a* of the manuscript described under No. 440 ante.

Complete.

A Vīraśaiva work written in praise of Basava. It contains 109 stanzas which can be adapted for singing. Every stanza ends with 'ಯೋಗಿನಾಥ'. The name of the author is Siddharāma.

Beginning :—

ಶರಣು ಸತ್ವ[ತ]ದ ಬಸವ ಶರಣು ನಿಜಗುರು ಬಸವ ।
ಶರಣು ಬಸವ ಜ್ಞಾನ ಶರಣು ಬಸವ ॥

ಶರಣು ನಿರ್ಮಲ ನಿಜಗುರುಲಿಂಗ ಬಸವೇಶ ।
ಶರಣೆಂಬೆ ನಿಮ್ಮಡಿಗೆ ಯೋಗಿನಾಥ ! ॥

ಬಸವನ ಯೋಗದಿಂ ಹಸನಾಯಿತ್ತೈ ಲೋಕ ಚಂದದಿಂ ।
ಬಸವ ಗತಿಯೆನಲು ಭವವು ಹಿಂಗುವುದು ।
ಬಸವಯ್ಯ ಬಸವಣ್ಣ ಶರಣಾರ್ತಿ ಯೆಂದು ।
ಬದುಕಿದೆನಯ್ಯ ಯೋಗಿನಾಥ ! ॥

*　　　*　　　*

ಅಂದು ಆದಿಯಲಾದ ಆನಂದ ಭಸಿತವನು ।
ತಂದೆನ್ನ ನೊಸಲಲ್ಲಿ ಪಟ್ಟಗಟ್ಟಿ ।
ತಂದೆ ಗುರು ಬಸವಣ್ಣ ಯೆನ್ನ ರಕ್ಷಿಸಲಾಗಿ ।
ಯಿಂದು ನಿಮ್ಮೊಳು ಬೆರೆದೆ ಯೋಗಿನಾಥ ! ।
ಒಚ್ಚೊತ್ತಿ ಭಸಿತವನು ನಿಚ್ಚ ನಿಚ್ಚಲು ನಾನು ।
ಹೆಚ್ಚಿ ಮನ ಹಿರಿದಾಗಿ ಧರಿಸಿ ನಿಮ್ಮ ॥
ಸಚ್ಚಿದಾನಂದ ಗುರು ಬಸವಣ್ಣನ ಪಾದಕ್ಕೆ ।
ಅಚ್ಚಗ ನಾನಪ್ಪನೈ ಯೋಗಿನಾಥ ! ॥

*　　　*　　　*

ಅನ್ಯವೆಂಬುದು ತನ್ನ ಬಿನ್ನಣವಾಗಿರ್ಕು ।
ಮನ್ಯಕ್ಕೆ ಹೊದ್ದನ್ನೆ ಅತಿಭಕ್ತಿಯಿಂದ ।
ಮನ್ನಣೆಯ ಪ್ರಸಾದ ತನ್ನ ರೂಪಾಗಿರ್ಪ ।
ಚೆನ್ನ ಬಸವಗೆ ಶರಣು ಯೋಗಿನಾಥ ! ॥

ಅನ್ಯಾಯ ಗುಣದಲ್ಲಿ ಮುನ್ನ ಬಿದ್ದರು ಕೆಲರು ।
ಯಿನ್ನವರ ಗುಣಗಳನು ಹೊದ್ದಲೀಯಾ ॥
ಚೆನ್ನ ಬಸವೇಶನೇ ಶರಣು ಶರಣೆಂದಿಗು ।
ಯೆನ್ನ ತನುವುಳಯಿತ್ತೈ ಯೋಗಿನಾಥ ! ॥

End :—

ಮಡಿವಳಯ್ಯನ ಮನೆಯ ಕಡು ಭಂಟನಿಜಲಿಂಗ ।
ದೊಡವೆರೆದ ಶರಣರ ತೊತ್ತು ಭೃತ್ಯ ॥

ನಿಜಯೋಗಿ ಸಿದ್ಧರಾಮ ವಂದಿಸುತಿಹೆನೆಂದು ।
ನಿಜದಲ್ಲಿ ಕೈಕೊಳ್ಳ ಯೋಗಿನಾಥ ! ॥
ವೀರಸಂಗವ್ವೆಯು ದಾರಚಂಗಳೆ ಸತ್ಯ । (?)
ಧೀರ ಗುಡ್ಡವ್ವೆ ಸೋಮವ್ವೆ ತಾಯಿ ॥
ಚಾರುಲಿಂಗಪ್ರಾಣ ನಾರಕಮಳವ್ವೆಯು ।
ಪಾರ ರತಿಯಿಂ ಸ್ತುತಿಪೆ ಯೋಗಿನಾಥ ! ॥
ಅಕ್ಕ ಮಹದೇವಿ ಚೋಳಯಕ್ಕ ನಾಗಲೆ ನಿಂಬಿ ।
ಯಕ್ಕ ದುಗ್ಗಳೆ ಸುಗ್ಗಲವ್ವೆ ತಾಯಿ ।
ಅಕ್ಕರಿನ ಶಿಶುವೆಂದು ಚೆಕ್ಕನೆ ತನ್ನತ್ತ ।
ಯೆತ್ತಿಕೊಂಡನು ಕರೆದು ಯೋಗಿನಾಥ ! ॥ (?)
ಬಸವ ಮಡಿವಳ ಚೆನ್ನಬಸವ ಚೆಂದಯ್ಯನು ।
ಲ್ಲಸ ಘಟ್ಟಿವಾಳ ಅಜಗಣ್ಣಯ್ಯನಾ ॥
ಯುಸವ ಷಟ್ಸ್ಥಲದಲ್ಲಿ ಬೆಸಗೊಡೆದ ಶರಣರ ।
ಶಿಶುವೆಂದು ಕರುಣಿಸಿ ಯೋಗಿನಾಥ ! ॥
ತ್ರಾಹಿ ಸಂಗನ ಬಸವ ತ್ರಾಹಿ ಚೆನಬಸವೇಶ ।
ತ್ರಾಹಿ ಪ್ರಭುದೇವ ನಿಜನಿರ್ಮಾಯನೆ ॥
ತ್ರಾಹಿ ಮಡಿವಳದೇವ ತ್ರಾಹಿಯಪ್ಪಣ್ಣನೆ ।
ತ್ರಾಹಿ ಮಾಂ ಅಜಗಣ್ಣ ಯೋಗಿನಾಥ ! ॥
ತ್ರಾಹಿ ಮತ್ಪ್ರಾಣೇಶ ತ್ರಾಹಿ ಮಾಂ ಪ್ರಭುಗುರುವೆ ।
ತ್ರಾಹಿ ಶಿವಲಿಂಗಾಂಗ ಪ್ರಭುವೆ ಬಸವ ॥
ತ್ರಾಹಿ ನಿಮ್ಮಯ ಘನಕೆ ತ್ರಾಹಿ ನಿಮ್ಮಡಿಗಳಗೆ ।
ತ್ರಾಹಿ ಮಾಂ ಬಸವೇಶ ಯೋಗಿನಾಥ ! ॥
ಜಯತು ಬಸವರಾಜ ಜಯತು ಬಸವಲಿಂಗ ।
ಜಯಜಯತು ಬಸವೇಶ ಬಸವಪ್ರಭುವೆ ॥
ಜಯ ಚೆನ್ನಬಸವೇಶ ಬಸವಪ್ರಭುವೆ ಯೆನುತ ।
ಸ್ವಯ ಪರವಳದಿರ್ದ ಗುರು ಯೋಗಿನಾಥ ! ॥
ಜಯತು ಸಂಗನಬಸವ ಜಯತಾದಿಮಯ್ಯನೆ ।
ಜಯ ಮರುಳು ಶಂಕರನೆ ಸತ್ಯಣ್ಣನೆ ॥
ಜಯ ಮುಗ್ಧಸಂಗಯ್ಯ ಜಯತು ಅಜಗಣಯೆಂದು ।
ಸ್ವಯ ಶಿಖಿಹಿಮದಂತಾದೆ ಯೋಗಿನಾಥ ! ॥
ಬಸವ ಮಡಿವಳ ಚೆನ್ನಬಸವ ಪ್ರಭು ಮುಖ್ಯನಾ ।
ದಸಮ ಶಿವಮಿಶ್ರ ಸ್ತೋತ್ರದ ॥
ಬಸವ ತ್ರಿವಿಧಿಯ ಮನವೊಸೆದೋದಿ ಕೇಳದೊಡೆ ।
ಶಶಿಧರನೊಳೈಕ್ಯ ದಿಟ ಯೋಗಿನಾಥ ! ॥

Colophon :—

ಮಿಶ್ರತ್ರಿವಿಧಿ ಸಮಾಪ್ತಂ.

(ವಿ-ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಸಾಮಾನ್ಯ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಬರೆದು ಸೇರಿಸಿವೆ. ಅವಾವುವೆಂಬುದನ್ನು ೪೩೦ ನೆಯ ನಂಬರಿನಲ್ಲಿ ನೋಡಿ ತಿಳಿಯಬಹುದು.

ಇದು ಹಾಡಿನಲ್ಲಿ ಬರೆದಿದೆ. ಕೆಲವು ಪದ್ಯಗಳಲ್ಲಿ ಸೀಸಪದ್ಯದ ಓಟವು ಕಂಡುಬರುವುದು. ಪದ್ಯಗಳು ೧೧೯. ಬಸವನ ಸ್ತುತಿಯೇ ಇದಕ್ಕೆ ವಿಷಯವು. ಪ್ರತಿಪದ್ಯವೂ 'ಯೋಗಿನಾಥ' ಎಂಬ ಅಂಕಿತದಿಂದ ಮುಗಿಯುತ್ತದೆ. ಕವಿ ಸಿದ್ಧರಾಮನೆಂಬುವನು. (ಗ್ರಂಥದಾದಿಯಲ್ಲಿ 'ಸಿದ್ಧರಾಮನು ನಿರೂಪಿಸಿದ ಮಿಶ್ರಸ್ತೋತ್ರ ತ್ರಿವಿಧಿ' ಎಂದು ಬರೆದಿದೆ.)

No. 530. ಮಿಶ್ರಾರ್ಪಣ.

MIŚRĀRPAṆA.

Substance, palm-leaf. Size, $7\frac{1}{8} \times 1\frac{1}{16}$ inches. Pages, 15. Lines, 8 on a page. Character, Kannaḍa. Condition, slightly injured. Appearance, old.

Begins on fol. 18 *a* of the manuscript described under No. 435 ante.

Complete.

A small treatise on Vīraśaiva religion. Liṅga in different aspects is stated here to be the presiding deity of each of the sense organs. The nam3 of the author is Ceunabasava.

Beginning :—

ಷಟ್ಸ್ಥಲ ಬ್ರಹ್ಮವನೊಡಗೂಡಿಹೆನೆಂದೊಡೆ ಯಿದಾರಿಗೆ ನಿಲುಕುವುದಯ್ಯಾ. ಅರ್ಪಿತ ಅನರ್ಪಿತವೆಂದು ಪ್ರೊಪ್ಪಕೆ ನುಡಿಯಬಹುದಲ್ಲದೆ ಅರ್ಪಣದೊಳಗಣ ಭೇದವನಱಿದು ಸೊಪ್ಪಡಗಿದ ನಿಷ್ಪತ್ತಿ ನಿಜಲಿಂಗೈಕ್ಯದಿರವು. ಅದೆಂತಯ್ಯಾ ಎಂದೊಡೆ ಕಾಯದ ಕೈಮುಟ್ಟಿ ಕ್ರಿಯಾರ್ಪಣವ ಮಾಡುವಲ್ಲಿ ಭೋಜ್ಯವಾಚಾರಲಿಂಗದಲ್ಲಿ, ಪಾನೀಯ ಗುರುಲಿಂಗದಲ್ಲಿ, ಭಕ್ಷ್ಯ ಶಿವಲಿಂಗದಲ್ಲಿ, ಚೋಷ್ಯ ಜಂಗಮಲಿಂಗದಲ್ಲಿ, ಲೇಹ್ಯ ಪ್ರಸಾದಲಿಂಗದಲ್ಲಿ, ಯಿವೆಲ್ಲರಲ್ಲಿಯ ಅಱಿವು ಮಹಾಲಿಂಗದಲ್ಲಿ, ಯಿಂತೀ ಷಡ್ವಿಧ ಕಾರ್ಯಾರ್ಪಣವಾದಲ್ಲಿ ಮುಂದೆ ಕರಣಾರ್ಪಣ ಭೇದಮಂ ಪೇೞ್ವೆಂ

ನಾಸಿಕದಲ್ಲಿ ಆಚಾರಲಿಂಗ, ಜಿಹ್ವೆಯಲ್ಲಿ ಗುರುಲಿಂಗ, ನೇತ್ರದಲ್ಲಿ ಶಿವಲಿಂಗ, ತ್ವಕ್ಕಿನಲ್ಲಿ ಜಂಗಮಲಿಂಗ, ಶ್ರೋತ್ರದಲ್ಲಿ ಪ್ರಸಾದಲಿಂಗ; ಹೃದಯದಲ್ಲಿ ಮಹಾಲಿಂಗ, ಯಿಂತೀ ಷಡ್ವಿಧ ಲಿಂಗಾರ್ಪಣದ ವಿವರವೆಂತೆಂದೊಡೆ :—ಆಚಾರಲಿಂಗದಱಿವು ಗಂಧ, ಗುರುಲಿಂಗದಱಿವು ರಸ, ಶಿವಲಿಂಗದಱಿವು ರೂಪ, ಜಂಗಮಲಿಂಗದಱಿವು ಸ್ಪರ್ಶನ, ಪ್ರಸಾದಲಿಂಗದಱಿವು ಶಬ್ದ, ಮಹಾಲಿಂಗದಱಿವು ಸರ್ವೇಂದ್ರಿಯ, ಯಿಂತಿವು ಷಡ್ವಿಧಲಿಂಗಕ್ಕೆ ಮಿಶ್ರಾರ್ಪಣ.

ಛತ್ತೀಸ ತತ್ವದ ಭೇದಮಂ ಕುರುಹಿನಲ್ಲಿ ಪೇೞ್ವೆಂ. ಇನ್ನು ಆಚಾರಲಿಂಗ ಮಿಶ್ರ ಷಡ್ವಿಧಲಿಂಗಾರ್ಪಣದ ವಿವರವೆಂತೆಂದೊಡೆ :— ಆವುದಾನೊಂದು ಅರ್ಪಣಕ್ಕೆ ಬೇಕಾದುದು, ಬೇರು

ಗೆಣಸು ಮೊದಲಾದ ಗಂಧವನಱಿವುದು ಆಚಾರಲಿಂಗದಲ್ಲಿ, ಮರ ತಿಗುಡು ಹಗಿನು ಮೊದಲಾದ ಗಂಧವನಱಿವುದು ಗುರುಲಿಂಗದಲ್ಲಿ, ಚಿಗುರು ಮೊದಲಾದ ಪತ್ರೆಯ ಗಂಧವನಱಿವುದು ಶಿವಲಿಂಗದಲ್ಲಿ, ಮೊಗ್ಗೆ ಮೊದಲಾದ ಪುಷ್ಪದ ಗಂಧವ ನಱಿವುದು ಜಂಗಮಲಿಂಗದಲ್ಲಿ, ಕಾಯಿ ಹಣ್ಣು ಮೊದಲಾದ ಫಲದ ಗಂಧವನಱಿವುದು ಪ್ರಸಾದಲಿಂಗದಲ್ಲಿ, ಇವೆಲ್ಲರಲ್ಲಿಯ ಗಂಧವನಱಿವುದು ಮಹಾಲಿಂಗದಲ್ಲಿ. ಇಂತು ಆಚಾರಲಿಂಗ ಮಿಶ್ರಾರ್ಪಣ.

ಇನ್ನು ಗುರುಲಿಂಗ ಮಿಶ್ರ ಷಡ್ವಿಧ ಲಿಂಗಾರ್ಪಣದ ವಿವರವೆಂತೆಂದೊಡೆ :— ಮಧುರವಾದ ರುಚಿಯನಱಿವುದು ಶಿವಲಿಂಗದಲ್ಲಿ, ಆಮ್ಲನಾದ ರುಚಿಯನಱಿವುದು ಜಂಗಮಲಿಂಗದಲ್ಲಿ. ಕಹಿಯಾದ ರುಚಿಯನಱಿವುದು ಪ್ರಸಾದಲಿಂಗದಲ್ಲಿ.

End :—

ಶ್ರುತಿ ॥ ವಾಚಾತೀತಂ ಮನೋತೀತಂ । ಭಾವಾತೀತಮಗೋಚರಂ ॥
ಸರ್ವಶೂನ್ಯಂ ನಿರಾಕಾರಂ । ನಿತ್ಯತ್ವಂ ಪರಮಂ ಪದಂ ॥

ಎಂಬುದಾಗಿ ಆದಿಶೂನ್ಯ ಮಧ್ಯಶೂನ್ಯ ಅಂತ್ಯಶೂನ್ಯದಲ್ಲಿ ನಿಜವನೆಯಿದಿಪ್ಪಾತನೀಗ ಅಭೇದ್ಯಭೇದಕ ಅಸಾಧ್ಯಸಾಧಕ ಚಿದ್ರೂಪ ಚಿದಾನಂದ. ಇಂತಪ್ಪ ದಿವ್ಯ ಶಿವಯೋಗಿ ಮಹಾಕರಣ ಪ್ರಭುದೇವರ ಬಸವಣ್ಣನ ಕರುಣದಿಂದ ಆನು ಬದುಕಿದೆನಯ್ಯಾ ಕೂಡಲ ಚೆನ್ನಸಂಗಮದೇವ.

Colophon :—

ಮಿಶ್ರಾರ್ಪಣಂ ಸಮಾಪ್ತಂ.

(ವಿ-ವಿ.)—

ಈ ಪುಸ್ತಕವು ಸಮಗ್ರವಾಗಿದೆ. ಸ್ವಲ್ಪಮಟ್ಟಿಗೆ ಶಿಥಿಲವಾಗಿದೆ. ಉತ್ತಮವಾದ ಲಿಪಿ. ೧೮ ನೆಯ ಓಲೆಯಲ್ಲಿ ಪ್ರಾರಂಭವಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಬರೆದು ಸೇರಿಸಿವೆ. ಅವಾವುವೆಂಬುದನ್ನು ಹಿಂದಣ ೪೩೫ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಕವಿ ಚೆನ್ನಬಸವನು. ಈತನ ವಿಷಯವನ್ನು ಬಯಸುವವರು ಕರ್ಣಾಟಕ ಕವಿಚರಿತ್ರೆ (ಸಂಪುಟ ೧, ಪುಟ ೧೪೫) ಯನ್ನು ನೋಡುವುದು.

No. 531. ಮಿಶ್ರಾರ್ಪಣ.
MIŚRĀRPAṆA.

Substance, Śrītāla. Size, $9\frac{3}{8} \times 2\frac{3}{32}$ inches. Pages, 12. Lines, 9 on a page. Character, Kannaḍa. Condition, very much injured. Appearance, old.

Begins on fol. 20*a* of the manuscript described under No. 451 ante.

Complete.

Same work as the above.

(ವಿ.ವಿ.)—

ಸಮಗ್ರವಾಗಿದೆ. ಅತ್ಯಂತ ಶಿಥಿಲವಾಗಿದೆ. ಲಿಪಿ ಸಾಮಾನ್ಯವಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಸೇರಿವೆ ಅವಾವು ವೆಂಬುದನ್ನು ೪೫೧ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಒಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.—ಗ್ರಂಥದಾದಿಯಲ್ಲಿ ‘ಚೆನ್ನಬಸವಣ್ಣದೇವರು ಕೊಟ್ಟ ಮಿಶ್ರಾರ್ಪಣ’ ಎಂದೂ, ಗ್ರಂಥಾಂತ್ಯದಲ್ಲಿ ‘ಮಿಶ್ರಾರ್ಪಣದ ಷಟ್ಸ್ಥಲದ ವಚನಂ ಸಮಾಪ್ತಂ’ ಎಂದೂ ಇದೆ.

No 532. ಮಿಶ್ರಾರ್ಪಣ.
MIŚRĀRPAṆA.

Substance, palm-leaf. Size, $8\frac{15}{16} \times 1\frac{3}{8}$ inches. Pages, 24. Lines, 5 on a page. Character, Kannaḍa. Condition, injured. Appearance, old.

Begins on fol. 25*b* of the manuscript described under No. 449 ante.

Complete.

Same work as the above.

(ವಿ.-ವಿ.)—

ಸಮಗ್ರವು. ಬಹಳ ಶಿಥಿಲವಾಗಿದೆ. ಬರೆವಣಿಗೆ ಸಾಮಾನ್ಯವಾದುದು. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಸೇರಿವೆ. ಅವಾವುವೆಂಬುದನ್ನು ೪೪೯ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೆ ಆಗಿದೆ.

No. 533. ಮಿಶ್ರಾರ್ಪಣ.
MIŚRĀRPAṆA.

Substance, Śrītāla. Size, $9\frac{5}{8} \times 2\frac{3}{32}$ inches. Pages, 11. Lines, 10 on a page. Character, Kannaḍa. Condition, very much injured. Appearance, old.

Begins on fol 26*a* of the manuscript described under No. 451 ante.

Complete.

Same work as the above.

(ವಿ.-ವಿ.)—

ಸಮಗ್ರವು. ೪೫೧ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪುಸ್ತಕದ ೨೬ ನೆಯ ಓಲೆಯಲ್ಲಿ ಪ್ರಾರಂಭವಾಗುತ್ತದೆ. ಅತ್ಯಂತ ಶಿಥಿಲವಾಗಿದೆ. ಬರೆವಣಿಗೆ ಸಾಮಾನ್ಯ ವಾದುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಗ್ರಂಥದಾದಿಯಲ್ಲಿ ‘ಚೆನ್ನಬಸವೇಶ್ವರ ದೇವರು ನಿರೂಪಿಸಿದ ಮಿಶ್ರಾರ್ಪಣದ ವಚನ’ ಎಂದೂ, ಗ್ರಂಥಾಂತ್ಯದಲ್ಲಿ ‘ಚೆನ್ನಬಸವೇಶ್ವರ ದೇವರು ನಿರೂಪಿಸಿದ ಮಿಶ್ರಾರ್ಪಣಂ ಸಮಾಪ್ತಂ’ ಎಂದೂ ಬರೆದಿದೆ.

No. **534**. ಮಿಶ್ರಾರ್ಪಣ.
MIŚRARPAṆA.

Substance, palm-leaf. Size, $7\frac{5}{8} \times 1\frac{1}{4}$ inches. Pages, 24. Lines, 6 on a page. Character, Kanarese. Condition, very much injureb. Appearance, old.

Begins on fol. 17a of the manuscript described under No, 450 ante.

Complete.

Same work as the above.

(ವಿ.ವಿ.)—

ಸಮಗ್ರವಾಗಿದೆ. ಬಹಳವಾಗಿ ಹುಳು ಕೊರೆದಿದೆ. ಲಿಪಿ ಸಾಮಾನ್ಯವಾದುದು. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಅವಾವುವೆಂಬುದನ್ನು ೪೫೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. **535**. ಮಿಶ್ರಾರ್ಪಣ.
MIŚRĀRPAṆA.

Substance, palm-leaf. Size, $7\frac{1}{16} \times \frac{15}{16}$ inches. Pages, 15. Lines, 4 on a page. Character, Kannaḍa. Condition, slightly injured. Mode of writing, good and free from mistakes.

Begins on fol. 30*a* of the manuscript described under No. 443 ante.

Incomplete.

Same work as the above.

(ವಿ.ವಿ.)—

ಅಸಮಗ್ರ. ಲಿಪಿಯು ಚೆನ್ನಾಗಿದೆ. ತಪ್ಪಿಲ್ಲ. ಓಲೆಯ ಪ್ರತಿ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಸರಿ

No. **536.** ಮಿಶ್ರಾರ್ಪಣ.
MIŚRĀRPAṆA.

Substance, Śrītāla. Size, $15 \times 1\frac{11}{16}$ inches. Pages, 5. Lines, 9 on page. Character, Kannaḍa. Condition, much injured. Appearance, old Mode of writing, not bad and not free from mistakes.

Begins on fol. 28*b*. The other works here in are :—(1) Vīraśaivāgamasiddhāntajñānakaṇḍa 2*a*, (2) Karaṇahasuge 6*a*, (3) Piṇḍōtpatti 11*b*.

Incomplete.

Same work as the above.

(ವಿ.ವಿ.)—

ಅಸಮಗ್ರ. ಬಹಳ ಶಿಥಿಲ. ಲಿಪಿಯು ಹೃದಯಂಗಮವಾಗಿಲ್ಲ. ತಪ್ಪುಗಳೂ ಇವೆ.

ಇದು ಹಿಂದೆ ವಿವರಿಸಿದ ಗ್ರಂಥವಾಗಿದೆ.

No. 537. ಮುಕ್ತಯ್ಯನ ವಚನ.

MUKTAYYANA VACANA.

Substance, palm-leaf. Size, 12 × 1⅛ inches. Pages, 5. Lines, 5 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 89*b* of the manuscript described under No. 498 ante.

Incomplete.

Similar to the above. From the title of the work it appears that Muktayya is the author. But one Ajagaṇṇa is mentioned at the end of each Vacana. If is therefore presumed that Muktayya was also known as Ajagaṇṇa.

Beginning :—

ಸಿಡಿಲು ಹೊಡೆದ ಬಾವಿಗೆ ಸೋಪಾನವುಂಟೇ ? ಷಡ್ವರ್ಣರಹಿತಂಗೆ ಬಣ್ಣವುಂಟೇ ? ಕಡಲ ದಾಂಟಿದವಂಗೆ ಹರಿಗೋಲುಂಟೇ ? ಬಡೆಗಟ್ಟಿದ ಒರೆಗೆ ಸಂಧಾನವುಂಟೇ ? ಒಡಲಿಲ್ಲದವಂಗೆ ಒಡವೆಯುಂಟೇ ? ನುಡಿಯುಂಟೇ ? ನಮ್ಮ ಅಜಗಣ್ಣದೇವಂಗೆ.

* * * *

ಒಡಲ ಕ್ಷುಧೆ[ಯುಕ್ತ](ಗೆ) ಹೋಗಿ ಅಡವಿಯಲ್ಲತ್ತರೆ ಈ ಅಡವಿಯತ್ತಬಲ್ಲುದು ಸುಖದುಃಖವನು, ಒಡಲಕಳವಳ [ಅ](ಆ)ವೇದಿಸಿತ್ತು, ಜಗವನು ಒಡಲುಗೊಂಡವರೆತ್ತಬಲ್ಲರು ? ಲಿಂಗವನು ಒಡಲ ಕಳವಳ ಒಡಲು ತಾನಳವಾಗ ಅಡವಿಯಲ್ಲತ್ತರಡೆಯಿಲ್ಲೆಂದ ? ಅಜಗಣ್ಣತಂದೆ

End :—

ಕಣ್ಣಮೊದಲೊಳು ತುಳ . . ಯಿಟ್ಟನು ಚೆನ್ನದೊಱತಿವ ಪರಿಯನೋಡಾ ! ಅವ್ವ ! ಬಣ್ಣವಿಲ್ಲದ ಬಣ್ಣವನುಟ್ಟು ಸುಳದನು ಈ ಅಣ್ಣನ ಭೋಗಕ್ಕೆ ಬೆಱಗಾದೆನವ್ವಾ . . . . . ಬಿಲ್ಲವನೊಳಗಿಟ್ಟು ಕೊಂಡನು ಗಣಸಂಚ ? ಶಿವಯೋಗಿ ಅಜಗಣ್ಣದೇವನು.

(ವಿ.ವಿ.)—

ಅಸಮಗ್ರ. ಅತಿ ಶಿಥಿಲ. ಗ್ರಂಥಪಾತವಿದೆ. ಒಂದು ಓಲೆಯು ಅರ್ಧದಿಂದ ಮುರಿದು ಹೋಗಿದೆ. ಬರೆವಣಿಗೆಯು ಚೆನ್ನಾಗಿಲ್ಲ. ತಪ್ಪೂ ಇದೆ.

ಇದು ವಚನ ಗ್ರಂಥವಾಗಿದೆ. ಇದರಲ್ಲಿ "ಅಜಗಣ್ಣ" ಅಜಗಣ್ಣ ತಂದೆ, ಅಜಗಣ್ಣದೇವ, ಎಂಬಂಕಿತಗಳುಳ್ಳ ಹನ್ನೆರಡು ವಚನಗಳವೆ. ವಚನಗಳು ವೀರಶೈವ ವೇದಾಂತವನ್ನು

ಪ್ರತಿಪಾದಿಸುತ್ತವೆ. ಈ ವಚನಗಳನ್ನು ಬರೆದವನು “ ಮುಕ್ತಯ್ಯ ” ನೆಂದು ಗ್ರಂಥದ ಶಿರೋನಾಮದಿಂದ ತಿಳಿಯಬರುತ್ತದೆ. ಆದರೆ ವಚನಗಳಿಂದ ಅಜಗಣ್ಣನೇ ಗ್ರಂಥಕರ್ತನೆಂದು ವ್ಯಕ್ತವಾಗುವುದು. ಇದರಿಂದ ಮುಕ್ತಯ್ಯನಿಗೆ ಅಜಗಣ್ಣನೆಂಬ ಬೇರೊಂದು ಹೆಸರೂ ರೂಢಿಯಲ್ಲಿದ್ದಂತೆ ತೋರಿಬರುತ್ತದೆ.

No. 538. ಮೆರೆಮಿಂಡಯ್ಯನ ವಚನ-
MEREMIṆḌAYYANA VACANA.

Substance, palm-leaf. Size, 12 × $1\frac{1}{8}$ inches. Pages, 4. Lines, 4 on a page. Character, Kannaḍa. Condition, injured. Appearance, old. Mode of writing, not bad but free from mistakes.

Begins on fol. 40*b* of the manuscript described under No. 498 ante.

Incomplete.

Similar to the above. Contains five Vacanas. By Meremiṇḍayya.

Beginning :—

• ಆಸೆ ತ್ರಿವಿಧದ ಗೊತ್ತು. ನಿರಾಶೆ ಏಕಮಯನ ಗೊತ್ತು. ಅಲ್ಲಹುದೆಂಬುದು ಬಲ್ಲವನ ಮತವಲ್ಲ. ಎಲ್ಲಿಯೂ ಸದ್ಗುಣ, ಎಲ್ಲರಲ್ಲಿಯೂ ನಿಜಭಾವ ಪರಿಪೂರ್ಣವಾಗಿರಬೇಕು ‘ ವಿಘಟ್ಟದೂರ ರಾಮೇಶ್ವರಲಿಂಗವ”ನಱಿವುದಕ್ಕೆ.

* * * *

ಇಷ್ಟಲಿಂಗ ಸಂಬಂಧ ಮುಕ್ತಿಪದ, ಭಾವಲಿಂಗ ಸಂಬಂಧ ಭವಕೆ ಬೀಜ, ಪ್ರಾಣಲಿಂಗ ಸಂಬಂಧ ಪ್ರಣವದ ಗೊತ್ತು, ಇಂತೀ ತ್ರಿವಿಧಭೇದವಱಿತುನಿಂದುದು ಐಕ್ಯಲಿಂಗಸಂಬಂಧ ಆಘಟ್ಟದೂರ ರಾಮೇಶ್ವರಲಿಂಗದಲ್ಲಿ ”

ಮೊದಲು ರೂಪಾದ ಬಿತ್ತು ಭೂಮಿಯಲ್ಲಿ ಬಿತ್ತಿ ಅಳಿದು ಬೀಜವಳಿದು ಸಸಿಯೆಂಬ ನಾಮವಾಯಿತು. ಸಸಿ ಬೆಳೆದು ಬಲಿದು ಉಂಡಿಗೆಬೀಜವೆಂಬ ನಾಮವ ತಾಳಿದುದು ಬೀಜವೊಂದೋ ? ಎರಡೋ? ಎಂಬುದನಱಿದಲ್ಲಿ ತ್ರಿಶೂನ್ಯವೆಂಬುಭಯನಾಮವಡಗಿತ್ತು. ಅಘಟ್ಟದೂರ ರಾಮೇಶ್ವರಲಿಂಗವು ಉಭಯನಾಮ ನಿಂತಿತು.

(ವಿ-ವಿ.)—

ಅಸಮಗ್ರ. ಶಿಥಿಲ. ಲಿಪಿಯು ಸಾಮಾನ್ಯವಾಗಿದೆ ತಪ್ಪಿಲ್ಲ.

ಇದು. “ ಅಘಟ್ಟದೂರ ರಾಮೇಶ್ವರಲಿಂಗ ” ಎಂಬಂಕಿತವನ್ನೊಳಗೊಂಡ ಐದು ವಚನಗಳುಳ್ಳ ಒಂದು ಚಿಕ್ಕ ವಚನಗ್ರಂಥವಾಗಿದೆ. ವೀರಶೈವ ಮತ ಬೋಧಕವಾದ ಈ ಗ್ರಂಥವನ್ನು ಬರೆದವನು ಮೆರೆಮಿಂಡಯ್ಯನೆಂಬುವನು.

No. 539. ಮೇದರ ಕೆಕ್ಕಯ್ಯ ವಚನ-
MĒDARA KEKKAYYA VACANA.

Substance, palm-leaf. Size, 12 × $1\frac{1}{8}$ inches. Pages, 2. Lines, 5 on a page. Character, Kannaḍa. Condition, much injured. Appearance, old. Mode of writing, not bad but free from mistakes.

Begins on fol. 70*a* of the manuscript described under No. 498 ante.

Incomplete.

Similar to the above. Contains only five Vacanas. By Mēdara Kekkayya.

Beginning :—

ಒಂದು ಬಿದಿಱಿಂಗೆ ಒಂಭತ್ತು ಕವೆ. ಕವೆಯೊಳಗೆ ಲೆಕ್ಕಿಸೆ ಬಿಲ್ಲು ಮೂಱು ಕವೆಯು ಕೊಱಚ್ಚಿಸಿ ಬಲ ಸಿಕ್ಕಿ ಬಿಡಿಸಿ ಸೀಳದ ಬಿದಿರ ಹೊಱೆಹೊರೆಯು . ನೈದೆ ತೊಟ್ಟಿಲ ಸಂದ ಕಾಣದಂತೆ ನಾಲ್ಕು ಕಾಲನಿಕ್ಕಿ ಅಂದು ಅಂದನಾದ ತೊಟ್ಟಿಲ ದಂಡೆಯನಿಕ್ಕಿ ಕಟ್ಟುವುದಕ್ಕೆ ಶ್ರುತ ದೃಷ್ಟವೆಂಬೆರಡು ದ್ವಾರದಲ್ಲಿ ತೊಟ್ಟಿಲಕಟ್ಟಿ ಗವರೇಶ್ವರಲಿಂಗಕ್ಕೆ ಹುಟ್ಟುಗೆಟ್ಟು ಹೋಗೋ ಎಂದು ಜೋಗುಳವಾಡಿದೆ.

* * * *

End :—

ಮೊದಲು ಹುಸಿ ಲಾಭ ದಿಟವೆ ? ನಿರೀಕ್ಷಣೆಯಿಲ್ಲದ ಪರೀಕ್ಷೆಯುಂಟೆ ? ಈ ಯಾಸರದಂಗವ ಗವರೇಶ್ವರಲಿಂಗ ! ನೀನೆ ಬಲ್ಲೆ.

ಇಂದ್ರಿಯಂಗಳ ಕೊಂದಿಹೆನೆಂದಡೆ, ಅವು ಕಂದರ್ಪನ ಹಂಗು, ಕಂದರ್ಪನ ಕೊಂದಿಹೆನೆಂದಡೆ ಅವು ಕಂಗಳ ಲಾಭ, ಕಂಗಳು ಮುಟ್ಟಿಯಲ್ಲದೆ ಲಿಂಗವ ಕಾಣಬಾರದು, ಅದು ನಿರಂಗಂಗಲ್ಲದೆ ಜಗದ ಹಂಗಿನವರಿಗಿಲ್ಲೆಂದೆ ಗವರೇಶ್ವರ ! "

(ವಿ.ವಿ.)—

ಅಸಮಗ್ರ. ಅತಿ ಶಿಥಿಲ. ಬರೆವಣಿಗೆಯು ಸಾಮಾನ್ಯ. ತಪ್ಪಿಲ್ಲ.

ಈ ಗ್ರಂಥವು ಗವರೇಶ್ವರಲಿಂಗಾಂಕಿತವಾದ ವಚನ ಪಂಚಕವನ್ನೊಳಗೊಂಡಿದೆ. ವಚನಕಾರನು ಮೇದರಕೆಕ್ಕಯ್ಯನು.

No. 540. ಮೋಳಿಗಯ್ಯನ ವಚನ.

MŌḶIGAYYANA VACANA.

Substance, palm-leaf. Size 12 × 1⅛ inches. Pages, 56. Lines, 4 on a page. Character, Kannaḍa. Condition, injured. Appearance, old. Mode of writing, not bad and not free from mistakes.

Begins on fol. 4*a* of the manuscript described under No. 498 ante.

Incomplete.

The contents of Saṭsthala are herein set forth in 57 maxims, all dedicated to God Mallikārjuna. The author Mōḷigayya who lived about 1160 A.D. was a contemporary of Basava.

Beginning :—

ಪ್ರಾಣಲಿಂಗಿಗಳೆಂದು ನುಡಿಯುತಿಪ್ಪಣ್ಣಗಳು ನೀವು ಕೇಳಿರೆ ಲಿಂಗಕ್ಕೆ ಪ್ರಾಣ ಮೊದಲೊ ? ಪ್ರಾಣಕ್ಕೆ ಲಿಂಗ ಮೊದಲೊ ? ಈಯುಭಯವ ವಿಚಾರಿಸಿಕೊಂಡು ನುಡಿಯಿರಣ್ಣ ಗಂಧವ

ವಾಯು ಸೋಂಕಿತೋ? ವಾಯು ಗಂಧವ ಸೋಂಕಿತೋ ? ಲಿಂಗವ ಮನವಱಿಯಿತೊ ? ಮನ ಲಿಂಗವನಱಿಯಿತೊ ? ಕಾಯದಿಂದ ಸೋಂಕಿದ ಸುಖ . . . ದವರಾರೊ ? ಮನದಲ್ಲಿ ಮುಟ್ಟಿದ ಗುಣವ ತನುವಿನಿಂದಱಿದವರಾರೊ ? ಇಂತೀಯುಭಯವನಱಿದಡೆ ಪ್ರಾಣ . . . . . . ಸೋಂಕಿದ ಕರ್ಪುರಕ್ಕೆ . ನಿಲುವುದಕ್ಕೆ ನೆಲೆಮನೆಯಿನ್ನಾವುದೋ ? ಭ್ರಮರ ಸೋಂಕಿದ ಸುವಾಸನೆಗೆ ಕಡೆ ನಡುಮೊದಲಾವುದೊ? ದೂಳುಕೊಂಡಲಕ್ಕೆ ಮನೆಯಿನ್ನಾವುದೋ? ಲಿಂಗ ಸೋಂಕಿದ ಮನಕ್ಕೆ ಲಿಂಗವನಱಿಯುವುದಕ್ಕೆ ತೋಂಗುವ ಠಾವಿನ್ನಾವುದೊ ? ಇಂತೀ ಗುಣ . . . . . ದ ಆ ಮಹಾತ್ಮಂಗೆ ನಮೋ ನಮೋ “ನಿಷ್ಕಲಂಕ ಮಲ್ಲಿಕಾರ್ಜುನ !”

* * * *

ಬಲ್ಲವನಾದಡೆ ಕಲ್ಲಿಯುಡಗಿದಂತಿರಬೇಕು, ಬಲ್ಲವರು ಬಂದರೆ ಆ ಕಲ್ಲಿಯೆಲ್ಲಾ ನವಘವಿಸಿದಂತಿರಬೇಕು. ಇದೆ ಬಲ್ಲವರ ಬಲ್ಲತನ “ನಿಷ್ಕಲಂಕ ಮಲ್ಲಿಕಾರ್ಜುನ !”

End :—

ಮಣ್ಣಾಬೆಕ್ಕು ನನ್ನಿಯ ಮೂಷಕನ ಮುಟ್ಟಿದುದುಂಟೆ ? ಜಗಗನ್ನರ ತ್ರಿ ? ವಿರಕ್ತಿ ಪ್ರಸನ್ನನ ಮುಟ್ಟಿದುದುಂಟೆ ಇದ ಚೆನ್ನಾಗಿ ತಿಳಿದು ನೋಡು “ನಿಷ್ಕಲಂಕ ಮಲ್ಲಿಕಾರ್ಜುನ !” ಸುಡುವ ಬೆಂಕಿಯ ತುದಿಮೊನೆಯಲ್ಲಿ ಒಂದು ಅರಗಿನ ಮಣಿಮಾಡ, ಮಾಡದ ಮನೆಯಲ್ಲಿ ಬೂರಗದ ಹಾಸಹಾಕಿ ನೀರಿನ ಮಂಚದ ಮೇಲೆ ನಾರಿಯರೆಲ್ಲರು ತಮ್ಮ ಕ್ರೀಡಾಭಾವಂಗಳಿಂದ ಮಲಗಿರಲಾಗಿ ಅರಗಿನ ಮಾಡ ಏದ್ದುರಿದು ನೀರಮಂಚ ಸುಟ್ಟು ಬೂರಗದ ಹಾಸು ಹೊತ್ತಿ ನಾರಿಯುರಿದು ಹೋಗಿ ಉರಿವನಾ . . ಹರಿವ ನೀರಕೆಡಿಸಿತ್ತು ಅಹಾರವರಿದಲ್ಲಿ ಹರಿಸಬಲ್ಲರೆ ಐಕ್ಯನು . . . ನಿಷ್ಕಲಂಕ ಮಲ್ಲಿಕಾರ್ಜುನ ! .

(ವಿ-ವಿ.)—

ಅಸಮಗ್ರ. ಶಿಥಿಲ. ಲಿಪಿಯು ಸಾಮಾನ್ಯವಾಗಿದೆ. ತಪ್ಪಿದೆ.

ಇದು “ಷಟ್ ಸ್ಥಲವನ್ನು” ಸಂಕ್ಷೇಪದಿಂದ ಪ್ರತಿಪಾದಿಸುವ ವಚನ ಗ್ರಂಥವಾಗಿದೆ. ಇದರಲ್ಲಿ ೫೭ ವಚನಗಳಿವೆ. ಪ್ರತಿಯೊಂದು ವಚನವೂ “ನಿಷ್ಕಲಂಕ ಮಲ್ಲಿಕಾರ್ಜುನ” ಎಂಬಂಕಿತವನ್ನೊಳಗೊಂಡಿದೆ. ವಚನ ಕಾರನು “ಬಸವನ” ಕಾಲದಲ್ಲಿದ್ದ ಪ್ರಮುಖ ವೀರ ಶೈವರಲ್ಲೊಬ್ಬನಾದ “ಮೋಳಿಗಯ್ಯ” ನೆಂಬುವನು. ಇವನ ಜೀವಿತಕಾಲವು ಸುಮಾರು ೧೧೬೦ (ಕ್ರಿ.ಶ.) ಆಗಿರಬಹುದೆಂದು ತಿಳಿದು ಬರುತ್ತದೆ.

No. 541. ಯೋಗಿನಾಥನ ವಚನ-

YŌGINĀTHANA VACANA.

Substance, palm-leaf. Size, 12 × $1\frac{1}{8}$ inches. Pages, 38. Lines, 4 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 135*a* of the manuscript described under No. 498 ante.

Incomplete.

Contains 100 stanzas bearing on Vīraśaiva system, dedicated to Yōginātha. Siddharāma, a contemporary of Basava, is the author.

Beginning :—

ಮಂಡಲತ್ರಯದೊಳಗೆ ಮಂಟಪವು ಎರಡರೊಳು ।
ಕೆಂಡದಂತುರಿವ ಲಿಂಗದ ಪರಿಯನು ॥
ಕಂಡು ಕಣ್ಮುಚ್ಚಿ ಕೈಮುಗಿದು ಸಂತೋಷದಿಂ ।
ದಿಂಡುಗೆಡೆದೆನು ಗುರುವೆ ಯೋಗಿನಾಥ ! ॥ (೧)

ಮೂಱು ಬೆಳಗಿನ ನಡುವೆ ಥಳಥಳಪ ಹೊಂಬಣ್ಣ ।
ಸಾರಾಯ ಸಕಲ ನಿಷ್ಕಲದ ಸೀಮೆ ।
ನೀರ ನಡುವಣ ಜ್ಯೋತಿ ನಿಶ್ಶೂನ್ಯ ನಿರಾಲಂಬ ।
ಸಾರೆ ಗುರುಕರುಣವೈ ಯೋಗಿನಾಥ ! ॥ (೨)

* * * *

ಹೊನ್ನು ಹೆಣ್ಣು ಮಣ್ಣು ಮುನ್ನವೆ ತಾನಾಗಿ ।
ಮನ್ನಣೆಯ ಕೆಡಿಸಿತ್ತೈ ಯೋಗಿಗಳನು ॥
ಇನ್ನು ಗುರುಕರುಣವುಳ್ಳವರು ಜಱಿತೆಯಲ್ಲಾಗಿ ।
ಕುನ್ನಿಯಾದಳು ಮಾಯೆ ಯೋಗಿನಾಥ ! ॥

* * * *

End :—

ಸಾಗರದ ಮೇಲಪ್ಪ ಆನಂದ ಕಮಲ ॥
. . . . . .
. . . . .
. . . .
. . . . .
. . . . . .
. . . . .
ಕಾಣದಂತಿರಿಸಯ್ಯ ಯೋಗಿನಾಥ !
. . . . ।
. . . . ನು ।
ಹಂಗಿ ಹಿಂಗಿಸುವ ಸಂ . . . ।
. . . . . . ॥

(ವಿ. ವಿ.)—

ಅಸಮಗ್ರ. ಕಡೆಯ ಓಲೆಗಳು ಮುರಿದುಹೋಗಿವೆ. **ಅತಿ ಶಿಥಿಲ.** ಬರವಣಿಗೆಯು ಸಾಮಾನ್ಯ. ತಪ್ಪುಗಳೂ ಇವೆ.

ಇದರಲ್ಲಿ ಯೋಗಿನಾಂಥಾಂಕಿತಗಳಾಗಿರುವ ೧೦೦ ಪದ್ಯಗಳಿವೆ. ವೀರಶೈವ ವೇದಾಂತ ಬೋಧಕವಾದ ಈ ಗ್ರಂಥವು ಬಸವನ ಸಮಕಾಲೀನನಾದ ಸಿದ್ಧರಾಮೇಶ್ವರನಿಂದ ವಿರಚಿಸಲ್ಪಟ್ಟಿದ್ದೆಂದು ತಿಳಿಯ ಬಂದಿದೆ.

No. 542. ರಕ್ಕಸ ಬೊಮ್ಮಣ್ಣ ವಚನ.

RAKKASA BOMMAṆṆA VACANA.

Substance, palm-leaf. Size, 12 × $1\frac{1}{8}$ inches. Pages, 3. Lines, 5 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 81*b* of the manuscript described under No. 498 ante.

Incomplete.

Similar to the above. Contains 8 Vacanas. By Rakkasa Bommaṇṇa.

Beginning :—

ಆರೆಂದರೂ ಎನ್ನಲ್ಲಿ ಕೊಟ್ಟದ ಕೊಡೆ, ಸಿಕ್ಕಿಸುವದ ಬಿಡೆ, ಅಸಂಗದ ನಡೆ, ಅತಿರೇಕದ ನುಡಿ, ಗತಿಗೆಟ್ಟವರ ಸಂಗ, ಹೊಸಬರ ಕೂಟ, ಭಕ್ತಿಯನೊಲ್ಲದವರೊಡನಾಟ, ಅಸತ್ಯರು ಹೋದ ಹಾದಿ, ಎನಗೆ ಬಟ್ಟೆ, ರಕ್ಕಸರೊಡೆಯ ಕೊಟ್ಟದ ಬೇಡಾ, ಭಕ್ತರ ಸತಿಯಾಗಿದ್ದವರೆನ್ನ ಹೆಂಡಿರು. ಭಕ್ತರ ತಲೆ ಎನ್ನ ಕಾಲು, ಭಕ್ತರ ಚಿತ್ತ ಎನ್ನ ಕುಚಿತ್ತ, ಭಕ್ತರ ದ್ರವ್ಯವೆನಗೆ ಹೇಯ, ಭಕ್ತರ ಮುಕ್ತಿ ಎನ್ನ ಕುದುರೆಯ ಲಾಯ, ಅವರು ಸತ್ತರೆ ಪಾಪ, ಎನಗದು ನರಕ ರಕ್ಕಸನೊಡೆಯ ಕೊಟ್ಟದ ಬೇಡ !

* * * *

ನಾನು ನಾನಾದ ಕಾರಣ ಎನಗೆ ಗುರುವಿಲ್ಲ. ನಾನೆಂಬು . . . ಎನಗಾಲಿಂಗವಿಲ್ಲ. ನಾ ಮಾಡದವನಾಗಿ ಎನಗೆ ಜಂಗಮವಿಲ್ಲ ಇಂತೀ ಮೂಱು ಇಲ್ಲದವರಿಗೆ ಭಕ್ತಿಪದವಿಲ್ಲ. ಇದನಿನ್ನಾರ . ಕೇಳುವೆ ಸಕ್ಕಸನೊಡೆಯು ಕೊಟ್ಟದಬೇಡ !

* * * *

End :—

ನಡೆವರೆಲ್ಲರೂ ಹೆಂಗುಸಿನ ಗಂಡಂದಿರು, ಮಾಡುವರೆಲ್ಲರೂ ಮಹಾಲಕ್ಷ್ಮಿಯ ತೊಂಡಂದಿರು, ಉಂಬವರೆಲ್ಲರೂ ಅವರೆಂಜಲ ಕೂಳು, ಇದನೆಂದೆನಾ ಎನಗಿದಿರಾದರೆ ಅವರ ಬಾಯ ಕೊಂಬವರ ಗಂಡರಗಂಡ ರಕ್ಕಸನೊಡೆಯ ಕೊಟ್ಟದ ಬೇಡ !

(ವಿ-ವಿ.)—

ಅಸಮಗ್ರ. ಅತಿ ಶಿಥಿಲ, ಗ್ರಂಥಪಾತ್ರವಿದೆ. ಲಿಪಿಯು ಸಾಮಾನ್ಯವಾಗಿದೆ. ತಪ್ಪು ಇದೆ.

ಈ ಗ್ರಂಥವು ವಚನ ರೂಪವಾಗಿದೆ. ಇದರಲ್ಲಿ "ರಕ್ಕಸನೊಡೆಯ" ಎಂಬಂಕಿತವಿರುವ ವಚನಾಷ್ಟಕವಿದೆ. ವೀರಶೈವ ವೇದಾಂತ ಪ್ರತಿಪಾದಕವಾದ ಈ ಗ್ರಂಥವು ರಕ್ಕಸಬೊಮ್ಮಣ್ಣನಿಂದ ಬರೆಯಲ್ಪಟ್ಟುದೆಂದು ತಿಳಿದು ಬರುತ್ತದೆ. ವಚನಗಳು ಗೂಢಾರ್ಥವುಳ್ಳವುಗಳಾಗಿರುವುದರಿಂದ ಅರ್ಥಪ್ರತೀತಿಯು ಅಷ್ಟು ಸುಲಭವಾಗಿ ಆಗುವಂತಿಲ್ಲ. ಎಂಟನೆಯ ವಚನದಿಂದ ಈ ಗ್ರಂಥಕರ್ತನು ಪ್ರತಿವಾದಿ ಭಯಂಕರನೆಂಬಂಶವು ವ್ಯಕ್ತವಾಗಿ ವೇದ್ಯವಾಗುವುದು.

No. 543. ರಾಯಸದ ಮಂಚಣ್ಣ ವಚನ.

RĀYASADA MAÑCAṆṆA VACANA.

Substance, palm-leaf. Size, 12 × 1⅛ inches. Pages, 3. Lines, 5 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 74*a* of the manuscript described under No. 498 ante.

Incomplete.

Similar to the above. Contains 5 vacanas. By Rāyasada Mañcaṇṇa who seems to be a contemporary of Basava.

Beginning :—

ಮರಾಳಂಗೆ ಹಾಲು ನೀರನೆಱೆತಿವಲ್ಲಿ ನೀರನುಳುಹಿ ಹಾಲಕೊಂಬ ಭೇದವ ನೋಡಾ ! ಎಣ್ಣೆನೀರು ಕೂಡಿದಲ್ಲಿ ಅದು ತನ್ನಿಂದಲೆ ಬೆಳೆದು ಚೆನ್ನಾಗಿ ಉರಿಯುದ ಭೇದವ ನೋಡಾ !। ಮಣ್ಣು ಹೊನ್ನಿನಲ್ಲಿ ಬೆಳೆದು ತನ್ನ ತಪ್ಪಿಕೊಂಡು ಹೊನ್ನು ಬೆಲೆಯಾದ ಭೇದವ ನೋಡಾ !(?) ತನ್ನೊಳಗೆ ತಾನಿದ್ದು ತನ್ನನಱಿಯದೆ ತೊಳಲುವ ಬಿನ್ನಾಣವ ನೋಡಾ ! ಚೆನ್ನಾಗಿ ನುಡಿಯುವ ಅಣ್ಣಗಳೆಲ್ಲರು ಹೆಣ್ಣು ಹೊನ್ನು ಮಣ್ಣೆಂಬ ಬಲೆಗೆ ಸಿಕ್ಕಿ ಋಜುವ್ರುಳ್ಳವಣ್ಣಗಳ ಬಾಗಿಲಿನಲ್ಲಿ ನಿಂದು ಬಣ್ಣಗೆಟ್ಟವರ ಕಂಡು ಚುನ್ನವಾಡಿ ನಗುತಿರ್ದ ಜಾಂಭೇಶ್ವರ !

ತೊಳೆದಡೆ ಮಡಿ, ಮಾಸಿದಡೆ ಮೈಲಿಗೆ, ಅಱಿದಡೆ ತಾನು, ಮಱೆದಡೆ ಜಗದೊಗೆಂಬುದ ನೆಱೆಹಿಡಿದು ಬಿಟ್ಟೊಡನೆ ಕೈವಿಡಿಱಿದಡೆ ಮತ್ತೆ ಮಱುಗಿದ ಜಾಂಭೇಶ್ವರ !

*   *   *   *

End :—

ಬೆಂಕಿಗೆ ಉರಿ ಮೊದಲೋ ? ಹೊಗೆ ಮೊದಲೋ ? ಎಂಬುದ ನಱಿದಲ್ಲಿ ಇಂಷ್ಟಲಿಂಗ ಸಂಬಂಧಿ, ಉಭಯುವನಱಿದಲ್ಲಿ ಪ್ರಾಣಲಿಂಗ ಸಂಬಂಧಿ, ಆ ಉಭಯುವು ನಷ್ಟವಾದಲ್ಲಿ ಏನೂ ಎನಲಿಲ್ಲ ಜಾಂಭೇಶ್ವರಾ ! ॥

ಅಱಿವಿನ ಪ್ರಸಂಗಕ್ಕೆ ಮಚ್ಚರವೇಕೆ ? ಮಹಾನುಭಾವಗೆ ಮನ್ನಣೆಯು ಮಾಡರೆಂಬ ತೇಜದಬಭೀಷ್ಟಿಕೆ ಏಕೆ ? ತನ್ಮಯು ತಾನಾದ ಮತ್ತೆ ತನಗನ್ಯವಿಲ್ಲೆಂದೆ ಜಾಂಭೇಶ್ವರ.

(ವಿ-ವಿ.)—

ಅಸಮಗ್ರ. ಅತಿ ಶಿಥಿಲ. ಬರೆವಣಿಗೆಯು ಸಾಮಾನ್ಯವಾಗಿದೆ. ತಪ್ಪಿದೆ.

ಇದು ವಚನ ಗ್ರಂಥವಾಗಿದೆ. ಇದರಲ್ಲಿ " ಜಾಂಭೇಶ್ವರಾಂಕಿತಗಳಾದ ಐದು ವಚನಗಳವೆ. ವಚನಗಳು ವೀರಶೈವ ವೇದಾಂತ ಪ್ರಮಾದಕಗಳಾಗಿರುವುವು. ಈ ವಚನಗಳನ್ನು ಬರೆದವನು ರಾಯಸದ ಮಂಚಣ್ಣನೆಂಬುವನು. ಈತನು ಬಸವನ ಸಮಾನ ಕಾಲಿಕನೆಂದು ತಿಳಿದು ಬರುತ್ತದೆ.

No. 544. ವಿಭೂತಿ ಮಾಹಾತ್ಮ್ಯವು.

VIBHŪTHI MĀHĀTMYAVU.

Substance, palm-leaf. Size, 7½ × 1$\frac{1}{16}$ inches. Pages, 7. Lines, 4 on a page. Character, Kannaḍa. Condition, much injured. Appearance, old. Mode of writing, good.

Begins on fol. 95*a* of the manuscript described under No. 462 ante.

Incomplete.

This is a prose work. We have called it " Vibhuti māhātmya", as it deals with the greatness of the sacred ashes, according to the Vīraśaiva religion. Possibly it is part of some other work At the end of each passage there is reference to " Kūḍalasaṅgamadēva ".

Beginning :—

ವಿಭೂತಿಯನೊಲದು ಧರಿಸಿದಡಾವ ಕರ್ಮ[ವನು](ಂಗಳು) ಹೊದ್ದ [ಲೊ](ಲ)ಷ್ಮವು. ಪಾವನ ಮಾಡುವುದು. ಪರಮ ಪದವಿಯ ತೋರುವುದು. ಶಿವನ ಪರಮಜ್ಞಾನದ ಮೂಲಾಧಾರದ ಶಕ್ತಿಯು ಸರ್ವಾಂಗವಂಗಲದ . . . . ಷಣಥ ಪರಬ್ರಹ್ಮದ ಸಾರೋದ್ಧಾರದ ಸುಖದ ಮಹದೈಶ್ವರ್ಯವಾದ . . . . ವಿಭೂತಿ ಪಂಚ ಬ್ರ . . . . ದಿಂದುದಯವಾದ ಪಂಚಗವ್ಯ . . . ಗನು ಮಾತ್ರದಿಂದ . . . . . ಸಮಸ್ತವುನಿಜನಂಗಳು ದದಿ . . . .

End :—

ಎಣಿ[ಕೆ] (ಕೆಯಿ)ಲ್ಲದ ಭವಪಾಶವು ಪರಿವುದು ನೋಡಾ ! ವಿಭೂತಿಯ ನೊಲಿದು ಧರಿಸಿದನೆಂದು ಯಾನು ಧರಿಸಿ ಬದುಕಿದೆ ಕಾಣೆ ಕೂಡಲ ಸಂಗಮ ದೇವಯ್ಯಾ - ಶಿವಾ-.

(ವಿ.ವಿ.)—

ಅಸಮಗ್ರ. ಅತ್ಯಂತಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ.

ಇದು ವಚನದಲ್ಲಿ ಬರೆದಿದೆ. ಇದರಲ್ಲಿ ವಿಭೂತಿಮಹಿಮೆಯು ಪ್ರತಿಪಾದಿತ ವಾಗಿದೆಯಾಗಿ ಈ ಗ್ರಂಥಕ್ಕೆ ವಿಭೂತಿಮಾಹಾತ್ಮ್ಯವೆಂದು ಹೆಸರು ಕೊಟ್ಟದೆ. ಇದು ಬೇರೆ ಯಾವುದಾದರೂ ಒಂದು ಗ್ರಂಥದ ಅಂಗವೆಂದು ತಿಳಿದು ಬಂದಲ್ಲಿ ಮುಂದೆ ಸರಿಪಡಿಸಲಾಗುವುದು. " ಕೂಡಲ ಸಂಗಮದೇವ " ಎಂಬ ಅಂಕಿತವಿದರಲ್ಲಿ ಕಂಡುಬರುತ್ತದೆ.

No. 545. ವಿಭೂತಿ ಮಾಹಾತ್ಮ್ಯವು.

VIBHŪTI MĀHĀTMYAVU.

Substance, paper. Size, 10$\frac{7}{16}$ × 9$\frac{7}{16}$ inches. Page, 1. Lines, 20 on a page. Character, Kannaḍa. Condition, good. Appearance, new. Mode of writing, good.

Begins on page 6. This is a copy of the manuscript described under the previous No.

Same work as the above.

(ವಿ-ವಿ.)—

ಅಸಮಗ್ರ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಕಾಳವ್ವೆಯು ವಚನ, ಷಟ್ಸ್ಥಲನಿರ್ಣಯ ಟೀಕೆ, ಶೀಲ ಸಂಪಾದನೆ ಮುಂತಾದ ಪುಸ್ತಕಗಳು ಇವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 546. ವೀರಶೈವಸಿದ್ಧಾಂತ ಜ್ಞಾನಕಂದ.

VĪRAŚAIVASIDDHĀNTA JÑĀNAKANDA

Substance, Srītāla. Size, 15 × 1$\frac{13}{16}$ inches. Pages, 8. Lines, 10 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 2*a* of the manuscript described under No. 536 ante Complete in 115 stanzas.

The doctrines of Vīraśaiva religion are herein set forth in metrical form. The author Śāntavṛṣabha was a disciple of Śāntīśvara.

Beginning:—

ಕಂದ ॥ ಶ್ರೀಪತಿನಯನಾರ್ಚಿತ! ವಾ-।
ಣೀಪತಿ ಶಿರಕಂಡಕರನೆ! ಕರುಣಾಕರ! ತಾ-।
ರಾಪತಿ ದಿನಪತಿ ಶಿಖಿನಯನ ನು
ಮಾಪತಿ! ಸಲಹೆನ್ನ ವರದ ಗುರು ಶಾಂತೇಶಾ ॥ ೧ ॥
. . . . ।
. . . ತನು ಮೂರ್ತಿಗಳ ನೆಱೆತೆ ॥
ಪೊರೆವ ಸಕಲಜಗವನು ವರ!
ಗುರುಶಾಂತೇಶನ ಚರಣಕಮಲಕ್ಕೆಱಗುವೆ ॥ ೨ ॥

*   *   *

. . . ಮತ ಶೈವದ
ಸಿದ್ಧಾಂತದ ಮತ(ವ)ನುಳಿದು ವೀರಶೈವಾಗಮ ॥ ?
ಸಿದ್ಧಾಂತಜ್ಞಾನಕಂದವ।
ಶುದ್ಧಾತ್ಮರು ಕೇಳಿ ಪೇಳ್ವೆ ಸಂಕ್ಷೇಪದೊಳಂ ॥

*   *   *

End:—

ವರಗುರುಶಾಂತೇಶನು ನಿಜ।
ಕರುಣದಿ ಪ್ರೇರಿಸಲು ಪೇಳ್ದೆನೊಲಿದೀಶತಕವ ॥ (?)
ಶರಣರಿಂದ ಕೇಳಿ ಹಿಂದಣ।
ಶರಣರ ವಚನದೊಳುತಿಳದು ಸ್ವಾಮಿಯಾಗಿಪ್ಪುದು ॥ (?)
ಇದು ಶೈವಸಮಯ ಶಾಸ್ತ್ರವ।
ಮುದದಿಂ ಪಿಡಿದಿಪ್ಪವರ್ಗೆ ವಿಷದಂತಿಪ್ಪುದು। (?)

ಅಧಿಕತರ ವೀರಶೈವಗೆ ।
ಸುಧೆಯಿಂದದೊಳೊಪ್ಪುತಿಪ್ಪುದನುಭವಶತಕಂ ॥

* * * * *

ಶಾಂತವೃಷಭೇಶ ಪೇಳದ
ಶಾಂತೇಶ್ವರಕರುಣದಿಂದ ಮನದೊಳ್ಪ್ರೇರಿಸಿ ॥ (?)
ಶಾಂತರು ಶರಣರು ಕೇಳಲು ।
ಭ್ರಾಂತಳಿದಱಿದವರು ವೀರಶೈವದ ಮತವಂ ॥

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲ. ಕಡೆಯ ಓಲೆಯು ಮುರಿದು ಹೋಗಿದೆ. ಲಿಪಿಯು ಹೃದಯಂಗಮವಾಗಿಲ್ಲ. ತಪ್ಪಿದೆ.

ಇದು ಕಂದದಲ್ಲಿ ಬರಿದಿದೆ. ಇದರಲ್ಲಿ ೧೧೫ ಪದ್ಯಗಳಿವೆ. ಈ ಗ್ರಂಥಕ್ಕೆ ಅನುಭವಶತಕವೆಂಬ ಬೇರೊಂದು ಹೆಸರಿರುವುದೆಂದೂ ತಿಳಿದು ಬರುತ್ತದೆ. ಕವಿ, ಕವಿಯ ಗುರು ಮತ್ತು ಗ್ರಂಥದಲ್ಲಿ ಪ್ರತಿಪಾದಿತ ವಿಷಯಗಳು :—

ಶಾಂತವೃಷಭೇಶ ಪೇಳದ ।
ಶಾಂತೇಶ್ವರ ಕರುಣದಿಂದ ಮನದೊಳ್ ಪ್ರೇರಿಸಿ ॥ (?)
ಶಾಂತರು ಶರಣರು ಕೇಳಲು
ಭ್ರಾಂತಳಿದಱಿದವರು ವೀರಶೈವದ ಮತವಂ ॥

ಈ ಪದ್ಯದಲ್ಲಿ ಕ್ರೋಢೀಕರಿಸಲ್ಪಟ್ಟಿವೆ. ಈ ಕವಿಯ ಜೀವಿತಕಾಲವು ಸುಮಾರು ೧೭೦೦ ಎಂದು ಕವಿಚರಿತ್ರೆಯಿಂದ (ಸಂ. ೨, ಪುಟ ೫೫೧) ತಿಳಿದು ಬರುತ್ತದೆ.

No. 547. ವೃಷಭ ಗೀತೆ.
VṚṢBHA GĪTE

Substance, Śritāla. Size, 7 × 1$\frac{13}{16}$ inches. Pages, 19. Lines, 10 on a page. Character, Kannaḍa Condition, much injured. Appearance, old. Mode of writing, fair.

Begins on fol. 84*b* of the MS. described under No. 299 ante.

Complete in 101 stanzas.

Written in praise of Basava, it deals with some of the doctrines of the Vīraśaiva religion. By Gurubasava.

Beginning :—

ರಾಗ ॥ ಹಿಂದೋಳವಸಂತಂ ॥

ಭೋ.॥ ಪ.॥ ಶ್ರೀಮದಮಲ ಭಕ್ತಹೃನ್ನಿ ।
ಕಾಮ ಚಿತ್ಪ್ರದೀಪನಖಿಲ ।
ಧಾಮನಮೃತ ಸೋಮನತುಳಭೀಮರೂಪನು ॥
ಪ್ರೇಮದಿಂದ ನಂದಿನಿವಹ ।

ಶತ್ರು (?) ಸಹಿತವಾಗಿ ಪೂರ್ಣ ।
ಕಾಮನಾಗಿ ಜಗವ ಸಲಹಲೆಂಬವಂ ಕೃತಾರ್ಥನು (?) ॥
ನಂದಿಯೆಂದು ವೃಷಭರೂಪ
ನೆಂದು ಪಶುಪನೆಂದನನ್ಯ ।
ಬಂಧುವೆಂದು ಸಚ್ಚಿದಮೃತ ಸಿಂಧುರೂಪನ ॥
ಚಂದ ಚಂದದಿಂದ ನುತಿಸಿ ।
ಪಾಡಿ (?) ಪಾಡಿ ವಿಮಲಮುಕ್ತಿ ।
ಸುಂದರೀ ಸಮ್ಮೇಳನೆನಿಸಿ ಬಾಳ್ವನವ ಕೃತಾರ್ಥನು (?) ॥
ಬಸವನೆಂದಖಂಡ ಪಿರಿಯ ।
ಬಸವನೆಂದು ಲೋಕಬಂಧು ।
ಬಸವನೆಂದು ಷಟ್ಸ್ಥಲೀ ಸಮಗ್ರನಾರದ ॥
ಬಸವನೆಂದು ಪುತ್ರಮಸ್ತು ।
ಬಸವನೆಂದು ಧರ್ಮರೂಪ ।
ಬಸವನೆಂದು ಭಜಿಸಿ [ಭಜಿಸಿ] ಬಾಳ್ವನವ ಕೃತಾರ್ಥನು ॥
ಬಸವನೊಳಗೆ ಚೆನ್ನಬಸವ ।
ನಂ ವಿಶೇಷದಿಂದ ಮತ್ತೀ ।
ಬಸವನೊಳಗೆ ಸಿದ್ಧರಾಮನನ್ನು ಭೋಗನಂ ॥
ಬಸವನೊಳಗೆ ರುದ್ರಭಕ್ತ ।
ಗಣಕದಂಬವಂ ಪ್ರಪೂರ್ಣ ।
ಬಸವನೊಳಗೆ ಭಜಿಸಿ [ಭಜಿಸಿ] ಕಾಣ್ಬನವ ಕೃತಾರ್ಥನು ॥

* * * *

ತನುವನಱಿದು ಸತ್ವಗುಣದ ।
ಮನವನಱಿದು ನಿಟಿಲತಟದ ।
ಘನವನಱಿದು ಪರಮಸುಖಸಮಾಧಿ ಯೋಗದ
ಮನೆಯನಱಿದು ಭಕ್ತಜನರ ।
ವಿನಯವಱಿದು ದೇಶ ಕಾಲ ।
ದನುವನಱಿದು ಯೋಗ ಯೋಗ್ಯ [ನೆನಿಪ]ನವ ಕೃತಾರ್ಥನು ॥
ಕಮಲವೆರಡರೊಳಗೆ ವಹ್ನಿ ।
ಕಮಲ ಸೂರ್ಯ ಕಮಲ ಸೋಮ ।
ಕಮಲ ಹಂಸ ಕಮಲವಂಸಮಾನಗೆಯ್ಯುತ ॥
ಕಮಲವೆರಡ ಪಿಡಿದು ಮಧ್ಯ ।
ರಮಣಿಯೊಳಗೆ ಗಮಿಸಿ ಮಸ್ತ ।
ಕಮಲದೊಳಗೆ ನಿಂದು ಗುರುವ ನೆನೆವನವ ಕೃತಾರ್ಥನು (?) ॥

End:—

ಹಱಿ ವಿವೇಕದಿಂದೆ ತಮ್ಮ ।
ಮೆಱೆದ ಹಮ್ಮಿನಿಂದ ನುಗ್ಗು ।
ಸುಱಿಗಳಾಗಿ . ಕೆತ್ತಾಂಗದಿಂದ ಬಳಲುತ ॥

ಬಱಿ ಮನಸ್ಸಿನಿಂದಲರಿಯು ।
ದಂತೆ ಗೀತೆಯಂ ರಹಸ್ಯ ಮತದೊ (?) ।
ಳಱಿದನಾಗಿ ತಿಳಿದನನ್ಯನವ ಕೃತಾರ್ಥನು ॥

ಈ ರಹಸ್ಯವಮೃತರೂಪಿ ।
ನಿಂದ ವರ್ತಿ [ಸ್ಪೂ] (ಸುವ್ರ)ದು ಭೂಮಿ ।
ತಾರೆ ಸೋಮ ಸೂರ್ಯರುಗಳ ಕಾಲವೆಲ್ಲವ್ರ ॥

ನಾರ ಹೃದಯದೊಳಗೆ ಸಂತ ।
ತಂ ಪ್ರಯತ್ನದಿಂಪಲೆಂದು ।
ಪಾರಮಾರ್ಥಪೆಂದುವೆಂದು ತನ್ನೊಳಱಿದನವ ಕೃತಾರ್ಥನು (?) ॥

ಈ ರಹಸ್ಯ ಪಾವನಾತ್ಮ ।
ಯೋಗವಾಗಲವನು ನಿರ್ವಿ ।
ಕಾರನಹ ಚಿದಬ್ಧಿಯೊಳಗೆ ಮುಳುಗಿ ತೇಲುತ ॥

ಪಾರಮಾರ್ಥ ಭೂತಿಯೊಳಗೆ ।
ಸುಖದೊಳಪ್ಪನೆಂದು ನುಡಿದ ।
ಚಾರು ಚರಿತ ಗುರುಬಸವಗೆ ಶರಣು [ಶರಣು] ಸಂತತ ॥

Colophon :—

ವೃಷಭಗೀತೆ ಸಂಪೂರ್ಣಂ.

(ವಿ-ಪ.)—

ಸಮಗ್ರವಾಗಿದೆ. ಹೆಚ್ಚು ಶಿಥಿಲನಾಗಿದೆ. ಉತ್ತಮವಾದ ಲಿಪಿ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಕೂಡಿವೆ. ಅವಾವುದೆಂಬುದನ್ನು ತಿಳಿಯಲು ೨೯೯ ನೆಯ ನಂಬರನ್ನು ನೋಡುವುದು.

ಇದು ಭೋಗಷಟ್ಪದಿಯಲ್ಲಿ ಬರೆದಿದೆ. ತಪ್ಪಿದೆ. ಪದ್ಯಗಳು ೧೦೧. ವೃಷಭಸ್ತುತಿ (ಬಸವ ಸ್ತೋತ್ರ) ರೂಪವಾಗಿಯೂ ವೀರಶೈವವೇದಾಂತ ಪ್ರತಿಪಾದಕವಾಗಿಯೂ ಇದೆ. ಪ್ರತಿ ಪದ್ಯವೂ 'ಬಾಳ್ವನವ ಕೃತಾರ್ಥನು, ಅರಿದನವ ಕೃತಾರ್ಥನು, 'ತಿಳಿದನವ ಕೃತಾರ್ಥನು' ಮುಂತಾದುವುಗಳಿಂದ ಮುಗಿಯುತ್ತದೆ. ಕವಿ 'ಗುರುಬಸವ' ನೆಂದು ಕರ್ಣಾಟಕ ಕವಿ ಚರಿತ್ರೆಯಲ್ಲಿ (ಸಂಪುಟ ೨, ಪುಟ ೭೪) ಹೇಳಿದೆ.

No. 548. ವೃಷಭ ಗೀತೆ.

VṚṢABHA GĪTE.

Substance, palm-leaf. Size, 12 5/16 × 1 1/8 inches. Pages, 4. Lines, 5 on a page. Character, Kannaḍa. Condition, much injured. Appearance, old.

Begins on fol. 12*b* of the manuscript described under No. 300 *ante*.

Contains 13 stanzas only complete.

Same work as the above.

(ವಿ.ವಿ.)—

ಅಸಮಗ್ರವಾಗಿದೆ. (ಮೊದಲಿಂದ ಹದಿಮೂರು ಪದ್ಯಗಳು ಪೂರ್ಣವಾಗಿವೆ. ಹದಿನಾಲ್ಕನೆಯದು ಅಸಂಪೂರ್ಣವಾಗಿದೆ.) ಹೆಚ್ಚು ಶಿಥಿಲವಾಗಿದೆ. ಉತ್ತಮವಾದ ಲಿಪಿ. ಇದರೊಡನೆ ಇನ್ನೂ ಹಲವು ಪುಸ್ತಕಗಳು ಕೂಡಿವೆ. ಅವಾವುವೆಂಬುದನ್ನು ಹಿಂದಣ ೩೦೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 549. ಶಂಕರೇಶ್ವರ ಶತಕ.

ŚANKARĒŚVARA ŚATAKA.

Substance, Srītāla. Size, 6 × 1 ⅛ inches. Pages, 36. Lines, 9 on a page. Character, Kannada. Condition, much injured. Appearance, old. Mode of writing, fair.

Begins on fol. 35*a* of the manuscript described under No. 444 ante.

Complete in 103 stanzas.

A work on Vīraśaiva system, written in Vṛtta. The name of the author is Śankaradēva.

Beginning :—

ಉ ॥ ಮಾ ॥ ಶ್ರೀಯುಗಜಾಮನೋವನವಸಂತ ನಿರಂತರ ನಿರ್ವಿಕಾರ ಪ್ರ ।
ಸ್ಯಾಯುತ ಕೀರ್ತಿ ದಿಗ್ಭರಿತಮೂರ್ತಿ ನಿಜಾಶ್ರಿತಭಕ್ತಿಭಾವನಾ ॥
ಪ್ರೀಯ ತ್ವದೀಯದೇವಮಯದೇಶ ಭಯಾಭಯದೇನ ದೇವತಾ । (?)
ರಾಯ ವಿಮಾಯ ಸರ್ವಗತಕಾಯ ನಮೋ ಗುರುಶಂಕರೇಶ್ವರಾ! ॥

ಕಂ ॥ ಪರಪುರುಷಾರ್ಥಮಂ ಪರಹಿತಾರ್ಥಮನಗ್ಗಳ ಪಾರಮಾರ್ಥಮಂ ।
ನಿರುಪಮ ಲಿಂಗನಿಷ್ಠೆಯ ಮಹಾಗಣತುಷ್ಟಿಯನೀಶಗೋಷ್ಠಿಯಂ ॥
ಸುರುಚಿರ ಸತ್ಯಶಾಂತಿಕ್ಷಮೆಯಂ ದಮೆಯಂ ಅಭಯಪ್ರಸಾದಮಂ । (?)
ಕರುಣಿಸು ದೇವ ಮೂಜಗದ ಜೀವರಿಗಂ ಗುರುಶಂಕರೇಶ್ವರಾ ! ॥

ಉ ॥ ಮಾ ॥ ಎತ್ತಣ ದೇಹವೆತ್ತಣ ಮನೋಭ್ರಮೆ ಯೆತ್ತಣ ಮಾಯ ಮೋಹ ತಾ ।
ನೆತ್ತಣ ನಿದ್ರೆ ನೀರಡಿಕೆ ಯೆತ್ತಣ ಕಾಮವಿಕಾರ ನೋಡು ನೋ- ॥
ಡೆತ್ತಣ ಪುಣ್ಯಪಾಪಸುಖದುಃಖದ ಮೋಹಭಿಲಾಷೆಯೆತ್ತಣಿಂ- ।
ದೆತ್ತ ಮನುಷ್ಯದನ್ಮವೆನಗಾಯ್ತು ಕಟಾ ಗುರುಶಂಕರೇಶ್ವರಾ! ॥
ಏನಿದಱಿಂದ ಸಿದ್ಧಿ ತನಗೇನಿದಱಿಂದಭಿವೃದ್ಧಿ ಜೀವನಿಂ ।
ತೇನಿದಱಿಂದ ಪುಣ್ಯಗತಿಯೇನಿದಱಿಂ ಪ್ರತಿಪಾದುದಕ್ಕಟಾ ॥

ಹೀನತರಪ್ರಪಂಚಮನಡರ್ದು ತೊಡರ್ದು ನಿರರ್ಥದುರ್ಭವಾಂ।
ಭೋನಿಧಿಯಲ್ಲಿ ಬೀಳುತಿದೆ ನೋಡಿದೆಯಾ ಗುರುಶಂಕರೇಶ್ವರಾ! ॥

End :—

ಚಂ. ॥ ಎಡಬಲದಲ್ಲಿ ವಿಷ್ಣು ಶತಕೋಟಿ ಯಜಂ ಶತಕೋಟಿ ಹಿಂದುಮುಂ।
ದಡಸಿದ ರುದ್ರ ಭದ್ರಗಣ ಸಾವಿರಕೋಟಿ ಹಸಾದ ಜೀಯ ಬಾ- ॥

ಳೊಡೆಯನೆಯೆಂದು ಕೀರ್ತಿಸೆ ಕರಾಂಬುಜಪೀಠದೊಳೊಪ್ಪಿಯೋಲಗಂ।
ಗೊಡುತ ನಿಜಾನುಭಾವ ಸುಖಿಯಾಗಿರು ನೀಂ ಗುರುಶಂಕರೇಶ್ವರಾ! ॥

ಅನಿಮಿಷರಾಜದುಂದುಭಿ ಧಳಂಧಳಮೆಂದೆನೆ ಪುಷ್ಪವೃಷ್ಟಿ ಭೋ।
ರೆನೆ ಭುವನತ್ರಯಂಗಳ ಜನಂಗಳು ಜೀಯೆನೆ ದೇವರಾವು ಜೇ ॥

ಯೆನೆ ಗಣನಾಥರುಗ್ಗಡಿಸೆ ತುಂಬುರರೆನ್ನ ಕರಾಗ್ರಪೀಠದೊ।
ಳ್ಘನ ಸುಖಸಂತತಾಗಿ ಜೆಲೆಯಾಗಿರು ನೀಂ ಗುರುಶಂಕರೇಶ್ವರಾ! ॥

[illegible] ॥ ಮಾ. ॥ ಬೇಡಿದವರ್ಗೆ ಬೇಡಿದ ಪದಂಗಳ ನೀವುತೆ ಬೇಡಲೊಲ್ಲದಾ।
ರೂಢಗಣಾಗ್ರಗಣ್ಯರಿಗೆ ನಿನ್ನನೆ ವ್ರೊಚ್ಚತಗೊಟ್ಟು ಸೌಖ್ಯಮಂ।
ನೋಡುತೆ ಯೆನ್ನ ಸತ್ಕರಸರೋರುಹಪೀಠದ ಮೇಲೆ ಮೂರ್ತಿಗೊಂ।
ಡಾಡುತ ಪಾಡುತಂ ವಿಜಯನಾಗಿರು ನೀಂ ಗುರುಶಂಕರೇಶ್ವರಾ! ॥

ಚಂ. ॥ ಜಯ ಜಯ ರುದ್ರ ಭದ್ರ ಜಯ ಮಂಗಳಮೂರ್ತಿಯನಾಥಬಂಧುವೇ।
ಜಯ ಜಯ ಜಾಹ್ನವೀಧರ ಜಯಾ ಜಯ ಸಿದ್ಧ ಶಿವಾತ್ಮಸಿಂಧುವೇ ॥

ಜಯ ಜಯ ಮೆಂದು ಕೀರ್ತಿಸುವ ಮಂಗಳಪಾಠಕಕೋಟಿಯಂ ನಿರಾ-
ಮಯಕರಪೀಠದೊಳ್ನಿಲಿಸಿ ಪಾಲಿಸು ನೀಂ ಗುರುಶಂಕರೇಶ್ವರಾ! ॥

೧೦೧. ॥ ಮಾ. ॥ ಈ ಶತಕ ಪ್ರಬಂಧವ ಮಹೋತ್ಸವದಿಂ ಮನಮುಟ್ಟಿ ಚಿತ್ತದೊಂ।
ದಾಸಯಬಟ್ಟು ಮುಕ್ತಿಗೊಡಬಟ್ಟು ಕರಂ ಕಿವಿಗೊಟ್ಟು ಕೇಳ್ವ ವಿ- ॥
ಶ್ವಾಸಸುಶೇಷಭೂಷಣನ ಪಾದದೊಳಂ ಮನೆಗಟ್ಟಿಕೊಂಡು ತಾಂ।
ಭಾಸುರಭಕ್ತಿಭಾವನೆಯೊಳಿರ್ಪ ಕಣಾ! ಗುರುಶಂಕರೇಶ್ವರಾ ॥

Colophon :—

ಶಂಕರದೇವರು ನಿರೂಪಿಸಿದ ಶತಕಂ ಸಂಪೂರ್ಣಂ.

(ವಿ.ವಿಂ)—

ಸಮಗ್ರ. ಅತ್ಯಂತ ಶಿಥಿಲ. ಲಿಪಿ ಉತ್ತಮ. ಇದರೊಡನೆ ಇನ್ನೂ ಕೆಲವು ಗ್ರಂಥಗಳು ಬರೆದು ಸೇರಿಸಿವೆ. ಅವಾವುವೆಂಬುದನ್ನು ಹಿಂದಣ ೪೪೪ ನೆಯ ನಂಬರಿನಲ್ಲಿ ನೋಡಿ ತಿಳಯುವುದು.

ಇದು ವೃತ್ತದಲ್ಲಿ ಬರೆದಿದೆ. ಪದ್ಯಗಳು ೧೦೩. ಪ್ರತಿ ಪದ್ಯವೂ 'ಗುರುಶಂಕರೇಶ್ವರಾ' ಎಂದು ಮುಗಿಯುತ್ತದೆ. ವೀರಶೈವ ವೇದಾಂತವನ್ನು ಬೋಧಿಸುತ್ತದೆ. ಕವಿ ಶಂಕರದೇವನು. ಈತನು ಶಂಕರಕಂದ ಎಂಬ ಗ್ರಂಥವನ್ನೂ ಬರೆದಿದ್ದಾನೆ.

No. 550. ಶಿವಮಹಿಮ ಶತಕ.
ŚIVAMAHIMA ŚATAKA.

Substance, Srītāla. Size, 6 × 1$\frac{11}{16}$ inches. Pages, 39. Lines, 9 on a page. Character, Kannada. Condition, much injured. Appearance, old. Mode of writing, fair.

Begins on fol. 52*b* of the MS. described under No. 445 ante.

Complete in 115 stanzas.

On the greatness of God Śiva. By Chennamallikārjuna who lived in about 1560 A.D. The commentary on Gurustōtra is also attributed to this author.

Beginning :—

ಶ್ರೀಮತ್ಪದ್ಮಜ ಪದ್ಮನಾಭವಿನುತ ಶ್ರೀಪಾದಪದ್ಮದ್ವಯಾ ।
ಕಾಮೋದ್ಗರ್ವತಮಪ್ರಚಂಡಕರಮಾರ್ತಾಂಡ ಪ್ರಶಸ್ತವ್ರತಿ ॥
ಸ್ತೋಮಸ್ವಾಂತ ನಿಶಾಂತಕಾಂತ ನಿರುಪಾಧಿಜ್ಯೋತಿ ಮೋಕ್ಷಪ್ರದ ।
ಸ್ವಾಮಿ ಶ್ರೀಗಿರಿನಾಥ ರಕ್ಷಿಸೊಲವಿಂ ಶ್ರೀಚೆನ್ನಮಲ್ಲೇಶ್ವರಾ ! ॥
ಹರಿಪದ್ಮಾಸನರಾವ ದೇವಿಯೊಡೆಯೊಳ್ನೀಪಾರ್ಗ್ರಮಂ ಸಾರ್ಚವ ।
ವರ್ರಯೋಗೀಶ್ವರವಾರವಾವ ಪರಶಕ್ತಿಧ್ಯಾನಮಂ ಮಾಳ್ಪುದಾ ।
ವರದಿಂ ವೇದಶಿರೋಕ್ತಿ ಯಾವ ಶಿವನಂ ಸಂಕೀರ್ತನಂಗೆಯ್ಗುಮಾ ।
ಗಿರಿಜಾದೇವಿಯ ಚಿತ್ತವಲ್ಲಭ ಜಯ ಶ್ರೀಚೆನ್ನಮಲ್ಲೇಶ್ವರಾ ! ॥
ಬಿಡದಮ್ಮಪ್ಪೆಗೆ ಕಂದನಾಗಿ ಮೊಲೆಯುಂಡ್ಯೈ ಚೆನ್ನನೊಲ್ದಟ್ಟಿಱಿಂ ।
ದೊಡನೂಡಲ್ಕುಣಕಲ್ತುನಾಡೆ ನಡೆಪಾಡಲ್ಕಲ್ತು ನಂಬ್ಯಣ್ಣನಿಂ ॥
ನುಡಿಯಂ ಕಿನ್ನರನಿಂದೆ ಕಲ್ತು ಶಿಶುಭಾವಂದಾಳ್ದು ನೀ . ಟ್ಪರಲ್ ।
(ನ್ಮೃಡನೇ) ದೇವರೊಳಾದ್ಯನೆಂದು ನಿಗಮಂ ಶ್ರೀಚೆನ್ನಮಲ್ಲೇಶ್ವರಾ ! ॥

End :—

ಮ.೧ ವಿ.॥ ನೊಸಲೊಳ್ ಶ್ರೀಭಸಿತಂ ಗಳಸ್ಥವರಸದ್ರುದ್ರಾಕ್ಷಿ ಜಿಹ್ವಾಗ್ರದ- ।
ಲ್ಲಸಮುಶ್ರೀಶಿವಮಂತ್ರ ಮೊಪ್ಪುತಿರಲಾ ಲಿಂಗಾಂಗಸಂಬಂಧದಿಂ- ॥
ದೆಸಕಂಬೆತ್ತಿರುತಿರ್ಪನಾವನವನೇ ನೀನೆಂದು ವೇದೋಕ್ತಿ ತಾ ।
ಸುಸಿರಲ್ ಪಾಮರರಾದ ಪಾರ್ವರಱಿಯರ್ ಶ್ರೀಚೆನ್ನಮಲ್ಲೇಶ್ವರಾ ! ॥
ಜಡಜಾತೇಕ್ಷಣ ಹೇಮಗರ್ಭರಭವಾ ನಿನ್ನಂಘ್ರಿಚೂಡಂಗಳಂ ।
ಬಿಡದೇಂ ನೋಳ್ಪವೆನುತ್ತೆ ಪೊಣ್ದು ಕಿಟಿಗೃಧ್ರಾಕಾರಮಂ ತಾಳ್ಪುತಾ ॥
ವಡಿಯಿಟ್ಟೀಕ್ಷಿಸ ಬಲ್ಮೆಗೆಟ್ಟರವಱಿತೊಳ್ ಶ್ರೀಕಣ್ಣಪಂ ಮೆಟ್ಟುವೆ- ।
ಕ್ಕಡದಲ್ಲಿರ್ಪ ಮಹತ್ವಮುಂಟೆ ಬಗೆಯಲ್ ಶ್ರೀಚೆನ್ನಮಲ್ಲೇಶ್ವರಾ
೬೩ ॥ ಭಕ್ತಾನಂದಸುಧಾಬ್ಧಿವರ್ಧನಲಸದ್ರಾಕಾಕುರಂಗಾಂಕ ಸ ।
ದ್ಭಕ್ತಸ್ವಾಂತಮನೋಜ್ಞಮಾನಸಸರಚ್ಚಂಚನ್ಮರಾಳೇಶ್ವರಾ ! ॥
ಭಕ್ತಾಭೀಷ್ಟಫಲಪ್ರದಾತೃ ನಿಜಭಕ್ತಿಜ್ಞಾನವೈರಾಗ್ಯಮಂ ।
ಭಕ್ತಾಧೀನಕೃಪಾಬ್ಧಿಯೆನ್ನೊಳಱುಗೆಯ್ ಶ್ರೀಚೆನ್ನಮಲ್ಲೇಶ್ವರಾ ! ॥

ಮ.॥ ವಿ.॥ ಅಸಮಾನಪ್ರಗುಣಸ್ವಭಾವ ಸಕಲ ಶ್ರೀವೀರಮಾಹೇಶ್ವರಾಂ ।
ಘ್ರಿಸರೋಜಾತಮರಂದ ಪಾನಮದಿತೇಂದಿಂದಿರ ಪ್ರೋದ್ಭವಮಾ- ॥
ನಸಪಿದ್ವತ್ಕವಿ ಚೆನ್ನಮಲ್ಲರಚಿತಂ ವೇದಾಂತಸಾರಾರ್ಥದಿಂ ॥
ದೆಸೆದಿರ್ಪೀ ಶತಕಂ ಸಮಾಪ್ತಮನಘಂ ಶ್ರೀಚೆನ್ನಮಲ್ಲೇಶ್ವರಾ ! ॥

ಶ್ರುತಿಗಳ್ ಶ್ರೀಗಿರಿನಾಥ ನಿನ್ನ ಮಹಿಮಾಂಭೋರಾಶಿಯೊಳ್ಪ್ರಂಚಿಸಿಂ ।
ನುತಿಸಲ್ಕಾಜನಂತ ಕಾಲವಜಕೃಷ್ಣರ್ಗಿನ್ನೆ ಲೀಲಾಸುಖ ॥
ಪ್ರತಿವಾನರ್ಕಳಿನಲ್ಕೆ ವಾಕ್ಕರಣಿವಿಂದೇನಪ್ಪುದಾ ನಿನ್ನಪ- ।
ಹ್ನುತ್ತಿಯಂ ಮಾಡಿದೆನೆಂಬ ತಪ್ಪನೊಳಕೊಳ್ ಶ್ರೀಚೆನ್ನಮಲ್ಲೇಶ್ವರಾ ! ॥

ಪರಶಕ್ತಿಪ್ರಯುತಂ ಪರಾತ್ಪರತರಂ ಪಂಚಾನನಂ ಪಾಪಸಂ ।
ಹರಣಂ ಪನ್ನಗಭೂಷಣಂ ಸರಿಹೃತಾಂಭೋಜಾತನೇತ್ರಾತ್ಮಜಂ ॥
ಪರಿಪೂರ್ಣಂ ಪಶುಪಂ ಪಗೇತಪತಿಗರ್ವಾರ್ಣಂಬುಪ್ರದಸ್ಪರ್ಶನಂ ।
ಪರಮೇಶಂ ಪರಿಪಾಲಿ ಕೆಮ್ಮನೊಲವಿಂ ಶ್ರೀ ಚೆನ್ನಮಲ್ಲೇಶ್ವರಾ ! ॥

ಕಂ ॥ ಶ್ರುತಿಸೂಕ್ತಿರತ್ನಮಾಲಾ- ।
ಸ್ತುತಿಯಂ ಗುರುಕರುಣದಿಂದೆ ಪೇೞ್ದಿಂ ಸ್ವಯಶೋ- ॥
ಜಿತ ಮಲ್ಲಿಕಾರ್ಜುನಂ ಪರಿ- ।
ಹೃತಪರಮತ ಚೆನ್ನಮಲ್ಲಿಕಾರ್ಜುನದೇವಂ ॥

ಶಿವಮಹಿಮಾಶತಕಂ ವೈ । (?)
ಷ್ಣವನಾಗದ್ವೈರಿತಿ ಕರ್ಮಿಗಳ ಹೃಚ್ಛಲ್ಯಂ ॥
ಪ್ರವರ ಶಿವಭಕ್ತಪರಿಷ- ।
ದ್ಭವನದೊಳಿದು ಬೆಳಪ ರತ್ನದೀಪಿಕೆಯೆನಿಕುಂ ॥

Colophon:—

ಶಿವಮಹಿ [ಮಾ] (ಮ) ಶತಕಂ ಸಮಾಪ್ತಂ.

(ವಿ.ವಿ.)—

ಸಮಗ್ರ. ಅತ್ಯಂತ ಶಿಥಿಲ ಲಿಪಿ ಉತ್ತಮ. ಇದರೊಡನೆ ಇನ್ನೂ ಕೆಲವು ಗ್ರಂಥಗಳು ಬರೆದು ಸೇರಿಸಿವೆ. ಅವಾವುವೆಂಬುದನ್ನು ಹಿಂದಣ ೪೪೫ ನೆಯ ನಂಬರಿನಲ್ಲಿ ನೋಡಿ ತಿಳಿಯಬಹುದು.

ಇದು ವೃತ್ತದಲ್ಲಿ ಬರೆದಿದೆ. ಆದರೆ ಕಡೆಯಲ್ಲಿ ಎರಡು ಕಂದಪದ್ಯಗಳಿವೆ. ಪದ್ಯಗಳು ೧೧೫. ಪ್ರತಿ ಪದ್ಯವೂ ‘ಶ್ರೀಚೆನ್ನಮಲ್ಲೇಶ್ವರಾ’ ಎಂದು ಮುಗಿಯುತ್ತದೆ. ಶಿವನ ಮಹಿಮೆಯನ್ನು ವರ್ಣಿಸುತ್ತದೆ. ಇತರ ಮತ ದೈವಗಳ ವಿಡಂಬನವೂ ಕಂಡುಬರುತ್ತದೆ. ಪದ್ಯಗಳಲ್ಲಿ ಪದಗಳ ಬಂಧವು ಚೆನ್ನಾಗಿದೆ. ಕವಿ ಚೆನ್ನಮಲ್ಲಿಕಾರ್ಜುನನೆಂಬುವನು. ಈತನು ಗುರುಸ್ತೋತ್ರದ ಟೀಕೆಯೆಂಬ ಇನ್ನೊಂದು ಗ್ರಂಥವನ್ನು ಬರೆದಿರುವ ಹಾಗೆಯೂ, ಇವನ ಕಾಲವು ಸು ೧೫೬೦ ಎಂದೂ, ಗುರು ಶಾಂತಲಿಂಗನೆಂಬುದಾಗಿಯೂ ಕವಿಚರಿತ್ರೆ ಸಂಪುಟ ೨, ಪುಟ ೨೯೪) ಯಲ್ಲಿ ಬರೆದಿವೆ. ಉಳಿದ ವಿಷಯಗಳನ್ನು ಉದಾಹೃತಭಾಗಗಳಿಂದ ತಿಳಿಯಬಹುದು.

No. 551. ಶಿವಲೆಂಕಮಂಚಣ್ಣ ವಚನ.

ŚIVALEṄKAMAÑCAṆṆA VACANA.

Substance, palm-leaf. Size, 12 × 1⅛ inches. Pages, 6. Lines, 4 on a page. Character, Kannaḍa. Condition, much injured. Appearance, old. Mode of writing, not bad and free from mistakes.

Begins on fol. 48*a* of the manuscript described under No. 498 ante.

Incomplete.

Contains ten vacanas on some of the Vīraśaiva doctrines. By Śivaleṅkamañcaṇṇa who lived in about 1160 A.D.

Beginning :—

ಇಚ್ಛಾಶಕ್ತಿ ಮರ್ಕಟರೂಪಾದಲ್ಲಿ, ಕ್ರಿಯಾಶಕ್ತಿ ವಿಹಂಗರೂಪಾದಲ್ಲಿ, ಜ್ಞಾನಶಕ್ತಿ ಪಿಪೀಲಿಕಾ ರೂಪಾದಲ್ಲಿ ತ್ರಿವಿಧಮಾರ್ಗರೂಪಾಯಿತು. ಕಾಂಬುದು ಕಾಣಿಸಿಕೊಂಬುದು ಕಂಡೆನೆಂದು ನಿಶ್ಚಯವಾದಲ್ಲಿ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಮಹದಾಕಾರದಲ್ಲಿ ವಾಸಿತನಾಗಿದ್ದ.

* * * *

End :—

ವ್ರತಸ್ಥನಾದಲ್ಲಿ, ಕಾಮಕ್ರೋಧಲೋಭಮೋಹಮದಮಾತ್ಸರ್ಯಂಗಳಲ್ಲಿ ತಲೆದೋಱದೆ ತನ್ನಾತ್ಮ ಸತಿ ಲಿಂಗಪುರುಷನಾಗಿ ತನ್ನ ಸುಕಾಯಕದಿಂದಾದ ದ್ರವ್ಯಂಗಳ ಗುರುಲಿಂಗಜಂಗಮದ ಮುಂದಿಟ್ಟು ಅರ್ಪಿತವಹನಕ ದೃಕ್ಕು ತುಂಬಿನೋಡಿ ಮನದಣಿವನಕ ಹರುಷಿತನಾಗಿ ಮಿಕ್ಕ ಶೇಷವ ಇಷ್ಟಲಿಂಗ ಪ್ರಾಣಲಿಂಗಕ್ಕೆ ತುಷ್ಟಿಯ ಮಾಡಿಪ್ಪ ಮಹಾಭಕ್ತಂಗೆ ಸಂಸಾರವೆಂಬ ತೊಟ್ಟು ಹರಿಯಿತ್ತು. ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ವ್ರತವೆಂಬ ನಾಮಕ್ಕೊಳಗಾಯಿತು.

(ವಿ.ವಿ.)—

ಅಸಮಗ್ರ. ಅತಿಶಿಥಿಲ. ಲಿಪಿಯು ಸಾಮಾನ್ಯವಾಗಿದೆ. ತಪ್ಪುಗಳಿಲ್ಲ.

ಈ ಗ್ರಂಥವು ವಚನರೂಪವಾಗಿದೆ. ಇದರಲ್ಲಿ ವಚನದಶಕವಿದೆ. ಪ್ರತಿಯೊಂದು ವಚನವೂ "ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ" ಎಂಬಂಕಿತವನ್ನೊಳಗೊಂಡಿದೆ. ವೀರಶೈವಪದ್ಧತಿಗಳನ್ನು ತಿಳಿಸುವ ಈ ಗ್ರಂಥವು ಸುಮಾರು ೧೧೬೦ (ಕ್ರಿ.ಶ.) ರಲ್ಲಿದ್ದ ಶಿವಲೆಂಕಮಂಚಣ್ಣನಿಂದ ಬರೆಯಲ್ಪಟ್ಟದೆಂದು ತೋರುತ್ತದೆ.

No. 552. ಶಿವಾಧವ ಶತಕ.

ŚIVĀDHAVA ŚATAKA.

Substance, Śrītāla. Size, 4 $\frac{7}{16}$ × 1⅜ inches. Pages, 7. Lines, 11 on a page. Character, Kannaḍa. Condition, very much injured. Appearance, old. Mode of writing, not bad.

Begins on fol. 1*a* of the manuscript described under No. 446 ante.

Contains the stanzas from 80 to the end, but 80th stanza is incomplete.

A work on some of the doctrines of Vīraśaiva system. By Māyidēva.

Beginning :—

. . . . |
. . . . ||
. . . . |
ಲ ವೊತಿನ ಬಣ್ಣಮದೇಂ ಶಿವಾಧವಾ! ||

ಉ.|| ಮಾ.|| ಕಾಯಮುಮಿಂದ್ರಿಯ . . . ಲಿಂಗ ಕಲಾಪ್ರಸಾದಪೂ- |
ರಾಯ ಪುನೀತ ಚಿತ್ಪರಮಲಕ್ಷಣ . ಮನು . . . . . ||
. . . . . ಪಂಚಗುಣಮಿಲ್ಲ ವಿಚಾರಿಸೆ ದಗ್ಧವಸ್ತ್ರದ |
ನ್ಯಾಯದ . . . . . ಶಿವಾಧವಾ! ||

ಚಂ.|| ಪತಿಹಿತೆ ಧರ್ಮಚಾರಿಣಿ . . . . . ಸಿಮುಪ್ಪವೊಲ್ |
ಚತುರತೆ ರೀತಿ . . ಕಡುಜಾಣೆ ಮೃದೂಕ್ತಿ . . . . . ||
. . ಯನದಿತ್ತ ಬಲ್ಲಕು . ವೈಕಸಮರ್ಪಿತಚಿತ್ತದಿಂ ದೃಢ- |
ವ್ರತ . . . ನಿರ್ಪ ಭಕ್ತ . . ನೆಂತಱಿವಂ ಶಿವಾಧವಾ ! ||

End :—

ಚಂ.|| ತುದಿಮೊದಲಿಲ್ಲದಿಂದ್ರಧನು ಮೂಡಿದ ಹಾಗೆ ಶರೀರಭಾವಮೆಂ |
ಬುದೆ ಸಹಜಂ ಪರಾಪರವಿಕಲ್ಪವಿಹೀನ ಶಿವೈಕ್ಯಭಕ್ತಿಯೋ ||
ಗದ ಪರಮಾರ್ಥಮಂ ತಿಳಿದ ಲಿಂಗನಿಜೈಕ್ಯಸುಖಾಸ್ಪದಂಗೆ ತ |
ಪ್ಪದು ಭಯ ಕರ್ಮಭೋಗಫಲಮಿಲ್ಲದೆ ಪೋಪುದಱಿಂ ಶಿವಾಧವಾ ||

ಉ.|| ಮಾ.|| ಈ ಪರಿಷಟ್ಸ್ಥಲಾತ್ಮಕವಿಶಿಷ್ಟಮಹತ್ತರ ಭಕ್ತಿಯೋಗ ವಿ |
ದ್ಯಾಪರಮಾರ್ಥತತ್ವಮಯಮಪ್ಪ ಲಸಚ್ಛತಕಪ್ರಬಂಧಮಂ ||
ರೂಪಿಸಿ ಮಾಯಿದೇವವಿಭು ಲಕ್ಷಣಲಕ್ಷಿತವಾಗಿ ಪೇಳ್ದನೊ |
ಲ್ದಿಪ್ಪುರ ಸೋಮನಾಥ ಚರಣಾಂಬುಜಷಟ್ಚರಣಂ ಶಿವಾಧವಾ ! ||

Colophon :—

ಶಿವಾಧವಶತಕಂ ಸಮಾಪ್ತಂ.

(ವಿ-ವಿ.)—

ಇದರಲ್ಲಿ ೮೦ ನೆಯ ಪದ್ಯದಿಂದ ಕೊನೆಯ ವರೆಗೂ ಇದೆ. ೮೦ ನೆಯ ಪದ್ಯವು ಅಪೂರ್ಣವಾಗಿದೆ. ಪುಸ್ತಕವು ಅತ್ಯಂತ ಶಿಥಿಲವಾದ ಕಾರಣ ಆದಿಭಾಗದಲ್ಲಿ ಕೆಲವು ಪದ್ಯಗಳು ಪಾತವಾಗಿವೆ. ಲಿಪಿ ಸಾಮಾನ್ಯವಾಗಿದೆ. ಇದರೊಡನೆ ಇನ್ನೂ ಕೆಲವು ಗ್ರಂಥಗಳು ಬರೆದು ಸೇರಿಸಿವೆ. ಅವಾವುವೆಂಬುದನ್ನು ಹಿಂದಣ ೪೪೬ ನೆಯ ನಂಬರಲ್ಲಿ ನೋಡಿ ತಿಳಿಯುವುದು.

ಇದು ಉತ್ಪಲಮಾಲಾ ಚಂಪಕಮಾಲಾ ಮುಂತಾದ ವೃತ್ತಗಳಲ್ಲಿ ಬರೆದಿದೆ. ಪದ್ಯಗಳು ೧೦೧. ಪ್ರತಿಪದ್ಯವೂ 'ಶಿವಾಧವಾ' ಎಂದು ಮುಗಿಯುತ್ತದೆ. ವೀರಶೈವ ಸಿದ್ಧಾಂತಾನುಸಾರವಾಗಿ ಭಕ್ತಿ, ಜ್ಞಾನ, ವೈರಾಗ್ಯ ವಿಷಯಗಳನ್ನು ಬೋಧಿಸುತ್ತದೆ. ಈ ಗ್ರಂಥವನ್ನು ಕವಿ

ಮಾಯಿದೇವನು ' ಷಟ್ಸ್ಥಲಾತ್ಮಕ ವಿಶಿಷ್ಟ ಮಹತ್ತರ ಭಕ್ತಿಯೋಗ ವಿದ್ಯಾಪರಮಾರ್ಥ ತತ್ತ್ವ ಮಯಮಪ್ಪ ಅಸತ್ಪ್ರಬಂಧಮಂ' ಎಂದು ವಿಶೇಷಿಸಿ ಹೇಳಿದ್ದಾನೆ. ಹೆಚ್ಚು ವಿಷಯಗಳಿಗಾಗಿ ಕರ್ಣಾಟಕ ಕವಿಚರಿತ್ರೆ (ಸಂಪುಟ ೨, ಪುಟ ೩೦) ಯನ್ನೂ, ಮೇಲೆ ಉದಾಹರಿಸಿರುವ ಭಾಗ ಗಳನ್ನೂ ನೋಡುವುದು.

No 553. ಶಿವಾಧವಶತಕ.

ŚIVĀDHAVA ŚATAKA.

Substance, Śrītāla. Size, 6 × 9 1/8 inches. Pages, 2. Lines, 9 on a page. Character, Kannaḍa. Condition, much injured. Appearance, old.

Begins on fol. 1*a* of the manuscript described under No. 445 ante.

Contains the stanzas from 88 to 94 but 88th and 94th incomplete

Same work as the above.

ಪಿ.ವಿ.)—

ಇದರಲ್ಲಿ ೮೮ ರಿಂದ ೯೪ ನೆಯ ಪದ್ಯದ ವರೆಗಿದೆ. ೮೮, ೯೪ ನೆಯ ಪದ್ಯಗಳು ಅಪೂರ್ಣವಾಗಿದೆ. ಅತ್ಯಂತ ಶಿಥಿಲ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಗ್ರಂಥಗಳು ಬರೆದು ಸೇರಿಸಿವೆ ಅವಾವುವೆಂಬುವನ್ನು ಹಿಂದಣ ೪೪೫ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಇದರ ವಿಷಯವಾಗಿ ೫೫೨ ನೆಯ ನಂಬರನ್ನು ನೋಡುವುದು.

No. 554. ಶಿವಾವಲ್ಲಭ ಶತಕ.

ŚIVĀVALLABHA ŚATAKA.

Substance, Śrītāla. Size, 4 7/16 × 1 3/4 inches. Pages, 28. Lines, 11 on a page. Character, Kannaḍa. Condition, very much injured. Appearance, old. Mode of writing, not bad.

Begins on fol. 4*a* of the manuscript described under No 446 ante. Complete.

Similar to the work described under No. 552 ante. By Māyidēva

Beginning :—

ಶಾ ॥ ಶ್ರೀಮಚ್ಛಾಂಭವ ಭಕ್ತಿಯೋಗ ವಿಲಸನ್ನಿರ್ವಾಣ ನಿತ್ಯೋತ್ಸವ .
ಪ್ರೇಮಾನಂದ ರಸಾಬ್ಧಿವರ್ಧನ ಸದಾಚಾರ ಕ್ರಿಯಾಕೌಶಲಾ- ॥
ರಾಮೋದ್ದಾಮಗುಣ ಪ್ರಭೂತಮಹದೈಶ್ವರ್ಯಾನು ಭೂತಿ ಪ್ರಭಾ- ।
ಧಾಮಂ ತತ್ಪರಮಂ ಪದಂ ಗುರುಪದಂ ವಂದೇ ಶಿವಾವಲ್ಲಭಂ ॥
ಸಚ್ಚಿದ್ರೂಪ ಸುಖಾಕೃತಿ ಪ್ರಕೃತಿಸಿದ್ಧ ಪ್ರಸ್ಫುರ ಪ್ರತ್ಯಯೋ ।
ದ್ಯಚ್ಚೈತನ್ಯ ಕಲಾಪ್ರಕಸ್ತ ಪರಿಪೂರ್ಣಾದ್ಯಂತ ವರ್ಜ್ಯಾತ್ಮಭಾ- ॥

ಪ್ರೋಚ್ಚಾವಸ್ಥಿತ ದಿವ್ಯಲಿಂಗ ಘನತೇಜೋದ್ದಾಮ ಸೋಮೇಶ್ವರಂ ॥
ನಾಚ್ಚಿತ್ತೈವುರವಾಸಿನಂ ಪ್ರತಿಭಜಾಮಿ ತ್ವಾಂ ಶಿವಾವಲ್ಲಭಂ ॥

ಮ॥ ವಿ॥ ವೃಷಭೇಶಂ ಚೆನನಾಮಧೇಯ ವೃಷಭಾಚಾರ್ಯಂ ಗುಹೇಶಾಹ್ವಯಂ ।
ಭಿಷವಾಲಂ ಪರಿಪೂರ್ಣ ವಾಚಕಲಸದ್ವಾಚ್ಯಸ್ವರೂಪಪ್ರದಾ ॥
ದ್ವಿಷಯಾಖ್ಯ ಪ್ರಭುದೇವ ದೇವ ನೆಮಗೀಗಿಷ್ಟಾರ್ಥ ಸಿದ್ಧಿಸ್ಪೃಹಾ ।
ಸಷಿರಾಪೂರಣ ಕೃತ್ಪ್ರಸಾದ ಸುಖಮಂ ನಿತ್ಯಂ ಶಿವಾವಲ್ಲಭಾ ॥

ಶಾ ॥ ಭಕ್ತಿಜ್ಞಾನ ಪರಾನುಭೂತಿ ಪರಿಣಾಮಾನಂದ ಕಂದಾಂಕುರಂ ।
ವ್ಯಕ್ತಾವ್ಯಕ್ತಗುಣಾತಿರಿಕ್ತ ಶಿವಯೋಗೋದ್ಯತ್ಫಳಾಸ್ವಾದನೋ- ॥
ದ್ಯುಕ್ತಾನಾದಿ ವಿಮುಕ್ತ ಷಟ್ಸ್ಥಲ ಪದಾದ್ವೈತಾಂಗಲಿಂಗಾನು ಭಾ ।
ಪ್ರೋಕ್ತಾರ್ಥಂ ನಿಜಮುಕ್ತಿ ನಿನ್ನ ಕೃಪೆಯಿಂ ನಿನ್ನೊಳ್ಶಿವಾವಲ್ಲಭಾ ! ॥

End :—

ನಾನಾಭಾವ ವಿಕಲ್ಪ ಕಲ್ಪಿತಸರಾಗದ್ವೇಷ ವಿಜ್ಞಾನಕ- ।
ರ್ಮಾನುಷ್ಠಾನ ವಿಧಾನ ಲೋಕರಚನಾದಂಭೋಕ್ತಿಗಂ ಭಕ್ತಿಸಂ- ॥
ಧಾನಾಚಾರ ನಿರಾಸಕೃತ್ಪ್ರಬಲ ಸಮ್ಯಗ್ಭಕ್ತಿ ಯೋಗಕ್ರಿಯಾ- ।
ಜ್ಞಾನಧ್ಯಾನಪದೈಕ ನಿಷ್ಠಶತಕಂ ಪೂರ್ಣಂ ಶಿವಾವಲ್ಲಭಾ ! ॥

ಇದುಸಾಕ್ಷಾಚ್ಛಿವಯೋಗಷಟ್ಸ್ಥಲ ಪರಬ್ರಹ್ಮಾಂಗ ಲಿಂಗೈಕ್ಯ ಸೌ- ।
ಖ್ಯದ ಸದ್ಭಕ್ತಿ ಪರಾನುಭೂತಿ ಪರಮಜ್ಞಾನ ಕ್ರಿಯಾಚಾರ ಸಂ ॥
ಪದ ಸೌಭಾಗ್ಯ ಸಮಗ್ರ ಸದ್ಗುರು ಪದಪ್ರತ್ಯಕ್ಷ ಪ್ರಸಾದಾಕ್ಷರಾ ।
ಸ್ಪದವಾಕ್ಶ್ರೀಮುಖ ಮಾಯಿದೇವ ವಿಭುಸಂಪ್ರೋಕ್ತಂ ಶಿವಾವಲ್ಲಭಾ ! ॥

ಓಮಿತ್ಯಕ್ಷರಮಾತೃಕಾತ್ರಯದ ತದ್ವ್ಯಾಕ್ಯಸ್ಥ ಮಾತ್ರಾತ್ರಯಂ ।
ನಾಮಂ ಶ್ರೀಮದು[ಹ]ಮಾಯಿನಲ್ಪರತಗಂ ದೀರ್ಘಂ ಮಕಾರದ್ವಿತೀ ॥
ಯಾಮಾಸಪ್ರ[ಮ]ಥಮಾವ್ರಕಾರಮುಭಯಂಗೂಡಿರ್ದುಮಾಸಾರ್ಥಕಂ ।
ಸೋಮಂ ಮತ್ಪ್ರಭುವೈಪುರೀಶನೆನಲಾಂ ಧನ್ಯಂ ಶಿವಾವಲ್ಲಭಾ ! ॥

ಇದನಾರೋದಿದವರ್ಗೆ ಕೇಳ್ದವರಿಗು ದೃಢಭಕ್ತಿ ಯೋಗಕ್ರಿಯಾ ।
ಸ್ಪದ ಸಮ್ಯಕ್ಪಗಮುಪ್ರಸನ್ನ ಪರಿಪೂರ್ಣೈಕಾಗ್ರನಿಷ್ಠಾನು ಭಾ ॥
ತಿದ ಸಚ್ಚಿತ್ಸುಖರೂಪ ನಿಷ್ಕಳ ಮಹಾಲಿಂಗೈಕ್ಯ ನಿರ್ವಾಣಸಂ ।
ಪದ ನಿತ್ಯತ್ವಮನೀವುದಯ್ಯ ಕೃಪೆಯಿಂ ನೀನೇ ಶಿವಾವಲ್ಲಭಾ ! ॥

Colophon :—

ಶಿವಾವಲ್ಲಭ ಶತಕಂ ಸಂಪೂರ್ಣಂ.

(ವಿ. ವಿ.)—

ಸಮಗ್ರ. ಪದ್ಯಗಳು ೨೭ ರಿಂದ ೩೫ ರ ವರೆಗಿರುವ ಒಂದು ಓಲೆಯು ಹೋಗಿದೆ. ಅತ್ಯಂತ ಶಿಥಿಲ. ಲಿಪಿಸಾಮಾನ್ಯ. ಇದರೊಡನೆ ಇನ್ನೂ ಕೆಲವು ಗ್ರಂಥಗಳು ಬರೆದು ಸೇರಿಸಿವೆ. ಅವಾವುವೆಂಬುದನ್ನು ಹಿಂದಣ ೪೪೭ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಶಾರ್ದೂಲ ವಿಕ್ರೀಡಿತ, ಮತ್ತೇಭ ವಿಕ್ರೀಡಿತ ಮುಂತಾದ ವೃತ್ತಗಳಲ್ಲಿ ಬರೆದಿದೆ. ಪದ್ಯ ೧೦೩. ಪ್ರತಿಪದ್ಯವೂ 'ಶಿವಾವಲ್ಲಭ' ಎಂದು ಮುಗಿಯುತ್ತದೆ. ವೀರಶೈವಸಿದ್ಧಾಂತಾನು

ಸಾರವಾಗಿ ಭಕ್ತಿ ಜ್ಞಾನವೈರಾಗ್ಯ ವಿಷಯಗಳನ್ನು ಬೋಧಿಸುವುದು. ಗ್ರಂಥದಾದಿಯಲ್ಲಿ ಕವಿ ಗುರು, ವಿಪುರೀಶ್ವರ, ಬಸವ, ಚೆನ್ನಬಸವ, ಮುಂತಾದವರನ್ನು ಸ್ಮರಿಸಿದ್ದಾನೆ. ಕವಿ ಮಾಯಿದೇವನೆಂಬುವನು. ಹೆಚ್ಚು ವಿಷಯಗಳಿಗಾಗಿ ಉದಾಹೃತವಾಗಿರುವ ಭಾಗವನ್ನೂ ಕವಿ ಚರಿತ್ರೆ (ಸಂಪುಟ ೨, ಪುಟ ೭೦) ಯನ್ನೂ ನೋಡುವುದು.

No. 555. ಶಿವಾವಲ್ಲಭ ಶತಕ.

ŚIVĀVALLABHA ŚATAKA.

Substance, Śrītāla. Size, 6 × 1$\frac{11}{16}$ inches. Pages, 33. Lines, 6 on a page. Character, Kannaa. Condition, much injured. Appearance, old. Mode of writing, fair.

Begins on fol. 2*a* of the manuscript described under No. 455 ante. Wants 3 stanzas in the beginning otherwise complete,

Same work as the above.

(ವಿ-ವಿ).

ಆದಿಯಲ್ಲಿ ನಾಲ್ಕು ಪದ್ಯಗಳಿಲ್ಲ. ಕೊನೆಯವರೆಗೂ ಇದೆ. ಅತ್ಯಂತ ಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಗ್ರಂಥಗಳು ಬರೆದು ಸೇರಿಸಿವೆ. ಅವಾವು ವೆಂಬುದನ್ನು ಹಿಂದಣ ೪೫೫ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಇದರ ವಿಷಯವಾಗಿ ಹಿಂದಣ ೫೫೪ ನೆಯ ನಂಬರನ್ನು ನೋಡುವುದು.

No. 556. ಶೀಲಸಂಪಾದನೆ.

ŚĪLASAMPĀDANE.

Substance, palm leaf. Size, 7$\frac{7}{8}$ × 1$\frac{1}{8}$ inches. Pages, 22. Lines, 5 on a page. Character, Kannaḍa. Condition, much injured. Appearance, old. Mode of writing, good and free from mistakes.

Begins on fol. 87*a* of the manuscripts described under No. 463 ante.

Complete.

Deals with the sixty-six essential rules of good conduct according to Vīraśaiva religion.

By Pālkurike Sōma

Beginning :—

ಶ್ರೀಗುರು ಕಾರುಣ್ಯದಿಂದ ವೀರಮಾಹೇಶ್ವರ ತತ್ವದಲ್ಲಿ. ಸದಾಚಾರ ಸಂಪನ್ನರಾಗಿದ್ದ ಶರಣರು ಅರುವತ್ತಾರು ಶೀಲಂಗಳರಸುವ ಪರಿಯೆಂತೆಂದಡೆ—ಪೂರ್ವ ಜನ್ಮನಿವೃತ್ತಿಯಂಮಾಡಿ ಪುನರ್ಜಾತನೆನಿಸಿ ಲೌಕಿಕವನತಿಗಳೆದು ಅಂಗಲಿಂಗಪ್ರತಿಷ್ಠೆಯಂ ಮಾಡಿ ಪ್ರಣವ ಪಂಚಾಕ್ಷರಿಯ ಪ್ರಾಣಸ್ಥಲದಲ್ಲಿ ನಿ[ರ](ಲ)ಸಿ ಅನಾಚಾರಕ್ಕೊಳಗಾಗದೆ ಬರಿಯಮಾತಿನ ಬೊಮ್ಮವಂ

ಟಪ್ಪ್ಟ ನಿತ್ಯಾನಿತ್ಯ ವಿವೇಕವ ವಿಚಾರಿಸಿ ನೋಡಿದಂಥಾ ಅಸಾಧ್ಯಸಾಧಕರು ಅಭೇದ್ಯಭೇ[ದ್ಯ] (ದ)ಕರು ಇಂತೀ ವೀರಮಾಹೇಶ್ವರ ಸ್ಥಲವೆಂತೆಂದರೆ :—

* * * *

ಗುರುಲಿಂಗ ಜಂಗಮದಲ್ಲಿ ಗುಣಾ, ಅವಗುಣವನರಸದಿಹುದು ೨೦ ಶೀ. ಭವಿಸಂ, ಭವಿ ಗೋಷ್ಠಿ ಬಿಡುವುದು ೨೩ ಶೀಲ. ಅನ್ಯದೈವ ಭಜನೆಯಂಬಿಡುವುದು ೨೪ ಶೀಲ.

* * * *

End :—

ಇಂತಪ್ಪ ಶೀಲ ಅಗಮ್ಯ, ಅಗೋಚರ, ಅಪ್ರಮಾಣ, ವೆನಿಸಿತು. ಇಂತಪ್ಪ ಶೀಲವ ಚೆನ್ನ ಬಸವೇಶ್ವರದೇವರು ಮೊದಲಾದ ಎಲ್ಲಾ ಪುರಾತನರ ಕಾರುಣ್ಯದಿಂದ ಪ್ರಸಾದವ ಸ್ವೀಕರಿ[ಸೂ] (ಸುವು)ದು ೬೬ ಶೀಲ.

Colophon :—

ಶೀಲಸಂಪಾದನೆಯ ನಿರೂಪ ಸ [ಮಾರ್ಪಿತ.] (ಮರ್ಪಿತ) [ಮಾಪ್ತ]. ಪಾಲ್ಕುರಿಕೆಸೋಮೇಶ್ವರದೇವರ ನಿರೂಪಣೆ ಸಮಾಪ್ತ.

(ವಿ.ವಿ.)—

ಸಮಗ್ರ. ಉತ್ತಮವಾದ ಲಿಪಿ. ತಪ್ಪುಗಳಿಲ್ಲ. ಓಲೆಯಪ್ರತಿ. ಬಹಳ ಶಿಥಿಲ, ಇದ ರೊಡನೆ ಬರೆದು ಸೇರಿಸಿರುವ ಅನ್ಯ ಗ್ರಂಥಗಳನ್ನು ೪೬೩ ನೆಯ ನಂಬರಿನಲ್ಲಿ ನೋಡಿತಿಳಿಯು ವುದು.

ಗ್ರಂಥವು ಗದ್ಯರೂಪವಾಗಿದೆ. ಹಲವೆಡೆಗಳಲ್ಲಿ ಪ್ರಮಾಣರೂಪವಾಗಿ ಉದಾಹರಿಸಿದ ಸಂಸ್ಕೃತ ಶ್ಲೋಕಗಳು ಇವೆ. ಇದರಲ್ಲಿ ವೀರಶೈವರ ೬೬ ಶೀಲಗಳು ಪ್ರತಿಪಾದಿಸಲ್ಪಟ್ಟಿವೆ. ಗ್ರಂಥಕರ್ತನು ಪಾಲ್ಕುರಿಕೆ ಸೋಮನು. ಇವನ ವಿಷಯವಾಗಿ ೪೩೬ ನಂಬರನ್ನು ನೋಡುವುದು.

No 557. ಷಟ್‌ಸ್ಥಲಜ್ಞಾನ ಸಾರಾಮೃತ.

ṢĀTSTHALAJÑĀNA SĀRĀMṚTA.

Substance, palm-leaf. Size, 15 × 1¼ inches. Pages, 420. Lines, 5 on a page. Character, Kannada. Condition, slightly injured. Appearance, old. Mode of writing, bad and not free from mistakes.

Complete.

The Vīraśaivas have laid down for their guidance in the daily conduct of life, certain precepts grouped under six heads technically known as sthalas. A detailed account of these sthalas is given herein. The name of the author is Tōnṭada Siddhēśvara who lived in about 1470 A.D

Beginning :—

ನಿರವಯವ ನಿರಾಕುಳ ನಿರ್ದ್ವಂದ್ವ ನಿಜಸ್ವರೂಪಂ ನಿರ್ಭಾವ ನಿಷ್ಪುರುಷ ನಿರಂಜನ ನಿರಾಕಾರ ನಿರಾವರಣ ನಿರುಪಮ ನಿರ್ಗುಣ ನಿರಾಧಾರ ನಿರಾಲಂಬ ಸರ್ವಾಧಾರ ಸದಾಶಿವಂ ಅತ್ಯತಿ

ಷ್ಟದ್ವಶಾಂಗುಲಂ ನಿಶ್ಚಿಂತ ನಿರ್ಮಳ ನಿರಾಳಕಂ ಹರ ಹರಾ ಶಿವ ಶಿವಾ ಜಯ ಜಯತು ಶರಣಾ ಕರುಣಾಕರತ್ರಾಹಿಮಾಂ ಭಕ್ತವತ್ಸಲ ಮತ್ಪ್ರಾಣನಾಥ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ ॥ ೧ ॥

*　　　*　　　*　　　*

ಸತ್ಯದಲ್ಲಿ ನಡೆವುದು ಶೀಲ. ಸತ್ಯದಲ್ಲಿ ನುಡಿವುದು ಶೀಲ, ಸತ್ಯಸದಾಚಾರದಲ್ಲಿ ವರ್ತಿಸಿ ನಿತ್ಯವನಱಿವುದೇ ಶೀಲ ಕಾಣಿರೋ ! ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ ! ”

ಮಾತಿನಲ್ಲಿ ಭವಿಯು ಬಿಟ್ಟರೇನೋ ? ಕನಸಿನಲ್ಲಿ ಮನಸ್ಸಿನಲ್ಲಿ ಆವರಿಸಿಪ್ಪ ಭವಿಯೆಂಬ ಸಂದೇಹವ ಕೀಲಕಳೆದು ನಿಸ್ಸಂದೇಹ ನಿರ್ಲೇಪಕನಾಗಿರಬಲ್ಲರೆ ಶೀಲಸಂಪನ್ನರೆಂಬೆ ಉಳಿದವೆಲ್ಲಾ ಸೂತಕ ಪಾತಕ ಕಾಣಾ ! ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ ! ”

*　　　*　　　*　　　*

End :—

ಭಕ್ತಸ್ಥಲ ಮಾಹೇಶ್ವರ ಸ್ಥಲದಲ್ಲಡಗಿ, ಮಾಹೇಶ್ವರ ಸ್ಥಲ, ಪ್ರಸಾದಿ ಸ್ಥಲದಲ್ಲಡಗಿ ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲದಲ್ಲಡಗಿ, ಪ್ರಾಣಲಿಂಗಸ್ಥಲ ಶರಣಸ್ಥಲದಲ್ಲಡಗಿ, ಶರಣಸ್ಥಲ ಐಕ್ಯಸ್ಥಲದಲ್ಲಡಗಿ, ಇಂತೀ ಷಡಂಗಯೋಗ ಸಮರಸವಾಗಿ ಷಟ್‌ಸ್ಥಲವಿಾಱಿ ನಿರವಯವಸ್ಥಲವನೆಯ್ದಿ ಆ ನಿರವಯಸ್ಥಲ ನಿರಾಳದಲ್ಲಡಗಿ ಆ ನಿರಾಳ ನಿತ್ಯನಿರಂಜನ ಪರಶಿವನು ತಾನಾಯಿತ್ತಾಗಿ ಕ್ರಿಯಾನಿಷ್ಪತ್ತಿ ಜ್ಞಾನನಿಷ್ಪತ್ತಿ ಭಾವನಿಷ್ಪತ್ತಿ ಮಾಡುವ ಕ್ರಿಯೆಗಳೆಲ್ಲಾ ನಿಷ್ಪತ್ತಿಯಾಗಿ ಅಱಿವ ಅಱಹೆಲ್ಲಾ ಅಡಗಿ, ಭವಿಸುವ ಭಾವವೆಲ್ಲಾ ನಿರ್ಭಾವವಾಗಿ ನಿರ್ವಿಕಲ್ಪಕ ನಿರಂಜನಪರವಸ್ತು ತಾನೆ ತಾನಲ್ಲದೆ ಧ್ಯಾನಿಸಲಿಕ್ಕೆ ಏನೂ ಇಲ್ಲ. ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ ! ತಾನೆ ಷಟ್‌ಸ್ಥಲ ಜ್ಞಾನ ಸಾರಾಯಸ್ವರೂಪನೆಂದು ಹೇಳಲ್ಪಟ್ಟನು.

Colophon :—

ನಿಷ್ಕಲಲಿಂಗಸ್ಥಲಕ್ಕೆ ಸೇರಿದ ವಚನ ೧೧, ಮಹಾಲಿಂಗಸ್ಥಲಕ್ಕೆ ಸೇರಿದ ವಚನ ೬, ಅಂಗಲಿಂಗೋದ್ಭವಸ್ಥಲಕ್ಕೆ ಸೇರಿದ ವಚನ ೨೫, ಪಂಚಮೂರ್ತಿಲಿಂಗಸ್ಥಲಕ್ಕೆ ಸೇರಿದ ವಚನ ೧೧, ಪಿಂಡಸ್ಥಲಕ್ಕೆ ಸೇರಿದ ವಚನ ೩, ಪಿಂಡಜ್ಞಾನಸ್ಥಲಕ್ಕೆ ಸೇರಿದ ವಚನ ೨೫, ಸಂಸಾರಹೇಯಸ್ಥಲಕ್ಕೆ ಸೇರಿದ ವಚನ ೫೧, ಗುರುಕರುಣಸ್ಥಲಕ್ಕೆ ಸೇರಿದ ವಚನ ೧೬, ಲಿಂಗಧಾರಣಸ್ಥಲಕ್ಕೆ ಸೇರಿದ ವಚನ ೧೫, ವಿಭೂತಿಸ್ಥಲಕ್ಕೆ ಸೇರಿದ ವಚನ ೯, ರುದ್ರಾಕ್ಷಸ್ಥಲಕ್ಕೆ ಸೇರಿದ ವಚನ ೩, ಪ್ರಸಾದಿಸ್ಥಲಕ್ಕೆ ಸೇರಿದ ವಚನ ೧೫, ಭಕ್ತಸ್ಥಲಕ್ಕೆ ಸೇರಿದ ವಚಕ ೨, ಮಾಹೇಶ್ವರಸ್ಥಲಕ್ಕೆ ಸೇರಿದ ವಚನ ೩೬, ಪ್ರಸಾದಿಸ್ಥಲಕ್ಕೆ ಸೇರಿದ ವಚನ ೩೩, ಪ್ರಾಣಲಿಂಗಿಸ್ಥಲಕ್ಕೆ ಸೇರಿದ ವಚನ ೧೧೦೨, ಶರಣಸ್ಥಲಕ್ಕೆ ಸೇರಿದ ವಚನ ೧೩೪, ಐಕ್ಯಸ್ಥಲಕ್ಕೆ ಸೇರಿದ ವಚನ ೧೧೦, ನಿರಾಯ ? ಸ್ಥಲಕ್ಕೆ ಸೇರಿದ ವಚನ ೧೫, ಅಂತುಸ್ಥಲ ೧೨ ಕ್ಕಂ ಸೇರಿದ ವಚನ ೭೦೦ ಕ್ಕಂ (?)

ಮಂಗಳ ಮಹಾ ಶ್ರೀ ಶ್ರೀ.

ನಂಬೊಡೆಯುರ ಬಸವಯ್ಯನವರ ಮಗ ಹೊನ್ನಪನ ಕೈಬರಹಕ್ಕೆ ಶುಭಮಸ್ತು.

(ಏ-ಶಿ.)

ಸಮಗ್ರ. ಅಲ್ಪ ಶಿಥಿಲ, ಮಧ್ಯದಲ್ಲೆರಡು ಓಲೆಗಳು ಮುರಿದು ಹೋಗಿವೆ. ಬರೆವಣಿಗೆಯು ಚೆನ್ನಾಗಿಲ್ಲ. ತಪ್ಪುಗಳಿವೆ.

ಇದು ವಚನ ಗ್ರಂಥವಾಗಿದೆ. ಪ್ರಾಯಿಕವಾಗಿ ವಚನಗಳೆಲ್ಲವೂ ॥ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ ॥ ಎಂಬಂಕಿತವನ್ನೊಳಗೊಂಡಿವೆ. ಇದರಲ್ಲಿ ಷಟ್ ಸ್ಥಲಗಳು ವಿಸ್ತಾರವಾಗಿ ಪ್ರತಿಪಾದಿಸಲ್ಪಟ್ಟಿವೆ. ಈ ಗ್ರಂಥವನ್ನು ಬರೆದವನು ತೋಂಟದ ಸಿದ್ಧೇಶ್ವರನು. ಈತನು ಸುಮಾರು ೧೪೭೦ ರಲ್ಲಿದ್ದನೆಂದು ಕವಿ ಚರಿತೆಯಿಂದ (ಸಂಪುಟ ೨ ಪುಟ ೯೭) ತಿಳಿಯ ಬರುತ್ತದೆ.

No. 558. ಷಟ್ಸ್ಥಲ ನಿರೂಪಣ.

ṢAṬSTHALAINIRŪPAṆA.

Substance, palm-leaf. Size, $11\frac{1}{16} \times 1\frac{5}{16}$ inches. Pages, 166. Lines, 5 on a page. Character, Kannaḍa. Condition, badly injured. Appearance, old. Mode of writing, good and free from mistakes

Incomplete.

Similar to the above.

This is a compilation of ' Vacanas ' from several writers, giving a detailed account of the " Ṣaṭsthalas. "

Beginning :—

. . . . . ಮ ನವನಾಥ ಸಿದ್ಧಮತೋಕ್ತವೆಂದು ಕಾಪಾಲಿಕಾ ಚರಣೆಯೆನಿಸುವ . . . . ದ್ರವಿಸುವುದೆಲ್ಲಾ ಅಪ್ಪು, ಫಲರಸ, ಕ್ಷೀರ, ಘೃತ ಮೊದಲಾದವ ನೇಕ . . . . . ಗೋಹೇಶ್ವರಾ ! ನಿಮ್ಮ ಶರಣರಗ್ರಗಣ್ಯರು ಹೆ . . . . ದ್ಯ ಹೇಳಾ ! . . . ಮುಕ್ತಿಯನು ಬಯಸುವರು ನಾ . . . . ನಾಯದಿರ್ಪರೆ ಕಾಲಕರ್ಮ . . . . ನೆಲ್ಲಿದೋ ಧ್ಯಾನಮೌನ . . ಮನೋವಿಕಾರ ಸುಳಿದರಸಿಹೆನೆಂ . . . . ಗೋಹೇಶ್ವರಾ ॥ ೯ ॥

*　　*　　*　　*

ಪಂಚಭೂತವೇ ಅಂಗವಾಗಿರ್ಪಾತ್ಮಂಗೆ ಪಂಚೇಂದ್ರಿಯಂಗಳೇ ಮುಖಂಗಳು, ಕರಣೇಂದ್ರಿಯಂಗಳೇ ಕೈಗಳು, ಪಂಚ ವಿಷಯವೇ ಪೂಜೆ, ಪಂಚಪದಾರ್ಥವೇ ಭೋಗ, ಇವನೆಲ್ಲವ ನಿಜ ಮೂರ್ತಿಯಪ್ಪ ಘನಕ್ಕರ್ಪಿಸಬಲ್ಲರೆ ಆತ ಸರ್ವನಿರ್ವಾಣಿ ಸಕಳ ನಿಷ್ಕಳನು ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರ !

*　　*　　*　　*

End :—

. . . . . ಂಡ ಬಳಿಕ ಅಱಿವಿನಲ್ಲಿ ಮಱವೆ ತಾನೆ ನಿಂದಿತ್ತು ನೋಡಾ ! ಕಾಮದ ಕಳವಳವಾಯ ವೆಂದಱಿಯಬಲ್ಲೊಡೆ ಗೋಹೇಶ್ವರನ . ನಿಲವು ತಾನೆ ನೋಡಾ ! . . ಹೆಮ್ಮಕ್ಕಳೆಲ್ಲಾ ಮು . . ಡುತ್ತಿದ್ದರು . . . ತಾರು ಮಾರ . ರುವ ಏನು ತೆಸೆಱೆದು (?) ಮುಂಡವ ಕೊಂಡಾಡುತ್ತಿದ್ದರು. . . ಯ ಪ್ರಿಯಸಿದ್ಧಲಿಂಗ ಇಲ್ಲ ಇಲ್ಲವೆಂದುದಾಗಿ ॥

*　　*　　*　　*

(ವಿ-ವಿ.)—

ಅಸಮಗ್ರ· ಆದ್ಯಂತರಹಿತ· ಅತ್ಯಂತ ಶಿಥಿಲವಾಗಿದೆ· ಮುರಿದು ಪುಡಿಪುಡಿಯಾದ ಓಲೆಯ ಸಂಖ್ಯೆಯೇ ಹೆಚ್ಚು. ಲಿಪಿಯು ಉತ್ತಮವಾಗಿದೆ. ತಪ್ಪುಗಳಿಲ್ಲ.

ಇದು ಷಟ್‌ಸ್ಥಳವನ್ನು ವಿಸ್ತರವಾಗಿ ಪ್ರತಿಪಾದಿಸುವ ವಚನ ಗ್ರಂಥವಾಗಿದೆ· ಇದರಲ್ಲಿ " ಗೋಹೇಶ್ವರ, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭು, ಕಾಮ ಧೂಮಧೂಳೇಶ್ವರ, ಸದಾ ಶಿವಮೂರ್ತಿ, ನಾರಾಯಣ ಪ್ರಿಯರಾಮನಾಥ, ನಿಷ್ಕಲಂಕ ಮಲ್ಲಿಕಾರ್ಜುನ, ಚೆನ್ನ ಬಸವಣ್ಣ ಪ್ರಿಯಭೋಗ ಮಲ್ಲಿಕಾರ್ಜುನ, ಅಲೇಖ ಶೂನ್ಯನಾಥ, ಸದ್ಯೋ ಜಾತಲಿಂಗ, ಕೂಡಲ ಚೆನ್ನ ಸಂಗಯ್ಯ, ಊರಿಲಿಂಗ ದೆದ್ದಿ ಪ್ರಿಯವಿಶ್ವೇಶ್ವರ, ಅಂಬಿಗ ಚೌಡಯ್ಯ, ಸಿದ್ಧರಾಮ, ಕೂಡಲ ಸಂಗಮದೇವಾದ್ಯಂಕಿತಗಳನ್ನೊಳಗೊಂಡ ಅನೇಕ ವಚನಗಳಿರುವುವು· ಇದು ಆದ್ಯಂತ ರಹಿತವೂ ಅತ್ಯಂತ ಶಿಥಿಲವೂ ಆಗಿದೆ. ಬೇರೆಬೇರೆ ವಚನಕಾರರ ವಚನಗಳ ಸಂದರ್ಭೋಚಿತ ಸಂಘಟನಾರೂಪವಾದ ಈ ಗ್ರಂಥದಿಂದ ಕರ್ತೃವಿನ ವಿಷಯವಾಗಿ ಯಾವ ಅಂಶವೂ ತಿಳಿಯ ಬರುವುದಿಲ್ಲ.

No. 559. ಷಟ್‌ಸ್ಥಲನಿರ್ಣಯ ಟೀಕೆ.

ṢAṬSTHALANIRṆAYA ṬĪKE.

Substance, palm-leaf. Size, 7¼ × 1⅛ inches. Pages, 148. Lines, 6 on a page. Character, Kannada. Condition, much injured. Appearance, old. Mode of writing, good and free from mistakes.

Complete.

A commentary in Kannada for the Sanskrit 'Ṣaṭsthalanirṇaya' written in the form of a conversation between Pārvati and Paramēśvara. The importance of a 'Guru,' the origin of the 'Six Letters.' Devotion to Linga, Knowledge of Nāda, Bindu and Kala, etc., are described in this. The name of the commentator is not known.

Beginning:—

ಕೈಲಾಸಶಿಖರೇ ರಮ್ಯೇ ಭಕ್ತಿಸಂಧಾನನಾಮಕೇ ।
ಪ್ರಣಮ್ಯ . . . ರಂ ಪರಿಪೃಚ್ಛತಿ ॥

ಟೀಕು.—

ಅತ್ಯಂತ ರಮಣೀಯವಾಗಿ ಯಿದ್ದಂಥಾ ಕೈಲಾಸ ಪರ್ವತದ ಶಿಖರದಲ್ಲಿ ಭಕ್ತಿ ಸಂಧಾನಕ್ಕೆ ವೊಡೆಯನಾಗುತ್ತಂ ಇದ್ದಂಥಾ ಪರಮೇಶ್ವರನಂ ಪಾರ್ವತಿದೇವಿ ಭಕ್ತಿಯಿಂದ ನಮಸ್ಕಾರವಂ ಮಾಡಿ ಬೆಸಗೊಳುತ್ತಲಿದ್ದಾಳು·

ಶ್ರೀದೇವ್ಯುವಾಚ.—

ಭಗವನ್ ಸರ್ವಧರ್ಮಜ್ಞ ! ವ್ರತಾನಾಂ ವ್ರತನಾಯಕ ! ।
ಬ್ರೂಹಿ ಮೇ ಕೃಪಯಾ ದೇವ ಗುರುಮಾಹಾತ್ಮ್ಯ ಮುತ್ತಮಂ ॥

ಟೀಕು.—

ವ್ರತಂಗಳಿಗೆ ವೊಡೆಯನಾಗುತ್ತಂ ಇದ್ದಂಥಾ ಸರ್ವ ಧರ್ಮವನು ಬಲ್ಲಂಥಾ ಎಲೆ ಭಗವನ್ ! ಮಹಾದೇವನೆ ! ವುತ್ತಮವಾದಂಥಾ ಗುರುಮಾಹಾತ್ಮ್ಯೆಯನ್ನು ಕೃಪೆಯಿಂದ ಎನಗೆ ಹೇಳು ಎಂದಳು.

ಈಶ್ವರ ಉವಾಚ.—

ಯೋಗುರುಸ್ಸ ಶಿವಃ ಪ್ರೋಕ್ತಃ ಯಃಶಿವಸ್ಸ ಗುರುಸ್ಮೃತಃ ।
ಭುಕ್ತಿಮುಕ್ತಿ ಪ್ರದಾ ತಾಯುನ್ ತಸ್ಮೈ ಶ್ರೀಗುರವೇನಮಃ ।

ಟೀಕು.—

ಆವನಾನೊಬ್ಬ . . ಆಪರಮೇಶ್ವರನೆಂದು ಹೇಳಲ್ಪಟ್ಟನು . . . . ಪರಮೇಶ್ವರನು ಭುಕ್ತಿಮುಕ್ತಿಯನು ಕೊಡುತ್ತ ಲಿದ್ದಂಥಾ ಆಗುರುವೆಂದೆ ಹೇಳಲ್ಪಟ್ಟನು. ಆ ಗುರುವಿಂಗೋಸ್ಕರ ನಮಸ್ಕಾರವು.

* * * *

ದೇವ್ಯುವಾಚ.—

ಅಕ್ಷರಸ್ಯ ಕಥೋತ್ಪತ್ತಿಃ ಅಕ್ಷರಸ್ಯಕಥಂ ಗುಣಂ
ಅಕ್ಷರಸ್ಯಕಥಂ ಭೇದಂ ಬ್ರೂಹಿಮೇ ಪರಮೇಶ್ವರ ! ॥ (?)

ಟೀಕು.—

ಷಡಕ್ಷರದ ಉತ್ಪತ್ತಿಹೇಂಗೆ ? ಅಕ್ಷರಗುಣಹೇಂಗೆ ? ಅಕ್ಷರದ ಭೇದವಾವುದು ? ಎಲೆ ಪರಮೇಶ್ವರನೆ ! ನಿರೂಪಿಸೆಂದು ಬೆಸಗೊಂಡಳು.

ಈಶ್ವರ ಉವಾಚ.—

ಯಥಾಕ್ಷೇತ್ರಸ್ಯ ಬೀಜಸ್ಯ ದ್ವಿಧಾ ಸಂಬಂಧಿಕಸ್ತಥಾ ।
ಕ್ಷೇತ್ರಸ್ಥಾನ . . . . . ತಸ್ಯಜಾತಮಿದಂ ಶೃಣು ॥

ಟೀಕು.—

ಕ್ಷೇತ್ರಕ್ಕು ಬೀಜಕ್ಕು ಸಂಬಂಧವೆರಡು ಪ್ರಕಾರವಾಯಿತು. ಆ ಮರ್ಯಾದೆಯಲ್ಲಿ ಅಕ್ಷರಕ್ಕು ಎರಡು ಪ್ರಕಾರ ಕೇಳಾಯೆಂದು ಈಶ್ವರನು ನಿರೂಪಿಸಿದನು.

* * * *

ದೇವ್ಯುವಾಚ.—

ಭಕ್ತೋ ಮಾಹೇಶ್ವರಶ್ಚೈವ ಪ್ರಸಾದೀ ಪ್ರಾಣಲಿಂಗಿಕಃ ॥
ಶರಣಶ್ಶಿವಲಿಂಗೈಕ್ಯಂ ಷಟ್‌ಸ್ಥಲಂ ಕಥಂ ಭವೇತ್ ॥

ಟೀಕು.—

ಭಕ್ತನು, ಮಾಹೇಶ್ವರನು, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಇಂತು ಷಟ್‌ಸ್ಥಲವು ಹೇಗಹುದೆಂದು ಬೆಸಗೊಂಡಳು.

ಈಶ್ವರ ಉವಾಚ.—

ಸದಾಚಾರಃ ಶಿವೇಭಕ್ತಃ ಲಿಂಗಜಂಗಮಪೋಕಧಿ ।
ಲಾಂಛನೇನ ಶರಣ್ಯಂ ಚ ಭಕ್ತಿ ಸ್ಥಲಮನುತ್ತಮಂ ॥ (?)

ಟೀಕು.—

ಸದಾಚಾರದಲ್ಲಿ ನಡೆವ, ಶಿವನಲ್ಲಿ ಭಕ್ತಿಯಾಗಿರುವ, ಲಿಂಗಜಂಗಮವೊಂದೆ ಯೆಂಬ ಬುದ್ಧಿಯಿರುವ ಲಾಂಛನಧಾರಿಗಳ ಕಂಡಡೆ ವಂದಿಸುವ, ಇದು ಭಕ್ತ ಸ್ಥಲವೆಂದು ಈಶ್ವರನು ನಿರೂಪಿಸಿದನು.

End :—

ಸದ್ಯೋಜಾತಮಿದಂಪೃಥ್ವಿ ವಾಮದೇವ್ರೋದ್ಭವಂಜಲಂ ॥
ಅಘೋರಂವಹ್ನಿರಿತ್ಯುಕ್ತಂ ತತ್ಪುರ್ಷಂ ವಾಯು ರು ಚ್ಯತೇ ॥ (?)
ಈಶಾನಂ ಗಗನಾಧಾರಂ ಪಂಚಬ್ರಹ್ಮ ವ ಯಂಜಗತ್ ॥

ಟೀಕು.—

ಸದ್ಯೋಜಾತಮುಖವು ಪೃಥ್ವಿ ; ವಾಮದೇವಮುಖವು ಅಪ್ಪು, ಅಘೋರಮುಖವು ವಹ್ನಿ, ತತ್ಪುರುಷಮುಖವು ವಾಯು, ಈಶಾನಮುಖವು ಆಕಾಶ, ಈ ಜಗತ್ತೆಲ್ಲವೂ ಪಂಚಬ್ರಹ್ಮಮಯವೆಂದು ಈಶ್ವರನು ಪಾರ್ವತಿದೇವಿಯರಿಗೆ ಹೇಳಿದನು.

Colophon :—

ಇತ್ಯುಮಾಮಹೇಶ್ವರ ಸಂವಾದೇ ಷಟ್‌ಸ್ಥಲ ನಿರ್ಣಯ ಪರಮರಹಸ್ಯಂ ಶಿವಾರ್ಪಣಮಸ್ತು ॥ ಮಂಗಲಂ ಶ್ರೀ ॥

(ವಿ ವಿ.)—

ಸಮಗ್ರ. ಅತಿ ಶಿಥಿಲ. ತಪ್ಪುಗಳಿವೆ.

ಇದು ಪಾರ್ವತೀ ಪರಮೇಶ್ವರರ ಸಂವಾದ ರೂಪವಾದ ಸಂಸ್ಕೃತ ಷಟ್‌ಸ್ಥಲ ನಿರ್ಣಯಕ್ಕೆ ಟೀಕಾರೂಪವಾಗಿ ಬರೆಯಲ್ಪಟ್ಟ ವಚನ ಗ್ರಂಥವಾಗಿದೆ. ಇದರಲ್ಲಿ ಗುರುಮಾಹಾತ್ಮ್ಯ, ಸಡಕ್ಷರೋತ್ಪತ್ತಿ, ಲಿಂಗಭಕ್ತಿ, ಲಿಂಗಭೇದ, ನಾದಬಿಂದುಕಳಾವಿವೇಚನೆ, ಮುಂತಾದವುಗಳ ವಿಷಯವಾಗಿ ವಿಸ್ತಾರವಾದ ವಿವರಣೆಯು ಮಾಡಲ್ಪಟ್ಟಿದೆ. ಟೀಕಾಕಾರನು ತನ್ನ ಹೆಸರನ್ನು ಕೊಟ್ಟಿಲ್ಲ. ಟೀಕೆಯು ಬಾಲಿಶತನದಿಂದ ಬರೆಯಲ್ಪಟ್ಟಿದೆ.

No. 560 ಷಟ್‌ಸ್ಥಲ ವಚನ.

SATSTHALA VACANA.

Substance, palm-leaf. Size, $9\frac{1}{16} \times 1\frac{1}{4}$ inches. Pages, 104 Lines, 6 on a page. Character, Kannada. Condition, badly injured. Appearance, old. Mode of writing, good and free from mistakes.

Incomplete.

Contains 180 ‘ Vacanas ’ from different “ Sthalas ” bearing on the Vīraśaiva philosophy. The author is Cennabasava, nephew (sister's son) of Basava.

Beginning :—

ಆದಿನಹಾಲು ಇದ್ದಡೇನು ? ಪಂಚಾಮೃತಕ್ಕೆ ಸಲ್ಲದುದೇ ? ಭಕ್ತನಾದಲ್ಲಿ ಫಲವೇನು ? ಶಿವಪದವನರಿಯದನಕ ಡಕ್ಕಲಿ ಬಿದ್ದ ಕಣ್ಣಿನಂತೆ ಜಂಗಮದ ಮೇಲೆ ಹರುಷವಿಲ್ಲದ ನೋಟ “ ಕೂಡಲ ಚೆನ್ನ ಸಂಗನ ” ಶರಣರ ಬೆಸಸದ ಹರುಷ ಅರಸಿಯುಂ ನೋಡಿದಂತೆ ॥ (೧)

ಸುರೆಯ ಮಡಕೆಗೆ ಹೊಱಗೆ ಬೂದಿಯ ಹೂಸಿದಡೇನೋ? ಒಳಗು ಶುದ್ಧವಾಗಬಲ್ಲುದೇ? ಗುರುಕಾರುಣ್ಯ ನೆಲೆಗೊಂಡು ಗುರು, ಲಿಂಗ, ಜಂಗಮ, ವೊಂದೆ. ಯೆಂದು ಕಾಣದನ್ನ ಕೂಡಲಚೆನ್ನಸಂಗಮದೇವರಲ್ಲಿ ಸದಾಚಾರವೆಲ್ಲರಿಗೆ ಸೂಱೆಯೋ? ॥

* * * *

ಜಂಗಮಪ್ರಸಾದವ ಸೋಂಕಿವ ನಿಂದ ಇಱಹೆಗೆ ರುದ್ರತ್ವವಾಯಿತ್ತು. ಜಂಗಮ ಪ್ರಸಾದವ ಸೋಂಕಿ ನಿಂದ "ಬಿಬ್ಬಿ ಬಾಚಯ್ಯ" ಪ್ರಸಾದವ ಮೆಱೆದು ಸ್ವಯಂ ಲಿಂಗ ತಾನಾದ. ಜಂಗಮಪ್ರಸಾದವ ಸೋಂಕಿ ನಿಂದ . . . ನಮೃತ . . ವ ಮಾಡಿ ಬಸವಣ್ಣ ಮೆಱೆದ. ಶ್ರುತಿ :—

ಜಂಗಮಪ್ರಸಾದ ಗ್ರಾಹ್ಯ ಸರ್ವದೇವಾನುಚೇಷ್ಟಿತಂ । . ನೋ . . ಷ್ಟಂ ನ . ಸಂ . . ತಥಾಭವೇತ್ ॥ ಇದು ಕಾರಣ ಕೂಡಲ ಚೆನ್ನ ಸಂಗಮದೇವಯ್ಯ ನಿಮ್ಮ ಜಂಗಮ ಪ್ರಸಾದದ ಮಹಿಮೆಯ . . . . ನೆಂಬೆ ॥

End :—

. . ಪ್ರಸಾದ ಭಕ್ತನು ಅನರ್ಪಿತವ ನೆನೆವ ಪರಿಯೆಂತೋ? . . . . ಯೆಂತೋ?. ಅನರ್ಪಿತವ ವಾಸಿಸುವ ಪರಿಯಿನ್ನೆಂತೋ? . . . . ಪರಿಯೆಂತೋ? . . . . . ರಗು ಕೂಡಲ ಚೆನ್ನ ಸಂಗನ . . . . . . ಮಾಡಬೇಕೆಂಬರು ಸರ್ವೇಂದ್ರಿಯ . . . .

(ವಿ-ವಿ.)—

ಅಸಮಗ್ರ. ಬಹಳ ಶಿಥಿಲವಾಗಿದೆ. ಲಿಪಿಯು ತೃಪ್ತಿಕರವಾಗಿದೆ. ತಪ್ಪುಗಳಿಲ್ಲ.

ಇದು ವಚನಗ್ರಂಥವಾಗಿದೆ. ಇದರಲ್ಲಿ ಭಕ್ತಿಸ್ಥಲ ವಚನ ೪೨, ಮಾಹೇಶ್ವರ ಸ್ಥಲ ವಚನ ೩೫, ಪ್ರಸಾದ ಸ್ಥಲವಚನ ೭೯, ಪ್ರಾಣಲಿಂಗಿಸ್ಥಲವಚನ ೧೦, ಶರಣಸ್ಥಲವಚನ ೧೨, ಐಕ್ಯಸ್ಥಲವಚನ ೨, ಒಟ್ಟು ೧೮೦ ವಚನಗಳಿವೆ. ಸಾಧಾರಣವಾಗಿ ವಚನಗಳೆಲ್ಲವೂ "ಕೂಡಲ ಚೆನ್ನ ಸಂಗಮದೇವಾ"ಂಕಿತಗಳಾಗಿರುವುವು. ಅಲ್ಲಲ್ಲಿ ಪ್ರಮಾಣರೂಪವಾಗಿ ಅನ್ಯಗ್ರಂಥಗಳಿಂದುದ್ಧರಿಸಿದ ಶ್ಲೋಕಗಳೂ ಕಾಣಸಿಗುವುವು. ಇದರಲ್ಲಿ ಪ್ರತಿಪಾದ್ಯವಿಷಯವು ವೀರಶೈವಸಿದ್ಧಾಂತವಾಗಿದೆ. ಈ ಗ್ರಂಥವನ್ನು ಬರೆದವನು ಬಸವನ ಸೋದರಳಿಯನಾದ ಚೆನ್ನಬಸವನು. ಈತನ ವಿಷಯವನ್ನು ೪೪೪ ನೆಯ ನಂಬರಿನಲ್ಲಿ ನೋಡಿ ತಿಳಿದುಕೊಳ್ಳುವುದು.

No. 561. ಷಟ್‌ಸ್ಥಲ ವಚನ- ṢATSĀTHALA VACANA.

Substance, palm-leaf. Size, $11\frac{13}{16} \times 1\frac{1}{4}$ inches. Pages, 176. Lines, 5 on a page. Character, Kannaḍa. Condition, much injured. Appearance, old. Mode of writing, bad and not free from mistakes.

Incomplete.

Same work as the above.

(ವಿ-ವಿ.)—

ಅಸಮಗ್ರ. ಭಕ್ತಿಸ್ಥಲ, ಮಾಹೇಶ್ವರಸ್ಥಲ, ಪ್ರಸಾದಸ್ಥಲಗಳು ಸಮಗ್ರಗಳಾಗಿಯೂ, ಪ್ರಾಣಲಿಂಗಿಸ್ಥಲ ಶರಣಸ್ಥಲಗಳು ಅಸಮಗ್ರಗಳಾಗಿಯೂ ಇರುವುವು. ಮಧ್ಯೇ ಮಧ್ಯೆ

ಎಷ್ಟೋ ಓಲೆಗಳು ಅದರ್ಶನತ್ವವನ್ನವಲಂಭಿಸಿರುವುವು. ಗ್ರಂಥ ಶಿಥಿಲವಾಗಿದೆ. ಬರೆವಣಿಗೆಯು ಏನೂ ಚೆನ್ನಾಗಿಲ್ಲ. ತಪ್ಪಿದೆ. ಗ್ರಂಥದಾದಿಯಲ್ಲಿ ಕಂದಪದ್ಯವಿದೆ.

ಇದು ಹಿಂದೆ ವಿವರಿಸಿದ ಗ್ರಂಥವಾಗಿದೆ.

No. 562. ಷಡ್ಲಿಂಗೈಕಾರ್ಥ ನಿರ್ವಚನ.

ṢADLIṄGAIKĀRTHA NIRVACANA.

Substance, paper. Size, $12\frac{1}{4} \times 7\frac{1}{4}$ inches. Pages, 17. Lines, 20 on a page. Character, Kannaḍa. Condition, good. Appearance, old. Mode of writing, bad and not free from mistakes.

Begins on fol. 135*a* of the manuscript described under No. 491 ante.

Complete.

The conception of the six Liṅgas, i.e., Ācāraliṅga, etc., and how they are identical in meaning are herein dealt with. The name of the author is not known.

Beginning :—

ಪ್ರಥಮ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗವೆಂಬ ಆರು ಲಿಂಗಕ್ಕೆ ಅರ್ಥೈಸಿದ ಏಕಾರ್ಥದ ನಿರ್ವಚನ :—ಅನಾದಿ ಆಚಾರಲಿಂಗವೆಂಬುದಕ್ಕರ್ಥ :—ಅನಾದಿ ಆಚಾರಲಿಂಗವೆಂದಡೆ ;—ದೃಢ, ನಿಷ್ಠೆ, ಭಯ, ಭಕ್ತಿ, ಕಿಂಕುರ್ವಾಣ, ನಯ, ನುಡಿ, ದಯಾಗುಣ, ಭೂತದಯಾತಿ ಸದ್ಭಾವ ; ಶಿವಾನುಭಾವ, ಇಂತೊಂಬತ್ತು ಸಗುಣದೊಡನೆ ಅನಾದ್ಯಾಚಾರಲಿಂಗದಲ್ಲಿಯೇ ಏಕವಾಗಬಲ್ಲಡೆ ಅನಾದ್ಯಾಚಾರಲಿಂಗದಲ್ಲಿಯೇ ಏಕಾರ್ಥವೆಂಬುದರ್ಥ. ಮತ್ತಂ ಅನಾದ್ಯಾಚಾರಲಿಂಗವೆಂದಡೆ :—ಮನನ, ವಾಕ್ಕು, ಪಾಣಿ, ಪಾದ, ಗುಹ್ಯ, ಪಾಯು, ಇಂತೀ ಆರರಲ್ಲಿ ಮನನವೆಂದಡೆ ಘಟೆಯೆಂಬಡೂ (ರೂ) ದಿಟವೆಂದಡೂ, ನೆಲೆಯೆಂದಡೂ, ತಿಳಿಯೆಂದಡೂ, ಒಂದೇ ಸಾಮ್ಯವಾದಕಾರಣ, ಮನನ ವೆಂಬುದಕ್ಕೆ ಅರ್ಥ.

* * * *

End :—

ಇಂತಪ್ಪ ಅಗಣಿತ ಅಗೋಚರ ಅಪ್ರಮೇಯವೆಂಬ ಮಹಾಲಿಂಗವ ಬೆರಸಿಹುದೇ. ಅನಾದಿ ಮಹಾಲಿಂಗವೆಂಬ ಶಬ್ದಕ್ಕರ್ಥ. ಇಂತೀ ಷಟ್‌ಸ್ಥಲದಲ್ಲಿಹ ಷಡ್ವಿಧಲಿಂಗಕ್ಕೆ ಅರ್ಥೈಸಿದ ಏಕಾರ್ಥನಿರ್ವಚನ.

ಕಂದ :—

ಈಯರ್ಥಂ ಈನಿತರ್ಥ ಪರಿಳಿದೊಡೆ ಕಾಮಾರ್ಥಮೋಕ್ಷಾರ್ಥವೆಂಬವು ಭಯವು
ದಿಲ್ಲಂ ॥
ಜ್ಞಾನಾರ್ಥದಿಯೇಕಾರ್ಥವನುಸುರ್ದಿದೆಸಾಕ್ಷಾತ್ಕಾರವಹುದು ನೀನೇ
ಇಷ್ಟಲಿಂಗಯ ದೇವನೇ ॥ ?

Colophon :—

ಇಂತೀ ಸಂಪೂರ್ಣಂ ಮಂಗಳ ಮಹಾ ಶ್ರೀ.

(ವಿ-ವಿ.)—

ಸಮಗ್ರ. ಪ್ರತಿಯು ಚೆನ್ನಾಗಿದೆ. ಲಿಪಿಯು ನೆಟ್ಟಗಿಲ್ಲ. ತಪ್ಪುಗಳಿವೆ. ಗ್ರಂಥಾಂತ್ಯದಲ್ಲಿರುವ ಕಂದದ ಗತಿಯನ್ನು ಹೇಳತೀರದು.

ಇದು ಗದ್ಯಗ್ರಂಥವಾಗಿದೆ. ಇದರಲ್ಲಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗವೆಂಬೀ ಷಡ್‌ಲಿಂಗಕ್ಕೆ ವಿಶಾರ್ಥನಿರ್ವಚನವು ಮಾಡಲ್ಪಟ್ಟಿದೆ.

ಈ ಗ್ರಂಥವನ್ನು ಬರೆದವನಾವನೋ ? ತಿಳಿಯದು.

No. 563. ಸಗರದ ಬೊಮ್ಮಣ್ಣ ವಚನ.

SAGARADA BOMMAṆṆA VACANA.

Substance, palm-leaf. Size, 12 × $1\frac{1}{8}$ inches. Page, 1. Lines, 5. Character, Kannaḍa. Condition, much injured. Appearance, old. Mode of writing not bad and not free from mistakes.

Begins on fol. *72a* of the manuscript described under No. 498 ante.

Incomplete.

Similar to the above. Contains only two vacanas. By Sagarada Bommaṇṇa who appears to be a contemporary of Basava.

Text :—

ತನುವಿನೊಳಗಣ ತನುವಿನಲ್ಲಿ ಕೂಡಿದವನಾರೋ ? ಮನದೊಳಗಣ ನೆನಹಿನಲ್ಲಿ ನೆನೆಯಿಸಿಕೊಂಬವನಾರೋ ? ಬಾಯೊಳಗಣ ಬಾಯಲ್ಲುಂಬವನಾರೋ ? ಕಣ್ಣಿನೊಳಗಣ ಕಣ್ಣಿನಲ್ಲಿ ನೋಡುವನಾರೋ ? ನಾನೀನೆಂಬಲ್ಲಿ ಅದೇನು ? ಹೇಳು ಸಗರದ ಬೊಮ್ಮನೊಡೆಯ ತನುಮನಸ್ಸಂಗಮೇಶ್ವರಾ ! ೧ ॥

ಮನೆ ಬೇಕಾದರೆ ಮನೆಯ ಸುಡು. ಮಣ್ಣು ಬೇಕಾದರೆ ಒಲ್ಲದಿರು. ಹೊನ್ನು ಬೇಕಾದರೆ ಹಿಡಿಯದಿರು. ಹೆಣ್ಣು ಬೇಕಾದರೆ ಕೂಡದಿರು ಹಸಿವಿಲ್ಲದರುಣ್ಣು. ಈ ಹುಸಿಯ ಬಿಟವ ಮಾಡು ಸಗರದ ಬೊಮ್ಮನೊಡೆಯ ತನುಮನಸ್ಸಂಗಮೇಶ್ವರಲಿಂಗವನರಿಯಬಲ್ಲೊಡೆ ॥ ೨ ॥

(ವಿ-ವಿ.)—

ಅಸಮಗ್ರ. ಅತಿಶಿಥಿಲ. ಲಿಪಿಯು ಸಾಮಾನ್ಯವಾಗಿದೆ. ತಪ್ಪಿದೆ.

ಈ ಗ್ರಂಥವು ವಚನರೂಪವಾಗಿದೆ. ಇದರಲ್ಲಿ “ ಸಗರದ ಬೊಮ್ಮನೊಡೆಯ ತನುಮನಸ್ಸಂಗಮೇಶ್ವರಲಿಂಗ ” ಎಂಬಂಕಿತವಿರುವ ಎರಡು ವಚನಗಳಿವೆ. ಗ್ರಂಥಕರ್ತನು ಸಗರದ ಬೊಮ್ಮಣ್ಣನೆಂಬುವನು. ಇವನು ಬಸವನ ಸಮಕಾಲೀನನೆಂದು ಕಂಡುಬರುವುದು.

No. 564. ಸತ್ತಿಗೆಯ ಕಾಯಕದವರ ವಚನ.

SATTIGEYA KĀYAKADAVARA VACANA.

Substance, palm-leaf. Size, 12 × $1\frac{1}{8}$ inches. Pages, 2. Lines, 5 on a page. Character, Kannaḍa. Condition, Much injured Appearance, old. Mode of writing, not bad and not free from mistakes

Begins on fol. 80*b* of the manuscript described under No. 498 ante.

Incomplete.

Similar to the above. Contains only 4 vacanas. The title of the work-- Sattigeya kāyakadavara vacana connotes the profession of the author. The name of the author is not known.

Beginning --

ತತ್ವದಕಾವು, ನಿಜನಿಶ್ಚಯದ ಬಿದಿರು, ಭಕ್ತಿಜ್ಞಾನ ವೈರಾಗ್ಯತ್ರಿವಿಧ ಮುಪ್ಪುರಿಗೂಡಿದ . . . . ನೆಲ್ಲಿ ಕಟ್ಟಿ ಗಳೆಕಟ್ಟಿ . . . ಹಂಕಾರ ಗರ್ವದ ನಿರುತ್ತವ ಬಿಡಿಸಿ ಭಕ್ತಿ ಸತ್ಯಕ್ಕೆ ತಲೆದೂಗುವಂತೆ ಬಾಗಿಯೊಪ್ಪವ ಮಾಡಿ ಕರ್ಕಶಮಿಥ್ಯಾ . . . ರದು . . ತ್ತಿ . ಹಾಕಿ . ತ್ರಿಕೆ ಹೆಚ್ಚು ಕುಂದಿಲ್ಲದ ವರ್ತುಲಾಕಾರಕ್ಕೆ ಚಿತ್ತ ವಸ್ತುವಿನಲ್ಲಿ ತೊಲಗದಂತೆ ಸಚ್ಚಿವಾಗಿ ? ಅಷ್ಟಾವಧಾನಂಗಳೆಂಬ ಶಪ್ಪಡವ ಕವಿಸಿ ಚತುಷ್ಟ ಯುಗಳೆಂಬ ಸೆಱಗ ತಪ್ಪಗೆ ಕತ್ತರಿಸಿ ಚಿತ್ತ ಹೆಱ ಹಿಂಗದ ಲೆಕ್ಕಣಿಕೆಯಲ್ಲಿ ಚಿತ್ರವ ಬರೆದು ಅಪ ನು ಊರ್ಧ್ವವೆಂಬುದಕ್ಕೆ ಬಲುತೆಕ್ಕೆಯನಿಕ್ಕಿ ಸರ್ವವರ್ಣಂಗಳೆಂಬ ಬೆಣಿಕೆಲನಿಕ್ಕಿ ಹಿಡಿವೃತ್ತಿದ್ದ ಚತ್ರವನೆಳಲಿಲ್ಲದಂತೆ ಐಘಂಟೇಶ್ವರಲಿಂಗಕ್ಕೆ ಬಿಸಿಲು ಮಳೆ ಗಾಳಿಗೆ ಹೊರಗಾಗಬೇಕೆಂದು.

* * *

End :—

. . . ಗೈಸಿಕೊಂಡ ಜೀತಕ್ಕೆ ಲಿಂಗದ ಹಂಗು, ಆ ಹಂಗಿನಿಂದ ಗುರುಜಂಗಮದ ಹಂಗು, ಈ ಮೂಱಱಿಂದ ಭಕ್ತಿಯೆಂಬ ಸಂದಣಿಯ ಹಂಗು . . . ಎನಗೊಂದು ಬಾರಿ ತೋಱ ! ಸಂಗನ ಬಸವಣ್ಣಪ್ರಿಯ ಐಘಂಟೇಶ್ವರಲಿಂಗವೆ.

(ವಿ-ವಿ.)—

ಅಸಮಗ್ರ. ಅತಿಶಿಥಿಲ. ಗ್ರಂಥಪಾತ್ರವಿದೆ. ಲಿಪಿಯು ಸಾಮಾನ್ಯವಾಗಿದೆ. ತಪ್ಪು ಇದೆ.

ಇದೊಂದು ಚಿಕ್ಕ ವಚನಗ್ರಂಥವಾಗಿದೆ. ಇದರಲ್ಲಿ ನಾಲ್ಕು ವಚನಗಳಿವೆ. ಆದಿಯ ಮೂರು ವಚನಗಳು "ಐಘಂಟೇಶ್ವರಲಿಂಗ" ಎಂಬಂಕಿತವನ್ನೂ ನಾಲ್ಕನೆಯ ವಚನವು "ಸಂಗನ ಬಸವಣ್ಣಪ್ರಿಯ ಐಘಂಟೇಶಲಿಂಗ" ಎಂಬಂಕಿತವನ್ನು ಒಳಗೊಂಡಿವೆ. ಗ್ರಂಥದಾದಿಯಲ್ಲಿ "ಸತ್ತಿಗೆಯ ಕಾಯಕದವರವಚನ" ಎಂಬ ಶಿರೋನಾಮವಿದೆ. ಇದು ವೃತ್ತಿಯನ್ನವಲಂಬಿಸಿ ಬಂದ ಹೆಸರಲ್ಲದೆ ಅಂಕಿತನಾಮವಾಗಲೆಡೆಯಿಲ್ಲದಿರುವುದರಿಂದ ಗ್ರಂಥಕರ್ತನ ಹೆಸರಾವುದೋ ? ತಿಳಿಯದು.

No. 565. ಸದ್ಗುರು ರಹಸ್ಯ.
SADGURU RAHASYA.

Substance, Śrītāla. Size, 7 × 1⅞ inches. Pages, 52. Lines, 10 on a page. Character, Kannada. Condition, most injured. Appearance, old. Mode of writing, fair.

Begins on fol. 36*a* of the manuscript described under No. 299 ante.

Complete in 9 Upadēśas.

A work on Vīraśaiva philosophy written in the form of a conversation between a teacher and his pupil. The author is Gurubasava, a contemporary of Prauḍha Dēvarāya II, (1419—1446) King of Vijayanagar. He is also the author of Vṛṣabha Gīte, Avadhūta Gīte, Manōvijayakāvya and Sivayōgāṅga bhūṣaṇa.

Beginning :—

ಭಾ. ಷ ॥ ಪರಿಭವಂಗಳಿಗಂಜಿ ಭರದಿಂ ।
ಶರಣುವೊಕ್ಕಂಗೊಲಿದು ಮುದದಿಂ- ।
ದೊರೆದನಾ ನಿಜ ತತ್ವಬೋಧೆಯು ದೇಶಿಕೋತ್ತಮನು ॥
ಶ್ರೀಪರಮಪಾವನಕಳಾಚಿ- ।
ದ್ರೂಪ ಚಿತ್ಪರಿಪೂರ್ಣಮಹಿಮಾ ॥
ಳಾಪನಮುಳಾನಂದವೃಂದೋಲ್ಲಾಸ ನಿಜತತ್ವ- ॥
ದೀಪ ಮಾಯಾಲೋಪನಖಿಲ ।
ವ್ಯಾಪಕಾಂಗ ವಿಶಿಷ್ಟಪರಮ ಪ ।
ರಂಪರಾನ್ವಯ ಸಾಕ್ಷಿ ಗುರು ಬಸವಂಗೆ ಶರಣೆಂಬೆ ॥

* * *

ಸಚ್ಚಿದದ್ವಯನಪ್ಪ ಪರಮನ ।
ಮುಚ್ಚಿ ಮುಸುಕಿದ ಮಾಯೆಯುಂ ನೆರೆ ।
ಬಿಚ್ಚಿ ಬಿಸುಟೊದವಿರ್ದ ಸರ್ವಭ್ರಮೆಯ ಬರಿಕೆಯ್ದು ॥
ಬೆಚ್ಚಮತ್ಕಾರದೊಳು ನಿಜದೊಳ್ (?) ।
ಬೆಚ್ಚುತ ನಿಜವಪ್ಪ ಮತವಂ ।
ಸ್ವಚ್ಛವಾಗಿಯೆ ಪೇಳ್ವೆನಮಲ ಮುಮುಕ್ಷುಜನಗಳಿಗೆ ॥
ವೇದದಂತ್ರುಟಿದಲ್ಲ ಶಾಸ್ತ್ರದ ।
ಹೋದ ಹೊಲಬಲ್ಲಲೆ ಪುರಾಣದ ।
ಗಾದೆಗಳ ಜಂಜಡದ ಜಾಡ್ಯದ ಜನುಗು ತಾನಲ್ಲ ॥
ಆದರಿಸಿ ಕೇಳುವಗೆ ಪರಮ ಸ-॰।
ಮಾಧಿ ಶಾಂಭವಸತ್ಯ ಸವ್ಯ ।
ಗ್ಬೋಧಲೀಲಾ ಲೋಲ ಶೀಲಾನ್ವಯ ರಹಸ್ಯವಿದು ॥

ಹುಟ್ಟಿದರೆ ಸಾವಳಿದು ಸತ್ತೊಡೆ ।
ಹುಟ್ಟಳಿದು ಹೊರಗಾಗಿ ಭವವಂ ।
ಪಟ್ಟಸಱಿಯನು ಮಾಡುತಿಹ ಬಾಧೆಯನು ಬೋಧಿಸದೆ ॥
ಹುಟ್ಟಿದರೆ ಸಾವುತ್ತ ಸತ್ತರೆ ।
ಹುಟ್ಟುತಿಹ ದುರ್ಮತವನುಸುರ್ವ ।
ಕಷ್ಟವೃತ್ತಿಯ ಪೇಳದೇ ಸದ್ಗುರು ರಹಸ್ಯದೊಳು ॥
ಕರ್ಪೂರದ ಹೆಣ್ಣಗ್ನಿಪುರುಷನ ।
ನಪ್ಪಿದಾಕ್ಷಣ ನೋಡಲೊಡಲಿಂ ।
ಸೊಪ್ಪಡಗಿ ಸಂದಳಿದು ನಿರ್ವಯಲಪ್ಪ ತೆಱನಂತೆ ॥
ತಪ್ಪದೀ ಸದ್ಗುರುರಹಸ್ಯದೊ- ।
ಳಪ್ಪ ಸುಕೃತಾರ್ಥವನು ವೇದಿಸು ।
ತಿಪ್ಪವರ ತನುವಳಿದು ಮನ ಮಹದೊಳಗೆ ಲಯವಹುದು ॥

* * *

ಸತ್ಯರಿಗೆ ಸದ್ಭಕ್ತರಿಗೆ ಸವಿ ।
ರಕ್ತರಿಗೆ ಸಮಚಿತ್ತರಿಗೆ ನಿಜ ।
ವಿತ್ತುಗಳಗೆ ಸದಾ ವಿವೇಕಾನ್ವಿತ ಮಹಾತ್ಮರಿಗೆ ॥
ನಿತ್ಯರಿಗೆ ಸತ್ಪಾತ್ರರಿಗೆ . . । (?)
ಮುಕ್ತರಿಗೆ ಸಂಸಾರ ಪಾಶವ ।
ಕಿತ್ತು ಬಿಸುಟರ್ಗೊರೆವುದೀ ಸದ್ಗುರು ರಹಸ್ಯವನು ॥
ಕಂ ॥ ಎನಲಾ ವಾಕ್ಯವ ತನ್ನಯ ।
ಮನದೊಳು ಮಮಕರಿಸಿ ಭಕ್ತಿಪೂರ್ವಕದಿಂ ಸ- ॥
ದ್ವಿನಯ ಪರನಾಗಿ ನುತಿಸಿದ ।
ನನಘನನದ್ವಯಸುಖಾತ್ಮನಂ ದೇಶಿಕನಂ ॥

Colophon :—

ಇತಿ ಸದ್ಗುರುರಹಸ್ಯೇ ನಿತ್ಯಾನಿತ್ಯವಿಚಾರೋನಾಮ ಪೀಠಿಕಾಹ್ವಯಃ
ಪ್ರಥಮೋಪದೇಶಃ.

ಪಲ್ಲ ॥ ಹಿತವಿದಹಿತವಿದೆಂದು ಶಿಷ್ಯನ ।
ಮತಿಗೆ ಮಂಗಳವಾಗಿ ಪೇಳದ ।
ನತಿಶಯೋಕ್ತಿಗಳಿಂದೆ ಸದ್ಗುರುನಾಥನುಚಿತದಲಿ ॥

End :—

ನಿತ್ಯಮುಕ್ತ ಸುಖಾತ್ಮ ಜಯಜಯ ।
ಪ್ರತ್ಯಗಾನುಭವೈಕ ಜಯಜಯ ।
ಸತ್ಯನದ್ವಯನಮಲ ಜಯಜಯ ಜಾಡ್ಯಮಯ ಮಾಯಾ- ॥
ಮತ್ತಗಜಪಂಚಾಸ್ಯ ಜಯಜಯ ।
ನಿಸ್ತರಂಗ ಸುಖಾಬ್ಧಿ ಜಯಜಯ ।
ಕರ್ತೃ ಮತ್ಪ್ರಭುರೂಪ ಗುರುಬಸವೇಶ ಜಯಜಯತು ॥

ಲೀಲೆಯಿಂದಿನ್ನುಱು ಮೂವ ।
ತ್ತೇಳು ಪದನಂ ಸಾಂಗಮಾಗಿ ಸ ।
ಮೇಳದಿಂ ನವಮೋಪದೇಶ ಪರಿಪ್ರಮಾಣಗಳಂ ॥
ಹೇಳಿ ಶಿಷ್ಯನ ಸಂದು ಸಂಶಯ ।
ಜಾಳಮಂ ಬಱಿಕೆಯ್ದು ತನ್ನವಿ- ।
ಶಾಲಸುಖದೊಳ್ ಗೈಕ್ಯನಂ ಮಾಡಿದನು ದೇಶಿಕನು ॥

Colophon:—

" ಇತಿ ಶ್ರೀಮತ್ಸದ್ಗುರು ರಹಸ್ಯೇ ನವಮೋಪದೇಶಃ.

ಅಂತು ಪದನು ೭೩೯ ಕ್ಕಂ ಸದ್ಗುರು ರಹಸ್ಯಂ ಸಂಪೂರ್ಣಂ.

(ವಿ.ವಿ.)—

ಸಮಗ್ರವಾಗಿದೆ. ಹೆಚ್ಚು ಶಿಥಿಲವಾಗಿದೆ. ಉತ್ತಮವಾದ ಲಿಪಿ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಕೂಡಿವೆ. ಅವಾವುವೆಂಬುದನ್ನು ಹಿಂದಣ ೨೯೯ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ. ಮೊದಲ ಉಪದೇಶಾಂತ್ಯದಲ್ಲಿ ಒಂದು ಕಂದ ಪದ್ಯವಿದೆ. ಗ್ರಂಥದಾದಿಯಲ್ಲಿ ಗುರುವಾದ ಬಸವನ ಸ್ತುತಿಯಿದೆ ಉಪದೇಶ ೯. ನಿತ್ಯಾನಿತ್ಯ ವಿಚಾರ, ಚತುರ್ವಿಂಶಕ ನಿರಸನ, ಜೀವತ್ರಯ ಭೇಧ, ವಾಸನೋದ್ರೇಕ ನಿರಸನ, ಮನೋ ನಿರೂಪಣ, ವಸ್ತುನಿರ್ದೇಶ, ಸ್ವಾತ್ಮನಿರೂಪಣ ಮುಂತಾಗಿ ವಿಷಯ ವಿಭಾಗವನ್ನು ಮಾಡಿದೆ. ಇದು ಗುರು ಶಿಷ್ಯ ಸಂವಾದ ರೂಪವಾಗಿಯೂ ವೀರ ಶೈವ ವೇದಾಂತ ಬೋಧಕವಾಗಿಯೂ ಇದೆ. ಕವಿ ಗುರು ಬಸವನೆಂದೂ, ವಿಜಯನಗರದ ರಾಜನಾದ ೨ ನೆಯ ಪ್ರೌಢದೇವರಾಯನ (೧೪೧೯-೧೪೪೬) ಕಾಲದಲ್ಲಿದ್ದವನೆಂದೂ, ಶಿವಯೋಗಾಂಗ ಭೂಷಣ, ಕಲ್ಯಾಣೇಶ್ವರ, ಸ್ವರೂಪಾಮೃತ, ವೃಷಭಗೀತೆ, ಅವಧೂತಗೀತೆ, ಮನೋವಿಜಯ ಕಾವ್ಯವೆಂಬ ಗ್ರಂಥಗಳನ್ನೂ ಸಹ ಬರೆದಿರುವನೆಂದೂ ಕವಿಚರಿತ್ರೆಯಿಂದ ತಿಳಿಯಬರುತ್ತದೆ. (ಸಂಪುಟ ೨, ಪುಟ ೭೪).

No. 566. ಸದ್ಗುರು ರಹಸ್ಯ.

SADGURU RAHASYA.

Substance, palm-leaf. Size, $12\frac{7}{16} \times 1\frac{1}{8}$ inches. Pages, 92. Lines, 5 on a page. Character, Kannaḍa. Condition, much injured. Appearance, old. Mode of writing, fair.

Begins on fol. 51*a* of the manuscript described under No. 300 ante.

Complete in 9 'Upadēśas.'

Same work as the above.

(ವಿ-ವಿ.)—

ಸಮಗ್ರವಾಗಿದೆ. ಹೆಚ್ಚು ಶಿಥಿಲವಾಗಿದೆ ಉತ್ತಮವಾದ ಲಿಪಿ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಕೂಡಿವೆ. ಅವಾವುವೆಂಬುದನ್ನು ಹಿಂದಣ ೩೦೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 567. ಸರ್ವಜ್ಞತ್ರಿವಿಧಿ. SARVAJÑATRIVIDHI.

Substance, palm-leaf. Size, $7\frac{5}{8} \times 1\frac{1}{8}$ inches. Pages, 156. Lines, 6 on a page. Character, Kannaḍa. Condition, badly injured. Appearance, old. Mode of writing, not bad and not free from mistakes.

Incomplete.

Contains 900 stanzas, some ending with 'Sarvanjña' and some with "Paramārtha."

Deals with the moral teachings according to the Vīraśaiva system. The name of the author is Sarvajña, who lived about 1700 A.D.

Beginning :—

ಜಾತಿಸ್ಮರತ್ವ :—
ತ್ರಿಪದಿ :—

ಮುನ್ನ ಪೂರ್ವದಲಾನು ಪನ್ನಗಧರನಾಳು
ಎನ್ನಯ ಪೆಸರು ಪುಷ್ಪದತ್ತ ಕೈಲಾಸದಿ ।
ಮನ್ನಿಪರು ಎನ್ನ ಪರಮಾರ್ಥ ! ॥ ೧ ॥
ಅಂದುನಾ ಪುಷ್ಪದತ್ತ ಬಂದೆ ವರರುಚಿಯಾಗಿ ।
ಮುಂದೆ ದೇವ ಸಾಲೆ ಸರ್ವಜ್ಞನೆಂದೆನಿಸಿ ।
ಬಂದವನು ನಾನೆ ಪರಮಾರ್ಥ ! ॥ ॥
ಮಾ[ಸನೂ](ಸೂ)ರ ಬಸವರಸ ಕೂಸನೀಶನ ಕೇಳ್
ಕಾಶಿಯಾ ಅಭವನೊಳು ಪಡೆದ ವರವದು ।
ಸೂಸಿತೆಂತೆನಲು ಪರಮಾರ್ಥ! ॥ ॥
ಗಂಡಾಗಬೇಕೆಂದು ಪಿಂಡವನು ನುಂಗಲದು ।
ರಂಡೆಮಾಳವ್ವೆಯೊಳು ಬರುವೆನೆಂದೆನಲು ।
ಕಂಡಾಪನೆ ಬೇಳ್ವ ಪರಮಾರ್ಥ ॥ ॥
ಗಡಿಗೆ ಮಡಕೆಯ ಕೊಂಡು ಅಡುವರಾವೆಯೊಳಗೆ ।
ಬಿಡದೆ ಮಳೆ ನೋಡ ಪೊಡೆ ಯಲ್ಕೆ ಇಬ್ಬರಿಗೆ ।
ತಡೆಬಿಡಲಾಯ್ತು ಪರಮಾರ್ಥ ॥ ॥

ಅಂಬುಜೂರೊಳಗೆಸೆವ ಕುಂಬಾಳ ನಾಲೆಯಲಿ ।
ಇಂಬಿನ್ನಾಕಳೆಮಾಳಿಯೊಳು ಬಸವರಸ ।
ನಿಂಬಿಟ್ಟನೆನ್ನ ಪರಮಾರ್ಥ ॥ ॥
ಬಿಂದುವನು ಬಿಟ್ಟುಹೋದಂದು ಬಸುಱಾದಳವ ।
ಳಂದಾದಿ . . . ದಶಮಾಸ ಪುದರದಲಿ ।
ನಿಂದಾನು ಬೆಳೆದೆ ಪರಮಾರ್ಥ ॥ ॥
ಹೆತ್ತವಳು ಮಾಳಯೆನ್ನನೊತ್ತಿ ತೆಗೆದಳು ಕೇರಿ ।
ಕತ್ತನು ಬೆನ್ನಹಿಡಿವಳು ಕಾಳ ಮೊಱದೊಳೆನ್ನ ।
ಬಿತ್ತರಿಸಿದವಳು ಪರಮಾರ್ಥ ॥ ॥

* * *

ಮಾಳನೂ ಮಾಳಯೂ ಕೂಳತಿಂದ ಹೆಮ್ಮೆಯಲಿ
ಕೇಳ್ವರೆನ್ನನಾರಮಗನೆಂದೂನಾ ಶಿವನ ।
ಮೇಳದ ಸುತನೆಂದೆ ಪರಮಾರ್ಥ! ॥ ॥

* * *

ಎ . ಷ್ಟ ಬಗೆಯಾರತಿಯ ಸುಟ್ಟಲ್ಲಿ ಫಲವೇನು ।
ನಿಷ್ಠೆಯಿಲ್ಲದನ ಶಿವಪೂಜೆ ಹಾಳೂರ ।
ಕೊಟ್ಟ[ಗೆ ಬೆಂ](ಗುರಿ) ದಂತೆ ಸರ್ವಜ್ಞ! ॥ ॥

* * *

ಲಿಂಗಪೂಜಿಸುವಾತ ಜಂಗಮಕೆ ನೀಡದೊಡೆ ।
ಲಿಂಗದ ಕ್ಷೋಭೆ ಘನಮುಕ್ಕು ಮಾಲಿಂಗ ।
ಹಿಂಗುವದವನ ಸರ್ವಜ್ಞ ॥

End :—

. . . . . ದು ಕರ ಲೇಸು ।
ಒಕ್ಕಾಗಿ ಮೇಲಣ ಕಾಗೆ ನಾಯ್ನೀರ ।
ನಕ್ಕಿದಂತಕ್ಕು ಸರ್ವಜ್ಞ ॥
ಉಪ್ಪುಕಾಮನ ಬಿಲ್ಲು ತುಪ್ಪವಯ್ದಲರಂಬು ।
ಬಪ್ಪ ಭೋಗಗಳು ರತಿಯಾಗಿ ಕೂಳು ಕಂ ।
ದರ್ಪ ಕಂಡಯ್ಯ ಸರ್ವಜ್ಞ ॥
ತಾಂಬೂಲ ಮೆಲುವ . . . ।
. . . . ।
. . . . ।

(ವಿ.ವಿ.)—

ಅಸಮಗ್ರ. ಒಂದರಿಂದ ೧೪ ಪದ್ಧತಿಗಳು ಸಮಗ್ರಗಳಾಗಿಯೂ ೧೫ ನೆಯ ಪದ್ಧತಿಯು ಅಸಮಗ್ರವಾಗಿಯೂ ಇವೆ. ಅತ್ಯಂತ ಶಿಥಿಲ. ಬರೆವಣಿಗೆಯು ಹೃದಯಂಗಮವಾಗಿಲ್ಲ. ತಪ್ಪಿದೆ. ಮುದ್ರಿತಗ್ರಂಥಗಳಗಿಂತಲೂ ಚೆನ್ನಾದ ಪಾಠಾಂತರವಿದೆ.

ಇದು ತ್ರಿಪದಿರೂಪವಾಗಿದೆ. ಇದರಲ್ಲಿ ಸುಮಾರು ೯೦೦ ಪದ್ಯಗಳವೆ. ಪದ್ಯಗಳೆಲ್ಲವೂ "ಪರಮಾರ್ಥ" ಅಥವಾ "ಸರ್ವಜ್ಞ" ಎಂದಂತ್ಯವಾಗುವುವು. ಈ ಗ್ರಂಥದಲ್ಲಿ ವೀರಶೈವವೇದಾಂತವೂ ಹಲವು ಲೌಕಿಕ ನೈತಿಕವಿಷಯಗಳೂ ಪ್ರತಿಪಾದಿಸಲ್ಪಟ್ಟಿವೆ. ಇದನ್ನು ಬರೆದವನು ಸರ್ವಜ್ಞನೆಂಬುವನು. ಈತನ ಜನನಾದಿ ವಿಷಯಗಳನ್ನುದಾಹರಿಸಿರುವ ಭಾಗದಿಂದ ತಿಳದುಕೊಳ್ಳುವುದು. ಇವನ ಜೀವಿತಕಾಲವು ಸುಮಾರು ಕ್ರಿ. ಶ. ೧೭೦೦ ಆಗಿರಬಹುದೆಂದು ಕರ್ಣಾಟಕ ಕವಿ ಚರಿತೆಯಲ್ಲಿ (ಸಂಪುಟ ೨ ಪುಟ ೫೩೩) ಬರೆದಿದೆ.

No. 568. ಸರ್ವಜ್ಞಪದ್ಧತಿ-

SARVAJNAPADDHATI.

Substance, palm-leaf. Size, 14¼ × 1½ inches. Pages, 190. Lines, 6 on a page. Character, Kannaḍa. Condition, injured. Appearance, old. Mode of writing, good and free from mistakes.

Incomplete.

Same work as the above.

(ವಿ-ವಿ.)—

ಅಸಮಗ್ರ. ಇದರಲ್ಲಿ ೧೪೯೫ ಪದ್ಯಗಳವೆ. ಪದ್ಧತಿಗಳು ಅಸ್ತವ್ಯಸ್ತಗಳಾಗಿರುವುವು. (ಕಾಲಪದ್ಧತಿಯಿಂದ ನೀತಿಪದ್ಧತಿಯವರೆಗಿದೆ.) ಶಿಥಿಲ. ಬರೆವಣಿಗೆಯು ಚೆನ್ನಾಗಿದೆ. ತಪ್ಪಿಲ್ಲ.

ಇದು ಹಿಂದೆ ವಿವರಿಸಿದ ಗ್ರಂಥವಾಗಿದೆ.

No. 569. ಸರ್ವಜ್ಞಪದ್ಯಗಳು-

SARVAJNAPADYAGALU.

Substance, palm-leaf. Size, 7⅝ × 1 inches. Pages, 200. Lines, 4 on a page. Character, Kannaḍa. Condition, much injured. Appearance, old. Mode of writing, bad and full of mistakes.

Incomplete.

Same work as the above.

(ವಿ-ವಿ.)—

ಅಸಮಗ್ರ. ಆದ್ಯಂತರಹಿತ. ಇದರಲ್ಲಿ ಹೆಚ್ಚು ಕಡಿಮೆ ೨೦೦ ಪದ್ಯಗಳವೆ. ಬಹಳ ಶಿಥಿಲ. ಬರೆವಣಿಗೆಯು ನೆಟ್ಟಗಿಲ್ಲ. ತಪ್ಪುಗಳಿಗೆ ಕಡಿಮೆಯಿಲ್ಲ.

ಇದು ಹಿಂದೆ ವಿವರಿಸಿದ ಗ್ರಂಥವಾಗಿದೆ.

No. 570. ಸಿದ್ಧರಾಮೇಶ್ವರ ತ್ರಿವಿಧಿ-

SIDDHARAMĒŚVARA TRIVIDHI.

Substance, palm-leaf. Size, 11¼ × $1\frac{3}{13}$ inches. Pages, 24. Lines, 6 on a page. Character, Kannaḍa. Condition, much injured. Appearance, old.

Begins on fol. 1*a*. The other works here in are :—(1) Siddha Rāmēśvaratrividhi (different work) 13*a*., (2) Nīlammantrividhi 20*a*, (3)

Akṣaramālikāgadya 25*a* (sanskrit), (4) Pañcaprakāragadya 26*a* (sanskrit), (5) Namaskāragadya 30*a* (sanskrit), (6) Udāharaṇagadya 33*b* (sanskrit), (7) Aṣṭōttaraśatanāmagadya 39*a* (sanskrit), (8) Ṣatsthalagadya 42*b* (sanskrit), (9) Akṣaraṅkagadya 46*b*, (10) Siddhēśvaratrividhi, 54*a*, (11) Vr̥ṣabhakavaca 59*a* (sanskrit), (12) Maruḷudēvarunirūpisida vacana 65*a*.

Complete.

A Vīraśaiva work written in praise of Guru. The name of the author is Siddharāma.

Beginning :—

ಗುರುಲಿಂಗಬಸವಣ್ಣ ಚರಲಿಂಗ ಬಸವಣ್ಣ ।
ಕರುಣಾಕರ[ನು] ಚೆನ್ನಬಸವಣ್ಣ[ನು] ॥
ಶರಣಸ್ಥಲದ ಕಲ್ಪಸುರಭೂಜಫಲವಿತ್ತ ।
ಕರುಣಾಕರ[ನು] ಚೆನ್ನಬಸವಣ್ಣ(ನು)
ಅಂದು ಆದಿಯುಲಾದ ಆನಂದಬೀಜವನು ।
ತಂದೆನ್ನ ಕರಭೂಮಿಯುಲ್ಲಿ ಬಿತ್ತಿ ।
ಅಂಕುರವು ಮೂಱಾಗಿ ಫಲವು ಆಱಾಗಲ್ಕೆ ।
ಚಿಂತೆಗೆಟ್ಟೆನು ಗುರುವೆ ಯೋಗಿನಾಥ ! ॥ (?)
ನಿತ್ಯಲಿಂಗಾರ್ಚನೆ (ಯು) ನಿತ್ಯಭಕ್ತರ ಸೇವೆ ।
ನಿತ್ಯ ಗುರುಭಜನೆಯುಲಿ ಸನ್ನಿಹಿತನಾಗಿ ॥
ನಿತ್ಯಚರಲಿಂಗದ ಪ್ರಸಾದವನು ಕೊಂಬ ಫಲ ।
ವ್ಯರ್ಥಕಾಯರಿಗುಂಟೆ ಯೋಗಿನಾಥ ! ॥

End :—

ಅಂಗದಿಕಳೆ ಪೊಳೆಯು ಲಿಂಗದಿ ನೆಲೆಗೊಳಸಿ ।
ಮಂಗಳಾ . . . . ॥
. . ದುವೆ ಪರಮಘನವೆಂದು ಅಱಿದೆನು ಯೆನ್ನ ।
ಲಿಂಗ ಸಲಹೈ ಗುರುವೆ ಯೋಗಿನಾಥ ! ॥
ಪರವೆ ಪರಬ್ರಹ್ಮವೆ ಗುರುವೆ ಪರತತ್ವವೆ ।
ನಿರು . . . . ಪ ॥
ನಿರತಿಶಯ ನಿರವಧಿಕ ನಿರ್ಭಿನ್ನನಿರ್ದ್ವಂದ್ವ
ಗುರುವೆ ರಕ್ಷಿಸು ಪರವೆ ಯೋಗಿನಾಥ! ॥
ಇಂತು ಶಿವಯೋಗಿನಾಥನನರ್ತಿಯಿಂ ಪಾಡಿ ।
ಮುಂತೆ ಮನ್ಮನದಲ್ಲಿ ಮಗ. . . . ॥
. . . . . ಬಸವಪ್ಪನಡಿಗಳಗೆಱ ।
ನಂತರ್ಥಿಯಿಂದೆಱಗುವೆ ಯೋಗಿನಾಥ ! ॥ (?)

Colophon :—

ಸಿದ್ಧರಾಮೇಶ್ವರ ತ್ರಿವಿಧಿ ಸಮಾಪ್ತಮಂಗಳ ಮಹಾಶ್ರೀ.

(ಪ-ನಿ.)—

ಸಮಗ್ರ. ಕೊನೆಯ ಒಂದು ಓಲೆ ಮುರಿದು ಹೋಗಿದೆ. ಶಿಥಿಲವಾಗಿದೆ. ಬರೆವಣಿಗೆ ಉತ್ತಮವು. ಇದರೊಡನೆ ಇನ್ನೂ ಅನೇಕ ಪುಸ್ತಕಗಳು ಸೇರಿವೆ.

ಇದರಲ್ಲಿ ೧೪೦ ಪದ್ಯಗಳಿವೆ. ಪ್ರಥಮ ಪದ್ಯವನ್ನುಳಿದ ಮಿಕ್ಕ ಎಲ್ಲ ಪದ್ಯಗಳ ಕೊನೆಯಲ್ಲಿಯೂ 'ಯೋಗಿನಾಥ' ಎಂಬ ಅಂಕಿತವಿದೆ. ಗ್ರಂಥದಾದಿಯಲ್ಲಿ ಬಸವ, ಚೆನ್ನಬಸವ ಮುಂತಾದವರ ಸ್ತುತಿಯಿದೆ. ಗ್ರಂಥಕರ್ತೃವು 'ಸಿದ್ಧರಾಮ' ನೆಂದು ಕವಿ ಚರಿತ್ರೆಯಲ್ಲಿ ಹೇಳಿದೆ. ಆ ಬಗ್ಗೆ ಕವಿಚರಿತ್ರೆ (ಪ್ರಥಮ ಮುದ್ರಣ) ಪ್ರಥಮ ಸಂಪುಟ ೧೫೦ ನೆಯ ಪುಟದಲ್ಲಿ ನೋಡಿ ತಿಳಿಯುವುದು.

No. 571. ಸೊಡ್ಡಳಬಾಚರಸ ವಚನ.

SODDAḶABĀCARASA VACANA.

Substance, palm-leaf. Size, 12 × 1⅛ inches. Pages, 28. Lines, 5 on a page Character, Kannada. Condition, much injured. Appearance, old. Mode of writing, not bad and not free from mistakes.

Begins on fol. 92*a* of the manuscript described under No. 498 *ante*.

Incomplete.

Contains 43 prose passages (Vacanas) giving a brief description of the 'Six Sthalas'.

By Soḍḍaḷa Bācarasa, who was a contemporary of Basava.

Beginning :—

. . . ಸಾರಗ್ರಹಿಸುತ್ತಿದೆಯಯ್ಯಾ ! ಎಂದೋ ನಿಮ್ಮ ನೆನೆವೆ. ಎಂದೋ ನಿಮ್ಮ ಪೂಜಿಸುವೆ, ಸಮಚಿತ್ತವಾಗಿ ನಾ ನಿಮ್ಮ ನೆನವಡೆನಾಳಂಗಿಂದಿಲೆ ; ಸುಮಹಾಲಿಂಗಕಲ್ಲೇಶ್ವರಾ ! ಸೊಣಗಂಗೆ ಖಂಡವ ಚೆಲ್ಲಿವಂತೆ, ಸಂಸಾರಿಗೆ ಸಂಸಾರವನಲ್ಲದೆ ತೋಱುವನೆ ? ಹೋ ! ಅಯ್ಯಾ ! ಶರಣರ ಪದವಿಗಳ ತೋಱುವನೆ ಭಕ್ತಿಪದಂಗಳ '' ಅಶ್ರುತಂ ಕರ್ಣಪೂರಂಚ ಶ್ರುತಂ ಕರ್ಣಮರೋಚಕಂ । ಚರ್ಮಖಂಡನ ಭಕ್ಷಣಂ ಶ್ವಾನಮಾನಮೋರೋಚಕಂ ॥ ? ॥

. . . . ಅಣ್ಣೆನೆಂಬಣ್ಣಗಳ ನಣ್ಣಿಸುವುದು ಹೊನ್ನು, ಅಣ್ಣೆನೆಂಬಣ್ಣಗಳ ನಣ್ಣಿಸುವುದು ಹೆಣ್ಣು, ಅಣ್ಣೆನೆಂಬಣ್ಣಗಳ ನಣ್ಣಿಸುವುದು ಮಣ್ಣು ಹೊನ್ನಕಂಡ ಬಳಿಕ ಅಣ್ಣದಣ್ಣಗಳುಂಟೇ ಹೆಣ್ಣ ಕಂಡ ಬಳಿಕ ಅಣ್ಣದಣ್ಣಗಳುಂಟೇ ? ಮಣ್ಣ ಕಂಡ ಬಳಿಕ, ಅಣ್ಣದಣ್ಣಗಳುಂಟೇ ? ಹೊ . . . . ಮಿಯತೋಱಿ ಬಾಯಿಕಣ್ಣಲ್ಲಿ ಮಣ್ಣ ಕೊಯ್ದ ಸೊಡ್ಡಳಗರಳಧರ ! ॥೪ ॥

* * * *

ಎಲ್ಲಾ ದೈವಕ್ಕೆ ವಿಷ್ಣು ಘನವೆಂಬ ಭೇಗವಾದಿ ನೀನು ಕೇಳಾ ! ಎಲ್ಲಾ ದೈವಕ್ಕೆ ವಿಷ್ಣು ಘನವೆಂಬ ಮಾಯಾವಾದಿ ನೀನು ಕೇಳಾ ! ಗಾಯತ್ರೀ ಛಂದ: ವಿಶ್ವಾಮಿತ್ರ ಋಷಿ ಸವಿತಾ ದೇವತಾರ ಅಗ್ನಿಮುಖ, ಬ್ರಹ್ಮ, ಶಿವ, (?) ವಿಷ್ಣು, ಹೃದಯದಲ್ಲಿ ರುದ್ರ, ಲಲಾಟಬಿಂದು ಹೀಗೆಂದು

ಸ್ಮೃತಿ ಹೇಳುತ್ತಿದೆ. ಗಾಯತ್ರೀ ಕಲ್ಪದಲ್ಲಿ "ಓಂ ಭೂ! ಓಂ ಭುವ, ಓಂ ಸುವಃ ಓಂ ಮಹ ಓಂ ತಪ, ಓಂ ಸತ್ಯಂ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ ತದೇವ ಪ್ರಚೋದಯಾತ್ ಏಕ" ಯೆಂದುದು. ಸರ್ವದೇವಶಿಖಾಮಣಿ ಸೊಡ್ಡಳನಲ್ಲದೆ ಮತ್ತೆ ದೈವವಿಲ್ಲವೆಂದುದು.

* * * *

End :—

ಹಂದೆಯ ಕೈಯಲ್ಲಿ ಚಂದ್ರಾಯುಧ ಇದ್ದರೆ ಫಲವೇನು ? ಮಾರ್ಮಲದಂಕವನೀಲಿಯ ಬಲ್ಲನೇ? ನಿಚ್ಚಟ ಶರಣರಲ್ಲದೆ ಗಳಗರ್ಜನೆಯ ಸೈರಿಸಬಲ್ಲರೇ ? . . ಸೊಡ್ಡಳ ದೇವನ ಶರಣರ ಬರವಿಂಗೆ ಉಬ್ಬುವ ಕೊಬ್ಬುವ ಸಂಗನ ಬಸವಣ್ಣ "

(ವಿ-ವಿ.)—

ಅಸಮಗ್ರ. ಅತಿ ಶಿಥಿಲ. ಗ್ರಂಥಪಾತ್ರವಿದೆ. ಬರೆವಣಿಗೆಯು ಸಾಮಾನ್ಯವಾಗಿದೆ. ತಪ್ಪು ಇದೆ.

ಇದು ವಚನಗ್ರಂಥವಾಗಿದೆ. ಇದರಲ್ಲಿ ಸೊಡ್ಡಳಾಂಕಿತಗಳಾಗಿರುವ ೨೪ ವಚನಗಳವೆ. ವಚನಗಳು ಲಲಿತಗಳಾಗಿಯೂ ಅರ್ಥಗರ್ಭಿತಗಳಾಗಿಯೂ ಇರುವುವು. ಈ ಗ್ರಂಥದಲ್ಲಿ ಷಟ್-ಸ್ಥಲವು ಅತಿ ಸಂಕ್ಷೇಪವಾಗಿ ವರ್ಣಿಸಲ್ಪಟ್ಟಿದೆ. ಗ್ರಂಥಕರ್ತನು ಬಸವಸಮಕಾಲೀನನಾದ ಸೊಡ್ಡಳಬಾಚರಸನೆಂಬಾತನು. ಇವನ ಜೀವಿತಕಾಲವು ಸುಮಾರು ಕ್ರಿ ಶಕ. ೧೧೬೦.

No. 572. ಸ್ವರೂಪಾಮೃತ.

SVARŪPĀMṚTA.

Substance, Śrītāḷa. Size, 7 × 1 ⅞ inches. Pages, 19. Lines, 10 on a page. Character, Kannaḍa. Condition, very much injured. Appearance, old. Mode of writing, fair.

Begins on fol. 75*b* of the manuscript described under No. 299 ante.

Complete in 3 Parichēdas.

A work written in Bhāmini Ṣatpadi on Vīraśaiva philosophy in the form of a conversation between a teacher and a pupil. The name of the author is stated to be Gurubasava.

Beginning:—

॥ ರಾಗ॥ ಒಡ್ಡಿಯ ಧನ್ಯಾಸಿ ॥

ಭಾ.॥ ಷ.॥ ಅಮಮ ಮನಸಿನ ಗಾಹು ಗಮಕ- ।
ಭ್ರಮಣ ಬಂಧವ ಬಿಡಿಸಿ ಶಿಷ್ಯೋ- ।
ತ್ತಮನ ಮುಕ್ತಿಕಲತ್ರನಂ ಮಾಡಿದನು ದೇಶಿಕನು ॥
ಶ್ರೀಸಕಲಬೋಧನು ವಿಶುದ್ಧನ ।
ಕೇಶನಖಿಲಜಗನ್ನುತನ ನಿ ।
ಶ್ಶೇಷನೇಕನಪಾರಮಹಿಮಾಂಬೋಧಿ ರೂಪಕನು ॥

ವಾಸನಾಕ್ಷಯುನಖಿಳವಿಶ್ವಾ ।
ವಾಸನಾಕ್ಷಯು ಪೆನಿಪ ಗುರು ಬಸ ।
ವೇಶನಿರಲಿ ಮದೀಯು ಸುಮನಃ ಕಮಲಮಧ್ಯದೊಳು ॥

ಕೇಳು ಭೂಮಿರುಹದ ಶಿಖರ ವಿ ।
ಶಾಲದೊಳು ನಿಪ್ಪಸರದಿಂ ಸಲೆ ।
ಬೀಳುತಿಹ ಚಿರನೀರಸಿಂದನೆಂದತೆ ಮಾನವನು ॥ (?)

ಜ್ವಾಲಿನೇತ್ರನ ಮುಂದೆ ಬೀಳಲು ।
ಕೀಲಿಸಿದ ಪಾಪೌಘವನೆಪಂ ।
ಕೇಳದೆಂದು ರಹಸ್ಯಮುದ್ಘೋಷಿಸಿದೆ ಪಶುಪತಿಯು ॥

* * *

ರಾಗ ಹೋದಾಕ್ಷಣದಿ ವೇಶನೆ ।
ಹೋಗದೇ ಕೇಳೆ ಹಗೆ ಮನಸನು ।
ನೀಗಲಾಱದೆ ಬಱಿದೆ ಬೆದರಿಸುತಿಪ್ಪ ಸಂಶಯುವು ॥

ತ್ಯಾಗವಾಗಲು ಗರಳ ವಿಳಿಯಲಿ ।
ಕೋಗಡಿಕೆ ಬಿಡದಿಹುದೆ ಭವಸಂ ।
ಯೋಗವೇ ತತ್ಕಾರ್ಯವಾಗಲು ಮಗನೆ ಕೇಳೆಂದ ॥

Colophon :—

ಇತಿ ಶ್ರೀಮತ್ಸ್ವರೂಪಾಮೃತೇ ಮನೋನಿರಸನನಾಮಾ ಪ್ರಥಮ ಪರಿಚ್ಛೇದಃ.

॥ ರಾಗ॥ ತೆಲುಗು ಕಾಂಬೋದಿ ॥

ಪಲ್ಲವಿ.

ಭಾ॥ ಷ॥ ನಯದಲೀ ಶಿಶುವಿಂಗೆ ವಿಶ್ವಾ ।
ಲಯನ ನಿಜವನು ತೋಱಿ ಪಂಚಾ ।
ಪಯುವನೊಳು ತಾದಾತ್ಮ್ಯವಂ ಮಾಡಿದನು ದೇಶಿಕನು ॥

End :—

ಅತನುವೆಂದರೆ ಮುಕ್ತಿ ತನುವೆನ ।
ಲತಿಶಯದ ಬಂಧನವಿದೇನೋ ।
ವಿತತವಲ್ಲ ವಿಶೇಷಧಾತು ಕ್ರಿಯು ನಿಘಂಟುಗಳಿಂ ॥

ಪ್ರತಿಯುನೋದದಱಿಂದ ತನುವಿದ ।
ನತನುವಂ ಮಾಡುವುದೆ ಮುಕ್ತಿ- ।
ಸ್ಥಿತಿಯುದಲ್ಲದಿರಲ್ಪ್ರಬಂಧವನಱಿದುಕೋಯೆಂದ ॥

ತನ್ನ ತನು ವೆಂದಾತ್ಮ ನೊಳದಿ- ।
ಪ್ಪನ್ನವರ ತನುವಂ ಸಮುಸ್ತರು ।
ಮನ್ನಿಸುತ್ತಿಹರೊಲಿದು ಪೂಜಿಸುತಿಹರು ಮುಮುಕ್ಷುವರು ॥

ಸನ್ನಿಯಿದು ಪರಮಾತ್ಮನಿಂ ತನು ।
ಭಿನ್ನವಾಗಲು ಬಳಿಕ ತನುವಿನ ।
ಸನ್ನಿಧಿಯುಳಿರಲಂಜುವರು ನೀಂ ತಿಳಿದು ನೋಡೆಂದ ॥

ಎನಲಿಕಾತನು ಸರ್ವರಿಂ ವಂ- ।
ದ್ಯನು ಸಮಸ್ತ ರಹಸ್ಯದೊಳು ಪೂ- ।
ಜ್ಯನು ವಿಶೇಷನು ವಿಮಳ ಸುಖಕರನಖಿಳನತಿಶಯನು ॥

ವಿನುತನಮೃತನನನ್ಯ ಸಾಕ್ಷಿಕ ।
ನೆನೆ ವಿಧಾನಿಗಳಿಂದ ಪರವಾ ।
ತ್ಮನ ನಿಜಸ್ವಾಭಾವದೊಳು ನೀಂ ತಿಳಿದು ನೋಡೆಂದ ॥

ಅತಿಶಯದೊಳರದೀ ಸ್ವರೂಪಾ- ।
ಮೃತವನುಚ್ಚರಿಸಿದವ ಹಿತದಿಂ ।
ನುತಿಸಿದವ ಸದ್ಭಾವದಿಂದರ್ಥವನು ತನ್ನೊಳಗೆ ॥

ಮಥಿಸಿದವ ಪಾತಕಸಮೂಹವ ।
ನತಿಗಳೆದು ಕೈವಲ್ಯಲಲನಾ ।
ರತಿಸಮನ್ವಿತನಾಗಿ ಸುಖವಿಹನೆಂದ ದೇಶಿಕನು ॥

ಏಕಸಪ್ತ ತ್ರಿಪದ ಸೂತ್ರಗ ।
ಳೈಕ್ಯದಿಂ ನಿರ್ಮಿಸಿದ ಕಂಪೀ ।
ಠಾಖೆ ವರಿಯಂತರದೊಳಹ ಚಿದಚಿತ್ಸ್ವರೂಪ ಸುಧಾ- ॥

ಸೌಖ್ಯಮಂ ಚಪ್ಪರಿದು ವಿದ್ಯಾ ।
ಭೀಕರದ ಬಲುಗುತ್ತಮಂ ನೆರೆ ।
ನೂಕಿ ಮೋಕ್ಷಾರ್ಥಿಗಳು ಗುರುಬಸವನೊಳು ಸುಖವಿಹರು ॥

Colophon :—

ಇತಿ ಶ್ರೀಮತ್ಸ್ವರೂಪಾಮೃತೇ ತೃತೀಯಪರಿಚ್ಛೇದಃ. ಅಂತು ಪದನು ೭೭ ಕ್ಕಂ ಸ್ವರೂಪಾಮೃತಂ ಸಂಪೂರ್ಣಂ.

(ವಿ.ವಿ.)—

ಸಮಗ್ರವಾಗಿದೆ. ಹೆಚ್ಚು ಶಿಥಿಲವಾಗಿದೆ. ಉತ್ತಮವಾದ ಲಿಪಿ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಕೂಡಿವೆ ಅವಾವುವೆಂಬುದನ್ನು ೨ನೆಯ ನಂಬರಿನಲ್ಲಿನೋಡಿ ತಿಳಯುವುದು.

ಇದು ಭಾಮಿನೀ ಷಟ್ಪದಿಯಲ್ಲಿ ಬರೆದಿದೆ ಪರಿಚ್ಛೇದ ೩, ಪದ್ಯಗಳು ೭೭. ಗ್ರಂಥದಾದಿಯಲ್ಲಿ ಗುರುಬಸವಸ್ತುತಿಯಿದೆ. ಗುರುಶಿಷ್ಯ ಸಂವಾದ ರೂಪವಾದುದು. ವೀರಶೈವವೇದಾಂತವನ್ನು ಪ್ರತಿಪಾದಿಸುವುದು. ಕವಿ 'ಗುರುಬಸವ' ನೆಂದು ಕವಿಚರಿತ್ರೆ (ಸಂಪುಟ ೨, ಪುಟ ೭೪) ಯಿಂದ ತಿಳಿದು ಬರುತ್ತದೆ.

No. 573. ಸ್ವರೂಪಾಮೃತ.

SVARŪPĀMṚTA.

Substance, palm-leaf. Size, $12\frac{1}{16} \times 1\frac{1}{8}$ inches. Pages, 23. Lines, 5 on a page. Character, Kannaḍa. Condition, much injured. Appearance, old.

Begins on fol. 115*a* of the manuscript described under No. 300 ante.

Complete in 3 Perichēdas.

Same work as the above.

(ವಿ-ವಿ)—

ಸಮಗ್ರವಾಗಿದೆ. ಹೆಚ್ಚು ಶಿಥಿಲವಾಗಿದೆ. ಉತ್ತಮವಾದ ಲಿಪಿ. ಇದರೊಡನೆ ಇನ್ನೂ ಹಲವು ಪುಸ್ತಕಗಳು ಕೂಡಿವೆ. ಅವಾವೆಂಬುದನ್ನು ಹಿಂದಣ ೩೦೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 574. ಅಕ್ಕಗಳ ವಚನ.

AKKAGAḶA VACANA.

Substance, palm-leaf. Size, $12 \times 1\frac{1}{8}$ inches. Pages, 24. Lines, 5 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 107*a* of the manuscript described under No. 498 ante.

Complete.

Some of the principles of the Vīraśaiva system are herein set forth in an easy style by Mahādēviyakka, a contemporary of Basava. She seems to have lived in about the year 1160 A.D.

Beginning:—

ಸುಖದ ಸುಖಗಳ ಸಂಭಾಷಣೆಯಿಂದ ದುಃಖಕ್ಕೆ ವಿಶ್ರಾಂತಿಯಾಯಿತಯ್ಯಾ ! ಭಾವಭಾವ ವೊಂದೆಯಾದಲ್ಲಿ ನೆನಹಕ್ಕೆ ವಿಶ್ರಾಂತಿಯಾಯಿತಯ್ಯಾ ! ಬೆಚ್ಚು ಬೆರಸಲೊಡನೆ ಮುಚ್ಚು ಒಳ ಕೊಂಡಿತಯ್ಯಾ ! ಚೆನ್ನಮಲ್ಲಿಕಾರ್ಜುನಯ್ಯಾ ! ನಿಮ್ಮ ಶರಣರ ಸಂಗದಿಂದ ॥ ೧ ॥

*   *   *   *

ಪಂಚೇಂದ್ರಿಯ ಗುಣದೊಳಗೆ ಒಂದಕ್ಕೆ ಪ್ರಿಯವಾದಡೆ ಸಾಲದೆ ? ಸಪ್ತವ್ಯಸನದೊಳ ಗೊಂದಕ್ಕೆ ಪ್ರಿಯವಾದಡೆ ಸಾಲದೆ ? ರತ್ನದ ಸಂಕಲೆಯಾದರೇನು ? ಬಂಧನ ಬಿಡದು ಚೆನ್ನಮಲ್ಲಿಕಾರ್ಜುನ ! ''.

*   *   *   *

End :—

ಎನ್ನ ಪ್ರಾಣ ಜಂಗಮ, ಎನ್ನ ಜೀವ ಜಂಗಮ, ಎನ್ನ ಪುಣ್ಯದ ಫಲವು ಜಂಗಮ. ಎನ್ನ ಹರುಷದ ಮೇರೆ ಚೆನ್ನಮಲ್ಲಿಕಾರ್ಜುನ ಜಂಗಮತಿಂಥಿಣಿಯಬೋಲಾಡುವೆ ॥ ॥

ಊಡಿದಡುಣ್ಣದು, ನೀಡಿದಡೊಲಿಯದು, ಕಾಡದು ಬೇಡದು ಬೈಯೆನ್ನದು ನೋಡಾ! ಶಿವಲಿಂಗವಯ್ಯಾ! ಊಡಿದಡುಂಬ, ನೀಡಿದಡೊಲಿವ, ಕಾಡುವ ಬೇಡುವ ಕರುಣಿ ಚೆನ್ನಮಲ್ಲಿಕಾರ್ಜುನನೆಂಬ ಚರಲಿಂಗದ ಪಾದವಿಡಿದು ನಾನು ಬದುಕಿದೆನಯ್ಯಾ! ॥ ॥

ಜಂಗಮದ ಕೈ ಹೊಯಿದು (ಯ್ದು) ಹೊಯಿದುನಕ್ಕು ಕೆಟ್ಟರಯ್ಯಾ! ಸರಸದಲ್ಲಿ ಮುಟ್ಟಿ ಪೂಜಿಸುವರೆ. ನಿಮಗೆ ಲಿಂಗವಿಲ್ಲ. ಹುತ್ತಿನೊಳಗೆ ಕೈಯ್ಯಿಕ್ಕೆ ಸರ್ಪದಷ್ಟವಾದರೆ ಮತ್ತೆ ಗಾರುಡವುಂಟೇ? ಚೆನ್ನಮಲ್ಲಿಕಾರ್ಜುನಾ!

(ವಿ-ನಿ.)—

ಸಮಾಗ್ರ. ಬಹಳ ಶಿಥಿಲ. ಬರೆವಣಿಗೆಯು ನೆಟ್ಟಗಿಲ್ಲ. ತಪ್ಪಿದೆ.

ಇದು ಚೆನ್ನಮಲ್ಲಿಕಾರ್ಜುನಾಂಕಿತಗಳಾದ ೫೦ ವಚನಗಳುಳ್ಳ ಒಂದು ಚಿಕ್ಕ ವಚನ ಗ್ರಂಥವಾಗಿದೆ. ಇದರಲ್ಲಿ ವೀರಶೈವ ಸಿದ್ಧಾಂತವು ಲಲಿತಶೈಲಿಯಲ್ಲಿ ವಿವರಿಸಲ್ಪಟ್ಟದೆ ಈ ಗ್ರಂಥವನ್ನು ಬರೆದವಳು (ವಿರಚಿಸಿದಾಕೆಯು) ಬಸವಸಮಕಾಲಿಕೆಯಾದ ಮಹಾದೇವಿಯಕ್ಕ ಎಂಬಾಕೆಯು. ಈಕೆಯು ಬದುಕಿಕೊಂಡಿದ್ದ ಕಾಲವು ಸುಮಾರು ಕ್ರಿ. ಶ. ೧೦೬೦ ಎಂದು ತಿಳಿದುಬರುತ್ತದೆ.

No. 575. ಅವಸರದ ರೇಕಣ್ಣ ವಚನ.

AVASARADA REKAṆṆA VACANA.

Substance, palm-leaf. Size, 12 × 1⅛ inches. Pages, 3. Lines, 5 on a page. Character, Kannaḍa. Condition, much injured. Appearance, old. Mode of writing, bad and not free from mistakes.

Begins on fol. 62*a* of the manuscript described under No. 498 ante.

Incomplete.

Contains three Vacanas bearing on Vīraśiva philosophy. By Avasarada Rēkaṇṇa.

Beginning :—

ಕಾಲಲ್ಲಿ ಮೆಟ್ಟದೆ ಕೈಯಲ್ಲಿ ಹಿಡಿಯದೆ ಮರನನೇರಬೇಕು! ಕಣ್ಣಿನಲ್ಲಿ ನೋಡದೆ ಬೆರಳನಲ್ಲಿ ಹರಿಯದೆ ಬಾಯಲ್ಲಿ ಮೆಲ್ಲದೆ ಹಣ್ಣಿನ ರಸವ ನುಂಗಬೇಕು. ಸದ್ಯೋಜಾತ ಲಿಂಗದಲ್ಲಿ.

* * * *

End :—

ಕೈಲಾಸವೆಂಬುದು ಕ್ರಮಕೂಟ, ಮೋಕ್ಷವೆಂಬುದು . ದಾಗರ, ಕಾಯಸಮಾಧಿಯೆಂಬುದು ಪ್ರಪಂಚಿನ ಪುತ್ಥಳಿ, ಕಾಯಜೀವಕೂಡಿ ಒಯಲಾಗಿನ್ನಾವ ಠಾವಿನಲ್ಲಿ ಹೋಗಿ ನಿಲುವುದು ? ತನುವಿನ ಗಾಂಭೀರ್ಯವೆಂಬುದ ಮರಸಿದೆ. ಸದ್ಗುರುವ ತೋಱಿ ಸದ್ಗುರು ವೆಂಬುದ ಮರಸಿದೆ. ನಿಜವಸ್ತು ಶಿಲೆಯ ಮಱೆಯಲ್ಲಿದ್ದು ಲಿಂಗವೆಂಬುದ ಕುರುಹಿಟ್ಟು ಲಿಂಗವೆಂಬುದ ಮರಸಿದೆ. ತ್ರಿವಿಧ ಬಟ್ಟೆ ಕೆಡುವುದಕ್ಕೆ ಜಂಗಮವೆಂಬುದ ತೋಱಿ

ಜಂಗಮವೆಂಬುದ ಮಱಸಿದೆ. ನೀನೆಲ್ಲಡಗಿದೆ ? ಎಲ್ಲುಡುಗಿದೆ ? ಎಲ್ಲಿಒಂದೆ ? ಎಲ್ಲಿ ಬಿಕರಿಗೊಂಡೆ ? ನೀನೆಲ್ಲಿ ಹೋದೆ ? ಹುಟ್ಟಿದ ಠಾವಿನಲ್ಲಿ ನೀನೆಲ್ಲಿ ಹೋದೆ ? ಅಲ್ಲಿ ನಿನ್ನವರೆಲ್ಲರ ಕಾಣದೆ ಕಲ್ಲುಮಣ್ಣು ನೀರಿನಲ್ಲಿ ನೆರದಂತೆ ಬದುಕು ನನಗಿಲ್ಲಿಯೆ ಸಾಕು . ನಿ . . . . ಕುರುಹಿನಲ್ಲಿಯೆ ಬಯಲಂ ಸದ್ಯೋಜಾತಲಿಂಗವೆಂಬುದು ನಿರಾಲಂಬವಾಯಿತು.

(ವಿ-ವಿ.)—

ಅಸಮಗ್ರ. ಅತಿಶಿಥಿಲ. ಗ್ರಂಥಪಾತವಿದೆ. ಬರೆವಣಿಗೆಯು ಸಾಮಾನ್ಯವಾಗಿದೆ. ತಪ್ಪಿಲ್ಲ.

ಸದ್ಯೋಜಾತಲಿಂಗಾಂಕಿತವಾದ ವಚನತ್ರಯವಿರುವ ವೀರಶೈವವೇದಾಂತ ಪ್ರತಿಪಾದಕವಾದ ಈ ಗ್ರಂಥವು ಅವಸರದ ರೇಕಣ್ಣನಿಂದ ಬರೆಯಲ್ಪಟ್ಟುದೆಂದು ಕಂಡುಬರುತ್ತದೆ. ಈತನ ದೇಶಕಾಲಗಳಾವುವೋ ? ತಿಳಿಯವು.

No. 576. ಅಱಿವಿನ ಮಾರಿತಂದೆಯ ವಚನ.
ARIVINA MĀRITANDEYA VACANA.

Substance, palm-leaf. Size, 12 × $1\frac{1}{8}$ inches. Pages, 12. Lines, 5 on a page. Character, Kannaḍa. Condition, injured. Appearance, old. Mode of writing, not bad but free from mistakes.

Begins on fol. 42*a* of the manuscript described under No. 498 ante.

Incomplete.

Similar to the above. Contains 18 Vacanas bearing on the contents of Ṣaṭsthala. The author Arivina Māritande seems to be one of the great vacana writers.

Beginning :—

ಕಲ್ಲಿನೊಳಗಣ ಜ್ಯೋತಿ, ಉರಿಯೊಳಗಣ ಉಷ್ಣ. ಹಣ್ಣಿನೊಳಗಣ ಸಾರದ ದಸವಿಯಂತೆ ಸವಿಲೇಪವಾದ ಚಿತ್ರದಲ್ಲಿ ಲಾಸಿತದಂತೆ ಬೆಳಗುತ್ತದೆ. "ಸದಾಶಿವಮೂರ್ತಿಲಿಂಗದಲ್ಲಿ."

* * * *

ಕಾಳೋರಗನ ಹೆಡೆಯ ಮಧ್ಯದಲ್ಲಿ ಒಂದು ಕೋಳುಸಿಕ್ಕಿದ ಹೆಣ್ಣು ಕಾಲುಮೇಲಾಗಿ ತಲೆಕೆಳಗಾಗಿ ಆಳವರನೆಲ್ಲರ ಕಾಲ ಸಂಧಿಯಲ್ಲಿರಿಸಿ ಭಾಳಾಂಬಕನ ಲೀಲೆಯ ಹೊತ್ತು ಆಡುವರನೆಲ್ಲರ ತನ್ನ ಸುಖದ ಪದರದಲ್ಲಿ ಬೈಚಿಟ್ಟಿದ್ದಾಳೆ. ಆ ಹೊರೆಯ ಹರಿದಲ್ಲದಾಗದು ಸದಾಶಿವಮೂರ್ತಿಲಿಂಗವ ಅಱಿವುದಕ್ಕೆ.

* * * *

End :—

ಗುರುಲಿಂಗಾಸೆಯು ಕಲಿಸದೆ, ಲಿಂಗನ ಬಿಂದುವಿನಲ್ಲಿ ಸಂದೇಹವ ಮಾಡಿಸದೆ, ಜಂಗಮ ಸಕಲಸಂದೇಹದಲ್ಲಿ ಸಂಕಲ್ಪವ ಮಾಡಿಸದೆ ನಿಂದುದು ಪರಮವಿರಕ್ತ ಭಕ್ತಸ್ಥಲ. ಅಂದು ತನ್ನ ಯು ಅಂಗಕಾಯ ಜೀವಜ್ಞಾನತ್ರಾಣದ ಭೇದ ಸದಾಶಿವಮೂರ್ತಿಲಿಂಗ ಸಂಗದ ಸುಖ.

ವಿ-ವಿ.)—

ಅಸಮಗ್ರ. ಶಿಥಿಲ. ಲಿಪಿಯು ಸಾಮಾನ್ಯವಾಗಿದೆ. ತಪ್ಪುಗಳಿಲ್ಲ.

ಇದು ಸದಾಶಿವಮೂರ್ತಿಲಿಂಗಾಂಕಿತಗಳಾದ ಹದಿನೆಂಟು ವಚನಗಳುಳ್ಳ ಷಟ್‌ಸ್ಥಲ ವಿಷಯ ಪ್ರತಿಪಾದಕವಾದ ವಚನಗ್ರಂಥವಾಗಿದೆ. ಈ ಗ್ರಂಥಕರ್ತನು ಅಱಿವಿನಮಾರಿತಂದೆಯು. ಪ್ರಕೃತ ಗ್ರಂಥದಿಂದಿವನು ಪ್ರಬಲವಚನಕಾರರಲ್ಲೊಬ್ಬನೆಂದು (ಸಧೈರ್ಯವಾಗಿ) ಹೇಳಬಹುದು. ಉಳಿದ ವಿಷಯಗಳನ್ನುದಾಹೃತ ಭಾಗದಿಂದರಿಯುವುದು.

No. 577. ಆನಾಮಿಕ ನಾಗಯ್ಯ ವಚನ-
ĀNĀMIKA NĀGAYYA VACANA.

Substance, palm-leaf. Size, 12 × 1⅓ inches. Page, 1. Lines, 5 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 85*b* of the manuscript described under No. 498 ante.

Incomplete. Contains only three Vacanas.

Similar to the above. By Ānāmikanāgayya who lived about the year 1160 A.D.

Beginning :—

ಏಕಾಕ್ಷರ ದ್ವ್ಯಕ್ಷರ, ತ್ರ್ಯಕ್ಷರ ಪಂಚಾಕ್ಷರ ಅಕಾರವೇ ಬೀಜ, ಆಕಾರವೇ ಮೂರ್ತಿ ಕಹಕಹ ಕಿಹಿಕಿಹಿ ಕುಹುಕುಹು ದಂದಿಂ ದೊಂದೋಂ ಎಂಬ ಶಬ್ದದೊಳಗೆ ತ್ರೈಜಗವೆಲ್ಲಾ. ಈ ನಾಮನವಾದಂಗೆ ನಾಮ ಸೀಮೆಯೆಂಬುದೇನು ? ಆನಾಮಿಕನಾ[ಗೈ](ಗ)ಯ್ಯಪ್ರಿಯ ಚೆನ್ನ ರಾಮೇಶಯ್ಯ !

* * * *

End :—

ಹಸಿವಿಂಗೆ ಲಯವಿಲ್ಲ, ವಿಷಕ್ಕೆ ಕುಲವಿಲ್ಲ. ಆಸೆಗೆ ಹವಣಿಲ್ಲ, ವಂಚಕನು ಆನಾಮಿಕ ನಾಗಯ್ಯ ಪ್ರಿಯ ಚೆನ್ನ ರಾಮೇಶಯ್ಯ.

(ವಿ-ವಿ.) —

ಅಸಮಗ್ರ. ಅತಿಶಿಥಿಲ. ಬರೆವಣಿಗೆಯು ಸಾಮಾನ್ಯವಾಗಿದೆ. ತಪ್ಪಿದೆ.

ಇದು "ಆನಾಮಿಕ ನಾಗಯ್ಯ ಪ್ರಿಯ ಚೆನ್ನರಾಮೇಶಯ್ಯ" ಎಂದಂತ್ಯವಾಗುವ ವಚನತ್ರಯವಿರುವ ಒಂದು ಚಿಕ್ಕ ವಚನಗ್ರಂಥವಾಗಿದೆ. ಇದನ್ನು ಬರೆದವನು ಆನಾಮಿಕ ನಾಗಯ್ಯನೆಂಬಾತನು. ಈತನ ಜೀವಿತಕಾಲವು ಸುಮಾರು ಕ್ರಿ.ಶ. ೧೧೬೦.

No. 578. ಏಕಾಂತರಾಮಿ ತಂದೆಯ ವಚನ.

ĒKĀNTARĀMITANDEYA VACANA.

Substance, palm-leaf. Size, 12 × 1⅛ inches Pages, 2. Lines 5, on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 84*b* of the manuscript described under No. 498 ante.

Incomplete.

Contains only five Vacanas dedicated to Cennarāma or Cennarāmēśvaralinga by Ēkāntarāmitande. One Ēkāntarāmayya Ēkāntarāma, Rāmayya, Ēkāntarāmatande is mentioned in Basavapurāṇa, 49th Sandhi. If this person and the author of the present work are identical, then he must have lived in the year 1160 A.D.

Beginning :—

ಮನ ಲಿಂಗದಲ್ಲಿ ನಿಂದಿತ್ತೆಂಬಲ್ಲಿ. ಆ ಮನಲಿಂಗದಲ್ಲಿ ನೆಲೆಯೋ ? ಲಿಂಗದ ಮನದ ಸಂಗಿಯೋ ? ಎಂಬುದ ತಿಳಿದೆನೆಂಬುದು ಸಂಗವಾಗಿ ಸಂಗವ್ರೋ ? ಬೀಜದೊಳಗಣ ತಿರುಳು ಭೇದಿಸಿ ಹುಟ್ಟುವಲ್ಲಿ ಅದು ತನ್ನಯ ಸುನಾದದಿಂದ[ವ್ರೋ ?] (ಲೋ ?) ಅಪ್ಪುವಿನ ಬಿಂದುವ ಭೇದದಿಂದಲೋ ಈಉಭಯವುನೆಲೆಗಟ್ಟಿಸಿದಲ್ಲಿ ಯೋಗಕೂಟ, ಆತ್ಮಲಿಂಗದಭೇದ, ಯುಕ್ತಿ ಭೇದ ನಿಂದಲ್ಲಿ ಎನ್ನಯ್ಯ ಚೆನ್ನರಾಮನ ಕೂಟದ ಬೆಳಗು ॥ ॥

* * * *

End :—

ಅಸನ (ಅಶನ) ವ್ಯಸನ ಸರ್ವ ವಿಷಯಾದಿಗಳಲ್ಲಿ. ಹುಸಿದು ಪಿಸುಣತ್ವದಿಂದ ಗಸಣಿಗೊಂಡು ಮಾಡಿಸಿಕೊಂಬುದು ಸದ್ಗುರುವಿಗೆ ಸಂಬಂಧವಲ್ಲ ತಿಲರಸವಾರಿಯ ಭೇದದಂತೆ ಮಣಿಯೊಳಗಿದ್ದ ರಜದಂತೆ ಅಂಗವ ತೀರ್ಚಿ ಪಾಯ್ದು ನಿಂದ ಅಹಿಯಾಗದಂತೆ ಗುರುಸ್ಥಲಸಂಬಂಧ ಎನ್ನಯ್ಯ ಚೆನ್ನರಾಮೇಶ್ವರ ಲಿಂಗವನಱಿಯ ಬಲ್ಲೊಡೆ.

(ವಿ.ವಿ.)—

ಅಸಮಗ್ರ. ಅತಿಶಿಥಿಲ. ಬರೆವಣಿಗೆಯು ಚೆನ್ನಾಗಿಲ್ಲ. ತಪ್ಪಿದೆ.

ಈ ಗ್ರಂಥವುವಚನರೂಪವಾಗಿದೆ. ಇದರಲ್ಲಿ "ಚೆನ್ನರಾಮ," "ಚೆನ್ನರಾಮೇಶ್ವರ-ಲಿಂಗ" ಎಂಬಂಕಿತವಿರುವ ವಚನಪಂಚಕವಿದೆ. ಗ್ರಂಥಕರ್ತನು "ಏಕಾಂತರಾಮಿತಂದೆ" ಎಂಬುವನು. ಇವನೂ ಬಸವಪುರಾಣದಲ್ಲಿ (ಸಂಧಿ ೪೯) ಹೇಳಿದ "ಏಕಾಂತರಾಮಯ್ಯ, ಏಕಾಂತರಾಮ, ರಾಮಯ್ಯ, ಏಕಾಂತರಾಮತಂದೆ" ಎಂಬಿತ್ಯಾದಿ ಹೆಸರುಗಳುಳ್ಳ ಏಕಾಂತರಾಮ ತಂದೆಯೂ ಒಬ್ಬನೇ ಆಗಿದ್ದಲ್ಲಿ ಇವನ ಕಾಲವು ಸುಮಾರು ಕ್ರಿ.ಶ. ೧೧೬೦ ಆಗುವುದು. ಇವನ ವಿಷಯವಾಗಿ "ಏಕಾಂತರಾಮಿತಂದೆಗಳ ರಗಳೆ" ಎಂಬ ಗ್ರಂಥವು ಹುಟ್ಟಿದೆ.

No. 579. ಕದಿರ ರೆಮ್ಮವ್ವೆಯ ವಚನ.

KADIRA REMMAVVEYA VACANA.

Substance, palm-leaf. Size, 12 × 1⅛ inches. Page, 1. Lines, 5. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 82(*b*) of the manuscript described under No. 498 ante.

Incomplete.

Contains only three Vacanas.

Similar to the above. By Remmavve. She was a native of Kadirūru and seems to have lived in the year 1160 A.D.

Beginning :—

ಎಲ್ಲರ ಗಂಡಂದಿರು ಪರದಳ ವಿಭಾಂಡರು ಎನ್ನ ಗಂಡ ಮನೆಗಳ ವಿಭಾಂಡ. ಎಲ್ಲರ ಗಂಡಂದಿರು ಗಜ ಬೇಟೆಕಾರರು. ಎನ್ನ ಗಂಡ ಮನೆಯಲ್ಲಿ ಬೇಟೆಕಾಱ, ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು. ಎನ್ನ ಗಂಡ ತಾರದೆ ಯಿಕ್ಕಿಸಿ ಕೊಂಬನು. ಎಲ್ಲರ ಗಂಡಂದಿರಿಗೆ ಮರಿ . . ಎನ್ನಗಂಡಂಗೆ ಅದೊಂದೆ ಎಂದು ಸಂದೇಹ ತಿಮ್ಮವ್ವೆಯೊಡೆಯ ಗುಮ್ಮೇಶ್ವರ ! ॥ ೧ ॥

ಎಲ್ಲರ ಹೆಂಡತಿಯರು ತೊಳಸಿಕ್ಕು . . . ಎನ್ನ ಗಂಡಗೆ ತೊಳಸುವರಿಲ್ಲ. ಎಲ್ಲರ ಗಂಡಂದಿರಿಗೆ ಬಸಿವರು, ಎನ್ನ ಗಂಡಗೆ ಬಸಿವುದಿಲ್ಲ. ಎಲ್ಲರ ಗಂಡಂದಿರಿಗೆ ಬೀಜವುಂಟು ಎನ್ನ ಗಂಡಗೆ . . . ದ ಬೀಜವಿಲ್ಲ. ಎಲ್ಲರ ಗಂಡಂದಿರು ಮೇಲೆ ಎನ್ನ ಗಂಡ ಕೆಳಗೆ ಕ[ಧು](ದಿ)ರೆಮ್ಮಯೊಡೆಯ ಗುಮ್ಮೇಶ್ವರ ! ೨ ॥

End :—

. . . ಹುವ . ಟ್ಟಿಯ ಕುಲ ಜಾತಿಯ ಕೇಳಿರಣ್ಣಾ ! ಅದರ ಹಲಗೆ ಬ್ರಹ್ಮ, ತೋರಣ ವಿಷ್ಣು, ನಿಂದ ಬೊಂಬೆ ಮಹಾರುದ್ರ . ರುದ್ರಭ . . . . . ವೆರಡು ಸೂ . ದ ಕರ್ಣ . ಅರಿವೆಂಬ ಕದಿರು, ಭಕ್ತಿಯೆಂಬ ಕೈಯ್ಯಲ್ಲಿ ತಿರುಹಲಾಗಿ ಸುತ್ತಿತ್ತು ನೂಲು, ಕದಿರು ತುಂಬಿತ್ತು. . . . . . . ಹಲಾರೆ. ಎನ್ನ ಗಂಡ ಕುಟ್ಟಿಹ ಇನ್ನೇವೆ ? ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರ ! ॥ ೩ ॥

ವಿ.ವಿ.)—

ಅಸಮಗ್ರ, ಅತಿಶಿಥಿಲ, ಎರಡನೆಯ ಮತ್ತು ಮೂರನೆಯ ವಚನಗಳಿರುವ ಓಲೆಯ ಸ್ವಲ್ಪ ಭಾಗವು ಮುರಿದು ಹೋಗಿದೆ. ಬರೆವಣಿಗೆಯು ಚೆನ್ನಾಗಿಲ್ಲ. ತಪ್ಪಿದೆ.

ಇದೊಂದು ಸಣ್ಣ ವಚನ ಗ್ರಂಥವಾಗಿದೆ. ಇದರಲ್ಲಿ "ಕದಿರ ರೆಮ್ಮಯೊಡೆಯ ಅಥವಾ ರೆಮ್ಮಿಯೊಡೆಯ ಗುಮ್ಮೇಶ್ವರ" ಎಂಬಂಕಿತವಿರುವ ಮೂರು ವಚನವಿದೆ. ಈ ಗ್ರಂಥವನ್ನು ಬರೆದಾಕೆಯು ತಿಮ್ಮವ್ವೆಯೆಂಬವಳು. ಈಕೆಯು ಕದಿರೂರಿನವಳೆಂದು ತೋರುತ್ತದೆ. ಈಕೆಯು ಸುಮಾರು ಕ್ರಿ.ಶ. ೧೧೬೦ ರಲ್ಲಿದ್ದಳೆಂದು ತಿಳಿದು ಬರುತ್ತದೆ.

No. 580. ಕರಣಹಸುಗೆ.

KARAṆAHASUGE.

Substance, Śrītala. Size, 15 × $1\frac{13}{16}$ inches. Pages, 11. Lines, 10 on a page. Character, Kannaḍa. Condition, badly injured. Appearance, old. Mode of writing, not bad and not free from mistakes.

Begins on fol. 6*a* of the manuscript described under No. 538 ante.

Complete.

Same work as that above described under No. 447 ante.

(ಸಿ-ವಿ.)—

ಸಮಗ್ರ. ಅತ್ಯಂತ ಶಿಥಿಲ. ಬರೆವಣಿಗೆಯು ಸಾಮಾನ್ಯವಾಗಿದೆ. ತಪ್ಪಿದೆ.

ಇದು ಹಿಂದೆ ೪೪೭ ನೆಯ ನಂಬರಿನಲ್ಲಿ ವಿವರಿಸಿದ ಗ್ರಂಥವೇ ಸರಿ.

No. 581. ಕಲಕೇತಯ್ಯ ವಚನ-
KALAKĒTAYYAVACANA.

Substance, palm-leaf. Size, 12 × 1¼ inches. Pages, 3. Lines, 5 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 87*b* of the manuscript described under No. 498 ante.

Incomplete.

Contains only two stanzas dedicated to Mēka (kha) lēśvaraliṅga. By Kalakētayya One Kalakēta, Kalakēta Bommayya, or Kalakētabommaṇṇa, is mentioned in Basavapurāṇa, 29th sandhi. If this person and the author of the present work are identical, then he must have lived in the year 1160.

Beginning :—

ಕ್ರಿಯಾಶಕ್ತಿ ಬ್ರಹ್ಮಂಗೆ, ಸರಸ್ವತಿಯಾಗಿ, ಬಂದುದನಱಿದು, ಇಚ್ಛಾಶಕ್ತಿ ವಿಷ್ಣುವಿಂಗೆ ಮಹಾಲಕ್ಷ್ಮಿಯಾಗಿ ಬಂದುದನಱಿದು ಜ್ಞಾನಶಕ್ತಿ ರುದ್ರಂಗೆ ಉಮಾದೇವಿಯಾಗಿ ಸತಿ ಸಂದುದ ನಱಿದು ಇಂತೀತ್ರಿವಿಧ ಮೂರ್ತಿಗಳು ಆಡುವ್ರದ ಕಂತು ನಾನಾಸುಖ ಪರಿಪೂರ್ಣಕಳೆಯಿಂದ ಕ್ರಿಯಾಶಕ್ತಿ, ಆದಱ [ಸಕಳೆ] (ಸುಖೇಚ್ಛೆ)ಯಿಂದ ಇಚ್ಛಾಶಕ್ತಿಯಿಂ ಉಭಯಶಕ್ತಿ ಸನ್ಮತವಾಗಿ ನಿಂದ ಉಳುಮೆ ಜ್ಞಾನಶಕ್ತಿಯಿಂ ತ್ರಿವಿಧಶಕ್ತಿ ಯೊಡಹುಟ್ಟ ನಾ ಬಂದೆ ಬ್ರಹ್ಮಂಗೆ ಕಿಱಿ—ದಂಗಿಯ ಕೊಟ್ಟು ಮೈದುನನ ಮಾಡಿ ಕೋಂಡೆ. ವಿಷ್ಣುವಿಂಗೆ ನಡುವಳಾಕೆಯ ಕೊಟ್ಟು ಬಿಡುಮುಡಿಯ ಮೈದುನನ ಮಾಡಿ ಕೊಂಡೆ. ರುದ್ರಂಗೆ ಹಿರಿಯಕ್ಕನ ಕೊಟ್ಟು ಎನ್ನೊಡ ಗೂಡುವ ಭಾವನ ಮಾಡಿಕೊಂಡೆ. ಕಿಱಿದಂಗೆಯ ಗಂಡ ಸತ್ತು ನಡುದಂಗೆಯ ಗಂಡ ಬಿಟ್ಟ . ಹಿರಿಯಕ್ಕನ ಕೊಂದ ಭಾವ ಇಂತೀ ಮೂವರ ಕೊಳುಕೊಡೆ ಪಿಷ್ಟಸಂಬಂಧ ನಷ್ಟವಾ ಯಿತ್ತು. ಕಲು ಹೃದಯುವ ಕಲಕಮಲ್ಲ ಬಂದೆ ಗೆಲ್ಲಸೋಲವೆಂಬ ತಗರ ಕೊಡೆ ಹಿಡಿದು ಮೇಕಲೇಶ್ವರ ಲಿಂಗವಲ್ಲದಿಲ್ಲ ಎಂದು ನಲಿದು [ಕೊಳ] (ಕುಣಿ) ದಾಡಬಂದೆ. (೧)

ಕಾಲ ನಾಲ್ಕ ಮುರಿದು, ಕೋಡೆರಡ ಕಿತ್ತು, ಆಱಡಗಿತ್ತು ತಗರಿನ ಹಣೆಯಲ್ಲಿ ಮೂಱು ಹೋಯಿತ್ತು. ಕೋಡಿನ ಎರಡಱಲ್ಲಿ ತಗರಿನ ಜೀವ ಉಭಯದ ಸನ್ನೆಯಲ್ಲಿ ಹೋಯಿತ್ತು. ಇಂತೀ ಕಲಕೇತ ವಿದ್ಯವಧರಿಸಿ ಮಹಾಕಗಣರ ಮನದ ಮಂದಿರದಲ್ಲಿ ಕಲಕೇತನ ಒಲವರದಲ್ಲಿ ಮೂಡಿ ಮುಳುಗಬೇಡೆಂದು ಸಾರಿ ಮಾಱಬಂದೆ ಶುದ್ಧಪ್ರಸಾದ ಎನಗುಂಟು. ಸಿದ್ಧಪ್ರಸಾದ ಎನಗುಂಟು. ಪ್ರಸಿದ್ಧ ಪ್ರಸಾದ ನಿಮಗುಂಟು. ಅಪ್ರಸನ್ನ ಪ್ರಸಾದವೆನಗೆ ಬೇಕೆಂದು ಮೇಕಲೇಶ್ವರಲಿಂಗವನೊಡಗೂಡಿಕೊಂಡು ಬೇಡಬಂದೆ. (೨)

(ವಿ-ವಿ.)—

ಅಸಮಗ್ರ. ಅತಿ ಶಿಥಿಲ. ಬರೆವಣಿಗೆಯು ತಕ್ಕಮಟ್ಟಿಗಿದೆ. ತಪ್ಪಿದೆ.

ಈ ವಚನ ಗ್ರಂಥವು "ಮೋ[ಕ] (ಖ)ಲೇಶ್ವರಲಿಂಗ" ಎಂಬಂಕಿತವಿರುವ ವಚನದ್ವಯವನ್ನೊಳಗೊಂಡಿದೆ. ಇದರ ಕರ್ತನು ಕಲಕೇತಯ್ಯನೆಂಬಾತನು. ಇವನೂ ಬಸವಪುರಾಣೋಕ್ತನಾದ (ಸಂಧಿ ೨೯) "ಕಲಕೇತ, ಕಲಕೇತ ಬೊಮ್ಮಯ್ಯ, ಕಲಕೇತ ಬೊಮ್ಮಣ್ಣ" ಎಂಬಿವೇ ಮೊದಲಾದ ಹೆಸರಿರುವ ಕಲಕೇತನೂ ಒಬ್ಬನೇ ಆಗಿದ್ದಲ್ಲಿ ಇವನ ಜೀವಿತ ಸಮಯವು ಕ್ರಿ.ಶ. ೧೧೬೦ ಆಗುವುದು. ಈತನ ವಿಷಯವನ್ನು ಬಸವ ಪುರಾಣದ ೨೯ ನೆಯ ಸಂಧಿಯಲ್ಲಿ ನೋಡಿ ತಿಳಿಯುವುದು.

No. **582.** ಕಂಭದ ಮಾರಿತಂದೆಯ ವಚನ.

KAMBHADA MĀRITANDEYA VACANA.

Substance, palm-leaf. Size, 12 × $1\frac{1}{2}$ inches. Pages, 3. Lines, 5 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 79*a* of the manuscript described under No. 498 ante.

Incomplete.

Contains only five Vacanas.

Similar to the above. The name of the author is not found in this.

Beginning :—

ವೇದ ಕಲ್ಲಿಯಾಗಿ, ಶಾಸ್ತ್ರ ಮಣಿಯಾಗಿ, ಪುರಾಣ ತೊಡಕಿನ ಬಂಧದ ನೂಲಾಗಿ, ಶಾಸ್ತ್ರ ಪ್ರಸರದಲ್ಲಾಯತವ ಮಾಡಿ ಗುರುವೆಂಬ ತಡಿಯಂ ಮೆಟ್ಟಿ ನಾಭಿಮಧ್ಯವೆಂಬ ಲಿಂಗದ ಜಲವ ಹೊಕ್ಕು, ಮಹಾಸ್ಥಲ ಕುಲವಿವರಂಗಳೆಂಬ ಮ . . . . . . ಲಾಗಿ ಅಡಗಿದ ಮತ್ಸ್ಯವೆದ್ದಿತ್ತು. ಬಲೆಯ ಹೊಲಬ ಕಂಡು ಅದು ಸ್ಥೂಲಕ್ಕೆ ಸೂಕ್ಷ್ಮವಾಗಿ ಸೂಕ್ಷ್ಮಕ್ಕೆ ಸ್ಥೂಲವಾಗಿ ಆ ಕಲ್ಲಿ . . . ಅಲ್ಲಿಯೆ ನುಸುಳುತ್ತಾ, ಹೊರಗಾಗುತ್ತಾ, ಮತ್ತಾ ಕಲ್ಲಿಗೆ ಒಳಗಾಗುತ್ತಾ, ಮತ್ತಾ ಸ್ಥಲಕುಲಂಗಳಲ್ಲಿ ಕೂಡುತ್ತಾ ಸ್ಥಳಂಗಳನೆಱಿದು . . . ನಾಗಿ, ಭವವಿರಹಿತ ನಾದೆಯಲ್ಲಾ ಮಾವನ ಮಗಳಿಗೆ ಅಣ್ಣನಾದೆಯಲ್ಲಾ! ಚೆನ್ನ ಕದಂಬ ಲಿಂಗಾ!

*　　*　　*　　*

End :—

ಪಶು, ಪಾಷಂಡಿ, ಜ್ಞಾನಹೀನ, ಶೂನ್ಯವಾದಿ, ಇಂತಿವರುಗಳಲ್ಲಿ ಷಟ್‌ಸ್ಥಳಭರಿತ, ತ್ರಿವಿಧಸ್ಥಲ ಸಂಪೂರ್ಣ. . . . ಂದಸಂ ಯೋಗಲಿಂಗಾಗಿ ಅವರಂಗಳಪ ಮೆಟ್ಟಿದಡೆ ಅವನೊಂದಾಗಿ ನುಡಿದಡೆ ಅವರಂದಿಗೂ ಇಂದಿಗೂ ಎಂದಿಗೂ ಹೊರಗು . . . . ‖

(ವಿ-ವಿ.)—

ಅಸಮಗ್ರ. ಅತಿ ಶಿಥಿಲ. ಲಿಪಿಯು ಸಾಮಾನ್ಯವಾಗಿದೆ. ತಪ್ಪಿದೆ.

ಇದು ಚೆನ್ನ ಕದಂಬಲಿಂಗಾಂಕಿತಗಳಾದ ಐದು ವಚನಗಳುಳ್ಳ ಒಂದು ಚಿಕ್ಕ ವಚನ ಗ್ರಂಥವಾಗಿದೆ. ಗ್ರಂಥಕರ್ತೃವು ಇಂಥವನೆಂದು ನಿರ್ಧರಿಸಲು ಆವ ಆಧಾರವೂ ವಚನಗಳಿಂದ ತಿಳಿಯ ಬರುವುದಿಲ್ಲ. ಗ್ರಂಥಾದಿಯಲ್ಲಿ "ಕಂಭದ ಮಾರಿ ತಂದೆಗಳ ವಚನ" ಎಂದಿದೆ.

No. 583. ಕನ್ನದ ಮಾರಿತಂದೆಯ ವಚನ.

KANNADA MĀRITANDEYA VACANA.

Substance, palm-leaf. Size, 12 × 1⅛ inches. Page, 1. Lines, 5. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 83*b*. of the manuscript described under No. 498 ante.

Incomplete.

Contains only three vacanas. By Kannada Māritande, who seems to have lived in the year 1160 A.D.

Beginning :—

ಊರ ಕನ್ನವನಿಕ್ಕಿ ನೀರ ಕದ್ದೆನು. ಹೋಹಾಗ ಆರೂ ಅಱಿಯರು ಬಾಹಾಗ ಎಲ್ಲರೂ ಅಱಿದರು . . . ನಲ್ಲಾ ಎಂದುಸುರಿದೆ ನೀರ ಹಾಕಿದೆ ಮಡಕೆ ಕನ್ನಗತ್ತಿ ಕೈಯ್ಯಲ್ಲಿದೆ. ಅಂಕ ಸಿಕ್ಕಿತ್ತು ಮದನಾಂಗದೂರ ಮಾರೇಶ್ವರ ! ॥

*　　　*　　　*　　　*

End :—

ಕತ್ತಲೆಯಲ್ಲಿ ಕನ್ನವನಿಕ್ಕಿ ದರೆಯನು . . ಕೊಟ್ಟ ಕರ್ತೃಂಗೆ ಭಂಗ. ಅವರೂ ಮರದಿದ್ದಲ್ಲಿ ಮನೆಯ ಹೊಕ್ಕಡೆನ್ನ ಚೋರತನದಱಿಕೆಗೆ ಭಂಗ. ಮಱವಿದ್ದವರ ಎಬ್ಬಿಸಿ ಅವರಿಗವರೊಡವೆಯ ತೋಱಿ ಎನ್ನೊಡೆಯ ಮದನವೈರಿ ಮಾರೇಶ್ವರ ! ॥

(ವಿ.ವಿ.)—

ಅಸಮಗ್ರ. ಅತ್ಯಂತ ಶಿಥಿಲ. ಬರೆವಣಿಗೆಯು ಚಲೋದಾಗಿಲ್ಲ. ತಪ್ಪೂ ಇದೆ.

ಈ ಗ್ರಂಥವು ವಚನರೂಪವಾಗಿದೆ. ಇದರಲ್ಲಿ “ಮದನಾಂಗದೂರ ಮಾರೇಶ್ವರ” ಎಂದು ಕ್ರಮವಾಗಿ ಅಂತ್ಯವಾಗುವ ಮೂರುವಚನಗಳಿವೆ ವಚನಕಾರನು ಕನ್ನದ ಮಾರಿತಂದೆ “ಮಾರನವೈರಿ ಮಾರೇಶ್ವರ ; ಮದನವೈರಿ ಮಾರೇಶ್ವರ” ಯೆಂದು ಕಂಡುಬರುವುದು. ಈತನು ಬದುಕಿಕೊಂಡಿದ್ದ ಕಾಲವು ಸುಮಾರು ಕ್ರಿ.ಶ. ೧೧೬೦.

No. 584. ಕಲ್ಯಾಣದ ಭಂಡಾರಿ ಶಾಂತನವಚನ.

KALYĀṆADA BHAṄDĀRIŚĀNTANA VACANA.

Substance, palm-leaf. Size, 12 × 1⅛ inches. Pages, 5. Lines, 4 on a page. Character, Kannaḍa. Condition, injured. Appearance, old. Mode of writing, not bad and not free from mistakes.

Begins on fol. 32*a* of the manuscript described under No. 498 ante

Incomplete.

Contains a few prose passages on some principles of Vīraśaiva religion. The name of the author is Bhanḍariśānta of Kalyāṇa.

Beginning:

ಕಾಯದ ಗುಣವನೆಱಿವುದು ಕಾಯವೊ ? ಶಿವಶಿವ ಎಲ್ಲರೂ ಉಂಟೆಂದುದಕೇಳಯಿಲ್ಲದ ಬಯಲಿಂಗೆ ಮನವನಿಕ್ಕಿದರು. ಎನಗಿನ್ನಾವುದು ಬಟ್ಟೆ ? ಬಸವಣ್ಣನ ಆಭರಣೆಯಿಂದ ಕಟ್ಟಿದ

ಲಿಂಗಕ್ಕೆ ಹುಟ್ಟುಮೆಟ್ಟನಱಿಯೆ ಕೊಟ್ಟಾತ ಹೇಳದುದಿಲ್ಲ. ಕಟ್ಟಿಕೊಯೆಂದಾತ ಈ ಬಟ್ಟೆಯಲ್ಲಿರುಯೆಂದುದಿಲ್ಲ. ಕಟ್ಟಾಯಕ್ಕೆ ಕಟ್ಟಿದ ಒಡ್ಡುಗಲ್ಲಿನ ಮಱೆಯೆನಗೊಂದು ಬುದ್ಧಿಯ ಹೇಳಾ ! ಅಲೇಖನಾಥ! ಶೂನ್ಯಕಲ್ಲಿನೊಳಗೆ ಏಕಾದೆಯಯ್ಯಾ ?

End :—

ಆದ್ಯನಾದಿಯ ಮಧ್ಯದ ಭೂಮಿಯಲ್ಲಿ ಒಂದು ಸಾಗರ ಹುಟ್ಟಿತ್ತು. ಸಾಗರದ ನಡುವೆ ಒಂದು ಸಲಿಲ. ಸಲಿಲದ ಮೇಲೊಂದು ನಿಲಯ. ನಿಲಯದೊಳಗೊಬ್ಬ ಸೂಳೆ. ಯೋನಿಯೆಂಟು, ಮೊಲೆ ಮೂಱು, ತಲೆಯಾಱು; ಕೈ ಐದು, ಕಾಲೊಂದು ಇಂತೀನಟನೆಯಲ್ಲಾಡುತ್ತಿರಲಾಗಿ ನೋಡಿದ ಮನಸೋತು . . . ನೆಂದಡೆ ಕೂಡಬಾರದು ಯೋನಿಯೆಂಟಾದವಳ ಹಿಡಿವೊಡೆ ಮೊಲೆ ಕೊರಳಗು, ಚುಂಬನಕ್ಕೆ ಆದರ (ಕೆ) ನಂಜು, ತಕ್ಕೆಗಳವಲ್ಲ, ಇದು ಎನಗೆ ಸುಖ ಕಚ್ಚುಗಯೆಂದು ಬೆಚ್ಚಿದೆ. ಇವಳ ಕೂಟವೊಚ್ಚತಬೇಡ ಅಲೇಖನಾಥ ! ಶೂನ್ಯ ಕಲ್ಲಿನೊಳಗೆ ಮಱೆಯಾದವನೆ ॥

(ವಿ-ವಿ·)—

ಅಸಮಗ್ರ. ಶಿಥಿಲ ಸಾಮಾನ್ಯವಾದ ಲಿಪಿ. ತಪ್ಪಿದೆ. ಇದು ಆರು ವಚನಗಳುಳ್ಳ ಒಂದು ಚಿಕ್ಕ ವಚನಗ್ರಂಥವಾಗಿದೆ. ವಚನಗಳು “ಅಲೇಖನಾಥಾ”ಂಕಿತಗಳಾಗಿದ್ದು ವೀರಶೈವ ಮತ ಸಂಪ್ರದಾಯಗಳನ್ನು ತಿಳಿಯಿಸುವುವು. ವಚನಕರ್ತನು ಕಲ್ಯಾಣದ ಭಂಡಾರಿಶಾಂತನು. ವಚನಗಳು ಗೂಢಾರ್ಥಗರ್ಭಿತಗಳಾಗಿರುವುದರಿಂದ ಇವನು ಪ್ರಬಲವಚನಕಾರರಲ್ಲೊಬ್ಬನೆಂದೂ ಹಸಲೆಡೆಯಿದೆ. ಈತನು ಸುಮಾರು ಕ್ರಿ.ಶ. ೧೧೬೦ ರಲ್ಲಿ ಜೀವಿಸಿಕೊಂಡಿದ್ದನು.

No. 585. ಕೆಲವು ವಚನಗಳು.
KELAVU VACANAGAḶU.

Substance, palm-leaf. Size, $8\frac{13}{16} \times 1\frac{5}{8}$ inches. Pages, 6. Lines, 11 on a page. Character, Kannaḍa. Condition, Badly injured. Appearance, old. Mode of writing, good and free from mistakes.

Begins on fol. 20*b* of the manuscript described under No. 468 ante. Incomplete.

This is a collection of a few vacanas, the names Cennamallikārjuna and Guhēsvarana Saraṅasiddharāma appearing in the 7th and the 22nd vacanas. At the end the name of the work is given as Akkagaḷa vacana. But the usual dedication found in those vacanas is not found in this. Hence it is not possible to determine the name of the author.

Beginning :—

ಮೂಱು ಮುಖವಾಗಿ ನಾನಾಚಿತ್ರದಲ್ಲಿ ಬೇಱೆ ಆಱುಚಕ್ರವ ಮಾಡಿ ಒಂಭತ್ತು ಬಾಗಿಲೊಳಗೆ ನೂಱೊಂದು ಸ್ಥಲಂಗಳಂ . . . ಸ್ವಯಂಜ್ಯೋತಿ ಬೆಳಗಿನ ಮೂವತ್ತಾಱು ತೆಱದ ಶೂನ್ಯಸಿಂಹಾಸನವನಿಟ್ಟು ಆ [ಱೆಂ](ರೂ)ಡಪರ . . . . (ನಮ್ಮ ॥೧॥

* * * *

End :—

ಮುಖಕಮಲ ಶ್ರೀಕರಸಿಂಹಾಸನಾಗ್ರದ ಮೇಲೆ ಮಕರತೋರಣದ ಕೆಲಕ್ಕೆಲದಲಿ ಸಕಲಗಣ ॥ ತಿಂತಿಣಿ ಜಯತು ! ಜಯತು ! ಎಂದೆನಲು ಸುಖಿ ಗೋಹೇಶ್ವರನ ಶರಣ ಸಿದ್ಧರಾಮ ! ?

ಮಹಾಲಿಂಗದೇವರಿಗೆ ಅರ್ಪಿಸಬೇಕೆ ಅಮ್ಮ, ಇಂತಿವೆ ಒಂದೆ ? ಎರಡೆ ? ಮೂಱಿತೆ ? ನಾಲ್ಕೆ ? ಐದೆ ? ಆರೆ ? ವಿವೇಕವಳವೆಂಬಯೆಕ್ಕೆಯು ಬೆನಕನ ವರವೆ ಅಮ್ಮ ಯುಡದೆರವಿಲ್ಲದೆ ಒಳಹೊರಗೆ ಪರಿಪೂರ್ಣನಾಗಿ ಬೇಕ್ದನೆ ಅಮ್ಮ ॥ ॥

(ವಿ.ವಿ.)—

ಅಸಮಗ್ರ. ಮಧ್ಯದಲ್ಲಿ ಕೆಲವು ಪತ್ರಗಳು ಕಾಣೆಯಾಗಿವೆ. ಬಹಳ ಶಿಥಿಲ. ಲಿಪಿಯು ಚೆನ್ನಾಗಿದೆ. ತಪ್ಪಿಷ್ಟಿಲ್ಲ.

ಇದು ವಚನಗ್ರಂಥ. ಇದರಲ್ಲಿ ಕೆಲವು ವಚನಗಳವೆ. ವಚನಗಳು "ಅಮ್ಮ" ಎಂದಂತ್ಯವಾಗುವುವು. ೭ ಮತ್ತು ೧೦ ನೆಯ ವಚನಗಳಲ್ಲಿ ಚೆನ್ನಮಲ್ಲಿಕಾರ್ಜುನ, ಮತ್ತು ಗೋಹೇಶ್ವರನ ಶರಣಸಿದ್ಧರಾಮ ಎಂಬ ಹೆಸರುಗಳು ಕಾಣಸಿಗುವುವು. ಗ್ರಂಥಾಂತ್ಯದಲ್ಲಿ "ಅಕ್ಕಗಳ ವಚನ ಶ್ರೀ" ಎಂಬ ವಾಕ್ಯವಿದೆ. ಆದರೆ ಅಕ್ಕಗಳವಚನಗಳಲ್ಲಿರುವ ಅಂಕಿತವು ಈ ವಚನಗಳಲ್ಲಿಲ್ಲ. ಇಂತಿರುವುದರಿಂದ ಈ ವಚನಗಳ ಕರ್ತೃವು ಯಾರೆಂದು ನಿರ್ಧರಿಸುವುದು ಕಷ್ಟವಾಗಿದೆ. ಹಾಗೆಯೇ ವಚನಗಳ ಹೆಸರಿನ ಪರಿಸ್ಥಿತಿಯೂ ಆಗಿದೆ.

No. 586. ಕೋಲ ಸಾಂತಯ್ಯ ವಚನ.

KŌLA SĀNTAYYA VACANA.

Substance, palm-leaf. Size, 12 × $1\frac{1}{8}$ inches. Pages, 5. Lines, 4 on a page. Character, Kannaḍa. Condition, injured. Appearance, old. Mode of writing, not good and not free from mistakes.

Begins on fol. 34*b* of the manuscript described under No. 498 ante. Incomplete.

On Vīraśaiva religion, by Kōla Sāntayya who lived about 1160 A.D.

Beginning :—

ಇಷ್ಟಪ್ರಾಣ ಸಂಬಂಧಿಸಬೇಕೆಂಬರು. ಪ್ರಾಣ ಇಷ್ಟದಲ್ಲಿನಿಂದ ಮತ್ತೆ ಕಾಯದ ಸುಳುಹುಂಟೆ ? ಇಷ್ಟದ ಕಳೆ ಪ್ರಾಣ [ನ](ದ)ಲ್ಲಿ ನಿಂದ ಮತ್ತೆ ಇಷ್ಟವ ಮುಟ್ಟಿ ಪೂಜಿಸುವ ಪರಿಯಿನ್ನೆಂತೊ ? ಉಭಯದ ಘಟ ? ಬಿದ್ದಲ್ಲಿ ಅಱುವೆಲ್ಲಾ [ನಿಂದಿತ್ತು] (ನಿಂದತ್ತು) ಇಷ್ಟಶೂನ್ಯಕ್ಕೆ ಸುಳುಹುಂಟೆ ? ಇದು ಅವಿದ್ಯರ ಮತ. ವಿದ್ಯರ ಮತವಲ್ಲ. ॥ ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗ ಸಂಗ "!

End :—

ಮನಮಂಗಲಾಂಗಿಯೆಂಬ ಹೆಂಗುಸಿನ ಕೈಯಲ್ಲಿ ತ್ರಿವಿಧಬಂಧವೆಂಬ ಗಡಿಗೆಯಿದ್ದಿತ್ತು. ಆ ಗಡಿಗೆಯ ಕೊಂಡುಹೋಗಿ ವಿಗತನೆಂಬ ಬಾವಿಯಲ್ಲಿರವಿಶೇಖರನೆಂಬ ನೀರಂತುಂಬಿ ಬ್ರಹ್ಮಂಗೆ ಱತೆಯಲಾಗಿ ಬಾಯಿ ಮುಚ್ಚಿತು. ವಿಷ್ಣುವೆಂಬ ಕೈಗೆಯೆಱತೆಯಲಾಗಿ ಕೈ ಖಂಡಿಸಿ ಬಿದ್ದಿತು. ರುದ್ರನ ಮಂಡೆಗೆ ಮಜ್ಜನವ ಮಾಡಲಾಗಿ ಅಂಗ ಕರಗಿ . . ಯ್ಯ ಗಡಿಗೆಯಲ್ಲಿ ಅಡಗಿದೆನಗಿನ್ನು ಅಂಗವಳಿದ ಠಾವ ಹೇಳಾ ! ಸರಂಗಮಯ "ಪುಣ್ಯಾರಣ್ಯದಹನ ಭೀಮೇಶ್ವರ ಲಿಂಗ ನಿರಂಗಸಂಗ !"

(ವಿ.ವಿ.)—

ಅಸಮಗ್ರ. ಶಿಥಿಲ. ಲಿಪಿಯು ಸಾಮಾನ್ಯವಾಗಿದೆ. ತಪ್ಪಿದೆ.

ಇದು ವಚನರೂಪವಾಗಿದೆ. ಇದರಲ್ಲಿ ಆರು ವಚನಗಳಿವೆ. ಪ್ರತಿಯೊಂದು ವಚನವೂ "ಪುಣ್ಯಾರಣ್ಯದಹನ ಭೀಮೇಶ್ವರಲಿಂಗನಿರಂಗಸಂಗಾ"ಂಕಿತವಾಗಿರುವುದು. ಇದರಲ್ಲಿ ವೀರಶೈವಸಿದ್ಧಾಂತದ ಒಂದಂಶವು ಪ್ರತಿಪಾದಿಸಲ್ಪಟ್ಟಿದೆ. ವಚನಕಾರನು ಕೋಲಸಾಂತಯ್ಯನು. ಇವನು ಸುಮಾರು ೧೧೬೦ (ಕ್ರಿ. ಶ.) ರಲ್ಲಿದ್ದಂತೆ ತಿಳಿದುಬರುತ್ತದೆ.

No. 587. ಗಾಣದ ಕಣ್ಣಪ್ಪ ವಚನ.
GĀṆADA KAṆṆAPPA VACANA.

Substance, palm-leaf. Size, 12 × 1⅛ inches. Pages, 2. Lines, 4 on a page. Character, Kannaḍa. Condition, injured. Appearance, old. Mode of writing, not bad and not free from mistakes.

Begins on fol. 68*b*. of the manuscript described under No. 498 ante.

Incomplete.

Similar to the above. Contains five vacanas. By Gāṇada Kaṇṇappa also known as Kaṇṇayya. By the dedication of the Vacanas to Allama, and by his own statement as "ಕನ್ನಯ್ಯಪ್ರಿಯ ಗೋಹೇಶ್ವರನ ಶರಣ ಅಲ್ಲಮನಲ್ಲಿ ಲೇಪವಾದವರಿಗೆ" it is presumed that he was a disciple of Prabhudēva and lived in the first half of 12th century.

Beginning :—

ಒಂದು ತನುವಿಂಗೆ ಮೂಱಂಬ ಹಿಡಿದೆ. ಒಂದು ಬಾಣವ ಬಿಡಲಾಗಿ ಪದ್ಮೋದ್ಭವನ ಸೃಷ್ಟಿಯು ಕಟ್ಟಿತ್ತು. ಮತ್ತೊಂದು ಬಾಣ ಪದ್ಮನಾಭನ ಹೆಡೆಗೈಯ ಕಟ್ಟಿತ್ತು. ಕಡೆಯ ಬಾಣ ರುದ್ರನ ಹಣೆಯ ನೊಡೆದು ಅಲಗು ಮುಱಿಯಿತ್ತು. ಗಱಿಜಾಱಿತ್ತು. ನಾರಿಯ ಹೂಣುವ ಹಿಳುಕು ಹೊಳ್ಳಾಯಿತು ಗೋಹೇಶ್ವರನ ಶರಣ ಅಲ್ಲಮ ಹಿಡಿದ ಬಿಲ್ಲು ಮುಱಿಯಿತ್ತು.

* * * *

End :—

ಬಂದ ಜೀವವನೆಲ್ಲವ ಕೊಂದೆ. ಅಂದಂದಿಗೆ ಹೆಱೆಹಿಂಗದೆ ಅವರೆಂದಿನ ಅಸುವಿಂಗೊಡೆಯ ಬಂದರೂ ಬಿಡೆನೆಂದೆ ಗೋಹೇಶ್ವರನ ಶರಣ ಅಲ್ಲಮನಲ್ಲಿ.

ನಾ ಬಂದುದಕ್ಕೆ ಮಾಡಿದೆ. ನೀ ಕಳುಹಿದವರ ಕೊಂದೆ. ಬಂದೆ ನೀವಿರಿಸಿದಂತಿದ್ದ ಎನಗಿನ್ನು ಬಂಧ ಮೋಕ್ಷವಿವೇಕ ? ತನ್ನಯ್ಯ ಪ್ರಿಯ ಗೊಗೇಶ್ವರನ ಶರಣ ಅಲ್ಲಮನಲ್ಲಿ ಲೇಪವಾದವಂಗೆ.

(ವಿ-ವಿ)—

ಅಸಮಗ್ರ. ಶಿಥಿಲ. ಲಿಪಿಯು ಸಾಮಾನ್ಯವಾಗಿದೆ. ತಪ್ಪುಗಳಿವೆ.

ಗ್ರಂಥವಿದು ವಚನರೂಪವಾಗಿದೆ. ಇದರಲ್ಲಿ ಗೋಕೇಶ್ವರನ ಅಥವಾ ಗೋಹೇಶ್ವರನ ಶರಣ ಅಲ್ಲಮ" ಎಂಬಂಕಿತವಿರುವ ಐದು ವಚನವಿದೆ. ಗಾಣದ ಕಣ್ಣಪ್ಪನು ಅಥವಾ ಕನ್ನಯ್ಯನು ಈ ಗ್ರಂಥವನ್ನು ಬರೆದವನೆಂದು ಇದರಿಂದ ವ್ಯಕ್ತವಾಗಿ ತಿಳಿಯ ಬರುತ್ತದೆ. ಇವನು, ಅಲ್ಲ

ಮಾಂಕಿತವಾಗಿ ವಚನವನ್ನು ಬರೆದುದರಿಂದಲೂ "ಕನ್ನಯ್ಯ ಪ್ರಿಯ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿರುವುದರಿಂದಲೂ ಪ್ರಭುದೇವನ ಶಿಷ್ಯನೆಂದು ತೋರುತ್ತದೆ. ಅಂತಿದ್ದರೆ ಈತನ ಜೀವಿತಕಾಲವು ಹನ್ನೆರಡನೆಯ ಶತಮಾನದ ಪೂರ್ವಾರ್ಧವಾಗುವುದು.

No. 588. ಗಾವುದಿ ಮಾಚಯ್ಯ ವಚನ-
GĀVUDI MĀCAYYA VACANA.

Substance, palm-leaf. Size, 12 × 1¼ inches. Pages 2. Lines, 5 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 67*a* of the manuscript described under No. 498 ante.

Incomplete.

Similar to the above. Contains three Vacanas by Gāvudi Mācayya. He appears to be a native of Kalyāṇapura and from a sentence occurring in the third Vacana he seems to be a contemporary of Basava in the first half of 12th century.

Beginning :—

ಸಿಲೆಕ್ಕಂ ? ಮಾರನ ಹಂಗು, ಮಾತು ಮನುಜನ ಹಂಗು, ಮನಸ್ಸು ಆಕಾಶದ ಹಂಗು, ಆಕಾಶ ಬಯಲ ಹಂಗು, ಕೊಱಹುವಿಡಿದಿನ್ನೇತಱಿಂದಱಿವೆ, ಅಱಿವುದಕ್ಕೆ ಸ್ವಯಂಭುವಿಲ್ಲ. ತ್ರಿಪುರಾಂತಕಲಿಂಗದಲ್ಲಿ ಗಾವುದಿಮಾಚಯ್ಯ ಹೇಳಿದುದೆ ದಿಟವೆಂದೆ. (೧)

ಹೊತ್ತಾಡಿದ ಚೋಹವ ಮತ್ತೆ ತೊಟ್ಟು ಬಂದಡೆ ಮೆಚ್ಚರಯ್ಯ! ಜಗದವರು. ಬಿತ್ತಿ ಹೆಣ್ಣು ಹೊನ್ನು ಮಣ್ಣು ಮತ್ತೆ ಕಟ್ಟಿದಡೆ ಅದು ಸತ್ಯಕ್ಕೆ ದೂರ ತ್ರಿಪುರಾಂತಕಲಿಂಗದಲ್ಲಿ ಗಾವುದಿ ಮಾಚಯ್ಯ ಹೇಳಿದುದು ದಿಟವೆನ್ನಿರಣ್ಣಾ ? (೨)

End :—

ಹುಲ್ಲುದುರುಕಳಹಾಹ ನೀರತಡೆವುದು ಹುಳ್ಳಿಯಾದ[ಡು] (ರೂ) ಪ್ರಸ್ಥಕ್ಕೊದಗದು, ಎನ್ನಲ್ಲಿದ್ದ ಮಾತು ಭಕ್ತಿಯುಳ್ಳವರಿಗೆಲ್ಲಕ್ಕೂ ಬೇಕು ಎನ್ನೊಡೆಯ ಸಂಗನ ಬಸವಣ್ಣ ವಣ್ಣೆಯ ದಂದವಸಿಕ್ಕಿ ಕೊಟ್ಟ[ಅ] (ಅ) ದಂದುಗದಲ್ಲಿದ್ದೇನೆ. ಆ ಮಾತಿಗೆ ದಂಡ . . . ದಿಂದಣ ಎನ್ನ ದಯಿದರಂದವ ತಪ್ಪದಾಡಿ ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ ವಣ್ಣೆಯಾದ ಚಿಣ್ಣ ಹೇಳದ ಮಾತ ಕೇಳಿರಣ್ಣಾ ! (೩)

(ವಿ-ವಿ)—

ಅಸಮಗ್ರ. ಅತಿ ಶಿಥಿಲ. ಬರೆವಣಿಗೆಯು ಸಾಮಾನ್ಯವಾಗಿದೆ. ತಪ್ಪಿದೆ.

ಈ ಗ್ರಂಥವು ವಚನರೂಪವಾಗಿದೆ. ಇದರಲ್ಲಿ ಮೂರು ವಚನಗಳಿವೆ. ವಚನಗಳೆಲ್ಲವೂ "ತ್ರಿಪುರಾಂತಕಲಿಂಗ" ಎಂಬಂಕಿತವನ್ನೊಳಗೊಂಡಿವೆ. ಈ ವಚನಗಳನ್ನು ಬರೆದವನು ಗಾವುದಿ ಮಾಚಯ್ಯನು. ಇವನು ಕಲ್ಯಾಣಪುರದವನೆಂದು ತೋರುತ್ತದೆ. ಈತನು ಸಂಗನ ಬಸವಣ್ಣನ (ಬಸವನ) ಶಿಷ್ಯನೆಂದೂಹಿಸಲು ಮೂರನೆಯ ವಾಕ್ಯವು ಉಪಷ್ಟಂಭಕವಾಗಿದೆ. ಅಂತಿದ್ದರೆ ಇವನ ಕಾಲವು ಹನ್ನೆರಡನೆಯ ಶತಮಾನದ ಪೂರ್ವಾರ್ಧವಾಗುವುದು.

No. 589. ಗುಪ್ತ ಮಂಚಣ್ಣ ವಚನ.

GUPTA MAÑCAṆṆA VACANA.

Substance, palm-leaf. Size, 12 × 1⅛ inches. Pages, 5. Lines, 5 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 73*a* of the manuscript described under No. 498 ante.

Incomplete

Contains 9 vacanas.

Similar to the above by Gupta Mācaṇṇa, who seems to have been a contemporary of Basava.

Beginning :—

ಕಾಗೆಯು ತಿಂದವ ಕಮ್ಮಾಱ, ಎಮ್ಮೆಯ ತಿಂದವ ಸಮಗಾಱ, ಹಸುವ ತಿಂದವ ಪಶುಪತಿಯು ಶರಣ, ಇವರ ಮೂವರ ತಿಂದವರ ತಿಂದಂಥವ ನೋಡಾ ! ಇದಱ ಸಂಗವಾರಿಗೂ ಅರಿದು ನಿಸ್ಸಂಗ ನಿರ್ಲೇಪ, "ನಾರಾಯಣ ಪ್ರಿಯ ರಾಮನಾಥ" ॥

ಹಾಸ ಸಿಕ್ಕುವಾತನ ಕೈಯ್ಯ ತೂತಿನ ಕೊಳವೆಯ ನೂಲು ನುಂಗಿತ್ತು, ನೆ(? ಯು)ವ ಅಣ್ಣನ ಕೈಯ್ಯ ನಳಿಗೆ ನುಂಗಿತ್ತು ಕಡ್ಡಿಯ ಸುತ್ತುವ ಕೂಸ ಅಟ್ಟೆಯ ಕೈನುಂಗಿತ್ತು. . . ಕೆಯ್ ಮಾಡುವಾತನ ಕೈಯ್ಯ ಕಾಂಚಿಗೆಯ ತುಂಬಱ ನುಂಗಿತ್ತು. ನೈವ ಅಣ್ಣನ ಕಣ್ಣ ಕೈಯ್ಯ ನಳಿಗೆ ನುಂಗಿತ್ತು ? ಹಾಸಿನ ಕಡ್ಡಿಯ ಉಕೆಯ ನೈವಾತನ ಬುದ್ಧಿಯ ಚಿತ್ತವ ಯೋನೊಂದಱಿಯದ ಕೂಸು ನುಂಗಿತ್ತು ನಾರಾಯಣ ಪ್ರಿಯರಾಮನಾಥನಲ್ಲಿ ಐಕ್ಯಾನುಭಾವಿಯಾದ ಶರಣ ॥

* * * *

End :—

ಬಿರಿದ ಕಟ್ಟಿದವನಿದ್ದಂತೆ ಕಟ್ಟಿಸಿ ಕೊಂಬ ಕೈದಿಂಗೇನು ? . . . . ಥವಂಗಲ್ಲದೆ. ಜ್ಞಾನವನಱಿತಿಹೆನೆಂಬ ಭಾವಿಗಲ್ಲದೆ, ನಿರ್ಭಾವಿಗುಂಟೆ ? ಬಂಧ । ದೂರವೋಕ್ಷ ಕರ್ಮಗಳಿಂ ಬಿವು . . . . ಸಂಗ ಕರಿಮುಕುರನ್ಯಾಯ ಪರಿಪೂರ್ಣ ಪರಂಜ್ಯೋತಿ ಅಘಹರನಾಶನ ? ನಾರಾಯಣ ಪ್ರಿಯ ರಾಮನಾಥ ! ॥

(ವಿ-ವಿ.)—

ಅಸಮಗ್ರ. ಅತಿ ಶಿಥಿಲ. ೪ ಮತ್ತು ೯ ವಚನಗಳಿರುವ ಓಲೆಯ ಸ್ವಲ್ಪಭಾಗವು ಮುರಿದು ಹೋಗಿದೆ. ಬರೆವಣಿಗೆಯು ಸಾಮಾನ್ಯವಾಗಿದೆ. ತಪ್ಪಿದೆ.

ಈ ವಚನ ಗ್ರಂಥವು "ನಾರಾಯಣ ಪ್ರಿಯ ರಾಮನಾಥಾ" ಅಂಕಿತಗಳಾದ ಒಂಭತ್ತು ವಚನಗಳನ್ನೊಳಕೊಂಡಿದೆ. ವಚನ ಕರ್ತನು ಗುಪ್ತ ಮಂಚಣ್ಣನೆಂಬುವನು. ಈತನು ಬಸವನ ಸಮಕಾಲಿಕನೆಂದು ಕಂಡು ಬರುತ್ತದೆ.

No. 590. ಗುರುಬೋಧಾಮೃತ.

GURUBŌDHĀMṚTA.

Substance, palm-leaf. Size 10⅝ × 1⅝ inches. Pages, 188. Lines, 7 on a page. Character, Kannaḍa. Condition, badly injured. Appearance, old. Mode of writing, not bad and not free from mistakes.

Incomplete.

The author Virata Mahāliṅga Dēva has dealt with the Vīraśaiva system of philosophy in the form of a dialogue between a teacher and his pupil.

Beginning :—

ಕಂ ॥ ಗುರುಬೋಧಾಮೃತವಿದು ಸ ।
ದ್ಗುರುಕಾರುಣ್ಯದೊಳು ತ್ರಿವಿಧ ವರ್ಣಕದಿಂದಂ
ವಿರಚಿಸಿದ ಕೃತಿಯು ನಿಚ್ಚ ಟ । (ಶ್ಚ)
ಪರಮಜ್ಞಾನಿಗಳು ಕೇಳ ಶಿವಸುಖದಿ ಮನಂ ॥
ಅಱಿವುಳ್ಳರಿಗಾನಂದವು ।
ನೆಱೆತೋರುವುದಿದು ವಿಚಿತ್ರದೋಳ್ಕೇಳ್ವತ್ತಾ ॥
ಬಱಿಯ ವಾಗ್ಭ್ರಮೆಯೊಳಹ ನರ ।
ಗುಱಿಗಳಗಿದು ಶಕ್ಯವಲ್ಲವಿದು ಪರಮಾರ್ಥಂ ॥
ರಸಿಕರ್ ರಸ . . . . ।
. . ಜ್ಞರಹರು ಮಾತ್ರಂ ಕೇಳ್ ಶಿವ ॥
ರಸಿಕರಾನಂದವಿಂತಿದು ।
ಪಶುಪತಿಯ . . ರುಗಳಲ್ಲ . . . ದೆ ॥
ರಸವಲಂಕಾರ ಛಂದದೊ ।
ಳೆಸಗುವ ಭಾವಾರ್ಥಲಕ್ಷಣಗಳ . . ಂದೆಂ ।
ದುಸುರ (?) ರಸವೆ ಚಿದ್ರಸ ।
ಪಸರಿಸುತಿಹ ಷಟ್‌ಸ್ಥಲದೊಳವೇತರ ಜೋದ್ಯಂ
ದ್ವೈತಾದ್ವೈತದ ಭಾವದ ।
ಸೂತಕ ಅಹಮಾದಿಲಕ್ಷಣಗಳ . . . ವೃತ ।
ಪ್ರೀತಿಯೊಳಱಿದಾ ಬ್ರಹ್ಮಾ - ।
ದ್ವೈತಾರ್ಥದ ಸಾರಸೌಖ್ಯ ಸತ್ಪಥ ವಿದುತಾಂ ॥

* * *

End :—

ಬಗೆ ರಹಿತ ಬ್ರಹ್ಮವನು . . . .
. . . . . ।
. . . .

ಗುವ ತೆಱದು ।
ಭಜಕರಾನಂದದೊಳಗಿದ ।
ನಿಜಗುರು ಬೋಧಾಮೃತವನು . . . ॥ ॥
. . . .
. . . .
. ॥ ॥
. . . ದೊ ।
ಯ್ದಾಡಿಸಿ ಮೊಲೆಗೊಟ್ಟು ಮಾತೆ ಸಲಹುವ ತೆಱದಿಂ ॥
ನೋಡಿದ ಗುರುವಿನ ಕೃಪೆ . . ।
. . . . ನುಡಿಯು . . . ॥ ॥
. . . ನಡೆನುಡಿ ।
ಯಾಡುವ ಚೈತನ್ಯವೆಲ್ಲ ಗುರುವಿನಿಂದಲ್ಲದೆ ॥ ॥
ಮೂಡದು . . ।
. . . . . . ॥ ॥
. . . ।
. . . . ॥
. . ॥
. . . ಪದತಳಕೆ ಪೊಡಮಡು . .

(ವಿ.ವಿ.)—

ಅಸಮಗ್ರ. ಹೆಸರಿನ ಮಟ್ಟಿಗೆ ೫ ಸ್ಥಲಗಳೂ ಇರುವುವು. ಅತ್ಯಂತ ಶಿಥಿಲ. ಅಲ್ಲಲ್ಲಿ ಹಲವು ಓಲೆಗಳು ಮುರಿದು ನಷ್ಟವಾಗಿವೆ. ಬರೆವಣಿಗೆಯು ತೃಪ್ತಿಕರವಾಗಿಲ್ಲ. ತಪ್ಪಿದೆ.

ಇದು ತ್ರಿಪದಿಯಲ್ಲಿ ಬರೆದಿದೆ. ಅಲ್ಲಲ್ಲಿ ಕಂದವೃತ್ತವಚನಗಳೂ ಸಂಸ್ಕೃತ ಶ್ಲೋಕಗಳೂ ಇವೆ. ಇದರಲ್ಲಿ ಗುರುಶಿಷ್ಯಸಂವಾದರೂಪವಾಗಿ ವೀರಶೈವವೇದಾಂತವು ನಿರೂಪಿಸಲ್ಪಟ್ಟಿದೆ. ಇದನ್ನು ಬರೆದ ಕವಿಯು ವಿರತಮಹಲಿಂಗದೇವನು. ಇವನ ಕಾಲವು ಸುಮಾರು ಕ್ರಿ.ಶ. ೫೧೦೦ ಎಂದು ಕವಿಚರಿತೆಯಲ್ಲಿ (ಸಂಪುಟ ೨ ಪುಟ ೧೪೭) ಕೊಟ್ಟಿದೆ.

No. 591. ಗುಹೇಶ್ವರ ವಚನ ಟೀಕೆ.
GUHEŚVARA VACANA ṬĪKE.

Substance, palm-leaf. Size, 19½ × 1½ inches. Pages, 324. Lines, 8 on a page. Character, Kannaḍa. Condition, badly injured. Appearance, old. Mode of writing, good and free from mistakes.

Incomplete.

Same work as that described under No. 467 ante.

Colophon :—

ಐಕ್ಯಸ್ಥಳಂ ಸಮಾಪ್ತಂ ಮಂಗಳ ಮಹಾ ಶ್ರೀ ಶ್ರೀ . . . . ಇದು ಪ್ರಭುದೇವರ ಮನೋಮಂಗಳವಾಸ ಸೌಖ್ಯಪ್ರದ ಪ್ರವರ್ಧನ ಸನ್ನಿಧಾನ ಇದು ಪ್ರಭುಸಚ್ಚರಿತ್ರವಿಚಿತ್ರ ಷಟ್ಸ್ಥಲ ಬ್ರಹ್ಮವಿದ್ಯಾದ್ವೈತ ಸಂಜೀವನ, ಇದು . . . . ಖ ಸಂಕಥಾಗರ್ಭಕಾರಣ ಮಾಂಗಲ್ಯತಂತ್ರ. ಇದು ನಿಜಶಬ್ದ ಬ್ರಹ್ಮರೂಪರೂಪಿತ ನಿತ್ಯಸ್ಥವೇದ್ಯ। ಇದು ಸಕಲ ವೇದಶಾಸ್ತ್ರ ಪುರಾಣಾಗಮ ಶ್ರುತ್ಯುಪನಿಷದ್ . . . . ನೂತನ ಗಣಪ್ರೂಜಿತನ ಶುದ್ಧವಿದ್ಯಾಪರಮತತ್ವಪೀಠ, ಇದು ಪಶ್ಚಿಮರಾಜಯೋಗಿಜನಮನೋಮಧ್ಯಸ್ಥಸುಸಂತರ್ಪಣ, ಇದು ವೀರಶಿವಾಚಾರಸಂಪನ್ನಜ . . . . , . . . ಘನವನಱಿದು ಶ್ರದ್ಧೆಯಿಂ ಕೇಳ ಚರಿಸಿದಾತನೆ ಸದ್ಭಕ್ತನು. ಇದ ರತಿಯಿಂ ಕೇಳ ಲಾಲಿಸಿದಾತನೆ ರುದ್ರಲೋಕಪದಪ್ರಾಪ್ತನು, ಶ್ರವಣಮಾತ್ರದಿಂದ ಇದಕ್ಕೆ . . . . . ನು ಪ್ರಭುದೇವರ ವಚನದಾಖ್ಯಾನ. ಇದನು ಎನ್ನಲ್ಲಿ ತೋಱಿದಷ್ಟು ಇದು ಅಲ್ಪಮತಿಯಿಂದ ನಾನು ಅನ್ವಯುವ ಮಾಡಿದೆನು. ಇದಱಲ್ಲಿ ತಪ್ಪುಳ್ಳೊಡೆ ಮಹಾನುಭಾವರು . . . . . ತಮ್ಮ ತಮ್ಮ ಬಗೆಗೆ ತಂದು . . . . ಡೆ ಅವರ . . . . ರು ತ್ತಿಪ್ಪುದು. ಅಂತುಮಲ್ಲದೆ ವೀರಶೈವಸಿದ್ಧಾಂತಸ್ವರೂಪಮಪ್ಪ ಷಟ್‌ಸ್ಥಲದ ಬ್ರಹ್ಮಯೋಗದ ಮೇಲೆ ಪದವಿಟ್ಟು . . . . ಪ್ರಭುದೇವರ ಷಟ್‌ಸ್ಥಲದ ವಚನಂಗಳು :— .

ಪಿಂಡಸ್ಥಲದ ವಚನ ೪, ಪಿಂಡಜ್ಞಾನಸ್ಥಲದ ವಚನ ೩, ಮಾಯಾವಿಡಂಬನಸ್ಥಲದ ವಚನ ೩೪, ಸಂಸಾರಹೇಯಸ್ಥಲದ ವಚನ . . . . . ಮಾಹೇಶ್ವರಸ್ಥಲದ ವಚನಂಗಳು ೪೪, ಪ್ರಸಾದಸ್ಥಲದ ವಚನಂಗಳು ೧೪, ಪ್ರಾಣಲಿಂಗಸ್ಥಲದ ವಚನಂಗಳು ೧೪೫. ಶರಣಸ್ಥಲದ ವಚನಂಗಳು 295, ಐಕ್ಯಸ್ಥಲದವಚನಂಗಳು . . . . ಶಾಲಿವಾಹನಶಕವರ್ಷಂಗಳು ೧೪೫೦ ನೆಯ ಮುಂದಣ ಕ್ರೋಧನ ಸಂವತ್ಸರದ ವೈಶಾಖ ಬ ೩೦ ಬುಧವಾರದ ನಿಶಿಗೆ ಬರೆದು ಮುಗಿದ ಪ್ರಭುದೇವರ ಷಟ್ . . . . ಶ್ರೀ ಶ್ರೀ ಶ್ರೀ.

(ವಿ-ವಿ.)—

ಅಸಮಗ್ರ. ಮಧ್ಯೇ ಮಧ್ಯೇ ಎಷ್ಟೋ ಓಲೆಗಳು ಮುರಿದು ಪುಡಿಪುಡಿಯಾಗಿ ಹೋಗಿವೆ ಬಹಳ ಶಿಥಿಲ. ಬರೆವಣಿಗೆಯು ಚೆನ್ನಾಗಿದೆ. ತಪ್ಪುಗಳಿಲ್ಲ. ಗ್ರಂಥಕರ್ತನು (ಟೀಕಾಕಾರನು) ಮಹಲಿಂಗದೇವರ ಶಿಷ್ಯನಾದ ಕುಮಾರ ಬಂಕನಾಥನು. ಈ ಗ್ರಂಥಕ್ಕೆ "ಪ್ರಭುದೇವರ ಟೀಕಿನ ವಚನ" ವೆಂಬ ಹೆಸರಿದ್ದಂತೆ ಕವಿಚರಿತೆಯಿಂದ ತಿಳಿದು ಬರುತ್ತದೆ. ಇದು ಗುಹೇಶ್ವರ ವಚನಗಳ ಟೀಕಾರೂಪವಾಗಿರುವುದರಿಂದ ಮೇಲೆ ಕಾಣಿಸಿದ ಹೆಸರನ್ನು ಕೊಡಲೆಡೆಯಾಯಿತು.

ಇದು ಹಿಂದೆ ೪೬೨ ಯ ನಂಬರಿನಲ್ಲಿ ವಿವರಿಸಿದ ಗ್ರಂಥವೇ ಆಗಿದೆ.

No. 592. ಗುಹೇಶ್ವರ ವಚನ ಟೀಕೆ.

GUHEŚVARAVACANATĪKE.

Substance, Śrītāla Size, $13\frac{7}{8} \times 1\frac{5}{8}$ inches. Pages, 120. Lines, 8 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Incomplete.

Same work as the above.

(ಪ.ವಿ.)—

ಅಸಮಗ್ರ. ಬಹಳ ಶಿಥಿಲ, ಓಲೆಗಳು ಅಸ್ತವ್ಯಸ್ತಗಳಾಗಿರುವುವು. ಲಿಪಿಯು ಸಾಮಾನ್ಯವಾಗಿದೆ. ತಪ್ಪು ಇದೆ.

ಗ್ರಂಥದಾದಿಯಲ್ಲಿ ಇಷ್ಟಲಿಂಗಚರಿತೆಯ ಕೆಲವು ಪದ್ಯಗಳೂ. ಅಂತ್ಯದಲ್ಲಿ ಪತ್ರಿಯಿಕೆವಾಗಿ " ಅಗಜೇಶ " ಎಂದಂತ್ಯಗಳಾಗುವ ಹಲವು ಆದ್ಯಂತ ರಹಿತ ಕಂದಗಳೂ ಬರೆದು ಸೇರಿಸಲ್ಪಟ್ಟಿವೆ.

ಇದು ಹಿಂದೆ ವಿವರಿಸಿದ ಗ್ರಂಥವಾಗಿದೆ.

No 593. ಗೊಗ್ಗವ್ವೆಯ ವಚನ.

GOGGAVVEYA VACANA.

Substance, palm-leaf. Size, 12 × 1⅛ inches. Page, 1. Lines, 5. Character, Kannaḍa. Condition, injured. Appearance, old. Mode of writing, not bad but free from mistakes.

• Begins on fol. 66*b* of the manuscript described under No. 498 ante.

Incomplete.

Similar to the above. Contains six Vacanas dedicated to Nāsthinātha, by Goggavve.

Beginning :—

ಮೊಲೆ ಮೂಡಿ ಬಂದರೆ ಹೆಣ್ಣೆಂಬರು. ಮೀಸೆ ಕಾಣಿಸೆ ಗಂಡೆಂಬರು ಈಯುಭಯಜ್ಞಾನ ಹೆಣ್ಣೋ ? ಗಂಡೋ ? ನಾಸ್ತಿನಾಥ.

* * * *

ಭಕ್ತರ ಜಂಗಮದಲ್ಲಿ ಕಟ್ಟಿಹೊರಲಿಕ್ಕೆ ಧೂಪದ ಹೊಗೆಯೆತ್ತ ಹೋದರೂ ಸರಿ. ಇದು ಸತ್ಯವೆಂದೆ ನಾಸ್ತಿನಾಥ.

* * * *

ಆನಲ (ಅನಲ) ಕೊಂಡ ಭೋಗಕ್ಕೆ ಪರಿ ಕಾರವುಂಟೆ ? ಶರಧಿ ಕೊಂಡ ಸಾಗರಕ್ಕೆ ಕುಱುಹಿನ ತಲೆಯೆ ? ಲಿಂಗಮುಟ್ಟಿದಂಗಕ್ಕೆ ಮತ್ತೆ ಪುಣ್ಯವೆಂಬುದು ಹುಸಿ ನಾಸ್ತಿನಾಥ.

End :—

ಗಂಡು ಮೋಹಿಸಿ ಹೆಣ್ಣ ಹಿಡಿದಡೆ ಅದು ಒಬ್ಬರೊಡವೆಯೆಂದಱಿಯ ಬೇಕು. ಹೆಣ್ಣು ಮೋಹಿಸಿ ಗಂಡ ಹಿಡಿದರೆ ಉತ್ತರವಾವುದೆಂದಱಿಯ ಬೇಕು. ಈ ಯೆರಡಱುಭಯವ ಕಳೆದಲ್ಲಿ ಸುಖ ತಾನಾಗ ಬಲ್ಲೊಡೆ ನಾಸ್ತಿನಾಥನು ಪರಿಪೂರ್ಣನೆಂಬೆ. ॥

(ವಿ.ವಿ.)—

ಅಸಮಗ್ರ. ಶಿಥಿಲ. ಬರೆವಣಿಗೆಯು ಸಾಮಾನ್ಯವಾಗಿದೆ.

ಈ ಗ್ರಂಥದಲ್ಲಿ ಸಾಸ್ತಿನಾಥಾಂಕಿತಗಳಾದ ಆರು ವಚನಗಳಿವೆ. ವೀರಶೈವಮತಬೋಧಕವಾದ ಈ ಗ್ರಂಥವು ಗೊಗ್ಗವ್ವೆಯೆಂಬ ವೀರಶೈವಮಹಿಳೆಯಿಂದ ಬರೆಯಲ್ಪಟ್ಟುದೆಂದು ತಿಳಿದು ಬಂದಿದೆ. ಇವಳ ವಚನಗಳು ಆವಂಶದಲ್ಲಿಯೂ ಪುರುಷವಿರಚಿತವಚನಗಳಿಂದ ಕಡಿಮೆಯಾಗಿಲ್ಲವೆಂದು ಧಾರಾಳವಾಗಿ ಹೇಳಬಹುದು.

No. 594. ಚಂದಿಮರಸರ ವಚನ.

CANDIMARASARA VACANA.

Substance, palm-leaf. Size, 12 × 1¼ inches. Pages, 14. Lines, 5 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 127*a* of the manuscript described under No. 498 ante.

Complete.

A small work containing 17 Vacanas ending with "Simmaligeya Cennarāma" by Cendimarasa who lived about the year 1160 A.D.

Beginning :—

ಶ್ರುತಿರ್ವಾರ್ತಾ ಪಿತಾ ಶಂಭುರ್ಭ್ರಾತಾ ಶಂಭುಸ್ತ್ರ್ಯೈವಚ । ದೇವಾ ಸುರಮನುಷ್ಯಾಣಾಂ ಸೃಷ್ಟ್ಯಂತಿ (?) ಪರಮೇಶ್ವರ ಸರ್ವಶೂನ್ಯಂತರಾಮಧ್ಯೇ. ಆದಿಮೂರ್ತಿಸಮುದ್ಭವಂ । ಆದಿಮೂರ್ತಿ ಸಮಾಖ್ಯಾತಂ ಪರಶಕ್ತಿ ಸಮುದ್ಭವಂ ॥ ೧ ॥

*   *   *   *

ಸರ್ವಲೋಕಾನ್ ಉತ್ಪತ್ತ್ಯ ಕ್ರೀಡತೀಶಾನ : ಎಂದುದಾಗಿ ಏನೆಂದೆನ್ನಲಿಲ್ಲದ ಮಹಾಘನವು ತನ್ನ ಲೀಲೆಯಿಂ ತಾನೆ ಸ್ವಯಂಭೂಲಿಂಗ ಸ್ಥಲವಾಯಿತ್ತು. ಆಲಿಂಗದಿಂದಾಯಿತ್ತು ಶಿವಶಕ್ತ್ಯಾತ್ಮಕ. ಶಿವಶಕ್ತ್ಯಾತ್ಮಕದಿಂದಾಯಿತ್ತು ಆತ್ಮ. ಆತ್ಮನಿಂದಾದುದಾಕಾಶ, ಆಕಾಶದಿಂದಾಯಿತ್ತು ವಾಯು, ವಾಯುವಿನಿಂದಾಯಿತ್ತು ಅಗ್ನಿ, ಅಗ್ನಿಯಿಂದಾಯಿತ್ತಪ್ಪು, ಅಪ್ಪುವಿಂದಾಯಿತ್ತು ಪೃಥ್ವಿ, ಪೃಥ್ವಿಯಿಂದಾಯಿತ್ತು ಸಕಲ . . . . ನಿಮ್ಮ ನೆನಹುಮಾತ್ರದಿಂದವು ಸಿಮ್ಮಲಿಗೆಯ ಚೆನ್ನರಾಮ ॥ ೧ ॥

*   *   *   *

End :—

ಅರತವಡಗಿತ್ತು, ಸಾರತ ಹಿಂಗಿತ್ತು, ಸಮತೆ ಸೈವೆಱಗಾಯಿತ್ತು, ಅಯ್ಯಾ! ನಚ್ಚಿಕೆ ನಾಚಿತ್ತು, ಮಚ್ಚಿಕೆ ಮಱಯಿತ್ತು? ನಿಮ್ಮ ನಿರ್ಭಾವಿಸಿ ನಿಸ್ಸಂದೇಹವಾಯಿತ್ತು ಸಿಮ್ಮಲಿಗೆಯ ಚೆನ್ನರಾಮಲಿಂಗದಲ್ಲಿ ಉಪದೇಶ ಉಪಚಾರಾರ್ಥವಾಯಿತ್ತು ॥ ೧೬ ॥

ಮನದ ಬೆಸನದಿಂದ ಸತಿಯಾದ ಪ್ರಪಂಚನೇನೆಂಬೆ? ಮಾಡಿದಹೊಯಿತ್ತು. ಮಾಡಿದ ಕೆ ಹೋಯಿತ್ತು. ನಚ್ಚದಿರು. ನಿಚ್ಚಯಾಯಿಲ್ಲ. ಸಿಮ್ಮಲಿಗೆಯ ಚೆನ್ನರಾಮನೆಂಬ ಸಂಸಾರಿನೀ ಕೇಳಾ! ॥ ೧೭ ॥

(ವಿ-ವಿ.)—

ಸಮಗ್ರ. ಅತಿ ಶಿಥಿಲ. ಬರೆವಣಿಗೆಯು ಹೃದಯಂಗಮವಾಗಿಲ್ಲ. ತಪ್ಪಿಗೇನೂ ಕಡಿಮೆಯಿಲ್ಲ.

ಇದೊಂದು ಸಣ್ಣ ವಚನಗ್ರಂಥವಾಗಿದೆ. ಇದರಲ್ಲಿ ಹದಿನೇಳು ವಚನಗಳಿರುವುವು. ವಚನಗಳೆಲ್ಲವೂ "ಸಿಮ್ಮಲಿಗೆಯ ಚೆನ್ನರಾಮ" ಎಂಬಂಕಿತವನ್ನೊಳಗೊಂಡಿರುವುವು. ಈ ಗ್ರಂಥದಲ್ಲಿ ಪ್ರತಿಪಾದಿತ ವಿಷಯವು ವೀರಶೈವ ಸಿದ್ಧಾಂತವಾಗಿದೆ. ಗ್ರಂಥಕರ್ತನು "ಚಂದಿಮರಸ"ನೆಂಬಾತನು. ಈತನು ಹೆಚ್ಚು ಕಡಿಮೆ ಕ್ರಿ.ಶ. ೧೧೬೦ ರಲ್ಲಿದ್ದನೆಂದು ತೋರುತ್ತದೆ.

No. 595. ಜೋದರಮಾಯಣ್ಣ ವಚನ.

JŌDARA MĀYAṆṆA VACANA.

Substance, palm-leaf. Size, 12 × $1\frac{1}{8}$ inches. Pages, 2. Lines, 5 on a page. Character, Kannaḍa. Condition, much injured. Appearance, old. Mode of writing, not bad but not free from mistakes.

Begins on fol. 86*b* of the manuscript described under No. 498 ante.

Incomplete.—Contains only three Vacanas.

Similar to the above by Jōdara Māyaṇṇa, who was a contemporary of Basava.

Beginning:—

ಅಯ್ಯಾ! ಎನ್ನ ಪ್ರಾಣವಮನಶ್ಚಿತ್ತಂಗಳು ನಿಮ್ಮ ತೊತ್ತಿರು. ಸತ್ವರಜಸ್ತಮ ನಿಮ್ಮ ಭೃತ್ಯರಯ್ಯಾ! [ಅತ್ರಃಕ್ಕ] (ಅಂತಃಕ)ರಣಂಗಳು ನಿಮ್ಮ ಮಂತ್ರಿಗಳು. ಪ್ರಂಚೇಂದ್ರಿಯಂಗಳು ನಿಮ್ಮ ಪಡಿಹಾರರು, ಅರಿಷಡ್ವರ್ಗಂಗಳು ನಿಮ್ಮಲೆಂಕರು ಸಪ್ತಧಾತುಗಳು ನಿಮ್ಮ ಬಾಣಸಿಗರಯ್ಯಾ! ಅಷ್ಟಮದಂಗಳು ನಿಮ್ಮಕುಮಾರರು ನವರಸಂಗಳು ನಿಮ್ಮ ಭಂಡಾರಿಗಳು [ಧಸ] (ದಶ) ವಾಯುಗಳು ನಿಮ್ಮ ಸೀಗುರಿ ಚಾಮರಗಳು ಷೋಡಶಕಳೆಗಳು ನಿಮ್ಮ ರಾಣಿವಾಸ, "ಶಂಭು ಸೋಮನಾಥಲಿಂಗ" ನಿಮಗೆನ್ನ ಕಾಯ ಮುಂತಾಗಿ ಬಾರಹತ್ತರಿಗರು ಡಿಂಗರಿಗರು ॥ ೧ ॥

* * * *

End :—

ಕಾಮ ಹೊದ್ದಲಮ್ಮದು ಬಲ್ಲಾಳನ ನೆನದಡೆ ಕ್ರೋಧ ಹೊದ್ದಲಮ್ಮದು . . . . ಪುರಾತನರ ನೆನದಡೆ . ಇವಾವವೂ ಹೊದ್ದಲಮ್ಮವು "ಶಂಭು ಸೋಮನಾಥಲಿಂಗ!" ಶರಣೆಂಬಂಗೆ ॥ ೨ ॥

(ವಿ-ವಿ) —

ಅಸಮಗ್ರ. ಅತಿ ಶಿಥಿಲ. ಗ್ರಂಥಪಾತವಿದೆ. ಬರೆವಣಿಗೆಯು ತೃಪ್ತಿಕರವಾಗಿಲ್ಲ. ತಪ್ಪುಇದೆ.

ಇದೊಂದು ಚಿಕ್ಕ ವಚನಗ್ರಂಥವಾಗಿದೆ. ಇದರಲ್ಲಿ "ಶಂಭು ಸೋಮನಾಥಲಿಂಗ" ಎಂಬಂಕಿತವಿರುವ ಮೂರು ವಚನವಿದೆ. ವಚನಕರ್ತನು "ಜೋದರಮಾಯಣ್ಣ" ನೆಂದು ಈ ಗ್ರಂಥದಾದಿಯಲ್ಲಿ ಬರೆದಿದೆ. ಅದೇ ಹೆಸರನ್ನು ಇಲ್ಲಿಯೂ ಕಾಣಿಸಲಾಗಿದೆ. ಜೋದರ ಮಾಯಣ್ಣನು ಬಸವಸಮಕಾಲಿಕ ನಾಗಿರುವನು.

No. 506. ಡಕ್ಕೆಯ ಬೊಮ್ಮಣ್ಣ ವಚನ.

DAKKEYA BOMMAṆṆA VACANA.

Substance, palm-leaf. Size, 12 × 1⅛ inches. Pages, 7. Lines, 4 on a page Character, Kannaḍa. Condition, much injured. Appearance, old. Mode of writing, not bad but free from mistakes.

Begins on fol. 51*b* of the manuscript described under No. 498 ante.

Incomplete.

Similar to the above. Contains nine Vacanas. By Dakkeya Bommaṇṇa.

Beginning:—

ತನುವೆಂಬ ಮೊಱದಲ್ಲಿ ಮಾಯಾಗುಣವೆಂಬ ಪುರಿಯ ಹಿಡಿದು ರಾಜಸತಾಮಸವೆಂಬ ಬಾಳು ಬಟ್ಟಲು ಕೈಯಲ್ಲಿಕ್ಕಿ ಅಂಗದ ಮನೆಯ ಬಾಗಿಲಲ್ಲಿ ಕೊಂಡುಬಂದಿದ್ದೇನೆ. ಬಲ್ಲವರಿಕ್ಕಿ. ಅಱಿಯದವರೆಲ್ಲರು ಸುಮ್ಮನಿರಿ. ಡಕ್ಕೆಯ ಉಲುಹಡಗುವದಕ್ಕೆ ಮುನ್ನವೆ. ನಿಶ್ಚಯಿಸಿ ನಿಜ ತತ್ವವನಱಿ ಕಾಲಾಂತಕ ಭೀಮೇಶ್ವರಲಿಂಗವನಱಿಯಬಲ್ಲೊಡೆ.

*   *   *   *

End :—

ಜಾಗ್ರದವಸ್ಥೆಯಲ್ಲಿ [ಸೂಳುಹು] (ಸುಳಿವು) ದೋಱಿದ ಶಕ್ತಿ, ಸ್ವಪ್ನಾವಸ್ಥೆಗೆ ತಲೆದೋಱಿದ ಮತ್ತೆ ಬೋಱತೊಂದು ಬಯಕೆಕಟ್ಟುಂಟೆ ? ಆಸೆಯೆಂಬುದೇ ಮಾರಿ, ನಿರಾಸೆಯೆಂಬುದೇ ದೇವಪದ ದೇವನ ನೆನೆದು ಕಾಯಕವ ಮಾಡಿದಲ್ಲಿ ಆವ ಪದಕ್ಕು ಸುಖ. ಕಾಲಾಂತಕ ಭೀಮೇಶ್ವರಲಿಂಗವನಱಿತು ಮಾಡಿ . . ॥

(ವಿ.ವಿ.) —

ಅಸಮಗ್ರ. ಅತಿ ಶಿಥಿಲ. ಲಿಪಿಯು ಸಾಮಾನ್ಯವಾಗಿದೆ. ತಪ್ಪಿಲ್ಲ.

ಈ ವಚನ ಗ್ರಂಥವು "ಕಾಲಾಂತಕ ಭೀಮೇಶ್ವರಲಿಂಗಾಂ"ಕಿತವಾದ ಒಂಬತ್ತು ವಚನಗಳನ್ನೊಳಗೊಂಡಿದೆ. ಇದರಲ್ಲಿ ವೀರಶೈವಮತಕ್ಕೆ ಸಂಬಂಧಪಟ್ಟ ತತ್ವಗಳ ಉಲ್ಲೇಖವು ಮಾಡಲ್ಪಟ್ಟಿದೆ. ವಚನಕರ್ತನು ಡಕ್ಕೆಯ ಬೊಮ್ಮಣ್ಣನು. ಇವನ ಜೀವಿತ ಕಾಲ, ದೇಶ, ಇವುಗಳ ವಿಷಯವಾಗಿ ಯಾವಂಶವೂ ಈ ಗ್ರಂಥದಿಂದ ತಿಳಿಯಬರುವುದಿಲ್ಲ

No 597. ತಳವಾರಕಾಮಿದೇವಯ್ಯ ವಚನ.

TAḶAVĀRAKĀMIDĒVAYYA VACANA.

Substance, palm-leaf. Size, 12 × 1⅛ inches. Pages, 2. Lines, 5 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 67*b* of the manuscript described under No. 498 ante.

Incomplete.

Similar to the above. Contains five Vacanas. By Taḷavāra Kāmidēvayya.

Beginning:—

ಹಾಗರವನಾಡುವನೆ ಸದ್ಭಕ್ತ, ಹಾದಿಯ ಕಟ್ಟುವನೆ ನಿಜಶರಣ, ಹಸುವಿನ ಕಲೆಯ ಬಲ್ಲವ, ಇಂತಿವರನೀಬಲ್ಲೆ. ನಾನಱಿಯೆ, ಕಾಮಹರಪ್ರಿಯ ರಾಮನಾಥ !

* * * *

ಹುಟ್ಟುವ ಜೀವಿಗಳೆಲ್ಲವೂ ಹಲವು ತೆಱದ ಘಟದಲ್ಲಿ ಬಂದು ಕೆಮ್ಮಕ್ಷಿತ್ತ ಕೊಂಬಂತೆ, ಮರ್ತ್ಯದಲ್ಲಿ ಬಂದವರೆಲ್ಲರೂ ನಿಶ್ಚಯವಪ್ಪರೆ ? ಒಚ್ಚತ ಹರಿಯಜರುದ್ರರೂ ಮೊದಲಾದ ದೇವರೆಲ್ಲರು ಸಿಕ್ಕಿದರೇಕೆ ! ಮಾಯೆಗೆ. ಇವರಚ್ಚಿಗವ ನಾಭಕ್ತನೆಂದಡೆ ತಪ್ಪನಾಧಿಸುವ ಕಾಮಹರಪ್ರಿಯರಾಮನಾಥ.

* * * *

End:—

ಹಸಿವು ಮುಂತಾಗಿ ಬಹಾತ ಮನೆಯೊದಗಬಲ್ಲನೆ ? ವಿಷಯವ ಡಾವರಿಸಿದವ ಸ್ತುತಿ ನಿಂದಾದಿಗಳ ಬಲ್ಲನೆ ? ಖ್ಯಾತಿಯ ಲಾಭಕ್ಕೆ ಮಾಡುವಾತ ಭ್ರಾಂತಳಿದವಗ ಬಲ್ಲನೆ ? ಉಭಯ ವನಱಿದು ಆಪ್ಯಾಯನಕ್ಕೆ ಅನ್ನ, ಆಸಕ್ತಂಗೆ ಹೊನ್ನು, ವಿಷಯಾದಿಗೆ ಹೆಣ್ಣು ಇಚ್ಛೆಯನಱಿದು ಒಡನಿರ್ದಲ್ಲಿ ಕೊಟ್ಟು ಈ ತ್ರಿವಿಧವ ಕುಚಿತ್ರನೆಂದವರನಱಿಯಬೇಕು ಕಾಮಹರಪ್ರಿಯ ರಾಮನಾಥ.

(ವಿ-ವಿ.)—

ಅಸಮಗ್ರ. ಅತಿ ಶಿಥಿಲ. ಲಿಪಿಯು ಸಾಮಾನ್ಯವಾಗಿದೆ. ತಪ್ಪಿದೆ.

ಇದು ವೀರಶೈವ ವೇದಾಂತ ಪ್ರತಿಪಾದಕಗ್ರಂಥವು. ಇದರಲ್ಲಿ ಐದು ವಚನಗಳಿವೆ. ವಚನಗಳೆಲ್ಲವೂ ಕಾಮಹರಪ್ರಿಯ ರಾಮನಾಥಾಂಕಿತಗಳಾಗಿರುವುವು. ಗ್ರಂಥಕರ್ತನು ತಳವಾರಕಾಮಿದೇವಯ್ಯನೆಂಬವನೆಂದು ಕಂಡುಬರುತ್ತದೆ.

No. 598. ತುರುಗಾಹಿರಾಮಣ್ಣ ವಚನ.

TURUGĀHIRAMAṆṆA VACANA.

Substance, palm leaf. Size. 12 × 1⅛ inches. Pages, 2. Lines, 4 on a page. Character, Kannaḍa Condition, much injured. Appearance, old. Mode of writing, not bad and not free from mistakes.

Begins on fol. 64*a* of the manuscript described under No. 498 *ante*.

Incomplete.

Similar to the above. Contains three vacanas. By Turugāhi Rāmaṇṇa.

Beginning :—

ಹಸುವಿಂಗೆ ಆಱು ಬಾಯಿ, ಎತ್ತಿಂಗೆ ಆಱು ಬಾಯಿ, ಕರುವಿಂಗೆ ಒಂದೆ ಬಾಯುಲ್ಲಿ ನಾನಾ ವರ್ಣದ ಹುಲ್ಲ ಮೆದ್ದು ನೀರಡಸಿ ನೆಟ್ಟಾಲಿ ನಿಂದವು ಕಣ್ಣಾ, ಕರುಸತ್ತಮತ್ತೆ ಹಸುವಿನ ಹಂಗಿಲ್ಲ. ಗೋಪತಿನಾಥವಿಶ್ವೇಶ್ವರಲಿಂಗಕ್ಕೆ ತುಱುವಿನ ಹರಣ ಹೋಹುದಕ್ಕೆ ಮುನ್ನವೆಯೊಡಗೂಡಿ ಸುದ್ದಿಯ ನೊಪ್ಪಿಸಬೇಕು.

* * * *

End :—

ಬಂದಿತು ದಿನ ಬಸವಣ್ಣ, ಕಲ್ಲಿಗೆ, ಚೆನ್ನಬಸವಣ್ಣ. ಉಳುವೆಯುಲ್ಲಿಗೆ, ಪ್ರಭು ಅಕ್ಕ ಕದಳೀದ್ವಾರಕ್ಕೆ. ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ಲಕ್ಷ್ಯಕ್ಕೆ. ನಾನೂ ತುಱುವಿನ ಬೆಂಬಳಿಯಲ್ಲೇ ಹೋದೆ. ಪಾಲೆಯಲ್ಲಿ ಅಡಗಿಹರೆಲ್ಲರು. ಅಡಗಿದುದ ಕೇಳ ನಾ ಗೋಪತಿನಾಥ ವಿಶ್ವೇಶ್ವರ ಲಿಂಗದಲ್ಲಿಯೆ ಅಡಗುವೆನು.

(ವಿ.ವಿ.)—

ಅಸಮಗ್ರ. ಅತಿ ಶಿಥಿಲ. ಬರೆವಣಿಗೆಯು ಸಾಮಾನ್ಯವಾಗಿದೆ. ತಪ್ಪಿದೆ.

ಈ ಗ್ರಂಥವು ವಚನರೂಪವಾಗಿದೆ. ಇದರಲ್ಲಿ "ಗೋಪತಿನಾಥ ವಿಶ್ವೇಶ್ವರಲಿಂಗ" ಎಂಬಂಕಿತವಿರುವ ಮೂರು ವಚನಗಳಿವೆ. ವಚನ ಕರ್ತನು ತುಱುಗಾಹಿರಾಮಣ್ಣನು. ಮೂರನೆಯ ವಚನದಲ್ಲಿ "ಬಸವಾದಿಗಳು ಆಯಾಲಿಂಗಂಗಳಲ್ಲಿ ಐಕ್ಯರಾದಂತೆ ನಾನೂ ಗೋಪತಿನಾಥ ವಿಶ್ವೇಶ್ವರ ಲಿಂಗದಲ್ಲಿ ಐಕ್ಯನಾಗುವೆನು" ಎಂಬ ವಿಷಯವನ್ನು ವ್ಯಕ್ತವಾಗಿ ಹೇಳಿರುವನು.

No. 599. ದಸರೆಯ್ಯ ವಚನ.

DASARAYYA VACANA.

Substance, palm-leaf. Size, 12 × 1⅛ inches. Pages, 3. Lines, 5 on a page. Character, Kannaḍa. Condition, much injured. Appearance, old. Mode of writing not bad and free from mistakes.

Begins on fol. 77a of the manuscript described under No 498 *ante*.

Incomplete.

Similar to the above by Dasarayya who lived about 1160 A.D.

Beginning :—

ಸರ್ವಮಯ ! ನಿನ್ನ ಬಿಂದುವಾದಲ್ಲಿ ಆವುದನಹುದೆಂಬೆ, ಆವುದನಲ್ಲೆಂಬೆ, ಸರ್ವ ಛೀ . . . . ತ್ರಗಳಂಗಾಡುವವಾಗಿ ಇಸ್ನಾವುದ ಕಾಯುವೆ. ಇಸ್ನಾವುದ ಕೊಲ್ಲುವೆ, ತರು ಲತೆ ಸ್ಥಾವರಜೀವಂಗಳೆಲ್ಲಾ . . . ಣ್ಯಾ . . . . ದೂ . ಆಱ ಹರಿದು ಆರಿಂಗರ್ಪಿಸುವೆ. ತೊಟ್ಟು ಬಿಡುವನಕನೀ ತೊಟ್ಟುಬಿಟ್ಟ ಮತ್ತೆ ನೀ ಜಿಟ್ಟರೆಂದು ಎತ್ತಿಪ್ರೂ[ದಿ] (ಜೆ) ಸುತ್ತಿದ್ದೆ. ದಸರೇಶ್ವರನೆಂದು.

* * * *

End :—

[ಪೃತ್ವಿವಂ ಉಶಿ] (ಪೃಥ್ವಿಯಾಶ) ತಾಂಗವಾಗಿ, ಅಪ್ಪುವಂ . . . ಶೊ್ರಣಿ ತವಾಗಿ ತೇಜೋಂಶಕ ಹಸುವಾಗಿ ? (ಅಸುವಾಗಿ) ವಾಯ್ವಂಶಕಾತ್ಮನಾಗಿ, ಆಕಾಶಾಂಶ ಬ್ರಹ್ಮ ರಂಧ್ರವಾಗಿ ಇಂತೀ . . . . . ರ ಗುಣವುಳ್ಳನಕ ಗೆಲ್ಲ ಸೋಲಬಿಡದು ಇವ ಅಲ್ಲಿಗಲ್ಲಿಯೆ ಇಂಬಿಟ್ಟು ಇಂತೀ ಎಲ್ಲೆಯು ಬಿಡಿಸಯ್ಯ ಎನ್ನಲ್ಲಿ ನಮಗೆ ಖುಲ್ಲತನ ಬೇಡ. ಅದೆನ್ನ ಸೊಕ್ಕಲ್ಲಾ ! ನಿನ್ನ ಸೊಕ್ಕು ದಸರೇಶ್ವರಲಿಂಗಾ !

(ವಿ.ವಿ.)—

ಅಸಮಗ್ರ. ಅತಿಶಿಥಿಲ. ೨ ನೆಯ ಓಲೆಯ ಕಾಲಂಶವು ಮುರಿದು ಹೋಗಿದೆ. ಲಿಪಿಯು ನಾಜೂಕಾಗಿಲ್ಲ. ತಪ್ಪಿದೆ. ಇದೊಂದು ಚಿಕ್ಕ ವಚನಗ್ರಂಥವಾಗಿದೆ. ಇದರಲ್ಲಿ ದಸರೇಶ್ವರ ಲಿಂಗಾಂಕಿತಗಳಾದ ಐದು ವಚನಗಳಿವೆ. ವಚನಕರ್ತನು. ದಸರಯ್ಯನೆಂಬಾತನು. ಈತನು ಸುಮಾರು ಕ್ರಿ.ಶಕ. ೧೧೬೦ ರಲ್ಲಿದ್ದನೆಂದು ತಿಳಿಯಬರುತ್ತದೆ.

No. 600. ದಾಸಯ್ಯ ವಚನ-

DĀSAYYA VACANA.

Substance, palm-leaf. Size, 12 × $1\frac{1}{8}$ inches. Pages, 17. Lines, 4 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 118*b* of the manuscript described under No. 498 ante.

Incomplete.

Deals with some of the moral teachings of the Vīraśaiv system. By Dāsayya who lived about 1160 A.D.

Beginning :—

ಅನುಭವ ವಿಲ್ಲದೆ ಈ ತನು ವೆಳತಜವಾಯಿತ್ತು . ಅನುಭಾವವೀ ತನುವಿಂಗಾಧಾರ. ಅನುಭಾವವೆ ಭಕ್ತಿಗಾಧಾರ. ಅನುಭಾವವೆ ಭಕ್ತಿಗೆ ನೆಲೆವನೆ. ಅನುಭಾವವು ಪ್ರಾಣಕಂಡಾ ! ತ್ರಯರ್ಗಸಂ . . . . ಭಾಷ ಣೆಯ ಬೆಸಗೊಳ್ಳದಿರ್ದಡೆ ನರಕದಲ್ಲಿಕ್ಕುವನಯ್ಯ ! ರಾಮನಾಥ ! ॥ ೧ ॥

ಕರಿಯನಿತ್ತರೆ ಒಲ್ಲೆ, ಸಿರಿಯನಿತ್ತರೆ ಒಲ್ಲೆ, ಹಿರಿದಪ್ಪ ರಾಜ್ಯವನಿತ್ತರೊಲ್ಲೆ, ನಿಮ್ಮ ಶರಣರ ಸೂಳು ನುಡಿಯನೊಂದರಗಳಿಗೆ ಇತ್ತಡೆ ನಿನ್ನನಿತ್ತೆ ಕಾಣಾ ! ರಾಮನಾಥ ! ॥ ೩ ॥

* * * *

ಒಡಲುಗೊಂಡವ ಹಸಿವ, ಒಡಲೊಂಡವ ಹುಸಿವ. ಒಡಲೊಂಡವ ಬಹನು ಬಾರದ ಭವಂಗಳಲ್ಲಿ, ಬಹನು? ಒಡಲೊಂಡವನೆಂದೆನ್ನ ಜಡಿದೊಮ್ಮೆ ನುಡಿಯದಿರು, ಎನ್ನ ಹಾಂಗೆ ನೀನೊಡಲೊಂಡು ನೋಡ ! ರಾಮನಾಥ.

End :

ರಾಗ ಮಲಹರಿ, ಉತ್ತಮ ಕುಲದಲ್ಲಿ, ಹುಟ್ಟಿದೆನೆಂದೆಂಬ । ಕಷ್ಟದ ಹೊರೆಯ, ಹೊರಿಸದಿರಯ್ಯ । ಕಕ್ಕಯ್ಯನೊಕ್ಕದ, ನಿಕ್ಕ ನೋಡಯ್ಯ । ದಾಸಯ್ಯ ಶಿವಧಾನ, ಯೊಅಿತಿಯ ನೋಡಯ್ಯ । ಮನ್ನಣೆಯ, ಚೆನ್ನಯ್ಯ, ಎನ್ನುವ ಮನ್ನಿಸ । ಉನ್ನತಮಹಿಮ, ಕೂಡಲ ಸಂಗ ಶಿವಧೋ ॥ ॥

(ವಿ-ವಿ·)—

ಅಸಮಗ್ರ. ಅತಿಶಿಥಿಲ, ಗ್ರಂಥಪಾತವಿದೆ. ವಿಳಸನೆಯ ಒಲೆಯ ಓಂದು ಚಿಕ್ಕಚೂರು ಮಾತ್ರವಿದೆ. ಬರೆವಣಿಗೆಯು, ಶ್ಲಾಂಘ್ಯವಾಗಿಲ್ಲ. ತಪ್ಪಿದೆ.

ಇದು ವಚನರೂಪವಾಗಿದೆ. ವಚನಗಳೆಲ್ಲವೂ ಪ್ರಾಸವಿಶಿಷ್ಟಗಳಾಗಿರುವುವು. ಇದರಲ್ಲಿ "ರಾಮನಾಥಾ"ಂಕಿತಗಳಾಗಿರುವ ೫೧ ವಚನಗಳೂ "ಕೂಡಲಸಂಗಶಿವಧೋ" ಎಂದಂತ್ಯವಾಗುವೊಂದು ಪದ್ಯವೂ ಇವೆ. ಇದು ವೀರಶೈವ ಸಂಪ್ರದಾಯವನ್ನು ಬೋಧಿಸುತ್ತದೆ· ಇದನ್ನು ಬರೆದವನು "ದಾಸಯ್ಯ" ನೆಂಬುವನು. ಈತನು ಕಿಂಚಿನ್ನ್ಯೂನಾಧಿಕವಾಗಿ ಕ್ರಿ.ಶ. ೧೧೬೦ ರಲ್ಲಿದ್ದನೆಂದು ತಿಳದು ಬರುವುದು·

No. 601. ದಾಸೋಹದ ಸಂಗಣ್ಣ ವಚನ.
DĀSŌHADA SANGAṆṆA VACANA.

Substance, palm-leaf. Size, 12 × $1\frac{3}{4}$ inches. Pages, 2. Lines, 5 on a page. Character, Kannaḍa. Condition, injured. Appearance, old. Mode of writing, not bad and not free from mistakes.

Begins on fol. 65*b* of the manuscript described under No. 498 ante.

Incomplete.

Similar to the above. Contains three Vacanas dedicated to Mātuḷuṅgamadhukēsvara. By Dāsōhada Saṅgaṇṇa.

Beginning :—

ವಿರಕ್ತಂಗೆ ವಿಷಯುವುಂಟೆ ? ಶರಣಂಗೆ ತಥ್ಯಮಿಥ್ಯೆಯುಂಟೆ ? ಮಹ[ದೊಱ] (ದೊಡ) ಮಹಾತ್ಮ್ಯೆಯಾನಳದವಂಗೆ ಗಾಂಭೀರಗರ್ವಕ್ಕೆಡೆದೆಱಪುಂಟೆ ? ಅತನಿರವು ದಗ್ಧಪಟದಂತ್ಯೆಥಂ ಹ್ಯದಲ್ಲಿ ? ನೊಂದ ರಜ್ಜುವಿನ ತೆಱದಂತೆ, ನಿರವಯವದಲ್ಲಿ ತೋಱುವ ಮರೀಚಿಕಾಜಲದ ತೆರೆಯ ಹೊಳಹಿನ ವಳಯಂತೆ· ರೂಪಿಂಗೆ ದೃಷ್ಟವಾಗಿ ಹಿಡಿವೆಡೆಯಲ್ಲಿ ಅಡಿಯಿಲ್ಲದೆ ವಸ್ತುವ ನೊಡಗೂಡ ಬೇಕು. ಆತ ಹಿಡಿಯ ಮುಟ್ಟ. ಸರ್ವಗುಣಸಂಪನ್ನನ ತೊಟ್ಟು, ದಿವ್ಯಜ್ಞಾನಿಯ ಕಟ್ಟು ಶಂಭು[ಗಿಂ](ವಿನಿಂ) ದಿತ್ತ ಸ್ವಯಂಭು[ಗಿಂ](ವಿನಿಂ)ದತ್ತ [ಅತಿಬಾಲ] (ಅತಿಬಲ) ನೋಡಾ ! ಮಾತುಳಂಗಮಧುಕೇಶ್ವರನು·

ಹುತ್ತಕ್ಕೆ ಸರ್ಪನಾಗಿ, ಉದಕಕ್ಕೊಳ್ಳಿಯಾಗಿ, ಕೊಂಬಿಂಗೆ ಕೋಡಗವಾಗಿ, ಅವರವರ ಬೆಂಬಳಿಯಲ್ಲಿ ಅಜಬೀಜವ ಕಾವ ಜಂಬುಕನಂತೆ ತಿರುಗಲೇತಕ್ಕೆ ? ಆಯುಷ್ಯ ತೀರಿದಲ್ಲಿ ಮರಣ, ಐಶ್ವರ್ಯಹೋದಲ್ಲಿ ದಾರಿದ್ರ್ಯ, ಬಪ್ಪದು ಎಲ್ಲಿದ್ದರೂ ತಪ್ಪದೆಂದಱಿದು ಮತ್ತೆ ಬಾಯಾ ಮುಚ್ಚಿ ಸತ್ತಂತಿಪ್ಪುದೆ ತೆಱ. ಇದು ಭಕ್ತಿವಿರಕ್ತಿಯ ಪಥ. ಶಂಭು[ಗಿ](ವಿನಿ)ಂದತ್ತ. ಅತಿಬಲ ನೋಡಾ ! ಮಾತುಳಂಗಮಧುಕೇಶ್ವರನು·

End :—

ಮಾಚರಿ ನುಂಗಿದ ಚೂಡ ತನ್ನಕಾಲ ವೇಳೆಗೆ ನಿಂದು ತೂಗಿದುದುಂಟೆ ? ಲಿಂಗವನಱಿದ ಚಿತ್ತ ಸಂಸಾರಸಂದಣಿಯಲ್ಲಿ ಮುಳುಗುವುದೆ ? ಈ ದ್ವಂದ್ವವನಱಿದು ಯೋಗಸಂಬಂಧಿಯಾಗಿರಬೇಕು. ಶಂಭುಗಿಂದಿತ್ತ, ಸ್ವಯಂಭುಗಿಂದತ್ತ, ಅತಿಬಲನೋಡಾ ! ಮಾತುಳಂಗಮಧುಕೇಶ್ವರನು.

(ವಿ-ವಿ.)—

ಅಸಮಗ್ರ. ಶಿಥಿಲ. ಲಿಪಿಯು ಸಾಮಾನ್ಯವಾಗಿದೆ ತಪ್ಪಿದೆ.

ಈ ವಚನಗ್ರಂಥದಲ್ಲಿ "ಮಾತುಳಂಗ ಮಧುಕೇಶ್ವರ" ಎಂಬಂಕಿತವಿರುವ ವಚನತ್ರಯವಿದೆ. ವೀರಶೈವೀಯನಾದ ಈ ಗ್ರಂಥವನ್ನು ಬರೆದವನು ದಾಸೋಹದ ಸಂಗಣ್ಣನು. ಮಿಕ್ಕ ವಿಷಯಗಳನ್ನುದಾಹೃತವಚನಗಳಿಂದ ತಿಳಿಯುವುದು.

No. 602. ದೇವಮೂರ್ತಿ ಸಂಗಣ್ಣ ವಚನ.

DĒVAMŪRTI SAṄGAṆṆA VACANA.

Substance, palm-leaf. Size, 12 × $1\frac{1}{8}$ inches. Pages, 2. Lines, 5 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 88*b* of the manuscript described under No. 500 ante.

Incomplete.

Similar to the above. By Dēvamurthi Saṅgaṅṅa. Particulars regarding the author are not available in this work.

Beginning :—

ವೇದದ ಮೊದಲಧ್ಯಾಯದಲ್ಲಿ ಓಂಕಾರಕ್ಕೆ ಒಡೆಯನಾರೆಂಬುದ ತಿಳಿದು :—ಸದ್ಯೋಜಾತಸ್ತಥಾ ಭೂಮಿ ವಾಮದೇವಂ ಭವೇಜ್ಜಲಂ ಅಘೋರಮಗ್ನಿರಿತ್ಯುಕ್ತಂ ತತ್ಪುರುಷಂ ವಾಯುರುಚ್ಯತೇ ಈಶಾನ್ಯಂ(ನಂ) . ಗಗನಾಕಾರಂ ಪಂಚಬ್ರಹ್ಮಮಯಂಜಗತ್ ಇಂತೀ ವೇದವೇದ್ಯರು ಶಿವಭಕ್ತರಲ್ಲದಿಲ್ಲ. ಇಂತಿದನರಿಯದೆ ಘನ ಕಿರಿದೆಂದು, ಹೋರುವವರಿಗೆ [ತಿಳುವಳವ] (ತಿಳವಳಿಕೆಯ) ಕೊಡುವ ಶಂಕರ ಸಂಹಿತೆಯಲ್ಲಿ ದೃಷ್ಟವ ತಿಳದುಕೊಳ್ಳಲಲಾಮ ಭೀಮ ಸಂಗಮೇಶ್ವರಲಿಂಗವಲ್ಲದಿಲ್ಲೆಂದೆ.

* * * *

End:—

ಕೃತಯುಗದಲ್ಲಿ ಕುಂಜರಯಾಗಕ್ಕೆ ತ್ರೇತಾಯುಗದಲ್ಲಿ ಮಹಿಷೀಯಾಗಕ್ಕೆ ದ್ವಾಪರದಲ್ಲಶ್ವಯಾಗಕ್ಕೆ ಕಲಿಯುಗಲ್ಲಜಯಾಗಕ್ಕೆ . . . ಇಂತೀ ವೇದಗಳಿಂದ ವೇದವೇದ್ಯರೆ ? ನೀವು ವೇದಯಾಗಕ್ಕೆ ವಧೆಯುಂಟೇ ? ಇಂತೀ ಭೇದವನರಿಯದೆ ಶಾಪಹತರುಗಳಿಗೆ ಸರ್ವಜ್ಞ ದೃಷ್ಟವಪ್ಪುದೆ. ಇಂತೀ ವೇದವೇದ್ಯರೂ, ಶಾಸ್ತ್ರಸಂಪನ್ನರೂ ಸಕಲಾಗಮುಕ್ಕತೀತರೂ ಎಮ್ಮವರು. ಲಲಾಮ ಭೀಮ ಸಂಗಮೇಶ್ವರಲಿಂಗದೊಳಗಾದ ಶರಣರು. ॥ ೩ ॥

(ವಿ-ವಿ.)—

ಅಸಮಗ್ರ. ಅತಿಶಿಥಿಲ. ಗ್ರಂಥಪಾತವಿದೆ. ಬರೆವಣಿಗೆಯು ನಾಜೂಕಾಗಿಲ್ಲ. ತಪ್ಪಿದೆ.

ಗ್ರಂಥವಿದು ವಚನರೂಪವಾಗಿದೆ. ಇದರಲ್ಲಿ “ಲಲಾಮ ಭೀಮ ಸಂಗಮೇಶ್ವರಲಿಂಗಾಂ” ಕಿತಗಳಾದ ಮೂರು ವಚನಗಳಿವೆ. ಈ ವಚನಗಳನ್ನು ಬರೆದವನು ದೇವಮೂರ್ತಿ ಸಂಗಣ್ಣ ನೆಂಬವನು. ಇವನ ದೇಶಕಾಲಗಳನ್ನು ತಿಳಿದುಕೊಳ್ಳಲನುಕೂಲಗಳಾದ ಆಧಾರಗಳಾವುವೂ ಈ ಗ್ರಂಥದಲ್ಲಿ ಕಂಡುಬರುವುದಿಲ್ಲ.

No. 603 ನಾಗರದ ಬೊಮ್ಮಣ್ಣ ವಚನ.
NĀGARADA BOMMAṆṆA VACANA.

Substance, palm-leaf. Size, 12 × 1⅛ inches. Pages, 4. Lines 5 on a page. Character, Kannaḍa. Condition, Much injured. Appearance, old. Mode of writing, not bad and not free from mistakes.

Begins on fol. 75b of the manuscript described under No. 498 ante.

Incomplete.

Similar to the above. Contains five Vacanas by Nāgarada Bommaṇṇa.

Beginning :—

ಅಂಗದ ಬೊಕ್ಕಸದ ಮಂದಿರಕ್ಕೆ ಚಿದ್ಘನಲಿಂಗ ವೆಂಬುದೊಂದು ಬೀಗ, ತ್ರಿಗುಣವೆಂಬ ಮೂರೆಸಳು . . . ಒಂದು ಪೂರ್ವಗತಿ, ಒಂದು ಮಧ್ಯಗತಿ, ಒಂದುತ್ತರಗತಿಯೆನಿಸಿಕ್ಕಿದವು, ಮೂರೆಸಳು, ಆಯೆಸಳಗೆ ಘಟವೊಂದೆ, ಒಡೆ . . ಎಸಳ ತೆಗೆವುದಕೆ ಕೈಯಕಾಣೆ [ಪ್ರತ್ತಿಗೆ](ಪೃಥ್ವಿಗೆ) ಅಸಾಧ್ಯ ನೋಡಾ! ಇಂತೀ ಬೀಗದ ಗುಣವ ಬಸವಣ್ಣಪ್ರಿಯ ನಾಗರೇಶ್ವರಲಿಂಗವೆ! ನೀವೆ ಬಲ್ಲಿರಿ.

* * * *

End :—

ಅಂಗಲಿಂಗ ಸಂಬಂಧಿಗಳು ನಿಮ್ಮನೆಱಿಯರು. ಪ್ರಾಣಲಿಂಗ ಸಂಬಂಧಿಗಳು ನಿಮ್ಮನೆಱಿಯರು. ಅದೆಂತೆಂದಡೆ :—ಅಂಗಲಿಂಗವೆಂದುಭಯದ ಸಂದುಂಟೇ? ಕರ್ಪೂರದ ಕುಂಭದಲ್ಲಿ ಹಾಕಿದ ಕಿಚ್ಚು ಒಳಗೂ ಬೆಂದು ಹೊರಗೂ ನಿಂದುಂಟೇ? ಇಂತೀ ಇಷ್ಟಲಿಂಗ ಪ್ರಾಣಲಿಂಗ ವೆಂದುಭಯದ ಗುಪ್ತನಲ್ಲಿ ಮಾತ್ರಾರದವಂಗೆ ಇಷ್ಟದ ದೃಷ್ಟದಲ್ಲಿ ಅಲ್ಲ ಆತ್ಮನ ನಿಶ್ಚಯದಲ್ಲಿ ಸೀನಿಲ್ಲಾ ಬಸವಣ್ಣಪ್ರಿಯ ನಾಗರೇಶ್ವರಲಿಂಗವನೆತ್ತ ಬಲ್ಲರೋ?

(ವಿ-ವಿ.)—

ಅಸಮಗ್ರ. ಅತಿ ಶಿಥಿಲ. ಗ್ರಂಥಪಾತವಿದೆ. ಬರೆವಣಿಗೆಯು ಸಾಮಾನ್ಯವಾಗಿದೆ. ತಪ್ಪಿದೆ. ಇದು. ವಚನಗ್ರಂಥವಾಗಿದೆ. ಇದರಲ್ಲಿ “ಬಸವಣ್ಣಪ್ರಿಯ ನಾಗರೇಶ್ವರಲಿಂಗಾ” ಂಕಿತಗಳಾದ ಐದು ವಚನಗಳಿವೆ. ಈ ಗ್ರಂಥಕರ್ತನು ನಾಗರದ ಬೊಮ್ಮಣ್ಣನೆಂಬುವನು. ಈತನ ಜೀವಿತಸಮಯವು ಸುಮಾರು ಕ್ರಿ.ಶ. ೧೧೬೦.

No. 604. ನಿಜಗುಣನ ವಚನ.
NIJAGUṆANA VACANA.

Substance, palm-leaf. Size, 12 × 1⅛ inches. Pages, 2. Lines 5, on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 84*a* of the manuscript described under No. 498 ante.

Incomplete.

Similar to the above. Contains three Vacanas by Nijaguṇa.

Beginning:—

ಕಲ್ಲಿನ ಹುಳಿಯು ನೀರಲ್ಲಿ ಹುಟ್ಟಿದ ಕಿಚ್ಚು ತ್ರಿವಿಧದಲ್ಲಿ ಅಲ್ಲಿಯು ಗುಣವಲ್ಲದೆ. ಬೇಱೆತೊಂದಕ್ಕೆಲ್ಲಿಯೂ ತೆಱಪಿಲ್ಲ. ಕಾಯಗುಣದಿಂದ ಕಲ್ಪಿತಕ್ಕೊಳಗಾಗಿ, ಜೀವಗುಣದಿಂ ಭಾವಕ್ಕೆ ಬೀಜವಾಗಿ, ಅಱಿದಿಹೆ ನೆಂಬ ಗುಣದಿಂದ ಮಱವೆಗೊಡಲಾಗಿ, ಅರಿದಿಹೆನೆಂಬ ಅಱಿವ ಕುಱಿಹುಗೊಳ್ಳದೆ ನಿಂದುದು ನಿಜಗುಣಯೋಗಿಯ ಯೋಗಕ್ಕೆ ಭಾವವಿಲ್ಲದ ಸೂತ್ರದ ಬಂಬ ॥ ೧ ।

ಮಿಂಚಿನ ಸಂಚಾರದಂತೆ, ಬಹುವರ್ಣದ ಬಣ್ಣದಗನ್ನ . . . ಯಲ್ಲಿ ರಂಜಿಸಿ ತೋಱಿ ಅಡಗುವ ಪ್ರತಿಬಿಂಬದಂತೆ, ಅಂಗವಿದ್ದಳಿದು ತೋಱುವ ಜಲಮಣಿಯೊಳಗಿನಂತೆ ನಿರಂಗದ ಸಂಗಕ್ಕೆ ಹೊರಗು ನಿಜಗುಣಯೋಗಿಯ ಯೋಗ ॥ ೨ ॥

End :—

• ಜಡಾಜಡವೆಂಬುಭಯಕೊಟವುಳ್ಳನಕ ನಾನೆಂಬುದದೇನು ? ವಿಚಾರಕ್ಕೆ ನೀನೆಂಬುದೇನು ? ಗೆಲ್ಲಸೋಲಕ್ಕೆ ಹೇರಿ ಒಳ್ಳದರಾಡಿ ನೆಂಬಲ್ಲಿಯೋ ? ಕಳ್ಳ ಕದ್ದ ಗಜವೆಲ್ಲಿ ಅಡಗಿ ಪ್ಪಾರುವುದು ಹೇಳಾ ! ಬಲ್ಲವನಾದೆನೆಂಬಲ್ಲಿಯೆ ಉಳಯಿತ್ತು. ನಿಜಗುಣಯೋಗಿಯಯೋಗಕ್ಕೆ ಸಲ್ಲದಗುಣ ॥ ೩ ॥

(ವಿ-ವಿ.)—

ಅಸಮಗ್ರ. ಅತಿಶಿಥಿಲ· ಗ್ರಂಥಪಾತವಿದೆ. ಬರೆವಣಿಗೆಯು ಸಾಮಾನ್ಯವಾಗಿದೆ. ತಪ್ಪು ಇದೆ.

ಇದು "ನಿಜಗುಣಯೋಗಿಯ ಯೋಗ" ಎಂಬಂಕಿತವಿರುವ ವಚನತ್ರಯವನ್ನೊಳಗೊಂಡದೆ. ಇದರಲ್ಲಿ ವೀರಶೈವ ವೇದಾಂತದೊಂದಂಶವು ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥವನ್ನು ಬರೆದವನು ನಿಜಗುಣನೆಂಬವನು·

No. 605. ಪಂಚಕೋಶಗಳು.

PAÑCAKŌŚAGAḶU.

Substance, palm-leaf. Size, 10 × 1¼ inches. Pages, 3. Lines, 5 on a page. Character, Kannaḍa. Condition, much injured. Appearance, old. Mode of writing, good and free from mistakes.

Begins on fol. 2*a* of manuscript described under No 469 ante.

Incomplete.

Describes the five 'Klēśas' and the five 'Kōśas' which are considered to be the causes for the worldly existence. The name of the author is not known.

Beginning :—

* * * ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ, ಪ . . ವಿವಂ . . . . . . ಹವೇ ' ಅನ್ನಮಯಕೋಶ. ಅದರೊಳಗಣ ಇಂದ್ರಿಯಂಗಳೇ ಪ್ರಾಣಮಯಕೋಶ, ಅದರೊಳಗಣ ಅಂತಃಕರಣಂಗಳೇ ಮನೋಮಯಕೋಶ. ಅದರೊಳಗಣ ಬುದ್ಧಿಃಕಿ. ವಿಜ್ಞಾನಮಯಕೋಶ, ಅದರೊಳಗಣ ಬುದ್ಧಿ ವೃತ್ತಿಗಳಳಿದು ಬಾಹ್ಯಪೇನೂ ತೋಱದೆ ಆತ್ಮ . . ಉಜ್ವಳಿಸುವುದೇ ಆನಂದ ಮಯಕೋಶ.

* * * *

End :—

. . . . ಹಲವುಪ್ರಕಾರದ ವಿಷಯ ಸುಖವ ಮಚ್ಚಿ ಬಿಡಲಾಱದ ಮನದ ದುಃಖವೇ ಭಿನ್ನವೇಷ. ಇಂತೀ ಪಂ . . . . ಗಳಱಿವುದು.

Colophon :—

ಇಂತಿವು ಪಂಚಕೋಶಂಗಳು ॥ ಶ್ರೀ-

(ವಿ-ವಿ.) —

ಅಸಮಗ್ರ. ಅತಿಶಿಥಿಲ. ಗ್ರಂಥಪಾತವಿದೆ. ಲಿಪಿಯು ಉತ್ತಮವಾಗಿದೆ. ತಪ್ಪುಗಳಿಲ್ಲ."

ಇದು ಗದ್ಯಗ್ರಂಥವಾಗಿದೆ. ಇದರಲ್ಲಿ ಸಂಸಾರಕ್ಕೆ ಮೂಲವಾದ ಪಂಚಕ್ಲೇಶವ ಮತ್ತು ಪಂಚಕೋಶದ ವಿವೇಚನೆಯು ಮಾಡಲ್ಪಟ್ಟಿದೆ. ಗ್ರಂಥಕರ್ತನು ತನ್ನ ಹೆಸರನ್ನು ಕೊಟ್ಟಿಲ್ಲ.

No. 606. ಪಿಂಡೋತ್ಪತ್ತಿ.

PIṆḌŌTPATTI.

Substance, Śritala. Size, 15 × 1⅜ inches. Pages, 15. Lines, 10 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 11*b* of the manuscript described under No. 538 instant.

Complete.

Deals with the " Six Sthalas' the eight kinds of worship." ' Three kinds of Yōga ' and other philosophical topics according to Vīraśaiva system. From the dedication found at the end of the work, Cennabasava is presumed to be the author.

Beginning :—

ಪಿಂಡಸ್ಥಂ ಪಿಂಡಮಧ್ಯಸ್ಥಂ ಪಿಂಡೇನತ್ರುಘಟೀಕೃತಂ ॥
ಪಿಂಡೇನ ಪಿಂಡಿತಂ ಪಿಂಡಂ ಪಿಂಡರೂಪಮುದಾಹೃತಂ ॥ ೧ ॥

. . . .

. . . . . ಯುಂಪಿದುಃ ॥

ಬಿಂದುಶಿವರಜೋಶಕ್ತಿರಿಂದು ಬಿಂದುರಜೋರವಿ ।
ಉಭಯೋಸ್ಸಂಗಮಾದೇವ ಸ್ವಾವ್ಯತೇ ? ಪಿಂಡಸಂಜ್ಞಿತಂ ॥

ಅಲ್ಲಿ ಬಿಂದುವೆಂಬುದು ಶಿವಾಂಶಿಕ ರಜಸ್ಸೆಂಬುದು . . . . ಂಶಿಕ. ಇಂತಿವು ಉಭಯಸಂಯೋಗದಿಂ ಪಿಂಡವೆನಿಸಿತ್ತು.

* * * *

ಇಂತು ತ್ರಿವಿಧಲಿಂಗದಲ್ಲುದ್ಭವವಾದ ಪ್ರಸಾದ ತ್ರಿವಿಧಭಾವವೆಂದಡೆ :—ಶುದ್ಧಸಿದ್ಧ ಪ್ರಸಿಷ್ಧವೆಂದು ಶುದ್ಧಪ್ರಸಾದವೆಂದು ಗುರುಭುಕ್ತಶೇಷ. ಸಿದ್ಧ ಪ್ರಸಾದವೆಂದು ಲಿಂಗಭುಕ್ತಶೇಷ. ಪ್ರಸಿದ್ಧ ಪ್ರಸಾದವೆಂಬುದು ಜಂಗಮಭುಕ್ತಶೇಷ. . . .

* *

End —

. . . . . . ಎಂದು ಆ ಹೃತ್ಕಮಲದಲ್ಲಿ ತಿರುಗುವ ಆತ್ಮನ . ಭೇದ ಇಂದ್ರದಳದಲ್ಲಿ ಭಕ್ತಿ, ಅಗ್ನಿದಳದಲ್ಲಿ ಕ್ಷುಧೆ. ಯಮದಳದಲ್ಲಿ ಕೋಪ. ನಿರುತಿದಳದಲ್ಲಿ ಸತ್ಯ, ವರುಣದಳದಲ್ಲಿ ನಿದ್ರೆ, ವಾಯುವ್ಯದಳದಲ್ಲಿ ಗಮನ ಉತ್ತರದಳದಲ್ಲಿ ಕ್ಷಮೆ, ಈಶಾನ್ಯದಳದಲ್ಲಿ ವಿಷಯಾತುರ. ಮಧ್ಯಸ್ಥಾನದಲ್ಲಿ ಸ್ವಾನುಭಾವಿಯಾಗಿ ಮೋಕ್ಷವನೆಯ್ದುವನು. ಇಂಥಾ ಅಷ್ಟದಳಕಮಲದಲ್ಲಿ ತಿರುಗವ ಆತ್ಮನಂ ಕಟ್ಟಿ ಮಧ್ಯಸ್ಥಾನದಲ್ಲಿ ನಿಲ್ಲಿಸುವುದೆ ತುರೀಯಾವಸ್ಥೆ. ಅಲ್ಲಿ ತಾಪತ್ರಯಂಗಳನು ತನಗಾರೋಪಿಸಿ ಕೊಳ್ಳದೆ ದೇಹೇಂದ್ರಿಯಂಗಳ ಪ್ರಾಣಾದಿಗುಣಂಗಳನು ತಾನೆಂದು ಅಹಂಕರಿಸುವ ಅಹಂಕಾರಮಂ ಬಿಟ್ಟು ಆ ತುರ್ಯಾವಸ್ಥೆಯಲ್ಲಿ ಪರಮಾತ್ಮಧ್ಯಾನದಿಂದ ಪರವಶವಾದುದೆ ತುರ್ಯಾತೀತವು. ಇಂತೀ ಪರಶಿವನೊಳಗೆ ಬೆರಸಿದ ಸಹಜಮಂ ರಾಜಯೋಗಮೆಂಬುದು ಕೂಡಲಚೆನ್ನಸಂಗಮದೇವ. ॥

Colophon :—

ಪಿಂಡೋತ್ಪ(ತ್ತಿ) (ತ್ಯ) ಸಮಾಪ್ತಂ ಮಂಗಳ ಮಹಾ ಶ್ರೀ ಶ್ರೀ.

(ವಿ-ವಿ.)—

ಸಮಗ್ರ. ಆತಿಶಿಥಿಲ. ಒಂದನೆಯ ಮತ್ತು ಎರಡನೆಯ ಓಲೆಯ ಸ್ವಲ್ಪಭಾಗವು ಮುರಿದುಹೋಗಿದೆ. ಬರೆವಣಿಗೆಯು ನೆಟ್ಟಗಿಲ್ಲ. ತಪ್ಪುಗಳಿವೆ.

ಇದು ಗದ್ಯ ಗ್ರಂಥವಾಗಿದೆ. ಅಲ್ಲಲ್ಲಿ ಸಂಸ್ಕೃತ ಪದ್ಯಗಳೂ ಇವೆ. ಇದರಲ್ಲಿ ಪಿಂಡೋತ್ಪತ್ತಿಕ್ರಮ, ಷಟ್‌ಸ್ಥಲ, ಷಟ್ ತ್ರಿಂಶತ್ತತ್ವ, ತ್ರಿವಿಧಲಿಂಗ, ಪ್ರಸಾದಭೇದ, ಅಷ್ಟವಿಧಾರ್ಚನೆ, ಯೋಗತ್ರಯ. (ಶಿವಯೋಗ, ಸಾಧಕಾಂಗಯೋಗ, ರಾಜಯೋಗ) ಇವೇ ಮೊದಲಾದುವು ಸಂಕ್ಷೇಪವಾಗಿ ನಿರೂಪಿಸಲ್ಪಟ್ಟಿವೆ. ಗ್ರಂಥಾಂತ್ಯದಲ್ಲಿ ಕೂಡಲ ಚೆನ್ನ ಸಂಗಮದೇವಾಂಕಿತವಿರುವುದರಿಂದಿದು ಚೆನ್ನಬಸವನಿಂದ ಬರೆಯಲ್ಪಟ್ಟದೆಂದೂಹಿಸಲಡೆಯಿದೆ.

No 607. ಮಂತ್ರಗೋಪ್ಯದ ಟೀಕೆ.
MANTRAGŌPYADA ṬĪKE.

Substance, Śrītāla. Size, 15 × 1$\frac{13}{16}$ inches. Pages, 19. Lines, 11 on a page. Character, Kannaḍa. Condition, slightly injured Appearance, old. Mode of writing, not bad and not free from mistakes.

Begins on fol. 1*a* of the manuscript described under No. 538 ante.

Complete.

A commentary on Cennabasva's Mantragōpya which contains 27 songs bearing on the Vīraśaiva system. The author has not given any clue in this work to identify his name.

Beginning :—

॥ ರಾಗ ಬಹುಳಿ ॥

ನೋಡಲಿಲ್ಲ ನುಡಿಯಲಿಲ್ಲ ।
ಕೂಡಲಿಲ್ಲದ ಗ್ರತಿಮುಗೊಡಲಿಲ್ಲ ॥ ಪಲ್ಲವಿ ॥

ಸೂತ್ರ । ಈ ಪಲ್ಲವಿ ಪದವೆಂದು ಸೂತ್ರ. ಸೂತ್ರವೆಂದು ಮುಂದೆ ಹೇಳುವ ಎಲ್ಲಾ ಪದಂಗಳ ಅರ್ಥವನ್ನು ಸಂಕ್ಷೇಪವಾಗಿ ಗರ್ಭೀಕರಿಸಿ ಕೊಂಡಿಹುದೆಂದರಿವುದು. ಅದೆಂತೆಂದಡೆ :—ಎಲ್ಲಾ ಪದಂಗಳರ್ಥವು ಈ ಪಲ್ಲವ ಪದವೆನಿಸುವ ಸೂತ್ರದಲ್ಲಿಯೆ ಗರ್ಭೀಕೃತವಾಗಿ ಬೀಜದೊಡನಿದ್ದ ವೃಕ್ಷದಂತೆ ತೋಱಿಕೆ. ಇಲ್ಲದೆ ತೋಱಲುಳ್ಳುದೆಂದಱಿವೆಂತೆಂದಡೆ :—

ಶಿವಜೀವರುಗಳೇಕಾರ್ಥವೆಂಬುದು ಇತರ ಮಾರ್ಗಂಗಳಲ್ಲಿ ಶಬ್ದಾಡಂಬರದಿಂದುಳಿದು " ತತ್ವಮಸಿ " ವಾಕ್ಯಂಗಳಲ್ಲಿ ಸಂಬಂಧಿಸಿ ಆ ಶಬ್ದಸುಖದಿಂದ ಪರಿ(ಣಾ)(ಣ)ಮಿಸುವವಲ್ಲದೆ. ಸತ್ಕ್ರಿಯಾ ಸಂಬಂಧವಹ ವರ್ತನೆಯಿಲ್ಲ. ಸತ್ಕ್ರಿಯೆಯಿಂದಲ್ಲದೆ ಬಾಹ್ಯಕರಣಂಗಳು ಶಿವನಲ್ಲಿ ಸಾವಧಾನಿಗಳಾಗವು. ಕರಣಂಗಳ ಸಾವಧಾನ ತ್ರೈಲಿಂಗಕ್ಕೆ ಮೂಲರೂಪಕವಹ ಇಷ್ಟಲಿಂಗದಲ್ಲಿ ನಿಬ್ಬೆಱಗಾದಲ್ಲದೆ ಜೀವಭಾಗ ಹಿಂಗದು. ಅದಕ್ಕೆ ದೃಷ್ಟ. ದೂರದೂರಿಂಗೆ ಪೋದವನೆಂದು ನೆನದೊಡೆ ಅದು ಆ ಊರೊಳಗೆ ಹೊಕ್ಕ ಹಾಂಗಿಹುದು. ಅದು ಹೇಂಗೆ ? ಆ ಪ್ರೂರ ಸುದ್ದಿಯ ಕೇಳದ ಭಾವಕ್ಕೆ ಇಹುದಲ್ಲದೆ ಹೊಗಲಱಿಯ ಗತಿ ಪ್ರಮಾಣೆನಿಂದಲ್ಲದೆ ಅದು ಕಾರಣ ಸತ್ಕ್ರಿಯಾಜ್ಞಾನಯೋಗವೆಂಬುದು ವೀರಮಾಹೇಶ್ವರಾಚಾರ ಸಿದ್ಧಾಂತದಲ್ಲಲ್ಲದೆ ಇತರ ಮಾರ್ಗಂಗಳಲ್ಲಿಲ್ಲ . . . . . .

* * * *

End :—

. . . . . ಅದು ಹೇಂಗೆಂದಡೆ :—ನಿರ್ಭಾವ ನಿರ್ಭ್ರಾಂತಿದ್ವಂದ್ವವೂ ಏಕಾರ್ಥವಾಯಿತ್ತಾಗಿ ಜ್ಞಾನಶೂನ್ಯವೆನಿಸುವುದು. ಇಂತೀ ನಿರ್ಭಾವ ಪ್ರಸಾದವು ಪ್ರಸನ್ನ ಮಹಾ ಘನಲಿಂಗ ಕೂಡಲ ಚೆನ್ನಸಂಗನಲ್ಲಿಯೇಕಾರ್ಥವಾದ ಭೇದವು. ಸಾಧಕತ್ವವು ಅನುಭಾವ-ಮೂರ್ತಿ ಪರಮಜಂಗಮ ಪ್ರಭುದೇವರ ಕರುಣ ಬಸವಣ್ಣಂಗಾಯಿತ್ತೆಂದು ಚೆನ್ನಬಸವೇಶ್ವರ ದೇವರು ನಿರೂಪವ ಕೊಡುತ್ತಲಿದ್ದಾರು ॥ ೨೭ ॥

Colophon :—

ಚೆನ್ನಬಸವೇಶ್ವರ ದೇವರು ನಿರೂಪವಕೊಟ್ಟ ಮಂತ್ರಗೋಪ್ಯದ ಪದಗಳು ಸಮಾಪ್ತ ಮಂಗಳಮಹಾಶ್ರೀ.

(ವಿ-ವಿ.)—
ಸಮಗ್ರ. ಶಿಥಿಲವಾಗಿದೆ. ಬರೆವಣಿಗೆಯು ಸಾಮಾನ್ಯವಾಗಿದೆ. ತಪ್ಪಿದೆ.

ಇದು ಚೆನ್ನಬಸವನು ಬರೆದ ೨೭ ಹಾಡುಗಳುಳ್ಳ ಮಂತ್ರಗೋಪ್ಯದ ಟೀಕೆಯಾಗಿದೆ. ಈ ಟೀಕೆಯು ದೊಡ್ಡದೊಡ್ಡ ಸಂಸ್ಕೃತಗ್ರಂಥಗಳ ವ್ಯಾಖ್ಯಾನ ರೀತಿಯನ್ನನುಸರಿಸಿ ಬರೆಯಲ್ಪಟ್ಟಂತೆ ತೋರುತ್ತದೆ. ಇದರಲ್ಲಿ ವೀರಶೈವ ಮತ ಸಂಪ್ರದಾಯವು ವಿವರಿಸಲ್ಪಟ್ಟಿದೆ. ಟೀಕಾಕಾರನು ಗ್ರಂಥದಾವ ಭಾಗದಲ್ಲಿಯೂ ತನ್ನ ಹೆಸರನ್ನು ಹೇಳಿ ಕೊಂಡಿಲ್ಲ.

No. 608. ವಿವೇಕ ಚಿಂತಾಮಣಿ.

VIVĒKA CINTĀMAṆI.

Substance, paper. Size, $10\frac{3}{8} \times 4\frac{1}{2}$ inches. Pages, 496. Lines, 11 on a page. Character, Kannaḍa. Condition, slightly injured. Appearance, old. Mode of writing, not bad and not free from mistakes.

Complete in ten paricchēdas.

Deals with the interpretation of the Vēdas and the Śivāgama and the description of Nāgalōka, Jambūdvīpa. Martyalōka, Dēvalōka, etc., according to the Vīraśaiva conception. The name of the author is Nijaguṇaśivayōgi who lived in about 1500 A.D.

Beginning :—

ಉತ್ಪಲಮಾಲಾವೃತ್ತ.—

ಶ್ರೀಮದನೇಕಲೋಕಹಿತಮಾಗಿರೆ ವೇದಪುರಾಣಶಾಸ್ತ್ರದೋ।
ಳ್ನೇಮಿಸಿ ತೋರ್ಪ ವಿಶ್ವವಿಷಯಂಗಳ ಸುಸ್ಥಿತಿಯಂ ವಿವೇಕಚಿಂ-
ತಾಮಣಿಯೆಂದು ಸಲ್ವ ಪೆಸರಿಟ್ಟು ಮಹಾಕವಿತಾಪ್ರಬಂಧಮಂ।
ಪ್ರೇಮದೆ ಪೇಳ್ವೆನಾನಿದನೆ ನೀನೊಲಿದಾಲಿಸು ಶಂಭುಲಿಂಗವೇ ! ।

ಶ್ರೀಮದನೇಕ ಭುವನಭವನಾರಂಭ ಮೂಲಸ್ತಂಭರೂಪ ಶಂಭುಲಿಂಗವಾದಿಯಾಗಿ ನಿರಾಭಾರಿದೇಶಿಕೋತ್ತಮಪರ್ಯಂತಮಾದ ಗುರುಪರಂಪರೆಗೆ ಮನೋವಾಕ್ಕಾಯಂಗಳಿಂದಭಿವಂದಿಸಿ,

ಸರ್ವಜ್ಞತ್ವ ಸರ್ವಕರ್ತೃತ್ವ ಸಹಿತನಾದ ಪರಮೇಶ್ವರ ಪ್ರಣೀತತ್ವದಿಂ ಪರಮಪ್ರಮಾಣವೆನಿಸಿದಾಗಮಾಮ್ನಾಯ ಸಂಬಂಧದಿಂ ಮತ್ತಮಾ ಉಭಯಮೆ ಮೂಲಮಾದ ಶ್ರುತಿಪುರಾಣೇತಿಹಾಸ ಪುರಾತನೋಕ್ತಿಗಳನುಸಾರದಿಂದನುಭವಿಗಳೆಹುದೆನಿಪಂತೆ ಸ್ವಕಪೋಲಕಲ್ಪಿತಮಲ್ಲದ ಸಾರತರಮಾದ ಸತ್ಯಾರ್ಥಂಗಳನೆ ಸಂಗ್ರಹಿಸಿ, ಮುನ್ನುಳ್ಳ ಮಣಿಪುಂಜಮಂ ರಚನೆಗೈದು ತರವರಿದು ಸರಂಗೊಳಿಸಿ ನವೀನಕಂಠಾಭರಣವೆನಿಸುವಂತೆ, ಮುಮುಕ್ಷುಜನಂಗಳಿಗೆ ಜಗತ್ತಿನ ಸ್ಥಿತಿಗತಿಗಳಾವ ಪ್ರಕಾರದಿಂದಹವೆಂದರಿಸಿ, ಬಳಲದೆ ಅಭಿವ್ಯಕ್ತಮಾಗಲಲ್ಲಿಯೆ ಸಲ್ಲೀಲೆಯಿಂದರಿದು ಕೃತಾರ್ಥರಾಗಲೆಂದು, ನಿಜಗುಣಶಿವಯೋಗಿ ಬೆಳಗನ್ನಡಮಾದವಚನರಚನೆಗಳಿಂ ವಿವೇಕಚಿಂತಾಮಣಿಯೆಂಬ ಪ್ರಕರಣಮಂ ಪೇಳ್ವನದೆಂತೆಂದಡೆ :

* * *

End :—

* * * ಮೇಲೆ ಸರ್ವೋತ್ಕರ್ಷಮಾದ ಶ್ರೀಗುರುಶಂಭುಲಿಂಗದೊಡಗೂಡಿ ಸರ್ವಜ್ಞ ಸರ್ವಕರ್ತೃತ್ವದಿಂ ಸತ್ಯಾನಂದ ಸ್ವರೂಪರಾಗಿರ್ಪ ಭೋಗಮೋಕ್ಷಂಗಳಿಂದೇಕಾಗ್ರಚಿತ್ತದಿಂ ಕೇಳಿ ತಿಳಿದರ್ಗಾಗಲೆಂಬಾಶೀರ್ವಾದಲಕ್ಷಣ ಮಂಗಲಾಭರಣದಿಂದೀ ವಿವೇಕಚಿಂತಾಮಣಿಯೆಂಬ ಪ್ರಕರಣ ಪರಿಪೂರ್ಣ(ಮಕ್ಕಂ) (ಮಾಯ್ತು) ಇತಿ ಕಾಲತ್ರಯವರ್ಣನಂ ದಶಮಃ ಪರಿಚ್ಛೇದಃ

ವೃತ್ತಂ (ಉತ್ಪಲಮಾಲೆ).—

ಶ್ರೀಮದನಂತಸೂರಿಜನ ಸಮ್ಮತದಿಂದೆಸೆವೀ ವಿವೇಕಚಿಂ ।
ತಾಮಣಿಯೆಂಬ ಸತ್ಕೃತಿಯನಾಲಿಸಿದರ್ಗೆಡೆಗೊಂಡ ಸಂಶಯ—॥
ಸ್ತೋಮವಡಂಗಿ ಬೇರೆಬಹುಶಾಸ್ತ್ರವನೋದುವ ಬಾಧೆ ಪಿಂಗೆ ಸ
ತ್ಪ್ರೇಮದೊಳಕ್ಕುಮಿಷ್ಟಫಲಸಿದ್ಧಿ ಸಮುನ್ನತಿ ಶಂಭುಲಿಂಗದಿಂ ॥

ಗದ್ಯ.—

ಸ್ವಸ್ತಿ ಸಮಸ್ತಸುರವಿಸರಮಕುಟಮಣಿ ಗಣಕಿರಣಪ್ರಚುರಪ್ರವಾಹ ತರಂಗಿಣೀ

*   *   *   *   *

ನಿಜಗುಣಾಖ್ಯೇನ ಶಿವಯೋಗಿನಾ ವಿರಚಿತ ವಿವೇಕಚಿಂತಾಮಣಿ ನಾಮ ಪ್ರಕರಣಂ ಪರಿಸಮಾಪ್ತಂ ॥

Colophon :—

*   *   *   *

ವಿಜಯಾಪುರದ ರುಮ್ಮಿಖಾನ ಬಜಾರದೊಳಗೆ ಇದ್ದವರು ಮಳೆಯ ಬಗೆಯ ಶ್ರೀನಿರ್ಣಾಮೇಶ್ವರ ದೇವರ ಕರಕಂಜೋದ್ಭವನಾದ ಪುರಾಣದ ಕಲ್ಲಯ್ಯದೇವರು ಕುಮಾರನಾದ ಗುರುವರ್ಯ ದೇವರು ತಮ್ಮ ಸ್ವಹಸ್ತದಿಂದ ತಮ್ಮ ತಂದೆಗೆ ಈ ಶಾಸ್ತ್ರಬರೆದು ಕೊಟ್ಟ. ಕಲ್ಲಯ್ಯದೇವರ ಪುತ್ರ ನಿರಂಜನದೇವರಿಗೆ ಇವರ ಚಿರಿ . . . .

(ವಿ-ವಿ.)—

ಸಮಗ್ರ. ಅಲ್ಪಶಿಥಿಲ. ಬರೆವಣಿಗೆಯು ಸಾಮಾನ್ಯವಾಗಿದೆ ತಪ್ಪುಗಳಿವೆ. ಇದು ಗದ್ಯ ಗ್ರಂಥವಾಗಿದೆ. ಪರಿಚ್ಛೇದಾರಂಭದಲ್ಲಿಯೂ ಗ್ರಂಥಾಂತ್ಯದಲ್ಲಿಯೂ, ಪದ್ಯಗಳಿವೆ. ಗ್ರಂಥ ಕರ್ತನಿದರ ಪ್ರಯೋಜನವನ್ನೂ ಪ್ರತಿಪಾದ್ಯವಿಷಯವನ್ನೂ ಗ್ರಂಥಾರಂಭದಲ್ಲೇ ನಿರೂಪಿಸಿರುವನು. ಇದರಲ್ಲಿ ಕ್ರಮವಾಗಿ ವೇದಾದಿ ಸಕಲಶಾಸ್ತ್ರಾರ್ಥನಿರ್ಣಯ, ಶಿವಾಗಮಾರ್ಥವರ್ಣನ, ನಾಗಲೋಕಸ್ಥಿತಿವರ್ಣನ, ಜಂಬೂದ್ವೀಪಸ್ಥಿತಿವರ್ಣನ. ಮರ್ತ್ಯಲೋಕ ಸ್ಥಿತಿವರ್ಣನ, ದೇವಲೋಕಸ್ಥಿತಿವರ್ಣನ, ಊರ್ಧ್ವಲೋಕ ಸ್ಥಿತಿವರ್ಣನ, ಶುದ್ಧಭುವನಸ್ಥಿತಿ ವರ್ಣನ, ಭುವನಾಂತರಪ್ರಾಪ್ತಿ ಪ್ರಕರಣ ವರ್ಣನ ಕಾಲಚಕ್ರಕ್ರಮವರ್ಣನಗಳನ್ನು ಸವಿಸ್ತರವಾಗಿ ಪ್ರತಿಪಾದಿಸುವ ಹತ್ತು ಪರಿಚ್ಛೇದಗಳಿವೆ. ಇದನ್ನು ಬರೆದವನು ನಿಜಗುಣಶಿವಯೋಗಿಯು. ಈತನ ಜೀವಿತಕಾಲವು ಸುಮಾರು ಕ್ರಿ.ಶ. ೧೫೦೦ ಎಂದು ಕ. ಕವಿಚರಿತ್ರೆಯ ಕರ್ತರು ಅಭಿಪ್ರಾಯಪಡುವರು. (ಸಂಪುಟ ೨, ಪುಟ ೧೫೩).

No. 609. ವಿವೇಕ ಚಿಂತಾಮಣಿ-

VIVÊKA CINTĀMAṆI

Substance, palm-leaf. Size, $19\frac{3}{8} \times 1\frac{9}{16}$ inches Pages, 348. Lines, 5 on a page. Character, Kannaḍa. Condition, badly injured. Appearance, old. Mode of writing, good but not free from mistakes.

Complete.

Same work as the above

(ವಿ-ವಿ.)—

ಅಸಮಗ್ರ. ಪ್ರಥಮ ಪರಿಚ್ಛೇದವು ಸಮಗ್ರವಾಗಿಯೂ ದ್ವಿತೀಯ ಪರಿಚ್ಛೇದವು ಅಸಮಗ್ರವಾಗಿಯೂ ಇವೆ ಅತ್ಯಂತ ಶಿಥಿಲವಾಗಿದೆ. ಹಲವು ಓಲೆಗಳು ಕ್ರಿಮಿಗಳ ಪರಿಚಯವನ್ನು ಚೆನ್ನಾಗಿ ಮಾಡಿಕೊಂಡಿವೆ. ಬರೆವಣಿಗೆಯು ಚೆನ್ನಾಗಿದೆ ತಪ್ಪಿದೆ.

ಇದು ಹಿಂದೆ ವಿವರಿಸಿದ ಗ್ರಂಥವಾಗಿದೆ.

No. 610. ವಿವೇಕ ಚಿಂತಾಮಣಿ.

VIVĒKA CINTĀMAṆI.

Substance, paper. Size, $9\frac{5}{16} \times 10\frac{3}{8}$ inches. Pages, 339. Lines, 20 on a page. Character, Kannaḍa. Condition, good. Appearance, now. Mode of writing, bad and full of mistakes.

Complete.

Same work as the above.

(ವಿ-ವಿ.)—

ಸಮಗ್ರ. ಪ್ರತಿಯು ಚೆನ್ನಾಗಿದೆ. ಬರೆವಣಿಗೆಯು ನೆಟ್ಟಗಿಲ್ಲ. ತಪ್ಪಿಗೆ ಮಿತಿಯಿಲ್ಲ. ಇದು ಹಿಂದೆ ವರ್ಣಿತ ಗ್ರಂಥವಾಗಿದೆ.

No. 611. ಕ್ರೈಸ್ತಮತ ಬೋಧೆ.

KRAISTA MATA BŌDHE.

Substance, palm-leaf. Size $11\frac{3}{4} \times 1\frac{5}{16}$ inches. Pages 266. Lines, 6 on a page. Character, Kannaḍa Condition, much injured. Appearance, old. Mode of writing, good and free from mistakes.

Complete.

A work on Christainity dealing with the creation of the world, the greatness of God and his worship, salvation and how to obtain it, etc. The name of the author is not known. From the language, the date of the work can be ascribed to the 19th century.

Beginning :—

"ಯತೋ ಬಭೂವಾಖಿಲ ಮಾದಿದೇವಾ ।
ದ್ಯಸ್ಮಿನ್ ಸಕಾಶಂ . . . ಮಾಸ್ತೇ ॥
ಯಸ್ಮಾದ್ಬಭೂವಾಖಿಲ ಮುಖ್ಯಕರ್ತೃ ।
ತಸ್ಮೈಪರಬ್ರಹ್ಮಣಾ ಆನತಿಂ ವದೇತ್ ॥"

ಅದಾಗಿ ಈ ಭೂಲೋಕದಲ್ಲಿ ನಿತ್ಯ, ಅನಿತ್ಯ, ಎರಡು ವಸ್ತುವು ಉಂಟಾಗಿರುವುದಲ್ಲ, ಅನಿತ್ಯವಾಗಿ ಇದ್ದಂಥಾ ವಸ್ತುವು ಮೃಣ್ಮಯ ಪಾತ್ರದ ವೃಂದನಾಲ್ಕುದಿನದೊಳಗೆ ಒಡೆದು, ಬಿಟ್ಟು ಸದ್ದುಮಾಡದೆ ಅಪವಿತ್ರಸ್ಥಲದಲ್ಲಿ ಹಾಕಿ ಬಿಡುವರು, ನಿತ್ಯವಾಗಿದ್ದಂಥಾ ವಸ್ತುವು ಸುವರ್ಣದ ಆಭರಣದ ವೃಂದ . . ಪೆಂಕಿಯೊಳಗೆ ಹಾಕಿ . . . ಎಷ್ಟುಕಾಲ ಹೋದರೂ ಆ ವಾಗಲೂ ಸರಿತ್ರೂಕವಾಗಿ ಬೆಳಕು ತಗ್ಗದೆ ಇರಲಿಕ್ಕಾಗಿ [ಮಹಾ] (ಮಾ)ಜೋಪಾನವಾಗಿ ಬೊಕ್ಕಸ ಭಂಡಾರದಲ್ಲಿ ಇರಿಸುವರು.

* * * *

ಸೂರ್ಯ ಚಂದ್ರಗ್ರಹಗಳು ಹುಟ್ಟುವುದಕ್ಕೆ ಮುಂಚೆ ಸರ್ವೇಶ್ವರನು ವೃಕ್ಷಗಳೆಲ್ಲವನ್ನು ಹುಲ್ಲು ಸೊಪ್ಪು ಬೆಳಸುಗಳೆಲ್ಲವನ್ನು ಉಂಟುಮಾಡಿದನು. ಮನುಷ್ಯರಿಗೂ ಇದರಿಂದೊಂದು ಬುದ್ಧಿ ಬರಬೇಕು. ಅದು ಏನೆಂದರೆ :—ಫಲ, ಕಾಯಿ, ದವಸ, ಧಾನ್ಯಗಳೆಲ್ಲಾವು ಸರ್ವೇಶ್ವರನ ಕೃಪೆಯಿಂದ ಬರೋದಲ್ಲದೆ ಗ್ರಹಗಳೆಲ್ಲವು, ನಕ್ಷತ್ರಗಳೆಲ್ಲವು, ಈ ಕಾರ್ಯಕ್ಕೆ ಪ್ರಧಾನಕಾರಣವಲ್ಲ.

* * * *

End:—

ಲೋಕ ಹುಟ್ಟಿದ ಆರಂಭದಲ್ಲಿ ನಿಮ್ಮ . . . . ಸ್ತ ರಾಜ್ಯಕ್ಕೆ ಸಕಲವಾದ ಭಾಗ್ಯವ ಅನುಭವಿಸುವುದಕ್ಕೆ ನನ್ನ ಸಂಗಾತ ಬನ್ನಿ ಎಂದು ಆಶೀರ್ವಾದವ ಕೊಡುವವಂ . ಆಗಲಿ ಎಲ್ಲರೂ ಸಕಲವಾದ ಹರುಷದಿಂದ ಮಿತಿಯಿಲ್ಲದಕಾಂತಿಯಾಗಿ ಶರೀರವನ್ನು ಆತ್ಮವನ್ನು ಅಲಂಕರಿಸಿಕೊಂಡು ಸ್ವಾಮಿ ತಪ್ಪುಗಳೆಲ್ಲವನ್ನು ಪಾಪಗಳೆಲ್ಲವನ್ನು ಜಯಿಸಿಕೊಂಡು ನಿತ್ಯವಾದ ಸುಖವನ್ನು ಸಕಲವಾಗಿ ಇದ್ದಂಥಾ ಕಾಲ ಪರ್ಯಂತರವಾಗಿ ಅನುಭವಿಸುವುದಕ್ಕೆ ಮೋಕ್ಷಕ್ಕೆ ಹೋಗೋರು.

(ವಿ-ವಿ).

ಸಮಗ್ರ. ಅತಿ ಶಿಥಿಲ. ನಾಲ್ಕು ಓಲೆಗಳು ಮುರಿದು ಹೋಗಿವೆ. ಕ್ರಿಮಿಗಳ ಪರಿಚಯವು ಓಲೆಗಳಿಗೆ ಸಾಕಾದಷ್ಟಿದೆ. ಲಿಪಿಯು ನೆಟ್ಟಗಿದೆ. ತಪ್ಪುಗಳಿಲ್ಲ.

ಇದು ವಚನಗ್ರಂಥವಾಗಿದೆ. ಇದು ಆರು ಖಂಡಗಳಾಗಿ ವಿಭಾಗಿಸಲ್ಪಟ್ಟಿದೆ. ಆರು ಖಂಡಗಳಲ್ಲಿಯೂ ಒಟ್ಟು ೬೫ ಪ್ರಸಂಗಗಳಿವೆ. ಇದರಲ್ಲಿ ಕ್ರೈಸ್ತಮತ ರೀತಿಯಿಂದ ಜಗದುತ್ಪತ್ತಿ, ನಿತ್ಯಾನಿತ್ಯವಸ್ತುವಿಚಾರ, ಸರ್ವೇಶ್ವರಮಹಿಮಾತಿಶಯ, ಭಕ್ತವಿಚಾರ, ಈಶ್ವರೋಪಾಸನಾ ಪದ್ಧತಿ, ಮೋಕ್ಷೋಪಾಯ, ಇವೇ ಮೊದಲಾದುವು ವಿವರಿಸಲ್ಪಟ್ಟಿವೆ. ಗ್ರಂಥಕರ್ತನು ತನ್ನ ಹೆಸರನ್ನು ಹೇಳಿಕೊಂಡಿಲ್ಲ. ವಚನಗಳ ಶೈಲಿಯಿಂದ ಗ್ರಂಥಕಾರನು ಕ್ರೈಸ್ತಮತದವನೆಂದೂ, ೧೯ ನೆಯ ಶತಮಾನದವನೆಂದೂ ಧಾರಾಳವಾಗಿ ಹೇಳಲೆಡೆಯಿದೆ.

No. 612. ಜ್ಞಾನೋಪದೇಶ.

JÑĀNŌPADĒŚA.

Substance, palm-leaf. Size, $11 \times 1\frac{5}{16}$ inches. Pages 6. Lines, 5 on a page. Character, Kannada. Condition, slightly injured. Appearance, old. Mode of writing, not bad and not free from mistakes.

Begins on fol. 3*a*. The other work here in is (1) Anubhavavaidya sikitse 6*a*.

Incomplete.

Same work as the above.

(ವಿ.ವಿ.)—

ಅಸಮಗ್ರ. ಬರೀ ಮೂರು ಓಲೆಗಳು ಮಾತ್ರವಿವೆ. ಸಾಮಾನ್ಯ ಶಿಥಿಲವಾಗಿದೆ. ಬರೆವಣಿಗೆಯು ಅಷ್ಟುಚೆನ್ನಾಗಿಲ್ಲ. ತಪ್ಪುಗಳೂ ಇವೆ.

ಇದು ಹಿಂದೆ ವಿವರಿಸಿದ ಗ್ರಂಥವಾಗಿದೆ.

No. 613. ಸರ್ವೇಶ್ವರ ನಿರೂಪಣ.

SARVĒṢVARA NIRŪPAṆA.

Substance, palm-leaf. Size, $11\frac{3}{8} \times 1\frac{7}{16}$ inches. Pages, 100. Lines, 5 on a page. Character, Kannada Condition, badly injured. Appearance, old. Mode of writing, not bad but free from mistakes.

Incomplete.

A work in prose dealing with some of the teachings of Christianity. The name of the author is not known.

Beginning :—

. . ಜಯ . . . . ಯಾರೆ ! ಸ್ವಾಮಿ ! ನಿಮ್ಮ ಆಧಾರ ಆಸ್ಪದವ ನಾನು ನಂಬಿದೆ . ಸ್ವಾಮಿ ! ನಿಮ್ಮ . . . ಮುಕ್ತಿಮಾರ್ಗವ . . . . . .

ಮನಶ್ಶಾಂತಿಗೆ [ನಾನು] (ನನ್ನ) ಮನಸ್ಸು [ಒಪ್ಪನು] (ಒಪ್ಪದ) . . . ತರಿಸಿ ರಾಯನೆ ! ಸ್ವಾಮಿ ! ನಿಮ್ಮ ಉದಾರ . . . ಊರೂರು ತಿರುಗಿದ . . . .

* * * *

ಆ ಭಕ್ತಿಯು ಅಧಿಕ ಅಧಿಕವಾಗಿ ವರ್ಧಿಸಮಾಡಿದಳು. ಅವಳಿಗೆ ಮರಿಯ ಯೆಂಬುದಾಗಿ ಹೆಸರನಿಕ್ಕಿದರು. ಅದಕ್ಕೆ ಅರ್ಥ :—ಆಳಿದವಳು ಇಂಥಾ ಕನ್ಯಾಸ್ತ್ರೀ ಪೂರ್ವಕಾಲ ವೊಂದುದಿನ ಇಲ್ಲದ ಒಂದು ಉತ್ತಮವಾದ ವ್ರತಮಾಡಿದಳು. ಅ[ವು](ದು) ಏನೆಂದರೆ :—ಪುರುಷಮುಖವ ನೋಡದ ಹಾಗೆ ಯಾವಾಗಲೂ ಕನ್ಯಾ ಸ್ತ್ರೀಯಾಗಿ ಇರುವೆನೆಂಬ ಪ್ರಾರ್ಥನೆಮಾಡಿದಳು.

* * * *

End :—

. . ಳಿಂದಲೂ ತುಂಬಿ ಇರುವರೆ ಪಾತೆಯನು . ಲಹೊಲ್ಲೆ . . ಭಯಂಕರವಾಗಿರುವ ಸ್ಥಳನ . . ತ ಮೆಂದು ಹೇಳಿೋರು ಸತ್ಯವು . . . . ಸರ್ವೇಶ್ವರನಿಗೂ ಯಾವಾಗಲೂ ಕನ್ಯಾಸ್ತ್ರೀಯಾಗಿದ್ದು ಅರ್ಚ . . . .

(ವಿ-ವಿ.)—

ಅಸಮಗ್ರ. ಅತಿ ಶಿಥಿಲ. ಹಲವು ಓಲೆಗಳು ಮುರಿದು ಚೂರಾಗಿಹೋಗಿವೆ. ಬರವಣಿಗೆಯು ಸಾಮಾನ್ಯವಾಗಿದೆ. ತಪ್ಪಿಲ್ಲ.

ಇದು ಕ್ರೈಸ್ತಮತ ತತ್ವಬೋಧಕವಾದ ಗದ್ಯಗ್ರಂಥವಾಗಿದೆ. ಗ್ರಂಥವು ಆದ್ಯಂತರಹಿತವೂ ಅತ್ಯಂತ ಶಿಥಿಲವೂ ಆಗಿರುವುದರಿಂದ ಗ್ರಂಥಕರ್ತನ ನಾಮಧೇಯ, ದೇಶ, ಕಾಲಗಳನ್ನು ತಿಳಿಯುವುದು ಕಷ್ಟವಾಗಿದೆ. ವಾಕ್ಯಗಳ ಶೈಲಿಯಿಂದ ಕವಿಯು ಹಿಂದುವಲ್ಲವೆಂದು ಧಾರಾಳವಾಗಿ ಹೇಳಬಹುದು.

No. 614. ದ್ವಾತ್ರಿಂಶದಪಚಾರಗಳು-

DVĀTRIMŚADAPACĀRAGAḶU.

Substance, palm-leaf. Size, $14\frac{3}{4} \times 1\frac{1}{4}$ inches. Pages, 4. Lines, 4 on a page. Character, Kannaḍa. Condition, Badly injured. Appearance, old. Mode of writing, not good but free from mistakes.

Begins on fol. *8a* of the manuscript described under No. 311 ante.

Complete.

Beginning :—

ದ್ವಾತ್ರಿಂಶದಪಚಾರವೆಂಬುವುದಕ್ಕೆ ವಿವರ :—

ದಂತಧಾವನ ಪೂರ್ವಕವಾದ ನಿತ್ಯ ಕರ್ಮವ ನಡೆಯಿಸಿ ಶುಚಿಯಾಗಿ ಸ್ವಾಮಿಗೆ ಪೂಜೆಮಾಡುವುದು ॥ ೧ ॥

ಸ್ವಾಮಿಗೆ ಪೂಜೆಮಾಡುವುದಕ್ಕೆ ಹೋಗುವಲ್ಲಿ ಪಾದುಕೆಮೊದಲಾದುವಂ ಮೆಟ್ಟಿಕೊಂಡು ಹೋಗುವುದು ॥ ೨ ॥

ಹೋಗಿ ದಂಡನಿಕ್ಕದೆ ಇರುವುದು ॥ ೩ ॥

ಒಂದು ಕೈಯಲ್ಲಿ ಶರಣು ಮಾಡುವುದು ॥ ೪ ॥

* * *

End —

ಸ್ವಾಮಿಗೆ ಸರಿಯಾಗಿ ಇತರ ದೇವತೆಗಳನೆಣಿಸುವುದು ॥೩೦॥ ಸ್ವಾಮಿಗೆಂದು ತಂದ ಸೋಪಸ್ಕರಗಳನ್ನು ವಿೂಸಲಿಳಿಸುವುದು ॥೩೧॥ ಸ್ವಾಮಿಯುತ್ಸವದಲ್ಲಿ ಸೇವಾರ್ಥವಾಗಿ ಬಂದ ಸಾವಾಸ್ಯರನ್ನು ಮುಟ್ಟಿದೆನೆಂದು ಶಂಕಿಸಿ ಸ್ನಾನ ಮಾಡಬೇಕೆಂದೆಣಿಸುವುದು ॥೩೨॥

Colophon :—

ಅಂತು ೩೨ ಅಪಚಾರಂಗಳು ಶ್ರೀ ಶ್ರೀ ಶ್ರೀ.

(ವಿ.ವಿ.)—

ಸಮಗ್ರ· ಬಹಳ ಶಿಥಿಲ. ಬರೆವಣಿಗೆಯು ಅಷ್ಟು ಚೆನ್ನಾಗಿಲ್ಲ. ತಪ್ಪಿದೆ.

ಇದು ವಚನಗ್ರಂಥ. ಇದರಲ್ಲಿ ವಿಶಿಷ್ಟಾದ್ವೈತ ಮತಾಂಗವಾದ ದ್ವಾತ್ರಿಂಶದಪಚಾರದ ವಿವರಣೆಯು ಮಾಡಲ್ಪಟ್ಟಿದೆ. ಈ ಗ್ರಂಥದಿಂದ ಗ್ರಂಥಕರ್ತನ ವಿಷಯವಾಗಿ ಯಾವ ಅಂಶವೂ ತಿಳಿಯ ಬರುವುದಿಲ್ಲ. ವಚನಗಳ ಶೈಲಿಯಿಂದಿದು ೧೯ ನೆಯ ಶತಮಾನದ ಉತ್ತರಾರ್ಧದಲ್ಲಿ ಬರೆಯಲ್ಪಟ್ಟದೆಂದು ತೋರುತ್ತದೆ.

" No. 615. ಅಕ್ಷರಮಾಲಿಕಾಗದ್ಯ. "
" AKṢARAMĀLIKĀ GADYA. "

Substance, palm-leaf. Size, $8\frac{3}{16} \times 1\frac{3}{8}$ inches. Pages, 4. Lines, 5 on a page. Character, Kannaḍa. Condition, much injured. Appearance, old. Mode of writing, good but not free from mistakes.

Begins on fol. 32*a*. The other works herein are :—(1) Vibhūtidhāraṇamantra 2*a*. (2) Rudrākṣadhāraṇamantra 3*a*. (3) Rudrākṣasthalada vacana 4*a*. (4) Bhikṣācaryeya hāḍu 5*b*. (5) Pārvatīstuti 7*a*. (6) Akṣarāṅkagadya 9*a*. (7) Nīlammana vacana 20*a*. (8) Siddhēśvarapurāṇada nāndīpadagaḷu 22*a*. (9) Akṣarāṅkagadya 34*a*. (10) Kāṣyaṣṭakam 36*a*. (11) Liṅgapurāṇada padagalu 39*a*. (12) Iṣṭaliṅga caritre 49*a*. (13) Yantragaḷu 53*a*.

Complete.

In prose passages beginning with the letter 'a' and ending with 'kṣa' the author has praised the greatness of God Śiva. The name of the author is not known.

Beginning :—

ಮಾಲಿನೀವೃತ್ತಂ—

ಪ್ರಮಥಗಣಸದೈವಃ ಪಾತಕಾರಣ್ಯದಾವಃ ।
ಶ್ರುತಿಸುಭಗಚರಿತ್ರಃ ಸೋಮಸೂರ್ಯಾಗ್ನಿನೇತ್ರಃ ॥
ಬಲಿಮಥನಸಗಂಧಃ ಪಾರ್ವತೀಪ್ರಾಣಬಂಧಃ ।
ಪ್ರಮಥಗಣಸನಾಥಃ ಪಾತುಮಾಂ ಸೋಮನಾಥಃ ॥೧॥

ಗದ್ಯ—

ಅಮಮ ಶ್ರೀಗುರುಲಿಂಗ !, ಆ ಗಂಗಾಧರ ಲಿಂಗ !, ಇಹಪರದಗತಿಲಿಂಗ !, ಉರುತರದ ಬೆಳಲಿಂಗ ! ಊ (ಊ) ಪಮೆಗ್ಗಳ ಲಿಂಗ ! ಋದ್ಧಿ [ಮರಣ](ಭರಣ) ಲಯ ಲಿಂಗ !, [ಋೂ] (ರೂ) ಡಿಗತಿಶಯ ಲಿಂಗ !, ಕೢಪ್ತಗಣವರ ಲಿಂಗ ! ೱಜಪುರದ ಹರ ಲಿಂಗ ! ಏಣಾಂಕಧರಲಿಂಗ !, ಐಶ್ವರ್ಯಾಕರ ಲಿಂಗ ! ೱಜೆವಿತ್ತನೆ ಲಿಂಗ ! ಔ ದಾರ್ಯ ಯುತ ಲಿಂಗ ! ಅಂಬಿಕಾಪತಿ ಲಿಂಗ !, ಅಃಕಲಿತಪತಿ ಲಿಂಗ !

* * * *

End :—

ವರಕೈವಾಕರ ಲಿಂಗ, ! ಶರಣರಘುಹರ ಲಿಂಗ, !
ಷಡ್ವರ್ಣತರ ಲಿಂಗ, ! ಸದಮಳದ[ಚೆ](ಸ್ಥಿ)ರಲಿಂಗ, !
ಹರಗಣಾರ್ಚಿತ ಲಿಂಗ, ! ಲಳಿತಕೀರ್ತಿ ಲಿಂಗ !
ಕ್ಷಯಮೋಹಹರ ಲಿಂಗ ! ಕ್ಷಮಾಭರಿತನುರು ಲಿಂಗ, !
ಶಿವಕರ ನಮಸ್ತೇ ನಮಸ್ತೇ ನಮಃ ॥

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲ, ಗ್ರಂಥಪಾತವಿದೆ. ಬರೆವಣಿಗೆ ಚೆನ್ನಾಗಿದೆ. ತಪ್ಪಿದೆ.

ಇದು ಗದ್ಯರೂಪವಾಗಿದೆ. ಇದರಲ್ಲಿ ಅಕಾರ ಮೊದಲ್ಗೊಂಡು ಕ್ಷಕಾರಪರ್ಯಂತ ವರ್ಣ ಪರಿಪಾಟಿಯಿಂದ ಶಿವಸ್ತುತಿಯು ಮಾಡಲ್ಪಟ್ಟಿದೆ. ಗ್ರಂಥಕರ್ತನು ತನ್ನ ಹೆಸರನ್ನು ಹೇಳಿಕೊಂಡಿಲ್ಲ. ಶೈಲಿಯು ಸರಳವಾಗಿಯೂ ಲಲಿತವಾಗಿಯೂ ಇದೆ.

No. 616. ಅಕ್ಷರಾಂಕಗದ್ಯ.
AKṢARĀṄKA GADYA.

Substance, palm-leaf. Size, $8\frac{3}{16} \times 1\frac{3}{8}$ inches. Pages, 5. Lines, 5 on a page. Character, Kannaḍa. Condition, much injured. Appearance, old. Mode of writing, good and free from mistakes.

Begins on fol. 34*a*, of the manuscript described under No. 615 ante.

Complete.

In prose passages, beginning with the letter 'ka' and ending with 'la' the author has praised the greatness of God Śiva. The name of the author is not known.

Beginning :—

ಇಂದ್ರವಜ್ರಾ॥

ಈಶಾಯ ಕೇಶಾಯಿತ ಪುಷ್ಕರಾಯ ।
ದೇವಾಯ ದಾವಾಯ ಭವದ್ರುಮಸ್ಯ ॥
ರುದ್ರಾಯ ಭದ್ರಾಯತರಕ್ಷಣಾಯ
ಸೋಮಾಯ ಭೀಮಾಯ ನಮೋ ನಮಸ್ತೇ ॥

ಗದ್ಯ—

ಓಂ ನಮಃ ಶಿವಾಯ . . . . . ನಲೋ . . . ನೆಜಯ ! . ಕಪಟಗುಣಬರ್ಬರನೆ ! ಜಯ ಕರ್ತರೆನಿಪರೊಳು ಕಗುಣಿಪನೆ ! ಜಯ ! ಖಟ್ವಾಂಗಧರ ಖಡ್ಗಹಸ್ತ ಜಯ ! ಗರಳ ಗ್ರೀವನೆ ! ಗಣನಾಥನೆ ! ಜಯ ! ಘನಘನಸಾಕ್ಷ್ಯದ ಘಮಘಿವನೆ ! ಜಯ ! ಜಾಂಗಜವಲ್ಲಭ ತಿಮಿರರವಿಯೆ ಜಯ !

*   *   *   *

End:—

ಸರ್ವಜ್ಞನೆ ! ಸರ್ವಾತ್ಮಹಿತನೆ ! ಜಯ ! ಹರಿಭಾವದಿ ಹರಿಕೆಯನ ಪ್ರಿಯ ಜಯ ! ಳಳ ಸುಖಪೂರಿತ ! ಳಳಕಾಂಗನೆ ! ಜಯ ! ಸಕ್ಷಮಾಭರಿತನುರು ಲಕ್ಷಣನೆ ! ಜಯ ! ಜಯ ಜಯ ! ಹಂಪೆಯ ವಿರೂಪಾಕ್ಷನೆ ! ಜಯ ! ಶಿವಕರ ನಮಸ್ತೇ ನಮಸ್ತೇ ನಮಸ್ತೇ ನಮಃ ॥

(ವಿ ವಿ.)—

ಸಮಗ್ರ. ಅತ್ಯಂತ ಶಿಥಿಲ. ಗ್ರಂಥಪಾತವಿದೆ. ಲಿಪಿಯು ಚೆನ್ನಾಗಿದೆ. ತಪ್ಪಿಲ್ಲ.

ಇದು ಗದ್ಯದಲ್ಲಿ ಬರೆದಿದೆ. ಇದರಲ್ಲಿ ಕಕಾರ ಮೊದಲ್ಗೊಂಡು ಳಕಾರಪರ್ಯಂತ ವರ್ಣಕ್ರಮದಿಂ ಶಿವಸ್ತುತಿಯು ಮಾಡಲ್ಪಟ್ಟಿದೆ. ಕವಿಯು ತನ್ನ ಹೆಸರನ್ನು ತಿಳಿಸಲಿಲ್ಲ.

No. 617. ಅಕ್ಷರಾಂಕ ಗದ್ಯ.
AKṢARĀṄKA GADYA.

Substance, palm-leaf. Size, $8\frac{3}{16}$ × $1\frac{3}{8}$ inches. Pages, 20. Lines, 5 on a page. Character, Kannaḍa. Condition, much injured. Appearance, old. Mode of writing, good and free from mistakes.

Begins on fol. 9*a* of the manuscript described under No. 615 ante.

Complete.

Same work as that described under No. 436.

(ವಿ.ವಿ.)—

ಸಮಗ್ರ. ಅತ್ಯಂತ ಶಿಥಿಲ, ಗ್ರಂಥಪಾತವಿದೆ. ಲಿಪಿಯು ಚೆನ್ನಾಗಿದೆ. ತಪ್ಪುಗಳಿಲ್ಲ. ಇದು ಹಿಂದೆ ೪೩೬ ನೆಯ ನಂಬರಿನಲ್ಲಿ ವಿವರಿಸಿದ ಗ್ರಂಥವೇ ಸರಿ.

No. 618. ಅಕ್ಷರಮಾಲಿಕಾಸಾಂಗತ್ಯ.
AKṢARAMĀLIKĀSĀṄGATYA.

Substance, palm-leaf. Size, $11\frac{13}{16}$ × $1\frac{1}{16}$ inches. Pages, 30. Lines, 4 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 20*a*. The other works herein are—(1) Paścimaraṅgasāṅgatya 1*a*. (2) Raṅgadhāmastuti sāngatyā 37*a*. (3) Sṛngāraśatakada Sāṅgatya 53*a*, (4) Puruṣavirahada sāṅgatya 68*a*.

(5) Nītiśatakada sāṅgatya 87*a*. (6) Citraśatakada sāṅgatya 100*a*. (7) Paścimaraṅgamāhātmya 115*a*. (8) Śṛṅgārasūtrōdāharaṇegaḷu 147*a*. (8) Śṛṅgārada hāḍugaḷu 198*a*.

Complete in 103 Stanzas.

An eulogy on God Raṅganātha by Cikkupādhyaya by means of stanzas beginning in order, with the letter 'a' (ಅ) and ending 'kṣa' (ಕ್ಷ).

Beginning :—

ಸಾಂಗತ್ಯ—

ಶ್ರೀಶನ ಶಿವವಿಧಿವಿನುತನ ದಿವ್ಯಪ್ರ- ।
ಕಾಶನ ಕಾಮಿತಾರ್ಥದನ ॥
ಕಾಶಿಕ್ಷೇತ್ರವ ಕಾಯ್ದ ಪಶ್ಚಿಮರಂ-।
ಗೇಶನ ಪದಕೆರಗುವೆನು ॥

ಕೇಶವ ! ಕೇಶಿಸೂದನ ! ಕಮಲಾಂಬಕ ! ।
ಕ್ಲೇಶನಿವಾರಣಾಚರಣಾ ! ॥
ಕೌಶಿಕಾಧ್ವರರಕ್ಷ ! ಕೌಸ್ತುಭವಕ್ಷ ! ಲ-।
ಕ್ಷ್ಮೀಶ ! ರಕ್ಷಿಪುದೆನ್ನನೊಲಿದು ॥

* * * *

ಅನಘನನಪ್ರಮೇಯನನಪ್ರತಿಮನ- ।
ನನಿಮಿಷಾಧಿಪನನಚ್ಯುತನ ॥
ಅನುಪಮಗುಣನನಭೇದ್ಯವಿಕ್ರಮನ ಸಾ-।
ನನುಸರಿಸುವೆನನವರತ ॥

* * * *

End :—

ಈಕಾರಾದಿ ಕ್ಷಕಾರಾಂತ್ಯಗುಣಿತದಿಂ ।
ತಾ ಕಲ್ಪಿಸಿ ಸಾಂಗತ್ಯವನು ॥
ಶ್ರೀಕೀರ್ತಿ ಚಿಕ್ಕದೇವನಾಮಾತ್ಯ ಚಿಕುಪಾಧ್ಯ ।
ಶ್ರೀಕರರಂಗ ಗೊಪ್ಪಿಸಿದ ॥
ನಾಮಸಂಕೀರ್ತನವ . . . ವಾದಿಯಾ ।
ದೀ ಮಹಾಗುಣಿತದಿಂದೊರೆದ ॥
ಈ ಮನೋಹರ ಸಾಂಗತ್ಯವನೋದುವವರನು ।
ಶ್ರೀಮದ್ರಂಗ ರಕ್ಷಿಪನು ॥
ನಾರಾಯಣಾಯ ನಮೋಯೆಂದುಸುರುವ ।
ರಾರಾದಡಾಗಲವರಿಗೆ ॥
ಕಾರುಣ್ಯದಿಂದ ಮೋಕ್ಷವನಿತ್ತುದೇವ ಮು-।
ರಾರಿಗೆ ಮುದದಿ[ಂದೆ] ವಂದಿಪೆನು ॥

(ವಿ.ವಿ.)—

ಸಮಗ್ರ. ಬಹಳ ಶಿಥಿಲ, ಲಿಪಿಯು ಸಾಮಾನ್ಯವಾಗಿದೆ.

೧೦೩ ಪದ್ಯಗಳಿರುವ ಈ ಗ್ರಂಥವು ಸಾಂಗತ್ಯರೂಪವಾಗಿದೆ. ಇದರಲ್ಲಿ ಕವಿಯು, ಪಶ್ಚಿಮರಂಗನಾಥ ದೇವರ ಮೇಲೆ ಅಕಾರಾದಿಯಾಗಿ ಕ್ಷಕಾರಪರ್ಯಂತ ಅಕ್ಷರಮೊದಲಾಗಿಯೂ ಗುಣಿತದಿಂದಲೂ ಪದ್ಯಗಳನ್ನು ಕಲ್ಪಿಸಿ ಹೃದಯಂಗಮವಾದ ರೀತಿಯಿಂದ ಸ್ತುತಿಯನ್ನು ವಿರಚಿಸಿ, ತನ್ನಲ್ಲಿರುವ ಶಬ್ದಸಂಗ್ರಹ ಶಕ್ತಿಯನ್ನು ಚೆನ್ನಾಗಿ ಪ್ರಕಟಿಸಿರುವನು. ಇದನ್ನು ಬರೆದ ಕವಿಯು ಶ್ರೀವೈಷ್ಣವನಾದ ಚಿಕ್ಕುಪಾಧ್ಯಾಯನು. ಈತನ ವಿಷಯವನ್ನು ೬೧೯ ನೆಯ ನಂಬರನ್ನು ನೋಡಿ ತಿಳಿದುಕೊಳ್ಳುವುದು.

No. 619. ಅಕ್ಷರಮಾಲಿಕಾಸಾಂಗತ್ಯ.
AKṢARAMALIKASĀṄGATYA.

Substance, paper. Size, $10\frac{7}{16} \times 9\frac{1}{4}$ inches. Pages, 22. Lines, 20 on a page. Character, Kannaḍa. Condition, fair. Appearance, new. Mode of writing, not bad and not free from mistakes.

Complete.

Same work as the above.

(ಪಿ ಪಿ.)—

ಸಮಗ್ರ. ಉತ್ತಮವಾದ ಪ್ರತಿ. ಲಿಪಿಯು ಸಾಮಾನ್ಯವಾಗಿದೆ. ಅಲ್ಪಸ್ವಲ್ಪ ತಪ್ಪು ಇದೆ.

ಇದು ಹಿಂದೆ ವರ್ಣಿತವಾದ ಗ್ರಂಥದ ಪ್ರತಿಯಾಗಿದೆ.

No. 620. ಇಷ್ಟಲಿಂಗ ಚರಿತೆ.
IṢṬALIṄGA CARITE.

Substance, Śrītāla. Size, $8\frac{5}{16} \times 1\frac{7}{16}$ inches. Pages, 7. Lines, 6 on a page. Character, Kannaḍa. Condition, much injured. Appearance, old. Mode of writing, good but not free from mistakes.

Begins on fol. 49*a* of the manuscript descrbied under No. 615 ante.

Incomplete.

Containing only 8 Stanzas in praise of Iṣṭaliṅga, this eulogy appears to be a small chapter of some other work. The name of the author is not mentioned in this work.

Beginning :—

ವಾ-ಷಟ್ಪದಿ :—

ಸೂಚನೆ—1.

ಆಹಾ ಮಹಾದೇವ ನಾನೇಂ ಕೃತಾರ್ಥನೋ ।
ನಾಹಂ ಸೋಹಂ ತೋಹವೆಂಬ ಮೂಱು ಭ್ರಮೆಯು ।
ತೋಡಿನೊಳು ತೊಡಕದ ಷಡುಸ್ಥಲ ಬ್ರಹ್ಮವಂ ಕಂಡೆಂ ಕರಸ್ಥಲದೊಳು ॥

ಶ್ರೀಮನ್ಮಹಾಸಿದ್ಧ ಶಿವಮೂರ್ತಿ ವರಗುರು ।
ಸ್ವಾಮಿ ಸನ್ಮತವಾಗಿ ಶರಣವ್ರೇಮಿ ಕರುಣದಿಂ ? ।
ಭೂಮಿಚಂದ್ರಾರ್ಕರುಳ್ಳನಕ ಭವಂಗಳೊ . . ದವಂ ಕಂದನೆಂದು ವ
[ರಾಗಿ ॥

ನಾಮರೂಪಕ್ರಿಯಾರಹಿತ ನೆನಿಸುವ ಪ್ರಮಾ ।
ಕಾಮಿನಿಯು ಕಾಂತನಂ ಶಾಂಕನಂ ನಿಜಕರತ- ।
ಲಾಮಲಕವಾಗಿ ತೋಱಿಸಿದ ಗುರುಲಿಂಗಮಂ ಕಂಡೆಂ ಕರಸ್ಥಳದೊಳು ॥

* * * *

End :—

ಅಂತರಂಗದ ನಾಡೊಳಟ್ಟುಳಿಯು ಮಾಡುತಿಹ ।
ಅಂತಃಕರಣ ಚತುಷ್ಟಯರೆಂಬ ಮನ್ನೆಯರು ।
ಸಂತವಾದರು ಸಪ್ತವ್ಯಸನವೆಂದೆಂಬ ನಾಯಕರು ಕೈಯೊಳಗಾದರು ॥

ಪಂತವಂ ಬಿಟ್ಟು ಷಡುವರ್ಗಪರಿವಾರ ವೆ- ।
ಲ್ಲಂ ತಮತಮಗೆ ಸಿಕ್ಕಿಯಂತು ಮೈಯಿಕ್ಕಿದರು ।
ಅಂತಕನ ಮನುಜರಳುಕಿದರು ಲಿಂಗಂ ಕರಸ್ಥಳಕೆ ಬಿಜಯಂಗೆಯ್ಯಲು ॥

ಮುಂದೆ ನಿಲಲಮ್ಮದೋಡಿತು ಕುಲದ ಮದವು ಮದ ।
ಱಿಂದೆ ಬಲಮದ ಪಲಾಯನವ ಮಾಡಿತ್ತು ಬಗೆ- ।
ಗುಂದಿತ್ತು ಧನಮದಂ ಪೋಯಿತೆವ್ವನಮದಂ ರೂಪಮದವುಂ ಜಾರಿತು ॥

ಹೊಂದಿಹೋಯಿತ್ತು ವಿದ್ಯಾಮದವು ರಾಜ್ಯಮದ ।
ಮುಂದುಗೆಟ್ಟಿತ್ತು ತಪಮದ ಕೆಲಕೆ ಸಾರಿತ್ತು ।
ತಂದೆ ಗುರುರಾಯ ಕರಪಟ್ಟದೊಳು ಲಿಂಗಮಂ ತಂದಿರಿಸಿ ತಾಕ್ಷಣದೊಳು ॥

(ವಿ-ವಿ.)—

ಅಸಮಗ್ರ. ಅತ್ಯಂತ ಶಿಥಿಲ. ಗ್ರಂಥ ಪಾತವಿದೆ. ಬರೆವಣಿಗೆಯು, ಚೆನ್ನಾಗಿದೆ. ತಪ್ಪಿದೆ

ಇಷ್ಟ ಲಿಂಗಸ್ತುತಿ ರೂಪವಾದ ಈ ಗ್ರಂಥವು ವಾರ್ಧಕಷಟ್ಪದಿಯಲ್ಲಿ ಬರೆದಿದೆ. ಇದರಲ್ಲಿ ೪ ಪದ್ಯಗಳಿವೆ. ಇದು ಯಾವುದೋ ಒಂದು ಗ್ರಂಥದ ಒಂದು ಸಣ್ಣ ಪ್ರಘಟ್ಟವೆಂದು ತೋರುತ್ತದೆ. ಕವಿಯು ತನ್ನ ಹೆಸರನ್ನು ಹೇಳಿಕೊಂಡಿಲ್ಲ.

No. 621. ಕೃಷ್ಣಕರ್ಣಾಮೃತವ್ಯಾಖ್ಯೆ- KṚṢṆAKARṆĀMṚTAVYĀKHYE.

Substance, palm-leaf. Size, $9\frac{7}{8} \times 1\frac{1}{8}$ inches. Pages, 248. Lines, 4 on a page. Character, Kannaḍa. Condition, very much injured. Appearance, old. Mode of writing, not bad and not free from mistakes.

Incomplete.

A commentary. Containing word for word meaning in Kanarese, for Kṛṣṇa Karṇāmṛta which is an eulogy on Śri Kṛṣṇa. The author Celvāmbike (Celuvāmba) was the queen of Doḍḍa Kṛṣṇarāja who ruled at Mysore from 1714 to 1731.

Beginning :

ಶಾ. ವಿ.— ॥

ಶ್ರೀಕೃಷ್ಣಕ್ಷಿತಿ ಮಂಡಲೇಶ್ವರ ದಯಾಮಾತ್ಸರ್ಯ ರಮಾವಲ್ಲಭ ।
ನ್ಯಸ್ತಸ್ವಾಂತಭುವಾ ಕಲಾಕಮಲಿನೀ ಬಾಲಾತಪಶ್ರೀಮುಷಾ ॥
ಶ್ರೀ ಚೆಲ್ವಾಂಬಿಕಯಾ ಮುದಾ ಪರಮಯಾ ಶ್ರೀಕೃಷ್ಣಕರ್ಣಾಮೃತ- ।
ವ್ಯಾಖ್ಯಾ ರಂಜಿತ ಸರ್ವಲೋಕಹೃದಯಾ ಕಾರ್ಣಾಟಿಕಾ[ಕ್ರಿಯ] (ಕೀರ್ಟು)
ತೇ ॥ ೧ ॥

ಅರ್ಥ.—ಶ್ರೀಕೃಷ್ಣಕ್ಷಿತಿ ಮಂಡಲೇಶ್ವರ = ಸಂಪದ್ಯುಕ್ತನಾದ ಶ್ರೀಕೃಷ್ಣ ಭೂಮಂಡಲಾಧಿಪತಿಯು. ದಯಾ = ಕಾರುಣ್ಯದ, ಮಾತ್ಸರ್ಯ . . . ವಂತ, ರಮಾವಲ್ಲಭ ನ್ಯಸ್ತ ಸ್ವಾಂತಭುವಾ.

* * * *

ಕ್ರಿಯತೇ = ಮಾಡಲ್ಪಡುತ್ತಲಿದೆ.

ಅರ್ಥ.—ಚಿಂತಾಮಣಿಃ = ಚಿಂತಾಮಣಿಯೆಂಬ ಪಾರಸ್ತ್ರೀಯು, ಜಯತಿ = ಸರ್ವೋತ್ಕೃಷ್ಟವಾಗಿ ಇರುತ್ತಲಿದ್ದಾಳೆ. ಮೇ = ನನಗೆ, ಗುರುಃ ಆಚಾರ್ಯನಾಗಿರುವಂಥಾ, ಸೋಮಗಿರಿಃ ಸೋಮಗಿರಿತೀರ್ಥರು. ಜಯತಿ = ಸರ್ವೋತ್ಕೃಷ್ಟವಾಗಿ ವರ್ತಿಸುತ್ತಲಿದ್ದಾರೆ. ಶಿಕ್ಷಾಗುರುಃ ವಿದ್ಯಾಗುರುವಾಗಿರುವಂಥಾ, ಶಿಖಿಪಿಚ್ಛಮೌಳಿಃ ಶಿಖಿಪಿಚ್ಛ ನವಿಲುಗರಿಯೇ, ಮೌಳಿಃ ಶಿರಸ್ಸಿನಲ್ಲಿ ಉಳ್ಳಂಥಾ, ಭಗವಾಂಶ್ಚ ಶ್ರೀಕೃಷ್ಣ ಸ್ವಾಮಿಯೂ ಜಯತಿ = ಸರ್ವೋತ್ಕೃಷ್ಟನಾಗಿ ಇರುತ್ತಲಿದ್ದಾನೆ. ಜಯಶ್ರೀಃ ಜಯಲಕ್ಷ್ಮಿಯು, ಯತ್ಪಾದಕಲ್ಪತರು ಪಲ್ಲವಶೇಖರೇಷು, ಯತ್, ಯಾವ ಕೃಷ್ಣ ಸ್ವಾಮಿಯ, ಪಾದ, ಪಾದಗಳೆಂಬ ಕಲ್ಪತರು, ಕಲ್ಪವೃಕ್ಷದ, ಪಲ್ಲವ, ಚಿಗುರುಗಳೆ ಶೇಖರೇಷು ಶಿರೋಭೂಷಣವಾಗಿ ಉಳ್ಳಂಥವರಲ್ಲಿ, ಲೀಲಾ ಸ್ವಯಂವರ ರಸಂ, ಲೀಲಾ, ವಿಲಾಸವಾಗಿರುವಂಥಾ ಸ್ವಯಂವರ ರಸಂ, ಸ್ವಯಂವರ ಪ್ರೀತಿಯನ್ನು, ಲಭತೇ, ಐದುತಲಿದ್ದಾಳೆ.

* * * *

End :—

ಈಶಾಸನದೇವ ಚರಣಾಭರಣೇನ, ಈಶಾನದೇವ, ಪರಮೇಶ್ವರನ, ಚರಣ, ಪಾದಗಳೆ, ಆಭರಣೇನ ಆಭರಣವಾಗುಳ್ಳಂಥಾ, ನೀವೀದಾಮೋದರ ಸ್ಥಿರಯಶಸ್ತಬಕೋದ್ಗಮೇನ, ನೀವಿ

ದಾಮೋದರನೆಂಬ ಬ್ರಾಹ್ಮಣನ, ಸ್ಥಿರ, ಶಾಶ್ವತವಾಗಿರುವಂಥಾ, ಯಶಃ ಕೀರ್ತಿಗೆ, ಸ್ತಬಕ = ಗು[ಚ್ಛೇನ] (ಚ್ಛಕ್ಕೆ) ಉದ್ಗಮೇನ = ಅಧಿಕ್ಯವಾರುವಂಥಾ, ಲೀಲಾಶುಕೇನ, ಲೀಲಾ . . . . . .

(ವಿ-ವಿ.)—

ಅಸಮಗ್ರ ಅತ್ಯಂತ ಶಿಥಿಲ. ಲಿಪಿಯು ನೆಟ್ಟಗಿಲ್ಲ. ತಪ್ಪಿದೆ.

ಇದು ಶ್ರೀಕೃಷ್ಣಸ್ತುತಿ ರೂಪವಾದ ಕೃಷ್ಣ ಕರ್ಣಾಮೃತಕ್ಕೆ ಕನ್ನಡ ಭಾಷೆಯಲ್ಲಿ ಬರೆದ ಪ್ರತಿಪದಾರ್ಥ ವ್ಯಾಖ್ಯೆಯಾಗಿದೆ. ಇದನ್ನು ವ್ಯಾಖ್ಯೆಯೆಂದು ಕರೆಯುವುದರಿಂದ ಟೀಕೆಯೆಂದೆನ್ನುವುದೇ ಚೆನ್ನೆಂದು ತೋರುತ್ತದೆ. ವ್ಯಾಖ್ಯೆಯಲ್ಲಿರಬೇಕಾದ ಯಾವ ಲಕ್ಷಣವೂ ಇದರಲ್ಲಿಲ್ಲೆಂದು ಧಾರಾಳವಾಗಿ ಹೇಳಬಹುದು. ಇದನ್ನು ಬರೆದಾಕೆಯು ಚೆಲ್ವಾಂಬಿಕೆಯು (ಚೆಲುವಾಂಬೆ) ಈಕೆಯು ತನ್ನನ್ನು "ಶ್ರೀಕೃಷ್ಣಕ್ಷಿತಿ ಮಂಡಲೇಶ್ವರ ರಯಾಮೂರ್ತ್ಯಾ" ಎಂದು ವಿಶೇಷಿಸಿ ಹೇಳಿ ಕೊಂಡಿರುವಳು. ಇವಳು ಕ್ರಿ.ಶ. ೧೭೧೪ ರಿಂದ ೧೭೩೧ ವರೆಗೆ ಮೈಸೂರು ಸಂಸ್ಥಾನಕ್ಕಧಿಪತಿಯಾಗಿದ್ದ ದೊಡ್ಡ ಕೃಷ್ಣರಾಜನ ಮಹಿಷಿಯಾಗಿದ್ದಳು.

No. 622. ಕೇಶವ ಶತಕ.

KĒŚAVA ŚATAKA.

Substance, palm-leaf. Size, $10\frac{1}{16} \times 1$ inches. Pages, 12. Lines, 6 on a page. Character, Kannaḍa. Condition, badly injured. Appearance, old. Mode of writing, good but not free from mistakes.

Begins on fol. 1*a*. of the manuscript described under No. 302 ante.

Incomplete.

A eulogy on God Cennakēśava worshipped at Vēlāpura (Belur). The name of the author is Advaitānanda, disciple of Gāḷipūjeya Pūrṇānanda Yōgīśvara. He was a native of Haḷēbīḍu and lived about the year 1700 A.D.

Beginning :—

ಕಂ ॥ ವೇಲಾಪುರಿ ಚೆನ್ನರಾಯನ ।
ಮೇಲಣ ಶತಕಗಳ ಬೇಳ್ವೆನತಿಮುದದಿಂದಂ ॥
ಕೇಳಿ ಸದ್ಗತಿಯು ಪಡೆವುದು ।
ಪಾಲಿಸಿ ಸಲಹುವನು ನಮ್ಮ ಕೇಶವಮೂರ್ತಿ ॥
ಹರನ ಸುಕುಮಾರ ವಿದ್ಯಾ- ।
ಕರನಿಧಿ ಮರೆಹೊಕ್ಕ ಸುರನರೋರಗಗಡರಂ ॥
ಪರಿಹರಿಸಿ ಮನದಭೀಷ್ಟವ ।
ಕರುಣಿಪ ಕರಿವದನ ಮಾಳ್ಕೆ ಮನದುತ್ಸವಮಂ ॥

* * *

End :—

ನರಜನ್ಮದಲ್ಲಿ ಬಂದುಂ ।
ಹರಿಯಂ ನೆರೆಭಜಿಸಿ ಗತಿಯ ಕಾಣದ ಮನುಜರ್ ॥
ತಿರುತಿರುಗಿ ಬಂಧನಂಗಳ ।
ಬರುತಿಪ್ಪರು ಯೆಂದ ನಮ್ಮ[ಯ] ಕೇಶವಮೂರ್ತಿ ॥
ಆಕಾಶಕೆ ಸೂರ್ಯ(ನಿ)ರಲು ।
ಪ್ರಾಕಾಶವು ಜಗಕೆ ತೋರ್ಪ ತೆರನಂದದೊಳು ॥
ಆ ಕೇಶವನೆಂದಾ ಮಾತ್ರ ದಿ ।
ಆ ಕ್ಲೇಶವು ಹರಿದೋಹುದೆಂದ ನದ್ವೈತಾನಂದ ॥

Colophon :—

ಇವ ಸಂವತ್ಸರದ ಮಾಘ ಶು ೧ ರಲ್ಲು ಗಾಳಿ ಪೂಜೆಯ ಪೂರ್ಣಾನಂದಯೋಗೀಶ್ವರರ ಶಿಷ್ಯನು ಹಳೇಬೀಡು ಅದ್ವೈತಾನಂದನು ಹೇಳಿದ ಕೇಶವ ಶತಕಕ್ಕೆ ಮಂಗಳಮಹಾ ಶ್ರೀ.

(ವಿ.ವಿ.)—

ಅಸಮಗ್ರ. ೪೩ ರಿಂದ ೯೦ ನೆಯ ಕಂದದ ವರೆಗಿರುವ ಭಾಗವು ಲುಪ್ತವಾಗಿ ಹೋಗಿದೆ. ಅತ್ಯಂತ ಶಿಥಿಲ. ಬರೆವಣಿಗೆಯು ಚೆನ್ನಾಗಿಯೇ ಇದೆ. ತಪ್ಪಿದೆ.

ಇದು ಕಂದದಲ್ಲಿ ಬರೆದಿದೆ. ಇದರಲ್ಲಿ ಸುಮಾರು ೫೦ ಪದ್ಯಗಳಿವೆ. ಮಿಕ್ಕ ಅಂಶವು ನಷ್ಟವಾಗಿ ಹೋಗಿದೆ. ಪದ್ಯಗಳೆಲ್ಲವೂ "ಕೇಶವ ಮೂರ್ತಿ" ಎಂದಂತ್ಯವಾಗುವುವು. ಈ ಶತಕವು ವೇಲಾಪುರಿಯ ಅಥವಾ ಬೇಲೂರ ಚೆನ್ನಕೇಶವ ಮೂರ್ತಿಯ ಪ್ರಶಂಸಾರೂಪವಾಗಿದೆ. ಇದನ್ನು ಬರೆದ ಕವಿಯು ಗಾಳಿಪೂಜೆಯ ಪೂರ್ಣಾನಂದಯೋಗೀಶ್ವರನ ಶಿಷ್ಯನಾದ ಅದ್ವೈತಾನಂದನೆಂಬುವನು. ಈತನ ಸ್ಥಳವು ಹಳೇಬಿಡು. ಇವನು ಸುಮಾರು ಕ್ರಿ.ಶ. ೧೨೦೦ ರಲ್ಲಿದ್ದನೆಂದು ತಿಳಿದುಬರುತ್ತದೆ.

No. **623**. ಕೇಶವ ಶತಕ.
KĒŚAVA ŚATAKA.

Substance, paper. Size, $10\frac{7}{16} \times 9\frac{1}{4}$ inches. Pages, 6. Lines, 20 on a page. Character, Kannaḍa. Condition, fair. Appearance, new. Mode of writing, bad and full of mistakes.

Begins on fol. 54*a* of the manuscript described under No. 478 ante.

Incomplete.

Same work as the above.

(ವಿ.ವಿ.)—

ಅಸಮಗ್ರ. ಪ್ರತಿಯು ಚೆನ್ನಾಗಿದೆ. ಬರೆವಣಿಗೆಯು ಏನೂ ನೆಟ್ಟಗಿಲ್ಲ. ಅಬದ್ಧಮಯ.

ಇದು ಹಿಂದೆ ವಿವರಿಸಿದ ಗ್ರಂಥದ ಪ್ರತಿಕೆಯಾಗಿದೆ.

No. 624. ಗಣಸಹಸ್ರನಾಮ.

GAṆASAHASRANĀMA.

Substance, Śrītāla. Size, $7\frac{1}{4} \times 2\frac{1}{16}$ inches. Pages, 50. Lines, 7 on a page. Character, Kannaḍa. Condition, good. Appearance, old. Mode of writing, good, but not free from mistakes.

Begins on fol. 2*a*. A Vīraśaiva work giving the names of the devotees of Śiva belonging to different gaṇas or groups.—Pramathagaṇa, Rudragaṇa, Yōgācāryam, Daśagaṇa, Aravathumūvaru, Ṣōḍaśa, Térasa and Bhaktagaṇa.

Beginning :—

ಕಂದ ॥ ಶ್ರೀಶಿವನೆ! ನಿಮ್ಮ ಗಣಗಳ ।
ಸಾಸಿರ ವಾಣೀಪತಿಗೆ(ಯು) ಪೊಗಲ್ಕರಿದುಂ ॥
ಈಶ್ವರನು ಕೊಟ್ಟ ಮತಿಯೊಳ್ ।
ದೋಷವ ಕಳೆಯಲ್ಕೆಪೊಗಳ್ವೆ ಬಲ್ಲಂದದೊಳ್ಗಂ ॥

ತನುಮನ ಧನವನು ಸವೆಸಿಯೆ ।
ಮನಸಿಜವೈರಿಯನೆ ಯೊಲಿಸಿ ಶಿವನಂಬೆರಸಿದ ॥
ಸನುಮಾತ್ರರ ನೆನೆದು ದುರಿತವ ।
ನಿನಿಸಿಲ್ಲದೆ ಕಳೆವೆ ನಾನು ಶಿವಬಸವೇಶಾ ॥

ಶ್ರೀಮಲ್ಲಿಕಾರ್ಜುನಾರ್ಯಂ ।
ಧೀಮಂತಂ ಪಾಪರಹಿತಗಣ ಸಂಕುಳಮಂ ॥
ಪ್ರೇಮದಿ ಸ್ತುತಿಸಿದ ಸಾವಿರ ।
ನಾಮವ ಜಪವೆಂದು ಪೊಗಳ್ದು ವಿಸ್ತರಿಸಿದಪೆಂ ॥

ಪಂಡಿತದೇಶಿಕ ಕೃಪೆಯಿಂ ।
ಖಂಡಶಶಾಂಕ ಕಪರ್ದಿತಾಳ್ದ ಹರಗಣನಾಮವ ॥ ?
ಚಂಡಮತಿಯೊಳ್ಕೊಂಡೆಸಗಿದ । (ಭೂ)
ಮಂಡಲದೊಳ್ಪ್ರೇಮನಾಥಗಣ ಸಂಕುಳಮಂ ॥

ಪ್ರಮಾಥಗಣ ರುದ್ರಗಣರುಂ ।
ಸುಮಹದ್ಯೋಗರು ಮೆನಿಪ ತ್ರಿಷಷ್ಠಿಯುಗಣಮಂ ॥
ಸಮುಚಿತ ಷೋಡಶ ತೇರಸ
ದಶಗಣ(ವ) ಮರರಗಣಂಗ ಳಿಂ[ದೆನಲ್] (ದು) ಸಹಸ್ರಂ ॥

ಶ್ರೀನಂದಿ, ಶ್ರೀ . . . ಕರ, ಶ್ರೀನಂದಿಕೇಶ್ವರ, ಆನಂದನಂದಿ, ಸಾನಂದ ನಂದಿನಾಥ, ಅಕ್ಷಯ, ವಿಜಯ, ವಿಜಯರುದ್ರ . . .

* * * *

ಮುಖೋರ್ಧ್ವಬಾಹು ಪ್ರಮುಖ ಮಹಾ ಪ್ರಮಥಗಣವು.

* * * *

ಕಂ ॥ ಪೋಳ್ವ್ವ ದಧೀಚಿಯ ನಿಮಿಷದಿ ।
ಸೇಳ್ವ್ವ ದಪಮೃತ್ಯುವಿನ ರತಂದ ಲೇಖನಮಂ
ಕೇಳ್ವ್ವ ದೆಮಪುರದ ಬೇರಂ ।
ಬಾಳ್ವ್ವದು ಷೋಡಶರ ? ಪೇಳ್ವಂ ಸೋಮನ ನಾಮಂ ॥

* * * *

End :

ಕಂ ॥ ದಿಟವಿದು ಭವ[ವಿಥಳನ] (ಭೇದನ) ಕ- । (ವಿದಳನ)
ರ್ಮ ಕಕಾರಣಗಣ ಸಹಸ್ರನಾಮಸ್ತವಮಂ ॥
ಸರಿಯಿಸುವಾತಂ ಜನನಿಯ ।
ಜಠರಕ್ಕ[ೋರ] ಪೀಠಕ್ಕೆ ಮರಳಿ ಬಾರಂದೂರಂ ?
ಪ್ರಮಥಗಣ ರುದ್ರಗಣ ಭ- ।
ಕ್ತಮಹಾಗಣ ದಿವ್ಯನಾಮ ಸಂಕೀರ್ತನಮಂ ॥
ಪ್ರಮುದಿತ ರತಿಯಿಂ ಪೇಳ್ದ ।
ಸುಮಹತ್ಫಲವೆಂದು ಬಣ್ಣಿಪೆಂ ಬಸವೇಶಾ ॥
ಸುರತರುವಂ ಸುರಧೇನುವ ।
ವರಚಿಂತಾಮಣಿಗಳೆಂದು ಪೆಸರಂ ಪೇಳ್ವರ್ ॥
ಹರಗಣ ಮಾಲೆಯ ಜಪಿಸಲ್ ।
ಭರದಿಂದಂ ಸಿದ್ಧಿಯಕ್ಕು ಶಿವಬಸವೇಶಾ ।

(ವಿ-ವಿ.)—

ಸಮಗ್ರ. ಉತ್ತಮವಾದ ಓಲೆಯ ಪ್ರತಿ. ತಪ್ಪುಗಳವೆ.

ಇದು ಗದ್ಯ ಗ್ರಂಥವಾಗಿದೆ. ಅಲ್ಲಲ್ಲಿ ಕಂದಪದ್ಯಗಳೂ ಇವೆ. ಪ್ರಥಮಗಣದಾದಿಯಲ್ಲಿ ಅತಿ ದೀರ್ಘವಾದ ಒಂದು ಪ್ರಶಸ್ತಿವಾಕ್ಯವಿದೆ. ಅದು ಪ್ರಮಾಣವಾಗಿ ತೆಗೆದುಕೊಂಡ ಚಿಕ್ಕ ಚಿಕ್ಕ ಸಂಸ್ಕೃತವಾಕ್ಯ ಭಾಗಗಳನ್ನೊಳಗೊಂಡಿದೆ. ಆ ಪ್ರಶಸ್ತಿವಾಕ್ಯದಲ್ಲಿ ವೀರಶೈವಮತದ, ವೀರಶೈವರ, ಮತ್ತು ಗಣಗಳ ಉತ್ಕರ್ಷತೆ, ಆಚಾರ ಪ್ರಭಾವಗಳು ಮನದಟ್ಟಾಗುವಂತೆ ನಿರೂಪಿಸಲ್ಪಟ್ಟಿವೆ.

ಈ ಗ್ರಂಥದಲ್ಲಿ ಪ್ರಮಥಗಣ, ರುದ್ರಗಣ, ಯೋಗಾಚಾರ್ಯರು, ಅಱುವತ್ತಮೂವರು, ಷೋಡಶ, ತೇರಸ, ದಶಗಣ, ಭಕ್ತಗಣ ಇವರ ನಾಮಗಳು ಹೇಳಿವೆ.

ಗ್ರಂಥಕರ್ತನು ಪಾಲ್ಕುಱಿಕೆ ಸೋಮನು, ಇವನ ವಿಷಯವಾಗಿ ಕವಿ ಚರಿತ್ರೆಯಲ್ಲಿ "ಈತನು ಆರಾಧ್ಯಚಾರಿತ್ರ, ಬಸವಪುರಾಣ, ಅನ್ಯವಾದ ಕೋಲಾಹಲ, ಬಸವಣ್ಣನ ಪಂಚಗದ್ಯ, ಸದ್ಗುರುರಗಳೆ, ಶೀಲಸಂಪಾದನೆ, ಸೋಮೇಶ್ವರ ಶತಕ, ಗಣ ಸಹಸ್ರನಾಮ ಇವೇ ಮೊದಲಾದ ಗ್ರಂಥಗಳನ್ನು ಬರೆದಿರುವನೆಂದೂ, ಸುಮಾರು ಕ್ರಿ.ಶ. 1195 ರಲ್ಲಿ ಜೀವಿಸಿದ್ದನೆಂದೂ," ಬರೆದಿದೆ.

No. 625. ಗಣಸಹಸ್ರನಾಮ.

GAṆASAHASRANĀMA.

Substance, paper. Size, $7\frac{15}{16} \times 5\frac{1}{4}$ inches. Pages, 26. Lines, 23 on a page. Character, Kannaḍa. Condition, much injured. Appearance, old Mode of writing good, but full of mistakes.

Begins on fol. 2*a*. The other work herein is (1) Ādayyanakāvya 17*a*.

Incomplete.

Same work as the above.

(ವಿ.ವಿ.)—

ಅಸಮಗ್ರ. ಅತ್ಯಂತ ಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ. ಹೇರಳ ತಪ್ಪುಗಳಿವೆ. ಇದರೊಡನೆ ಆದಯ್ಯನ ಕಾವ್ಯವು ಬರೆದು ಸೇರಿಸಲ್ಪಟ್ಟಿದೆ.

ಇದು ಮೇಲೆ ವರ್ಣಿತ ಗ್ರಂಥವಾಗಿದೆ.

No. 626. ಗಣಸಹಸ್ರನಾಮ.

GAṆASAHASRANĀMA.

Substance, paper. Size, $16\frac{3}{16} \times 9\frac{5}{16}$ inches. Pages, 21. Lines, 20 on a page. Character, Kannaḍa. Condition, good. Appearance, new. Mode of writing, good, but full of mistakes.

Begins on fol. 1*a*. The other work herein is :—(1) Ādayyanakāvya 11*b*.

Incomplete.

Same work as the above.

(ವಿ.ವಿ.)—

ಅಸಮಗ್ರ. ಉತ್ತಮವಾದ ಲಿಪಿ. ತಪ್ಪುಗಳು ಹೇರಳವಾಗಿವೆ.

ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ

No. 627. ಚಿತ್ರಶತಕದ ಸಾಂಗತ್ಯ.

CITRAŚATAKADA SĀṄGATYA.

Substance, palm-leaf. Size $11\frac{13}{16} \times 1\frac{7}{16}$ inches. Pages 29. Lines, 4 on a page. Character, Kannaḍa. Condition, much injured. Appearance, old. Mode of writing not bad and not free from mistakes.

Begins on fol. 103*a* of the manuscript described under No. 257 ante.

Incomplete.

Contains 102 stanzas, of which the first fifty are written in praise of God Raṅganātha, while the remaining stanzas are written on the beauties of Kannaḍa language. By Cikkupādhyāya.

Beginning :—

ಸಾಂಗತ್ಯ :—

ರಂಗ . . . ।
. . . ಳ್ದವ ॥
. . . ಗೊರವನಿಗುಸುರಿತ್ತಾಳ್ದವನಾ ।
. . . . ॥ ॥
. . . ಪೊಱುಂಬಳೆ ಗೈಯ್ಯುನಪರ್ದು ।
. . . . .
. . . ।
. . . ಗಾನೆಱಗುವೆನು ॥ ॥
ಸೊಕ್ಕ . . . ।
. . . ॥
. . ಕಾಯಿದ ಸಾಗರ ।
ವಕ್ಕಗನಡಿಗೆಱಗುವೆನು ॥ ॥

* * * *

ಅಣೆಯೆಂಬುದು ಸಮರಾಂಗಣವಾತಲ್ಲ ।
ಕಣೆಯೆಂಬುದಂಬು ತಾನಲ್ಲ ॥
ಸೊಣೆಯೆಂಬುದು ತಾಡನದ ಭೇದಮದಲ್ಲ ।
ಎಣೆಯುಂಟೆ ? ರಂಗ ! ಕನ್ನಡಕೆ ॥ ॥
ಬನ್ನಿಯೆಂಬುದು ಮರಸಲ್ಲ ಬಸುರಿಯೆಂಬು ।
ದುನ್ನೋಡೆ ಪಾದಪಮಲ್ಲ ॥ ॥
ಚೆನ್ನೆ ನೀಯೆಂಬುದು ಭೂರುಹಮಲ್ಲ ।
ಕನ್ನಡ ಬೆಡಗಲ್ತೆ ರಂಗಾ ! ॥ ॥
ತಾಳೆಂಬುದು ಗಿಡು ಮೂಲಮದಲ್ಲದೆ ।
ಬಾಳೆಂಬುದು ಕತ್ತಿಯಲ್ಲ ॥
ಆಳೆಂಬುದು ಜನದೊಳಗಲ್ಲ ವೀನುಡಿ ।
ಕೇಳ ! ಕೇಳಲು ಚಿತ್ರರಂಗಾ ! ॥ ॥

nd :—

ಚಿಕದೇವಗಾ . . . ।
. . . . ॥
. . ತಿಂತಿದನೋದಿ ಕೇಳ್ವವರಿಗೆ ।
ಸಕಲಸಿರಿಸಾದಕ್ಕು ಶ್ರೀ ಶ್ರೀ ॥ ॥

ಚಿತ್ರ . . ।
. . . ಗಳು ॥ ॥
ಮತ್ತೆಯೊಗಟೆ ಚದುರ್ವಾರ್ತಿನ ಪದನ್ಯೆ-
ವತ್ತಕೇ ಶತಕ ಸಂಪೂರ್ಣ ॥ ॥

ವಿ.ವಿ.—

ಅಸಮಗ್ರ. ಬಹಳ ಶಿಥಿಲ. ಓಲೆಗಳು ಮುರಿದು ಚೂರುಚೂರಾಗಿ ಹೋಗಿವೆ. ಬರೆವಣಿಗೆಯು ಅಷ್ಟು ಉತ್ತಮವಲ್ಲ. ತಪ್ಪಿದೆ.

ಇದು ಸಾಂಗತ್ಯ ರೂಪವಾಗಿದೆ. ಇದರಲ್ಲಿ ಹುಳು ತಿಂದುಳಿದ ೧೦೨ ಪದ್ಯಗಳು ಸಂಖ್ಯೆ ಮಟ್ಟಿಗೆ ಮಾತ್ರ ಉಳಿದುಕೊಂಡಿರುವುವು. ೧ ರಿಂದ ೫೦ ಪದ್ಯಗಳು ರಂಗನಾಥನ ಸ್ತುತಿ ರೂಪಗಳಾಗಿಯೂ, ಮಿಕ್ಕವು ಒಗಟೆ ಮತ್ತು ಕನ್ನಡ ನುಡಿಯ ಸೊಗಸುಗಳ ರೀತಿಯನ್ನು ವಿವರಿಸುವವುಗಳಾಗಿಯೂ ಇರುವುವು. ಇದರ ಕವಿಯು ಶ್ರೀ ವೈಷ್ಣವನಾದ ಚಿಕ್ಕುಪಾಧ್ಯಾಯನು. ಇವನ ಚರಿತ್ರೆಯನ್ನು ೨೦೯ ನ್ನು ನೋಡಿ ತಿಳಿಯಬಹುದು.

No. 628. ಚಿತ್ರಶತಕದ ಸಾಂಗತ್ಯ-

CITRAŚATAKADA SĀṄGATYA.

Substance, paper. Size, 10 7/16 × 9¼ inches. Pages, 21. Lines, 20 on a page. Character, Kannaḍa. Condition, fair. Appearance, new. Mode of writing, not bad and not free from mistakes.

Incomplete.

Same work as the above.

ವಿ.ವಿ.—

ಅಸಮಗ್ರ. ಗ್ರಂಥಪಾತವಿದೆ. ಪ್ರತಿಯು ಚೆನ್ನಾಗಿದೆ ಬರೆವಣಿಗೆಯಷ್ಟು ಚೆಲೋದಾಗಿಲ್ಲ. ತಪ್ಪಿದೆ.

ಇದು ಹಿಂದೆ ವಿವರಿಸಿದ ಗ್ರಂಥದ ಪ್ರತ್ರಿಕೆಯಾಗಿದೆ.

No. 629. ನೀಲಮ್ಮನ ತ್ರಿವಿಧಿ-

NĪLAMMANA TRIVIDHI.

Substance, palm-leaf. Size, 11⅝ × 1 3/16 inches. Pages, 17. Lines, 3 on a page. Character, Kannaḍa. Condition, much injured. Appearance, old. Mode of writing, bad and full of mistakes.

Begins on fol. 58*a*. The other works herein are —(1) Hāḍugaḷu 1*a*, (2) Ṣaḍakṣariya ragaḷe 31*a*, (3) Mahādēvanaragaḷe 46*a*, (4) Siddhēśvarana trividhi 66*b*.

Complete.

Same work as that described under No. 482 ante.

ವಿ.ವಿ.—

ಸಮಗ್ರ. ಬಹಳ ಶಿಥಿಲ. ಲಿಪಿಯೂ ಚೆನ್ನಾಗಿಲ್ಲ. ತಪ್ಪಿಗೆ ಮಿತಿಯಿಲ್ಲ.

ಇದು ಹಿಂದೆ ೬೧೫ ನೆಯ ನಂಬರಿನಲ್ಲಿ ವರ್ಣಿಸಿದ ಗ್ರಂಥವಾಗಿದೆ.

No. 630. ನೀಲಮ್ಮನ ವಚನ.

NĪLAMMANA VACANA.

Substance, palm-leaf. Size, $8\frac{3}{16}\times1\frac{3}{8}$ inches. Pages, 5. Lines, 5 on a page. Charater, Kannada. Condition, much injured. Appearance, old. Mode of writing, good but not free from mistakes.

Begins on fol 20*a* of the manuscript described under No. 615 ante.

Complete in 5 stanzas.

A eulogy on Nīlamma, wife of Basava.

Name of the author is not given.

Beginning :—

ವಾ. ಷ. ॥

ಶರಣು ಶರಣು ಹಿತಮಿತ್ರ ಹತಕಾಲಜಿತ್ರ ನಿಮಗೆ ।
ಶರಣು ಶರಣೆ(ನು)ವಾಗ ನಿಮ್ಮ ಮೃದು ಪದಗಳಗೆ ।
ಗಣಂಮ ದುರಿತವನು ಕಳೆವೆನೆನ್ನಯ ಜಗದ್ಗುರು ಬಸವ ರಾಜನರಸಿ ॥ ॥
ಪತ್ರಜಾತನ ಶಿರಃಪತ್ರ ಕರಪಾತ್ರನಂ ।
ಪತ್ರಗಮನನ ನಯನಮಿತ್ರ ವಿಕಸನ ಭಾನು ।
ಪತ್ರ ವೈರಿಯು ಪತ್ರಮಿತ್ರಾಗ್ನಿ . . . . ಗನೇತ್ರನಾಗಿರುತಿರ್ಪನಾ ॥
ಪತ್ರ ಶತ ಪತ್ರ ಚಾಲೋ . . ತ ।
ಪತ್ರ ನಯನನಿ . . ಮಿತ್ರನ ಸದ್ಭಕ್ತ ।
ಗೋತ್ರ ಸಂಭವ ಲತಾಲನಿತ್ರನ ಸದ್ಧರ್ಮ ಗುರು . ಬಸವೇಶನರಸಿ ॥ ॥

* * * * *

End :—

ಉಪದಂ ಗಳಸುಬರೆ ದೋದಿದಡೆ ಭಕ್ತಿಯಂ ।
ತಾಪ ದುಸ್ಸಂಗ ದುಸ್ಸ್ವಪ್ನಂಗಳಳವು . . ಬಸವೇಶನಾ ॥
ವ್ಯಾಪಳೆನಿಸುವ ನೀಲ ಲೋಚನೆಯ ಸ್ತೋತ್ರಮಂ ।
ಪಾಪಕೋಪ ವಿರಹಿತ ದುಸ್ಸಂಗ ದುಷ್ಟದು- ।
ಶ್ಯಾಪಲರು ಭಸಿ ಭಕ್ತಿಯ ರಸಂ ತುಂಬಿರ್ದ ಕೂಪಳೆನಿಸು ವಶಾಂತೆಯಾ ।

ಶ.ಪಿ.—

ಸಮಗ್ರ. ಅತ್ಯಂತ ಶಿಥಿಲ. ಉತ್ತಮವಾದ ಲಿಪಿ. ಗ್ರಂಥ ಪಾತಗಳವೆ. ತಪ್ಪು-ಗಳವೆ.—

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ. ಇದರಲ್ಲಿ ಐದು ಪದ್ಯಗಳವೆ. ಪದ್ಯಗಳು ಉತ್ತಮ ರೀತಿಯವುಗಳಾಗಿರುವುವು. ಈ ಗ್ರಂಥವು ಬಸವನರಸಿಯಾದ (ಬಸವನ ಹೆಂಡತಿ-ಯಾದ) ನೀಲಮ್ಮನ ಸ್ತುತಿರೂಪವಾಗಿದೆ. ಕವಿಯು ತನ್ನ ಹೆಸರನ್ನು ಕೊಡಲಿಲ್ಲ.

No. 631. ಪಂಚಾಕ್ಷರೀ ರಗಳೆ. PAÑCĀKṢARĪ RAGAḶE.

Substance, palm-leaf. Size, 5⅛ × 1 inches. Pages, 7. Lines, 5 on a page. Character, Kannada. Condition, much injured. Appearance, old. Mode of writing, bad and not free from mistakes.

Begins on fol. 23*a* of the manuscript described under No. 465 ante.

Incomplete.

Written on the sacredness of the five-syllabled prayer Namaśśivāya. The name of the author is not known.

Beginning :—

ಉತ್ಸಾಹರಗಳೆ :—

ಶ್ರೀಮದಮರರಾಜರಾಜ ಸೋಮಧರ ನಮಶ್ಶಿವಾಯ ।
ಭೀಮ ಭರ್ಗ ವಾಮದೇವ ಕಾಮಹರನಮಶ್ಶಿವಾಯ ॥೧॥
ಹರಿಯಜರ್ಗೆ ಯೋಗಿಗಳ್ಗೆ ವರದಪಾದ ನಮಶ್ಶಿವಾಯ ।
ಕರಿಮುಖಂಗೆ ಷಣ್ಮುಖಂಗೆ ನಿರುತ ಜಪ ನಮಶ್ಶಿವಾಯ ॥೨॥
ವಾಣಿಹಸ್ತ ಜಪದ ಮಾಲೆ ವರವಿದ್ಯೆ ನಮಶ್ಶಿವಾಯ ।
ಬಾಣದೈತ್ಯ ಭಜಿಸಿ ಮುಕ್ತ ಕರವಿದೆನ್ನ ನಮಶ್ಶಿವಾಯ ॥೩॥

* * * *

End :—

ಸಕಲಸುಖವ ಇಹಪರಕ್ಕೆ ಕೊಡುವುದಿದೆ ನಮಶ್ಶಿವಾಯ ।
ಭಕ್ತಿಮುಕ್ತಿಯುಕ್ತಿಯೀವ ಮಂತ್ರವಿದೆ ನಮಶ್ಶಿವಾಯ ॥
ಧ್ಯಾನಮಾನ ಜಪದಮೇಲೆ ತಂತ್ರವಿದೆ ನಮಶ್ಶಿವಾಯ ।
ಜ್ಞಾನದಿಂದ ಜಪಿಸು ತಿರ್ಪವಕ್ಷರಂ ನಮಶ್ಶಿವಾಯ ॥

. . . .

ಶಿಕ್ಷೆಯಿದೆ ನಮಶ್ಶಿವಾಯ ಮೋಕ್ಷವಿದೆ ನಮಶ್ಶಿವಾಯ ।
ಜಯ ಜಯ ನಮಸ್ತೇ ನಮಸ್ತೇ ನಮಃ ॥

ಕಂದ :—

Colophon :—

ಪಂಚಾಕ್ಷರೀದಗಳ್ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ. ಶ್ರೀ.

(ವಿ-ವಿ.)—

ಅಸಮಾಗ್ರ. ಅತಿ ಶಿಥಿಲ. ಲಿಪಿಯು ನೆಟ್ಟಗಿಲ್ಲ. ತಪ್ಪಿದೆ.

ಪಂಚಾಕ್ಷರೀ ಸ್ತುತಿರೂಪವಾದ ಈ ಗ್ರಂಥವು ಉತ್ಸಾಹರಗಳೆಯಲ್ಲಿ ಬರೆದಿದೆ. ಈ ಪುಸ್ತಕದಿಂದ ಕವಿಯ ವಿಷಯವಾಗಿ ಯಾವ ವಿಷಯವನ್ನೂ ತಿಳಿದುಕೊಳ್ಳಲೆಡೆಯಿಲ್ಲ.

No **632**. ಪಶ್ಚಿಮರಂಗಧಾಮ ಶತಕ.

PAŚCIMARAṄGADHĀMA ŚATAKA.

Substance, palm leaf. Size, 14¾ × 1⅝ inches. Pages, 26. Lines, 6 on a page. Character, Kannaḍa. Condition, much injured. Appearance, old. Mode of writing, good but not free from mistakes.

Begins on fol. 33*a* of the manuscript described under No. 283 ante.

Incomplete.

A eulogy in 100 stanzas on God Paścimaraṅganāyaka. Two more stanzas are written regarding the author, Lakṣmayya son of Raṅganatha. He seems to have lived in about 1700 A.D.

Beginning :—

ಶ್ರೀಧರ ! ಶಂಖಚಕ್ರಧರ ! ದಿವ್ಯಗದಾಧರ ! ಶಾರ್ಙ್ಗವೈಜಯಂ- ।
ತೀಧರ ! ಸ್ವರ್ಣಚೇಲಧರ ! ರಂಜಿಪ ಕೌಸ್ತುಭರತ್ನಕಂಠಮಾ-॥
ಲಾಧರ ! ಸತ್ಕಿರೀಟಧರ ! ಭಕ್ತಜನೋದ್ಧರ ! ಕೋಟಿಸೂರ್ಯ ಶೋ-।
ಭಾಧರ ! ರಕ್ಷಿಸೊ ! ಶರಣುವೊಕ್ಕೆನು ಪಶ್ಚಿಮ ರಂಗನಾಯಕಾ ! ॥
ಕ್ಷೀರಸಮುದ್ರಮಧ್ಯದ ನಿಕೇತನದೊಳ್ಫಣಿಶಾಯಿಯಾಗಿ ಪ-।
ದ್ಮಾರಮಣೀಸಮೇಳದೊಡನಿರ್ದು ಮಬ್ಜಜಶೂಲಪಾಣಿವೃಂ- ;
ದಾರಕವೃಂದ ಮೈದೆ ಜಯ ! ಜೀಯೆನೆ ಕೇಳುತಮಿರ್ದ್ದ ಭಕ್ತಸಂ-।
ಸಾರಿಕ ! ರಕ್ಷಿಸಾ ! ಶರಣುವೊಕ್ಕೆನು ಪಶ್ಚಿಮರಂಗನಾಯಕಾ ! ॥

* * * *

ಕ್ರಿಮಿಗಳಗಾಲಯಂ ಪ್ರಣದ ಬೀಡು ಜ್ವರಂಗಳಿಗಾಶ್ರಯಸ್ಥಲಾ ।
ಕ್ರಮಗಳಗಿಕ್ಕೆ ವಾತಕಫಪಿತ್ತಕೆಯಾಗರ ಮೀಶರೀರಮಿಂ- ।
ದಮದು ಮಹೋಗ್ರದುಃಖಕೆ ನಿವಾಸಮಿದಂ ನೆರೆ ಮಾಣಿಸುತ್ತಲೆ-।
ನ್ನುಮನುರೆ ರಕ್ಷಿಸಾ ! ಶರಣುವೊಕ್ಕೆನು ಪಶ್ಚಿಮ ರಂಗನಾಯಕಾ !
ಕಾಲನೆನಿಪ್ಪ ದುಷ್ಟಬಿಯದಂ ನರರೆಂಬ ಮೃಗಂಗಳಂ ಕೊಲಲ್ ।
ಜಾಲಮನೈದೆನಿರ್ಮಿಸಿದನೋಯನೆ ತೋರುವವಾತಪಿತ್ತ ಹೃ-॥
ಚ್ಛೂಲವಿಸೂಚಿಕಾದಿರುಜೆಯೊಳ್ ಬಿಳ್ದದಂದದೊಳೊಲ್ದು ಸತ್ಕೃಪಾ ।
ಲೋಲಕ ! ರಕ್ಷಿಸು ! ಶರಣುವೊಕ್ಕೆನು ಪಶ್ಚಿಮ ರಂಗನಾಯಕಾ ! ॥

* * * *

End :—

ಶ್ರೀಮದ . . . . ಹಿತಪಾಗಿರೆ ಪಶ್ಚಿಮ ರಂಗಧಾಮನು-
ದ್ದಾಮತೆವೆತ್ತ ಕೀರ್ತನಮುಮಂ ಶತಕಾಖ್ಯದೆ ಪೇಳೆನುತ್ತೆ ಸು-।
ಪ್ರೇಮದಿ ಧಾರಣೀವಧು . . . . ಂತಿದಂ।
ಭೂಮಿಯೊಳುಳ್ಳ ಸಜ್ಜನರು ತಿದ್ದಿಯೆ ಲಾಲಿಪುದೊಲ್ದು ಸಂತತಂ॥
ಶ್ರೀಮತ್ಪಶ್ಚಿಮರಂಗನಾಥ ಶತಕಾಖ್ಯಸ್ತುತ್ಯಮಂ ಭೂಸುರ।
ಸ್ತೋಮ . . ಶ್ರೀರಂಗನಾಥಾತ್ಮಜಂ।
ಪ್ರೇಮೋತ್ಸಾಹದೆ ಲಕ್ಷ್ಮಯಾಖ್ಯಕವಿ ಪೇಳ್ದಂ ಪ್ರೀತಿಯಿಂದಿಂತಿದಂ।
ಸೋಮಾರ್ಕಾವನಿ ಯಿರ್ಪಿನಂ ಪ್ರಕಟಿಸಲ್ವಿಶ್ವಂಭರಾ ಚಕ್ರ . . . ॥

(ವಿ.ವಿ.)—

ಅಸಮಗ್ರ. ಇದರಲ್ಲಿ ೧ ರಿಂದ ೪೫ ಪದ್ಯಗಳು ಸಂಪೂರ್ಣಗಳಾಗಿಯೂ ಮಿಕ್ಕ ೫೭ ಅಸಂಪೂರ್ಣಗಳಾಗಿಯೂ ಇರುವುವು. ಬಹಳ ಶಿಥಿಲ. ಉತ್ತಮವಾದ ಲಿಪಿ. ಅಲ್ಪಸ್ವಲ್ಪ ತಪ್ಪುಗಳಿರುವುವು. ಪಶ್ಚಿಮ ರಂಗನಾಯಕಸ್ವಾಮಿಯವರ ಸ್ತುತಿರೂಪವಾದ ಈ ಗ್ರಂಥವು ವೃತ್ತಗಳಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ "ರಕ್ಷಿಸಾ! ಶರಣಾಪ್ನೊಕ್ಕೆನು ಪಶ್ಚಿಮರಂಗನಾಯಕಾ!" ಎಂದಂತ್ಯವಾಗುವ ೧೦೦ ಪದ್ಯಗಳೂ ಕವಿಗೆ ಸಂಬಂಧಿಸಿದ ೨ ಪದ್ಯಗಳೂ ಸೇರಿ ಒಟ್ಟು ೧೦೨ ಪದ್ಯಗಳಿವೆ. ಇದನ್ನು ಬರೆದ ಕವಿಯು ಲಕ್ಷ್ಮಯ ಅಥವಾ ಲಕ್ಷ್ಮಯ್ಯನೆಂಬುವನು. ಈತನು ರಂಗನಾಥನ ಮಗನು. ಇವನ ಕಾಲವು ಸುಮಾರು ಕ್ರಿ.ಶ. ೧೭೦೦ ಎಂದು ಕರ್ಣಾಟಕ ಕವಿಚರಿತೆಯಲ್ಲಿ (ಸಂಪುಟ ೨, ಪುಟ ೫೩೫) ಬರೆದಿದೆ.

No. 633. ಪಶ್ಚಿಮರಂಗಧಾಮ ಶತಕ.
"PAŚCIMARAṄGADHĀMA ŚATAKA."

Substance, paper. Size, $10\frac{5}{16} \times 9\frac{7}{16}$ inches. Pages, 16. Lines, 20 on a page. Character, Kannaḍa. Condition, fair. Appearance, new. Mode of writing, not bad and not free from mistakes.

Begins on fol. 15*b* of the manuscript described under No. 284 ante.

Incomplete.

Same work as the above.

(ವಿ.ವಿ.)—

ಅಸಮಗ್ರ. ಗ್ರಂಥಪಾತಕ್ಕೆ ಮಿತಿಯಿಲ್ಲ. ಪ್ರತಿಯು ಚೆನ್ನಾಗಿದೆ. ಲಿಪಿಯು ಶುದ್ಧವಾಗಿಲ್ಲ. ತಪ್ಪಿದೆ. ಇದು ಹಿಂದೆ ವಿವರಿಸಿದ (ಮಾತೃಕೆಯ) ಗ್ರಂಥದ ಪ್ರತಿಕೆಯಾಗಿದೆ.

ಸಾಂಗತ್ಯ :—

No. 634. ಪಶ್ಚಿಮರಂಗ ಸಾಂಗತ್ಯ-
PAŚCIMARAṄGA SĀṄGATYA

Substance, palm-leaf. Size, $11\frac{13}{16} \times 1\frac{1}{16}$ inches. Pages, 38. Lines, 4 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Begins on fol. 1*a* of the manuscript described under No. 257 ante.

Incomplete.

Similar to the above by Cikkupādhyāya.

Beginning : –

ಸಾಂಗತ್ಯ—

ಶ್ರೀರಮಣೀಶ . . . ।
ನಚ್ಚಿಂತಾ ನರಾ ? ॥
ವಾರಿಜನಾಭನಾದ ರಂಗೇಶನ ।
ಚಾರು ಚ(ರಣಕೆ ನಮಿಪೆನು)
ವಾರಿಜನೇತ್ರನ ನೀರದಗಾತ್ರನ ।
ಮಾರಜನಕನ ಮಾಧವನ ॥
ಸಾರಿದವರ ಸಲಹುವರ . . . ।
. . . . . ತ್ರ? ॥

* * *

ಕಾಡುವಲ್ಲಿ ಕೊಂಬಲ್ಲಿ . . . ಕಾಯ್ವಲ್ಲಿ ।
ಯೆಡರುಬಂದಲ್ಲಿಷ್ಟದಲ್ಲಿ ।
ಮೃಡಮುಖ್ಯರೊಡೆಯ ಶ್ರೀಹರಿಯಲ್ಲದಿಲ್ಲೊಂದು ।
ಮುಡಿಗಿಕ್ಕಿದಪೆನಾಂಪರುಂಟೆ ? ॥
ಮೃಡಪರಮೇಷ್ಠ್ಯಗ್ರಾದಿಯಾಗಿರ್ದರ ।
ಕಡೆಗಣ್ಣಿಂ ಕಟಾಕ್ಷಿಸದ ॥
ಒಡತಿಯೊಡೆಯ ನಚ್ಯುತನಲ್ಲದಿಲ್ಲೊಂದು ।
ಮುಡಿಗಿಕ್ಕಿದಪೆನಾಂಪರುಂಟೆ ? ॥

* * *

End :—

ಇಂತೀ ವಿಷ್ಣುವಿಗೆರಗದೆಮಿಕ್ಕಾದ ।
ಕಂತೆ[ಯು] ಬೊಂತೆಯ ದೈವಗಳಿಗೆ ।
ಎಂತೆರಗುವರದರಿಂದೇನು ಫಲ ? ಲಕ್ಷ್ಮೀ-
ಕಾಂತನ ಸೇವೆಯೆ ಸುಖವು ॥

ಚಿಕದೇವರಾಯ ದಯಾನ್ವಿತನೆನಿಸುವ ।
ಚಿಕುಪಾಧ್ಯಾಯ ನಿರ್ಮಿತದ ।
ಪ್ರಕಟ ಶ್ರೀಪತಿಯ ಸ್ತುತಿಯ ಸಾಂಗತ್ಯ ಕ-।
ತಕ ವಿದು ಬುಧರ್ಗೆ ಸುಶ್ರಾವ್ಯ ॥

(ವಿ-ವಿ.)—

ಅಸಮಗ್ರ. ಕೆಲವು ಓಲೆಗಳು ಮುರಿದುಹೋಗಿವೆ. ಅತ್ಯಂತ ಶಿಥಿಲ. ಲಿಪಿಯು ಅಷ್ಟು ನಾಜೂಕಾಗಿಲ್ಲ. ತಪ್ಪಿದೆ. ಇದು ಸಾಂಗತ್ಯರೂಪವಾಗಿದೆ. ಇದರಲ್ಲಿ ಪಶ್ಚಿಮ ರಂಗ ಸ್ವಾಮಿಯವರ ಸ್ತೋತ್ರರೂಪವಾದ ೧೦೧ ಪದ್ಯಗಳಿರಬಹುದೆಂದೂಹಿಸಲಿಡೆಯದೆ. ಆದರೆ ನಮಗೆ ಮಾತ್ರ ಪ್ರತಿ ತೆಗೆಯುವಾಗ ಹಲವಂಶವನ್ನು ಕಳೆದುಕೊಂಡ ೯೮ ಪದ್ಯಗಳು ದೊರಕಿವೆ. ಇದಕ್ಕೆ ಗ್ರಂಥವು ಅತ್ಯಂತ ಶಿಥಿಲವಾಗಿರುವುದೇ ಕಾರಣವಾಗಿರುವುದು. ಇದನ್ನು ಬರೆದ ಕವಿಯು ಚಿಕುಪಾಧ್ಯಾಯನು. ಇವನ ವಿಷಯವನ್ನು ನಂ. ೬೧೯ ನ್ನು ನೋಡಿ ತಿಳಿದು ಕೊಳ್ಳುವುದು.

No. 635. ಪಶ್ಚಿಮರಂಗ ಸಾಂಗತ್ಯ

PAŚCIMARAṄGASĀṄGATYA

Substance, paper. Size, $10\frac{7}{16}$ × 14 inches. Pages 20. Lines, 20 on a page. Character, Kannaḍa. Condition, fair. Appearance, new. Mode of writing, not bad and not free from mistakes.

Incomplete.

Same work as the above.

(ವಿ-ವಿ.)—

ಅಸಮಗ್ರ. ಗ್ರಂಥಪಾತವಿದೆ. ಪ್ರತಿಯು ನೆಟ್ಟಗಿದೆ. ಬರೆವಣಿಗೆಯುಷ್ಟು ಹೃದಯಂಗಮ ವಾಗಿಲ್ಲ. ತಪ್ಪಿದೆ.

ಇದಕ್ಕೆ ಹಿಂದೆ ವರ್ಣಿಸಿದ ಗ್ರಂಥವು ಮಾತೃಕೆಯಾಗಿದೆ.

No. 636. ಪಾರ್ವತೀ ಸ್ತುತಿ.

PĀRVATĪSTUTI.

Substance, Śrītāla. Size, $8\frac{5}{16}$ × $1\frac{7}{16}$ inches. Pages, 2. Lines 6 on a page. Character, Kannaḍa. Condition, slightly injured. Appearance, old Mode of writing, good and free from mistakes.

Begins on fol. 7*a*. of the manuscript described under No. 615 ante.

Complete.

Six songs written in praise of Pārvati. The name of the author is not known.

Beginning :—

ಪಾಲಿಸೆನ್ನ ಪದುಳ ವೆರಸಿ, ಪರಶಿವನರಸಿ,
ಮೋಲೆನಿಪ ಸುಗುಣಾಸಂ । ಪನ್ನೆ ಶರ್ವಾಣೀ ॥ ಪಲ್ಲ ॥
ಜರೆ ಮರಣವನು ಜಯಿಸು । ವಮೃತಸೇವನೆಯುಳ್ಳ ।
ಹರಿಯಜಾದಿಗಳ ಬಲ- । ವನು ಪರಿಭವಿಸುವಾ ।
ಗರಳವನುನಲಿದೂಡೆ । ಹರನಳುಕದುಳಿದ ಭಾ- ।
ಸುರತೆ ನಿನ್ನೈದೆದಾ । ಲಿಯ ಮಹಿಮೆ ಗಿರಿಜೇ- ॥

End :—

ಜಡೆಗಟ್ಟಿ ತಿರಿದುಂಡು ಮರುಳನೊಡನಾಡಿ ಮೈ- ।
ದೊಡದು ಬೂದಿಯನು ಸುಡುಗಾಡೊಳಾಡಿ ।
ಜಡರೀತಿ ವಿಡಿದರುದ್ರನಿಗೆ ನೀನೊಲಿದು ಕೈ- ।
ಪಿಡಿದು ಪಾವನ ಚರಿತ ನೆನಿಸಿದೆ ಭವಾನಿ ॥

(ವಿ-ವಿ.)—

ಸಮಗ್ರ. ಅಲ್ಪ ಶಿಥಿಲ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳಿಲ್ಲ.

ಇದು ಹಾಡಿನ ರೂಪದಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ಆರು ಹಾಡುಗಳಿವೆ. ಹಾಡುಗಳು ಲಕ್ಷಣ ಬದ್ಧಗಳಾಗಿಯೂ ಅರ್ಥಪುಷ್ಟಿಯುಳ್ಳವುಗಳಾಗಿಯೂ ಭಕ್ತಿರಸಸ್ಯಂದಿಗಳಾಗಿಯೂ ಇರುವುವು. ಪ್ರತಿಯೊಂದು ಹಾಡೂ ಶಿವೆಯ ಸ್ತುತಿರೂಪವಾಗಿದೆ. ಕವಿಯಾರೋ ತಿಳಿಯದು.

No. **637**. ಭಿಕ್ಷಾಚರ್ಯೆಯ ಹಾಡು.

BHIKṢĀCARYEYA HĀDU.

Substance, Śrītāla. Size, $8\frac{5}{16} \times 1\frac{7}{16}$ inches. Pages 2. Lines, 5 on a page. Character, Kannaḍa. Condition, slightly injured. Appearance, old. Mode of writing good, but not free from mistakes.

Begins on fol. 5*b*. of the manuscript described under No. 615 ante.

Complete.

Contains only three songs describing God Śiva in the form of a beggar. The name of the author is not known.

Beginning :—

ರಾಗ ತಿಲಕ ಕಾಂಬೋದಿ.

ಭಿಕ್ಷಕ್ಕೆ ಬಂದ ಕಾಣೆ । ಬಲುಬೆಡಗಿನ ಜಾಣೆ ।
ಪಕ್ಷಿವಾಹನ ಪ್ರಿಯ । ಪರಮೇಶ ತಾನಾದ । ರಕ್ಷಕ ತೊಂ-
ಡ[ದೈ](ದ)ಯ್ಯಾ ॥ ಪಲ್ಲ ॥
ಇಳವಿಟ್ಟ ಜಡೆತೊಟ್ಟ । ಪೊಳೆವ ರುದ್ರಾಕ್ಷಿಯ ।
[ತಳೆದ](ತೊ)ಳೆಪ ಭಸ್ಮದೊಡಲಿನ ಚೆಲುವಾಂತ ।
ತೆಳುಗಾವಿಯ ದೋತ್ರ । ಅಳವಟ್ಟ ಬೆಮರ್ವಾಸ । ಆದಿ

ಮೂರ್ತಿ ವಿಲಾಸ । ಸುಳದನು ಸೊಂಪಿನಿಂ । ಪಿನಮುಹಿವು
ಗಳಂದ । ಫಳಲನೆ ಸಿದ್ಧಲಿಂಗಾ ॥

* • * * *

End:—

ಪೊಡವಿಯೊಳಗಣಿತ । ವಡೆದಮುಹಿಮೆಯಿಂದ ।
ಕೊಡುತ ಕುಮಾರಗೆ । ಕರುಣದಿ ವರವನು ನಡೆಮುನಗುತ
ಬಂದಾ । ಯೆಡೆಯೂರ ನೆಲೆವಾಸ । ಯತಿರಾಯ ಸಿದ್ಧೇಶಾ
ಮೃಡರೂಪ ಮುನಿ ಜನ ॥ ನತಪಾದಪದ್ಮ ಯಾ- । ನ್ನೊಡೆಯ
ನು ತೋಂಟದಾರ್ಯಾ ॥

(ವಿ-ವಿ.)—

ಸಮಗ್ರ. ಸ್ವಲ್ಪ ಶಿಥಿಲ. ಲಿಪಿ ಚೆನ್ನಾಗಿದೆ. ತಪ್ಪುಗಳವೆ.

ಇದು ಹಾಡಿನಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ಮೂರು ಹಾಡುಗಳವೆ. ಇದು, ತೋಂಟದಾರ್ಯನು (ತೋಂಟದ ಸಿದ್ಧೇಶ್ವರನು) ಮಾಡಿದ ಭಿಕ್ಷಾಟನವನ್ನು ಭೋಧಿಸುತ್ತದೆ. ಕವಿತೆಯು ಚೆನ್ನಾಗಿದೆ. ಕವಿಯು ತನ್ನ ಹೆಸರನ್ನು ಕೊಟ್ಟಿಲ್ಲ.

No. 638. ಭೀಷ್ಮ ಸ್ತುತಿ.

BHIŚMA STUTI.

Substance, palm-leaf. Size, 6 × $1\frac{7}{8}$ inches. **Pages**, 80. Lines, 3 on a page. Character, Kannaḍa. Condition, badly injured. Appearance, old. Mode of writing, not bad and not free from mistakes.

Begins on fol. 17b. The other works herein are :—(1) Lakṣmī stōtra 1a. (2) Laksmīstuti 59a.

Incomplete.

Bhiṣma's eulogy on Śri Kriṣṇa as found in Mahābhārata. The author is Jakkabhūpāla, son of Juñjarāja.

Beginning :—

ವೇದಾಂತದಲ್ಲಿ ನಿರ್ಣಯವಾದ ಸದಾನಂದ ಸದ್ಗುಣ ನಿರ್ಗುಣದೊಳು ಸಂಪಾದಿಸಿದ ವಿಮಲ ಹಂಮುಹಿಮೋದಧಿಯಿಂ ಭೀಷ್ಮನತಿಶಯಿಂ ಕೀರ್ತಿಸಿದಂ. ಅದೆಂತೆಂದೊಡೆ :—ಎಲೆ ವೈಶಂಪಾಯನ ಮುನೀಶ್ವರಾ ! ಭೀಷ್ಮಸ್ತುತಿಯೊಳಗೆ ಕೃಷ್ಣಾವತಾರಮಂ ಕೇಳ್ದು ಧನ್ಯನಾದೆನು. ಮುಂದೆ ನಡೆದ ಭೀಷ್ಮಸ್ತುತಿಯನು ಕರುಣಿಸಬೇಕೆಂಬು ಬಿನ್ನವಿಸಿದ ಜನಮೇಜಯಂಗೆ ವೈಶಂಪಾಯನ ನಿಂತೆಂದನು. ಎಲೆ ರಾಯ ! ಭೀಷ್ಮರು ಧರ್ಮರಾಯನನ್ನು ನೋಡಿ, "ಈತನೆ ಸಗುಣ ನಿರ್ಗುಣಸ್ವರೂಪಂಗಳಂ ಪೇಳ್ದಪೆನೆಂತೆಂದೊಡೆ:—ಜಗವೆಲ್ಲವು ತಾನೆ ಆಗಿಹನು. ತನ್ನೊಳಗೆ ಜಗಂಗಳಂ ತೋರುವನು. ಅದರೊಳಗೆ ಅಧಿಕಾರಂಗಳ ಕಲ್ಪಿಸಿ ಜಗವನಾಡಿಸಿ ನೋಡಿ ನೋಡಿ ನಗುತ್ತಿಹನು."

* * * *

End :—

ಮಗಧನಂ ಕಾಳಗಮಂ ಬೇಡಿ ತನ್ನ ಕೈಯಲಾಗದೆ ಭೀಮಸೇನನಿಂ ಕೊಲಿಸಿದ ಕಪಟ ನಾಟಕನ ಹುಸಿ, ನುಸುಳು, ಟಕ್ಕು, ವಂಚನೆ, ಮಾಯಾ ಪ್ರಯೋಗದಿಂದ ಕುಶಲನಾದ ಕೃಷ್ಣನಂಕೊಂಡಾಡಿ ಸಭೆಯೊಳಗೆ ನಗೆಯು ಬಗೆಯಂ ಪಸರಿಸಿದೆ ಎಂದು ಶಿಶುಪಾಲಂ ಕೃಷ್ಣರಾಯನಂ ಜರೆದು ನಿಂದಿಸಿದ ನೆಂಬಂಥಾ ವೃತ್ತಾಂತಮಂ ಜನಮೇಜಯಂಗೆ * * * ಕಥೆಯಾ ಸರ್ವತ್ರ ಜನಕ್ಕೆ . . . ವಚನರಚನೆಯಂ ಜುಂಜುರಾಜ . . . ಧರ್ಮೋದ್ಧಾರ . ಬಿರುದ ಬಿ . , . ಕದನ ಪ್ರಚಂಡನು . . ನಾಕಾಂತಂ ಸಕಲ . . . ಭೂಪಾಲ ವಿರಚಿತ . . ಮಹಾ ಭಾರತದ . . ಲಾಡಂಬರವರ್ಣನ . . ನಭೂಮಿದಾನ . . ದ ಶಾಸ್ತ್ರಂಗಳನು ಓದಿದ ಫಲವಹುದೀ . . . ದರದಿಂ ಕೇಳ್ದವರ್ಗೆ ಭಾರತಕಥೆಯಂ ಮಂಗಳ ಮಹಾ ಶ್ರೀ . .

(ವಿ-ವಿ.)—

ಅಸಮಗ್ರ ಬಹಳ ಶಿಥಿಲ. ಓಲೆಗಳು ಮುರಿದುಹೋಗಿವೆ. ಲಿಪಿಯು ಸಾಮಾನ್ಯವಾಗಿದೆ. ತಪ್ಪಿದೆ.

ಇದು ಗದ್ಯಗ್ರಂಥ. ಇದರಲ್ಲಿ ಮಹಾ ಭಾರತಾಂತರ್ಗತ ರಾಜಸೂಯಯಾಗದಲ್ಲಿ ಭೀಷ್ಮ ವಿರಚಿತ ಶ್ರೀಕೃಷ್ಣ ಸ್ತುತಿಯು ವಿವರಿಸಲ್ಪಟ್ಟಿದೆ. ಇದನ್ನು ಬರೆದ ಕವಿಯು ಜುಂಜು ರಾಜಾತ್ಮನಾದ ಜಕ್ಕಭೂಪಾಲನು. ಇವನ ಚರಿತೆಯನ್ನು ೧೧೪ ನೆಯ ನಂಬರಿನಲ್ಲಿ ನೋಡಿ ತಿಳಿದುಕೊಳ್ಳುವುದು.

No. 639. ಭೀಷ್ಮಸ್ತುತಿ.

BHĪṢMASTUTI.

Substance, paper. Size, $10\frac{7}{16}$ × $9\frac{1}{4}$ inches. Pages, 10. Lines, 20 on a page. Character, Kannaḍa. Condition, fair. Appearance, new. Mode of writing, not bad and not free from mistakes.

Begins on fol. 3*b*. The other works herein are : (1) Laksmistōtra 1*a*. (2) Lakṣmīstuti 8*b*.

Incomplete.

Same work as the above.

(ವಿ-ವಿ.) —

ಅಸಮಗ್ರ. ಪ್ರತಿಯು ಚೆನ್ನಾಗಿದೆ. ಗ್ರಂಥಪಾತವಿದೆ. ಬರೆವಣಿಗೆಯು ಸಾಮಾನ್ಯವಾಗಿದೆ. ತಪ್ಪಿದೆ.

ಇದು ಹಿಂದೆ ವಿವರಿಸಿದ ಗ್ರಂಥದ ಪ್ರತಿಕ್ರಿಯೆಯಾಗಿದೆ.

No. 640. ಮಲ್ಲಿಕಾ ಮಾಲೆ.

MALLIKĀ MĀLE.

Substance, palm-leaf. Size, $7\frac{1}{32}$ × $1\frac{11}{16}$ inches. Pages, 7. Lines, 4 on a page. Character, Kannaḍa. Condition, slightly injured. Mode of writing, good but not free from mistakes.

Begins on fol. 43*b* of the manuscript described under No. 443 ante.

Incomplete.

A fragment containing only 10 stanzas of a work written in praise of Śiva and the method of worshipping him mentally. The name of the author is not known.

Beginning :—

ಇಂದ್ರ ಚಂದ್ರ ದಿನೇಂದ್ರ ಸರಸಿಜಸ್ಕಂದ ಮೊದಲಾದುಪೇಂದ್ರರು ।
ಸಿಂಧುನಂದ ಮುನೀಂದ್ರ ನಿರ್ಜರ ವೃಂದವೈದಿಗಣೇಂದ್ರರು ।
ಚಂದ ಚಂದದ ರುದ್ರ ಪ್ರಮಥರು ಕುಂದದೋಲೈಸಿ ಕೊಂಡಿಹ ।
ಸಾಂದ್ರ ಮೂರ್ತಿಫಣೇಂದ್ರ ಕಂಕಣ ಚಂದ್ರ ಮೌಳಿಯನರ್ಚಿಪೆಂ ॥ ೧ ॥
ತುಂಗೆ ಗಂಗೆ ಸಮಸ್ತ ನದಿಗಳ ಪುಂಗವನು ಪಡೆದಂಗೆಯೂ ।
ಹಿಂಗದೆಲ್ಲ ಜಗತ್ತ ಪಾಲಿಸು ತಿಪ್ಪ ಕರುಣಾಪಾಂಗೆಯೂ ॥
ಅಂಗಸೋಂಕಲು ಸರ್ವರಘವನು ಭಂಗಿಸುವ ಪಾವನಾಂಗಿಯೂ ।
ಹೊಂಗಿ ಹೊಗಳುತ್ತ ಲಿಂಗದೇವಗೆ ತಂದು ಮಜ್ಜನಗೈದಪೆಂ ॥

* * * *

ಅಳಗಳೆಲ್ಲವು ತುಳುಗಿ ಚುಂಬಿಸಿ ಬಳಸಿ ಬಿಟ್ಟೈಊಳಲ್ಲದಾ ।
ನಳನಮಿತ್ರನ ಕಿರಣದುಬ್ಬಿಗೆ ಕಳಲಿ ಕಂದಿದುದಲ್ಲದಾ ॥
ಸುಳವಪವನಗೆ ತಂಪಸೂಸದೆ ಕ ಬತ್ನಲೆಯಲ್ಲದಾ ।
ಇಳೆಯೊಳುಳ್ಳ ಸುಗಂಧಪುಷ್ಪವ (ನ) ಳಕ ನೇತ್ರನಿಗರ್ಚಿಪೆಂ ॥

End :—

ಪೂಗಿಫಲ ದೊಳಗಾಯಿ ಪನ್ನಿಯ ನಾದೊಡದ ಕಸ್ತೂರಿಯ
ಬಾಗೆಯೊಳು ಪೊರೆಯೊತ್ತಿ ಕರ್ಪೂರ ಯೋಗಕೊಡಿದ ಚೂರ್ಣಮಂ ।
ನಾಗವಲ್ಲಿಯ ಶುಭ್ರಪರ್ಣವನನುವಾಗಿ ಶೋಧಿಸಿ ಭಕ್ತಿಯಿಂ ॥
ಲಾಗೆನಿಪ ತಾಂಬೂಲವಸ್ತುವ ನಾಗಭೂಷಣಗಿತ್ತಪೆಂ ॥
ಭಾಷಿಪಡೆ ಕರುಣಾದಿಗುಣಂಗಳ . .

(ವಿ.ವಿ)—

ಅಸಮಗ್ರ. ಹತ್ತು ಪದ್ಯಗಳವೆ. ಅಲ್ಪ ಶಿಥಿಲ. ಬರೆವಣಿಗೆಯು ಚೆನ್ನಾಗಿದೆ. ತಪ್ಪಿದೆ.

ಇದು ಪದ್ಯಗ್ರಂಥವಾಗಿದೆ. ಇದರಲ್ಲಿ ಶಿವಮಾನಸಿಕಪೂಜೆಯೂ ಸ್ತುತಿಯೂ ಪ್ರತಿಪಾದ್ಯವಿಷಯಗಳಾಗಿರುವುವು. ಈ ಕೃತಿಯು ಬರೇ ಹತ್ತು ಪದ್ಯಗಳುಳ್ಳುದಾದುದರಿಂದ ಕವಿ ವಿಷಯವಾಗಿ ಯಾವ ಅಂಶವನ್ನೂ ಇದರಿಂದ ತಿಳಿಯಲಿಡೆಯಿಲ್ಲ.

No. 641. ಮಲ್ಲಿಕಾರ್ಜುನ ಶತಕ.
MALLIKĀRJUNA ŚATAKA.

Substance, palm-leaf. Size, $10\frac{7}{8} \times 1\frac{1}{8}$ inches. Pages, 55. Lines, 5 on a page. Character, Kannaḍa. Condition, injured. Appearance, old. Mode of writing, good and free from mistakes.

Begins on fol. 1*a*. The other work herein is (1) Hasege Kareva hāḍu 29*a*.

Complete in 103 stanzas.

Written in praise of Śiva. The author is Rāmacandra, son of Tammayārya. He lived in about 1700 A.D.

Beginning:—

ಉತ್ಪಲಮಾಲೆ ॥

ಶ್ರೀಪತಿ ವಾಕ್ಪತಿ ಪ್ರಮುಖದೇವತೆಗಳ್ ಬಹುವೇದಸಾರಮಾ- ।
ಗ್ರೂಪಗಳಿಂದ ಕಾಣದಿಹ ಶೈವಮಹತ್ವಮನೆಲ್ಲ ಬುದ್ಧಿಯಿಂ ॥
ರೂಪಿಸಲಾಂ ಸಮರ್ಥನೆ ಕೃತಾರ್ಥನದೆಂತಹೆನಲ್ಲದಿರ್ಕೆ ಚಿ- ।
ದ್ರೂಪನವಾಚ್ಯನಂ ನುತಿಪೆನೈ ಶಿವಪರ್ವತಮಲ್ಲಿಕಾರ್ಜುನಾ ! ॥ ೧ ॥
ಆವಗುಣಂಗಳಾವ ಪರಿರೂಪು ಮಹತ್ವಮದಾವುದಾಶ್ರಯ- ।
ಕ್ಕಾವುದು ತಾಣಮಾವಕಳೆಯಾವುದು ನಾದಮದಾವಬಿಂದು ನಾ- ॥
ನಾವುದ ನೀಕ್ಷಿಪೆಂ ನಿನಗಪಾರ ಮಹತ್ವಮಿರಲ್ಕೆಯೆನ್ನವಾ- ।
ಕ್ಪಾವನಮಪ್ಪುದೈಸೆ ನುತಿಪೆಂ ಶಿವಪರ್ವತಮಲ್ಲಿಕಾರ್ಜುನಾ ॥ ೨ ॥

ಚಂಪಕಮಾಲೆ ॥

ಯಮನಿಯಮಾದಿಯೋಗವಿಧಿಯಿಂ ತುದಿ ಮೂಗಿನ ದೃಷ್ಟಿಯಿಂದ ಸಂ-
ಯಮಿಗಳಹರ್ನಿಶಂ ಹೃದಯಚಕ್ರ ಸರೋಜದೊಳಿಟ್ಟು ನಿನ್ನನು- ॥
ತ್ತಮದ ಸಮಾಧಿಯಿಂದೊಲಿಸುವರ್ಗಡ ನಾಂ ನುತಿಮಾತ್ರದಲ್ಪದಿಂ- ।
ದಮಿತಮಹತ್ವಮಂ ಪಡೆದಪೆಂ ಶಿವಪರ್ವತಮಲ್ಲಿಕಾರ್ಜುನಾ ! ॥ ೩ ॥

* * * *

ಅತುಲಿತವೈಭವಾಯ ಚ ಭವಾಯ ಹರಾಯ ನಮೋಸ್ತು ಶಂಭವೇ ।
ಶ್ರಿತಜನವತ್ಸಲಾಯ ಶರಣಾಗತ ಚಾತಕವಾರಿದಾಯ ಸ- ॥
ನ್ನುತಗುಣಸಂಚಯಾಯ ಗಿರಿಜಾಮುಖಚಂದ್ರ ಚಕೋರ ತೇನಮಃ ।
ಶ್ರುತಿಶತಗೋಚರಾಯ ಚ ನಮಃ ಶಿವಪರ್ವತಮಲ್ಲಿಕಾರ್ಜುನಾ ! ॥ ॥

* * * *

End:—

ಇದು ಶತಕ ಪ್ರಬಂಧಮಿದು ಪಾಪಹರಂ ಭವಬಂಧ ಮೋಕ್ಷಣ- ।
ಕ್ಕಿದು ಶಿವಲೋಕಕೇರ್ವಡಿದು ನಿಚ್ಚಣಿಕೆ ಶ್ರುತಿಸಾ[ಗ]ರ ಮಿಶ್ರಿತಂ ॥ ? ॥
ಇದು ಶಿವಭಕ್ತರಾದವರ ಮೆಚ್ಚು ರಹಸ್ಯಮಪೂರ್ವ ಪಾವನಂ ।
ಹೃದಯದೊಳಿಟ್ಟದಂ ಜಪಿಸಲಪ್ಪುದು ಪರ್ವತಮಲ್ಲಿಕಾರ್ಜುನಾ ! ॥ ೯ ॥
ಭವ ಭವ ಪಾಪಬಂಧ ಭಯಮೋಕ್ಷಣ ಮಪ್ಪುದು ತಮ್ಮಯಾರ್ಯನಂ- ।
ಭವ ವರ ರಾಮಚಂದ್ರಕವಿ ಸೂಕ್ತಿಕದಂಬಿತ ರತ್ನಮಾಲೆಯಂ ।
ಶಿವನ ಗುಣಂಗಳಂ ಪುದಿದು ಶಂಭುಪದಾರ್ಪಿತ ವಾಕ್ಪ್ರಸಾದಮಂ ।
ಸಲೆ ತಳೆದರ್ಗೆ ಶೈವಪದಮಪ್ಪುದು ಪರ್ವತಮಲ್ಲಿಕಾರ್ಜುನಾ ! ॥ ೧೧ ॥

* * * *

ಅನುದಿನದಲ್ಲಿ ಬಲ್ಲವರಿದಂ ಶಿವಸನ್ನಿಧಿಯಲ್ಲಿ ಮಲ್ಲಿಕಾ-
ರ್ಜುನ ಶತಕ ಪ್ರಬಂಧಮನೆ ತಿಪ್ರಿಯ ಭಕ್ತಿವಿಧಾನದಿಂದ ಸ- ।
ಜ್ಜನ ರೊಲಿದಾಲಿಸಲ್ ಜಪಿಸಲಾತ್ಮಮನೋರಥ ಸಿದ್ಧಿಯಪ್ಪುದೀ- ।
ಶನ ಕೃಪೆಯಿಂದ ರೋಗಭಯ ಭೂತ ವಿಷಮಜ್ವರ ನಾಶಮಪ್ಪುಗುಂ ॥ (?)
ಪ್ರತಿನಿರವದ್ಯ ಪದ್ಯಮಯ ಸಂಸ್ಕೃತ ಕನ್ನಡಶಬ್ದ ಸೂಕ್ತಿಯಿಂ- ।
ದತಿಶಯ ಮಲ್ಲಿಕಾರ್ಜುನ ಶಿವಸ್ತುತಿಯುಕ್ ಶತಕಪ್ರಬಂಧಮಂ
ಕ್ಷಿತಿಸುರ ತಮ್ಮಯಾರ್ಯಸುತನಿಂ ಶಿವನಿತ್ಯಕಳಾನ್ವಿತ ಪುಷ್ಪಮಾಲೆಯಂ ।
ಹಿತಯುತ ರಾಮಚಂದ್ರ ಕವಿಯಿಂದ ಶಿವಾಂಘ್ರಿ ಸಮರ್ಪಣಂ ಕೃತಂ ॥

Colophon :—

ಕರಕೃತಮಪರಾಧಂ ಕ್ಷಂತುಮರ್ಹಂತಿ ಸಂತಃ ॥

ಈ ಮಲ್ಲಿಕಾರ್ಜುನ ಶತಕಂ ಸಮಾಪ್ತಂ. ಲಿಂಗಪ್ಪಯ್ಯನವರಿಗೆ ವಡ್ಡೆದಾಳ ತಿರುಮಲೆ ದೇವರು ಬರೆದ ಮಲ್ಲಿಕಾರ್ಜುನ ಶತಕ ಬರೆಸಿದಾತಗೆ ಐಶ್ವರ್ಯಮಸ್ತು.

ವಿ.ವಿ.)—

ಸಮಗ್ರ. ಅಲ್ಪಶಿಥಿಲ. ಲಿಪಿಯುತ್ತಮವಾಗಿದೆ. ತಪ್ಪಿಲ್ಲ.

ಇದು ವೃತ್ತಗಳಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ೧೦೩ ಪದ್ಯಗಳಿವೆ. ಪ್ರಾಯಿಕವಾಗಿ ಪದ್ಯಗಳೆಲ್ಲವೂ ಶಿವಪರ್ವತಮಲ್ಲಿಕಾರ್ಜುನಾ ॥ ಎಂದಂತ್ಯವಾಗುವುವು. ಶಿವಸ್ತುತಿರೂಪವಾದ (ಪರ್ವತ ಮಲ್ಲಿಕಾರ್ಜುನ ಶಿವ) ಈ ಗ್ರಂಥವನ್ನು ಬರೆದ ಕವಿಯು ಕ್ಷಿತಿಸುರ (ಬ್ರಾಹ್ಮಣ) ತಮ್ಮಯಾರ್ಯನ ಮಗನಾದ ರಾಮಚಂದ್ರನೆಂಬಾತನು. ಈತನ ಜೀವಿತಕಾಲವು ಸುಮಾರು 1700 (ಕ್ರಿ.ಶಕ.) ಎಂದು ಕವಿಚರಿತೆಯ ಕರ್ತರು (ಕವಿಚರಿತೆ ಸಂಪುಟ ೨ ಪುಟ ೫೫೬) ಅಭಿಪ್ರಾಯಪಡುವರು.

No. 642. ಮಲ್ಲಿಕಾರ್ಜುನ ಶತಕ.

MALLIKĀRJUNAŚATAKA.

Substance, palm-leaf. Size, $12\frac{7}{8} \times 1\frac{1}{4}$ inches. Pages, 29. Lines, 5 on a page. Character, Kannaḍa. Condition, badly injured. Appearance, old. Mode of writing, good and free from mistakes.

Incomplete.

Same work as the above.

(ವಿ.ವಿ.)—

ಅಸಮಗ್ರ. ಕೆಲವು ಓಲೆಗಳು ಮುರಿದು ಚೂರಾಗಿರುವುವು. ಕ್ರಮಿಗಳ ಪರಿಚಯವಿಲ್ಲದಿರುವ ಪತ್ರವೊಂದೂ ಇಲ್ಲ. ಅತ್ಯಂತ ಶಿಥಿಲ. ಲಿಪಿಯು ನಾಜೂಕಾಗಿದೆ. ತಪ್ಪೊಂದಾದರೂ ಇಲ್ಲ.

ಇದು ಹಿಂದೆ ವಿವರಿಸಿದ ಗ್ರಂಥವಾಗಿದೆ.

No. 643. ಮಲ್ಲೇಶ್ವರ ಸ್ತೋತ್ರ-
MALLĒŚVARA STŌTRA.

Substance, palm-leaf. Size, $8\frac{11}{16} \times 1\frac{7}{16}$ inches. Pages, 25. Lines, 8 on a page. Character, Kannaḍa. Condition, slightly injured. Appearance, old. Mode of writing, good but not free from mistakes.

Begins on fol. 20*b*. The other work herein is : (1) Virūpākṣaśtōtra 3*a*.

Complete in 71 stanzas.

A eulogy on God Śiva. The name of the author is not given.

Beginning :—

ವಾ. ಷ. ಶ್ರೀಪರಂ ಅಜಯಿಂದ್ರ ಪ್ರಮಥಗಣ ಮುಖ್ಯವಹ ।
ದೇವಕುಲ ಮಕುಟಮಣಿ ಗಣಕಿರಣ ಪಾದರಾ- ।
ಜೀವ ! ಶಂಕರ ! ಶ್ರೀಗಿರಿಜೆಯುರಸ ! ಭಕ್ತಜನರಘವಿಪಿನದಾವಾನಲಾ ! ॥
ಆವಗಂ ನೆನೆವ ನತ ಬಂಧುಜನವೇ ! ವಿಮಲ- ।
ದೇವಗಂಗೆಯು ಪೊತ್ತ ಭವನೆ ನಿಮ್ಮಯ ಗುಣ ಕೃ- ।
ಪಾವಲೋಕನದಿ ಕಡೆ ಹಾಯ್ಸೆನ್ನ ಗುರುಚೆನ್ನ ಮಲ್ಲೇಶ ! ಪಾರ್ವತೀಶಾ !
ಗುರುವೆ ಪರಿಪೂರ್ಣ ಪರಮಾತ್ಮ ಪರಮಾನಂದ- ।
ದಿರವೆ ನಂಬಿರಿದರಾತ್ಮ ದೊಳಗೆ ಸವ ಸತ್ವಸಾ- ।
ಗರವೆ ! ಸಚರಾಚರವ ನೆನಹು ಮಾತ್ರದಿ ಪಾವನಂ ಮಾಳ್ಪ ಕಲ್ಪತರುವೇ ।
ಇರುವೆ ಸದ್ಭಕ್ತ ಜನಮನದ ಕೊನೆಯಲ್ಲಿ ಮಿಗೆ ।
ಮೆರೆವ ಓಂಕಾರನಾದಕ್ಕೆ ಪರವಶಗೊಂಡು ।
ಶಿರವ ತೂಗಾಡುತಿಹ ಗುರುಮೂರ್ತಿ ! ಸಲಹೆನ್ನ ಮಲ್ಲೇಶ ! ಪಾರ್ವತೀಶಾ !

* * * *

End :—

ಹೊನ್ನು ನಿನ್ನದು ಹೆಣ್ಣು ಮಣ್ಣು ನಿನ್ನದುದಕವು- ॥
ಅನ್ನ ನಿನ್ನದು ಅಗ್ನಿ ವಾಯು ವಾಕಾಶಾತ್ಮ ॥
ನಿನ್ನಂತವುರ ಬ್ರಹ್ಮವೇ ನಿನ್ನದಾದ ಬಳಿಕನ್ಯವಾವುದು ಇದರೊಳು ॥
ನಿನ್ನೊಡವೆಯನು ನಿನಗೆ ಕೊಟ್ಟುವ್ರಪಚರಿಸುವರೆ ।
ಎನ್ನಳವೆ ನೀನೊಪ್ಪ ಗೊಂಬುದದು ಕರುಣದಿಂ ।
ಮುನ್ನ ನೀ ಮಾಡಲಾ ನಾದುದಕೆ ಕೃಪೆಯಾಗು ! ಮಲ್ಲೇಶ ! ಪಾರ್ವತೀಶಾ ! ॥
ಮುನ್ನ ಶಿವನೆ ! ನಿಮ್ಮ ಕರೆಯುದಿಹ ಕಾರಣದಿ ।
ಬೆನ್ನ ಸಿಡಿ ಬಾಯ ಬೀಗವ್ರ ಹಗ್ಗದಿಂ ತೂಗಿ ।
ಕನ್ನಗಳ್ಳರ ಕೊಲುವವ್ರೋಲು ಶಿವದೂಷಕರ ಕುನ್ನಿಯಂದದಿ ಬಗುಳಿಸಿ ॥
ಉನ್ನತದ ಅರ್ಥಾಭಿಮಾನಗಳ ಕಳಕೊಂಡು
ಬನ್ನಬಡಿಸುವ ಬಣಗು ತಾಕು ದೈವವ ಜರಿದು ।
ಓಂನಮಃ ಶಿವಾಯ[ಎಂಬ]ಮಂತ್ರವ[ಂ] ಪಿಡಿದು ಸಾರಿದೆಂಮಲ್ಲೇಶ
ಪಾರ್ವತೀಶಾ ! ॥ ॥

Colophon :—

ಮಲ್ಲೇಶ ಸ್ತೋತ್ರಂ ಸಮಾಪ್ತಂ ಮಂಗಳ ಮಹಾ ಶ್ರೀ ಶ್ರೀ ಶ್ರೀ ॥

ವಿ.ವಿ.)—

ಸಮಗ್ರ. ಅಲ್ಪ ಶಿಥಿಲ. ಬರೆವಣಿಗೆಯು ಬಲು ಚೆನ್ನಾಗಿದೆ. ಅಲ್ಪಸ್ವಲ್ಪ ತಪ್ಪು ಗಳಿವೆ.

ಇದು ವಾರ್ಧಕ ಷಟ್ಪದಿಯಲ್ಲಿ ಬರೆದಿದೆ. ಇದರಲ್ಲಿ "ಮಲ್ಲೇಶ ಪಾರ್ವತೀಶಾ" ಎಂದಂತ್ಯವಾಗುವ ೭೧ ಪದ್ಯಗಳಿವೆ ಈ ಗ್ರಂಥವು ಶಿವಸ್ತುತಿರೂಪವಾಗಿದೆ. ಗ್ರಂಥ ಕರ್ತನು ತನ್ನ ಹೆಸರನ್ನು ಹೇಳಿ ಕೊಂಡಿಲ್ಲ.

No. 644 ಮಹಾದೇವನ ರಗಳೆ.

MAHĀDĒVANA RAGAḶE.

Substance, palm-leaf. Size, $11\frac{5}{8} \times 1\frac{7}{16}$ inches. Pages, 24. Lines, 3 on a page. Character, Kannaḍa. Condition, much injured. Appearance, old. Mode of writing, bad and full of mistakes.

Begins on fol. 46*a* of the manuscript described under No. 629. The other works herein are: (1) Hāḍugaḷu 1*a*. (2) Ṣaḍakṣari Ragaḷe 31*a*. (3) Nīlammana Trividhi 58*a*. (4) Siddhēśwara Trividhi 66*a*. Described under No. 629 ante.

Complete in 43 Ragaḷes.

Written in praise of Mahādēva (Śiva). The name of the author is not known.

Beginning :—

ಕಂದ :—

ನರಜನ್ಮವೆಂಬುದತಿಶಯ ।
ಹರಭಕ್ತಿಯೊಂದಧಿಕ ಪದಱತೊಳಱಿದಾಗಮುಮಂ ॥
ಕರ ಭ್ರಾಂತನಾಗಿ ತೊಳಲದೆ ।
ಪರಮನ ಕೀರ್ತಿಯ . . . . ವಿಶ್ವೇಶಾ ! ॥ (೧)

ಉತ್ಸಾಹ ರಗಳೆ :—

ಶ್ರೀಸಮಸ್ತ ಲೋಕಜೀವ ಭಾ . . . ಮಹಾದೇವ ।
ಈಶ ನೀನೆ ಭಕ್ತಿಲತೆಯ ಬೆರಸಿ ಬೆಳೆದೆ ಮಹಾದೇವ ॥ (೨)
ತಪೋತೀತನಗ್ರಗಣ್ಯನಾದಿ ಲಿಂಗ ಮಹಾದೇವ ॥
ಚಪತಪಕ್ಕೆ ಮುಂದು ನೀನೆ ಮೂಲಮೂರ್ತಿ ಮಹಾದೇವ ॥ (೩)

*   *   *   *

ಶ್ರುತಿಪುರಾಣ ಸುಮತಿಶಾಸ್ತ್ರ ಸಾರುತಿಪೆಕೊ ಮಹಾದೇವ ।
ಮತಿಗೆಹಿತವ ಪರಕೆ ಪರಮರೂಪ ನೀನೆ ಮಹಾದೇವ ॥
ಮೂರು ಮೂರ್ತಿಗಳಿಗೆ ಯಧಿಕ ಮೂರ್ತಿ ನೀನೆ ಮಹಾದೇವ ।
ತೋಱದಂತೆ ತೋಱದಭವ ದೇವ ನೀನೆ ಮಹಾದೇವ ॥

*   *   *   *

End :—

ರೂಡಿಗೀಶಗಾಸೆಮಾಡಿ ನೋಡಬೇಡ ಮಹಾದೇವ ।
ಕಾಡಿನೋಡಿ [ನ](ಯ)ಗಲಿ ನಿಮಗೆ ಹಾಡುತಿರ್ದೆ ಮಹಾದೇವ ॥
ಆರೆನಾರೆ ನೊಂದೆನೆನ್ನ ಮೊರೆಯ ಕೇಳ ಮಹಾದೇವ ।
ಧೀರಭಾವಯೆನ್ನ ಗುಣವ ನೋಡಬೇಡ ಮಹಾದೇವ ॥
ನೀನು ನಿನ್ನ ಅಮೃತದಯವನೆನಗೆ ಕರುಣಿಸಯ್ಯಾ ದೇವ ।
ನೀನು ಮುಟ್ಟಿಯೆನಗೆ ಕರ್ಮಜನ್ಮವೇಕೆ ಮಹಾದೇವ ॥
ಗುರುವಿನೊಲ್ಮೆಯಿಂದ ಹರನೆ ! ನಿಮ್ಮ ನರಿದೆ ಮಹಾದೇವ ।
ಪರಮತತ್ತ್ವ ಪದವನೆನಗೆ ಕರುಣಿಸಯ್ಯಾ ಮಹಾದೇವ ॥

Colophon :—

ಹಂಪೆಯ ಹರಿಹರೇಶ್ವರರ್‍ಯ್ಯಗಳು ಹೇಳಿದ್ದರು ಮಹಾದೇವನ ರಗಳೆಯನು ಆವನೊಬ್ಬ ನೋದಿದರೂ ಆವನೊಬ್ಬನು ಕೇಳಿದರೂ ಆಯುರಾರೋಗ್ಯೈಶ್ವರ್ಯ ಮಸ್ತು ಶ್ರೀ ಶ್ರೀ ಶ್ರೀ

(ವಿ.ವಿ.)—

ಸಮಗ್ರ. ಅತಿ ಶಿಥಿಲ. ಬರೆವಣಿಗೆಯು ಹೃದಯಂಗಮವಾಗಿಲ್ಲ. ತಪ್ಪುಗಳಿಗೆ ಮಿತಿಯಿಲ್ಲ.

ಇದು ಉತ್ಸಾಹರಗಳೆಯಲ್ಲಿ ಬರೆದಿದೆ. ಗ್ರಂಥಾರಂಭದಲ್ಲೊಂದು ಕಂದ ಪದ್ಯವಿದೆ. ಮಹಾದೇವಸ್ತೋತ್ರರೂಪವಾದ ಈ ಗ್ರಂಥವು "ಮಹಾದೇವ" ಎಂದಂತ್ಯವಾಗುವ ೪೩ ಪದಗಳನ್ನೊಳಕೊಂಡಿದೆ. ಗ್ರಂಥ ಕರ್ತನು ತನ್ನ ಹೆಸರನ್ನು ಕೊಟ್ಟಿಲ್ಲ.

No. 645. ಮಹಾದೇವನ ರಗಳೆ.

MAHĀDĒVANA RAGAḶE.

Substance, palm-leaf. Size, $9\frac{3}{8} \times 1\frac{3}{16}$ inches. Pages, 3. Lines, 6 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Incomplete.

Same work as the above.

(ವಿ.ವಿ.)—

ಅಸಮಗ್ರ. ಬಹಳ ಶಿಥಿಲ. ಓಲೆಗಳು ಮುರಿದು ಹೋಗಿವೆ. ಲಿಪಿಯು ಸಾಮಾನ್ಯವಾಗಿದೆ ತಪ್ಪಿದೆ. ಗ್ರಂಥಾಂತ್ಯದಲ್ಲಿ ಕೆಲವು ತೆಲುಗು ಕಂದ ಪದ್ಯಗಳಿವೆ.

ಇದು ಹಿಂದೆ ವಿವರಿಸಿದ ಗ್ರಂಥವಾಗಿದೆ.

No. 646. ರಂಗಧಾಮಸ್ತುತಿ ಸಾಂಗತ್ಯ.

RAṄGADHĀMASTUTI SĀṄGATYA.

Substance, palm-leaf. Size, $11\frac{13}{16} \times 1\frac{1}{16}$ inches. Pages, 32. Lines, 4 on a page. Character, Kannaḍa. Condition, much injured. Appearance, old. Mode of writing, not bad and not free from mis'akes.

Begins on fol. 37*a* of the manuscript described under No 618 ante.

Complete. 102 stanzas.

Similar to the above, by Cikkupādhyāya.

Beginning :—

ಸಾಂಗತ್ಯ :—

ಶ್ರೀಮಹಿ ನೀಳಾದೇವಿಯರ್ಕಳ ಪದ ।
ತಾಮರಸದ ಕಾಂತಿಯಿಂದಾ ॥
ಕಾಮನ ಬಿಲ್ಲ ಬಣ್ಣವ ಕೀಳ್ಪಡಿಪ ರಂಗ- ।
ಧಾಮ ನಿನ್ನಂಘ್ರಿಗೆರಗುವೆ ॥
ಚೆಲುವನಾಸಿಕದ ಚದುರ್ವೆತ್ತ ಕರ್ಣದ ।
ಸುಲಲಿತಾಧರದ ಸೊಂಪಾಂತ ॥
ಸಲೆ ಶಂಖಚಕ್ರದ ಸ್ವಾಮಿ ! ರಂಗಾಧಿಪ !
ಸಲಹೆನ್ನ ಸನ್ಮೋಹದಿಂದ ॥
ಮಕರಕುಂಡಲದಂದ ಮಂದಹಾಸದ ಚಂದ ।
ಸುಕಪೋಲದ ಸೌಷ್ಠವತೆ ॥
ಸಕಲರ ಚಿತ್ತವ ಸೆಳೆವುದು ರಂಗನಾ- ।
ಯಕ ! ನಿನ್ನ ಪೊಗಳ್ವುದೆನ್ನಳವೆ ?

*   *   *

ಗೊಂದೆಯ ನೇರ್ವದು ಕಂದನ ಕಡಿವುದು ।
ತಂದೆಯ ತಲೆಯ ತರಿವುದು ॥
ಮಂದತನದ ಮರುಳಾಟ ರುದ್ರನದಲ್ತೆ ।
ಇಂದಿರಾಪತಿ ರಂಗಗೆಣೆಯೆ ? ॥
ತಲೆಯೋಡೊಳುಂಬುದು ನೆಲೆಗೆಟ್ಟು ಲಜ್ಜೆಯ ।
ತೊಲಗಿಸೆ ಶಾಪವ ಕೊಡುವುದು ॥
ಕುಲಗೇಡಿ ತಿಸುಳಿಗಲ್ಲದೆ ರಂಗನ ಪಾದ ।
ಜಲಜಗಂಡರಿಗಿದಾದಪ್ಪುದೆ ? ॥

*   *   *

End :—

ರಂಗ ! ಧುರೀಣ ! ರಂಗಾಧ್ಯಕ್ಷ ! ರಂಗೇಶ ! ।
ರಂಗನಾಯಕ ! ರಂಗಶಾಯಿ ! ॥
ರಂಗಪುರಾಧಿಪ ! ರಕ್ಷಿಸು ! ಪಶ್ಚಿಮ— ।
ರಂಗ ಶ್ರೀಹೃದಯಾಂತರಂಗ ! ॥
ರಂಗಸುತ್ತಿಯ ಶ್ರೀ ಚಿಕದೇವರಾಯಾಂತ ।
ರಂಗ ಶ್ರೀ ಚಿಕುಪಾಧ್ಯಾಯ ॥
ರಂಗನನುಜ್ಞೆಯಿಂದೊರೆದನಿದಕೆ ಜಯ ।
ಮಂಗಲಮಸ್ತು ಶ್ರೀರಸ್ತು ॥

(ವಿ.ವಿ.)—

ಸಮಗ್ರ. ಅತ್ಯಂತ ಶಿಥಿಲ. ಲಿಪಿಯು ಸಾಮಾನ್ಯವಾಗಿದೆ. ತಪ್ಪಿದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಇದರಲ್ಲಿ ಪಶ್ಚಿಮರಂಗನಾಥನ ಪಾದಾದಿಕೇಶಾಂತ ವರ್ಣನೆಯನ್ನೊಳಗೊಂಡ ೧೦೨ ಪದ್ಯಗಳಿರುವುವು. ಇದನ್ನು ಬರೆದಾತನು ಚಿಕುಪಾಧ್ಯಾಯನು. ಈತನ ಚರಿತ್ರೆಯನ್ನು ನಂ. ೨೧೯ ನ್ನು ನೋಡಿ ತಿಳಿದುಕೊಳ್ಳುವುದು.

No. 647. ರಂಗಧಾಮಸ್ತುತಿಸಾಂಗತ್ಯ.

RANGADHĀMASTUTISĀNGATYA.

Substance, paper. Size, $10\frac{7}{16} \times 9\frac{1}{4}$ inches. Pages, 21. Lines, 20 on a page. Character, Kannaḍa. Condition, fair. Appearance, new. Mode of writing, not bad and not free from mistakes.

Complete.

Same work as the above.

(ವಿ.ವಿ.)—

ಸಮಗ್ರ. ಪ್ರತಿಯು ನಾಜೂಕಾಗಿದೆ. ಬರೆವಣಿಗೆಯು ಅಷ್ಟು ತೃಪ್ತಿಕರವಾಗಿಲ್ಲ. ತಪ್ಪಿದೆ.

ಇದಕ್ಕೆ ಹಿಂದೆ ವಿವರಿಸಿದ ಗ್ರಂಥವು ಮಾತೃಕೆಯಾಗಿದೆ.

No. 648. ರಂಗನಾಯಕರಂಗನಾಯಕೀಸ್ತುತಿ ಸಾಂಗತ್ಯ.

RANGANĀYAKARANGANĀYAKĪSTUTISĀNGATYA.

Substance, palm-leaf. Size, $13\frac{15}{16} \times 1\frac{5}{16}$ inches. Pages, 41. Lines, 3 on a page. Character, Kannaḍa. Condition, very much injured. Appearance, old. Mode of writing, bad and not free from mistakes.

Incomplete.

A eulogy on God Ranganāyaka and Ranganāyaki. The author has not given out his name, but from the language and the style it is presumed that Chikkupādhyāya must be the author.

Beginning :—

ಸಾಂಗತ್ಯ॥ ಶ್ರೀವತ್ಸಾಂಕನ ವಿಧಿಶಿವ ಸನಕಾದಿ ।
ಸೇವಿತಪಾದ . . . ॥
. . ತ್ರನ ಪಶ್ಚಿಮರಂಗಪು- ।
ರಾವಾಸನಡಿಗೆಱಗುವೆನು ॥

ಮಿಱುಗುವ ಬೆಳ್ಳಿಯ ಬೆಟ್ಟದ ।
. . ಕಾಮಾರ್ಗಿಲಂತೆ ॥
ಮೆಱೆವ ಶೇಷನೊಳೊರಗಿರುವ ಪಶ್ಚಿಮ ರಂಗ- ।
ದೆಱೆಯ ನಡಿಗಳ ವಂದಿಪೆನು ।

. . . . ಫುಳನದ ಮೇಲೆ ಮಾಡಿಸಿದಮ- ।
ತಂಗಜದ ಪ್ರೋಟಿಪಶಿಯ ॥
ಅಂಗತಲ್ಪದಲಿ ಮಂಡಿಸಿದ ಪ . . ।
. . . ಡಿದಿಹೆನು॥

* * * *

End :—

ತುರುಗಾಹಿ ಸು . . ದರಗುರು-।
, ಕಿರುಗಮ್ಮರ ಬೊಮ್ಮನಿವ ॥
ತೆರನಾವಳ ನಸುಮುಗಿವ ತೆರೆವ ಕರ್ಣ-
ಸಿರೆಗಾಸಿರಿ . . ॥
. . . ಬಿಜ್ಜೆಯು ಬೇರು ಪೆರ್ಮೆಯು ।
ಮೊಳೆಯ್ಯೆಸಿರಿಯು ಪೆರ್ವೆಳಸು ॥
. . ಯು ನೋಟ ।
ತಳಿರಿಡುತೆಯ್ದುಗೆನ್ನೆಡೆಗೆ ॥
ಇರೆ ಬೆಳಗಿದಿರೊಳು ಕಾಣ್ಬ . . . ।
. . . ಗಳಾ ॥
ಕರುಣದಿಂದಱಿವುಗಣ್ತೆತ್ತು ತೋರಿದ ಗುರು ।
ಚರಣಂಗಳೆ ಶರಣೆನಗೆ ॥

Colophon :—

. . . ತ್ಯ ಸಂಪೂರ್ಣಂ ॥

(ವಿ.ಷ.)—

ಅಸಮಗ್ರ. ೩೪ ರಿಂದ ೪೦ ನೆಯ ಪದ್ಯದ ವರೆಗಿರುವ ಅಂಶವೇ ಇಲ್ಲ. ಓಲೆಗಳೆಲ್ಲವೂ ಮುರಿದು ಹೋಗಿರುವುವು. ಬಹಳ ಶಿಥಿಲ. ಬರೆವಣಿಗೆಯು ಚೆನ್ನಾಗಿಲ್ಲ. ತಪ್ಪಿದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಇದರಲ್ಲಿ ಪಶ್ಚಿಮ ರಂಗನಾಯಕ ಸ್ವಾಮಿಯ ಪಾದಾದಿ ಕೇಶಾಂತವರ್ಣನೆಯೂ ರಂಗನಾಯಕಿಯ (ರಂಗನಾಚ್ಚಾರಮ್ಮನ) ಸ್ತುತಿಯೂ ಮಾಡಲ್ಪಟ್ಟಿವೆ. ಗ್ರಂಥಕರ್ತನು ತನ್ನ ಹೆಸರನ್ನು ಹೇಳಿಕೊಳ್ಳದಿದ್ದರೂ ಶೈಲಿಯಿಂದ ಇದು ಚಿಕ್ಕುಪಾಧ್ಯಾಯ ವಿರಚಿತವೆಂದೂಹಿಸಲೆಡೆಯಿದೆ. ಈತನ ವಿಷಯಗಳಿಗಾಗಿ ೬೧೯ ನೆಯ ನಂಬರನ್ನು ನೋಡುವುದು.

No. 649. ಲಕ್ಷ್ಮೀ ಸ್ತುತಿ.

LAKṢMĪ STUTI.

Substance, palm-leaf. Size, 6 × ⅞ inches. Pages, 60. Lines, 3 on a page. Character, Kannaḍa. Condition, badly injured. Appearance, old. Mode of writing, not bad and not free from mistakes.

Begins on fol. 59*a* of the manuscript described under No. 638 ante.

Incomplete.

A eulogy on the goddess Mahālakṣmi worshipped at Kolhapur. The name of the author is not given.

Beginning :—

ಅಗಸ್ತ್ಯರು ಲಕ್ಷ್ಮೀದೇವಿಯವರ ಸ್ತೋತ್ರಮಂ ಮಾಡಿದ್ದು. ಅಗಸ್ತ್ಯನು ಶರತ್ಕಾಲದ ಚಂದ್ರನ ನೂರ್ಮಡಿಯ ಕಾಂತಿಯುಳ್ಳಂಥಾ ಕೊಲ್ಲಾಸುರನ ಸಂಹರಿಸಿದ ಮಹಾಲಕ್ಷ್ಮಿಯಂ

ಕಂಡು ನಮಸ್ಕಾರಮಂ ಮಾಡಲುದ್ಯೋಗಿಸಿದನು. ಎಲೆ ! ಲೋಕಮಾತೆ ! ಕಮಲಾಕ್ಷಿ ವಿಷ್ಣುವಿನ ಉದರದಲ್ಲಿ ಇರುಪಂಥಾ ನಿಮಿತ್ತ . . . ದಂಥಾ ಕಮಲಗರ್ಭ . ಳಂಥಾಲಕ್ಷ್ಮೀದೇವಿ ನಮಸ್ಕಾರ . . .

* * * *

End :—

ಅಮ್ಮನವರ ಸ್ತುತಿಸಿದ್ದು. ನಿಮ್ಮ ಪಾದಕಮಲರೇಣುವಿನಿಂದ ಹೊಂಬಣ್ಣವಾದ ಪ್ರಾಣಿಯುಳ್ಳವನು ಆರು ಜನ್ಮಾಂತರದಲ್ಲಿ ಆತನು ಚಂದ್ರನ ಧರಿಸುವನು. ಸ್ತ್ರೀಮಂಗಲೆ ! ಸಕಲ ಮಂಗಲ. . ಭೂಮಿ . . . . ಸಕಲ ಕಿಲ್ಬಿಷ . . . ಹಾರಿಯಾದ ನೀನು . . ರಕ್ಷಿಸು. ಎಲೆ ವಿಶ್ವೇಶ್ವರಿ !...ಉತ್ಪತ್ತಿ ಸ್ಥಿತಿಲಯಂಗಳಂ . . . ನಿನ್ನ ನಾಮಸ್ಮರಣೆಯಂ . . . ಪಾಪಗಳೆಂಬ . . . .

(ವಿ.ವಿ.)—

ಅಸಮಗ್ರ. ಅತ್ಯಂತ ಶಿಥಿಲ. ಓಲೆಗಳು ಮುರಿದು ಚೂರು ಚೂರಾಗಿ ಹೋಗಿವೆ. ಬರೆವಣಿಗೆಯು ಅಷ್ಟು ಚೆನ್ನಾಗಿಲ್ಲ. ತಪ್ಪುಗಳೂ ಇವೆ.

ಜಯ ಜಯ ಜಗದೀಶ ಜಯ ಜಯ ಅಘಹರನೆ ।
ಜಯ ಜಯ ನಿಗಮ ಸಂತತಿಗಳಿಗೆ ದುರ್ಲಭನೆ ।
ಜಯತು ಸಿದ್ಧೇಶ ದಯವಾಗು ॥

*   *   *   *

End :—

. . . . ।
ಪರಶಿವನೊಳೈಕ್ಯಯಿದು ಸಿದ್ಧಾಂತ (೫೫) ॥

(ವಿ-ವಿ.)—

ಸಮಗ್ರ. ಹಿಂದೆ ವರ್ಣಿತವಾದ ಗ್ರಂಥವೆ ಆಗಿದೆ. ಗ್ರಂಥಾದಿಯಲ್ಲಿ “ಸಿದ್ಧ ಬಸ್ವಯ್ಯನ ಪುಸ್ತಕಕ್ಕೆ ಬಿಡಿ ವಚನ ಬರೆವುದಕ್ಕೆ ಸುಬಮಸ್ತು ಸಿದ್ಧೇಶ್ವರನ ತ್ರಿವಿಧಿ ಬರೆವುದಕ್ಕೆ ಶುಭಮಸ್ತು” ಎಂದಿದೆ.

No. 688. ಸಿದ್ಧೇಶ್ವರತ್ರಿವಿಧಿ.

SIDDHĒŚVARA TRIVIDHI.

Substance, palm-leaf. Size, $13\frac{1}{2} \times 1\frac{3}{8}$ inches. Pages, 10. Lines, 4 on a page. Character, Kannaḍa. Condition, much injured. Appearance, old. Mode of writing, fair.

Begins on fol. 12-*a*. The other works herein are :—(1) Āsthānajyōti, 1-*a*. (2) Nāmaliṅgānuśāsanam, 17-*a*.

Incomplete.

Same work as that described above.

(ವಿ-ವಿ.)—

ಅಸಮಗ್ರ. ಅತಿ ಶಿಥಿಲ. ಲಿಪಿ ಉತ್ತಮ. ಈ ಪುಸ್ತಕದಲ್ಲಿ ೩೮ ಪದ್ಯಗಳಿವೆ.

ಇದು ಹಿಂದೆ ವಿವರಿಸಿದ ಗ್ರಂಥವಾಗಿದೆ.

No. 689. ಸಿದ್ಧೇಶ್ವರತ್ರಿವಿಧಿ-

SIDDHĒŚVARATRIVIDHI.

Substance, palm-leaf. Size, $11\frac{5}{8} \times 1\frac{5}{16}$ inches. Pages, 5. Lines, 3 to 4 on a page. Character, Kannaḍa. Condition, much injured. Appearance, old. Mode of writing, bad and full of mistakes.

Begins on fol. 66-*b* of the manuscript described under No. 629 ante.

Incomplete.

Same work as that described above.

(ವಿ-ವಿ.)—

ಅಸಮಗ್ರ. ೧ ರಿಂದ ೧೫ ನೆಯ ತ್ರಿಪದಿಯ ವರೆಗಿದೆ. ಬಹಳ ಶಿಥಿಲ. ಲಿಪಿಯು ಹೃದಯಂಗಮವಾಗಿಲ್ಲ. ತಪ್ಪುಗಳಿಗೆ ಮಿತಿಯಿಲ್ಲ.

ಇದು ಹಿಂದೆ ವಿವರಿಸಿದ ಗ್ರಂಥವಾಗಿದೆ.

No. 690. ಸಿದ್ಧೇಶ್ವರತ್ರಿವಿಧಿ-

SIDDHĒŚVARATRIVIDHI.

Substance, palm-leaf. Size, $11\frac{1}{4} \times 1\frac{3}{16}$ inches. Pages, 9. Lines, 4 on a page. Character, Kannaḍa. Condition, much injured. Appearance, old. Mode of writing, not bad.

Begins on fol. 54-*a* of the manuscript described under No. 436 ante.

Complete.

Written in praise of Siddha (Siddharāma), disciple of Cennabasava. The name of the author is not known.

Beginning :—

ಶ್ರೀ ॥ ಶ್ರೀಮದುತ್ತರದೇಶ ಧಾಮಾ ಬಾಳೇಶ್ವರನ ।
ಶ್ರೀಮುಕುಟದ ಗಂಗೆ ಬರೆಯಾಲದ ಬರಿಸಿದ ।
ಸ್ವಾಮಿ ಸಿದ್ಧೇಶ ಶರಣಾಗು ॥
ಉತ್ತರದೇಶದ ಗುಡಿಯು ಚಿತ್ತಜಹರನೆಯ್ತಂದು ।
ಭಕ್ತಿಭಿಕ್ಷವನು ಅರ್ಥಿಮಿಗೆ ಸವಿದೆನ್ನ ॥
ಕರ್ತು(ತ್ವರ್) ಸಿದ್ಧೇಶ ಶರಣಾಗು ॥
ಕಗ್ಗಅತೆಯು ಪುತ್ರದಲಿ ಸ್ವರ್ಗವಳಿಯಲು ನೆಲಸಿ ।
ಭರ್ಗನ ಧ್ಯಾನದಲಿ ಚಿತ್ತವ ನಿಲಿಸಿದ ಷಟ್ಸ್ಥಲ ।
ಮಾರ್ಗ ಸಿದ್ಧೇಶ ಶರಣಾಗು ॥
ಕಗ್ಗಅತೆಯೊಳೊಂದುರುಗಾ ಮನ್ನವನೆಯ್ದಿರೆ ನಿ ।
ಮ್ಮಗ್ರಡಿಯಾಳದಕೆ ಶೀಘ್ರದಿ ಪ್ರಾಣವನಿತ್ತ ।
ಭರ್ಗದೇವ ಸಿದ್ಧ ಶರಣಾಗು ॥

ಎರಡು ಭೂತಪ್ರ ನಿಮ್ಮ ಚರಣವ ಕಗ್ಗಅತೆಯೊಳಗೆ ।
ನೆಱೆ ಭಜಿಸೆ ಮರತ್ರಗಳೆದು ಮೋಕ್ಷವನಿತ್ತ ।
ವರ ಸಿದ್ಧಲಿಂಗ ಶರಣಾಗು ॥

* * *

ಒಪ್ಪುವ ಮುಗುಳೂರೊಳಗೆ ತಪ್ಪದಾಣೆಯನಿಡಲು ।
ಸರ್ಪನಾವಿಷವ ಪರಿಹರಿಸಿ ಪಾಲಿಸಿದೆ ।
ನ್ನಪ್ಪ ಗುರು ಸಿದ್ಧ ಶರಣಾಗು ॥
ಸಂಭ್ರಮದಿ ಹೇರೂರ ಜಂಬುನೇಱಿಲು ಶಾಪ್ರಪಣ್ಣ ।
ವೆಂಬ ಮಾಸದೊಳು ಫಲವೀಯೆ ಕೈಕೊಂಡ ।
ಶಂಭು ಗುರುಸಿದ್ಧ ಶರಣಾಗು ॥
ಎಲ್ಲ ವಡ್ಡರು ಕೂಡಿ ಹಳ್ಳಿಯೊಳು ಪರ್ವವ ।
ನಿಲ್ಲದೆ ಮಾಡಿದೆಡೆಯು ಬಯಲ್ಮಾಡಿದ ।
ಮಲ್ಲಿಂಗ ಸಿದ್ಧ ಶರಣಾಗು ॥
ಶಿಲೆಯು ಬಸವಗೆ ಬಾಳೆಯು ಫಲದ ಪ್ರಸಾದವ ।
ಲಲನೆಯು ಕೈಯಿಂದ ಹೆಬ್ಬೂರೊಳು ಸಲಿಸಿದ ।
ಸುಲಭಗುರು ಸಿದ್ಧ ಶರಣಾಗು ॥

End :—

ದಾಸನೊಬ್ಬನು ನಿಮ್ಮ ದೂಷಿಸೆ ಲಿಂಗಾಪ್ರರದಿ ।
ಶ್ರೀಶನಿಂದವನ ಸ್ವಪ್ನದಿ ಪಲ್ಗರಿಸಿದಾ ।
ಯೊಶ ಗುರುಸಿದ್ಧ ಶರಣಾಗು ॥
ವಂದಿಸಿ ತಿಗುಳಾಣ್ಯದಿ ಬಂದ ವೀರೇಶನಾ ।
ಮಂದ ಭಾಷೆಯನು ಕಳೆದು ಕನ್ನಡವಿತ್ತ ।
ಚಂದ್ರಧರ ಸಿದ್ಧ ಶರಣಾಗು ॥
ಲೇಸೆನಿಪ ದ್ರಾವಿಡದೇಶದಿಂ ಬಂದ ವೀ ।
ರೇಶನಿಗೊಲಿದು ಮೂಷಕನ ವಿಷಗಳೆದ ।
ಶ್ರೀಶಿವ ಗುರುಸಿದ್ಧ ಶರಣಾಗು ॥
ಸಂಭ್ರಮದಿ ತಿಗುಳಾಣ್ಯದಿಂ ಬಂದ ವೀರೇಶ ।
ನೆಂಬವರಿಗೊಲಿದು ಅಂಬಕವನಿತ್ತಾ ತ್ರಿ ।
ಯಂಬಕ ಶಿದ್ಧೇಶ ಶರಣಾಗು ॥
ಮಿಗೆ ಚಂದ್ರಗುಂಡೆದ ಬಗೆ ಕೊಳ್ಗುಗುಂದವ ।
ಅಘಹರ ಚೆನ್ನಬಸವನ ಕರಕಮಲದೊಳ ।
ಗೊಗೆದ [ಯೆನ್ನೊಡೆಯ] ಗುರುಸಿದ್ಧ ಶರಣಾಗು ॥

(ವಿ-ವಿ.)—

ಸಮಗ್ರ. ಶಿಥಿಲ. ಲಿಪಿ ಸಾಮಾನ್ಯ.

ಇದು ತ್ರಿಪದಿಯಲ್ಲಿ ಬರೆದಿದೆ. ಪದ್ಯ ೩೭. ಚೆನ್ನ ಬಸವನ ಕರಸಂಜಾತನಾದ (ಶಿಷ್ಯ) ನಾದ ಸಿದ್ಧ (ಸಿದ್ಧರಾಮ ?) ನ ಸ್ತುತಿರೂಪನಾದ ಪದ್ಯಗಳು ಇದರಲ್ಲಿ ಉಕ್ತವಾಗಿವೆ. ಈ ತ್ರಿಪದಿಯನ್ನು ಬರೆದವನಾವನೆಂಬಂಶವು ತಿಳಿದು ಬರುವುದಿಲ್ಲ.

No. 691. ಸಿದ್ಧೇಶ್ವರ ಪುರಾಣದ ನಾಂದೀ ಪದ್ಯಗಳು.

SIDDHĒŚVARA PURĀṆADA NĀNDĪ PADYAGAḶU.

Substance, Śrītāla. Size, 8 × 1$\frac{5}{16}$ inches. Pages, 8. Lines, 11 on a page. Character, Kannaḍa. Condition, slightly injured. Appearance, old. Mode of writing, not bad.

Begins on fol. 107-*a* of the manuscript described under No. 440 ante.

Contains 35 stanzas from Siddhēśvara purāṇa. The name of the compiler is not known.

Beginning :—

ಶ್ರೀವಿಜಯ ಕಾತ್ಯಾಯಿನೀಶ್ವರ ।
ದೇವಿಯಾನನ ಪದ್ಮ ಮಧುಕರ ।
ಪಾವನಾತ್ಮ ಗಿರೀಶ ಶಂಕರ ಕರುಣಾಘನನಾನಾ ॥
ದೇವದೇವ ನವೀನ ನಿರ್ಮಲ ।
ಜೀವಿತೇಶ್ವರ ಕೈರವಾರುಣ
ಭೂವಲಯಮಂ ಪಾಳಿಪುದು ಸಿದ್ಧೇಶ ಚಿತ್ಕೋಶಾ ॥
ಕರುಣಿಯೋ ಕಾವಾರಿಯೋ ಶಿವ ।
ಕಿರಣಧರ ಕೇನಾಶನಾಶಂ ।
ಕಾಂತಿಕಂದರ್ಪನೆ ಕೃತಕಹರನೆ ಕ್ರೂರಘನಕೇಶಾ ॥
ಸರಸ ಕೈವಲ್ಯಪ್ರದನೆ ಬಂ ।
ಧುರದ ಕೋಪಾಲ ಕೌಶಲಾತ್ಮನೆ ।
ಯುರಗಕಂಕಣ ಕಸ್ತುರೀರನೆ ಸಿದ್ಧದೇಶಿಕನೆ ॥
ಪರಮಪಾವನ ಮೂರ್ತಿ ಗುಹಪಿತ ।
ನಿರುತಪೀಯೂಷಾತ್ಮರೂಪನೆ ।
ಪುರಮಥನ ಪ್ರೂತಾಂಗ ಭಕ್ತೋಪೇತ ಪೈಶಾನ್ಯ—॥
ಹರನೆ ಚಾರು ತಪೋಧನರ್ಕಳ ।
ಪೊರೆವನೇ ವಿಶಾರಾಣ ಸನ್ನುತ ।
ಗುರುವೆ ಕ್ರೋಂಟಿದ ಸಿದ್ಧಲಿಂಗವೆ ಪಂಡಿತನೆ ಪರನೆ ॥
ಭವನೆ ಮುಕ್ತನೆ ಮಾರಹರನೆ ।
ಧವನೆ ಕೇವಗಿರೀಶ್ವರನೆ ಸು ।
ಪ್ರವರಸಾಧ್ಯನೆ ವಿದಿತಸುಜನ ಪ್ರಾಣ ಗಂಭೀರ ॥
ವಿವಿಧ ಲಿಂಗಾಂಗಿಯ ಸಮಾಹರ ।
ನವಕರಣನೇ ಐಲವಿಲಸಖ ।
ಸವಿಯ ವಾಕ್ಯದ ಷಟ್ಸ್ಥಲದ ಗುರುಸಿದ್ಧಲಿಂಗ ಜಯ ॥
ಶರಣವದನಾಂಬುಜ ದಿವಾಕರ ।
ಪರಮಪಾವನ ಸತ್ಕೃಪಾಕರ ।
ಹರಿಮುಖಾಂಬುಜಚಾರುದಿನಕರ ರಿಪುಭಯಂಕರನೆ ॥

ಸುರುಚಿರಾಮಲಮೂರ್ತಿ ಶಂಕರ ।
ಗುರುಕುಲಾಂಬುಧಿಪೂರ್ಣಹಿಮಕರ ।
ಧರೆಯು ಸುಜನರ ಪಾಲಿಪುದು ಸಿದ್ಧೇಶ ಶುಭಕರನೆ ॥

End :—

ಧರಣಿ ಜಲವನಲಂ ಪವನನಂ ।
ಬರ ನಿಶಾಪತಿ ಸೂರ್ಯನಾತ್ಮಂ ।
ಪರಮಗಾತ್ರವೆಯಾದ ಶಂಕರನಂಗವೆನಿಸಿರ್ಪ ॥
ಶರಣ ತೋಂಟದ ಸಿದ್ಧಲಿಂಗನ ।
ಚರಣವಾಂಜವೆನ್ನ ಹೃದಯಾಂ ।
ಬುರುಹದೊ(ಳ)ಗಿರೆ ಕಾವ್ಯಮಂ ನಾಂ ಪೇಳ್ವೆ ಮುದದಿಂದ ॥
ಇಂತೆಸೆವ ಗುರುಸಿದ್ಧಲಿಂಗನ ।
ಸಂತಮಹಿಮೆಯು ಪೊಗಳೆ [ಲೋಕದೊ] (ಜಗದೊ)ಳ ।
ನೆಂತನಂತ(ನ) ರಸನೆಗರಿದೆನೆ ಶಕ್ಯವೇ ಎನಗೆ ॥
ಶಾಂತರೂಪನ ಪಾದಪಂಕಜ ।
ವಿಂತು ಯೆನ್ನಯ ಹೃತ್ಕಮಲದೊಳು ।
ಸಂತಸದೊಳಿರೆ ಕಾವ್ಯವಂ ಪೇಳುವೆನು ಲಕ್ಷಣದಿಂ ॥
ಕರಿತರಕ್ಷುಫಣೀಂದ್ರರಿಪುತ ।
ಸ್ಕರಮಹಾಭಲ್ಲೂಕಕೇಸರಿ ।
ಧರಣಿಪತಿ ಮೊದಲಾದ ಭಯಗಳು ಸಿದ್ಧದೇಸಿಕನ ॥
ವರ ಪುರಾಣವನೊಲ್ದು ಕೇಳದೊ ।
ಡಿರದೆ ಪೋಪವು ಸಿದ್ಧಿಗಳು ಬಂ ।
ಧುರದಿ ದೊರಕುಗುಮೆಂದೊಡಂತಹ ಮಹಿಮೆಯೆಂತಹುದೋ ॥
ಇದು ವಿಮಲಗುರು ತೋಂಟದಾರ್ಯನ ।
ಪದಕಮಲಷಟ್ಚರಣವೆನಿಸುವ ।
ಸದಮಲ(ನ) ಸನ್ಮಲ್ಲಣಾರ್ಯನ ಕುಲಶರಧಿಚಂದ್ರ ॥
ಪದುಳದಿಂ ಶಾಂತೇಶ [ನೊರದಿಂ] (ನೊಲವಿಂ) ।
ವಿದಿತ ಸಿದ್ಧೇಶ್ವರ[ನ] ಪುರಾಣವ ।
ನೊದವಿ ಕೇಳದ ಭಕ್ತತತಿಯಿಷ್ಟಾರ್ಥ ವೊಂದುವುದು.

Colophon :—

ಸಿದ್ಧೇಶ್ವರನ ಪುರಾಣದ ನಾಂದ್ಯದ ಪದ ಸಮಾಪ್ತಂ.

(ವಿ-ವಿ.)—

ಸ್ವಲ್ಪ ಶಿಥಿಲ. ಲಿಪಿ ಸಾಮಾನ್ಯ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಸೇರಿವೆ. ಅವಾವುವೆಂಬುದನ್ನು ಹಿಂದೆ ವರ್ಣಿತವಾಗಿರುವ ೪೪೧ ನೆಯ ನಂಬರಿನಲ್ಲಿ ನೋಡಿತಿಳಿಯುವುದು.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ. ಪದ್ಯ ೩೫. ಇದನ್ನು ಸೇರಿಸಿದ (ಒಟ್ಟುಕೂಡಿದ) ವರು ವಿಳುಮಾಲೆಯ ಗುರುಶಾಂತ ದೇವರು.

No. 692. ಸಿದ್ಧೇಶ್ವರಪುರಾಣದ ನಾಂದೀ ಪದ್ಯಗಳು-

SIDDHĒŚVARA PURĀṆADA NĀNDĪ PADYAGAḶU.

Substance, palm-leaf. Size, 8 $\frac{1}{16}$ × 1$\frac{3}{4}$ inches. Pages, 20. Lines, 5 on a page. Character, Kannada. Condition, much injured. Appearance, old. Mode of writing, good and free from mistakes.

Begins on fol. 22-*a* of the manuscript described under No. 615 ante.

Complete.

Same work as that described above.

(ವಿ-ವಿ.)—

ಸಮಗ್ರ. ಅತಿಶಿಥಿಲ. ಗ್ರಂಥಪಾತಗಳಿವೆ. ಉತ್ತಮವಾದ ಲಿಪಿ. ತಪ್ಪುಗಳಿಲ್ಲ.
ಇದು ಹಿಂದೆ ವಿವರಿಸಿದ ಗ್ರಂಥವೇ ಆಗಿದೆ.

No. 693. ಸಿರಿಯಾಳಸೆಟ್ಟಿಯ ರಗಳೆ-

SIRIYĀḶASEṬṬIYA RAGAḶE.

Substance, palm-leaf. Size, 12½ × 1$\frac{5}{16}$ inches. Pages, 18. Lines, 5 on a page. Character, Kannada. Condition, very much injured. Appearance, old. Mode of writing, not bad.

Complete.

Describes the story how Siriyāḷaseṭṭi and his wife Ceṅgaḷe, devotees of Siva in Kanci(Conjeēveram) offered their son to Śiva who came in the form of a Śivaśaraṇa. Śiva, highly pleased by their devotion, restored their son to life and finally gave them a place in Kailāsa. The author is not known.

Beginning :—

ಕಂ ॥ ಸಿರಿಯಾಳಂ ಚೆಂಗಳೆಯುಂ ।
. ರನುಂ ಮೆಚ್ಚಲ್ಕೆ ಮೆಱೆ . . . . . ॥
. . . . . . ಕೈಲಾಸಕೆ ।
ಪುರಸಹಿತಂ ನೆಱೆದ ನಮ್ಮ ಗುರು ವಿಶ್ವೇಶಂ ॥
ಶ್ರೀಗಿರಿಜೇಶನು ಬಂದನು ।
ರಾಗದಿ ಸಿರಿಯಾಳನ ಮಗನ ಜೆಡ . .
. . . . ಬರಿಸ ।
ಲ್ಕಾಗಳೆ ಶಿವಪುರಕೆ ಮೆಱೆದ ಗುರು ವಿಶ್ವೇಶಂ ॥
ರಗಳೆ ॥ ಸೃಷ್ಟಿಯೊಳಗೆರಡು ಪಟ್ಟಣ ಕಂಚಿ ಕಲ್ಯಾಣ
ಅತ್ಯಾಳಸೆಟ್ಟಿ . . . .
ಮುತ್ತು ಹವಳದ ರಾಶಿ ಮಾಣಿಕಂ ಮನೆಯೊಳಗೆ
ಎತ್ತ ನೋಡಿದೊಡತ್ತ ಸಿರಿಯು ಬೆಳಕಾಗಳ್ಲಿ ॥

* * *

ಲಕ್ಷ ಸಂಖ್ಯೆಯ ಲಕ್ಷಕೋಟಿ ದ್ರವ್ಯವ ಗಳಸಿ ।
ಮಕ್ಕಳಿಲ್ಲವು ಮಾನಿನೀದೇವಿ ನಿಮಗೆ ॥
. . . . . ದಿಲ್ಲ ಯಿನ್ನು ಬಯಸಿದರುಂಟೆ ।
ಯಿನ್ನ ನಾವೇನ ಬಯಸಿದರುಂಟೆ ಎಲೆ ಮರುಳೆ ॥
ಹರಕರ್ಣನಂ ಕರೆದು ಪುರಳ ಜನ್ಮಕೆ ಹೋಗು ।
ಅನ್ನದಾ . . . . ॥
ಎನಲು ಮಾನಿನಿದೇವಿ ಹೊಲೆ..ಡದು ಬಸುರಾಗಿ ।
ಪುಗನ (?) ಹಡೆದಳು ಬಾಲೆ ಸಿರಿಪ್ರೊಡೆಯ ನಾಗೆಂದು ॥

End :—

ಹರನೊಲಿದು ಚೆಂಗಳೆಗೆ ಹರಸಿಯಾನಂದದಿಂ ।
ಗಿರಿಜೆ ಯೊಡಗೂಡಿ ಮುತ್ತಿನ . ಗಳನಿಟ್ಟ ॥
. . . . . ರೆಯಾಗು ಸಿರಿಯಾಳ ಸುಖವಿರಲೆಂದು ।
ಉಮೆಯು ಜಾನಕಿ ಗಂಗೆ ಹಾಡಿ ಹರಸಿದರಲ್ಲಿ ॥
ಹರ ತನ್ನ ಪಟ್ಟಣಕ್ಕೊಡೆತನವ ನಿತ್ತನುಂ ।
ಸ್ಥಿರ ಪಟ್ಟ ಮಂ ಕಟ್ಟಿ . . . . . ದವನಿತ್ತನುಂ ॥
ಗಂಗೆ ವಾ . . ಸಮಾ ರುದ್ರರೊಳಗೊಪ್ಪಿದರು ।
ಮಂಗಳ ಮುಹೂರ್ತದೊಳಸಂಖ್ಯಾತ ರೊಪ್ಪಿದರು ।
ಭೃಂಗೀಶ ಪ್ರಭು ರೇವಣಾ ಸಿದ್ಧ . . . . . ।
. ಂಗ ವೀರಣ ರಗಣಿತ ಮಹಿಮ ರೊಪ್ಪಿದರು ॥
ಪ್ರಣವ ಪಂಚಾಕ್ಷರಿಯ ಪರಮೇಶನೊಪ್ಪಿದಂ ।
ಗುರು ಸದಾಶಿವ ಮಹಾಮಹಿಮನಿಂತೊಪ್ಪಿದಂ ॥
ಕಂ॥ ವರಗಿರಿಜೇಶನು ಬಂದುಂ ।
ಸಿರಿಯಾಳನ ಮಗನ ಬೇಡೆ ಮಾಯದೊಳದಾ಼ ॥
ಹರಶರಣರಿರವನೋಡಿಯೆ ।
ಪುರಹರ ಶಿವ ಮೆಚ್ಚಿ ಮೆರೆದ ಗುರು ವಿಶ್ವೇಶಂ ॥

Colophon :—

ಸಿ . . . . . . ಗಾವನಾದರೂ ಯೀ ಕೃತಿಯ ನೋಡಿಸಿ ಕೇಳದವರಿಗೆ ಸಿರಿಯಾಳನ ಸಂಪದವಾಗಲಿ ಮಂಗಳ ಮಹಾ ಶ್ರೀ—

(ವಿ.ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾದುದು. ಓಲೆಗಳೆಲ್ಲ ಮುರಿದಿವೆ.

ಇದು ರಗಳೆಯಲ್ಲಿ ಬರೆದಿದೆ. ಬರೆಹದಲ್ಲಿ ಱಕಾರವಿದೆ. ಆದಿಯಲ್ಲಿ ಎರಡು ಅಂತ್ಯದಲ್ಲಿ ಒಂದು ಕಂದ ಪದ್ಯಗಳಿವೆ. ‘‘ ಕಂಚಿಯಲ್ಲಿದ್ದ ಅತ್ಯೈಳಸೆಟ್ಟಿ ಮಾನಿನೀದೇವಿಯರ ಮಗನೂ ಶಿವಭಕ್ತನೂ ಆದ ಸಿರಿಯಾಳಸೆಟ್ಟಿಯು ಹೆಂಡತಿಯಾದ ಚೆಂಗಳೆಯೊಡನೆ, ಶಿವಶರಣರೂಪಿನಿಂದ ಬಂದು ಮಗನನ್ನು ಯಾಚಿಸಿದ ಶಿವನನ್ನು, ಮೆಚ್ಚಿಸಿ ಪುರಸಹಿತ ಕೈಲಾಸಕ್ಕೆ ತೆರಳಿದನು ’ ಎಂಬ ಕತೆ ಇದರಲ್ಲಿ ಉಕ್ತ ವಿಷಯವು. ಕವಿ ಯಾರೆಂಬುದು ತಿಳಿದು ಬರುವುದಿಲ್ಲ.

No. 694. ಸಿರಿಯಾಳಸೆಟ್ಟಿಯ ವಾರ್ಧಿಕ.

SIRIYĀḺASEṬṬIYA VĀRDHIKA.

Substance, palm-leaf. Size, $9\frac{3}{16} \times 1\frac{1}{16}$ inches. Pages, 31. Lines, 5 on a page. Character, Kannaḍa. Condition, injured. Appearance, old. Mode of writing, good.

Begins on fol. 9-*b* of the manuscript described under No. 687 ante.

Complete.

Describes the story of Siriyāḻaseṭṭi.

Beginning :—

ಶ್ರೀಗುರುವೆ ಸಚ್ಚಿದಾನಂದ ಈರೇಳ್ಭುವನ ।
ಸಾಗಿಸುವುದೆಂತು ತಿಳಿಯದು ನಿಮ್ಮ ಮಹಿಮೆಯ ಪದಾ । (?)
ನಾಗಶಯನನ ನಾಭಿಕಮಲದೊಳು ಜನಿಸಿದನ ಶೀಘ್ರದಿಂದಳಿದೆ ಶಿರವಾ ॥
ಯೋಗಿಗಳ ಹೃದಯನೆಲೆವಾಸನಾಗಿಹ ದೇವ ।
ಬೇಗದಿಂದಮೃತಮತಿಸಾರವನು ಕೊಡು ನಮಗೆ ।
ರಾಗದಿಂದುಸುರುವೆನು ಸಿರಿಯಾಳಸೆಟ್ಟಿಶ್ರುತಿಭೋಗ ಮಲ್ಲೀಶ ಜಯತು ▮ ೧ ॥
ಮರ್ತ್ಯದೊಳು ಶರಣ ಸಿರಿಯಾಳ ಚೆಂಗಳಿಯಮ್ಮ ।
ಭಕ್ತಿ ಮಾಡುತಲಿಹರು ಬೇಡಿದ ಪದಾರ್ಥವಂ ।
ನಿತ್ಯ ಬಿರುದಿನ ಕಹಳೆ ಸಾರುತಿರೆ ಬೇಡುವವರಿಲ್ಲ ನೀಡುವೆವುಯೆಂದು ॥
ಚಿತ್ರಜಾರಿಯು ಕೇಳುತಾಕ್ಷಣದಿ ಪರಮ ವೈ- ।
ರಕ್ತಜಂಗಮರೂಪ ಧರಿಸಿ ಶಿವಕಂಚಿಗಂ ▮
ಕರ್ತೃ ಕೂಡಲಚೆನ್ನಸಂಗಯ್ಯಶರಣ ಸದ್ಭಕ್ತರಾಶ್ರಮಕೆ ಬಂದಾ ॥ ೨ ॥
ಬೋಳಮಂಡೆಯು ಬವಡಿ ಬಲಗೈಯ್ಯ ಚಿತ್ತ ತ್ರಿ ।
ಶೂಲ ರುದ್ರಾಕ್ಷಿ ಕುಂಡಲ ಕ್ಯಾಪಕವ ಸೂತ್ರ ॥
ಬಾಳಲೇಪನಭಸಿತ ಬೆರಳ ಜಪಮಾಲೆಯಂ ತೋಳಿಗಾಧಾರ ಧರಿಸಿ ॥
ತಾಳಮಾಲೆಯು ಕಂಠ ತಳುವಳಿವಿಭೂತಿ (ಗಳ್) ।
ಮೇಲುಗಾವಿಯು ಪಾವುಡೊಸ್ತ್ರ ಶಿವಧಾರಚೆಜ । ?)
ನೀಲಗಂಬಳಿ ಜಾಡಿ ಪೊದ್ದು ನಲಿವುತ ಬಂದ ಮೇಲುಗಿರಿವಾಸದೀಶ ॥ ೩ ॥

*   *   *   *

End :—

ಶೇಷಭೂಷಣ ಸನ್ನಿಧಿಯೊಳೆಲ್ಲ ಅಮರಗಣ ।
ಯೋಸೊಂದು ಬಗೆಯಲೊಂದಿಸಲು ಶಂಕರನಿಗಂ ।
ವ್ಯಾಸಂ ವಸಿಷ್ಠದುರ್ವಾಸ ಕಶ್ಯಪರು ಬಸವೇಶ್ವರನ ಭಕ್ತಗುಹರ ॥
ಶಾಶ್ವತಂ ಶರಣ ಸಿರಿಯಾಳ ವೊರ್ಧಿಕ ಪೇಳೆ ॥
ಲೇಸಾದ ಅಬುಲಿಂಗ ಚೆನ್ನಮಲ್ಲೇಶ್ವರ [ಗೆ] (ನೆ) ।
ಈಶ್ವರನೆ ಮತಿಗೊಟ್ಟು ಸಲಹೆನ್ನ ರಜತಾದ್ರಿವಾಸ ಗಂಗಾಧರೇಶ ॥

ಇಂತಪ್ಪ ಶಿವಗಣಂಗಳ ಸ್ತೋತ್ರ ಮಾಡಿದರ ।
ನಂತಕಾಲದೊಳು ಶಿವಭಕ್ತ ಜನ್ಮದೊಳಕ್ಕು ।
ಮುಂತೆ ಮಾಡಿದ ಕರ್ಮ ಕಳವನೆನ್ನಯ್ಯ ಭೂಕಾಂತೆಪೊತ್ತವನ ಭರಣಾ ॥
ಬ್ಯಂತ ಬೇಡಿದ ಕೊಡುವ ಅಷ್ಟಮಹದೈಶ್ವರ್ಯ ಸಿದ್ಧಿಜಲ । (?)
ಕಾಂತೆ ಜೆಡೆಯೊಳಗಿಟ್ಟು ಜಗಜಹ್ವೆಪಾಲಿನಾ ।
ಸಂತೋಷದಿಂದೆನ್ನ ಸಲಹಯ್ಯ ಗಿರಿಜೆನ್ನ ಮಲ್ಲಿಕಾರ್ಜುನನೆ ಜಯತು ॥

Colophon :—

ಮಂಗಳ ಮಹಾ.

ಸಮಗ್ರ. ವಾರ್ಧಿಕ ಷಟ್ಪದಿಯಲ್ಲಿ ಬರೆದಿದೆ. ಸಿರಿಯಾಳಸೆಟ್ಟಿಯ ವಿಷಯವನ್ನು ತಿಳಿಸುತ್ತದೆ. "ಱಕಾರ" ವನ್ನು ಬರೆಯ ಬೇಕಾದ ಸಂದರ್ಭಗಳಲ್ಲಿ "ರ್" ಎಂದು ಬರೆದಿದೆ. ಗಿರಿಜೆನ್ನ ಮಲ್ಲಿಕಾರ್ಜುನನೆ ಅಂಕಿತವಿದೆ.

No. 695. ಹಂಪೆಯ ರಗಳೆ.

HAMPEYA RAGAḶE.

Substance, palm-leaf. Size, $14\frac{7}{16} \times 1\frac{7}{16}$ inches. Pages, 7. Lines, 6 on a page. Character, Kannaḍa. Condition, very injured. Appearance, old. Mode of writing, fair.

Begins on fol. 59-*a* of the manuscript described under No. 456 ante.

Complete.

Written in praise of Virūpākṣa (Śiva) worshipped at Hampe (Vijayanagar) in Bellary district. Harihara seems to be the author of this work.

Beginning :—

ಸ್ರ॥ ನಿತ್ಯ ಶ್ರೀಕಂಠ ಕಂಠಾಭರಣಕಿರಣಸಂಘಾತಸಂಭೂತನೊತ್ನಾ ।
ದಿತ್ಯವ್ರಾತಾಂಗ ಗಂಗಾಧರ ಪುರಹರ ಪಂಚಾಸ್ಯ ಪಂಚಾಕ್ಷರೀಶ ॥
ಪ್ರತ್ಯಕ್ಷಸ್ವಾಮಿ ಕಾಮಾಂತಕ ನಿಖಿಳ ಮುಖಾಧಾರ ವಿಸ್ತಾರ ಭಕ್ತ ।
ರ್ಗತ್ಯಂತಪ್ರೇಮಿ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ ॥

ರಗಳೆ ॥ ದೇವನದಿಯುನಿದಿರದೊದವಿ ನಿಡಿಯ ಜಡೆಯ ಮುಡಿಯೊಳಟ್ಟು ।
ದೇವಚಂದ್ರಕಳೆಯ ನಿಳೆಯ ತಳೆಯನಲ್ಲಿ ಸಂತವಿಟ್ಟು ॥
ಸಕಳರತ್ನನಿಕರಖಚಿತಮಕುಟಧರನೆ ಹಂಪೆಯರಸ ।
ಸುಕರವೆನಿಪಸರ್ಕನಕಕಪಟನಿಟಿಲ ಹಂಪೆಯರಸ ॥
ಮರುತಮಿತ್ರತರಣಿಯಮೃತಕಿರಣನಯನ ಹಂಪೆಯರಸ ।
ನೆರೆದ ನವಫಣಾಮಣಿಪ್ರಕಾಶಕರ್ಣ ಹಂಪೆಯರಸ ॥

End :—

ಗಿರಿಜೆಯರಸ ಹಂಪೆಯರಸ ।
ಪರಮ ಹರುಷ ಹಂಪೆಯರಸ ॥

ದಾನನಿಧಿಯೆ ಹಂಪೆಯರಸ।
ಮಾನನಿಧಿಯೆ ಹಂಪೆಯರಸ॥
ವೇದದೂರ ಹಂಪೆಯರಸ।
ನಾದಸಾರ ಹಂಪೆಯರಸ॥
ದೇವಗಮ್ಯ ಭಾವಗಮ್ಯ।
ಬಹಳ ಸತ್ಯ ಸಹಜನಿತ್ಯ॥
ಭೃತ್ಯಸುಲಭ ಸತ್ಯಸುಲಭ।
ಸಾರಹೃದಯ ಭಾರ ಸುಧೆಯ।
ಕರುಣಿಸಭವ ಪರಿಕಿಸಭವ।
ನೋಡು ಶಿವನೆ ಕೂಡು ಭವನೆ।
ಮಂಗಳಾಬ್ಧಿ ತುಂಗ [ಳಾ] ಬ್ಧಿ।
ಅಸಮನೇತ್ರ ಭಸಿತಗಾತ್ರ।
ಭಕ್ತಿಭಾವ ಮುಕ್ತಿಜೀವ।
ಲಿಂಗಮೂರ್ತಿ ಜಂಗ (ಮ) ಮೂರ್ತಿ।
ಈಕ್ಷಿಸಭವ ರಕ್ಷಿಸಭವ।
ನೊಂದೆ ನೊಂದೆ ತಂದೆ ತಂದೆ।
ಲಾಲಿಸಯ್ಯ ಪಾಲಿಸಯ್ಯ।
ಏವನೀಶ ಕಾವುದೀಶ।
ಆಗಲಾಗಳೀಗಳೀಗ।
ಳತುಳಕಾಯ ನತನಿಕಾಯ।
ದೇವಗುರುವೆ ವರದ ತರುವೆ।
ಜಯ ಮನೋಹರ ಪ್ರಕಾಶದೊಲವೆ ಫಲವೆ।
ಜಯ ಜಯತು ಹಂಪೆಯರಸ।
ಜಯ ನಮಸ್ತೇ ನಮಸ್ತೇ ನಮಸ್ತೇ॥

ಕಂ॥ ಮೃಡ ನಿಮಗೆ ಭವ ಭವಂಗಳೊ।
ಳಿಡಪಜಿಯದೆ ಬಂದ ಭೃತ್ಯನಿದುಕಾರಣದಿಂ॥
ಬಿಡದಿರ್ಬಿಡದಿರ್ ಬಿಡದಿ।
ಬಿಡದಿರ್ದಮ್ಮಯ್ಯ ಹಂಪೆಯ ವಿರೂಪಾಕ್ಷಾ॥

Colophon :—

ಹಂಪೆಯ ರಗಳೆ ಸಂಪೂರ್ಣಂ.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲ. ಲಿಪಿ ಉತ್ತಮ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಕೂಡಿವೆ. ಅವಾವುವೆಂಬುದನ್ನು ೪೫೬ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ರಗಳೆಯಲ್ಲಿ ಬರೆದಿದೆ. ಗ್ರಂಥದಾದಿಯಲ್ಲಿ ಒಂದು ಸ್ರಗ್ಧರಾ ವೃತ್ತವಿದೆ. ಕೊನೆಯಲ್ಲಿ ಒಂದು ಕಂದ ಪದ್ಯವಿದೆ. ಪಂಪಾವಿರೂಪಾಕ್ಷಸ್ತುತಿರೂಪವಾಗಿದೆ. ಕವಿ ಹರಿಹರನಾಗಿರಬಹುದೆಂದು ತೋರುವುದು.

No. 696. ಹಂಪೆಯ ರಗಳೆ.

HAMPEYA RAGAḶE.

Substance, palm-leaf. Size, 9 × 1½ inches. Pages, 12. Lines, 6 on a page. Character, Kannaḍa. Condition, very injured. Appearance, very old.

Begins on fol. 18-*a* of the manuscript described under No. 657 ante.

Incomplete ; wants the beginning.

Same work as that described above.

(ವಿ-ವಿ.)—

ಅಸಮಗ್ರವಾಗಿದೆ. ಇದರಲ್ಲಿ ಮೊದಲ ಭಾಗವು ಲುಪ್ತವಾಗಿದೆ. ಬರೆವಣಿಗೆ ಸಾಮಾನ್ಯ ವಾಗಿದೆ. ಇದರೊಡನೆ ಇನ್ನೂ ಹಲವು ಪುಸ್ತಕಗಳು ಕೂಡಿವೆ. ಅವಾವು ವೆಂಬುದನ್ನು ೬೫೭ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 697. ಹಂಪೆಯ ರಗಳೆ.

HAMPEYA RAGAḶE.

Substance, paper. Size, $10\frac{9}{16}$ × 9½ inches. Pages, 6. Lines, 20 on a page. Character, Kannaḍa. Condition, fair. Appearance, new.

Begins on p. 101 of the manuscript described under No. 457 ante.

Complete.

This is a copy of the manuscript described under No. 695 ante.

(ವಿ-ವಿ.)—

ಸಮಗ್ರವಾಗಿದೆ. ಇದು ಹಿಂದಿನ ೬೯೫ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಇದರೊಡನೆ ಇನ್ನೂ ಅನೇಕ ಪುಸ್ತಕಗಳು ಸೇರಿವೆ. ಆ ವಿಷಯವಾಗಿ 457 ನೆಯ ನಂಬರನ್ನು ನೋಡುವುದು.

No. 698. ಹೇರೂರು ಹೆಣ್ಣಿನ ಸಾಂಗತ್ಯವು.

HĒRŪRU HEṆṆINA SĀṄGATYAVU.

Substance, palm-leaf. Size, 10⅞ × 1¼ inches. Pages, 90. Lines, 5 on a page. Character, Kannaḍa. Condition, injured. Appearance, old. Mode of writing, good.

Begins on fol. 100-*a* of the manuscript. The other work herein is :— Madanamōhinīkathe, fol. 1-*a*.

Complete in 3 sandhis.

Written in Sāṅgatya, it describes the story of a girl who was a devotee of Śiva, and who was known as Hērūra Heṇṇu (Girl of Hērūru). The author is Mahādēva, a Vīraśaiva poet who lived in about 1650 **A.D.** For details see extracts below.

Beginning :—

ಸಾಂಗತ್ಯ ॥ ಗುರುತರ ಪರಶಿವ ಶರಧಿ ಸಖನಧ ।
. . . . ನೆ ॥
ಶಿರದಸ್ಥಿಧರ ಶೂಲದಜಶಿರಕರಧರ ।
ಗಿರಿಜೇಶನೊಲಿದು ರಕ್ಷಿಪುದು ॥
ಜಡೆಗಡಲೊಳು ಮೆರೆವುಡುಪತಿ . . . . ।
. . ಕುಂಡಲದಹಿಭರಣ ॥
ಕಿಡಿಭಾಳನಯನದಿ ಗಜಚರ್ಮ ಮೆಱೆದಿಹ ।
ಮೃಡನಡಿಗಳ್ವಂದಿಸುವೆ ॥
(ಹೇರೂರ ಹೆಣ್ಣು) ಜೈನನ ಕಂಡು ಮನ ಹೇಸಿ ।
ಮಾರಮರ್ದನನಿಳೆಗೆಯ್ದ ॥
ನಾರಿ ಗಂಡಾಗಿ ಧಾರಿಣಿಯೊಳು ಮೆಱೆದ [ಪರಾಪರ] ವಿ ।
(ಚಾರವನೊಲಿದು ಬಣ್ಣಿಸುವೆ ॥)
ತೊಡಗುವೆ ನೀಕೃತಿಯನು ಶಿವಕವಿಗಳ್ ।
ಅಡಿಯ ನೆನೆದು ವರವಡೆವೆ ॥
ಮೃಡಕವಿ ಮಹದೇವನವರ ಸದ್ಭಾವದ ।
ನುಡಿಯ ಸ (ಜ್ಜನ ರಾಲಿಪುದು) ॥
ಉತ್ತರ ದೇಶದೊಳ (ಹು) ದೊಂದು ಹೇರೂರು ।
ಮರ್ತ್ಯಲೋಕಕೆ ಕೈಲಾಸ ॥
ಸತ್ಯರು ಸಕಲ ಶಾಸ್ತ್ರರು ಸಾರ ಹೃದಯರು ।
ಅತ್ಯಂತ . . . . ॥

* * * *

ಪಶುಪತಿ ಭವನಕೆ ಮುಸುಕಿದ ರತ್ನವು ।
ಹೊಸಹೊನ್ನ ಹೊದಕೆ ಹೊಂಗಳಸ ॥
ಬಸವನ ಪ್ರಿಯ ಸೋಮೇಶ್ವರ ನೆಲಸಿಹ ।
ಹಸನಾಗಿ ಹೇರೂರೊಳಗೆ ॥
ಅಲ್ಲಿರ್ಪನೊಬ್ಬ ಭಕ್ತನು ಮಲ್ಲಿನಾಥನ ।
ವಲ್ಲಭೆ ಶಿವಪ್ರಾರ್ಥೆಯೆಂದು ॥
ನಲ್ಲೆ ಮಗಳು ಗಂಗೆಯೆಂಬ ಹೆಸರು ಪೂಣ ।
ರೆಲ್ಲರು ಶಿವನ ಪ್ರೇಮಿಗಳು ॥
ಶ್ರಾವಕ ಚಂದರಸನ ಮಗಳಾಕೆಯು ।
[ಶಿ] (ಶೈ) ವಾಗಮದಲಿ ನಿಸ್ಸೀಮೆ ॥ (?)

ಸ್ಥಾವರ ಜಂಗಮಾರಾ[illegible] ದಾಸೋಹ [illegible]ದ ।
ಸೀಮೆ ಯಲ್ಲವರೊಪ್ಪುತಿಹರು ॥
ಹೆಣ್ಣು ಕುಲಕೆ ಮನೆದೈವ ಮನಸಿಜನ ।
ಬಣ್ಣದಿಂದತಿ ಕರಚಲುವೆ ॥
ಪುಣ್ಯದ ಪುಂಜ ಪೂರ್ಣದ ಶಶಿ ಸೈರಣೆ ।
ಹೆಣ್ಣೊಂದು ತನಗೆ ಸಂಧಾನ ॥

ಇಂತಪ್ಪ ಹೇರೂರ ಪುರಕೆ ಸ್ಥಾವರ ಲಿಂಗ ।
ಕಂತುಹರನು ಸೋಮನಾಥ ॥
ಅಂತಾಗಲೊಂದು ದಿವಸ ಶಶಿಕಾಂತೆಯು ।
ಕಂತುಹರಗೆ ಹಾಲ ಸಲಿಸಿ ॥
ಸೋಮಧರಗೆ ಹಾಲ ಸಲಿಸಿ ಬರುವ ತಾಯು ।
ಪ್ರೇಮದ ಮಗಳಾಗ ಕಂಡು ॥
ಹೇಮದ ಬಟ್ಟಲು ತುಂಬಿದಮೃತವೀ ।
ನೇಮವಿದಾರಿಗೆ ತಾಯೆ ॥

ಮಗಳೆ ನೀನರಿಯವ್ವ ನಿಗಮಗೋಚರನಾತ ।
ಗಗನಕೆ ಶಿವಘನ ಮಹಿಮ ॥
ಹಗಲಿರುಳೆಂಬ ಲೆಕ್ಕಕೆ ಪ್ರೊಳಗಾಗದ ।
ಜಗದೀಶಗೆ ಹಾಲ ನೇಮ ॥

*　　　*　　　*

ಎನ್ನ ತಾಯೆ ಶಿವಗಮೃತವ ನೊಯ್ವ್ಯಾಗ ।
ಯೆನ್ನ ನೀನೊಡಗೊಂಡು ಹೋಗು ॥
ಪನ್ನಗಧರನ ಕುರುಹ ನೋಡುವೆನೆಂದು ।
ತನ್ನ ತಾಯಡಿಗೆರಗಿದಳು ॥

*　　　*　　　*

ಹರನ ಶಿವಾಲಯದ ಸುತ್ತುವಳಯದಲ್ಲಿ ।
ತರಳೆ ಪ್ರದಕ್ಷಿಣ ಬರುತ್ತ ॥
ಗರುವೆ ನೋಡಿ ಚಿತ್ರವ ಬೆಸಗೊಳ್ಳಲಾಗ ।
ತರುಣಿಗೆ ಮಾತೆ ಹೇಳಿದಳು ॥

*　　　*　　　*

ಹರನ ಮಹಾಮಹಿಮೆಯು ಘನತರವನು ।
ತರಳೆಗೆ ಉರುತರವಾಗಿ ॥
ವರಪಿತ್ರ ಸೋಮೇಶ್ವರಯಿಷ್ಟಲಿಂಗವು ।
ಬೆರಸಿ ಬೆಚ್ಚಂತೆ ಯೊಪ್ಪಿದಳು ॥

ಮಾತೆಯು ಮಾತ ಕೇಳುತಲಾ ಕ್ಷಣದೊಳು ।
ಸೋತಳು ಹೇರೂರ ಹೆಣ್ಣು ॥

ಈತನ ಭಕ್ತಗಲ್ಲದೆ ವಧುವಾಗೆನು
ಭೂತೇಶ ಎನಗಿದು ನನ್ನಿ ॥

* * *

ಮಗಳೆ ನಮ್ಮಯ್ಯನ ಮನೆಯುಲಿಯೈಶ್ವರ್ಯ ।
ಬಗೆಬಗೆಸಾಲಿ ಬಂಗಾರ ॥
ಜಗದೊಳು ನಮ್ಮ ತಮ್ಮಗೆ ಯೆಣೆಯಿಲ್ಲೆಂದು ।
ವಿಗಡವ ನುಡಿಯಲಾ ಕ್ಷಣಕೆ ॥
ಭೂತಳಕಧಿಕನಾದಾವನ ನೆಲೆವನೆ ।
ಮಾತೆ ಕೇಳೌ ಯೆನ್ನ ತಾಯೆ ॥
ಭೂತಳದೊಳಗುಳ್ಳ ಅಧಮದೈವಗಳೆಲ್ಲ ।
ಭೂತೇಶಗೆ ಸರಿಬಹರೆ ॥
ದೇಗುಲವನು ಹೊಕ್ಕ ಗೂಗೆಯಲ್ಲವು ಭಕ್ತ ।
ನಾಗಬಲ್ಲದೆ ಎಲೆ ತಾಯೆ ॥
ಕಾಗೆಯು ಬಳಗ ಕೂಡಿದರೊಂದು ಹಂಸಿ ತಾ।
ನಾಗಬಲ್ಲದೆ ಎಲೆ ತಾಯೆ ॥
ಎಂದಿಂತು ಧರ್ಮಶಾಸ್ತ್ರವ ಪೇಳೆ ಕೇಳುತ ।
ಸಂದೇಳು ದಿವಸವ ಕಳೆದು ॥
ಇಂದುಧರನ ಭಕ್ತಿ ಕರುಣಗೊಂಡಿರುತಿರೆ ।
ಅಂದಿನದಿನ ತನ್ನ . ರುವೆ ॥
ಈ ಶಿವಕಥೆಯನು ಕೇಳದವರ ಪಾಪ ।
ನಾಸವಹುದು ನಿಮಿಷದಲಿ ॥
ಲೇಸ ಕೊಡುವ ಗಿರಿಜಾವರನೆಂಬ ವಿ ।
ಲಾಸದ ಸಂಧಿ ಮುಗಿಯಿತು ॥

Colophon :—

ಪ್ರಥಮ ಸಂಧಿ ಸಮಾಪ್ತಂ ಮಂಗಳ ಮಹಾಶ್ರೀ.

End :—

ಭೂತಳದೊಳು ಭಕ್ತರಾತ್ಮಜ ಮನುಜಗೆ
ಶಿವ ಕೊಡುವನು ತನ್ನ ಕೃಪೆಯ ॥ (?)
ಜಾತರಹಿತಶರಣ (ರನಾಂ) ಗತ್ಯವ ।
ಜಾತಿ ನಿಪುಣರು ಚಿತ್ತೈಸಿ ॥
ಇಳೆಯೊಳಗಾವಾವ ಕುಲದವನಾಗಲಿ ।
ತ್ರಿಣಯನ ಪೂಜೆ ಮಾಡಿದಗೆ ॥
ಒಲಿದು ಶರಣ ಪದವಿತ್ತು ಶ್ರುತಿಗಳು ।
ಸಾರಿದುವು ಸಂಧಿ ಸಂಪೂರ್ಣ ॥ (?)

Colophon :—

ಅಂತು ಸಂಧಿ ೩ ಕ್ಕಂ ಪದನು . . . . ಮಂಗಳ ಮಹಾಶ್ರೀ.

(ಪಿ.ವಿ.)—

ಸಮಗ್ರ. ಶಿಥಿಲವಾದ ಪ್ರತಿ. ೨೮ ನೆಯ ಓಲೆಯಿಲ್ಲ. ಮೊದಲ ಓಲೆ ಮುರಿದಿದೆ. ಲಿಪಿ ಚೆನ್ನಾಗಿದೆ. ಇದರೊಡನೆ ಮದನ ಮೋಹಿನೀಕಥೆಯಿದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ೩ ಸಂಧಿಗಳಿವೆ. ಇದರಲ್ಲಿ ಕಥಾಗರ್ಭವನ್ನು “ಹೇರೂರ ಹೆಣ್ಣು ಜೈನನ ಕಂಡು ಮನ ಹೇಸಿ” ಎಂದು ಆರಂಭವಾಗುವ ಪದ್ಯದಲ್ಲಿ ಹೇಳಿದೆ. ಕಥಾ ವಿಷಯವನ್ನು ಮೇಲೆ ಸ್ವಲ್ಪಮಟ್ಟಿಗೆ ಉದ್ಧರಿಸಿ ಬರೆದಿದೆ.

ಕವಿ ಮಹದೇವ ಅಥವಾ ಮಹಾದೇವನೆಂಬುವನು. ಇವನು ವೀರಶೈವ ಕವಿ. ಇವನ ಕಾಲವು ಸುಮಾರು ೧೬೫೦ ಇರಬಹುದು ಎಂದು ಕವಿಚರಿತ್ರಕಾರರು ಬರೆಯುತ್ತಾರೆ.

No. 699. ಹೇರೂರು ಹೆಣ್ಣಿನ ಸಾಂಗತ್ಯವು-
HĒRŪRU HEṆṆINA SĀṄGATYAVU.

Substance, palm-leaf. Size, $9\frac{3}{4} \times 1\frac{1}{8}$ inches. Pages 138. Lines, 4 on a page. Character, Kannaḍa. Condition, much injured. Appearance, old. Mode of writing, not bad.

•Wants some foll. in the beginning and here and there in the middle. Otherwise complete.

Date of transcription :—Wednesday, the second day of the bright fortnight of the lunar month Vaiśākha in the year Citrabhānu.

Name of the scribe :—Gōpayya, son of Ācaṇṇahebbāruva of Hoṅganoor for Muddasetty, son of Gaṅgisetty of Kestūr.

Same work as that described above.

(ಪಿ.ವಿ.)—

ಈ ಪ್ರತಿಯಲ್ಲಿ ೯,೨,೧೦,೧೧,೧೬,೧೫,೨೨,೩೦,೩೧,೩೮,೪೦ ಈ ಹನ್ನೊಂದು ಓಲೆಗಳಿಲ್ಲ. ಕೊನೆಯ ಓಲೆಯ ಸಂಖ್ಯೆ ೮೦. ಅತಿ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಇದರ ಕೊನೆಯಲ್ಲಿ “ಶ್ರೀಮಚ್ಚಿತ್ರಭಾನು ಸಂವತ್ಸರದ ವೈಶಾಖ ಶು. ೨ ಬುಧವಾರದಲ್ಲು ಕೆಸ್ತೂರ ಗಂಗಿ ಸೆಟ್ಟಿ ಮಗ ಮುದ್ದ ಸೆಟ್ಟಿಗೆ ಐಶ್ವರ್ಯ ಅಷ್ಟಪುತ್ರರು ಆಗಬೇಕೆಂದು ಹೊಂಗನೂರ ಆಚಣ್ಣ ಹೆಬ್ಬಾರುವನ ಮಗ ಗೋಪಯ್ಯನು ಬರೆದಂಥ ಹೇರೂರ ಹೆಣ್ಣಿನ ಸಾಂಗತ್ಯದ ಪುಸ್ತಕಕ್ಕೆ ನಿರ್ವಿಘ್ನಮಸ್ತು” ಎಂದಿದೆ. ಇದರಲ್ಲಿ ಕಂಡು ಬರುವ ಕೆಸ್ತೂರು, ಹೊಂನೂರುಗಳು ಮೈಸೂರು ಜಿಲ್ಲೆಗೆ ಸೇರಿವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಕವಿ ಮಹಾದೇವನು.

No. 700. ಹೇರೂರು ಹೆಣ್ಣಿನ ಸಾಂಗತ್ಯವು-
HĒRŪRU HEṆṆINA SĀṄGATYAVU.

Substance, palm-leaf. Size, $16\frac{3}{16} \times 1\frac{1}{4}$ inches. Pages, 76. Lines, 6 on a page. Character, Kannaḍa. Condition, very much injured. Appearance, old. Mode of writing, fair.

Wants one fol. in the beginning. Otherwise complete.

Same work as that described above.

(ವಿ-ವಿ.)—

ಮೊದಲ ಒಂದೋಲೆಯಿಲ್ಲ. ಇಲ್ಲದಿದ್ದರೆ ಪೂರ್ಣವೆನ್ನಬಹುದಿದ್ದಿತು. ಹಿಂದಣ ಮತ್ತು ಈ ಪ್ರತಿಗಳಿಗೆ ಪಾಠ ಭೇದ ಮುಂತಾದ ವ್ಯತ್ಯಾಸಗಳಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಕವಿ ಮಹಾದೇವನು.

No. 701. ಅಕ್ಕಗಳ ವಚನ.

AKKAGAḶA VACANA.

Substance, palm-leaf. Size, 11½ × 1⅝ inches. Pages, 6. Lines, 11 on a page. Character, Kannaḍa. Condition, very much injured. Appearance, old. Mode of writing, good.

Begins on fol. 20-*a* of the manuscript described under No. 467 ante.

Similar to the work described under No. 435 ante.

(ವಿ-ವಿ.)—

ಇದರಲ್ಲಿ ಕೆಲವು ವಚನಗಳಿವೆ. ಹಿಂದಣ ೪೩೫ ನೆಯ ನಂಬರಿನಲ್ಲಿ ವರ್ಣಿತಗಳಾದ ವಚನಗಳನ್ನೂ ಇವನ್ನೂ ಬರೆದವಳು ಒಬ್ಬಳೇ ಆಗಿರಬಹುದು. ಇದರ ಆದ್ಯಂತ ಭಾಗಗಳನ್ನು ಉದ್ಧರಿಸಿ ಬರೆಯಲಾಗಿದೆ.

Beginning :—

. . . . . . ಗಂಡನೆಂಬುತಿದೇನೆಯಮ್ಮ, ಚಿಂತೆಯ ಕಳೆವೆ ನಿಶ್ಚಿಂತವಂ ಮಾಡುವೆ ನಿಜದಲಿ ಯಿಡುವೆನೆಯಮ್ಮ, ಮಗಳ (ವಾ) ರದ ದಿನ ಮನೆಯಂ ಸಾರಿಸಿ ಮು . . . . ಯ ಕೆ . . . . . ಹುಟ್ಟಿದ ಮಾರ್ಗದಲಿ ಹುಬ್ಬ ಹಳಿಗೆ (? ಹುಬ್ಬಳ್ಳಿ) ಹೋಗು ನಿರ್ಮಳಲಿಂಗವುಂಟು.

End :—

« ಮುಖಕಮಲ [ಸಿ] (ನಿ)ಕರ ಸಿಂಹಾಸನಾಗ್ರದ ಮೇಲೆ ।
ಮಕರ ತೋರಣವದರ ಕೆಲಕೆಲದಲಿ ।
ಸಕಲ [ಗನ] (ಜನ) ತಿಂತಿಣಿ ಜಯ ಜಯ ಜಯತು ಎಂದೆನಲು ।
ಗುಹೇಶ್ವರನ ಶರಣ ಸಿದ್ಧರಾಮ ॥

ಕಡೆಯ ವಚನ.—ಮಹಲಿಂಗದೇವರಿಗೆ ಅರ್ಪಿಸಬೇಕೆಯಮ್ಮ ಇಂತಿವೆ ಒಂದೆ ಎರಡೆ ಮೂರೆ ನಾಲ್ಕೆ ಐದೆ ಆರೆ ವಿವೇಕವಳಿವೆಂಬ ಎಕ್ಕಿಯ ಬೆನಕನ ವರವೆಯಮ್ಮ. ಯಡೆದೆರವಿಲ್ಲದೆ ಬಳ ಹೊರಗೆ ಪರಿಪೂರ್ಣವಾಗಿ ಪೇಳ್ದೆನೆಯಮ್ಮ.

Colophon :—

ಅಕ್ಕಗಳ ವಚನ ಶ್ರೀ.

ಇದು ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ ಇದರೊಡನೆ ಗುಹೇಶ್ವರವಚನಗಳಿವೆ.

No. 702. ಅಕ್ಕಮಹಾದೇವೀ ವಚನ.

AKKAMAHĀDĒVĪ VACANA.

Substance, palm-leaf. Size, $6\frac{1}{8} \times 1\frac{1}{8}$ inches. Pages, 12. Lines, 5 on a page. Character, Kannaḍa. Condition, very injured. Appearance, old. Mode of writing, good.

Begins on fol. 77-*a*. The other works herein are :—(1) Vīrasaṅgayyana caritre, 1-*a*. (2) Prabhudēvaru prasarisida vacana, 72-*a*. (3) Śiva śaraṇāṣṭaka, 83-*a*. (4) Saṅgamēśvarāṣṭaka, 85-*b*.

Complete.

Similar to the work described under No. 435 ante.

(ವಿ-ಪಿ.)—

ಇದರಲ್ಲಿ ಕೆಲವು ವಚನಗಳಿವೆ. ಹಿಂದಣ ೪೩೫ ನೆಯ ನಂಬರಿನಲ್ಲಿ ವರ್ಣಿತಗಳಾದ ವಚನಗಳನ್ನೂ ಇವನ್ನೂ ಬರೆದವಳು ಒಬ್ಬಳೇ ಆಗಿರಬಹುದು. ಇದರ ಆದ್ಯಂತ ಭಾಗಗಳನ್ನು ಉದ್ಧರಿಸಿ ಬರೆಯಲಾಗಿದೆ.

Beginning :—

"ಇಂದ್ರನೀಲದ ಗಿರಿಗಳನೇರಿಕೊಂಡು ಚಂದ್ರಕಾಂತ ಶಿಲೆಗಳ ಮೆಟ್ಟಿಕೊಂಡು . ಂ ಬಾಚರಿಸುತ ಹರನೆ ಎನ್ನ ಕುಂಭ . . . ಮೇಲೆ . ವ್ಮಯೆಂದರಿ . ಕೊಂಬೆನಯ್ಯ ಅಂಗಲಿಂಗವುನಭಂಗವಳಿದು ನಿಮ್ಮ . . . . ಗೊಮ್ಮ ನೆರದೆನು ಚೆನ್ನಮಲ್ಲಿಕಾರ್ಜುನ"—

* * * *

"ಇಂತು ಮಹಾದೇವಿಯಕ್ಕಗಳು ಶ್ರೀಗಿರಿಯತ್ತ ಮುಂತಾಗಿ ನಡೆಯುತ್ತ ವನಾಂತ್ರರದೊಳು ದುಷ್ಟದಾರಿಯಲಿ ಕಂಡ ಜಗಮೃಗಂಗಳಲ್ಲಿ ಅವರೊಡನೆ ನೊಳು ನುಡಿಯ ನುಡಿವುತಿರ್ದ ಪ್ರಸ್ತಾವದವಚನ"—

End :—

ಇಂತು ಮರುಗಿ ದೇವಿ ಅಕ್ಕಗಳು ವನಾಂತರದೊಳಗೆ ಶಿವಭಾವ ಸಂಪನ್ನೆಯಾಗಿ ಸುಳದಾಡುತ ಬಂದು ಪರ್ವತವೇರುತಿರ್ದ ಪ್ರಸ್ತಾವದವಚನ ॥—

Colophon :—

ಅಕ್ಕಗಳವಚನ ಸಮಾಪ್ತವು.

ಇದು ಅತ್ಯಂತ ಶಿಥಿಲವಾದ ಪ್ರತಿ ಲಿಪಿ ಚೆನ್ನಾಗಿದೆ. ಇದರೊಡನೆ ವೀರಸಂಗಯ್ಯನ ಚರಿತ್ರೆ, ಪ್ರಭುದೇವರು ಪ್ರಸರಿಸಿದ ವಚನ, ಶಿವಶರಣಾಷ್ಟಕ, ಸಂಗಮೇಶ್ವರಾಷ್ಟಕ ಇವೂ ಇವೆ.

No. 703. ಅಕ್ಕಮಹಾದೇವೀ ವಚನ.

AKKAMAHĀDĒVĪ VACANA.

Substance, paper. Size, $10\frac{3}{8} \times 9\frac{1}{2}$ inches. Pages, 3. Lines, 20 on a page. Character, Kannaḍa. Condition, good. Appearance, new. Mode of writing, good.

Begins on page 54. The other works herein are :—(1) Vīrasaṅgayyana caritre, page 1. (2) Prabhudēvaru prasarisida vacana, page 52. (3) Śiva śaraṇāṣṭaka, page 57. (4) Saṅgamēśvarāṣṭaka, page 58.

This is a copy of the manuscript described under the previous number (702).

(ವಿ-ವಿ.)—

ಇದರಲ್ಲಿ ಕೆಲವು ವಚನಗಳಿವೆ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ವೀರಸಂಗಯ್ಯನ ಚರಿತ್ರೆ, ಪ್ರಭುದೇವರು ಪ್ರಸರಿಸಿದ ವಚನ, ಶಿವ ಶರಣಾಷ್ಟಕ, ಸಂಗಮೇಶ್ವರಾಷ್ಟಕ ಇವೂ ಇವೆ.

No. 704. ಅಮ್ಮವ್ವೆಯ ರಗಳೆ.

AMMAVVEYA RAGAḶE.

Substance, palm-leaf. Size, 13⅜ × 1⅝ inches. Pages, 18. Lines, 4 to 5 on a page. Character, Kannaḍa. Condition, much injured. Appearance, old. Mode of writing, good.

Incomplete.

Begins on fol. 71-*a* of the manuscript described under Sanskrit D. No. 6990.

Deals with the story of Ammavve a devotee of Śiva.

Beginning :—

ಅಮವೆಯ ರಾಗಳೆ (ಅಮ್ಮವ್ವೆಯ ರಗಳೆ ?)

ಕಂ ॥ ಶ್ರೀವರದ ಗುರುವೆ ತ್ರೈಜಗ
ಪಾವನ ನಿಜ ಭಕ್ತಿ ಭರಿತ ನಾಥರ ನಾಥಂ ।
ಭೂವಲಯ ದೊಳಮ್ಮವ್ವೆಯ ।
ಭಾವಕೆ ಮಿಗೆ ಮೆಚ್ಚಿ ಮೆರೆದ ಗುರು ವಿಶ್ವೇಶಂ ! ॥

ರಗಳೆ ॥ ಶ್ರೀದಿವ್ಯಭೂಸ್ಥಳಕೊಪ್ಪುವ ದೇಶವು ।
ಸೇವ್ಯವು ಕರ್ಣಾಟಕ ಸುಖವಾಸವು ॥
ಆದೇಶವು ಸುರ ಲೋಕಕ್ಕೆಣೆಯದು ।
ಆದಿಯ ಪ್ರಮಥರ ಮೆರಹಿನ ಕಣಿಯದು ॥
ಆ ನಾಡೊಳು ಬಿಜ್ಜಾವರ ಮೆಂಬುದು ।
ಮಾನವಲೋಕಕೆ ಸಿರಿಯೆನೆ ತೋರ್ಪುದು !
ಅಗ್ರಹಾರ ಶಿವಯೊಗ ಮಯೋಗ್ಯರು ।
ಆ ಗ್ರಾಮದ ಜನರೆಲ್ಲ ಶಿವೈಕ್ಯರು

ಶಿವನಿಷ್ಠಾಪರ ವೇದಾಢ್ಯರುಗಳು ।
ಶಿವನ ಪುರಾಣದ ಶಾಸ್ತ್ರಜ್ಞರುಗಳು ॥
ನೊಸಲಲಿ ಭಸಿತವನಲ್ಲದೆ ಧರಿಸರು ।
ಅಸಮಾಕ್ಷಂಗಲ್ಲದೆ ಮನವೆಳಸರು ।
ದಿವ್ಯಲಿಂಗ ನಾಗೇಶ (? ಶ್ವ) ರ ದೇವರು ।
ಸರ್ವಲೋಕ ವರದಾಯಕ ದೇವರು ॥
ಪ್ರೊದಪಿದ ಪೊಂಗಳಸದ ದೇವಾಲ್ಯವು ।
ಅದು,ಮೊದಲಾಗಿರೆ ಹಲವು ಶಿವಾಲ್ಯವು ॥
ಇಂತೀ ಪೊಳಲೊಳಗಿಹಳಮ್ಮವ್ವೆಯು ॥
ಸಂತತಭಕ್ತಿಯು ಕರುವಂ ಮಾವ್ವೆಯು ॥

*   *   *   *

End :—

ಬಂದುದು ಆಗಲೆ ಪುಷ್ಪಕ ಬೇಗಂ ।
ದುಂದುಭಿನಾದವು ಸೂಳೈಸುತ್ತಿರೆ ॥
(ಅಥವಾ) ಛಂದದ ವಾದ್ಯವು ಮೊಳೈಸುತ್ತಿರೆ ॥
ಶರೀರ ಸಹಿತೆಮ್ಮವ್ವೆಯು ನೊಂದ್ದಂ ॥
ಕರಮುಗ್ಧೆಯು ಸವ್ಯಕ್ಯಸುಪ್ರೊದಂಯಿ ॥

*   *   *   *

(ವಿ-ವಿ.)—

ಅಸಮಗ್ರ· ಶಿವ ಭಕ್ತೆಯಾದ ,, ಅಮ್ಮವ್ವೆಯು ” ಕಥೆಯಿದೆ.

No. 705. ಅರುವತ್ತುಮೂವರು ಪುರಾತನರ ತ್ರಿವಿಧಿ.

ARUVATTUMŪVARU PURĀTANARA TRIVIDHI.

Substance, Śrītāla. Size, 8 × 1 inch. Pages, 4. Lines, 8 on a page. Character, Kannaḍa. Condition, injured. Appearance, old. Mode of writing, good.

Begins on fol. 1-*a* of the manuscript described under No. 678 ante.

Complete.

Gives an account of the sixty-three devotees of Śiva. The author is Nijaguṇa Śivayōgi.

Beginning :—

ಶ್ರೀಗುರುವೆ ನಿಜಸುಖದ ಸಾಗರವೆ ತೆರೆ ಮಸಗು ॥
ತಾಗಳುಂ ಬೆಳಗುತಿಹ ನಿನ್ನ ಕಡೆಗಣ್ಣ ।
ಳೀಗೆ ಸಂತಸವನಖಿಳರ್ಗೆ ॥ ೧ ॥

ಶರಣಜನಸುಖತಂಗೆ ಕರುಣಾರಸಭರಿತಂಗೆ ।
ದುರಿತದೂರಂಗೆ ಗಿರಿಸುತೆಯ ರಮಣಂಗೆ ।
ಗುರು ಶಂಭುವಿಂಗೆ ನತನಪ್ಪೆ ॥ ೧ ॥
ಇಂಗಡಲೊಳಂಪ್ರ ಬೆಳದಿಂಗಳೊಳು ತಂಪ್ಪ ಕುಸು ।
ಮಂಗಳೊಳು ಕಂಪು ಪೆರೆದಂತೆ ಪರಮನೊಳು ।
ಪಿಂಗದಗಸು ತೆಗೆ ನತನಪ್ಪೆ ॥
ಮಿಗುನಿ ದೊಡವೆನಿಸಿ ಪಲವ್ಯಸರು ದಳದಂತೆಭಾ ।
ವಿಸಿ ನೋಡಲಭವನಖಿಳವೆನಿಸಿರ್ದ ಗಣಾ ।
ವಿಸರವೆಲ್ಲಕ್ಕೆ ನತನಪ್ಪೆ ॥

* * * *

End :—

ಇಂತು ನಿಜಗುಣಯೋಗಿ ಸಂತಸದೊಳೊರೆದುವನ ॥
ಸಂತ ಮಹಿಮಾಂಬುನಿಧಿ ಶಂಭು ತಾನೊಪ್ಪೆ ॥
ಸಂತೆಯಿಂ ಪಾಡಿ ಸುಕಮಿಕ್ಕೆ ॥

Colophon :—

ಇತಿ ಶ್ರೀನಿಜಗುಣಶಿವಯೋಗಿವಿರಚಿತಾಯಾಂ ಅರುವತ್ತು ಮೂವರು ಪುರಾತನರ ತ್ರಿವಿಧಿ ಸಂಪೂರ್ಣ. ಮಂಗಳ ಮಹಾ.

(ವಿ-ವಿ.)—

ಸಮಗ್ರ.

ತ್ರಿಷಷ್ಟಿ ಮಹಾಪುರುಷರ ಚರಿತೆಯನ್ನು ಹೇಳಿದೆ. ಈ ಅರುವತ್ತು ಮೂವರುಜನರನ್ನು "ಪುರಾತನರು" ಎನ್ನುವರು. ಇವರು ವೀರಶೈವ ಭಕ್ತರು. "ನಿಜಗುಣ ಶಿವಯೋಗಿ" ಎಂಬವನು ಈ ಗ್ರಂಥದ ಕರ್ತೃವು.

No. 706. ಇಷ್ಟಲಿಂಗ ಚಾರಿತ್ರ-

IṢṬALIṄGA CĀRITRA.

Substance, Śrītāla. Size, $13\frac{3}{4} \times 1\frac{7}{8}$ inches. Pages, 8. Lines, 8 to 9 on a page. Character, Kannaḍa. Condition, much injured. Appearance, old. Mode of writing, good.

Begins on fol. 1-*a* of the manuscript described under No. 592 ante.

This also contains Viraśaivaviṣaya (No. 793) Foll. 62*a*-63*b*.

Complete.

Same work as that described under No. 620 ante.

Beginning :—

ಆಹಾ ಮಹಾದೇವ ನಾನೇಂ ಕೃತಾರ್ಥನೋ ನಾಹಂ ಕೋಹಂ ಸೋಹ ಮೆಂಬ ಭ್ರಮೆಯ . . . .

* * * *

ಮಾಡಿತೆಲ್ಲಂ ಶಿವಾರಾಧನೆ ನಿರಂತರಂ ।
ನೋಡಿತೆಲ್ಲಂ ಮಹೇಶ್ವರ ನಿರೀಕ್ಷಣೆ ವಲಿದು ।
ಕೂಡಿತೆಲ್ಲಂ ಶಿವಾನಂದ ಸುಖರಸದ ಗತಿತಾನವಾನಂಗಳಿಂದ ॥
ಪಾಡಿತೆಲ್ಲಂ ಷಡಕ್ಷರಿಲೀಲೆ ಬಂದಂತೆ ।
ಮಾಡಿತೆಲ್ಲಂ ಪುರಾಣಾಗಮ ಶ್ರುತಿಸ್ಮೃತಂ ।
ಬೇಡಿತೆಲ್ಲಂ ಪರಮಭಕ್ತಿ ಶಿವಲಿಂಗಂ ಕರಸ್ಥಳಕೆ ಬಂದುದಾಗಿ ॥
ಕಂಪೆಸೆವ ಕರವೀರ ಕಂಪೆಸೆವ ಸುರಹೊನ್ನೆ ॥
ಕಂಪೆಸೆವ ಹೇರೀಳೆ ಕಂಪೆಸೆವ ಹೊಂಬಾಳೆ ॥
ಕಂ ಸೆವ ಮುಡಿವಾಳ ಕಂಚೆಯಾಳಂ ಕರಂ ಕಂಪೆಸೆ ವ ಸುಮಚಂಪಕ ॥
ಕಂಪೆಸೆವ ಬಗೆ ಬಕುಳ ಕಂಪೆಸೆವ ಸೇವಂತಿ .
ಕಂಪೆಸೆವ ಇರುವಂತಿ ಕಂಪೆಸೆವ ಅದ್ರುಗಂತಿ ॥
ಕಂಪೆಸೆವ ಮೊಲ್ಲೆಯೊಳು ಕಂಪೆಸೆವ ಶರಣತತಿಲಂಪಟನ ಪೂಜಿಸುವೆನು ॥

*   *   *   *

End :—

ಗುರುವೆ ಶರಣಾರ್ಥಿ ಶಂಕರಲಿಂಗ ಭಕ್ತಸುರ ॥
ತರುವೆ ಶರಣಾರ್ಥಿ ಶಂಕರಲಿಂಗ ಕಾರುಣದ ॥
ಕರುವೆ ಶರಣಾರ್ಥಿ ಶಂಕರಲಿಂಗ
ತರುಣನೊಳು ತಪವಲ್ಲದಿರುವಿ ನೀನಜಸುಪರ ।
ಪರಚರ್ವಾರ್ಗದೇಹಿ . . . . . .
. . . .

Colophon :—

. . . ಸ್ತು . ಮಂಗಳ ಮಹಾ.

(ವಿ-ವಿ.)—

ಸಮಗ್ರ . ಆದರೆ ಅಲ್ಲಲ್ಲಿ ಓಲೆಗಳು ಮುರಿದಿರುವುದರಿಂದ ಕೆಲವೆಡೆಗಳಲ್ಲಿ ಗ್ರಂಥಪಾತ್ರವಿದೆ. ವಾರ್ಧಿಕ ಷಟ್ಪದಿಯಲ್ಲಿದೆ. ೪೭ ಪದ್ಯಗಳಿವೆ.

No. 707. ಎಲ್ಲಾ ಪುರಾತನರ ತ್ರಿವಿಧಿ.

YELLĀ PURĀTANARA TRIVIDHI.

Substance, palm-leaf. Size, $13\frac{3}{8} \times 1\frac{3}{8}$ inches. Pages, 14. Lines, 4 to 5 on a page. Character, Kannaḍa. Condition, much injured. Appearance, old. Mode of writing, good.

Begins on fol. 63-*b* of the manuscript described under (Sanskrit) D. No. 6990.

Deals with some of the devotees of Śiva. The name of the author is not known.

Beginning :—

ಎಲ್ಲಾ ಪುರಾತನರ ತ್ರಿವಿಧಿ.

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಘನ
ಅಘಹರನೆ ನಿಮ್ಮ ಶರಣರ ಸಂಪದವ ।
ಪೊಗಳಲೆನ್ನಳವೆ ಶಿವ ಬಲ್ಲ ॥ ೧ ॥

* * * *

ಕಾಳು ಭವಗಳನೊಡೆದು ಖೂಳಾಕ್ಷಗೆ ಪಾಲು[ಡಿ](ಣಿ)ಸಿ
ಹೇಳದೆ ತನ್ನವರ ಬಿಟ್ಟು ಲಿಂಗವ ಪೊಕ್ಕ
ಕೋಳೂರ ಕೊಡಗೂಸೆ ಶರಣಾಗು॥ ೪೭ ॥

* * * *

End :—

ಅಲ್ಲಿ ಮಾಯೆಯು ಜರೆದು ನಿಲ್ಲದೆ ಮರ್ತ್ಯಕೆಬಂದು ।
ಎಲ್ಲಾ ಪ್ರಮಥರನು ಸಲಹಿ ಕದಳಿಯ ಪೊಕ್ಕ
ಅಲ್ಲಮಪ್ರಭುವೆ ಶರಣಾಗು ॥ ೬೩ ॥
ಎಲ್ಲಾ ಪುರಾತನರ ಮೆಲ್ಲಡಿಗಳಪಾಡಿ ।
ಯೆಲ್ಲ ದುರಿತಗಳು ಕ್ಷಯವಹವುಯಿದಬಿಡದೆ ।
ಎಲ್ಲ ತ್ರೈಕಾಲದೊಳು ಜಪಿಸಿ ॥

Colophon :—

ಎಲ್ಲಾ ಪುರಾತರ ತ್ರಿಪಧಿ ಸಮಾಪ್ತ ॥ ಮಂಗಳ ಮಹಾ ಶ್ರೀ ಶ್ರೀ ಶ್ರೀ.

(ವಿ-ವಿ.)—

ಶಿವಭಕ್ತರಲ್ಲಿ ಮುಖ್ಯರಾದ ಪುರಾತನರನ್ನು ಸ್ತುತಿಸುವುದಾಗಿಯೂ ಅವರ ದಯೆಗಾಗಿ ಬೇಡಿಕೊಳ್ಳುವುದಾಗಿಯೂ ಇರುವ ಸ್ಥಿತಿಯು ಈ ತ್ರಿಪದಿಗಳಲ್ಲಿ ಸ್ಪಷ್ಟವಾಗಿದೆ. ಕರ್ತೃ ಮೊದಲಾದ ವಿಷಯಗಳು ತಿಳಿದು ಬರುವುದಿಲ್ಲ.

No. 708. ಎಲ್ಲಾ ಪುರಾತನರ ವಚನಾಮೃತಸಾರ.

ELLĀ PURĀTANARA VACANĀMṚTĀSARA.

Substance, Śrītāla. Size, 18¾ × 2 inches. Pages, 14. Lines, 7 to 9 on a page. Character, Kannaḍa. Condition, very much injured. Appearance, old. Mode of writing, good.

Begins on fol. 51-*a*. The other work herein is :—(1) Basavapurāṇada purātanara caritre, 1-*a*.

Incomplete. Contains vacanas 64 to 94 and 210 to 261 complete.

This is a collection of 261 vacanas or prose passages taken from different earlier writers. The name of the compiler is Haratāḷa Cennañjēdēva.

Beginning :—

ದು ಕೊಂಡೆಂತಾಯಿತು ನೋಡಯ್ಯಾ । ಎನ್ನ ನಂದಿಯ ಮೊಗವಾಡ ನೊಸಲ ಕಣ್ಣಾಂ ಟೆಂಬ ಅಹಂಕಾರವಂ ಮುಂದುಗೊಂಡಿರ್ದ ನೋಡಯ್ಯಾ . . . . ಳವ ಕಂಡು ಬದುಕಿದೆನು ಕಾಣಾ ನಿಜಗುರು ಶಂಕರದೇವ ॥ ೬೪ ॥

End :—

ಸ್ಥೂಲ ಕಂಥೆ ಸೂಕ್ಷ್ಮ . . ರ ಸತ್ಯ . . ಶಾಂತಿಭಸಿತ ಚಿತ್ತ ಮಣಿ, ತತ್ವ ಕಪ್ಪುರ, ವೈರಾಗ್ಯ ಹಾವುಗೆ, ಮನದೃಢವೆ ಕಾಪು, ಆಚಾರವೆ ಕಂಕಣ, ಕ್ಷಮೆ ದಮೆ ಕರ್ಣಕುಂಡಲ, ಇಂತಿವೆರಸಿ ಸುಳಿದನು ಜಗತ್ಪಾವನವ ಮಾಡಲೆಂದು ಭಕ್ತಿ ಭಿಕ್ಷವ ಬೇಡುತ್ತಾ ಬಂದನಯ್ಯಾ । ತನ್ನ ವೊಲುಮೆಯ ಶರಣರಿಗೆ ನಿಜಸುಖವನೀಯಲೆಂದು ಶಿರಿ ದೇವಾ ನಿಮ್ಮ ಶರಣ ಪ್ರಭುದೇವರ ಶ್ರೀಪಾದವ ಕಂಡು ಅರ್ಚಿಸಿ ಪೂಜಿಸಿ ನಿಶ್ಚಿಂತನಾದೆನು ॥ ೨೬೧ ॥

Colophon :—

ಹರತಾಳ ಚೆನ್ನಂಜೆದೇವರು ಸೇರಿಸಿದ ಎಲ್ಲಾ ಪುರಾತರ ವಚನಾಮೃತಸಾರ ಸಮಾಪ್ತಂ ಮಂಗಳ ಮಹಾ ಶ್ರೀ.

(ವಿ-ವಿ.)—

ಅಸಮಗ್ರ. ಇದರಲ್ಲಿ ವಚನಗಳು ೬೪ ರಿಂದ ೯೪ ಮತ್ತು ೨೧೦ ರಿಂದ ೨೬೧ ಇವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಕೊನೆಯಲ್ಲಿ ಹರತಾಳ ಚೆನ್ನಂಜೇಶ್ವರ ಸಂಬಂಧವಾದ,

"ಕರುಣಾಂಭೋನಿಧಿ ನಿರ್ಮಲ ।
ಕರಶಾಂತನೆ ಕಾಮರಹಿತ ಮಾಯ ವಿದೂರನೆ ॥
ಶರಣ ಕ್ಷಮೆ ದಮೆಯ ಯೋಗಿಯೆ ।
ಹರತಾಳ ಚೆನ್ನ ನಂಜೇಶ್ವರ ಮಾಂ ತ್ರಾಹಿ ॥೧॥
ವಿಶ್ವ . . . . ।
ವಿಶ್ವಾಧಿಕ ರುದ್ರ ನೀನೆ ವಿಶ್ವೇಶ್ವರ ಜಯ ॥
ಶಾಶ್ವತ . ಕ ನಿರ್ಮಾಯನೆ ।
. . ಹರತಾಳ ಚೆನ್ನ ನಂಜೇಶ್ವರ ಜಯ ॥೨॥
ಆಱು ಸ್ಥಲಕೆ ಅತೀತನೆ ।
ಮೂಱನೆ ಲಿಂಗಾಗದೊಡನೆ ಸಮವೆರದ ಭವನೆ ॥
ಮೂಱನು ಪಳಿದ ನಿಸ್ಸೀಮ [ನೆ] ಕೃ ।
ಪಾಕರ ಸಲಹೆನ್ನ ಚೆನ್ನ ನಂಜೇಶ್ವರ ಜಯ ॥ ೩॥

ಈ ಮೂರು ಕಂದಪದ್ಯಗಳು ತಪ್ಪಾಗಿ ಬರೆದಿವೆ. ಇದರೊಡನೆ ಬಸವ ಪುರಾಣದ ಪುರಾತನರ ಚರಿತ್ರೆಯಿದೆ.

ಇದು ವಚನರೂಪವಾಗಿದೆ. ವಚನಗಳು ೨೬೧. ಹಿಂದಣ ಎಲ್ಲಾ ಪುರಾತನರೂ ಹೇಳಿದ ವಚನಾಮೃತಸಾರವನ್ನು ಹರತಾಳ ಚೆನ್ನಂಜೇಶ್ವರನು ಸೇರಿಸಿ ಬರೆದಿರುವಂತೆ ಇದರಿಂದ ಗೊತ್ತಾಗುತ್ತದೆ. ಉಳಿದ ವಿಷಯಗಳನ್ನು ಉದ್ಧೃತ ಭಾಗಗಳಿಂದ ತಿಳಿಯುವುದು.

No. 709. ಕರಣ ಹಸುಗೆ.

KARAṆA HASUGE.

Substance, Śrītāla. Size, 15 × 1¾ inches. Pages, 11. Lines, 10 on a page. Character, Kannaḍa. Condition, much injured. Appearance, old. Mode of writing, not bad.

Begins on fol. 6-*a* of the manuscript described under No. 536 ante.

Complete.

Same work as that described under No. 446 ante.

(ವಿ-ವಿ.)—

ಸಮಗ್ರ. ಅತಿಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳುವೆ. ಆ ಬಗೆಗೆ ಹಿಂದಣ ೫೩೬ ನೆಯ ನಂಬರನ್ನು ನೋಡಿ ತಿಳಿಯುವುದು.

ಇದು ಹಿಂದೆ ೪೪೬ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 710. ಕರಣ ಹಸುಗೆ.

KARAṆA HASUGE.

Substance, paper. Size, 9¼ × 7¼ inches. Pages, 5. Lines, 16 on a page Character, Kannaḍa. Condition, very much injured. Appearance, old. Mode of writing, good.

Begins on page 319 of the manuscript described under No. 19 ante.

Incomplete.

Same work as that described under No. 446 ante.

(ವಿ-ವಿ.)—

ಅಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಅವಾವುವೆಂಬುದನ್ನು ಹಿಂದಣ ೧೯ ನೆಯ ನಂಬರಿನಲ್ಲಿ ನೋಡುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಕವಿ ಚೆನ್ನಬಸವನೆಂಬುವನು.

No. 711. ಕರಸ್ಥಳದ ನಾಗಿದೇವರ ವಚನ.

KARASTHAḶADA NĀGIDĒVARA VACANA.

Substance, palm-leaf. Size, 7⅝ × 1⅛ inches. Pages, 2. Lines, 5 on a page. Character, Kannaḍa. Condition, much injured. Appearance, old. Mode of writing, good.

Begins on fol. 29-*a* of the manuscript described under No. 450 ante.

Incomplete.

Describes the ardent desire of a devotee for Mōkṣa.

Beginning :—

ಎಂದಿಗಹುದೋ ಮೋಕ್ಷ, ಮಿನ್ನೆಂದಿಗಹುದೋ ॥
ಮಂದಮಾನವ ನೋವಸಂದಿಸಿ . ಸಂದ ಸುಕ (? ಸೊಗ) ಮೆಂದಿಗಹುದೋ ॥ ಪಲ್ಲ ॥

* * * *

End :—

ತ್ರವರಾಜ ಸವಿಯು ಕೊಟ ॥

(ವಿ.ವಿ.)—

ಅಸಮಗ್ರ. ಓಲೆಯಲ್ಲಿ ವಚನವೆಂದು ಹೆಸರುಕೊಟ್ಟದು ಸರಿಯಾಗಿಲ್ಲ. ೫ ಪದ್ಯಗಳಿವೆ. ಮೋಕ್ಷಸುಖಕ್ಕಾಗಿ ಭಕ್ತನಿಗಿರುವ ಔತ್ಸುಕ್ಯವನ್ನು ತಿಳಿಸುತ್ತದೆ.

No. 712. ಕರಿಬಸವೇಶ್ವರ ವಚನ.

KARIBASAVĒŚVARA VACANA.

Substance, paper. Size, 10⅜ × 9½ inches. Pages, 118. Lines, 20 on a page, Character, Kannaḍa. Condition, good. Appearance, new. Mode of writing, good.

Complete.

This is a copy of the manuscript described under No. 455 ante.

(ಮಿ.ವಿ.)—

ಸಮಗ್ರ. ಇದು ಹಿಂದಣ ೪೫೫ ನೆಯ ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪ್ರತಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ.

No. 713. ಕಲ್ಯಾಣ ಮಾಹಾತ್ಮ್ಯ.

KALYĀṆA MĀHĀTMYA.

Substance, Śrītāla. Size, 13¼ × 2⅝ inches. Pages, 2. Lines, 13 on a page. Character, Kannaḍa. Condition, much injured. Appearance, old. Mode of writing, good.

Complete.

Begins on fol. 33-*b* of the manuscript described under No. D. 125 (Sanskrit Descriptive Catalogue).

Describes the greatness of Basava and of Kalyāṇa, where Basava lived.

Beginning :—

ಕಲ್ಯಾಣದ ಮಹತ್ಮೆಯ ವಚನ ॥
ಯೆಲ್ಲಾ ಶಿವಗಣಂಗಳು ಕೇಳಿ ಕೃತಾರ್ಥರಾಗಿರಯ್ಯ ।
ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಕಲ್ಯಾಣಪುರದ ಮಹಾತ್ಮೆಯೆಂತೆಂದೊಡೆ ।
ವಿಸ್ತರಿಸಿ ಪೇಳ್ವೆನು । ಯೆಲ್ಲಾ ಶಿವಗಣಂಗಳು ಕೇಳಿಕೃತಾರ್ಥರಾಗಿರಯ್ಯಾ ॥
ದೇವಲೋಕದ ದೇವಗಣಂಗಳು ಕೇಳಿ ಕೃತಾರ್ಥರಾಗಿರಯ್ಯಾ ॥
ಮರ್ತ್ಯಲೋಕದ ಮಹಾಗಣಂಗಳು ಕೇಳಿ ಕೃತಾರ್ಥರಾಗಿರಯ್ಯಾ ॥
ರುದ್ರಲೋಕದ ರುದ್ರಗಣಂಗಳು ಕೇಳಿ ಕೃತಾರ್ಥರಾಗಿರಯ್ಯಾ ॥

* * * *

End :—

ಶಿವಾಚಾರದ ಘನವ ಮೆರೆದಾತ ಬಸವಣ್ಣ, ಯಿಂತಪ್ಪ ಬಸವಣ್ಣನ ಭಕ್ತಿಜ್ಞಾನವೈರಾಗ್ಯ ನಿಷ್ಠೆಯನು ಬರದೊರದು ನೋಡಿ ಪ್ರಜ್ವಲಿಸಿ ಪ್ರಭರಿತವ ಮಾಡುವ ಅಶ್ವಪತಿ ಗಜಪತಿ ನರಪತಿರಾಯನ ರಾಜಾದಿರಾಜ ಬಿಜ್ಜಳ ಮಹಾರಾಯನು ಆ ಬಸವಣ್ಣನು ಕಲ್ಯಾಣಪಟ್ಟಣದಲ್ಲಿ ಸುಖಸಂಕಥಾ ವಿನೋದದಿಂ ರಾಜ್ಯಂಗೈವುತ್ತಿರಲು ಆ ಕಲ್ಯಾಣದ ನಾಮವಿಡಿದು ಮಹಾತ್ಮೆಯಂ ಮನಮೆಚ್ಚಿ ವಿಶ್ವಾಸದಿಂ ಕೇಳಿದರ್ಗೆ ಕರ್ಮಕ್ಷಯವಹುದು, ಬರೆದೋದಿದೊಡೆ ಮೋಕ್ಷಸಾಧನವಹುದು. ಇದು ಕಾರಣ ಕೂಡಲ ಚೆನ್ನಸಂಗಯ್ಯ ! ನಿಮ್ಮ ಭಕ್ತ ಬಸವಣ್ಣನಿದ್ದ ಠಾವೆ ಮಹಾಕಲ್ಯಾಣವೆಂದರಿದು ದಿಬ್ಯಶಾಸನಬರೆದು ವೋದಿ ಪಠಿಸಿ ಯಿದೆ ಸತ್ಯವೆಂದು ಸ್ಥಾಪನವ ಮಾಡಿದವರಿಗೆ ಸರ್ವಸಿದ್ಧಿಯಹುದಯ್ಯಾ ॥ ಕೂಡಲ ಚೆನ್ನಸಂಗಮ ದೇವಾ । ಪ್ರಜ್ವಲಿಸಿದ ಕಾರಣಯೆನ್ನ ಭವಂ ನಾಸ್ತಿಯಾಯಿತ್ತಯ್ಯಾ ॥

Colophon :—

ಕಲ್ಯಾಣದ ಮಹಾತ್ಮೆ ಸಮಾಪ್ತ. ಮಂಗಳ ಮಹಾ ॥

(ವಿ-ವಿ.)—

ಸಮಗ್ರ. ಬಸವನ ಶ್ರೇಷ್ಠತ್ವವನ್ನೂ ಕಲ್ಯಾಣದ ಮಾಹಾತ್ಮ್ಯವನ್ನೂ ವರ್ಣಿಸುತ್ತದೆ.

No. 714. ಕಾಳವ್ವೆಯ ವಚನ.

KĀḶAVVEYA VACANA.

Substance, paper. Size, 10⅜ × 9½ inches. Page, 1. Lines, 20 on a page. Character, Kannaḍa. Condition, good. Appearance, new. Mode of writing, good.

Begins on page 60. of the Ms. described under No. 545 ante. The other works herein are :—(1) Ṣaṭsthalanirṇaya, page 1. (2) Śīlasampādane, page 54. (3) Vibhūtiya māhātmya, page 61.

Complete. This is a copy of the manuscript described under No. 462 ante.

(ವಿ-ವಿ.)—

ಸಮಾಗ್ರ. ಇದು ಹಿಂದಣ ೪೬೦ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಷಟ್ಸ್ಥಲನಿರ್ಣಯ, ಶೀಲಸಂಪಾದನೆ, ವಿಭೂತಿಮಾಹಾತ್ಮ್ಯಗಳಿವೆ.

No. 715. ಕಿನ್ನರಿದೇವರು ನಿರೂಪಿಸಿದ ವಚನ.

KINNARIDĒVARU NIRŪPISIDA VACANA.

Substance, palm-leaf. Size, 13⅜ × 1⅜ inches. Pages, 18. Lines, 5 on a page. Character, Kannaḍa. Condition, much injured. Appearance, old. Mode of writing, good.

Incomplete.

Begins on fol. 84-*a* of the manuscript described under Sanskrit D. No. 6990.

Some topics on Śaiva Vēdānta are described in these songs.

Beginning :—

ಕಿನ್ನರಿದೇವರು ನಿರುಪಿಸಿದ ವಚನ.

ರಾಗ ಶಂಕರಭಾರಣ (? ಶಂಕರಾಭರಣ).

ನಿನ್ನ ನಾನೇನುವಂ ಬಯಸಿ ಬಳಲಿಸೆ ಗುರುವೆ ॥
ಎನ್ನೊಳು ನೀನಿಮಾಂನಂತ ಚೋದ್ಯ ಪಡಸಾಕು ॥ ಪಲ್ಲ ॥

ಅರಸುತನವು ಬೇಡ ಅದಕೆಪಿರಿದಪ್ಪೆಲ್ಲ ।
ಧರೆಯನಾಳುವ ರಾಯತನ ಮುಂನಬೇಡಾ ! ।
ಸುರಪತಿಯಭೋಗಾತಿಶಯ ಬೇಡ ನೀಯೆನ್ನ ।
ಶರಿರದೊಳಗಿಪ್ಪ ಸುಖವಕಾಣ್ಬುದೆ ನಾಕು ॥
ಅಣಿಮಾದಿ ಅಷ್ಟಸಿದ್ಧಿಯು ಬೇಡ ನೀನಿಚ್ಚ ।
ಅಣುರೇಣು ತೃಣಕಾಷ್ಠ ಭರಿತವಾದ ।
ಗಣನೆಯಿಲ್ಲದ ಸುಕದಣೆಯ ತೋರಿಸಿನಿಂತೆ (? ನೀ ನಿ)
ಗುಣ ಸಾಮ್ರಾಜ್ಯವಿತ್ತಿರಿಸೈಯ್ಯ ಗುರುವೆ ।

* * * *

End :—

ಅಲ್ಲಬೆಲ್ಲವಾದುದ ಕಂಡೆ ಅರಿಯೆನ್ನ
ಬಲ್ಲವರಿದ ಬಗೆಯ ಹೇಳ ॥ ಪಲ್ಲ ॥

ಉದರನೊಡವು ಮೂಡಿದುದೊಂದು ಪದ್ಮ ॥
ಪದದೊಳಗೆ[.]ರು ಕಶವು (ಮೂರು ಕಲಶವು)
ಅದರತುದಿಯಲೊಂದು ಲಿಂಗವಿಪ್ಪುದ ಕಂಡೆ ।
ಅದರಿಂದ ಮುಂದೆ ಶಿವಾಲ್ಯವ ಕಂಡೆ ॥ ೧ ॥

ಮೆಟ್ಟು ಮೂರು ಬಾಗಿಲೊಂದದರೊಳಗಣ
ಕಟ್ಟುವ ವಜ್ರದ ಕ್ರಮದಿಂದ ॥
ಅಷ್ಟಾವಧಾನದಿಂದಪರ ತುದಿಯುಮೆಟ್ಟಿ ॥
ಅಷ್ಟದಿಕ್ಕನೆ ನೋಡಿ ಬೆರಗಾದೆ ॥ ೨ ॥
ಬಣ್ಣ ಮೂರು ಬಾಗಿಲೊಂದದರೊಳಗಣ ।
ಕಂಣೊಂದು ಕಾಲೊಂದ ಕಾವರೆ ॥
ಎಣ್ಣೆಯಿಲ್ಲ(ದೆ) ಪಂಜು ಧಗಧಗಿಪುದ ಕಂಡೆ ।
ಬಣ್ಣಗಾರನ ಕಂಡು ಬೆರಗಾದೆನು ॥ ೩ ॥
ಪಂಜಿನ ಮೇಲೊಂದು ಕೋಣನಿಪ್ಪುದಕಂಡೆ ।
ಚಂಚಲಿಸುವುದೊಂದು ಮುಕುರವು ॥
ಮುಂಜಬಲೆಯ ನೋಡಿ ಬೇಂಟೆಗಾರನು ತಾನು ।
ಅಂಜದೆಯುದ ಮುಟ್ಟಲಱಿಯನು ॥ ೪ ॥
ಆವ ಪರಿಯಲಾದರೆ ಯೀ ಕ್ರಮವನ್ನು ।
ಭಾವಿಸಿ ತಿಳಿಯಬಲ್ಲಡೆ ಸಿದ್ಧ ।
ಸಾವುಹುಟ್ಟಿಲ್ಲದ ನವನಾಡಿಗಲ್ಲದೆ ।
ಶಾಮರದೇಹಿಗೆ ಅಳವಲ್ಲ ॥ ೫ ॥

(ವಿ-ವಿ.)—

ಅಸಮಗ್ರ. ಓಲೆಗಳು ವ್ಯತ್ಯಸ್ತವಾಗಿವೆ. ವೇದಾಂತವಿಷಯವನ್ನು ಈ ಹಾಡುಗಳು ಬೋಧಿಸುತ್ತವೆ.

No. 716. ಗುಂಡಬ್ರಹ್ಮಯ್ಯನ ಸುವ್ವಿ.

GUṆḌABRAHMAYYANA SUVVI.

Substance, palm-leaf. Size, 16⅛ × 1¼ inches. Pages, 66. Lines, 5 on a page. Character, Kannaḍa. Condition, much injured. Appearance, old.

Complete.

Same work as that described in No. 718.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದು ತ್ರಿಪದಿಯಲ್ಲಿ ಬರೆದಿದೆ. ಇದರಲ್ಲಿ ಸಂಧಿಗಳು ೩. ಪದ್ಯಗಳು ೫೧೬. ಮುಂದಣ ೭೧೭ ಮತ್ತು ೭೧೮ ನೆಯ ನಂಬರುಗಳಲ್ಲಿ ವರ್ಣಿತವಾಗಿರುವ ಪ್ರತಿಗಳಲ್ಲಿರುವುದಕ್ಕಿಂತಲೂ ಇದರಲ್ಲಿ ಪದ್ಯಸಂಖ್ಯೆಯು ಕಡಮೆಯಾಗಿದೆ. ಅಲ್ಲದೆ ಮುಂದಣ ೭೧೮ ನೆಯ ನಂಬರಿನ ಪ್ರತಿಯಲ್ಲಿ ಪದ್ಯಗಳ ಎರಡನೆಯ ಪಾದದ ಪುನರಾವೃತ್ತಿಯಿರುವ ಹಾಗೆ ಇದರಲ್ಲಿ ಕಂಡು ಬರುವುದಿಲ್ಲ. ವಾದರಿಗಾಗಿ ಇದರ ಆದ್ಯಂತಭಾಗಗಳನ್ನು ಈ ಕೆಳಗೆ ಬರೆಯಲಾಗಿದೆ.

Beginning :—

“ ಸಿರಿಯುಳ್ಳ ಶಿವರಾಯ ಧರೆಗೆ ಕಳುವರೆ ಬಂದು
ಶರಣರ ಕೂಡೆ ಮೆರೆದೆನು ಶ್ರೀಗಿರಿಯ ।
ವರದನ ಪುಣ್ಯಕಥೆಕೇಳ ॥

ಹರನು ನಾರಂದನು ಧರೆಗೆ ಕಳ್ಳರಾಗಿ ।
ಪುರನೋರುಗಲ್ಲ ಘನ(ಗಣ)ಪತಿ ರಾಯನ ।
ಸಿರಿಯು ಕದ್ದೊಯ್ದ ಕಥೆ ಕೇಳ ॥ ”

End :—

“ ಗುಂಡ ಬ್ರಹ್ಮನ ಕಥೆಯು ಗುಂಡುಗಲ್ಲುಗಳಲ್ಲಿ ।
ಖಂಡುಗ ಮೆಣಸನರೆದಂತೆ ಕರ್ಮಗಳ ।
ಖಂಡಿಸಿ ತಾವು ಹುಡಿಮಾಡಿ ॥
ಗುಂಡಬ್ರಹ್ಮನ ಕಥೆಯು ಕಂಡೆರಾಯನ ಸ್ಥಿತಿ ।
ಕಂಡು ಪೊಗಟ್ಟಿವರಿಗೆ ಕೈಲಾಸವಹುದೆಂದು ।
ಕಂಡಿತವೆಂದ ಶ್ರೀಗಿರಿ ॥
ಘನಪಾತ್ರ್ಯ ನಿಮ್ಮವನು ನೆನೆವರ ಹೃದಯದಲ್ಲಿ ।
ಮನದ ಕೊನೆಯ ಮೇಲೆ ನೆಲಸಿರ್ಪ ಶ್ರೀಗಿರಿ ।
ಘನಗುರುಮಲ್ಲ ಶರಣಾರ್ತಿಯ ।
ನೂರೊಂದು ಕುಲದಲ್ಲಿ ಆವನಾದರೆ ಆಗಲಿ ।
ಭಾರಿ ಸುದ್ದದಿ ಕೇಳ್ದವಗೆ ಭವ[ರೋಗ]ಭಯ ।
ಹಾರುವುದೆಂದು ಪ್ರಮೆ ಯೆನಲು ॥
ಶಿವಶರಣರ ಸಂಗತ್ಯವ ಕೇಳದವರ ಪಾಪ ।
ವಿನಾಶವಹುದು ಸಾಕ್ಷಿ ನಿಮಿಷದಲಿ ॥ ಗುಂಡೈಯ್ಯನು-
ಭಾಸುರದ ಕಥೆಯು ಸಂಪೂರ್ಣ ॥ (?)

ಅಂತುಸಂಧಿ ೩ ಕ್ಕಂ ಪದನು ೫೦೬ ಮಂಗಳ ಮಹಾ ಶ್ರೀ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಉಳಿದ ವಿಷಯಗಳನ್ನು ಹಿಂದಣ ನಂಬರಿನಲ್ಲಿಯೂ ಕವಿಚರಿತ್ರೆ (ತೃತೀಯ ಸಂಪುಟ) ಯಲ್ಲಿಯೂ ನೋಡಿ ತಿಳಿಯುವುದು.

No. 717. ಗುಂಡಬ್ರಹ್ಮಯ್ಯನ ಸುವ್ವಿ.

GUNḌABRAHMAYYANA SUVVI.

Substance, palm-leaf. Size, $8\frac{5}{8} \times 1\frac{1}{4}$ inches. Pages, 90. Lines, 5 to 7 on a page. Character. Kannaḍa. Condition, very much injured. Appearance, old. Mode of writing, not bad.

Complete in 3 sandhis.

Same work as that described in. No. 718.

Name of the scribe :—Guruliṅgadēva, son of Ōduvacennayya of Haginavāḷu.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ತ್ರಿಪದಿಯಲ್ಲಿ ಬರೆದಿದೆ. ಇದರಲ್ಲಿ ಸಂಧಿಗಳು ೩. ಪದ್ಯಗಳು ೫೭೦. ಮುಂದಣ ೭೧೮ ನೆಯ ನಂಬರಿನಲ್ಲಿ ವರ್ಣಿತವಾರುವ ಪ್ರತಿಯಲ್ಲಿರುವುದಕ್ಕಿಂತಲೂ, ಇದರಲ್ಲಿ ಪದ್ಯಸಂಖ್ಯೆಯು ಕಡಮೆಯಾಗಿದೆ. ಅಲ್ಲದೆ

ಆ ಪ್ರತಿಯಲ್ಲಿ ಪದ್ಯಗಳ ಎರಡನೆಯ ಪಾದದ ಪುನರಾವೃತ್ತಿಯಿರುವ ಹಾಗೆ ಇದರಲ್ಲಿ ಕಂಡು ಬರುವುದಿಲ್ಲ ; ಮತ್ತು ಇದರ ಆದ್ಯಂತಭಾಗಗಳು ಅದಕ್ಕಿಂತಲೂ ವ್ಯತ್ಯಾಸವಾಗಿ ತೋರುವುದರಿಂದ ಮಾದರಿಗಾಗಿ ಇದರಿಂದ ಸ್ವಲ್ಪ ಭಾಗವನ್ನು ತೆಗೆದು ಬರೆಯಲಾಗಿದೆ.

Beginning :—

“ ಶ್ರೀಮನ್ಮಹಾದೇವ ಸೋಮನ ಸೂಡಿದ ಅಭವ ।
ಕಾಮಿತವರವೀವ ಪಶುಪತಿಯ ಸಲಹೆಂದು ।
. ಮಹಾಶಿವನ ಬಲಗೊಂಬೆ ॥
ಶಂಭು ಕುಮಾರನೆ . . . ರ ಗರುವನೆ
ಕುಂಭಿನಿಮುಖದ ಸೌರಭದ ಗಣನಾಥ ।
ತುಂಬೆನ್ನ ಮನಕೆ ಮತಿಗಳ ॥

* * * *

ಸಿರಿಯುಳ್ಳ ಶಿವರಾಯ ಧರೆಗೆ ಕಳುವರೆ ಬಂದು ।
ಶರಣರೊಂದಾಗಿ ಮೆಱೆವನು ಶ್ರೀಗಿರಿಯ ।
ವರದನೀ ಪುಣ್ಯಕಥೆ ಕೇಳಿ ॥
ಹರನು ನಾರಂದನ (ನು) ಧರೆಗೆ ಕಳುವರೆ ಬಂದು ।
ಪುರನೋರುಗಲ್ಲ ಗಣಪತಿಯ ಅರಮನೆಯ ।
ಸಿರಿಯ ಕದ್ದೊಯ್ದ ಕತೆಗೇಳಿ ॥

* * * *

ಓರುಗಲ್ಲನು ಹೊಕ್ಕು ಬೀಹ ನೋಡಿ ನಾರಂದ ।
ಊರ ಬಾಗಿಲನು ಹೊಱಹೊ . . . . . ।
ರಾರಿ ಶಿವನ ಪುರಕಾಗಿ ॥
ಒಂದೊಂದು ಬೀಹಿನ ಚೆಂದವೆಲ್ಲವ ನೋಡಿ .
ಬಂದನು ಕೈಲಾಸಪುರಕಾಗಿ ನಾರಂದ ।
ನಿಂದ . . . . . . ಮುಂದೆ ॥

End :—

ಕಾಳಗದ ಕತೆಯಲ್ಲ ಊಳಗದ ಮಾತಲ್ಲ ।
ಸೋಳುಹೋದವರ ಕೋಲೆಯಲ್ಲ ಶಿವಕಥೆಯ ।
ಕೇಳದಡೆ ಪುಣ್ಯಫಲವಹುದು ॥
ಈ ಶಿವಕತೆಯನು ಆಲೈಸಿ ಕೇಳದಡೆ ।
ಶ್ರೀಶೈಲಮಲ್ಲೀಶ ಸಲಹುವನೆಂಬಲ್ಲಿ ಕೈ ।
ಲಾಸದ ಸಂಧಿ ಮುಗಿಯಿತು ” ॥

ಪುಸ್ತಕದ ಕೊನೆಯಲ್ಲಿ “ ಹಗಿನೋಜ ಓದುವ ಚೆನ್ನಯ್ಯನ ಮಗ ಗುರುಲಿಂಗದೇವರ ಬರೆಹ ” ಎಂದಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಉಳಿದ ವಿಷಯಗಳನ್ನು ಹಿಂದಣ ನಂಬರಿನಲ್ಲಿ ನೋಡಿ ತಿಳಿಯುವುದು.

No. 718. ಗುಂಡಬ್ರಹ್ಮಯ್ಯನ ಸುವ್ವಿ.

· GUNDABRAHMAYYANA SUVVI.

Substance, palm-leaf. Size, 12 × 1¼ inches. Pages, 141. Lines, 3 to 6 on a page. Character, Kannada. Condition, very much injured. Appearance, old. Mode of writing, good.

Complete in 3 sandhis.

Describes the story of Guṇḍabrahmayya (a devotee of Śiva) who was taken to Ḳailāsa by Śiva.

Beginning :—

. . . . ಶರಣಾಯ್ಯ
ಗರುವರ ಗಂಭೀರ ಶರಣಾಯ್ಯ ॥ ೧ ॥
ಗರುವರ ಗಂಭೀರ ಶರಣಾಯ್ಯ . . . . . ।
. . . . ಲಿಂಗಕೆ ಶರಣಾಯ್ಯ ॥
ಇಂದೆನ್ನ ಶ್ರೀಗುರುವ ಕುಂದದೇನೆನ್ನದ ।
. . . . ॥
ಚಂದದ . ಮೊಳ . ಯೊರಳೆ ಬಂದಂದದಲಿ ।
ನಂದಿಯು ಮೇಲೆ ಶಿವ . . . . ॥ ೨ ॥

*   *   *   *

(ಸಿರಿಯಾಳ್ಳ ಶಿವರಾಯು) ಧರೆಗೆ ಕಳುವರೆ ಬಂದು ॥
ಶರಣಹೊಂದಾಗಿ ಮೊಱೆದರು ॥
ಶರಣಹೊಂದಾಗಿ ಮೊಱೆ . . . . . .
ವೊರೆದನೀ ಪುಣ್ಯಕಥೆಯನು ॥
ಹರನು ನಾರಂದನು ಧರೆಯ ಕಳುವರೆ ಬಂದು
. . . . ॥
(ಪುರನೋರುಗಲ್ಲ ಗಣಪತಿ) ರಾಯನ ।
ಹಿರಿಯ ಕದ್ದೊಯ್ದ ಕಥೆಗೇಳಿ ॥

*   *   *   *

ದೇಶದೇಶವ ತಿರಿಗಿ ಬೇಸರದೆ ನಾರಂದ ।
ಆ ಶಶಿಧರನ ಕರೆತ್ತರುವೆನೆನುತ ಜಗ ।
ದೀಶನೋಲಗಕೆ ನಡೆದನು ॥
ಒಂದೊಂದು ಬೀಡಿನ ಚೆಂದವನೆಲ್ಲವ ನೋಡಿ ।
ಬಂದು ಕೈಲಾಸಪುರಕಾಗಿ ನಾರಂದ ॥
ನಿಂದಲ್ಲಿಗೆ ಸಂಧಿ ಪದ ಮುಂದೆ ॥

End :—

ಗುಂಡಬ್ರಹ್ಮಯ್ಯನವರ ಕೊಂಡಾಡಿ ಪ್ರಮಥರ ಮುಂದೆ ।
ಖಂಡೇಂದುಧರನು ಕರಿವೀರ

ಖಂಡೇಂದುಧರನು ಕರಿ ವೀರಭದ್ರನ
ತಂಡದೊಳ್ ಕರನಿರಿಸಿದ ॥
ಗುಂಡಬ್ರಹ್ಮಯ್ಯನವರ ಕಥೆಯ ಸಿರ್ಥಿಯ ಮಾಡಿ ॥
ಕೊಂಡಾಡಿ ಕೇಳದವರಿಗೆ ॥
ಕೊಂಡಾಡಿ ಕೇಳದವರಿಗೆ ಕೈಲಾಸವ
ಕಂಡಂತೆ ಯಿಹುದು ಶರಣರಿಗೆ ॥
ಸತ್ಯರ ಕಥೆಯನು ವಿಸ್ತರಿಸಿ ಕೇಳದರೆ
ಮುಕ್ತಿಫಲಪದವಿ ದೊರಕುವುದು ।
ಮುಕ್ತಿಫಲಪದವಿ ದೊರಕುವುದು ಕೇಳುವ ।
ಭಕ್ತರ ಪಾದಕೆ ಶರಣಾರ್ತಿ ॥

Colophon :—

ಅಂತು ಸಂಧಿ ೩ ಕ್ಕೆ ಪದನು ೫೮೪ (ಕ್ಕೆ) ಮಂಗಳಮಹಾಶ್ರೀ-

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ತ್ರಿಪದಿಯಲ್ಲಿ ಬರೆದಿರುವ ಹಾಗೆ ತೋರುತ್ತದೆ. ಎರಡನೆಯ ಪಾದವನ್ನು ಪುನರಾವೃತ್ತಿಮಾಡಿ ಕೆಲವೆಡೆ ನಾಲ್ಕು ಪಾದಗಳಾಗಿಯೂ (ಸಾಂಗತ್ಯದಂತೆ) ಬರೆದಿದೆ. ತ್ರಿಪದಿ ಅಥವ ಸಾಂಗತ್ಯಗಳ ಓಟವು ಕೆಲವೆಡೆ ಸರಿಬರುವುದಿಲ್ಲ. ಗುಂಡಬ್ರಹ್ಮಯ್ಯನೆಂಬ ಶಿವಭಕ್ತನನ್ನು ಶಿವನು ಕೈಲಾಸಕ್ಕೆ ಕರೆದುಯ್ದು ಶಿವಗಣಗಳೊಡನೆ ಸೇರಿಸಿದಂತೆ ಕತೆ ಇದರಲ್ಲಿ ಉಕ್ತವಾಗಿದೆ. ಅದಲ್ಲದೆ ಇದರಲ್ಲಿರುವ ವಿಷಯವನ್ನು "ಹರನು, ನಾರದನು" ಎಂದು ಆರಂಭವಾಗುವ ಪದ್ಯದಲ್ಲಿಯೂ, ನೋಡಿ ತಿಳಿಯುವುದು.

No. 719. ಗುಂಡಬ್ರಹ್ಮಯ್ಯನ ಸುವ್ವಿ-
GUṆḌABRAHMAYYANA SUVVI.

Substance, palm-leaf. Size, $7\frac{13}{16} \times 1\frac{5}{16}$ inches. Pages, 78. Lines, 6 on a page. Character, Kannaḍa. Condition, very much injured. Appearance, old. Mode of writing, not bad.

Incomplete.

Same work as that described above.

(ವಿ-ವಿ.)—

ಅಸಮಗ್ರ. ಒಂದು, ಎರಡನೆಯ ಸಂಧಿಗಳೂ ೩ ನೆಯದರಲ್ಲಿ ೧೧೨ ರಿಂದ ೧೫೧ ಪದಗಳೂ ಇವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 720. ಗುರುಪಂಚವಿಂಶತಿ-
GURUPAÑCAVIṀŚATI.

Substance, palm-leaf. Size, $13\frac{3}{8} \times 1\frac{3}{8}$ inches. Pages, 14. Lines, 5 on a page Character, Kannaḍa. Condition, much injured. Appearance, old. Mode of writing, good.

Complete.

Begins on fol. 38-*a* of the manuscript described under Sanskrit Descriptive Catalogue No. 6990.

Deals with the greatness of religious preceptors. The name of the author is not known.

Beginning :—

ಗುರುಪಂಚವಿಂಶತಿಯ ಬರೆವುದಕ್ಕೆ ಶುಭಮಸ್ತು ॥

ಉದಯರಾಗ॥ ಶ್ರೀಮದನದಹಿತಭಸಿತಂ ಭೂಷ ಭವಹರನೆ (?)
ಸ್ವಾಮಿಜನ ಭಕ್ತವತ್ಸಲ ಭಾಳನೇತ್ರನಂ ।
ಕೋಮಲೆಗರೆಮೆಯ್ಯಿತ್ತಗಂಗಾಧರಂ ಸ್ವಾಮಿಸರ್ವತ್ರಯರ್ಪ್ರೇಮಿ ॥ (?)
ರೋಮಕೂಪದೊಳಖಿಳ ಸ್ತೋಮಭುವನವ ತಾಳ್ದ ।
ವ್ಯೋಮಕೃತೀತನಗಣಿತ ಮಹಿಮ[ನಂ] ಜಗವಂದ್ಯ ॥
ಸೋಮಾರ್ಕಜೂಟ ಪಂಚಾನನಂ ಪರಶಿವಂ ಪಾವನಚರಿತ್ರ ಪಾಹಿ ॥೧॥
ಹರಗಣಸ್ತೋಮವೆಲ್ಲವ ಕೂಡಿ ಹರುಷದಲಿ ॥
ಗುರುಪಂಚವಿಂಶತಿಯ ಪೇಳ್ವೆ ಪೇಳ್ವೆಂದೆನಲು
ಪೆರೆನೊಸಲನಾಂತು ಭಸಿತವ ಧರಿಸು ಧರಿಸೆಂದು ಶರಣಾಗತತ್ವನಾಗಿ ॥
ಪರಮರಹಸ್ಯದ ಪರಿಯಾಯ ಪದ್ಧತಿಯ ।
ವರಕೃಪೆಯಿಂದಲುಚ್ಚರಿಸಿ ಪೇಳುವೆ ಕೇಳಿ ।
ಪರಮಹರುಷದಲಿ ಗುರು[ವಿನ]ಪಾದವಂ ಭಜಿಸಿ ಕಲಿತೆಯ ಕಂಠನ ಭಕ್ತರು॥೨॥

* * * *

ಪರಿಭವದ ಲತೆಗಳನು ಪರಿದು ಪಾವನಮಾಡಿ ।
ಪರಮಪರುಷದ ಗಟ್ಟಿಯಂ ಕರದೊಳಂಜಿಟ್ಟು ।
ಕರುಣಾಮೃತದಪ್ರಸಾದವನುಣಿಸಿ ನಿಷ್ಠೆಯಲಿ ವರಪುತ್ರನೆಂದೆನಿಸುತ ॥
ಪರವರಿದು ಪಾದಪೂಜೆಯ ಮಾಡಿ ಬಾಳೆಂದು ।
ವರಕರ್ಣಮಂತ್ರವನು ತುಂಬಿ ಭಸಿತವ ಧರಿಸಿ
ಶಿರದ ಮೇಲಭಯಹಸ್ತವನಿಟ್ಟ ಗುರುಬಸವರಾಜರಿಂಗಾನೆರಗುವೆಂ ॥೫॥
ಮಹಿಮನಂ ಮಲುಹಣನು ಶಿವಕವಿಯು ಹರಿದೇವ ।
ಸವಿನುಡಿಯ ಕಾಳಿದಾಸನು ಕೆರೆಯ ಪದ್ಮರಸ ।
ಕವಿರಾಘವಾಂಕನುದ್ಭವ ಕೇಶಿರಾಜನಂ ಪಾಲ್ಕುರಿಕೆ ಸೋಮೇಶನಂ ॥
ಶಿವಲೀಲೆ ಚಾಮರಸವಿದು ಹಲಾಯುಧಂ ।
ಭುವನದೊಳ್ಮಳೆಯರಾಜನ ಪಾದಪಂಕಜವ ।
ತವೆ ಹರುಷದಿಂ ನೆನೆದು ಸುಖಿಯಾಗಿ ಬಾಳ್ವುದೀ ಗುರುಪಂಚವಿಂಶತಿಯಲಿ ॥೬॥

* * * *

End :—

ಇದು ಗುರುಪಂಚವಿಂಶತಿಯ ಕೇಳ್ವ ಶರಣರ್ಗೆ ।
ವಿದುವಿಸುದ ಸುಧ(?) ಸ್ವರವೆಂದೆನಿಸಿ ತೋರುವ ।
. . . . ದಿದುಜಾತ ವಿರಹಿತರಿಗೆ ।

ವಿ(ಇ?)ದು ತಿಳಿಯೆ ಹಸಿವೃತ್ತುಷೆ ಹಂಬಲಂ ಬಿಡಿಸುವ
ಇದು ಜಾಗ್ರಸ್ವಪ್ನಸುಷುಪ್ತಿಗಳ ಕೆಡಿಸುವ ॥
ಇದು ಮಾಯಾದಿಗಳ ಮದವ ಮುರಿದೊಟ್ಟುವದಿದುಮುಕ್ತಿರಾಜ್ಯಪದವೂ॥೨೪॥
ದೇವ ಜಯತು ತ್ರಿಜಗ ಕಾಧಾರನೆ . . ।
ದೇವ ಜಯಜಯತು ತ್ರಿಪುರನಿರ್ಮೂಲನೆ ।
ದೇವ ಜಯಜಯತು ತ್ರಿಯಗ್ನಿನೇತ್ರನೆ ದೇವಜಯಜಯತು ನರರಕ್ಷನೆ ॥
ದೇವ ಜಯಜಯತು ದಾನವರ ಮದಹಿದ್ಯೆಯ್ಯನೆ ।
ದೇವ ಜಯಜಯತು ದಾತಬ್ಜ ಶಿರವಿಜಿದನೆ
ದೇವ ಜಯಜಯತು ಭಕ್ತೇಶಹೃದಯವಾಸನೆ ।
ದೇವ ಮದ್ಗುರುವೆ ಶರಣು ಶರಣಾರ್ತಿಘ್ನ ॥ ॥ ೨೫ ॥

(ವಿ-ವಿ.)—

ಸಮಗ್ರ. ಬರೆವಣಿಗೆಯು ಅಬದ್ಧಮಯವಾಗಿದೆ.

ಕವಿಯ ವಿಷಯವಾಗಿ ಹೆಚ್ಚೇನೂ ತಿಳಿಯಬರುವುದಿಲ್ಲ. “ ಛಂದಸ್ಸು, ಗಣ, ಅಡಿ, ಪ್ರಾಸ, ಗುರು, ಲಘು, ಬಿಂದು, ವಿಸರ್ಗ, ವೆಂಜನಂ, ಅಜಾದ್ಯಕ್ಕರಂ, ಪೊಂದುವ ಯತಿ, ಪದಬಂಧ, ಶ್ರೀ (? ಸ್ತ್ರೀ) ಲಿಂಗ, ಪುಲ್ಲಿಂಗ, ವೆಂದೆಂಬ ಪರ್ಯಾಯದ ” ಅಂದವನರಿದು ಪೇಳದುದಲ್ಲವೆಂದೂ “ ವ್ಯುತ್ಪನ್ನರಾದವರು ಕುಂದುಕೊರತೆಯನು ತಿದ್ದಿ ” ಎಂದೂ ತನ್ನ ವಿಷಯದಲ್ಲಿ ಇವನು ಹೇಳಿಕೊಂಡಿರುವನು.

No. 721. ಗುರುಭಕ್ತಾಂಡಾರ ಚರಿತ್ರೆ.

GURUBHAKTĀṆḌĀRA CARITRE.

Substance, palm-leaf. Size, $10\frac{7}{16} \times 1\frac{1}{8}$ inches. Pages, 179. Lines, 4 to 5 on a page. Character, Kannaḍa. Condition, very injured. Appearance, old. Mode of writing, good.

Complete.

Describes the story of Gurubhaktāṇḍāra who was a devotee of Śiva. The author is Pemmiseṭṭi, a Vīraśaiva by religion. As he was fond of alliteration he was also known as Prāsabhūṣaṇa.

Beginning :—

ಉದ್ದಂಡಷಟ್ಪದಿ । ರಾಗ-ನಾಟ । ಪಲ್ಲವ ॥
ಪರಮ ಶ್ರೀಗುರು ಮರುಳಸಿದ್ಧೇಶ್ವರೇಶ್ವರನ ।
ಕರಕಮಲವಾರ್ಧಿಪರಿಪೂರ್ಣಚಂದ್ರಮನೆನಿಪ ।
ವರಪ್ರಾಸಭೂಷಣನ ಜಿಹ್ವೆಯೊಳು ಶಿವನಿರ್ದು ಪೇಳಿಸಿದ ಕೃತಿಯನಿದನು ॥

* * *

ಅನುಪಮ ವಿಚಿತ್ರಕವಿ ಪಾಲ್ಕುರಿಕೆ।ಸೋಮೇಶ್ವ ।
ರನು ಆಂಧ್ರಭಾಷೆಯೊಳ್ ದ್ವಿಪದೆಯಂ ಪೇಳ್ದ ಚಿ ।
ದ್ಘನಮಹಿಮ ಗುರುಭಕ್ತಿಯಾಂಡಾರಚರಿತೆಯ ಸ್ವಾರಾಧ್ಯಚರಿತೆಯೊಳಗೆ ॥

ಮನವೊಲಿದು ತೆಗೆದು ಕನ್ನಡಿಸೆಂದು ಬಸವಣ್ಣ ।
ನೆನಹಿನೊಳ್ ಬಂದು ಭಸಿತವನಿಟ್ಟು ಮತಿಗೊಡಲು ।
ವಿನಯದಿಂ ಪ್ರಾಸಭೂಷಣ ಪೇಳ್ದನೀ ಕೃತಿಯ ಶರಣರಾಲಿಸಿ ಪಾಲಿಸಿ ॥

* * * *

ಗದ್ಯ ॥ ಶ್ರೀಮತ್ಪಂಚಾಕ್ಷರೀ ಪಂಚಮುಖದ ಪಂಚಾಚಾರಪರಿಪೂರ್ಣ ಪರಮಜ್ಞಾನ ಪರಂಜ್ಯೋತಿ ಪರಮಪ್ರಕಾಶ ಪರಮಕಲೆಯ ಪ್ರಣವ್ರೋಂಕಾರ ಪ್ರಾಣಲಿಂಗ ಪ್ರತಿಷ್ಠಾಪಾಲಕ ಪ್ರಸಿದ್ಧಾವತಾರ ಪರಮಯೋಗೀಶ್ವರ ಪರಮಗುರು ಶ್ರೀ ಮರುಳಸಿದ್ಧೇಶ್ವರನ ಕಾರುಣ್ಯಪ್ರಸಾದಿ ಶಿವಕವಿ ಪೆಮ್ಮಿಸೆಟ್ಟಿಯರು ಶಿವಶರಣರ ಶ್ರೀಪಾದರೇಣುವಂ ಧರಿಸಿದ ಬಲದಿಂದೆ ಪ್ರಾಸಭೂಷಣ ನೆಂಬ ಹೆಸರ್ವೆತ್ತು ಪೇಳ್ದ ಗುರುಭಕ್ತಾಂಡಾರ ಚರಿತ್ರೆ ಪ್ರಥಮಸಂಧಿ ಸಮಾಪ್ತಂ

ಈ ಸಂಧಿಯೊಳ್ ಶ್ವೇತಮಲುಹಣಚರಿತ್ರೆಯುಂ ।
ವೇಶಿ ಪ್ರೌಢಾವತಿಯು ಗುರುಭಕ್ತಗೊರೆದುದನು ॥
ಪ್ರಾಸಭೂಷಣನ ಗುರುಸಿದ್ಧೇಶ್ವರನು ಒಲಿಸಿದ ಸತ್ಕೃತಿಯಿದು ॥

End :—

ಈಮೂರು ಸಂಧಿಯನು ಕೇಳ್ದರೆ ಪೇಳಿದರೆ ।
ನಾಮಗಾನದೊಳೋಡಿ ಬರೆಸಿ ಅ . . ಸಿದಡೆ ।
ಶ್ರೀಮಹಾದೇವನೊಲಿವನು ತಪ್ಪದಿದು ಸತ್ಯವೆಂದಱಿದು ಪಾಲ್ಕುರಿಕೆಯ ॥
ಸೋಮೇಶ್ವರನು ಪೇಳ್ದ ಬಸವಪುರಾಣದೊಳು ।
ಪ್ರೇಮದಿಂ ತೆಗೆದು ಕನ್ನಡಿಸೆಂದು . . . . . ।
ನೇಮದಿಂ ಪ್ರಾಸಭೂಷಣ ಪೇಳ್ದನೀಕೃತಿಯ ಶರಣರಾಲಿಸಿ ಪಾಲಿಸಿ ॥

Colophon :—

ಅಂತು ಸಂಧಿ ೩ ಕ್ಕಂ ಪದನು ೨೭೩ ಕ್ಕಂ ಗುರುಭಕ್ತಾಂಡಾರ ಚರಿತ್ರೆ ಸಮಾಪ್ತಂ.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರ ಕೊನೆಯ ಓಲೆಯ ಒಂದು ಪಕ್ಕದಲ್ಲಿ ಪತ್ರ ಪೂಜಾವಿಷಯವುಳ್ಳ ಕೆಲವು ಶ್ಲೋಕ (ಸಂಸ್ಕೃತ)ಗಳಿವೆ. ಮುಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಮಾತೃಕೆಯಾಗಿದೆ.

ಇದು ಉದ್ದಂಡ ಅಥವ ವಾರ್ಧಕ ಷಟ್ಪದಿಯಲ್ಲಿ ಬರೆದಿದೆ. ಸಂಧಿಗಳು ೩, ಪದ್ಯಗಳು ೨೭೩. ಗುರುಭಕ್ತಾಂಡಾರನೆಂಬ ಶಿವಭಕ್ತನ ಚರಿತ್ರವು ಇದರಲ್ಲಿ ಉಕ್ತವಾಗಿದೆ.

ಕವಿ ಪೆಮ್ಮಿಸೆಟ್ಟಿ ಯೆಂಬುವನು. ಇವನು ವೀರಶೈವಮತದವನು. ಗುರು ಮರುಳಸಿದ್ಧೇಶನು. ಕವಿಗೆ ಪ್ರಾಸಭೂಷಣ ಎಂಬ ಹೆಸರೂ ಉಂಟು. "ಶಿವಕವಿಗೆ ಪ್ರಾಸವೇ ಭೂಷಣಗಳಾಗಿ ಕೈಕೊಂಡೆನೆನ್ನಾಬೆಸರೆನೆ" ಎಂದು ಹೇಳಿದ್ದಾನೆ. ಪೂರ್ವಕವಿಗಳಲ್ಲಿ ಬಾಣ, ಭಾರತಿ, ಮಲುಹಣ, ಉದ್ಭಟ, ಕಾಳಿದಾಸ, ಕೇಶಿರಾಜ, ಭೋಜ ಮುಂತಾದವರನ್ನು ಸ್ಮರಿಸಿದ್ದಾನೆ. ಇವನ ಕಾಲ ಸುಮಾರು ೧೬೫೦ ಇರಬಹುದೆಂದು ಕವಿಚರಿತ್ರಕಾರರು ಬರೆಯುತ್ತಾರೆ. ಉಳಿದ ವಿಷಯಗಳನ್ನು ಉದಾಹೃತಭಾಗಗಳಿಂದ ತಿಳಿಯುವುದು.

No. 722. ಗುರುಭಕ್ತಾಂಡಾರಚರಿತ್ರೆ-

GURUBHAKTĀṆḌĀRA CARITRE.

Substance, paper. Size, 10⅜ × 9½ inches. Pages, 83. Lines, 20 on a page. Character, Kannaḍa. Condition, good. Appearance, new. Mode of writing, good.

Complete.

This is a copy of the manuscript described under the previous number (721).

(ವಿ-ವಿ)—

ಸಮಗ್ರ. ಇದು ಇದರ ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರ ಕೊನೆಯ ಒಂದು ಪುಟದಲ್ಲಿ ಪತ್ರಪೂಜಾವಿಷಯಗಳುಳ್ಳ ಕೆಲವು ಶ್ಲೋಕ (ಸಂಸ್ಕೃತ)ಗಳಿವೆ.

No. 723. ಗುರುಲಿಂಗಜಂಗಮಚಾರಿತ್ರ (ಸಾಂಗತ್ಯ)-

GURULIṄGAJAṄGAMACĀRITRA.

Substance, palm-leaf. Size, 9½ × 1 9/16 inches. Pages, 147. Lines, 7 on a page. Character, Kannaḍa. Condition, very much injured. Appearance, old. Mode of writing, good.

Begins on fol. 1-*a*. The other work herein is :—(1) Chandōmbudhi, 74-*b*.

Complete in 5 sandhis.

A Śaiva work in five Sandhis, it describes the greatness of Śiva's Courts, the beauties of creation as explained by Śiva to Pārvati, how Śiva roams about on the earth in the form of Guru, Liṅga and Jaṅgama, etc. The work is also known as Mahattinasāṅgatya. The author is Maruḷu Siddhēśa. He lived about 1650 A.D.

Beginning :—

ಸಾಂಗತ್ಯ ॥ ಶ್ರೀಪಶುಪತಿ ನಿರ್ಮಲ ನಿರುಪಮ . ನಿತ್ಯ ।
. . . . ॥
ಶ್ರೀಪರಮೇಶ್ವರಗುರುಸಿದ್ಧಮಲ್ಲನ ।
ಶ್ರೀಪದವೆನ್ನ ರಕ್ಷಿಪುದು ॥

* * * *

ಶರಣು ಪುರಾಧೀಶ್ವರ ಗುರುಮೂರ್ತಿಯ ।
ಕರಜಾತ ಮರುಳು ಸಿದ್ಧೇಶ ॥
ವಿರಚಿಸಿದೆನು ಮಹತ್ತಿನ ಕಾವ್ಯವ ।
ಬರೆದೋದಿ ಕೇಳ ಲಾಲಿಪುದು ॥ ೩೦ ॥

* * * *

ಚಂದದಿ ಮಹತ್ತಿನ ಸಾಂಗತ್ಯವನಾ ।
ನಂದದಿ ಬರೆದೋದಿ ಕೇಳ್ ॥
ಮುಂದೆ ಶಿವನು ಭುಕ್ತಿಮುಕ್ತಿಯ ಕೊಡುವನು ।
ವೊಂದನೆ ಸಂಧಿ ಪೂರಾಯು ॥ ೪೯ ॥

Colophon :—

ಅಂತು ಸಂಧಿ ೧ ಕ್ಕಂ ಪದನು ೪೯ ಕ್ಕಂ ಮಂಗಳ ಮಹಾ ಶ್ರೀ.

End :—

ಗುರುಲಿಂಗಜಂಗಮದುರು ಚಾರಿತ್ರವ ।
ಬರೆದೋದಿ ಕೇಳ್ದವರ್ಗೆ ॥
ವರಭೋಗಮೋಕ್ಷವ ಗುರುಸಿದ್ಧಮಲ್ಲೇಶ ।
ಕರೆದೀವನೈದನೆ ಸಂಧಿ ॥

Colophon :—

ಅಂತು ಸಂಧಿ ೫ ಕ್ಕಂ ಪದನು ೯೩೭ ಕ್ಕ ಮಂಗಳ ಮಹಾಶ್ರೀ.

(ವಿ-ವಿ.)—

ಸಮಗ್ರ. (ಮುಂದಣ ನಂಬರಿನಲ್ಲಿ ವರ್ಣಿತವಾರುವ ಪ್ರತಿ ಇದರ ಪ್ರತಿಕೆಯು). ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಛಂದೋಂಬುಧಿಯಿದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಸಂಧಿಗಳು ೫, ಪದ್ಯಗಳು ೯೩೭. ಇದರಲ್ಲಿರುವ ಸಂಧಿಗಳಲ್ಲಿ ಕ್ರಮವಾಗಿ ಶಿವನೋಲಗವರ್ಣನೆ, ಶಿವನು ಪಾರ್ವತಿಗೆ ಸೃಷ್ಟಿಯಂದವನ್ನು ಹೇಳುವುದು, ಗುರುಲಿಂಗಜಂಗಮರೂಪಿಯಾದ ಶಿವನು ಧರೆಯಲ್ಲಿ ಚರಿಸಿದುದು, ಮಹತ್ತು ಸಿಂಹಾಸನಮುಖಮಣಿಯನ್ನು ಪಡೆದುದು, ಮಹತ್ತು ದೇಶಾಂತರಗೆಯ್ದು ಪರ್ವತದೊಳು ನಿಂದುದು ಈ ವಿಷಯಗಳು ಉಕ್ತವಾಗಿವೆ. ಈ ಗ್ರಂಥಕ್ಕೆ "ಮಹತ್ತಿನ ಸಾಂಗತ್ಯ"ವೆಂದು ಬೇರೊಂದು ಹೆಸರಿದೆ.

ಕವಿ ಮರುಳುಸಿದ್ಧೇಶನೆಂಬುವನು. ಇವನು ಶರಣಾಪುರಾಧೀಶ್ವರ ಗುರುಮೂರ್ತಿಯ ಕರಜಾತ(ಶಿಷ್ಯ)ನು. ವೀರಶೈವಮತದವನು. ಇವನ ಕಾಲವು ಸು. ೧೬೫೦ ಆಗಿರಬಹುದೆಂದು ಕವಿಚರಿತ್ರಕಾರರು ಬರೆಯುತ್ತಾರೆ.

No. 724. ಗುರುಲಿಂಗ ಜಂಗಮಚಾರಿತ್ರ (ಸಾಂಗತ್ಯ).

GURULIṄGAJAṄGAMACĀRITRA.

Substance, paper. Size, $10\frac{1}{16} \times 9\frac{1}{2}$ inches. Pages, 94. Lines, 20 on a page. Character, Kannaḍa. Condition, good. Appearance, old. Mode of writing, good.

Begins on page 1 of the II Part. The other works herein are :—(1) Dvādaśānuprēkṣe, page 1 of the I part. (2) Chandōmbudhi, page 95 of the II part.

Complete in 5 sandhis.

This is a copy of the manuscript described under the previous number (723).

(ವಿ-ವಿ.)—

ಸಮಗ್ರ. ಇದು ಹಿಂದಣ ೭೨೩ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಕಾಗದದ ಪ್ರತಿ ಲಿಪಿ ಚೆನ್ನಾಗಿದೆ. ಇದರೊಡನೆ ದ್ವಾದಶಾನುಪ್ರೇಕ್ಷೆ, ಛಂದೋಂಬುಧಿಗಳಿವೆ.

No. 725. ಗುಹೇಶ್ವರವಚನ ಟೀಕೆ.

GUHĒŚVARAVACANA ṬĪKE.

Substance, paper. Size, 10¾ × 9½ inches. Pages, 458. Lines, 20 on a page. Character, Kannaḍa. Condition, good. Appearance, new. Mode of writing, not good (1st half) and good (2nd half).

Complete.

This is a copy of the manuscript described under No. 591 ante.

(ವಿ-ವಿ.)—

ಸಮಗ್ರ. ಇದು ಹಿಂದಣ ೫೯೧ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಕಾಗದದ ಪ್ರತಿ. ಇದರಲ್ಲಿ ಮೊದಲ ಅರ್ಧಭಾಗದ ಲಿಪಿ ಚೆನ್ನಾಗಿಲ್ಲ. ಕಡೆಯ ಭಾಗದಲ್ಲಿ ಚೆನ್ನಾಗಿದೆ. ಹಿಂದಣ ೪೬೬ ನೆಯ ನಂಬರಿನಲ್ಲಿ ವರ್ಣಿತವಾದ ಪ್ರತಿ ಅಸಮಗ್ರವಾಗಿದೆಯಾಗಿ ಈ ಪ್ರತಿಯ ಮಾತೃಕೆಯನ್ನೇ ಆಧಾರವನ್ನಾಗಿಟ್ಟುಕೊಂಡು ವಾಚಕರು ಓದಬೇಕು.

No. 726. ಗುಹೇಶ್ವರವಚನ ಟೀಕೆ.

GUHĒŚVARAVACANA ṬĪKE.

Substance, palm-leaf. Size, 4$\frac{15}{16}$ × 1 inch. Pages, 182. Lines, 4 on a page. Character, Kannaḍa. Condition, very much injured. Appearance, old. Mode of writing, not good.

Incomplete.

Similar to the work described under No. 466 ante.

(ವಿ-ವಿ.)—

ಅಸಮಗ್ರ ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿಲ್ಲ. ತಪ್ಪುಗಳು ತುಂಬಾ ಇವೆ. ಮುಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿ ಇದರ ಪ್ರತಿಕೆಯಾಗಿದೆ.

ಇದರ ವಿಷಯವೂ ಹಿಂದಣ ೪೬೬ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಗ್ರಂಥದ ವಿಷಯವೂ ಒಂದೇ ತೆರನಾಗಿದೆ.

No. 727. ಗುಹೇಶ್ವರವಚನ ಟೀಕೆ.

GUHĒŚVARAVACANA ṬĪKE.

Substance, paper. Size, 10⅝ × 9⅜ inches. Pages, 19. Lines, 20 on a page. Character, Kannaḍa. Condition, good. Appearance, new. Mode of writing, good.

Incomplete.

This is a copy of the manuscript described under the previous number (726).

(ವಿ-ವಿ.)—

ಅಸಮಗ್ರ. ಇದು ಇದರ ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ.

No. 728. " ಚೆನ್ನಬಸವಾದಿ ಪ್ರಮಥರ ಐಕ್ಯಸ್ಥಳದ ವಚನ."

CENNABASAVĀDI PRAMATHARA AIKYASTHAḶADA VACANA.

Substance, paper. Size, 8¼ × 5¼ inches. Pages, 47. Lines, 23 on a page. Character, Kannaḍa. Condition, slightly injured. Appearance, old. Mode of writing, not bad and not free from mistakes.

Begins on fol. 1-*a*. The other work herein is :—1. Bhāvacintāratna. 25-*a*. Fol. 24-*b* is left blank.

Complete.

Contains Vacanas by Basava and other teachers of the Vīraśaiva religion, describing how Cenna Basava and other Pramathas became one with Liṅga in a place called Uḷive.

Beginning :—

ಸ್ವಸ್ತಿ ಸಮಸ್ತ [ಸಹಿತ] (ಮಹಿತ) ಶ್ರೀಮನ್ಮಹಾ ಕಲ್ಯಾಣಪುರದಲ್ಲಿ ಏಳ್ನೂರೆಪ್ಪತ್ತು ಅಮರಗಣಂಗಳು, ಅಸಂಖ್ಯಾತಪುರಾತನರು, ಮಹಾಗಣಂಗಳು, ಮುಖ್ಯವಾದ ಪ್ರಮಥರು, ಸಹಿತ ಚೆನ್ನಬಸವೇಶ್ವರದೇವರು, ಅನುಭವದ ಮಂಟಪದಲ್ಲಿ ಮೂರ್ತಂಗೆಯ್ದಿರ್ಪ ಸಮಯದಲ್ಲಿ ಜಗದೇವಮೊಲ್ಲಿ ಬೊಮ್ಮಣ್ಣಂಗಳರ್ವರು ಬಂದು ಬಿನ್ನೈಸಿದ ಪ್ರಸ್ತಾವದ ವಚನ :—
ಚೆನ್ನಬಸವರಾಜದೇವರು ಮುಂತಾದೆಲ್ಲಗಣಂಗಳು ಕೇಳರಯ್ಯ ! ಬಿನ್ನಹಂ ಮಾಡಿಹೆವು :—
ಈಗ ನಡೆವ ರಾಕ್ಷಸನಾಮಸಂವತ್ಸರದಲ್ಲಿ ನಾಳೆ ಮಂಗಳವಾರ ಶುಕ್ಲಪಕ್ಷದ ಕಾರ್ತಿಕ ಶುದ್ಧ ಪೌರ್ಣಮಿಗುಲ್ಲಿ : [ನಾಳೆ ಮಂಗಳವಾರ] ಅಸ್ತಮಾನವಾದ ಹದಿನೆಂಟು ಗಳಗೆಗೆ ಬಿಜ್ಜಳರಾಯನ [ಉರಿದು] (ಇರಿದು) ಕೊಂದೇವು.

* * * *

End :—

ಚೆನ್ನಬಸವಣ್ಣ ಪ್ರಿಯ ಕೂಡಲಸಂಗನ ಶರಣರು ಸಾಕ್ಷಿಯಾಗಿ ಎಂದು ನುಡಿಯೆ ಹಾವುಗೆಗಳು ಸಹಿತ ಏಳ್ನೂರೆಪ್ಪತ್ತು ಅಮರಗಣಂಗಳಂ ನೆನೆವುತ್ತ, ಅಸಂಖ್ಯಾತ ಪುರಾತನರ ನೆನೆವುತ್ತಂ ನಾನು ಶಿವಯೋಗ ಸಮಾಧಿಯಲ್ಲಿ ಸನ್ನದ್ಧನಾದೇನು.

Colophon :—

ಚೆನ್ನಬಸವಾದಿಪ್ರಮಥರೈಕ್ಯಸ್ಥಲದ ವಚನ ಸಮಾಪ್ತ ಶ್ರೀ ಶ್ರೀ ಶ್ರೀ.

(ವಿ-ವಿ.)—

ಸಮಗ್ರ. ಅಲ್ಪ ಶಿಥಿಲ. ಬರೆವಣಿಗೆಯು ಸಾಮಾನ್ಯವಾಗಿದೆ. ಅಲ್ಪ ಸ್ವಲ್ಪ ತಪ್ಪುಗಳಿವೆ.

ಇದು ಗದ್ಯಗ್ರಂಥವಾಗಿದೆ. ಅಲ್ಲಲ್ಲಿ ಬಸವಾದಿಗಳ ವಚನಗಳೂ ಕಾಣಿಸಿಗುವುವು. ಈ ಗ್ರಂಥವು ಕಲ್ಯಾಣಪುರದಲ್ಲಿ ವೀರಶೈವರಿಗೂ ಅಳಿಯ ಬಿಜ್ಜಳನಿಗೂ ನಡೆದ ಯುದ್ಧವನ್ನೂ, ಚೆನ್ನಬಸವಾದಿ ಪ್ರಮಥರು ಉಳವೆಯ ಮಾಮನೆಗೆಬಂದು ಅಲ್ಲಿ ಉಯ್ಯಾಲೆಯನ್ನೇರಿ ಕೈಲಾಸಕ್ಕೆ ಚಿತ್ತೈಸಿದ ಸಂಗತಿಯನ್ನೂ ತಿಳಿಸುತ್ತದೆ. ಚೆನ್ನಬಸವಾದ್ಯರು ರುದ್ರಮುನಿ ಮೊದಲಾದವರನ್ನು ಬೀಳ್ಕೊಡುವಾಗ ವೀರಶೈವಾಗಮದ ಮತ್ತು ವೀರಶೈವಮತದ ವಿಷಯವಾಗಿ ಬೇಕಾದಷ್ಟು ಮಾತುಕಥೆಗಳೂ ನಡೆದಿರುವುವು. ಈ ಗ್ರಂಥದಿಂದ ಕವಿಯ ವಿಷಯವಾಗಿ ಯಾವಂಶವೂ ತಿಳಿಯ ಬರುವುದಿಲ್ಲ. ವಾಕ್ಯಗಳ ಶೈಲಿಯನ್ನು ಪರಿಶೀಲಿಸಲು ಈ ಕೃತಿಯು ೧೮ ಅಥವಾ ೧೯ ನೆಯ ಶತಮಾನದಲ್ಲಿ ಬರೆಯಲ್ಪಟ್ಟಿದೆಂದು ಧಾರಾಳವಾಗಿ ಹೇಳಬಹುದು.

No. 729. "ಚೆನ್ನಬಸವಾದಿ ಪ್ರಮಥರೈಕ್ಯಸ್ಥಲದ ವಚನ."

CENNABASAVĀDI PRAMATHARAIKYASTHALADA VACANA.

Substance, paper. Size, $9\frac{5}{16} \times 10\frac{1}{2}$ inches. Pages, 50. Lines, 20 on a page. Character, Kannaḍa. Condition, fair. Appearance, new. Mode of writing, not bad and not free from mistakes.

Begins on fol. 1-*a*. The other work herein is :—1. Bhāvacintāratna (D. No. 1001), Page 51.

Complete.

Same work as that described above.

(ವಿ-ವಿ.)—

ಸಮಗ್ರ. ಪ್ರತಿಯು ಚೆನ್ನಾಗಿದೆ. ಬರೆವಣಿಗೆಯು ತೃಪ್ತಿಕರವಾಗಿಲ್ಲ. ತಪ್ಪಿದೆ.

ಇದು ಹಿಂದೆ ವರ್ಣಿಸಿದ ಗ್ರಂಥವಾಗಿದೆ.

No. 730. "ಚೆನ್ನಬಸವಾದಿ ಪ್ರಮಥರೈಕ್ಯಸ್ಥಲದ ವಚನ."

CENNABASAVĀDI PRAMATHARAIKYASTHALADA VACANA.

Substance, paper. Size, $9\frac{3}{8} \times 10\frac{7}{16}$ inches. Pages, 37. Lines, 20 on a page. Character, Kannaḍa. Condition, fair. Appearance, new. Mode of writing, good, but not free from mistakes.

Complete.

Same work as that described above.

(ವಿ-ವಿ.)—

ಸಮಗ್ರ. ಪ್ರತಿಯು ಚೆನ್ನಾಗಿದೆ. ಬರೆವಣಿಗೆಯು ನೆಟ್ಟಗಿದೆ. ತಪ್ಪಿದೆ.

ಇದು ಹಿಂದೆ ವಿವರಿಸಿದ ಗ್ರಂಥವೇ ಸರಿ.

No. 731. ಚೋಳರಾಜ ಸಾಂಗತ್ಯ.

CŌḶARĀJA SĀṄGATYA.

Substance, Śrītāla. Size, 9⅝ × 2⅛ inches. Pages, 6. Lines, 10 on a page. Character, Kannaḍa. Condition, very much injured. Appearance, old. Mode of writing, not bad.

Begins on fol. 32-*a* of the manuscript described under No. 451 ante.

Incomplete.

The story of Cōḷarājā (King of Karavūru) is given in this. The name of the author is not known.

Beginning :—

ಶ್ರೀವರನೇತ್ರ ರಾಜೀವಾಂಕಪಾದ ರಾ ।
ಜೀವ ಜವಾನಾಭರಾರ್ಕ ॥ (?)
ಜೀವನಾವನಿಸಂಜೀವನಸಮ ಲೋಕ-।
ಜೀವಾಂಗ ಜಯತು ಸೋಮೇಶಾ ॥
ಜಿರೆದೈವಡಿಯ ಚೋಳನಿರುತಿರ್ಪ ನಿನ್ನೊಂದಾ ।
ಕ್ಟರಿಯ ಕೇಳ್ಭೈರವರಾಜ ॥
ವರಧರ್ಮ ಚೋಳಭೂವರ ಕರವೂರೊಳು ।
ಸ್ಥಿರರಾಜ್ಯವಾಳುತೊಪ್ಪಿರಲು ॥
ಆತನ ಕುವರ ವಿಖ್ಯಾತ ಸುಜಾತ ಸ ।
ಮೋಕ್ಷಾರ್ಥಿಜನ ಪಾರಿಜಾತ ॥
ನೂತನಸಾರಾತಿ ಜೀಮೂತಪ್ರಹರ ಜಂಝಾ ।
ವಾತಾಭಿನವಭೀಮರಾಜ ॥
ಒಂದಿನದುದಯದೊಳು ಹೊಂದೇರನಡರ್ದಾನೆ ।
ಮಂದಿ ಕುದುರೆ ಮಾಂಡಳಿಕರ ॥
ಸಂದಣಿಯೊಳು ಬರೆ ಮುಂದೊಂದು ಪಶು ಬೆಸ ।
ಲಿಂದಿರುತಿರಲೊಡಹಾಯ್ಸಿ ॥
ರಥಚಕ್ರಘಾತಿಯಿಂ ಹತವಾದ ಶಿಶುಗಂಡ ।
ಳಾತ ಪೋಗಿ ಧೇನು . . . . ॥
ಕ್ಷಿತಿಪಗೆ ದನಿದೋಱಲತಿನೊಂದಾ ವತ್ಸನ ।
ರಥದೊಳ್ ಬಿತ್ತು ಕುವರನ ॥
ಮೇಲೆ ಪೊಡೆಯುಲು ವೆಗ್ಗಳಿಯಿಂ ತುಂಡಾದ ।
ಬಾಲಕನಂ ಕಂಡು ನಿರ್ಮೋಹಾ ॥
ಶೀಲನಾಗಿರ್ದ ಭೂಲೋಲನಿಗಭವ ಸ ।
ಲ್ಲೀಲೆಯೊಳ್ ಮೊಗದೋಱಿದನು ॥
ಜಡೆಮುಡಿ ಪೆಱತೆ ಗಂಗೆ ಕಿಡಿಗಣ್ಣ್ಮೊಗ ಬಿಸ ।
ನಿಡುದೋಳೆರೈದಾಯುಧಗಳು ॥

ತೊಡೆದ ಭಸಿತ ಫಣಿದೊಡವು ಗಜಾಜಿನ ।
ದುಡೆ ಹರಿಬ್ರಹ್ಮನಿರ್ಜರರು ॥

ಸುರಿವ ಹೂವುಳೆಯೊಳು ಸುರದುಂದುಭಿಯೊಳು ಶಂ ।
ಕರ ಮೆಚ್ಚಿ ಬೇಡೆನೆ ಚೋಳ ॥

ಹರಣವನೀವತ್ಸಗಿರದೀವುದೆನಲಿತ್ತು ।
ತರುಣಗಿತ್ತುಸುವ ಭೂವರನ ॥

ಸುರರುಟಿ ಉಟಿಗೊನೆ ಭರದಿ ಪುಷ್ಪಕದೊಳ ।
ಗಿರಿಸಿ ಸೋಮೇಶ ಕೈಲಾಸ ॥

ಪುರಕೊಯ್ದು ಭೈರವೇಶ್ವರ ಕೇಳೆನುತತಿ ।
ಹರುಷದಿಂ ಬೇಳ್ದ ಏಕಾಂತೀ(ಕ) ॥

ಸನ್ನದ್ಧವಾಗಿಹುದಿನ್ನೊಂದು ಕತೆಯಾವು ।
ದೆನ್ನಲು ಸತ್ಯೇಂದ್ರ ಚೋಳಾವನಿ ॥

ಪಂ ನಾಡೆ ಬಾಳುತಿರ್ಪಂ ನಾಡೆ ಆತನ ಪುತ್ರ ।
ರುನ್ನತ ಕಾಮಸನ್ನಿಭರು ॥

*　　　*　　　*

ನೋಡಿ ಸಂತಸದೊಳೋಲಾಡುವಾನಂದಾಶ್ರು ।
ಕೋಡಿವರಿಯಾಲು ಗದ್ಗದಿಸಿ ॥
ಪಾಡುವ ಕುಣಿಕುಣಿದಾಡುವ ನಲಿವನ ।
ಲ್ಲಾಡುವ ಶಿರವನುರ್ಬುವನು ॥
ಪರಮಾನುರಾಗದಿಂದಿರೆ ಮೆಚ್ಚುತವೆ ಮೊನೆ ।
ಧರೆಗೀಶ ಪ್ರತ್ಯಕ್ಷವಾಗಿ ॥
ಸುರದುಂದುಭಿಗಳ ಘಸರಿಯೊಳು ಕೈಲಾಸ ।
ಗಿರಿಗೆ ಕೊಂಡೊಯ್ದು ಸೋಮೇಶ ॥
ಕೇಳು ಮೇಲ್ಗತೆಯ ದಂಬೋಳಗೈಯ್ಯನ ಪುರಿ ।
ಗೋಳಯಿಂ ನೆಗೆದು ರಾಜೇಂದ್ರ ॥
ಚೋಳ ಕೇರಳ ಪಾಂಡ್ಯರಾಳೋಕಿಸುತ ಗೋಪು ।
ರಾಳಯೊಳೆಸೆವ ಪಾದುಕೆಯ ॥
ತುರಗವ ನಿಮಿರ್ದು ನಿಬ್ಬರದಿ ದಾಂಟಿಸುತ ವಾ ।
ಸುರಪತಿಯೊಡನೆ ಮಾತಾಡಿ ॥
ತಿರಿಗಿ ಗೋಪುರವನುಪ್ಪರಿಸಿ ತಮ್ಮಾರ್ಗ ಬಂ ।
ದಿರಲಮರೇಂದ್ರ ಕೋಪದಲಿ ॥
ಇಳೆಯಧಿಪರ ದೇಶದೊಳು ಬಱನೆಪ್ಪಂತೆ ।
. . . . ಡನೆ ॥
ಬೆಳೆಯಿಲ್ಲದಿರೆ ಕಂಡು ಮುಳಿದು ಮೂವರು ರಾಯ ।
ರೊಳಪೊಕ್ಕು ನಾಕಲೋಕವನು ॥

ಪಿಡಿತಂದು ಸೆರೆಗೆಯ್ದುರುಡುರಾಜಿಗಳ ದೇವ ।
ರೊಡೆಯನಾವಾರ್ತೆಯ ಕೇಳ್ದು ॥
ಪೊಡವಿತಳಕೆ ದಂ(ಡ) . . . . . ಬೇಕೆಂಬಂತೀ ।
ಸಡಗರ ಕಿವಣಿತ್ತ ತಮ್ಮ ॥

End :—

ಹಿಂದೆ . . . . . ವ್ರೊಂದು ಕುಂದಲು ಕಣ್ಣ ।
ನಿಂದುಶೇಖರನಿತ್ತ ಚಕ್ರ ॥
ಯಿಂದಿರೆ ಗೋಸುಧಾಸಿಂಧು ವಡೆದ ನಿಜ ।
ವೆಂದು ಮಹಿ . ಬೇಳುವುದು ॥
ಯೆನುತಲಾ ನೃಪತಿ, ಶಿರವನರುಹವಿೂವೆನೆಂ ।
ಜನಿತರೊಳಾ . . . . ॥
ತನಯ ತನ್ನಯ ಶಿರವನರುಹವಿೂವೆನೆಂ ।
ಜನಿತರೊಳ್ಗವ ಮೆಚ್ಚಿ ಕರವ ॥ (?)
ಪಿಡಿದಿಪ್ಪವೇಂ ಬೇಳು ಪೊಡವೀಶಯೆನಲು ನಿ ।
ವ್ಕಡಿದಾವರೆಯೊಳ್ವರ್ ಸ್ವೈಪ ॥
ಕೊಡುದೇವಯೆನೆ ತಮ್ಮೊಳ್ ಬಿಡುವಿಲ್ಲದಿಹ ನಿತ್ಯ ।
ದೊಡೆತನವಿತ್ತ ಕೇಳರಸ ॥

(ವಿ-ವಿ.)—

ಅಸಮಗ್ರ. ೭೬ ಪದ್ಯಗಳಿವೆ. ಶ್ರೀತಾಳಪತ್ರ. ಅತ್ಯಂತ ಶಿಥಿಲವಾಗಿದೆ. ಲಿಪಿ ಸಾಮಾನ್ಯವಾದುದು. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಸೇರಿವೆ. ಅವಾವುವೆಂಬುದನ್ನು ಹಿಂದಣ ೪೫೧ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಸಾಂಗತ್ಯದಲ್ಲಿ ಬರೆದಿದೆ. ಕರವೂರು ದೊರೆ ಚೋಳರಾಜನ ಚರಿತೆಯನ್ನು ಪಾಂಡ್ಯ ಭೈರವರಾಜನಿಗೆ ಪೌರಾಣಿಕನು ಹೇಳಿದಂತೆ ಇದರಲ್ಲಿ ಉಕ್ತವಾಗಿದೆ. ಕವಿಯಾರೆಂಬುದು ಇದರಿಂದ ತಿಳಿದು ಬರುವುದಿಲ್ಲ.

No. 732. ಜ್ಞಾನಸನ್ಯಾಸ ಪ್ರಕರಣ.

JÑĀNASANYĀSA PRAKARAṆA.

Substance, Śrītāla. Size, $13\frac{1}{8} \times 2\frac{5}{8}$ inches. Page, 1. Lines, 5. Character, Kannaḍa. Condition, injured. Appearance, old. Mode of writing, good.

Incomplete.

Begins on fol. 39-*b* of the Ms. described under No. 125 (Sanskrit Descriptive Catalogue).

This contains two Sanskrit Stanzas with Kannaḍa meaning, taken from some work on Śaiva system.

Text :—

ಪರಮಹಂಸ ಯೋಗೀಂದ್ರ ಸಮಸ್ತಾಗಮ ಪುರಾಣಂಗಳ ಸಾರವಂ ತೆಗೆದು ವಿರಚಿಸಿದ ಜ್ಞಾನ ಸನ್ಯಾಸಪ್ರಕರಣಕ್ಕೆ ಶುಭಮಸ್ತು. ಸನ್ಯಾಸಿಯ ಜ್ಞಾನಾಚರಣೆಗಳಾವುವೆಂದೊಡೆ—ಸ್ನಾನ, ಶೌಚ, ಭಿಕ್ಷಾಚರ್ಯ, ಏಕಾಂತವಾಸ, ಮೌನ ಇವೈದು ಸನ್ಯಾಸಿಯ ಕರ್ಮಾಚರಣೆ.

ಶ್ಲೋ ॥ ಯತೀನಾಮುಕ್ತಮಾಚಾರಂ ಮೋಕ್ಷಸಾಧನಮವ್ಯಯಂ ।

ಜ್ಞಾನವೈರಾಗ್ಯವಿಜ್ಞೇಯಂ ಕರ್ಮಬ್ರಹ್ಮಪರೋಕ್ಷಿತಂ ॥

ಟೀ ॥ ಯತೀನಾಂ, ಯತಿಗಳಾಗಿದ್ದಂಥಾವರುಗಳಿಗೆ ಮೋಕ್ಷಸಾಧನವಾವುದು । ಕರ್ಮವಳಿದು ಜ್ಞಾನವೈರಾಗ್ಯದಿಂದ ಬ್ರಹ್ಮವ ತಿಳುವುದೆ ಮೋಕ್ಷಸಾಧನವೆಂದು ತಾತ್ಪರ್ಯಾರ್ಥ ॥

ಶ್ಲೋ ॥ ವರ್ಣಾಶ್ರಯ ಕುಲಾಚಾರಂ ಮಾಯಾನಿರ್ಮಿತಮಧ್ರುವಂ ।

ಜಾತ್ಯಾಧಿಕಂತು ಸನ್ನ್ಯಾಸಂ ವೃಥಾದೇಹಾದಿದಂಡನಂ ॥

ವರ್ಣಾಶ್ರಯ (? ಮ) ಕುಲಾಚಾರಂಗಳು ಮಾಯಾನಿರ್ಮಿತ, ಅಧ್ರುವ, ಅನಿತ್ಯ. ಜಾತ್ಯಾದಿನಾ, ಬ್ರಾಹ್ಮಣ ಸನ್ನ್ಯಾಸ ಉತ್ತಮನೆಂಬುದು ಅದು ಸನ್ನ್ಯಾಸವಲ್ಲ । ಅದರಿಂದ ಮಾಡುವ ದೇಹದಂಡನವು ವ್ಯರ್ಥವೆಂದು ತಾತ್ಪರ್ಯಾರ್ಥ.

(ವಿ-ವಿ.)—

ಅಸಮಗ್ರ.

ಎರಡು ಶ್ಲೋಕಗಳೂ ಅವುಗಳ ಕನ್ನಡ ಟೀಕೆಯೂ ಈ ಗ್ರಂಥದಲ್ಲಿದೆ. ಇದನ್ನು ಪ್ರತ್ಯೇಕವಾಗಿ ಗ್ರಂಥವನ್ನಾಗಿ ಹೇಳಲು ಬರುವುದಿಲ್ಲ. ಯಾವುದಾದರೂ ಒಂದು ಗ್ರಂಥದ ಭಾಗವಾಗಿರಬಹುದು. ಆದರೆ ಈ ಮೇಲೆ ಕಾಣಿಸಿದಂತೆ ಶ್ಲೋಕಗಳ ಆರಂಭಕ್ಕಿಂತ ಮೊದಲೆಯಿದ್ದ ಇದಕ್ಕೆ ಸೇರಿದಂತೆ ತೋರುವ "ಜ್ಞಾನಸನ್ಯಾಸಪ್ರಕರಣಕ್ಕೆ ಶುಭಮಸ್ತು" ಎಂಬ ವಾಕ್ಯದ ಆಧಾರದಿಂದ ಈ ಹೆಸರನ್ನು ಕೊಟ್ಟು ಈ ಭಾಗವನ್ನೊಂದು ಗ್ರಂಥವನ್ನಾಗಿ ವಿವರಿಸಿದ್ದಾಗಿದೆ.

No. 733. ನನ್ನಯ್ಯಗಳ ಚರಿತ್ರ.

NANNAYYAGAḶA CARITRE.

Substance, palm-leaf. Size, 9¾ × 1¼ inches. Pages, 360. Lines, 6 to 7 on a page. Character, Kannaḍa. Condition, very much injured. Appearance, old. Mode of writing, good.

Incomplete.

This is written in the form of a campū. It gives the life history of Nannayya, a devotee of Śiva who lived at the time of Basava. The author is Mādaṇṇa, a Vīraśaiva by religion. He was the son of Allapa and a disciple of Rāmanātha.

Beginning :—

ನನ್ನಯ್ಯನ ಚಾರಿತ್ರದ ಕಥಾಗರ್ಭ ॥

ಶ್ರೀ ನನ್ನಯ್ಯಂಗಳ ಚಾರಿತ್ರವೆಂಬುದು ಪರಮಾರ್ಥಮಲ್ಲದೆ ಲೌಕಿಕಮಲ್ಲಮದೆಂತೆನೆ.— ದೊಡ್ಡ . . . ಕಮೆಂಬ ಪುರುಷನ ಹೃತ್ಕಮಲಮಧ್ಯದೊಳುದ್ಭವಿಸಿದ ಕರ್ಣಿಕೆಯೆಂಬ ಪಟ್ಟಣಕ್ಕೆ ಮೂಲಾಧಾರಮಪ್ಪುದಱಿಂ ಆಧಾರಮೆಂಬ ಕೋಂಟೆಯಿಂ ದೃಢಮಪ್ಪುದಱಿಂ

ಸ್ವಾಧಿಷ್ಠಾನವೆಂಬ ಭೂಸ್ಥಳದಲ್ಲಿ ಮೂಡಿದ ಮಣಿಪೂರಕವಾಗಿಸಿ ರತ್ನಂಗಳ ಕೇವಣಿಸಿ ಮಾಡಿದ ಹೊಂಗೆಲ ಸದರಮನೆಯಿಂ ಹತಮಿಲ್ಲದುದಱಿಂದನಾಹತಮೆಂಬ ಪ್ರೀ . . . ಂ ವಿಲಗಮಿಲ್ಲದುದಱಿಂ ವಿಶುದ್ಧಿಯೆಂಬ ಕರ್ಣಿಕನಿಂ ಆಜ್ಞಾಧಾರಮಪ್ಪುದಱಿಂದಾಗ್ನೇಯುವೆಂಬ ಪುರರಕ್ಷಕನಿಂ ರೇಚಕಮೆಂಬ ದೇಶದಿಂ ಪೂರಕವೆಂಬ ಕೊತ್ತಳದಿಂ ಕುಂಭಕಮೆಂಬ ದುರ್ಗದಿಂ ನವದ್ವಾರಮೆಂಬ ಬಾಗಿಲ್ವಾಡಗಳಿಂ ಅಷ್ಟದಳಮೆಂಬ ದಳವಾಡದಿಂ ಮನಮಂ ನೆಲೆಗೊಳ್ಳಲೀಯದೆಯೆತ್ತಲುಂ ನುಂಪರಿವ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯವೆನಿಪ ದಶವಾಯುಗಳೆಂಬ ದಳವಾಡದಿಂ ಮನಮಂ ನೆಲೆಗೊಳ್ಳಲೀಯದ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರವೆಂಬ ಅಂತಃಕರಣಚತುಷ್ಟಯವೆಂಬ ಸಂಧಿವಿಗ್ರಹರಿಂ, ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಯೆಂಬ ಅಷ್ಟಾಂಗಯೋಗಮುಳ್ಳುದಱಿಂ ಯೋಗಮೆಂಬುದು ಕೂಟಕ್ಕೆ ಬೆಸರಾದ ಕಾರಣ ಕರಹ ನೆರಹಕ್ಕೆ ಒದಗುವ ಮನ್ನೆಯ ರಾಜಪುತ್ರರುಗಳಿಂ (*) (*) ಇಂತು ಸಮಸ್ತರಾಜಲಕ್ಷಣ ಸಂಪೂರ್ಣದಿಂ ಹನಭೃತಮಂ ನೆಲೆಯೆನಿಪ ಹೃತ್ಕಮಲಮಧ್ಯದ ಕರ್ಣಿಕಾಪುರಮೆಂಬ ರಾಜಧಾನಿಗೆ ಅಧಿಪತಿಯಾಗಿ (*) (*) ಇಂತು ಸಕಲ ಪಾಪದ ಸಂ . . . . ದಿಷ್ಠಾಯಕವಾದ ಪಾಪಮೆ ರೂಪುಗೊಂಡ ಮಾತಂಗತಮನೆಂಬ ಅರಸಂ (*) (*) ಆ ಮಾತಂಗತಮನಂ ಪಿಡಿದು ಶೋಷಣಮೆಂಬ ಆಯುಧದಿಂ ಹತನಂ ಮಾಡಿ ದಹನಮೆಂಬ ಅಗ್ನಿಯಿಂ ದಹಿಸಿ ಪಾವನಮೆಂಬ ಸಂಜೀವನದಿಂದೆತ್ತಿ ಶುದ್ಧನಂ ಮಾಡಿ ಅವನ ಮನದಲ್ಲಿ ಸುಜ್ಞಾನಮಂ ದೃಢಮಾಡಿ ನೆಲೆಗೊಳಿಸಿ ಉಪದೇಶವಂ ಮಾಡಿ ಪರಶಿವಮೂರ್ತಿಯಂ ಕರತಳದೊಳಿರಿಸಿ ತೋಱಿಕೊಟ್ಟು ಪೂರ್ವನಾಮವನುಳಿದು ನನ್ನಪ್ಪನೆಂಬ ಪೆಸರಿಟ್ಟು ಆ ನನ್ನಪ್ಪನ ಮನದ ಗುರುಭಕ್ತಿಯ ದೃಢಮನಱಿಯಬೇಕೆಂದು ಆ ನನ್ನಪ್ಪನಂ ಫಳಜಳಮಂ ತರಲೆಂದು ಪೇಳ್ದು ಕಾಂತಾರಕ್ಕೆ ಕಳುಪಿ ಆತನಂ ವಂಚಿಸಿ ಅಮರಾಪುರವೆಂಬ ಅಮರಾವತಿಯ ಕೌಶಿಕರಾಜನೆಂಬ ಇಂದ್ರನಧೀನಮಾಗಿ ಸುಜ್ಞಾನಿಗಳು . . . ನೆವದಿಂ ತಮ್ಮ ಮಸ್ತಕಮಂ ಮರೆಮಾಡಿದರು. ಇತ್ತಲಾ ನನ್ನಪ್ಪಂ ಫಳಜಳಸಹಿತಂ ಬಂದು ಶಿರತೊಲಗಿರ್ದ ಶರೀರಮಂ ಕಂಡು (*) (*) ತನ್ನ ದೇಹಾಭಿಲಾಷೆಯಂ ಬಿಟ್ಟು ಶಿರಸ್ಸ[ನ](ನಿ)ದುಕೊಳ್ಳಲುದ್ಯುಕ್ತನಾದ ನನ್ನಪ್ಪನ ಮನದ ನಿರ್ಧಾರಮನಪ್ರಮಾಣನಭೇದ್ಯನಗಣಿತನನುಪಮನತರ್ಕ್ಯನಪ್ಪ ಮುದ್ರಾಪುರಾಧೀಶ್ವರಂ ಪ್ರಸನ್ನರಾಮೇಶಲಿಂಗನಱಿದು ಮಚ್ಚುವೊಚ್ಚತವಾಗಿ ಆ ಶರೀರಕ್ಕೆ ಮೃತ್ತಿಕೆಯ ಶಿರಸ್ಸಂ ಸೇರಿಸಿ ಪ್ರಾಣಮಂ ಕೊಟ್ಟು * * * ಸುಜ್ಞಾನಿ ಗುರುನಾಥಂ ಕಂಡು ಭಕ್ತಿ ಸಂತುಷ್ಟನಾಗಿರಲಿತ್ತ ಪರಮೇಶ್ವರನೀ ನನ್ನಪ್ಪಂ ಮಾಡಿದ ಗುರುಭಕ್ತಿಯನುವಂಕೇಳ ಜಗಜ್ಜನಮುಂ ಸಕಲಭಕ್ತರುಂ ಕೃತಾರ್ಥರಾಗಬೇಕೆಂದು ಬಸವರಾಜನಿಂ ಜಗಕ್ಕಱಿಪಿಯಾ ಸುಜ್ಞಾನಿಗಳಂ ಜ್ಞಾನಾನಂದರಂ ನನ್ನಪ್ಪನವರನನರ್ಘ್ಯಮಣಿಗಣಖಚಿತರಚಿತಮಪ್ಪ ಪುಷ್ಪಕದೊಳು ಕೈಲಾಸಕ್ಕೊಯ್ದು (*) (*) ನನ್ನಪ್ಪಯ್ಯಂಗಳ ಚಾರಿತ್ರಮದೆಂತೆನೆ—

Colophon :—

ಇತಿ ಕಥಾಗರ್ಭ . . . . ವ್ರತಂ ಗುರುಭಕ್ತ್ಯುದ್ದಾಮಂ ನನ್ನಯ್ಯನು ಮೆಱೆದಾ . . . . . . ಕಥಾಗರ್ಭ ಸಮಾಪ್ತ.

ನನ್ನಯ್ಯನ ಚಾರಿತ್ರ ॥

ಕಂ ॥ ಶ್ರೀಮಚ್ಛಿವಪದಕಮಲ ।
ಪ್ರೇಮಾಂದೋಲನಮಧುವ್ರತಂ ಗುರುಭಕ್ತ್ಯ ॥

ದ್ದಾಮಂ ನನ್ನಯ್ಯಂ ಮೆಱೆತೆ ।
ದಾ ಮಹಿಮೆಯು ಪೇೞಿತ್ವೆ ಕೇಳ್ವುದಖಿಳಜ ನಂಗಳ್ ॥

End :—

ಶಾ ॥ ವಿ ॥ ಭಾರದ್ವಾಜಸಗೋತ್ರ ದಲ್ಲಪಮಹೀ . . . . [ಸುಭಕ್ತಿಯು
ಕ್ತ . ಮಾದನಾ ಸರ್ವಾ . . . . ವೃತ್ತದನ ಗ್ರಂಥ [ಸಹ ॥ ನನ್ನ
. . . . ಕವಿ ಮಾದಣ್ಣಾಂಕನೇನು ಕೃತಾರ್ಥ . . . .
[. . . . .

(ವಿ.ವಿ.)—

ಅಸಮಗ್ರ. ಕೊನೆಯಲ್ಲಿ ಒಂದೆರಡು ಪದ್ಯಗಳು ಮಾತ್ರ ಹೋಗಿರುವಂತೆ ತೋರುತ್ತದೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಕಡೆಯಲ್ಲಿ ಬೇರೊಂದೋಲೆಯಲ್ಲಿ ಪುಷ್ಪಗಿರಿಯ ಚೆನ್ನಮಲ್ಲಿಕಾರ್ಜುನಗುರುಪ್ರಶಂಸಾತ್ಮಕವಾದ ಮೂರು ಪದ್ಯಗಳಿವೆ. ಕವಿ ವಿಷಯವಿರುವ ಓಲೆ ಮುರಿದುಹೋ ದೆ.

ಇದು ಚಂಪೂರೂಪವಾಗಿದೆ. ಸಂಧಿಗಳು ೫. ಇದರಲ್ಲಿ ಬಸವನ ಕಾಲದಲ್ಲಿದ್ದ ನನ್ನಯ್ಯನೆಂಬ ಶಿವಭಕ್ತನ ಚರಿತವು ಉಕ್ತವಾಗಿದೆ. ಕಥಾಸಾರಾಂಶವೇನೆಂಬುದನ್ನು ಉದಾಹೃತ ಭಾಗಗಳಿಂದಲೂ ಕವಿಚರಿತ್ರೆ (ದ್ವಿತೀಯ ಸಂಪುಟ) ಯಿಂದಲೂ ತಿಳಿಯುವುದು.

ಕವಿ ಮಾದಣ್ಣನೆಂಬುವನು. ವೀರಶೈವಮತದವನು. ಈತನ ಗುರು ರಾಮನಾಥನು. ತಂದೆ ಅಲ್ಲಪನೆಂಬುವನು. ಭಾರದ್ವಾಜ ಗೋತ್ರದವನು. ಇವನ ಕಾಲವು ಸುಮಾರು ೧೬೫೦ ಇರಬಹುದೆಂದು ಕವಿಚರಿತ್ರಕಾರರು ಊಹಿಸಿರುತ್ತಾರೆ.

No. 734. ನನ್ನಯ್ಯಗಳ ಚರಿತ್ರೆ.

NANNAYYAGAḶA CARITRE.

Substance, paper. Size, $10\frac{1}{4} \times 9\frac{1}{2}$ inches. Pages, 333. Lines, 20 on a page. Character, Kannaḍa. Condition, good. Appearance, new. Mode of writing, good.

Incomplete.

This is a copy of the manuscript described under the previous number (733).

(ವಿ.ವಿ.)—

ಅಸಮಗ್ರ. ಕೊನೆಯಲ್ಲಿ ಒಂದೆರಡು ಪದ್ಯಗಳು ಮಾತ್ರ ಹೋಗಿರುವಂತೆ ತೋರುತ್ತದೆ. ಇದು ಇದರ ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಇದರ ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಕವಿ ಮಾದಣ್ಣನೆಂಬುವನು.

No. 735. ನನ್ನಯ್ಯಗಳ ಚರಿತ್ರೆ.

NANNAYYAGAḶA CARITRE.

Substance, palm-leaf. Size, $11\frac{1}{8} \times 1\frac{1}{8}$ inches. Pages, 17. Lines, 6 on a page. Character, Kannaḍa. Condition, very much injured. Appearance, old. Mode of writing, good.

Begins on fol. 1-*a*. The other works herein are :—(1) Śivasaṅkalpa muntāduvu (Sanskrit), 9-*a*. (2) Jyautiṣaviṣaya, 16-*a*. (3) Narapiṅgaḻi, 53-*a*. (4) Vaidyaviṣaya muntāduvu, 64-*b*.

Incomplete.

Same work as the above.

(ವಿ-ವಿ.)—

ಅಸಮಗ್ರ. ಇದರಲ್ಲಿ ಎರಡನೆಯ ಸಂಧಿಯ ೨೬ ನೆಯ ಪದ್ಯದ ವರೆಗಿದೆ. ಆದರೆ ಮೊದಲು ಮತ್ತು ನಡುವೆ ಅಲ್ಲಲ್ಲಿ ಗ್ರಂಥಪಾತವುಂಟು. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಶಿವಸಂಕಲ್ಪ ಮುಂತಾದುವು (ಶಿವಸಂಕಲ್ಪ, ಪಂಚಾಮೃತ ಸ್ನಾನ ಮಂತ್ರ, ರುದ್ರಮಂತ್ರ), ಜ್ಯೌತಿಷ ವಿಷಯ (ಸಾಮುದ್ರಿಕ ಲಕ್ಷಣ, ಸ್ವರಶಾಸ್ತ್ರ ವಿಷಯ, ಯಂತ್ರ, ನಕ್ಷತ್ರಚೂಡಾಮಣಿ, ಶಕುನ ವಿಷಯಮುಂತಾಗಿ), ನರಪಿಂಗಳಿ, ವೈದ್ಯ ವಿಷಯ ಮುಂತಾದು ವಿವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಕವಿ ಮಾದಣ್ಣನೆಂಬುವನು.

No. 736. ನನ್ನಯ್ಯಗಳ ಚರಿತ್ರೆ.

NANNAYYAGAḶA CARITRE.

Substance, paper. Size, $10\frac{7}{16} \times 9\frac{7}{16}$ inches. Pages, 27. Lines, 20 on a page. Character, Kannaḍa. Condition, good. Appearance, new. Mode of writing, good.

Begins on pages 1 and 109. The other works herein are :—(1) Śivasaṅkalpa muntāduvu (Sanskrit), page 19. (2) Jyautiṣaviṣaya, page 29. (3) Narapiṅgaḻi, pages 73 and 111. (4) Vaidyaviṣaya, page 101. (5) Pañcapakṣi Sakuna, page 52. (6) Śakuna, page 99.

Incomplete.

This is a copy of the manuscript described under the previous number.

(ವಿ-ವಿ.)—

ಅಸಮಗ್ರ. ಇದು ಇದರ ಹಿಂದಣ ನೆಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೃತಿಯಾಗಿದೆ. ಇದರೊಡನೆ ಶಿವಸಂಕಲ್ಪ ಮುಂತಾದುವೂ (ಶಿವಸಂಕಲ್ಪ, ಪಂಚಾಮೃತ ಸ್ನಾನ ಮಂತ್ರ, ರುದ್ರಮಂತ್ರ), ಜ್ಯೌತಿಷ ವಿಷಯ (ಸಾಮುದ್ರಿಕಲಕ್ಷಣ, ಸ್ವರಶಾಸ್ತ್ರ ವಿಷಯ, ಯಂತ್ರ, ನಕ್ಷತ್ರ ಚೂಡಾಮಣಿ, ಶಕುನ ವಿಷಯ ಮುಂತಾಗಿ), ನರಪಿಂಗಳಿ, ವೈದ್ಯ ವಿಷಯ ಮುಂತಾದುವೂ ಇವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಕವಿ ಮಾವಣ್ಣನೆಂಬುವನು.

No. 737. ನಾಂದ್ಯದ ಪದ.

NĀNDYADA PADA.

Substance, Śrītāla. Size, 10 × 2⅛ inches. Pages, 5. Lines, 11 on a page. Character, Kannaḍa. Condition, much injured. Appearance, old. Mode of writing, good.

There are 22 verses on the whole.

Begins on fol. 3-*a* of the Ms. described under Sanskrit Descriptive Catalogue No. 125.

This appears to be a portion of a work whose name is not known.

Beginning :—

ಶ್ರೀಮದನುಪಮ ನಿತ್ಯ ನಿರ್ಮಲ ಚಿದಾನಂದ ।
ಸಾಮವೇದಾತೀತ ಪರಶಿವ ಸದಾಶಿವ ಮ ।
ಹಾಮಹಿಮ ಪಂಚಶಕ್ತ್ಯಾಧಾರವೆನಿಪ ಮಾಹೇಶ ಲೀಲಾವಿಗ್ರಹ ॥
ಸ್ವಾಮಿ ಗುರುಲಿಂಗ ಜಂಗಮರೂಪನಾಗಿ ಯೆ ।
ನ್ನೀ ಮನೋವಾಕ್ಕಾಯಕಂಗಳೊಳ್ಬಡೆದಿರ್ಪ ।
ರಾಮಣೀಯಕ ಶಾಂತಮಲ್ಲಿಕಾರ್ಜುನ ರಕ್ಷಿಸಯ್ಯ ಸಿನ್ನಯಾ ಶರಣರ ॥ ೧ ॥
ಗುರ್ವನುಗ್ರಹ ನಿ ಜ ಸುಪರ್ವನತ ನಂದೀಶ ।
ದುರ್ವಾಸ ಹರುಷಾಬ್ಧಿಪೂರ್ವಣಶಶಾಂಕ ಗಾಂ ।
ಧರ್ವನಾಯಕ ಮೋಹಿವಃರ್ವಲ್ಲಭಾದಿವಸುಪ್ರೂರ್ಣ ಖಚರಾಳಿನಮಿತ ॥
ಕರ್ವದಿಗೋಪೇಂದ್ರ ಗರ್ವಹರ ದುರ್ವಾರ್ಗರ್ಗ । (?)
ಚಾರ್ವಾಕದೂರ ಲಸದುರ್ವರಾಧರ ನಿಕರ ।
ಸಾರ್ವಭೌಮೋಮ್ಮ್ತ ಜನಿರ್ವಹಣದೆಷ್ಟ್ಬದೆನೆ ಸರ್ವ್ವ ಶಶಾಂಕಮಲ್ಲ ॥ ೨ ॥ (?)

End :—

ಮಿತ್ರಶಶಿಪವಮಾನಮಿತ್ರಂ ವಿರಾಜಿಸುವ ॥
ನೇತ್ರತ್ರಯಂ ಧವಳವಕ್ತ್ರ ಪಾವನ . ಚ ।
ರಿತ್ರ ಶತಪತ್ರವರಪುತ್ರ ದಿತಿಸುತಹರನ ಸುತ್ರಾಮಮುಖ್ಯಮಾಲ ॥
ಗಾತ್ರ ಪಂಚಾಸ್ತ್ರವನ ವಲ್ಲೀಲವಿತ್ರ ತಾ
ಪತ್ರಯಾತೀತ ಪರಶತ್ರುಶಂ . . . ।
. . . . ಸಲಪ್ರದಾರ್ತಜನರನು ಶಂಭುವೇ ॥ ೨೨ ॥

(ವಿ-ವಿ.)—

೨೨ ಪದ್ಯಗಳವೆ.

“ನಾಂದ್ಯದ ಪದ” ಎಂದು ಮೊದಲಲ್ಲಿದೆ. ಯಾವ ಗ್ರಂಥಕ್ಕೆ ಸಂಬಂಧಿಸಿರಬಹುದೆಂದು ತಿಳಿಯಬರುವುದಿಲ್ಲ. ಇದರ ಕೊನೆಯಲ್ಲಿ ಶಂಕರನಿಗೆ ಆರತಿಯೆತ್ತುವ ಹಾಡೂ ಇದೆ.

No. 738. ನಿಜಲಿಂಗಶತಕ.

NIJALIṄGAŚATAKA.

Substance, palm-leaf. Size, $9\frac{1}{16} \times 1\frac{1}{16}$ inches. Pages, 43. Lines, 4 to 6 on a page. Character, Kannaḍa. Condition, much injured. Appearance, old. Mode of writing, good.

Begins on fol. 34-*a* of the Ms. described under No. 687 ante.

Complete.

Deals with Moral principles and explains the importance of devotion to Śiva.

Beginning :—

ನಿತ್ಯ ನಿರುಪಮ ವಿಶ್ವಮೂರ್ತಿ ನಿಜಲಿಂಗೇಶ ।
ನುತ್ತಮೋತ್ತಮವೆನಿಪ ಶತಕವನು ಬಲ್ಲಂತೆ
ಬಿತ್ತರಿಪೆ ವಾರ್ಧಿಕದ ಷಟ್ಪದಿಗಳಿಂದ ಮನವಿತ್ತು ಸುಜನರು ಕೇಳ್ವುದು ॥
ಗೋಪ ಗೋಪತಿನಮಿತ ಗೋಕರ್ಣಸದೃಶನೇ ।
ಗೋಪುತ್ರಿಯರ್ಧಾಂಗ ಗೋಜಾತಶತ್ರುಧರ ।
ಗೋಪವಾಹನನಮಿತ ಗೋತನಯಶಿರಪಾತ್ರ ಗೋವಸನ ಪಂಚಾನನ ।
ಗೋಪುತ್ರಿಸದ್ಗಮನ ಗೋರಹಿತ ಕಳೆಶಿಕ್ಷ ॥
ಗೋಪುತ್ರ[ಪ್ರಿಯ]ಶಿದಹನಗೋತ್ರಿತಯ ಘನಮಹಿಮ ।
ಗೋಪಂಚಧರನಾಶ ನಿಜಲಿಂಗ ಭವಭಂಗ ಶರಣಜನಭಕ್ತಸಂಗ ॥

* * * *

ಪತಿಯ ನಿಂದಿಸುತಿಪ್ಪ ಸತಿಯಿದ್ದು ಫಲವೇನು ।
ಅತಿಮಂದ ಮತಿಯಾದ ಸುತನಿದ್ದು ಫಲವೇನು ।
ಮತಿಯಿಲ್ಲದವನ ಸಂಗತಿಯಿದ್ದು ಫಲವೇನು ಹಿತವಿಲ್ಲದರ ಬಳಿಯಲಿ ॥
ಸತತ ಮನಮುಟ್ಟ ಧಾವತಿಯ ಮಾಡಿದರೇನು ।
ಚತುರಾಸ್ಯನಮಿತ ನಿನ್ನಯ ಪುಣ್ಯನಾಮವನು ।
ನುತಿಸದವನಿದ್ದೇನು ನಿಜಲಿಂಗ ಭವಭಂಗ ಶರಣಜನಭಕ್ತಸಂಗ ॥ ೩೭ ॥

* * * *

ಸಂಗರಕೆ ಭೀತಿಗೊಳ್ವದ ಪಾರ್ವನಿದ್ದೇನು ।
ಮುಂಗಂಡು ಮಾತನಾಡದ ಸಚಿವನಿದ್ದೇನು ।
ಇಂಗಿತವನರಿದು ನಡೆಸದ ಹೆಳವನಿದ್ದೇನು ವಿಮಲಶಾಸ್ತ್ರಾಗಮವನು ॥
ಸಂಗ್ರಹಿಸಿಯೋದಿಕೊಳ್ಳದ ಪಾರ್ವನಿದ್ದೇನು ।
ಅಂಗಭವಹರ ನಿಮ್ಮ ದುರಿತವನು [ಸಂ]ಹರಿಸದವ ।
ನಿರ್ಕೆ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ! ॥ ೪೦ ॥

* * *

End :—

ಸತ್ವದಿಂದಲಿ ಮತ್ತ [ಜಗವ] (ಗಜವ) ನಿಲಿಸಿದಡೇನು ।
ಮತ್ತೆ ಕೇಸರಿಯೊಡನೆ ಕಾದಿ ಜಯಿಸಿದಡೇನು ।
ಚಿತ್ತರದಿ ಚಪ್ಪನ್ನದೇಶವನು ತಿರುತಿರುಗಿ ಪ್ರೌಢನಾಗಿರ್ದಡೇನು ॥
ಸತ್ತು ಮರಮರಳಿ ಹುಟ್ಟುವ ಬಾಧೆಯನು ಕಳದು ॥
ನಿತ್ಯನಿರ್ಮಲ ನಿಜಾನಂದನಾಗಿರುವ ಅ ।
ಧ್ಯಾತ್ಮಕರ ವಿದ್ಯಕಣೆಯಾವ್ರುದೈ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ॥೯೮॥
ಗೋತ್ರಕುಲಜಾತಿಯೆ ಕಾತ್ಯ ಕಳತ್ರಯವಗುಣ ಚಾ । (?)
ರಿತ್ರ ಚತುರಾಸ್ಯಶಿರಪಾತ್ರ ನಿರ್ಮಳಧವಳ ।
ಗೋತ್ರ ನಾರದಸ್ತೋತ್ರಪಾತ್ರ ಹರಿಣಾಂಕಧರ ಶಿಖಿನೇತ್ರ ಭವಲವಿತ್ರ ॥
ನೇತ್ರಶ್ರವ(ಣ)ಭೂಷ ಶತಪತ್ರಕ್ಷ ಶತಶರದಿ । (?)
ಪತ್ರಶೇಖರ ಪಂಚವಕ್ತ್ರವಾಂ ಪಾಹಿ ಲೋ ।
ಕತ್ರಯದೀಶನಹುದವೈ ನಿಜಲಿಂಗ ಭವಭಂಗ ಶರಣಜನ ಭಕ್ತಸಂಗಾ ॥ ೯೯ ॥

ಇಂತು ॥ ರುದ್ರಾಣಿಯುರ ಸಖನ(ನ)ದ್ರಿಬಾಣನ ಸ ।
ಮುದ್ರಾತ್ಮಭವಮೌಳಿ ಭದ್ರನಾಗಿರುತಿರ್ಪ ವೀರ ॥
ಭದ್ರನಂ ಪಡೆದ ಬಲಭದ್ರನಂ ರಜತಮಿತ್ರನಂ ಕ್ಷುದಲಂಕರ ಸಂಹರ ॥
ರುದ್ರನಂ ನಾನಾಲ್ಕು ಚಲುಪದ . . . . ।
. ದ್ರನಂ ಹರದುರಿತಾದ್ರಿಕುಲ ವಿತಶತಂತ್ರುಂಗ ।
ಭದ್ರಕೀರದೊಳೆಸೆವ ತದ್ದ್ರಮು ।
ಭವಪುರವಾಸನಹುದಲ್ಯೆ ನಜಲಿಂಗ ಭವಭಂಗ ಶರಣಜನಭಕ್ತಸಂಗಾ ॥ (?)

Colophon :—

ಶ್ರೀ ನಿಜಲಿಂಗಶತಕ ನಿಜಗುಣ್ಯಯ್ಯನವರು ವಿರಚಿಸಿದ ಪುಸ್ತಕ ಕಟ್ಟಿತೋಟದ ಹಿರಿಯೂರ ಮಲ್ಲಪ್ಪ ಗೌಡನ ಮಗ ಬಸಪ್ಪನವರ ಪುತ್ರರಿಗೆ ಬರೆದುಕೊಟ್ಟುದು.

Date of transcription and the transcriber :—

ನಳ ಸಂವತ್ಸರದ ಪಾರ್ಥಿವಕ್ಕೆ ಸಮಾಪ್ತ.

ಇದಂ ಬರೆದಾತ ಮುತ್ತೂರ ಮಠದ ಮತ್ತಾವಾರದ ಕಲ್ಲಾರೆ ಮಠದ ಶಿವಸೂತ್ರದ ಸಿದ್ಧ ಬಸವನ ಬರಹ ॥ ತಪ್ಪುಳ್ಳಡೆ ತಿದ್ದುವುದು ಬರೆದೋದುವುದು । ಗುರು ಬಸವಮ್ಮನ ಮಗಳ ಮೊಮ್ಮಗನ ಸುತನ ವರಪುತ್ರನಂ । ಬರದುದ ಬಯ್ಯದಡೆ ಭವಪಾಶಮುಕ್ಕ್ಯಂ ವರರತ್ನ ಚೂಡಾ ಕರವಾವೆ ೪೫೪ ಕ್ಕೆ ಪದನು ೧೦೩ ಕ್ಕೆ ಮಂಗಳಂ ॥

(ವಿ.ವಿ.)—

ಸಮಗ್ರ.

೧೦೦ ಪದ್ಯಗಳವೆ. ವಾರ್ಧಿಕಷಟ್ಪದಿಯಲ್ಲಿ ಬರೆದಿದೆ. ಶಿವನ ಭಕ್ತಿಯೆ ಸರ್ವಸಾಧಕವೆಂದೂ ಉತ್ಕೃಷ್ಟವೆಂದೂ ಬೋಧಿಸುವುದರೊಡನೆ ಅನೇಕನೀತಿಗಳನ್ನು ಈ ಪದ್ಯಗಳು ಬೋಧಿಸುತ್ತವೆ. ನಿಜಗುಣಯ್ಯನೆಂಬುವನು ಗ್ರಂಥಕರ್ತೃವಾಗಿದ್ದಂತೆ ತಿಳಯುತ್ತದೆ. ಇತರ ವಿಜಯಗಳನ್ನು ಉದ್ಧೃತಭಾಗದಿಂದ ತಿಳಯುವುದು.

No. 739. ನೀಲಮ್ಮನ ತ್ರಿವಿಧಿ.

NĪLAMMANA TRIVIDHI.

Substance, palm-leaf. Size, $13\frac{3}{8} \times 1\frac{3}{8}$ inches. Pages, 11. Lines, 5 on a page. Character, Kannaḍa. Condition, much injured. Appearance, old. Mode of writing, good.

Complete in 56 stanzas.

Begins on fol. 58-*a* of the Ms. described under Sanskrit D. No. 6990.

Same work as that described under No. 479.

Beginning :—

ನೀಲಮ್ಮತ್ರಿವಿಧಿ—

ಶ್ರೀ ಪರಮೇಶ್ವರ ಅಪಾರಮಹಿಮೆಯನು ।
ರೂಪುಗೊಂಡಂತೆ ನಿಂದ ನೀಲಮ್ಮ ನೀ ।
ನೇ ಪೊತ್ತುಯೆನಗೆ ಕೃಪೆಯಾಗು ॥

*   *   *   *

End :—

ನೀಲಮ್ಮನ ಸ್ತೋತ್ರವನು ಲೀಲೆಯಿಂದೋದಿದಗೆ ।
ಮೇಲೆ ಅರ್ಥವನು ಬೇಳ ಕೇಳ್ದವರಿಗೆ ।
ಶೂಲಿಯೊಳೈಕ್ಯವಿದು ಸಿದ್ಧ ॥

Colophon :—

ನೀಲಮ್ಮನ ತ್ರಿವಿಧಿ ಸಮಾಪ್ತ ಮಂಗಳ ಮಹಾಶ್ರೀ.

(ವಿ-ವಿ.)—

ಸಮಗ್ರ. ಹಿಂದೆ ೪೭೯ ನೆಯ ನಂಬರಿನಲ್ಲಿ ವರ್ಣಿತವಾದ ಗ್ರಂಥವೇ ಆಗಿದೆ.

No. 740. ನೀಲಾಂಬಿಕಾ ಸ್ತೋತ್ರ.

NĪLĀMBIKĀ STŌTRA.

Substance, Śrītāla. Size, $13\frac{1}{4} \times 2\frac{3}{8}$ inches. Page, 1. Lines, 7. Character, Kannaḍa. Condition, much injured. Appearance, old. Mode of writing, good.

Complete.

Begins on fol. 70-*a* of the Ms. described under D. No. 125 (Sanskrit Descriptive Catalogue).

Written in praise of Nīlāmbikā.

Beginning :—

ಪಲ್ಲ॥

ಸುಜನ ಹೃದಯ ಕಮಲಮಂದಿರೇ । ನೀಲಾಂಬಾ ।
ವೃಜಿನಪಂಕಜಚಂಡಭಾನುವೆ ॥ ಪದ ॥

ಶ್ರೀ ಗುರುವಿನ ರಾಜಿತಾಂಘ್ರಿಯೂ । ಯೆನ್ನ ಹೃದಯ ॥
ಸ್ಥಾನದಲ್ಲಿ ನೆಲಸಿಯಾವಗಂ ।
ಮಾಣದಿರ್ಪ ಭಾಗ್ಯವೆಂತುಟೋ । ಬಸವರಾಜ ।
ನೀನೆಯಾಮಿಸೆನ್ನ ರಕ್ಷಿಸಾ ॥ ೧ ॥
ಭಕ್ತಿಯುಕ್ತಿಮುಕ್ತಿಗಾಸ್ಪದೆ । ಭಾವಗಮ್ಯ ।
ಭಕ್ತರಾನಂದವಾರಿಧಿ ॥
ಚಿತ್ತದೊಳಗೆ ತ್ರಿವಿಧಲಿಂಗದಾ । ಶೇವವನ್ನು ।
ವೆಕ್ತಿಕರಿಸಿಕೊಳ್ಳಬಲ್ಲಳೆ ॥ ೨ ॥

*   *   *   *

End :—

ಸರ್ವದುರಿತ ಮೃತ್ಯುನಾಶನೇ । ನೀಲಾಂಬಾ ।
ಸರ್ವಭೂತಭಯ ನಿವಾರಣೀ ॥
ಸರ್ವಕರ್ಮನಿವಾರಣಾತ್ರ್ಮನಿ । ನೀಲಾಂಬಾ । (?)
ಸರ್ವಕಾಲ ಕಾಯ್ವುದೆನ್ನನು ॥ ೪ ॥
ಬಸವಭೃತ್ಯ ಚೆನ್ನ ಬಸವನ । ಓವಿ ರಕ್ಷಿಪ ।
ರಸನವೆಳ ಹೊದ್ದಲೀಯದೆ ।
ಅಸಮತರದ ಅಷ್ಟಮದಗಳ । ವಡದು ಸೊಂಕೆ ॥
ಕುಸುರಿದಱಿದು ಅ[ಱಿ] (ರಿ) ಗಳಾಱನೊ ॥
ದಶವಿಧೇಂದ್ರಿಯ ದಾಳಿಗೆಯ್ಯದೆ ॥ ರಕ್ಷಿಸೆನ್ನ ॥
ಬಸವನಾಪ್ತ ಕರುಣಿಯಾವಗಂ ॥ ೯ ॥

Colophon :—

ನೀಲಾಂಬಿಕಾಸ್ತೋತ್ರ ಸಮಾಪ್ತ . ಮಂಗಳಮಹಾ ಶ್ರೀ ॥

(ವಿ-ವಿ.)—

ಕರ್ತೃ ಮೊದಲಾದ ವಿಷಯಗಳು ತಿಳಿದು ಬರುವುದಿಲ್ಲ.

No. 741. ಪಂಚಾಕ್ಷರೀಯಂತ್ರಮಂತ್ರ.

PAÑCĀKṢARĪYANTRAMANTRA.

Substance, Śrītāla. Size, 13¼ × 2⅝ inches. Pages, 6. Lines, 15 on a page. Character, Kannaḍa. Condition, much injured. Appearance, old. Mode of writing, good.

Complete.

Begins on fol. 17-*a* of the Ms. described under No. 125 (Sanskrit Descriptive Catalogue).

Deals with the five-syllabled mantra bearing on Śiva.

Beginning :—

ರಾಗ ದೇಶಿ ॥

ಆಡುತ್ತೈದಳೆ ಮಾಯೆಯೆಂಬ ಕಾಮಿನಿ ಬಿಡದೆ ।
ನೋಡಿ ಬಲ್ಲವರು ಸಂಸಾರನಾಟಕವಾ ॥ ಪದ ॥

ಶಿವಶಕ್ತಿಯೆಂಬ ರಂಗದೊಳು ನರನಾಗದಾ ।
ನವದೇವತಾದಿಪೆಸರಿನ ತನುಗಳೆಂಬ ॥
ವಿವಿಧರೂಪಿನ ಬೊಂಬೆಗಳ್ಳಗಾತ್ಮಪೆಂಬ ಸೂ ॥
ತ್ರವನು ಹವಣಿಸಿ ಮೋಹದೊಡನೆ ಮೇಳೈಸಿ ॥

* * * *

ಸುರುಚಿರಚಿದಂಬರೋದ್ಧರಣದಾಯತವಱಿದು ।
ಧರಿಸುವುದು ಮಸ್ತಕದಿ ಶಿವಶರಣರು । ಪಲ್ಲ ॥

* * * *

ಶ್ಲೋ॥ ಅಕಾರೋಕಾರಸಂಯೋಗಾದೋಕಾರಃ ಸ್ವರ ಉಚ್ಯತೇ ॥
ಓಮಿತ್ಯೇಕಾಕ್ಷರಂ ಬ್ರಹ್ಮ ವದಂತೇ ಸರ್ವಯೋಗಿನಃ ॥ (?)

ಟೀ.॥ ಅಕಾರೋಕಾರಸಂಯೋಗಾತ್, ಅಕಾರ ಉಕಾರಂಗಳೆರಡರಕೂಟದ ದೆಸೆಯಿಂದ । ಓಕಾರ: ಸ್ವರ: " ಓ " ಯೆಂಬವರ್ಣವಾಯಿತೆಂದು ನುಡಿಯಲ್ಪಡುತ್ತಿಹುದು. ಓ ಮಿತ್ಯೇಕಾಕ್ಷರಂ, ಮಕಾರ ಅನುಸ್ವಾರವಾದ ಕಾರಣ ಸೊನ್ನೆಯಾಯಿತ್ತು ॥ ಇಂತು ಅಕಾರೋಕಾರ ಮಕಾರಂಗಳ ಯೋಗವಾದ " ಓಂ "ಯೆಂಬ ಪ್ರಾಣ ಪ್ರಣವಾಕ್ಷರವು ಬ್ರಹ್ಮ, ಪರಬ್ರಹ್ಮಪೆಂದು । ಸರ್ವಯೋಗಿನಃ, ಸಮಸ್ತಯೋಗಿಗಳೂ । ವದಂತೇ, ನುಡಿಯುತ್ತಿರುವರು॥ ೬ ॥

* * * *

End :—

ವಾತ ಯೆಂಬತ್ತೊಂದು, ಪಿತ್ತ ಅಱುವತ್ತು ನಾಲ್ಕು, ಶ್ಲೇಷ್ಮ ಯಿನ್ನೂರ ಹದಿನೆಯ್ದು ತೆಱನು॥

ಅಂತುಮುನ್ನೂಱುರುವತ್ತು ವ್ಯಾಧಿರೂಪು, ಶಿವಶರಣಂಗೆ ಪ್ರಸಾದಸ್ವರೂಪುಮಾಗಿ ಕುಂ೦. ರೆಖೆಗ (ರೇಖೆಗೆ) ಭಕ್ತಿ, ಜ್ಞಾನ, ವೈರಾಗ್ಯ ; ಯಿಚ್ಛಾ, ಜ್ಞಾನ, ಕ್ರಿಯೆ ಮುಪ್ಪುರಿ ಗೂಡಿದಾ ಧಾರಂಗಳು. ಈ ಚಿದಂಬರದ ದೆಸೆಯಿಂದೆ ಮಹಾಲಿಂಗವಾದಿಯಾದ ಸಕಲತತ್ವಂಗ ಳೊಳುತ್ಪತ್ತಿ. ಅವಾಗ್ವಂನಾದೊತ್ಪದ್ಯತೆ (? ನಾದಾದುತ್ಪದ್ಯತೇ) ಬಿಂದುರ್ಬಿಂದೋರ್ಜಾಯತೇ ಕಳಾ । ಕೆಳಾಯಾಂಜಾಯತೇ ಭಕ್ತಿಸ್ತಯಾ ಸಂವಿತ್ಪ್ರಜಾಯತೇ ॥ ಸಂವಿದಾ ಜಾಯತೇ ಚಿತ್ತಂ ತಸ್ಮಾತ್ತೇಜಃ ಪ್ರಜಾಯತೇ ॥ ತದ್ವೈ ಸದಾಶಿವಃ ಪ್ರೋಕ್ತ[೦] (ಃ) ತಸ್ಮಾದೀಶ್ವರಸಂಭವಃ॥

ಚಿದಂಬರೋದ್ಧರಣೆಯ ವಾಕ್ಯಸಮಾಪ್ತ.

Colophon :—

(ವಿ-ವಿ.)—

ಸಮಗ್ರ. ಚಿದಂಬರಯಂತ್ರೋದ್ಧಾರವೆಂಬ ಇನ್ನೊಂದು ಹೆಸರೂ ಈ ಗ್ರಂಥಕ್ಕಿದೆ.

No. 742. ಪರವಾದಿಗಜಾಂಕುಶತಾರಾವಳಿ.

PARAVĀDIGAJĀṄKUŚATĀRĀVAḶI.

Substance, paper. Size, 8¾ × 4½ inches. Pages, 23. Lines, 17 on a page. Character, Kannaḍa. Condition, very much injured. Appearance, old. Mode of writing, not bad.

Begins on page 293. The other works herein are :—(1) Śivādhikya purāṇa, page 1. (2) Bhikṣāṭana caritre, page 261. (3) Vīraśaivāgama, page 316. (4) Sōmavve kathe, page 320.

Incomplete.

Describes that Śiva is the supreme God. The author is Nīlakaṇṭhārādhya who lived in about 1500 A.D.

Beginning :—

ಕಂ ॥ ಶ್ರೀಗಿರಿಜಾಕುಚಕುಂಕುಮ ।
ರಾಗಾಂಕಿತವಕ್ಷನಕ್ಷಯಂ ಸರ್ವೇಶಂ ।
ಯೋಗಿಜನಹೃನ್ನಿವಾಸಂ ।
ಭೋಗೀಂದ್ರಾಭರಣನೊಲಿದು ಸಲಹಲಿ ಜಗಮಂ ॥

ಪಲ್ಲವಿ ॥ ಕೇಳಿಲೊ ಪಾಪಿ ಶಂಕರಗೆ ಸಮಾನವೆಂ
ದೊಳ್ವುದನುಚಿತ ನಿಮ್ಮ ವಿಷ್ಣುವನು ॥

End :—

ಆ ವೇದದಿಂ ಶಿವನೆ ಬ್ರಹ್ಮ ಎಂದುದಂ ,
ನೀವರಿಯದೆ ಫಲಮಂ ಭುಜಿಸುತ್ತೆ ಮುಕ್ತಿ ।
ಭಾಮಿನಿಗೆ ದೂರ ಮಾಡಿರೆ ನಿಂದಿಪ್ಪುದರಿಂ ।
ದಾವೈತರಣಿಗೆ ನಿಲಯರಾದಿರೆ “ ಏಕ ।
ಏವ ರುದ್ರೋ ನದ್ವಿತೀಯಾಯ ” ಎನೆ ಶ್ರುತಿ ।
ಯಾ ವೃಷಭಾಂಕನೆ ದೈವವೆಂಬುದ ಸಿದ್ಧ ।
ಕೋವಿದರರಿಯೆ ಸಾಕು ಇದು ನಿಂದ ,
ಕಾವಲ್ಲಗರರಥಾಕು ಬ್ರಹ್ಮಸ್ವಾನು ।
ಭಾವಿಗಳಿಗೆ ತಾ ಬೇಕು ವೈಷ್ಣವ ಪಕ್ಷ . ।
ಜೀವಿಗಳಿರ್ದೆಯ ಮೇ . ಸದ್ಭಕ್ತರ ।
ಕೈವಲ್ಯಮಾರ್ಗವಿಂತೀಯಮೃತವಾಕ್ಯ ॥

Colophon :—

ಶ್ರೀ. ಶ್ರೀ. ಶ್ರೀ.

(ವಿ.-ವಿ.)—

ಅಸಮಗ್ರ. ಅಂತ್ಯದಲ್ಲಿ ಒಂದು ಕಂದ ಪದ್ಯವೂ ಒಂದು ಗದ್ಯವೂ ಇಲ್ಲವೆಂದು (ಕವಿ ಚರಿತ್ರೆಯಿಂದ) ಗೊತ್ತಾಗುತ್ತದೆ. ಕಾಗದದ ಪ್ರತಿ . ಅತ್ಯಂತ ಶಿಥಿಲವಾಗಿದೆ. ಲಿಪಿ ಸಾಮಾನ್ಯವಾದುದು. ಇದರೊಡನೆ ಶಿವಾಧಿಕ್ಯಪುರಾಣ, ಭಿಕ್ಷಾಟನ ಚರಿತ್ರೆ, ವೀರಶೈವಾಗಮ, ಸೋಮವ್ವೆಕಥೆ ಇವೂ ಇವೆ.

ಇದು ಪದ್ಯರೂಪದಲ್ಲಿ ಬರೆದಂತೆ ಕಾಣುತ್ತದೆ. ಪದ್ಯಭೇದವಾವುದೆಂದು ಹೇಳುವುದಕ್ಕೆ ಬರುವುದಿಲ್ಲ. ರಗಳೆ ಅಥವ ಹಾಡು ಇವುಗಳ ಹೋಲಿಕೆಯನ್ನು ಸ್ವಲ್ಪಮಟ್ಟಿಗೆ ಹೇಳಬಹುದು. ಒಂದು ಪಲ್ಲವಿ ಮತ್ತು ಇಪ್ಪತ್ತೇಳು ಪದ್ಯ ಅಥವ ನುಡಿಗಳು ಇವೆ. ಅಲ್ಲದೆ ಆದಿಯಲ್ಲಿ ಒಂದು ಕಂದಪದ್ಯವೂ ಅಂತ್ಯದಲ್ಲಿ ಕಂದಪದ್ಯ ಮತ್ತು ಒಂದು ಗದ್ಯವೂ ಇವೆ.

ಗ್ರಂಥಾಂತ್ಯದ ಬಗೆಗೆ ಹೇಳಿರುವ ಈ ವಿಷಯಕ್ಕಾಗಿ ಕವಿ ಚರಿತ್ರೆಯನ್ನು ನೋಡುವುದು. ವಿಷ್ಣುವು ಶಿವಸಮಾನನಲ್ಲವೆಂಬುದನ್ನು ಪ್ರತಿಪಾದಿಸುವುದೇ ಇದರಲ್ಲಿ ಉಕ್ತ ವಿಷಯವು.

ಕವಿ ನೀಲಕಂಠಾರಾಧ್ಯನು. ಇವನಕಾಲವು ಸುಮಾರು ೧೫೦೦ ಇರಬಹುದು. ಬಗೆಗೆ ಕವಿಚರಿತ್ರೆ (ದ್ವಿತೀಯ ಸಂಪುಟ) ಯನ್ನು ನೋಡುವುದು.

No. 743. ಪರವಾದಿಗಜಾಂಕುಶತಾರಾವಳಿ.

PARAVĀDIGAJĀṄKUŚATĀRĀVAḶI.

Substance, paper. Size, $10\frac{7}{16} \times 9\frac{1}{2}$ inches. Pages, 42. Lines, 20 on a page. Character, Kannaḍa. Condition, good. Appearance, new. Mode of writing, good.

Begins on page 340. The other works herein are :—(1) Śivādhikya-purāṇa, page 1. (2) Vīraśaivāgama, page 381. (3) Sōmavvekathe, page 384.

Incomplete.

This is a copy of the manuscript described under the previous number (742).

(ವಿ-ವಿ.)—

ಅಸಮಗ್ರ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಶಿವಾಧಿಕ್ಯಪುರಾಣ, ವೀರಶೈವಾಗಮ, ಸೋಮವ್ವೆಕಥೆ ಇವೂ ಇವೆ.

No. 744. ಪರವಾದಿಗಜಾಂಕುಶತಾರಾವಳಿ.

PARAVĀDIGAJĀṄKUŚATĀRĀVAḶI.

Substance, paper. Size, $12\frac{7}{8} \times 8$ inches. Pages, 28. Lines, 20 to 23 on a page. Character, Kannaḍa. Condition, slightly injured. Appearance, old. Mode of writing, good.

Begins on page 303. The other works herein are :—(1) Śivādhikya-purāṇa, page 1. (2) Bhikṣāṭanacaritre, page 267. (3) Vīraśaivāgama, page 330.

Incomplete.

This also is a copy of the manuscript described under No. 742 ante.

(ವಿ-ವಿ.)—

ಅಸಮಗ್ರ. ಇದು ಹಿಂದಣ ೭೪೨ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಇನ್ನೊಂದು ಪ್ರತಿಕೆಯಾಗಿದೆ. ಕಾಗದದ ಪ್ರತಿ. ಸ್ವಲ್ಪಮಟ್ಟಿಗೆ ಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ ಇದರೊಡನೆ ಶಿವಾಧಿಕ್ಯಪುರಾಣ, ಭಿಕ್ಷಾಟನ ಚರಿತ್ರೆ, ವೀರಶೈವಾಗಮ ಇವೂ ಇವೆ.

No. 745. ಪುರಾತನರ ರಗಳೆಗಳು.

PURĀTANARA RAGAḶEGAḶU.

Substance, Śrītāla. Size, 11⅝ × 1½ to 2 inches. Pages, 330. Lines, 6 to 10 on a page. Character, Kannaḍa. Condition, much injured. Appearance, old. Mode of writing, good.

Begins on fol. 1-*a* of the manuscript. The other work herein is :—
(1) Śivatatvasāra, fol. 166-*a*.

Complete up to Dāsimayyana Ragaḷe, but imperfect.

This gives an account of some devotees of Śiva. The author is Hariharadēva of Hampe. He lived about 1165 A.D.

Beginning :—

ವೆಸಂದಱುವತ್ತ ಮೂವರಂ

ಕೂಡಿ ಜಗಜ್ಜನಂ ಬಯಸಿ ಬಣ್ಣಿಸುತಿರ್ಪ . . . .
. . . . ವೆತ್ತಱುವತ್ತಮೂವರಂ ಬೇಡಿ
ತನಿವರಂ ಸುಕೃತವ ಜೀವರಸಪ್ರತಿಮಪ್ರಭಾವರಂ

ಕಂದ ॥ ಹಂಪೆಯ ಶಂಕರ ದೇವರ ।
(ಹ)ಂಪೆಯ ಗುರುಮಾದಿರಾಜದೇವರ ಮತ್ತಂ ॥
ಹಂಪೆಯ ಮಾದರಸರ ದಯೆ ।
ಯಿಂ ಪುೞಗಳ್ದಂ ರಸಿಕಚಕ್ರಿ ಹರಹರಿದೇವಂ ॥
ಶರಣ . . . . . . ।
(ಪರರಿಂಗೆ) ಅಗದ ನಂಬಿಗೆ ।
ನೆರವಾದ ಪುರಾರಿವೆರಸಿ ಪೊಱಗೆನೆ ಮೆರೆವಿಂ ।
ಡರ ಮುಳಿಸ ತಿಳುಪಲಭವಂ ।
ಕರುಣಿಸಲಱುವತ್ತು ಮೂವರಾದರ್ ಧರೆಯೊಳ್ ॥
ಧರೆಯರಿಯ ತನುವೆರಸಿ ಸಂ. ॥ .
ದರಸುಗಳಱುವತ್ತು ಮೂವರೊಳ್ ಮೊದಲಮಹೇ- ॥
ಶ್ವರರು ತಿರುನೀಲಕಂಠರ ।
ಚರಿತವನವಧರಿಸು ಹಂಪೆಯ ವಿರೂಪಾಕ್ಷ ॥

ರಗಳೆ ॥ ಶ್ರೀ ಚೋಳದೇಶವೊಪ್ಪಿರ್ಪುದು ಧರಾತಳಕೆ ॥
ವಾಚಾಮಗೋಚರ . . . ವಿಸ್ತರಂ ಜಗಕೆ
ಆದೊಡಂ ನಾನದಂ ಬಲ್ಲಂತೆ ಬಣ್ಣಿಪೆಂ ॥
ಸಾದರಂ ಕಡು ನೇಹ ದಿಂದಿಂತು . . ॥
. . . . . ವೆನಿಸಿ ಹರಿದ ಕಾವೇರಿಯಿಂ ॥
ನಾಕಮಂ ನಗುವ ನಗರಂಗಳೊಪ್ಪೀಜೆಯಿಂ ॥
ಎವೆಯಿಕ್ಕಲಿಂಬಿಲ್ಲೆನಿಪ್ಪ ಶಿವಭವನದಿಂ ॥
ತವಕದಿಂ ಮಿಗೆ ಮೆಱೆವ ತಿರುನಾಳ್ಗಳೊಪ್ಪದಿಂ ॥

ಸರ್ವದೆಸೆಗಂ ಪರೆದು ಪರಿವ ಕಾಲುವೆಗಳಿಂ ।
ಸರ್ವಮುಕ್ತ್ಯ (ದ್ಯಾ) ನವೆನಿಸಿದ ಬನಂಗಳಿಂ ॥

* * * *

ದಿನವೆ ಬೇಱಿಲ್ಲ ತಿರುನಾಳೆ ದಿನವಾ ಪುರಕೆ ॥
ಮನವೆ ಬೇಱಿಲ್ಲ ಶಿವ ಭಕ್ತಿ ಮನವಾ ಪುರಕೆ ॥
ಕೊಂಕಣನ ಕೊಡೆ ನೋಡೆ ನೋಡೆ ಹಾರಿದುದಲ್ಲಿ ॥
ಬಿಂಕದಿಂದೇಱಿದ್ದರ್ ಬೆರ್ಬಲಿ ಮಡಿದುದಿಲ್ಲಿ ॥
ಕರುಣದಿಂ ಶಶಿಧರಂ ನಾಟ್ಯವಾಡಿದನಲ್ಲಿ ॥
ಹರುಷದಿಂದಂ . . . ನೋಡಿದನಲ್ಲಿ ॥
ಕೈಲಾಸವದಕೆ ಹುರುಡಿಸುತಿರ್ಪುದುಂ ನೋಡೆ ॥
ಮೇಲೆನಿಪ ಮೇರು ಸೆಣಸುತ್ತಿರ್ಪುದುಂ ನೋಡೆ ॥

* * * *

ಬಸವರಾಜರಗಳೆ :—

ಶ್ರೀಮದ್ಬ್ರಹ್ಮಾಚ್ಯುತೇಂದ್ರಾಸುರಗುರುಸುಮನೋವಾಳಿವಿನ್ಯಸ್ತಪಾದಂ ।
ಹೇಮಾಗಾಗಾರನೀಶಂ, ಮುನಿಜನಹೃದಯಾಂಭೋಜವಾಸಂ ಭವಾನೀ ॥
ವಾಮಾಂಗಾಲಿಂಗನಾ ಭಾಸುರನಿಧಿ ಮೆರೆದಂ ಭೂಮಿಯೊಳ್ ಚಂದ್ರಚೂಡಂ ।
ಪ್ರೇಮಂ ಕೈಮಿಕ್ಕು ಪಂಪಾಪುರಪತಿ ಬಸವಂಗೊಲ್ದು ಸಂತೋಷದಿಂದಂ ॥

ರಗಳೆ ॥ ಶ್ರೀಮೇರುಮಧ್ಯದೊಳಗೊಪ್ಪುತ ವಿಳಾಸದಿಂ ।
ಪ್ರೇಮದಿಂ ಹಂಪೆಯ ವಿರೂಪಾಕ್ಷನೊಪ್ಪದಿಂ ॥

* * * *

End :—

ಭೂಪಜಶರೀರವನದಾನನಿಂತೊಪ್ಪಿದಂ ॥
ದೇವಪರಿವೃತ ದಕ್ಷಯಜ್ಞಹರನೊಪ್ಪಿದಂ ॥
ನಿರುಪಾಧಿಕಾನಂತಕಾಂತಿಮಯನೊಪ್ಪಿದಂ ॥
ಬೊಬ್ಬಿಡುವ ಸುರರ ತಲೆಗಳ ಭೀಮನೊಪ್ಪಿದಂ ॥
ಅಬ್ಬರಿಸುವಸ ಕಪಾಲದ ಶೂಲಿಯೊಪ್ಪಿದಂ ॥
ಅಮೃತಮಥನೋದ್ಭವಗರಳಧರನೊಪ್ಪಿದಂ ।
ಅಸುರಕುಲಮಕುಟಮಣಿರಚಿತಪದನೊಪ್ಪಿದಂ ॥
ಸುರುಚಿರಬ್ರಹ್ಮಾಂಡಭರಿತಜನನೊಪ್ಪಿದಂ ॥
ಗಿರಿಜೆಯಪ್ಪಿನ ಪುಳಕಭರಿತಾಂಗನೊಪ್ಪಿದಂ ॥
ವರನಿಕರಸೇವಿತಕರಾಂಭೋಜನೊಪ್ಪಿದಂ ॥
ಗುರುಮೂರ್ತಿ ಹಂಪೆಯ ವಿರೂಪಾಕ್ಷನೊಪ್ಪಿದಂ ॥

ವೃ ॥ ಮುದದಿಂ ಶಂಕರದಾಸಿಮಯ್ಯ ವಿಭುವಿಂಗಾಶ್ಚರ್ಯಮಾಗಿತ್ತು ಭಾ -
ಳದ ಕಂಗಳ್ಪ್ರಥಿತ ಪ್ರತಾಪ ಶಿವಭಕ್ತಿಜ್ಞಾನ ವೈರಾಗ್ಯಸಂ- ॥
ಪದದಿಂ ಶೌರ್ಯದೊಳಾವಗಂ ಮೆಱೆವ ಗೌರೀವಲ್ಲಭಂ ಭಕ್ತಸಂ ;
ಪದವಂ ಕೂರ್ತೆಮಗೀಗೆ ಹಂಪೆಯ ವಿರೂಪಾಕ್ಷಂ ಲಲಾಟೇಕ್ಷಣಂ ।

Colophon :—

ತೃತೀಯಸ್ಥಲಂ, ಶಂಕರದಾಸಿಮಯ್ಯಗಳ ರಗಳೆ ಸಮಾಪ್ತ ॥ ಮಂಗಳ ಮಹಾಶ್ರೀ.

(ವಿ-ವಿ.)—

ಅಸಮಗ್ರ.

"ರಸಿಕ ಚಕ್ರಿ" ಯಾದ ಹಂಪೆಯ ಹರಿಹರದೇವನು ಈ ಗ್ರಂಥವನ್ನು ಬರೆದವನು. ಈ ಗ್ರಂಥಕ್ಕೆ ಶಿವಗಣದ ರಗಳೆಯೆಂಬ ಹೆಸರೂ ಇದೆ. ಈ ಹರಿಹರ ದೇವನೇ ಹರೀಶ್ವರನೆಂಬ ಹೆಸರಿನವನಾಗಿದ್ದನು. ಕ್ರಿ.ಶ. 12 ನೆಯ ಶತಮಾನದವನು (ಸು.ಕ್ರಿ. ವರ್ಷ 1165). ಹಳೆಯ ಬೀಡಿನ ನರಸಿಂಹ ಬಲ್ಲಾಳನಲ್ಲಿ ಕರಣಿಕರ ಕುಲತಿಲಕನಾಗಿದ್ದನು. ರಗಳೆಯಲ್ಲಿ ಶಿವಗಣಗಳ ಚರಿತೆಯನ್ನು ಬರೆದುದರಿಂದ ಇವನಿಗೆ "ರಗಳೆಯ ಕವಿ" ಎಂಬ ಪ್ರಸಿದ್ಧಿಯೂ ಇದೆ.

ಇದರಲ್ಲಿ ತಿರುನೀಲಕಂಠ ರಗಳೆ, ಇಹಃಪಗೆಯಾಂಡ ರಗಳೆ, ಸಿದ್ಧರಾಜನ ರಗಳೆ, ಮೆಱತಿಮಿಂಡನ ರಗಳೆ, ಅಮರನೀತಿಯ ರಗಳೆ, ಇರಿಭಕ್ತರ ರಗಳೆ, ಏಣಾಧಿನಾಥರ ರಗಳೆ, ಕಣ್ಣಪ್ಪದೇವರ ರಗಳೆ, ಚೆನ್ನಯ್ಯಗಳ ರಗಳೆ, ಪ್ರಭುದೇವರ ರಗಳೆ, ಬಸವರಾಜದೇವರ ರಗಳೆ, ಮಹಾದೇವಿಯಕ್ಕನ ರಗಳೆ, ತೆಲುಗ ಬೊಮ್ಮಣ್ಣನ ರಗಳೆ, ಮಳೆಯರಾಜದೇವರ ರಗಳೆ, ಮಲುಹಣದೇವರ ರಗಳೆ, ಓಹಿಲ ದೇವರ ರಗಳೆ, ವಾಗೀಶ್ವರ ದೇವರ ರಗಳೆ, ಶಂಕರದಾಸಿಮಯ್ಯಗಳ ರಗಳೆ, ಯೆಂಬ ರಗಳೆಗಳವೆ. ಬಸವರಾಜನ ರಗಳೆಯಿಂದಾರಂಭಿಸಿ ಸ್ಥಲವಿಭಾಗವಿದೆ.

No. 746. ಪುರಾತನರಗಳೆ.

PURĀTANARAGAḶE.

Substance, paper. Size, $8\frac{3}{8} \times 5\frac{5}{16}$ inches. Pages, 628. Lines, 13 on a page. Character, Telugu. Condition, very much injured. Appearance, old. Mode of writing, good.

Complete in 3 volumes.

Deals with the life history of sixty-three devotees of Śiva. The author appears to be Hariharadeva of Hampe. Mallanārya of Gubbi is also known to have written a work with the same title.

Beginning :—

ಕಂದ ॥ ಧರೆಯರಿಯೆ ತನುವೆರಸು ಸಂ।
ದುರುತರದರುವತ್ತುಮೂವರೊಳ್ಮೊದಲ ಮಹೇ ॥
ಶ್ವರರ ತಿರುನೀಲಕಂಠರ।
ಚರಿತ್ರವನವಧರಿಸು ಹಂಪೆಯ ವಿರೂಪಾಕ್ಷಾ ॥

ರಗಳೆ ॥ ಶ್ರೀ ಚೋಳ ದೇಶವೊಪ್ಪಿರ್ಪುದು ಧರಾತಳಕೆ।
ವಾಚಾಮಗೋಚರವದರ ವಿಸ್ತಾರಂ ಜಗಕೆ ॥

* * *

ಕಂದ ॥ ಹರನಾಜ್ಞೆಯಿಂಪುಟ್ಟಿ ತನ್ನಯ।
ತರುಣಿಯ ಕೂಟವನೆ ಮಾಣ್ದು ಘನಗುಪ್ತ ಮಹೇ ॥

ಶ್ವರರ ತಿರುನೀಲಕಂಠರ ।
ಚರಣವೆ ಶರಣೆನಗೆ ಹಂಪೆಯ ವಿರೂಪಾಕ್ಷಾ ॥

Colophon :—

ತಿರುನೀಲಕಂಠರ ರಗಳೆ ಸಮಾಪ್ತಂ.

End :—

ರಗಳೆ ॥ ಸುರುಚಿರಸುಧಾಕರಕಳಾಜೂಟನೊಪ್ಪಿದಂ ।
ಅರರೆ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ ॥

ಕಂದ ॥ ಕರುಣಂ[ಮಿ]ಗ(ಗೆ) ಮಲುಹಣನಂ ।
ವಿರಹಾನಲದಗ್ಧಚಿತ್ತನಂ ಮಲುಹಣಿಯೊಳ್ ॥
ನೆರಪಿ ನೆರೆ ಮೆರೆದ ಪಂಪಾ ।
ಪುರಪತಿಯೆನಗೀಗೆ ಸಕಲಸುಖಸಂಪದಮಂ ॥

Colophon :—

ಮಲುಹಣನ ರಗಳೆ ಸಮಾಪ್ತಂ.

(ವಿ-ವಿ.)—

ಸಮಗ್ರ. ಮೂರು ಸಂಪುಟಗಳು ಇವೆ. ಕಾಗದದ ಪ್ರತಿ. ತುಂಬಾ ಶಿಥಿಲವಾಗಿದೆ. ಲಿಪಿ ತೆಲುಗು ; ಚೆನ್ನಾಗಿದೆ.

ಇದು ರಗಳೆಯಲ್ಲಿ ಬರೆದಿದೆ. ಆದರೆ ಅಲ್ಲಲ್ಲಿ ಕಂದಗಳೂ ವೃತ್ತಗಳೂ ಇವೆ. ಇದರಲ್ಲಿ ಪುರಾತನರಾದ ಅರುವತ್ತು ಮೂವರು ಶಿವಭಕ್ತರ ಚರಿತ್ರೆ ಉಕ್ತವಾಗಿವೆ. ಈ ಗ್ರಂಥಕ್ಕೆ ಅರುವತ್ತು ಮೂವರ ರಗಳೆ, ಅಸಂಖ್ಯಾತ ರಗಳೆ, ಪುರಾತನಶಿವಭಕ್ತರ ರಗಳೆ ಮುಂತಾದ ಹೆಸರುಗಳೂ ಇರುವಂತೆ ತೋರುತ್ತದೆ. ಕವಿ ಹಂಪೆಯ ಹರೀಶ್ವರನಿರಬಹುದೆಂದು ತೋರುತ್ತದೆ. ಗುಬ್ಬಿಯ ಮಲ್ಲಣಾರ್ಯನೂ ಒಂದು “ಪುರಾತನರಗಳೆ” ಎಂಬ ಗ್ರಂಥವನ್ನು ಬರೆದಿರುವ ಹಾಗೆ ಕವಿ ಚರಿತ್ರೆ (ದ್ವಿತೀಯ ಸಂಪುಟ) ಯಲ್ಲಿ ಹೇಳಿದೆ.

No. 747. ಪುರಾತನರಗಳೆ.

PURĀTANARAGAḶE.

Substance, paper. Size, $10\frac{3}{8} \times 9\frac{1}{2}$ inches. Pages, 807. Lines, 20 on a page. Character, Kannaḍa. Condition, good. Appearance, new. Mode of writing, good.

Incomplete. Bound in 3 volumes.

The 1st vol. is the copy of the 2nd vol. and the 2nd and 3rd are the copies of the 3rd vol. of the Manuscripts described under No. 746 ante.

(ವಿ-ವಿ.)—

ಅಸಮಗ್ರ. ಮೂರು ಸಂಪುಟಗಳಿವೆ. ಒಂದನೆಯ ಸಂಪುಟವು ಹಿಂದಣ ೭೪೬ ನೆಯ ನಂಬರಿನ ಪುಸ್ತಕದ ಎರಡನೆಯ ಸಂಪುಟದ ಪ್ರತಿಯಾಗಿಯೂ, ಎರಡನೆಯ ಮತ್ತು ಮೂರನೆಯ ಸಂಪುಟಗಳು ಬೇರೆಬೇರೆಯಾಗಿ ಅದರ ಮೂರನೆಯ ಸಂಪುಟದ ಪ್ರತಿಗಳಾಗಿಯೂ ಇವೆ. ಅಂತೂ ಹಿಂದಣ ನಂಬರಿನ ಒಂದನೆಯ ಸಂಪುಟವು ಈ ನಂಬರಿನಲ್ಲಿ ಪ್ರತಿಮಾಡಲ್ಪಡಲಿಲ್ಲ. ಈ ಮೂರು ಪ್ರತಿಗಳಲ್ಲಿ ಕ್ರಮದಿಂದ ೧೫೭, ೩೭೧, ೨೭೯ ಪುಟಗಳಿವೆ. ಒಟ್ಟು ಪುಟಗಳು ೮೦೭. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ.

No. 748. ಪುರಾತನರಗಳೆ.

PURĀTANARAGAḶE.

Substance, paper. Size, 12 $\frac{1}{16}$ × 7 $\frac{3}{8}$ inches. Pages, 427. Lines, 18—24 on a page. Character, Kannaḍa. Condition, good. Appearance, old. Mode of writing, good.

This is a complete copy of the manuscript described under No. 746 ante.

(ವಿ-ವಿ. —

ಸಮಗ್ರ. ಇದು ಹಿಂದೆ ೭೪೬ ನೆಯ ನಂಬರಿನಲ್ಲಿ ವರ್ಣಿತವಾದ ಪುಸ್ತಕದ ಪ್ರತಿಕೆಯಾಗಿದೆ ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ.

No. 749. ಪುರಾತನರ ಸಾಂಗತ್ಯ.

PURĀTANARA SĀṄGATYA.

Substance, palm-leaf. Size, 9 $\frac{3}{4}$ × 1 $\frac{5}{16}$ inches. Pages, 37. Lines, 5 on a page Character, Kannaḍa. Condition, very much injured. Appearance, old. Mode of writing, good.

Begins on fol. 32-*a* of the manuscript. The other works are herein : (1) Prasādacintāmaṇi, fol. 1-*a*, (2) Samvatsaraphala, fol. 51-*a*.

Complete but imperfect.

Similar to the above, but this is written in the form of Sāṅgatya.

Beginning :—

ಪುರಾಥರ (? ತನರ) ಸಾಂಗತ್ಯ.

ಶ್ರೀಗಿರಿಜೇಶನೆ ನಾಗಭೂಷಣ ನಿಗ । ಮಾಗಮಂಗಳಗಗೋಚರನೆ ॥
ಬೇಗದೊಳೆನಗೆ ಮತಿಯನಿತ್ತು ಕೃತಿಯನು । ಸಾಗಿಸು ಗುರುಮಲ್ಲೇಶ್ವರನೆ ॥
ನಿರುಪಮ ನಿತ್ಯತೃಪ್ತ ನಿರಂಜನಾತ್ಮಕ । ನಿರಶೂನ್ಯನೆ ನಿರಾಲಂಬ ॥
ನಿರವದ್ಯ ನಿರ್ಗುಣ ನಿರವ ನಿಶ್ಚಿಂತನೆ । ಗುರುಮಲ್ಲೇಶ್ವರ ಶರಣಾರ್ತಿ ॥
ಅನುಪಮನದ್ವಯಾನನಘನಖಂಡಿತ । ಘನಮಹಿಮಚಲನಪ್ರತಿಮ ॥
ಅನವರತೆನ್ನಯ ಮನದೊಳು ನೆಲಸಿಹ ಚಿನುಮಯ ಗುರುಮಲ್ಲೇಶ್ವರನೆ ॥
ಧರೆಯೊಳು ಗುರುಲಿಂಗಚರವು ತ್ರಿವಿಧವಾದ । ಪರಮಪರಂಜ್ಯೋತಿ ನೀನೆ ॥
ಶರಣರಾಶ್ರಯಿಸುವ ಕರುಣಿ ನೀನೆನ್ನಯ । ಹರಣವು ಗುರುಮಲ್ಲೇಶ್ವರನೆ ॥ ೪ ॥
ಬಸವನಲ್ಲಮ ಚೆನ್ನಬಸವಪುರಾಥರ । ಯೆಸೆವ ಕರುಣ ಕೃಪೆಯಿಂದ ॥
ವಸುಧೆಯ ಶಿವಕವಿ ರಸಿಕನೆನ್ನಯ ಮುಖ । ರಸನದೊಳಿರ್ದು ಚಿತ್ತೈಸು ॥ ೫ ॥
ಭಕ್ತಿಯ ನೆಲೆಮನೆ ಯುಕ್ತಿಯ ನಿಲಯ ವಿ । ರಕ್ತಿಯ ತಾಣ ಭಾವಿಸಲು ॥
ಮುಕ್ತಿಯ ಮಂದಿರವೀ ಕೃತಿ ನಿಜಜ್ಞಾನ । ಸಕ್ತಿಯ ಸದನ ಲಾಲಿಪುದು ॥
ಧರೆಯವರಿಗೆ ಹಾರಿ ನೆರೆದು ಬಂದುದ ಕೊಂಡು । ನರಕಕೆಳೆವ ಕಥೆಯಲ್ಲ ॥
ಹರುಷದಿಂ ತನುಮನಧನವ ಲಿಂಗಕೆ ಕೊಟ್ಟ । ಹರಶರಣರ ಸಾಂಗತ್ಯ ॥

ಪರಸತಿಗಳುಪಿ ದೇವೇಂದ್ರ ತನ್ನಂಗವ । ಸ್ಮರಮು ದ್ರಿಗಿತ್ತುದಂತಲ್ಲಾ ॥
ಹರ ಬೇಡೆ ವರವಧುವನು ಕೊಟ್ಟ ಶರಣರ । ಸ್ಮರಿಸಿಯೆ ನಾ ಧನ್ಯನಹೆನು ॥
ಜಡಮತಿಗಳು ಕೇಳಿ ಕೆಡುವುದಜ್ಞಾನವು । ಕಡೆಸಾರುವುದು ಭವರೋಗ ॥
ಸಡಗರದಿಂ ಕಿವಿಗೊಟ್ಟು ಕೇಳ್ದವರಿಗೆ । ಕೊಡುವ ಶಿವನು ಪರಪದವ ॥
ಶರಣರೆನಗೆ ತಾಯಿ ಶರಣರೆನಗೆ ತಂದೆ । ಶರಣರೆನಗೆ ಬಂಧುಬಳಗ ॥
ಶರಣರೆನಗೆ ಇಷ್ಟದೈವವೆನುತ ನಾನು । ಶರಣರ ಮಗೆ ಪೊಗಳುವೆನು ॥

* * * *

End :—

ಸುರರಿಗೆ ಅಭಯುವನಿತ್ತ ಕರುಣಿ . . ಖ ಜ . ನರ ಕಲ್ಪ ತರು . . .
. ಯ ಭಕ್ತ ರನನುದಿನಸಲಹುವ ಚೆನ್ನ ಗುರುಮಲ್ಲೇಶ್ವರ ಶರಣು ॥ ೧೪೦ ॥

Colophon :—

ಪುರಾಥರ ಸಾಂಗತ್ಯ ಸಮಾಪ್ತ ಮಂಗಳ ಮಹಾ ಶ್ರೀ.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾಗಿದೆ. ಗ್ರಂಥಪಾತವು ಹೆಚ್ಚಾಗಿದೆ.

ಕವಿಯ ವಿಷಯ ಇತ್ಯಾದಿಗಳು ಇದರಿಂದ ತಿಳಿಯುವುದಿಲ್ಲ, ಪುಸ್ತಕಾಂತ್ಯದಲ್ಲಿ " . . . ರದ ಜ್ಯೇಷ್ಠಮಾಸದಲ್ಲು ಸೋಮವಾರದಲ್ಲು ಬರೆದ ಪುರಾಥರ ಸಾಂಗತ್ಯ" ಎಂದಿದೆ.

No. 750. ಪ್ರಭುದೇವರ ವಚನ.

PRABHUDĒVARA VACANA.

Substance, Śrītāla. Size, $9\frac{3}{4} \times 1\frac{1}{8}$ inches. Pages, 12. Lines, 7 on a page. Character, Kannaḍa. Condition, very much injured. Appearance, old. Mode of writing, good.

Begins on fol. 8 of the manuscript. The other works herein are :—(1) Subhāṣita 1-*a*, (2) Vīrāśaivaviṣaya fol. 14-*a*.

Incomplete.

Contains vacanas or Sayings bearing on the principles of Vīrāśaiva system as taught by Prabhudēva to Siddharāma.

Beginning :—

ದಿಗ, ವಟವೃಕ್ಷದಾ ಕೆಳಗೆ, ಲೋಕಾದಿಲೋಕಂಗಳು, ಯೆಂಬ ಶಬ್ದಕ್ಕರ್ಥ = ಅನಂತ ಬ್ರಹ್ಮಾಂಡಗಳ ಪಿಂಡಾಂಡಂಗಳನೊಳಕೊಂಡಿಪ್ಪ ಪರ . .

* * * *

ಟ್ಟಯ ಭ್ರಾಂತಿ ಯಿದ ಬಿಡೆಂದು ಪ್ರಭುಧೇವರು ಸಿದ್ಧರಾಮಯ್ಯದೇವರಿಗೆ ನಿರೂಪಿಸಿದ ರೆಂಬುದೀಗ ಯೀ ತಾತ್ಪರ್ಯಾರ್ಥ । ೮ ।

* * * *

End :—

ಇಂತು ಚಿತ್ಸ್ವರೂಪನಾದ ಶರಣನ ಅಂತರಂಗದಲಿರ್ದ ಶಿವಕಳೆಯುಂ ಬಹಿಷ್ಕರಿಸಿ ಕರಸ್ಥಲದಲ್ಲಿ ಲಿಂಗರೂಪಾಗಿ ಬೆಳಗುತ್ತಿರಲು ಅಂತು ಶರಣನ ಅಂತರಂಗಬಹಿರಂಗವೆಲ್ಲಾ ಲಿಂಗಪ್ರಭಾಕಳೆಯು ತುಂಬಿ ತೋರುತಿಪ್ಪುದಂ ಕಂಡರಿದು [ಜ್ಞಾನದಿಂದ ಕಂಡರಿದು] ಜ್ಞಾನದಿಂದ ನೋಡೆ ಅಖಂಡ ಶಿವ ಪ್ರಕಾಶವೆ ತನ್ನೊಳಗೆ ತಾನೆ ಬಹುದು. ಲಿಂಗಾಂಗವೆಂಬೆರಡಾಗಿ ತೋರುತಿದ್ದುದು ವೊಂದೆಯೆಂದು, ತೋರುತ್ತಿರ್ದ ಮಹಾಜ್ಞಾನದಿಂದ ಹಿಂಗದೆ ಅನಿಮಿಷನಾಗಿ ಆ ಮಹಾ ಪ್ರಕಾಶವ ನೋಡುತಿರ್ದ ಶರಣ ತನ್ನ ಮುನ್ನಿನ ನಿಜಶಿವತತ್ವವ . . . .
. . .

(ವಿ-ವಿ.)—

ಅಸಮಗ್ರ

"ಪ್ರಭುದೇವರು ಸಿದ್ಧರಾಮಯ್ಯದೇವರಿಗೆ ನಿರೂಪಿಸಿದ ವಚನಗಳು" ಇದರಲ್ಲಿವೆ. ವೀರಶೈವತತ್ವವನ್ನು ಈ ವಚನಗಳು ಬೋಧಿಸುತ್ತವೆ.

No. 751. ಪ್ರಭುದೇವರು (ಪ್ರಸರಿಸಿದ) ವಚನ.

PRABHUDĒVARU (PRASARISIDA) VACANA.

Substance, palm-leaf. Size, $6\frac{1}{8} \times 1\frac{1}{8}$ inches. Pages, 11. Lines, 5 on a page. Character, Kannaḍa. Condition, very much injured. Appearance, old. Mode of writing, not bad.

Begins on fol. 72-*a* of the manuscript described under No. 702 ante.

Contains 12 vacanas.

Similar to the work described above.

Beginning :—

ಸುಪ್ರಭಾತ ಸಮಯದಲ್ಲಿ ಅರ್ಥಿಯಲ್ಲಿ ಲಿಂಗವ ನೆನೆದರೆ ತಪ್ಪುವುದು ಅಪಮೃತ್ಯುಕಾಲಕರ್ಮಂಗಳಯ್ಯಾ. ದೇವಪೂಜೆಯ ಮಾಡಿ ದುರಿತಬಂಧನದೋಡಿ ಶಂಭು ನಿಮ್ಮಯ ನೋಡಿ ಹಿಂದಕಂ ಬೇಡನದ ಸನ್ನಿಹಿತವಾಗಿ ಶರಣೆಂಬುದು ಜಂಗಮಾರ್ಚನೆಯ ಮಾಡಿ ಕೂಡಲ ಸಂಗನ ಕೂಡಿ ॥ ೧ ॥

End :—

ಮೂಗ ಕಂಡ ಕನಸಿನಂತೆ ಆಯಿತೆನ್ನ ಶಿವಾಚಾರ ಹೇಳಬಾರದು, ಕೇಳಬಾರದು. ಆರಿಗೆಯು ಎನ್ನ ಹಗೆ ತನವ ಮಾಣಿಸಯ್ಯಾ ಕೂಡಲಸಂಗಮದೇವ ಪ್ರಭುವೆ ॥ ೧೨ ॥

(ವಿ-ವಿ.)—

ಇದರಲ್ಲಿ ೧೨ ವಚನಗಳಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ ಆ ಬಗೆಗೆ ಹಿಂದಣ 702 ನೆಯ ನಂಬರನ್ನು ನೋಡುವುದು.

ಇದು ವಚನರೂಪವಾಗಿದೆ. ೧೨ ವಚನಗಳಿವೆ. ಪ್ರತಿಯೊಂದು ವಚನದ ಕೊನೆಯಲ್ಲಿಯೂ ಕೂಡಲಸಂಗಮದೇವಾಂಕಿತವಿದೆ.

No. 752. ಪ್ರಭುದೇವರು ಪ್ರಸರಿಸಿದ ವಚನ.

PRABHUDĒVARU PRASARISIDA VACANA.

Substance, paper. Size, $10\frac{3}{8} \times 9\frac{1}{2}$ inches. Pages, 3. Lines, 20 on a page. Character, Kannaḍa. Condition, good. Appearance, new. Mode of writing, good.

Begins on page 52 of the manuscript described under No. 703 ante.

Contains 12 vacanas.

This is a copy of the manuscript described under the previous number (751).

(ವಿ-ವಿ.)—

ಇದರಲ್ಲಿ ೧೨ ವಚನೆಗಳಿವೆ. ಇದು ಇದರ ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತ್ರಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಸೇರಿವೆ. ಆ ಬಗೆಗೆ ಹಿಂದಣ 703 ನೆಯ ನಂಬರನ್ನು ನೋಡುವುದು.

No. 753. ಪ್ರಸಾದ ಚರಿತ್ರ.

PRASĀDA CARITRE.

Substance, paper. Size, $10\frac{3}{8} \times 9\frac{1}{2}$ inches. Pages, 30. Lines, 20 on a page. Character, Kannaḍa. Condition, good. Appearance, new. Mode of writing, good.

Begins on page 25. The other work herein is :—Vīrēśvaracaritre, page 1.

Complete.

This is a copy of the manuscript described under No. 497 ante.

(ವಿ-ವಿ.)—

ಸಮಗ್ರ. ಇದು ಹಿಂದಣ ೪೯೭ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ವೀರೇಶ್ವರ ಚರಿತ್ರ (ಸಾಂಗತ್ಯ) ಯಿದೆ.

No. 754. ಪ್ರಸಾದ ಚಿಂತಾಮಣಿ.

PRASĀDA CINTĀMAṆI.

Substance, palm-leaf. Size, $9\frac{3}{4} \times 1\frac{5}{16}$ inches. Pages, 60. Lines, 5 on a page. Character, Kannaḍa. Condition, very much injured. Appearance, old. Mode of writing, good.

Begins on fol. 1-*a* of the manuscript described under No. 749 ante. Foll. 19-*b* and 31-*b* are left blank.

Complete, but imperfect.

Deals with the principles of Vīraśaiva system as found in earlier works. From the extracts given below it appears that one Siddhēśaliṅga is the author.

Beginning :—

ಜಂಗಮೋನ್ನತಿಯ . . . .
. . . . . . ಮಂ ಶಿವಭಕ್ತ . . . .
. . . . ಕೋದ್ಧಾರಂ । ಲರ . . . .
. . . .
. . . . ಕ ಶರಣಾಬ್ಧಿಓದಿ . . . .
. . . .
. . . . । ನಿಜಯ ದೊ
. . . .
. . ಗಾ ॥ ೪ ॥ ಸಾಂಗತ್ಯ . . . .
ಡಾಪ ಸೋಮ . . . .
ದ್ವಾರಿಗಳ । ದಲ . . . .
. ನಗಜಾ ॥ ಪ್ರಣಾಂ . . . . ಣನಚ್ಚಿಗಾ
ಲನಪೊ . . . . ಗುವೆನು ॥ ೮ ॥
ಹರಿಸುತ . . . . ಪುರದರಸ ನಂಜುಂಡ ರಕ್ಷಿಪುದು॥
. . . . .ನ್ನದಾನದ ತಾಂಗ
. . . .
. . . . ನಾ ಖ್ಯಾತೆ . . . .
. . . . ಮಾಡಿ ಕೃತಿ . . .
. . . . ಬಲ್ಲಾಳ ಮಾ-
ಚಿ . . . . ॥ ೧೪ ॥
ಹರಿದೇವ ರಾಘವಾಂಕ . . . .
. . . ಕವಿಗಳಗೆಱಗಿ ಪೇಳುವೆನೀ ಕೃತಿಯಾ ॥ . . . .
. . . . ।
ಸೋಮ ರಾಜಿಪ ಚಾರು ಚರಿತೆ ॥ . . . .
. . . . ಶ್ರೀ ಕುಕ್ಷಿಯೊಳ
ಗವತರಿಸಿಯೊಪ್ಪಿದ ಜಗದಧಿಕಸದ್ಗುರು ರೇಣುಕ . . . .
. . . ರಾಧೀಶನೆಂದೆನಿಪ । ಸೂರಿಜನೇಶನೊಪ್ಪಿದ ರೇವಣಾರಾಧ್ಯ . . . .
. . . . ರೇವಣಾರಾಧ್ಯನ
ನುಜನುದ್ದಾಮ ಶ್ರಿ ಶಾಂತೇಶ್ವರನೆ . . . .
ದನೀಕೃತಿಯ ॥

* * * *

End :—

ಎಂದೂಪನಿಷದಾಗಮವೇದಪೌರಾಣ । ದಿಂದೊಡಂಬಡಕೆಯನೊಲಿದು ॥
ಕಂದುಗೊರಳನ ಸನ್ನಿಭ ಸಿದ್ಧಲಿಂಗೇಶ । ನೆಂದುಪೇಳಿದನಾ ದ್ವಿಜಗೆ ॥
ಕೇಳಿ ಪರಶುರಾಮ ಮುಂತಾದ ವಿದ್ವಜ್ಜ । ನಾಳಿಯಾ ಸಭೆಯಾ ಕೋವಿದರು ॥
ಮೇಳೈಸಿ ಸಕಲ ಶಾಸ್ತ್ರಂಗಳಿಂ ನಂಬುಗೆ । ವೇಳದರೆಂದು ಪೊಗಳುತ್ತ ॥
ಬಳಿಕಲಾ ರಾಮಭದ್ರನು ತನ್ನ ಕೈಗಳ । ತಲೆಯೊಳಗಟ್ಟಿ ಭಕ್ತಿಯೊಳು ॥
ಭಳಿರೆ ಜೆಡೆಯ ಸಿದ್ಧಲಿಂಗೇಶನಹುದೆಂ । ದೋಲಿದು ಕೊಂಡಾಡಿದನವನ ॥
ವೇದದೊಳಗೆ ಸ್ಮೃತಿಯೊಳು ಪೌರಾಣಾಗ । ಮಾದಿಯೊಳಿತಿಹಾಸದೊಳು ॥
ಭೇದಿಸುತುಚಿತಗ್ರಂಥಗಳಿಂದ ಭರಿತಪ್ರ । ಸಾದ ಸಂಗತಿಯ ಪೇಳಿದಿರಿ ।
ಆ ವೇಳೆಯೊಳು ಚಾಮರಾಜ ಭೂಪಾಲ ಸಂ । ಭಾವಿಸುತಾನದಿಗಳನು ॥
ತೀವಿದ ಭಯರಸದೊಳು ಕೊಂಡಾಡಿದ । ನಾ ವಿಭು ಸಿದ್ಧಲಿಂಗನನು ॥
ಪಂಚ ಬ್ರಹ್ಮಮೂರುತಿ ಲೋಕಪಾವನ । ವಾಂಛೆಯೊಳ್ಚರರೂಪನಾಂತು ॥
ಸಂಚಾರವೈಸೆಂದು ಸಿದ್ಧಲಿಂಗೇಶ್ವರ ನಂ ಚಾಮನೃಪ ಕೀರ್ತಿಸಿದ ॥ ೨೮ ॥
ವಾದಿಗಳಾಸ್ಯಪಂಕೇಜ ಮುಗಿಯೆ ನಿಜ । ಪಾದಸೇವಕರ ಮೆಲ್ಲೆರ್ದೆಯಾ ॥
ನೈದಿಲರಳೆ ಸಿದ್ಧಲಿಂಗೇಶನೆಂಬ ಚಂ । ದ್ರೋದಯ ಸಭೆಯ ಮುಸುಕಿತ್ತು ॥
ಸರಸಮೆಯಾಂಧಕಾರವು ಸರಿಯಲು ಶಿವ । ಶರಣರಾನಂದಚಕ್ರಗಳು ॥
ಪೊರೆಯೇಱಿತಿ ಸಿದ್ಧಲಿಂಗೇಶ್ವರ ಚಿತ್ಸೂರ್ಯ । ನುರುಸಭೆಯೊಳು ವಿರಾಜಿಸಿದ ॥
ಬಳಿಕ ನೃಪಾದಿವಿದ್ವಜ್ಜನ ಕರಕಂಜ । ಗಳು ಮುಗಿಯಲು ನಗೆಯೆಂಬ ॥
ತಿಳಿಜೊನ್ನ ಸೂಸಲಾಸ್ಥಾನದಿಂದೆಳ್ದನಂ । ದಲಘು ಶ್ರೀಸಿದ್ಧಲಿಂಗೇಶ ॥
ಬಂದು ಗವಿಯ ಪೊಕ್ಕು ಭಕ್ತರ ವಂದನೆ । ಯಂ ದಯದಿಂ ಕೈಕೊಳುತಾ ॥
ಕಂದರ್ಪವೈರಿ ಜೆಡೆಯ ಸಿದ್ಧಲಿಂಗೇಶ । ನೆಂದು ವಿರಾಜಿಸುತಿರ್ದ ॥
ಭಕ್ತಕುಟುಂಬಿ ಭಕ್ತೇಷ್ಟಪ್ರದಾಯಕ । ಭಕ್ತಾಬ್ಧಿವರ್ಧನಚಂದ್ರ ! ॥
ಭಕ್ತದೈಹಿಕ ದೇಹ ಸಿದ್ಧಲಿಂಗೇಶ್ವರ । ವ್ಯಕ್ತಮಹಿಮನೊಪ್ಪಿದನು ॥
ಮಂಗಲಮೂರ್ತಿ ಮಾಯಾರಿ ಮದಾಂಧಪ । ತಂಗ ಸುಚಾರು ಚಾರಿತ್ರ ॥
ತುಂಗಮಹಿಮ ಗಣಸಂಗದೊಳಗೆ ಸಿದ್ಧ । ಲಿಂಗಾರ್ಯನೊಲಿದೊಪ್ಪಿದನು ॥ ೮೪ ॥
ಚಾರುಮಹಿಮ ಸಚರಾಚರವರಸೂತ್ರ । ಧಾರ ! ಶ್ರೀ ಸಿದ್ಧಲಿಂಗೇಶ ॥
ವೀರಣಾರಾಧ್ಯನ ಸಲಹಿದ ವೈರಾಗಿ . . . . .
. . . .

Colophon :—

ಇಂತು ೨೦ ಶಾಸ್ತ್ರಂಗಳಿಂದ ಪ್ರೊಪ್ಪುವ ೮೮ ಗ್ರಂಥ ಸಾಕ್ಷಿಯಾದ ಪ್ರಸಾದಚಿಂತಾಮಣಿ ಯೆಂಬ ಕರ್ಣಾಮೃತವನು ಶಿವಭಕ್ತಮಾಹೇಶ್ವರರ್ಗೆ । ವೀರಣಾರಾಧ್ಯದಿ[ರಂ] ನಮಸ್ಕರಿಸಿದಂ ॥ ಮಂಗಲ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ.

(ವಿ. ವಿ.)—

ಸಮಗ್ರ. ಆದರೆ ಬಹಳ ಗ್ರಂಥಪಾತವಿದೆ. ಜೆಡೆಯ ಸಿದ್ಧಲಿಂಗೇಶನೆಂಬುವನು ಗ್ರಂಥ ಕರ್ತೃವಾಗಿರಬಹುದು. ಕವಿಯು ಹರಿದೇವ, ರಾಘವಾಂಕ ಮೊದಲಾದ ಕವಿಗಳನ್ನು ನಮಸ್ಕರಿಸಿ ಕೃತಿಯನ್ನು ರಚಿಸಿದನು. ಇದರಲ್ಲಿರುವ “ಚಾಮರಾಜ” ನಾರೆಂದು ತಿಳಿದು ಬರುವುದಿಲ್ಲ.

No. 755. ಬಸವಪವಾಡದ ರಗಳೆ.

BASAVAPAVĀḌADA RAGAḶE.

Substance, palm-leaf. Size, $9\frac{7}{8} \times 1\frac{7}{16}$ inches. Pages, 18. Lines, 7 on a page. Character, Kannaḍa. Condition, injured. Appearance, old. Mode of writing, good.

Begins on fol. 24-*a* of the Ms. The other works herein are :—(1) Śivaliṅgacaritre fol. 1-*a*. (2) Hāḍugaḷu fol. 33-*a*.

Complete.

Same work as that described under No. 505 ante, wherein this work has been mentioned as " Basavēśvarana Pavāḍada Ragaḷe."

(ಐ-ಐ.)—

ಸಮಗ್ರ. ಹಿಂದೇ ೫೦೫ ನೆಯ ನಂಬರಿನಲ್ಲಿ ವರ್ಣಿಸಿದ ಗ್ರಂಥವೇ ಆಗಿದೆ.

No. 756. ಬಸವಪುರಾಣ (ಶ್ಲೋಕ-ಟೀಕೆ).

BASAVAPURĀṆA (ŚLŌKA-ṬĪKE).

Substance, palm-leaf. Size, $16\frac{1}{8} \times 1\frac{1}{4}$ inches. Pages, 251. Lines, 6 on a page. Character, Kannaḍa. Condition, very much injured. Appearance, old. Mode of writing, not bad.

Incomplete.

This gives the Kannaḍa meaning word for word for Basavapurāṇa, written by Śaṅkarārādhya in Sanskrit. The author is Mallikārjuna a Vīraśaiva by religion. He lived in about 1593 A.D.

Beginning :—

ಕದಾಚಿತ್ = ಒಂದಾನೊಂದು ದಿನದಲ್ಲಿ ; ಪತ್ರ ಪುಷ್ಪಾಣಿ ಪತ್ರಪುಷ್ಪಗಳನ್ನು ; . . . . ಕೆಲವು ಮೃಗಂಗಳು ; ಆವೃತ್ಯ=ಸುತ್ತುವರಿದು ಕೊಂಡು ;

* * * *

[ಪ್ರಮಥಕವೇಃ] ಪ್ರಮಥಕವೀಶ್ವರನ ; ಕೃತೌ= ಪ್ರಬಂಧವಾದ ; ಬಸವಪುರಾಣೇ = ಬಸವ ಪುರಾಣದಲ್ಲಿ ; ಸುರಗಿ ಚೌಡಯ್ಯ ಚೋಡವ್ವೆ ತೆಲುಂಗು ಬೊಮ್ಮಯ್ಯ ಭಕ್ತಿ ಪ್ರಭಾವೋ ನಾಮ । ಸುರಗಿ ಚೌಡಯ್ಯ ಚೌಡ ಚೋಳವ್ವೆ ತೆಲುಂಗು ಬೊಮ್ಮಯ್ಯಗಳ, ಭಕ್ತಿ ಪ್ರಭಾವೋ ನಾಮ = ಭಕ್ತಿ ಪ್ರಭಾವವೆಂಬ ಪೆಸರನುಳ್ಳ । ಏಕವಿಂಶೋಧ್ಯಾಯಃ=ಇಪ್ಪತ್ತೊಂದನೆಯ ಅಧ್ಯಾಯ.

Colophon :—

ಇದು ಶ್ರೀಮದಮೃತೇಶ್ವರಚರಣಾರವಿಂದಮಕರಂದಾಸ್ವಾದುಮಂದಾನಂದದಿಂದಿಂದಿರಾಯಮಾಣವಿಶುದ್ಧಾಂತಃಕರಣ ವಂಶೇಣಿ ನಾರಾಯಣಾಂಕ ಸಮರನಿಶ್ಶಂಕ ಚಿಕ್ಕಭೂಪಾಲಗರ್ಭಾಬ್ಧಿಚಂದ್ರೋದಯ ಸೋಮಾಂಬಿಕಾಗರ್ಭಶುಕ್ತಿಮುಕ್ತಾಫಲ ಸತತಸಂತರ್ಪಿನಿರತವಧಿಕ ವೀರಮಾಹೇಶ್ವರವಾಂಛಿತಾರ್ಥಸಾರ್ಥಶ್ರೀಮದ್ಬಿಜ್ಜವರಪುರವರಾಧೀಶ್ವರ ಶ್ರೀಮದಿಮ್ಮಡಿ ಚಿಕ್ಕಭೂಪಾಲ ಕೃಪಾಲಾಲಿತ ಮಲ್ಲಿಕಾರ್ಜುನ ಕವೀಶ್ವರ ವಿರಚಿತಮಪ್ಪ ಶಂಕರಾರಾಧ್ಯಕೃತ

ಸಂಸ್ಕೃತ ಬಸವಪುರಾಣದ ಕರ್ಣಾಟಕವ್ಯಾಖ್ಯಾನದಲ್ಲಿ ಸುರಗಿಚೌಡಯ್ಯಚೋಡ ಚೋಳವ್ವೆತೆಲುಂಗಜೊಮ್ಮಯ್ಯಗಳ ಭಕ್ತಿಪ್ರಭಾವವೆಂಬ ಪೆಸರುಳ್ಳ ಇಪ್ಪತ್ತೊಂದನೆ ಯಧ್ಯಾಯವು.

End :—

Colophon :—

ಇದು ಶ್ರೀಮದಮೃತೇಶ್ವರ * * * * ಬಸವಪುರಾಣದ ಕರ್ಣಾಟಕ ವ್ಯಾಖ್ಯಾನದಲ್ಲಿ ಜಗದೇವಯ್ಯನ ಚರಿತ್ರೆಯ ಪೇಳ್ವುದೆಂಬ ಮೂವತ್ತನೆಯ ಅಧ್ಯಾಯವು ಸಮಾಪ್ತವು.

(ವಿ-ವಿ.)—

ಅಸಮಗ್ರ. ಅಧ್ಯಾಯಗಳು ೧೧-೩೦ ಇವೆ. ೧೧ ನೆಯದರ ಮೊದಲು ಭಾಗವಿಲ್ಲ. ಅತ್ಯಂತ ಶಿಥಿಲವಾಗಿದೆ, ಓಲೆಯ ಪ್ರತಿ. ಲಿಪಿ ಸಾಮಾನ್ಯವಾದುದು. ಪುಸ್ತಕದ ಕೊನೆಯಲ್ಲಿ "ದುರ್ಮತಿ ಸಂವತ್ಸರದ ಜ್ಯೈ ಬ ೭ ಮಂಗಳವಾರದಲ್ಲು ಹೊನ್ನುಡಿಕ್ಕೆ ತಿಮ್ಮಣ್ಣನ ತಮ್ಮ ಲಿಂಗರಸಯ್ಯನು ಬರೆದಂಥ ಬಸವಪುರಾಣದ ಪುಸ್ತಕಕ್ಕೆ ಶುಭಮಸ್ತು" ಎಂದಿದೆ. ಈ ಪುಸ್ತಕದಲ್ಲಿ ಹಲವು ಓಲೆಗಳಿಲ್ಲ. ಮತ್ತೆ ಕೆಲವು ಮುರಿದಿವೆ. ಮೊದಲ ಮತ್ತು ಕಡೆಯ ಓಲೆಗಳಿವೆ. ಕಡೆಯ ಓಲೆಯ ಸಂಖ್ಯೆ ೨೯೦. ಆದರೆ ೧೨೬ ಓಲೆಗಳು ಮಾತ್ರ ಪ್ರಕೃತ ಇವೆ.

ಇದರಲ್ಲಿ ಶಂಕರಾರಾಧ್ಯನು ಸಂಸ್ಕೃತದಲ್ಲಿ ಬರೆದ ಬಸವಪುರಾಣದ ಶ್ಲೋಕಗಳಿಗೆ ಕನ್ನಡದಲ್ಲಿ ಅರ್ಥವನ್ನು ಬರೆದಿದೆ. ಕವಿ ಮಲ್ಲಿಕಾರ್ಜುನನೆಂಬುವನು. ವೀರಶೈವಮತದವನು. ಇವನಕಾಲವು ಸುಮಾರು ೧೬೯೩ ಎಂದು ಕವಿಚರಿತ್ರೆಯಲ್ಲಿ (ದ್ವಿತೀಯಸಂಪುಟ) ಹೇಳಿದೆ. ಉಳಿದ ವಿಷಯಗಳನ್ನು ಮೇಲೆ ಉದ್ಧರಿಸಿರುವ ಭಾಗಗಳಿಂದಲೂ ಕವಿಚರಿತ್ರೆಯಿಂದಲೂ ತಿಳಿಯುವುದು.

No. 757. ಬಸವಪುರಾಣ (ಶ್ಲೋಕ-ಟೀಕೆ).

BASAVAPURĀṆA (ŚLŌKA-ṬĪKE).

Substance, paper. Size, $10\frac{3}{8} \times 9\frac{1}{2}$ inches. Pages, 197. Lines, 20 on a page. Character, Kannaḍa. Condition, good. Appearance, new. Mode of writing, good.

Incomplete.

This is a copy of the manuscript described under the previous number (756).

(ವಿ-ವಿ.)—

ಅಸಮಗ್ರ. ಇದು ಹಿಂದಣ ೭೫೬ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ.

No. 758. ಬಸವಪುರಾಣದ ಪುರಾತನರ ಚರಿತ್ರೆ.

BASAVAPURĀṆADA PURĀTANARA CARITRE.

Substance, Śrītāla. Size, 18¾ × 2 inches. Pages, 100. Lines, 5 to 8 on a page. Character, Kannaḍa. Condition, very much injured. Appearance, old. Mode of writing, good.

Begins on fol. 1-*a* of the Ms. described under No. 708 ante.

Incomplete. Contains from I sandhi to the 35th stanza of the 9th sandhi.

This gives a detailed account of some of the Śaivas mentioned in Basavapurāṇa. The author is Kumāra Cennabasava.

Beginning :—

ವಾ । ಷ । ಶ್ರೀಮದನುಪಮ ಸರ್ವ್ವಮಂಗಳಾರೂಪದಿಂ ।
ವಾಮಾರ್ದ್ಧತನು ಭಸಿತಕಾಂತಿಯಿಂದೊಪ್ಪಲು ।
ದ್ದಾಮ ದಕ್ಷಿಣಭಾಗತನು ಶುಭ್ರಕಾಂತಿಯಿಂದೊಪ್ಪಲಂತೆರಡು ಗೂಡಿ ॥
ಭೂಮಿಯೊಳು ಕಾಳಿಂದಿದೇವಗಂಗೆಗಳೆನಿಸು ।
ವಾ ಮಹಾನದಿಗಳೊಪ್ಪುವ ಸಂಗಮವ್ರೊಯೆನಿ ।
ಪ್ಪಾ ಮೂರ್ತಿಯರ್ದ್ಧ ನಾರೀಶ್ವರಂ ಶಿವಕಥೆಕರಿಷ್ಟಾರ್ತ್ಥಸಿದ್ಧಿ ಕೊಡುಗೆ (?)
ಮಂಗಳಕರ ಗುರುಪಿಂಗೆ ನಂದೀ । (?)
ಶಂಗೆ ಭೃಂಗೀಶ್ವರಂಗೆ ಗಣಾಧಿ । (?)
ಪಂಗೆ ಸೇನಾನಿಗೆಯಸಂಖ್ಯಾತಗಣತತಿಗೆಯೂನೊಲ್ಮೆಯಿಂದೆನಮಿಸೆ ॥
ಅಂಗಜಾರಿಯ ಮಹಿಮೆಯಿಳೆಗೆ ಬಂದಿಸಿದ ಕವಿ ।
ಪುಂಗವರೆನಿಪ್ಪ ಬಾಣೋದ್ಭಟ ಮಳೆಯರಾಜ ।
ಶೃಂಗಾರಕವಿಹರೀಶ್ವರಪದ್ಮರಾಜಸೋಮೇ [ಶಾದಿಗಳ] (ಶರಣ) ಗಾನೆಱಗುವೆಂ ॥
ಜಸವೆತ್ತ ಮುಕ್ತಿಮುನಿ ಸಿಂಹಾಸನಾಧಿಪತಿ ।
ಯೆಸೆವ ಸುಚರಿತ್ರಾಪ್ಟ ಶಿಖಿಯ ಬಸವೇಶ ಕರ ।
ಬಿಸಜಸಂಜಾತ ಪ್ರತಾಪಕೀರ್ತಿವಿರಾಜಿತ ಕುಮಾರಚೆನ್ನಬಸ [ವೇಶ್ವರ] (ವ)ಂ ॥
ಶಶಿಮೌಳಿಯಂಘ್ರಿಯಂ ಶಾಸ್ತ್ರೋಕ್ತ ವಿಧಿಯೊಳ ।
ರ್ಚಿಸುತೆ ಶಿವಭಜಕಜನರಿಷ್ಟಾರ್ಥವೀವ್ರುತಂ ।
ಬಸವೇಶ್ವರ ಪುರಾಣದೊಳು ಗುಪ್ತವೆನಿಸುವ ಪುರಾತನರ ಚರಿತ್ರಮನೊರೆದಂ ॥
ನಂದೀಶ್ವರನ ಕಥೆಗೆ [ಕ] ಬಂದ ಯುಗಧರ್ಮ್ಮಕಥೆ ॥
ಯಂದವೆಂತೆನಲೊರ್ವ್ವ ವಿದ್ವಾಂಸನಿಳೆಯಲ್ಲಿ ॥
ಪಿಂದೆ ಪೋದ ದ್ವಾಪರದ ಧರ್ಮ್ಮದೊಳ್ನಡೆವೆನೆಂದು ಕಂಕಣವ ಕಟ್ಟಿ ।
ಒಂದು ದಿನ ಯಿದನಱಿದು ಕಲಿಯುಗಂ ವಿಪ್ರರೂ ।
ಪಿಂದೆ ಬಂದವನೆಯ್ದಿ ಪಸಿದೆನೆನಲದ ಕೇಳ ॥
ವ್ರೊಂದಿನಿತು ಸ್ವೈರಿಸಿದ್ದ್ವಡೆ ಕೆಕ್ಕರಿಕೆ ವಣ್ಣ ವ್ರೊಡೆಯನಿಂ ಕೊಂಡುಕೊಡುವೆಂ ॥.

* * * *

ವಾಚ್ಯ :— ಮುಗ್ಧಸಂಗಯ್ಯನ ಕಥೆಗೆ ಬಂದ ಉಪಕಥೆ.

ರವಿಕಿರಣ ಮಂಟಪಂದದ ಗಿರಿಯ ಗುಹೆಯೊಳ್ತ । (?)
ಪವ ಮಾಡುತಿರೆ ಸುಕೇಶಾಖ್ಯಮುನಿ ನಾರದಂ ।
ರವಿಗಳುದೆ ತದ್ಗಿರಿಯ ಮೇಲೆ ಸಾಹಸ್ರಕಿರಣಂಗಣೆಯುಲಉದಾ ಮುನಿ ॥
ರವಿ ಕಾಂತಿಗೆಟ್ಟು ಕುಷ್ಟನುಮಾಗಲೆಂದು ಶಾ ।
ಪವನೀಯಲಂತಾಗೆ ರವಿಯುವನ ನುತಿಸಿ ಮ ।
ತ್ತಪನುಕ್ತಿಯಿಂ ಮನೋಹರಋಷಿಯ ಪಾದಾಂಬುಜಂ ಸೋಂಕೆ [ಬಹು]ಕಾಂತ ವಡೆದಂ ॥ (?)

Colophon :—

ಇದು ಮುಕ್ತಿಮುನಿನಾಥ ವಂಶಾಂಬರಾದಿತ್ಯ ।
ನಧಿಕಕೀರ್ತಿಪ್ರತಾಪಂ ಶಂಭುನಿಂದಕನ ।
ಮುದಯ ಸಮಿದಗ್ನಿ ಶಿವಕಲ್ಪದ್ರುಮವರ ಕುಮರ ಚೆನ್ನ ಬಸವೇಶ್ವರಂ ॥ (?)
ಮುದದಿಂದೆ ಬಸವೇಶ್ವರಪುರಾಣದೊಳು ಸೂಚಿ ।
ಸಿದ ಪುರಾತನ ಚರಿತ್ರವನಿಂತು ಬೇರ್ಪಡಿಸಿ ।
ಪದವಿಡಲು ರಂಜಿಸುವ ಮೊದಲನೆಯ ಸಂಧಿ ಶಿವಭಕ್ತಸೌಖ್ಯಾನುಬಂಧಿ ॥

End :—

ಅಮೃತಮಥನವನೆಸಗಿ ಹರಿ ಬಂದು ಭವಗಉಹೆ ।
ಯಮರರಸುರರ್ಗಮರ್ದನೆಂತೆಉತಿದೆ ತೋಉನಲು ।
ಕಮಲಾಕ್ಷನತಿ ಸವುಂದರಿಯದ ವೆಣ್ಣಾಗುತಿಂತೆಉತಿದೆನೆಂದುಸಿರೆ ಭವನು ॥ (?)
ಭ್ರಮಿಸಿ ತುಡುಕಲು ವಿಷ್ಣು ಪರಿದೋಡುತಿರೆ ತಗಳ್ ।
ಲಮಳ ಹರವೀರ್ಯ . . . . ।

(ವಿ.ವಿ.)—

ಅಸಮಗ್ರ. ೧-೮ ಸಂಧಿಗಳೂ ೯ ನೆಯದರಲ್ಲಿ ೩೫ ಪದ್ಯಗಳೂ ಇವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ ಇದರೊಡನೆ "ಎಲ್ಲಾ ಪುರಾತನರ ವಚನಾಮೃತ ಸಾರ" ವಿದೆ.

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ. ಇದರಲ್ಲಿ ಸಂಧಿಗಳು ೯, ಪದ್ಯಗಳು ೩೫೦ ಎಂದು ಕವಿ ಚರಿತ್ರೆಯಲ್ಲಿ ಹೇಳಿದೆ. ಬಸವಪುರಾಣದಲ್ಲಿ ಸಂಗ್ರಹವಾಗಿ ಸೂಚಿಸಿರುವ ಪುರಾತನರ ಚರಿತ್ರವನ್ನೆ ಉಪಕಥೆಗಳೊಡನೆ ಇದರಲ್ಲಿ ವಿವರಿಸಿ ಹೇಳಿದೆ. ಇದಕ್ಕೆ ಗಣಾಡಂಬರ ಚರಿತ್ರೆಯೆಂಬ ಹೆಸರೂ ಇರುವಂತೆ ತೋರುತ್ತದೆ.

ಕವಿ ಕುಮಾರ ಚೆನ್ನಬಸವನು. ಇವನ ವಿಷಯವಾಗಿ ಹೆಚ್ಚು ತಿಳಿಯಬಯಸುವವರು ಕವಿಚರಿತ್ರೆ (ದ್ವಿತೀಯ ಸಂಪುಟ)ಯನ್ನು ನೋಡುವುದು.

No. 759. ಬಸವಸ್ತುತಿ.

BASAVASTUTI.

Substance, Śrītāla. Size, $12\frac{3}{8} \times 2\frac{1}{8}$ inches. Pages, 2. Lines, 16 on a page. Character, Kannaḍa. Condition, much injured. Appearance, old. Mode of writing, good.

Incomplete.

Begins on fol. 7-*a* of the manuscript described under Sanskrit Descriptive Catalogue No. 125.

Contains prose passages bearing on the Śaiva system of Philosophy addressed to Basava and Guhēśvara.

Beginning :—

. . ಂದ ಬಯಸುವಂತೆ, ಬಯಸುತಿರ್ದೆನಯ್ಯಾ ನಿಮ್ಮ ಶರಣರ ಬರವನು, ದಿನಕರ ನುದಯಕ್ಕೆ ಕಮಲ ವಿಕಸಿತವಪ್ಪಂತೆ ಯೆನಗೆ ನಿಮ್ಮ ಶರಣರ ಬರವುಕೂಡಲ ಸಂಗಮದೇವಾ ॥ ಅಂಗದ ಪ್ರಕೃತಿಯು ಲಿಂಗದಲ್ಲಿ ।ಶೊ॥ (?) ಬನ್ನಿ ಕರಣಿಕ ಪಲವು ಲೆಕ್ಕವಹೇಳಿ ಧಾನ್ಯದನ್ನ ಸಂಚಯುವನು ಹೊಸ ಜೋಳ ಅಇವತ್ತು ಲಕ್ಷ ಖಂಡುಗ, ಶಾಲಿಧಾನ್ಯ ಮೂವತ್ತು ಲಕ್ಷ ಖಂಡುಗ, ಗೋದಿ ಹನ್ನೆರಡು ಲಕ್ಷ ಖಂಡುಗಕಡಲೆ ಬತ್ತೀಸ ಲಕ್ಷ ಖಂಡುಗ, ಹೆಸರು ಮುವ್ವತ್ತು ಲಕ್ಷಖಂಡುಗ,

* * *

ಮತ್ತಂ॥ ಜಗದಗಲ ಮಂಟಪಕ್ಕೆ ಮುಗಿಲಗಲದ ಮೇಲುಕಟ್ಟನಲ್ಲಿ ವಿಚಿತ್ರವ ನೋಡುತ್ತ ನೋಡುತ್ತ ಧ್ಯಾನವಿಶ್ರಾಂತಿಯಲ್ಲಿ ದಿಟದಿಟವೆಂಬುದೊಂದು ದರುಶನವ ನೋಡುತ್ತ ಗಗನಗಂಭೀರದಲ್ಲಿ ಪ್ರದಯವಾಯಿತ್ತ ಕಂಡೆ ಗೋಹೇಶ್ವರ ಲಿಂಗ ತಾನಾಗಿ ॥ ೧೦೬೮ ॥

* * * *

End :—

ಪರಮ ಶಾಂತಿಯೆಂಬ ಶ್ವೈತ್ಯಾಕಾರದ ಸುಸೋಂಕಿನ ಚೂತಪಲ್ಲವಂಗಳಂ ಹಾಸಿ, ಉತ್ತರ ದ್ವಾರವೆಂಬ ನುಸುಳುಗಂಡಿಯಂ ರಚಿಸಿ, ಪೂರ್ವಯೋಗವೆಂಬ ಸೋಪಾನವಂ ಮಾಡಿ, ಪಶ್ಚಿಮ ದ್ವಾರವೆಂಬ ನಿಜದ್ವಾರಪಟ್ಟವಂ ಮಾಡಿ, ಸಪ್ತವೆಸನ ಪಂಚೇಂದ್ರಿಯಂಗಳೆಂಬ ಪೌಳಿಯನಿಕ್ಕಿ, ಆಸೆಯಾಮಿಷಮಂಕೆಡಿಸಿ ಊರ್ಧ್ವಚಕ್ರವೆಂಬ ಮೇಲುಪ್ಪರಿಗೆಯಂ ಮಾಡಿ, ಚಂದ್ರಸೂರ್ಯರೆಂಬ ದೀಪಮಂಬೆಳಗಿ, ಸೋಹಮೆಂಬ ಶಿಖರಿಯ ಮೇಲೆ ಮಹಾಜ್ಞಾನ ಪ್ರಕಾಶವೆಂಬ ಹೊನ್ನ ಕಳಸಮಂ ಮಾಡಿ, ಶೂನ್ಯ ನಿರಾಳವೆಂಬ ಶೂನ್ಯ ಸಿಂಹಾಸನವಂ ಮಾಡಿದ ಬಸವ ಪ್ರಿಯಕೂಡಲ ಚೆನ್ನ ಸಂಗಯ್ಯನರಿಯೆನ್ನ ಪರಮಗುರು ಬಸವಣ್ಣನು ॥ ೧೦೭೮ ॥ ಮತ್ತಂ, ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ ಬಳಿದಪ್ಪಿದ ಕಱು ತ . . . . .

(ವಿ.ವಿ.)—

ಅಸಮಗ್ರ. " ಗೋಹೇಶ್ವರ, ಬಸವ " ಎಂಬ ಸಂಬೋಧನೆಗಳಂದೊಡಗೂಡಿದ ವಚನ ಗಳಾಗಿವೆ.

No. 760. ಬಸವ ಸ್ತುತಿ.

BASAVA STUTI.

Substance, Śrītāla. Size, $13\frac{1}{8} \times 2\frac{5}{8}$ inches. Page, 1. Lines, 4. Character, Kannaḍa. Condition, much injured. Appearance, old. Mode of writing, good.

Complete in 5 stanzas.

Begins on fol. 70-*a* of the manuscript described under Sanskrit D. No. 125.

Written in praise of Basava.

Beginning :—

ಬಸವಾ ॥

ಬಕಾರ ಗುರು ಭವವಿನಾಶ ಬಸವಾ ॥
ಸಕಾರ ಚೈತನ್ಯಾತ್ಮಕ ಬಸವಾ ॥
ವಕಾರ ಚರಜಂಗಮಸ್ಯ ಬಸವಾ ॥

* * * *

End :—

ಶರಣು ಕೂಡಲ ಚೆನ್ನಸಂಗನ ಬಸವ ॥

(ವಿ.ವಿ.)—

ಸಮಗ್ರ. ೫ ಪದ್ಯಗಳಿವೆ. ಬಸವನ ಸ್ತುತಿರೂಪವಾಗಿರುವ ಈ ಪದ್ಯಗಳನ್ನು ಬರೆದವನು ಯಾರು ಎಂದು ಮೊದಲಾದ ವಿಚಾರಗಳು ತಿಳಿದು ಬರುವುದಿಲ್ಲ.

No. 761. ಬಸವೇಶ್ವರನ ಪಂಚಸ್ತೋತ್ರ.

BASAVĒŚVARANA PAÑCASTŌTRA.

Substance, Śrītāla. Size, $12 \times 2\frac{3}{16}$ inches. Pages, 7. Lines, 12 to 13 on a page Character, Kannaḍa. Condition, much injured. Appearance, old. Mode of writing, good.

Complete in five stanzas with commentary.

Begins on fol. 32-*a* of the manuscript. The other works herein are :—(1) Vṛṣabhēśvara stuti fol. 35-*a*, (2) Bhāvacintāratna 1-*a*, (3) Odeyana kalpa 50-*a*.

Written in praise of Basava.

Beginning :—

ಬಸವೇಶ್ವರನ ಪಂಚಸ್ತೋತ್ರ = ಐದು(?ಅಯಿದು)ಪ್ರಕಾರದ ಸ್ತುತಿಯು ।
ಜಯ ಜಯ ಜರಾಮರಣಜನ್ಮವರ್ಜಿತಹರಣ ।
ಜಯ ಜಯ ಪರಾತ್ಪರವೆ ಜಯತು ಪಾವನಗುರುವೆ ॥
ಜಯತೆಂದು ಬಸವರಾಜನ ಪಾದಪದ್ಮವಂ ಸ್ತುತಿಪೆನನವರತ ಮುದದಿಂ ॥

ಟೀಕು.—

ಜರಾಮರಣಜನ್ಮವರ್ಜಿತಹರಣ ಜಯ ಜಯ ॥ ಜರಾ = ಮುಪ್ಪು, ಮರಣ = ಲಯ, ಜನ್ಮ = ಉತ್ಪ [ತ್ತ್ಯಂ] ಗಳು (ತ್ತಿ)। ವರ್ಜಿತ = ಇಲ್ಲದ। ಮತ್ತಂತು ಮಲ್ಲದೆ—ಜರಾಮರಣಜನ್ಮವರ್ಜಿತಹರಣ, ಮುಪ್ಪು, ಉತ್ಪತ್ತಿ, ಲಯಂಗಳಲ್ಲದ ಸದ್ಭಕ್ತರುಗಳಿಗೆ। ಹರಣ ಪ್ರಾಣವಾದಂಥಾ। ಮತ್ತಂತುಮಲ್ಲದೆ॥ ಜರಾಮರಣ ಜನ್ಮವರ್ಜಿತ, ಸೃಷ್ಟಿಸ್ಥಿತಿ ಲಯಂಗಳಲ್ಲದ ಸದ್ವೀರಮಾಹೇಶ್ವರರುಗಳೇ॥ ಹರಣ = ಚೈತನ್ಯವಾಗುಳ್ಳಂಥಾ ವೃಷಭೇಶ್ವರಗೆ, ಜಯ ಜಯ ಸರ್ವೋತ್ಕರ್ಷವಾಗಲಿ. ಪರಾತ್ಪರವೆ, ಆವುದುಪರ, ಅದಕ್ಕೆ ಪರವಾದಂಥಾ ವೃಷಭೇಶ್ವರಂಗೆ, ಜಯ ಜಯ। ಪಾವನಗುರುವೆ! ಪವಿತ್ರಾಚಾರ್ಯನಾದಂಥಾ ದೇವನೆ! ಜಯತು, ಸರ್ವೋತ್ಕರ್ಷವಾಗಲಿ॥ ಜಯತೆಂದು ಬಸವ ರಾಜನ ಪಾದ ಯುಗ್ಮಮಂ ಸ್ತುತಿಪೆಂ, ಸ್ತೋತ್ರವ ಮಾಡುವೆನು ॥ ಪದ ॥

ನೀಲಾಂಬಶ್ರವಣರಂಜಿತರತ್ನತಾಟಂಕ।
ನೀಲಾಂಬನೇತ್ರೋತ್ಪಲಾಬ್ಜ ವಿಕಸಿತ್ರಧರ್ಮ।
ನೀಲಾಂಬಬಾಹುಚಂಪಕದಾಮಯುತಕಂಠ ನೀಲಾಂಬಹೃನ್ನಿವಾಸಾ॥
ನೀಲಾಂಬ ಕುಚಕುಂಕುಮಾಂಕಶೋಭಿತವಕ್ಷ।
ನೀಲಾಂಬಮುದಪೀಯೂಷಾಬ್ಧಿವರ್ಧನಸೋಮ ॥
ನೀಲಾಂಬಮುಖಸರೋಜಭ್ರಮರ ಕರುಣಾನಿಧಿ ಪಾಹಿಮಾಂ ಬಸವೇಶ್ವರಾ ॥

* * * *

End :—

ಸಾರಂಗಪದನಮಲಗೋಭುವನಸಮರಕ್ಷ।
ಸಾರಂಗಪಾಣಿ ಗೋಜನ್ಮಗೋಕರ ವಿಪುಳ।
ಸಾರಂಗಮಥನಗೋವಕ್ಷ್ವ ಮುದದಿಂ ನಿಗಮಸಾರಂಗರಥವಿಶೇಷ॥
ಸಾರಂಗಚಾಪ ಗೋಗೋರಮ್ಯ ಗೋಪಂಚ।
ಸಾರಂಗಸಿಂಧುವರನಕ್ಷತ್ರಗೋವ್ರುಗಳು।
ಸಾರಂಗನವಿರ ಗೋಕರ್ಣಕೇಯೂರ ವರಸಾರಂಗರೂಪ ಶರಣು॥

ಅಸಮ = ಸಮಾನವಿಲ್ಲದ, ಸಾರಂಗಪದನ = ಅಕ್ಷಪಾದ ಋಷೀಶ್ವರನ, ಅಮಲ = ನಿರ್ಮಲವಾದ, [ಸಾರಂಗ] (ಗೋ) ಭುವನ = ದೇವಗಂಗೆಯಿಂದೆ, ರಕ್ಷ। ಸಲಹಿದಂಥಾ = ಸಾರಂಗಪಾಣಿ, ಸಾರಂಗ = ಎರಳೆಯ, ಪಾಣಿ = ಹಸ್ತದಲ್ಲಿ ಉಳ್ಳಂಥಾ, ಗೋಜನ್ಮ = ಕಮಲೋದ್ಭವನಾದ ಬ್ರಹ್ಮನ, ಗೋ = ಮಸ್ತಕವೇ, ಕರ = ಹಸ್ತದಲ್ಲಿವುಳ್ಳಂಥಾ। ವಿಪುಳ = ವಿಸ್ತಾರವಾದ, ಸಾರಂಗ = ಕಾಳಂದಿಯೆಂಬ ನದಿಯನು, ಮಥನ = ಕಲಕಿದ ನಾರಾಯಣನ, ಗೋ = ನಯನವೇ, ವಕ್ಷ (?) = ಪಾದದಲ್ಲಿ ವುಳ್ಳಂಥಾ। ಮುದದಿಂ = ಸಂತೋಷದಿಂದ, ನಿಗಮ = ವೇದಂಗಳನು, ಸಾರಂಗ = ಕುದುರೆಗಳಾ (ಸಿ), ರಥ = ತೇರಿನಲ್ಲಿ, ವಿಶೇಷ = ಕಟ್ಟಿದಂಥಾ। ಸಾರಂಗ = ಮಹಾಮೇರುವೆ, ಚಾಪ = ಬಿಲ್ಲಾಗಿವುಳ್ಳಂಥಾ। ಗೋ = ಮಹಾಶೇಷ(ನ), ಗೋ = ವಜ್ರಗಳೋಪಾದಿಯಲ್ಲಿ, ರಮ್ಯ = ಹೊಳವುತ್ತಿರ್ದ॥ ಗೋಪಂಚ = ಐದು ಮೊಗವನುಳ್ಳಂಥಾ। ಸಾರಂಗಸಿಂಧು = ಆಕಾಶಗಂಗೆ, (?) ವರ = ಶ್ರೇಷ್ಠವಾದ, ನಕ್ಷತ್ರ = ತಾರೆಗಳನು, ಗೋವ್ರುಗಳ ಪುಷ್ಪಗಳ ಮಾಡಿಕೊಂಡಂಥಾ। ಸಾರಂಗ = ಆಕಾಶವೆ, ನವಿರ = ಕುಂತಳ ವಾಗಿವುಳ್ಳಂಥಾ, ಗೋಕರ್ಣ, ತಕ್ಷಕಕುಳಿಕರೆಂಬ ಫಣಿಗಳೇ, ಕೇಯೂರ = ಭುಜಕೀರ್ತಿಗಳಾಗುಳ್ಳಂಥಾ। ವರ = ಶ್ರೇಷ್ಠವಾದ, ಸಾರಂಗರೂಪ = ಮೋಕ್ಷಸ್ವರೂಪನಾದಂಥಾ ದೇವನೆ! ಶರಣು = ನಮಸ್ಕಾರವು॥ ಶ್ರೀ॥ ಶ್ರೀ॥

(ವಿ-ಶ.)—

ಸಮಗ್ರ. ೫ ಪದ್ಯಗಳಿವೆ. ತಪ್ಪುಗಳಿವೆ. ಪದ್ಯಗಳು ಅನೇಕಾರ್ಥಗಳನ್ನೊಳಗೊಂಡ ಪದಗಳಿಂದ ಖಚಿತವಾಗಿವೆ. ಪ್ರೌಢವಾಗಿವೆ. ವ್ಯಾಖ್ಯಾನವು ಮೂಲವನ್ನು ತಿಳಿದುಕೊಳ್ಳಲು ಬಹುವಾಗಿ ಸಹಾಯವನ್ನು ಮಾಡುತ್ತದೆ. ಬಸವೇಶ್ವರನ ಸ್ತುತಿರೂಪವಾದೀ ಪದ್ಯಗಳ ಕರ್ತೃ ವಾರೆಂದು ತಿಳಿಯುವುದಿಲ್ಲ.

No. 762. ಬಿಡಿಪದ್ಯಗಳು.

BIḌI PADYAGAḶU

Substance, palm-leaf. Size, $13\frac{3}{8} \times 1\frac{5}{8}$ inches. Pages, 46. Lines, 5 on a page. Character, Kannaḍa. Condition, much injured. Appearance, old. Mode of writing, good.

Incomplete.

Begins on fol. 93-*a* of the manuscript described under Sanskrit D. No. 6990.

Collection of stray verses bearing on Śiṅgāra and Vairāgya.

Foll. 104*b* and 109*b* left blank.

Beginning :—

ಧರ್ಮ್ಮಕ್ಕೆ ಚಿತ್ತಕೆಂದೊಡೆ ಮನ। ಹಮ್ಮೈಸಿ ದು।
ಷ್ಕರ್ಮಕೊಮ್ಮೆ ಪಣ್ಣಾತಿಪ್ಪ ದೈ ॥ ಪಲ್ಲ ॥
ಭಟ್ಟಡೊಂಬರಾಡಿ ಹೊಗಳಲು। ತೆಗಾಹಾಹಾವ। (?)
ಕೊಟ್ಟ ಸಭೆಯು ಮುಂದೆ ಕರ್ಮದಾ ॥
ಬಟ್ಟೆಯು ನಿಟ್ಟರಸುರಗುರು ಮನೆಗೆ ಬರಲು।
ದಟ್ಟದರಿದ್ರ ತೋರ್ವರು ॥ ೧॥
ಮುಟ್ಟವೋಹಿಸುತ ಲಿಂಗದ। ಪೂಜೆಮಾಡಿ।
ದಿಟ್ಟ ನೆಟ್ಟ ಸಲಿಯುಲೊಲ್ಲರು ॥
ಕೆಟ್ಟ ಕಾಮಿನಿಯರ ನಟಣೆಯು। ಸೊಬಗನೋಡಿ
ದೃಷ್ಟಿನೆಟ್ಟ ನೆನೆಯದಿರ್ಪರು ॥ ೨ ॥
ಹಾದಿಯೊಳು ಹೋಹ ನಂಟರ। ಹರದು ಕರೆದು।
ಸ್ವಾದು ಸವಿಯನುಣಿಸಿ ತೋರ್ಪರು॥ ತಮಗೆ ಬಂದ।
ಬಾಧೆಯು ನಿಟ್ಟರಸುವ ಜಂಗಮ। ದೇವರ್ಗೆ।
ಉದಾಸಿನವ ಮಾಡಿ ನೀಡರು ॥ ೩ ॥
ಊಟನಿದ್ರೆ ಕೂಟ ಜವನದ। ಯುವತಿಯುಗ ಕಣ್
ಬೇಟನೋಟ ಕಂಡು ಅಲಸರು ॥
ಪಾಪಿಗೆಟ್ಟಪಾಪಿ ಮನವೆ। ಹೀಗೆಚಂದ್ರ—
ಜೂಟನೊಳು ಬೆರೆವಾಟವ್ರೊಲ್ಲೆಯು ॥ ೪ ॥

* * * *

ಅಂಗ ಗುಣ ಮರ್ದಿಸನವಿಷಯುವ ॥ ಪೇಳ್ವ ವ್ರು ।
[ಲಂ] (ಲ್ಲಂ) ಘಿಸ ಜಡಂಗಳಗಿದು ॥
ಹಿಂಗದೋದಿ ಬೋಧಿಸುವ । ತೋಂಟದ ಸಿದ್ಧ
ಲಿಂಗನಂಗಸಂಗವಾದುದು ॥ ೩ ॥

* * * *

ರಾಗ ಮಾಧು (? ಮಾಧವಿ).

ಗೋವಿಂದ ಯೆನ್ನಿ ಬಲ್ಲವರೆಲ್ಲರು । ಗೋಕುಲಪತಿ ನಮ್ಮ ಬಸವಣ್ಣನೆಂದು ॥ಪಲ್ಲ॥
ಪಂಚಮುಖನ ಹೊನ್ನ ನಳಿನದಮೃತಮಯ ॥
ಪಂಚಧಾರೆಯೆಂಬ ಮಂತ್ರದಲಿ ॥
ಪಂಚಗೋವು ಪುಟಿಯಿರಲಾವ ಕಂಪತ್ತಿ ।
ಪಂಚಮುಖನ ಧವ಼ವಾವನ ಗೋವು ॥ ೧ ॥
ಚಿಕ್ಕಂದು ಯೆಲ್ಲರ ಸಲಹಿದ ಗೋವು ॥
ಸಕ್ಕರೆಯಿಂಸವಿಯೊವುದು ಗೋವು ॥
ಮುಕ್ಕಣ್ಣ ಮೊದಲಾದ ಸಕಲದೇವರ ಮಜ್ಜ-॥
ನಕ್ಕೆ ಪಂಚಾಮೃತವನು ಯೀವುದು ಗೋವು ॥ ೨ ॥

* * * *

ಸಿದ್ಧರಸವು ಸಿದ್ಧಿ ಗೋವಿಂದಾ ಸರ್ವ-।
ಸಿದ್ಧಿಯ ಪಡೆವುದು ಗೋವಿಂದಾ ! ॥
ಸಿದ್ಧಲಿಂಗನನೆತ್ತಿ ದಣಿದು ಪಾಲ್ಗುಡಿದು - ಸ ॥
ಮೃದ್ಧಿಯಾಗಿಪ್ಪುದು ಗೋವಿಂದಾ ॥

* * * *

ಅಕ್ಕಗಳವಚನ ॥
ಹೋದೆನೂರಿಗೆ ಯಿದ್ದೆನು ನಾನಿಲ್ಲಿ ॥
ಹೋದರೆ ಮರಳಿ ತಾ ಬಾರೆ ಕಾಣವ್ವ ತಾಯೆ ॥ ಪಲ್ಲ ॥
ಅತ್ತೆ ಮಾವನು ಮೈದನು ನಗೆವೆಣ್ಣು ॥
ಚಿತ್ರವನೊರದು ನೋಡುವಾ ಗಂಡನು ॥
ಕತ್ತಲೆಯಾದರೆ ಕರೆದು ಅನ್ನವನೀಡಿ ।
ಅತ್ತಿಗೆ ಹತ್ತೆಂಟು ನುಡಿದಳವ್ವಾ ತಾಯೆ ॥ ೧ ॥
ಅಯಿ (ಐ) ವಾರು ಭಾವಂದಿರೈವರು ನಗೆವೆಣ್ಣು ।
ಐವರು ಕೂಡಿ ಯೆನ್ನ ಬೈವರು ॥
ಬೈವರು ಹೊಯ್ವರು ಮಿಗೆ ನೋಯೆ ನುಡಿವರು ॥
ಐವರ ಗಸಣಿಯೊಳಾರೆ ಕಾಣವ್ವಾ ತಾಯೆ ॥ ೨ ॥
ಅವರೆನ್ನ ಮಾತಾಪಿತರು ರುದ್ರ ಗಣಂಗಳು ॥
ಅವರೆನ್ನ ಬಂಧು ಬಳಗವು ॥
ಸರವಿಸಿ ಶ್ರೀಶೈಲ [ಚೆನ್ನ] ಮಲ್ಲಿಕಾರ್ಜುನ್ನಯ್ಯ ।
ಕರೆದರೆ ಮರಳಿ ತಾ ಬಾರೆ ಕಾಣವ್ವಾ ತಾಯೆ ॥ ೩ ॥

* * *

" ನಾನೆ, ಅಸ್ಮಿ " ಎಂದೇಕಯ್ಯಾ ಭಕ್ತಿ ।
ಜ್ಞಾನ ವೈರಾಗ್ಯವೆ ಬೇಕಯ್ಯ ॥ ಪಲ್ಲ ॥
ಹುಚ್ಚನೆಂದು ಕಲ್ಲಿಲಿಡಿಸಯ್ಯ ಯೆನ್ನ ।
ಚುಚ್ಚಕ ನೆಂದೆಂದೆನಿಸಯ್ಯಾ ॥
ಮಚ್ಚಿದಿ ಲೋಕ ಯೆಂದೆನಿಸಯ್ಯಾ । ನಿನ್ನ ।
ಇಚ್ಚೆಯೊಳಿರಿಸೊ ನಾ ಸಂತೈಯಯ್ಯಾ ॥

*   *   *   *

ರಾಗ—ನಾದನಾಮಕ್ರಿಯೆ.
ನಟಿಸಿ ನಟ ನಾಟಕದ ಪರಿಯ ನೋಡುತ್ತ ॥
ನಿಟಿಲಾಕ್ಷ ಜಗವ ಸೃಷ್ಟಿಸಿ ವಿನೋದಿಸುತ ॥ ಪಲ್ಲ ॥
ಯೌವನದ ಹೆಣ್ಣು ಜವ್ವನವ ಮಾರಿದವಗೆ ॥
ಕೈವಿಡಿಸಿ ತಾಯಿತಂದೆಯು ಬೈದು ಹಣೆಗೆ ।
ಕೈವೆರಳನಿಟ್ಟು ವಿಧಿಬರಹವೆಂತೆನಗೆ ।
ಅಯ್ಯೊಯ್ಯೊ ಎಂದು ಸುಯ್ದವಳು ಮನಸಿನೊಳಗೆ ॥ ೧ ॥

*   *   *   *

ಕೆಲರ ನಗಿಸುತ ಕೆಲರನಳಿಸಿ ಜಗದೊಳಗೆ ।
ಬಲುವಿನೋದವ ಮಾಡಿ ನಗುತಲಡಿಗಡಿಗೆ ॥
ಸಲೆ ತನ್ನ ನೆನೆದ ಭಕ್ತರ ಹೃದಯದೊಳಗೆ ॥
ನೆಲಸಿ ಗುರು ಸಿದ್ಧಲಿಂಗನ ಲೀಲೆ ಹೀಗೆ ॥ ೨ ॥

*   *   *   *

ಅನುಗಾಲವು ದುಃಖ ಪಾಪಿಗೆ ತನ್ನ ॥
ಮನವು ಲಿಂಗದೊಳಗೆ ನೆಲೆಗೊಳ್ಳುದನಕಾ ॥ ಪಲ್ಲ ॥
ಸತಿಯುಳಿಲ್ಲದ ದುಕ್ಕ । ಸತಿಯುಳ್ಳಾದಡೆ ದುಕ್ಕ ।
ಮತಿಹೀನೆ ಕಪಿರೂಪಾದಡೆ ದುಕ್ಕ ।
ಕ್ಷಿತಿಯೊಳಗಿಲ್ಲದ ಸತಿ ಸೌಂದರೆಗೆ—
ಮಿತಿ ಮೀರೆ ಕಡೆ ಮೊದಲಿಲ್ಲದ ದುಕ್ಕಾ ॥ ೧ ॥

*   *   *   *

ಬಡವ ನಾದಡೆದುಕ್ಕ । ಬಲ್ಲಿದನಾದಡೆ ದುಕ್ಕ ।
ಕಡು ಹಣ ಕೈಸೇರಿದಡೆ ದುಃಖ ॥
ಪೊಡವಿಯೊಳಗೆ ನಂಮ್ಮ ಮನೆ ಸುಖಿ ಲಿಂಗನ ।
ವಡಬೆರೆದಡೆ ದುಃಖ ನಿರ್ದುಃಖ ॥ ೨ ॥

*   *   *   *

End :—

ಒಡೆವ ನಾನಲ್ಲ ಕಾಣೆ । ಕರಿವೀರನೊಡೆಯ ಲಿಂಗಸ್ವೋರನು ॥
ಕಡೆಗ ಕಂಠಮಾಲೆಯುಯೆನ್ನ ಮಡದಿ । ಅರಿಯದೀಪೆನು ॥
ಒಡನಡುವಿನ ಭಾವಕೆ ನಿನ್ನ ಕಂಡು ।
ಮಿಡುಕತ್ತಲಿದೆ ಯೆನ್ನಯ ಜೀವನ ॥

ಶ್ರೀ ಶ್ರೀ ಶ್ರೀ॥

(ವಿ-ವಿ.)—

ಅಸಮಗ್ರ. ವೈರಾಗ್ಯ ಪರವಾಗಿಯೂ ಶೃಂಗಾರ ಪರವಾಗಿಯೂ ಇರುವ ಪದ್ಯಗಳಾಗಿವೆ. ವಿವಿಧ ರಾಗಗಳಿಂದ ಸೇರಿದೆ. ೩ ಅಥವಾ ೪ ಪದ್ಯಗಳು ಸೇರಿದ ಗುಂಪುಗಳಾಗಿ ಈ ಪದ್ಯಗಳು ಕಾಣುತ್ತವೆ. ಮಧ್ಯದಲ್ಲಿ ತೆಲುಗು ಭಾಷೆಯ ಮೂರು ಪದ್ಯಗಳಿವೆ. ವೈರಾಗ್ಯಪರವಾದ ಕೆಲವು ಪದ್ಯಗಳಕೊನೆಯಲ್ಲಿ ತೋಂಟದ ಸಿದ್ಧಲಿಂಗನ ಹೆಸರು ಕಾಣುತ್ತದೆ.

No. 763. ಬಿಡಿ ಪದ್ಯಗಳು.

BIḌI PADYAGAḶU.

Substance, palm-leaf. Size, $13\frac{3}{8} \times 1\frac{3}{8}$ inches. Pages, 40. Lines, 5 to 6 on a page. Character, Kannaḍa. Condition, much injured. Appearance, old. Mode of writing, good.

Incomplete.

Begins on fol. 118-*b* of the manuscript described under Sanskrit D. No. 6990.

Similar to the work described above.

Beginning :—

ಲಿಂಗಪೂಜೆಯ ಮಾಡದೆ । ಭವಭವದಿ ।
ಹೆಂಗಳೊಳು ರತಿಗೆ ಯೆಳಸಿ । ಶಿವನೆ ॥ ಲಿಂಗಪೂಜೆಯ ಮಾಡದೆ ॥

* * * *

ಲಿಂಗಾಂಗ ಸಮರಸನು ನೀರೆ ಕೇಳೆಲೆಯಕ್ಕ ।
ಸಂಗಮೇಶ್ವರನ ಕೃಪೆಯಿಂತ್ರ ಪಡೆದಿಹನು ॥ ಪಲ್ಲ ॥
ಅಂಗವಿಕಾರವನು ಅತಿಗಳೆದು ಶರಣರೊಳು ॥
ಸಂಗ [ಮ ಗ್ರ್ಹಾ] (ವಾ) ರುತಿಹನು ಸಕಲರೊಳಗೆ ॥
ಭಂಗಾರದಂತೆ ತೋರುವನು ಶಾಂತೇಶ ।
ಲಿಂಗದೊಡವೆರದು ರಾಜಿಸುತ್ತಲಿಹನು ॥

* * * *

ರಾಗ ಧನ್ಯಾಸಿ ॥

ಬೆಳಗಾಯಿತೇಳಯ್ಯಾ ಕಳೆಜಾಟ ಕಾಲಹರ ।
ಇಳೆಯ ಬ್ರಹ್ಮಾಂಡ ಯಿರೇಳು ಲೋಕಗಳೊಡೆಯ ॥
ಪ್ರಳಯಾಂತಕನೆ ಪಾರ್ವತೀಶ ಶ್ರೀಗಿರಿಮಲ್ಲ ಚೆಲುವ ನೀನುಪ್ಪವಡಿಸಾ॥ ಪಲ್ಲ
ವಸುಧೆಯೊಳು ಮೂಡಣಾದ್ರಿಯೊಳು ರವಿ ರಥವೇರಿ
ಬಸಿಲು ಹಗೆ ಅರಳಿ ಕುಮುದವು ಮು..ದು ಕೊಳದೊಳಗೆ ॥
ಮುಸುಕುತವೆ ತುಂಬಿಗಳು ವನದೊಳಗೆ ಪಕ್ಷಿಗಳು ಪಸರಿಸಿ ನಲಿದಾಡುತಿವೆಕೋ ।
ಮಸುಳ್ದವು ತಿಮಿರ ದೆಸೆ ಹಸಿಕಳೆಯ ತಾರೆಗಳು
ದೆಸೆಗೆ ಹಱಿದು ಕುಕ್ಕುಟ ಕೂಗಲಾ ಕ್ಷಣದಿ ॥
ಕುಸುಮಾಸ್ತ್ರ ತಿರುಗಿದನು ಕುಂಭಿನಿಯ ಜನರುಗಳ ॥
ತಾಮಸನಿದ್ರೆಗಳು ಹರೆದವು ॥ ೧ ॥

* * * *

ಬಿನ್ನಯಿಸಿ ಸುರರು ಕೈಮುಗಿದು ನಿಂದಿರಲಾಗ ।
ಪನ್ನಗಾಭರನುಪ್ಪವಡ ತಿಳದ ಹರುಷದಲಿ ।
ಪನ್ನೀರ ಮುಖಮಜ್ಜನವ ಮಾಡೆ ಪೊರವಡೆ ಕನ್ನೆಯರಾರತಿಯ ಬೆಳಗೆ । (?)
ಸನ್ಮಾನದಿಂದ ಕಂಚುಕರು ಉಗ್ಗಡಿಸುತಿರೆ ॥
ಚಿನ್ಮಯನೆ ಉಘೆ ಚಾಂಗು ಭಲರೆನಲು ವೊಪ್ಪಿದಾ ।
ಚೆನ್ನಿಗನೆ ಶ್ರೀಗಿರಿಯ ಮಲ್ಲಿಕಾರ್ಜುನ ಶರಣ ಯೆನ್ನಯ್ಯನುಪ್ಪವಡಿಸಾ ॥ ೯ ॥

ಉದಯರಾಗ.

ಏನೆಂಬೆನಯ್ಯಾ ತಮ್ಮಯ ನಿಜವನರಿಯದ ।
ಜ್ಞಾನಿ ಮಾನವರಲ್ಪಸುಖಕೆಳಸಿ ಪರಶಿವನ ।
ಜ್ಞಾನವಿಲ್ಲದೆ ತೊಳಲಿ ಬಳಲುತಿದೆ ಭವಭಯದ ಕಾನನದ ಮಧ್ಯದಲ್ಲಿ ॥ ಪಲ್ಲ ॥
ಉರುಳನೊಳು ಸಿಲ್ಕಿ ಮಾನವನ ಕೈವಶವಾದ ।
ಗರುಡನುರಗನ ಕಚ್ಚಿ ಕೊಂಡದರ ಜಿಹ್ವೆಯೊಳು ॥
ಹರಿಯದರ ಬಾಯೊಳಹ ನೊಣ[ರ](ಗೆ)ಣಕ್ಕಿ ಚ್ಚೈಸಿ ಸ್ಥಿರಬಾಳ್ವೆನೆಂಬ ತೆರದಿ ।

* * * *

End :—

ವರಕಾಶಿಮೊದಲಾದ ಉರುತರಕ್ಷೇತ್ರಾದಿ ।
ನೆರೆ ಪೂಜೆವಡೆದಿಹುದೊಂದೆ ಲಿಂಗಾ ॥
ಸುರನರನಾಗರ್ಕಳೊಳಗಾದವರಿಗೆಲ್ಲ ।
ಪರಿಪರಿಯ ವಿಧವೀವುದೊಂದೆ ಲಿಂಗಾ ॥
. . ರೂಪು ತಾನಾಗಿ ಪಿರಿದಾದಬೋಧೆಯುಂ ।
ದೊರಲಿಸಿ ಕೊಳುತಿಹುದೊಂದೆ ಲಿಂಗಾ ।
ಪೊರೆಯೆಲ್ಲಯೋಗಿಗಳೊಡೆಯ ತಾನೇಯಾದ ।
ಸ್ಥಿರವಾದ ಗಂಗಾಧರನೊಂದು ಲಿಂಗಾ ॥ ೩ ॥

(ವಿ-ವಿ.)—

ಅಸಮಗ್ರ. ಈ ಹಾಡುಗಳೊಳಗಿನ ಒಂದುಹಾಡಿನಲ್ಲಿ "ಮಲ್ಲಿಕಾರ್ಜುನ" ಎಂಬ ಅಂಕಿತವೂ ಇನ್ನೊಂದೆಡೆಯಲ್ಲಿ "ಸಿದ್ಧಲಿಂಗ" ಎಂಬ ಅಂಕಿತವೂ ಇದೆ. ಹೆಚ್ಚಾಗಿ ಭಕ್ತಿಪರವಾದ ಪದ್ಯಗಳೇ ಇವೆ.

No. 764. ಭಾವ ಚಿಂತಾರತ್ನ.

BHĀVA CINTĀRATNA.

Substance, Srītāla. Size, 12 × 2 inches. Pages, 62. Lines, 11 on a page. Character, Kannaḍa. Condition, injured. Appearance, old. Mode of writing, good.

Complete.

Begins on fol. 1-*a* of the Ms. described under No. 761 ante.

Beginning :—

ಭಾವ ಚಿಂತಾರತ್ನ, ಸತ್ಯೇಂದ್ರಚೋಳನ ಕಾವ್ಯ.

ವಾ. ಷ.॥ ರಾಗ. ನಾಟಿ॥

ಶ್ರೀ ವಿಮಲಗುಹನಮರಗುಂಡಮಲ್ಲೇಶ್ವರನ ।
ಸೇವಾನಿಮಿತ್ತದಿಂದಿಳೆಯೊಳು . ಪ್ರಣವ ॥
ಜೀವಪಂಚಾಕ್ಷರಿಯು ಬಿತ್ತರಿಸಿದಂ ಕುಲಚ್ಛೆರೆಯುಗಾನಂದದಿಂದ ।
ಶ್ರೀಗುರು ಸದಾನಂದ ವಾಗೀಶ ವರದ ತುಹಿ ।
ನಾಗಜಾದ್ಧಾಂಗ ಮಹಿಮಾಗರಿಮಚರಣ ಸಕ ॥
ಲಾಗಮಸ್ತುತ್ಯ ಶಶಿಭಾಗಭೂಷಿತಮಕುಟ ಯೋಗಿಜನಹೃನ್ನಿವಾಸಾ ॥
ರಾಗಾದಿರಹಿತ ಸುಖಸಾಗರನಲಾ ನೀನು ॥
ಭೋಗಮಲ್ಲೇಶ ಬಿಡದೀಗಮೆನ್ನಯ ಕೃತಿಯು ॥
ಭೂಗಗನದಿಗ್ಭರಿತವಾಗಿ ಪರವಿಸುವಿನಂ ಸಾಗಿಸುವುದಟ್ಕರಿಂದೆ ॥ ೧ ॥

* * * *

End :—

ಮನುಸಂಭವಾಗ್ರದಶನೀಪರಾ ಜನಚೋಳ-॥
ಕನದಲಘುಚರಮಹಾಸ್ನಿಗ್ಧಮುಖಕಮಲಾಭಿ-।
ಜನ ಪುಂಡರೀಕ ವಾಮಾದಿರ್ೋಜ ಘೋದ್ಭೂತ ಮಹನೀಯ ಮಾನಸ್ಥಿರಾ ॥
ಘನಭಾರಶತಕೋಟಿಕೋಟಿತೇಜೋವಿಲೋ-॥
ಚನಭೂರನಂತ ಸನ್ನಯ ಸುವಿಶ್ವಕರ್ತ್ರಂಡ ।
ಜನಿತೋಸ್ರವಾ ಳಿಯೆನಿಪಮರಗುಂಡದ ಮಲ್ಲಿನಾಥ ರಕ್ಷಿಪುದೆಮ್ಮನು ॥

Colophon :—

ಇದು ಸಕಲಭಕ್ತಪದಪಂಕೇಜರೇಣು ಮ-॥
ಸ್ತದ ಮಲ್ಲಣಾರ್ಯನಾ ಚೇರಮಾಂಕಂಗೆ ವೇ-॥
ಳದ ಭಕ್ತಸತ್ಯೇಂದ್ರಚೋಳಕೃತಿ ಭಾವಚಿಂತಾರತ್ನವಮಳಕರ್ಣ ॥

ಹೃದಯುಮಸ್ತಕವದನಸರ್ವಾಂಗಸೌಖ್ಯಕಾ ॥
ಸ್ಪದವಖಿಳಸಜ್ಜನರ್ಗೆ ಪಂಚಾಕ್ಷರಿಯ ಮಹ ॥
ತ್ವದ ಬೋಧೆಯಿಂದಡೋದಿದೊಡೆ ಕೇಳ್ದರಿಗಿಷ್ಟಸಿದ್ಧಿ ಸರ್ವರಿಗಪ್ಪುದು ॥

(ವಿ-ವಿ.)—

ಸಮಗ್ರ. ಅಚ್ಚುಡಿಸಿದ ಪುಸ್ತಕದ ಪಾಠಕ್ಕೂ ಇದರ ಪಾಠಕ್ಕೂ ಅಲ್ಲಲ್ಲಿ ಭೇದವು ಕಾಣು ತ್ತದೆ. ಕವಿ ಪ್ರಸಿದ್ಧನಾದ ಗುಬ್ಬಿಯ ಮಲ್ಲಣಾರ್ಯನು.

No. 765. ಭೈರವೇಶ್ವರಕಾವ್ಯದ ಕಥಾಸೂತ್ರ ರತ್ನಾಕರ.

BHAIRAVĒŚVARAKĀVYADA KATHĀSŪTRA RATNĀKARA.

Substance, Paper.. Size, $10\frac{3}{8} \times 9\frac{1}{2}$ inches. Pages, 135. Lines, 20 on a page. Character, Kannaḍa. Condition, good. Appearance, old. Mode of writing good.

Incomplete.

This is a copy of the manuscript described under No. 515 ante.

• Same work as that described under No. 511 ante.

(ವಿ.ವಿ.)—

ಅಸಮಗ್ರ. ಇದು ಹಿಂದಣ ೫೧೫ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಹಿಂದಣ ೫೧೧ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 766. ಭೋಜನರಗಳೆ.

BHŌJANARAGAḶE.

Substance, palm-leaf. Size, $12\frac{3}{4} \times 1\frac{3}{16}$ inches. Pages, 11. Lines, 4 on a page. Character, Kannaḍa. Condition, much injured. Appearance, old. Mode of writing, good.

Incomplete.

Deals with the description of a feast.

Beginning :—

. . . . ಕಡು ರಭಸ ।
ಸಾಕೆಂಬುದ ಕಾಣೆನು ಭರವಿರಸ ॥
ಬೇಕೇ ಬಿಸಿ ಬಿಸಿ ಮೆತ್ತನೆಯನ್ನ ।
ಸಾಕು ಸಾಕು ಘನ ಘನ ಸಂಪೂರ್ಣ ॥
ಇಲ್ಲದೆ ಬರಿಯಡೆ ಬೇಕೆ (ಅನ್ನ) ।
ಬಲ್ಲೆ ಒಲ್ಲೆ ಘನ ಘನ ಸಂಪೂರ್ಣ ॥
ಆ . ಕೆ ಉಡಗೆನು ಬೇಕೆಂಬುದಕೇಳ ।
ಬಡಿಸಿದ ಪರಿಕರಗಳ ಹೆಸರ ಹೇಳ ॥

ತುಪ್ಪವ ತರಲೇ ಎಂದೆಂಬವರು ।
ತಿಪ್ಪಾ . . . . ತನ್ನ ಹೆಸರು ॥
ಕಡುಬನು ತರಲೇ ತಿಪ್ಪಾಭಟ್ಟ ಯೊ ।
ಕಡುಬಿನ ಕ್ರಯ ಮೂಱು ಹಣ ಫ್ರಟ್ಟ ॥

End :—

ದಧಿ ಮಂಗಳ ಎಂದನು ಯಜಮಾನ ।
ಉದಧಿವೊಲು ಹೊರಟಿತು ಮಹಾಜನ ॥
ಹರಸುತ ನಗು . . . .
ಹರುಷದಿ ಮನೆಗೆ ಬಂದರು ತೇಗುತ್ತ ॥
ಬಾರುಗ ಹೈದೆ ಬೇಗದೆ . ಸುಗ ।
ನಾರುಗ ತಲೆನಿಂಬನು ಬೀಸುಗ ॥
ಭರದಿ ಮಡಿಸಿ . . . . ।
ಯಿರುಳಗೆ ಪಡೆವೆನು ನಿನ್ನಯ ಚಿತ್ತವ ॥
ಹೆಂಡಿರು ಮಕ್ಕಳು ಸಂತೋಷದಲಿ ।
ಉಂಡರು . . . . ಹೋಗಲಿ ॥
ಎನಿತಿದ . . ವರು ಸು . . . . !
. . . . ॥
. . . . . . ಯನು ಕೇಳ್ದವರು ।
ಆ ಭೋಜನ ಸ . ವಿತರಣರಹರು ॥
ಅನ್ನವನಿಕ್ಕುವ ಪುಣ್ಯಾತ್ಮನನು
ವನ್ನಿಪುರದ ರಘುರಾಮ ಸಲಹುವನು ॥
(ಭೋಜನರಗಳೆ ಸಂಪೂ)ರ್ಣಂ ಮಂಗಳ ಮಹಾ ಶ್ರೀ.

Colophon :—

(ವಿ-ವಿ.)—

ಅಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಓಲೆಗಳೆಲ್ಲ ಮುರಿದಿವೆ. ಲಿಪಿ ಚೆನ್ನಾಗಿದೆ. ತುಂಬಾ ತಪ್ಪಿವೆ.

ಇದು ಮಂದಾನಿಲರಗಳೆಯಲ್ಲಿ ಬರೆದಿರುವಂತಿದೆ. ಊಟದ ಕೊಂಡಾಟವು ಇದರಲ್ಲಿ ಉಕ್ತವಾಗಿರುವ ವಿಷಯವು. ಬರೆದವರಾರೆಂಬುದು ತಿಳಿಯುವುದಿಲ್ಲ. ಗ್ರಂಥಾಂತ್ಯದಲ್ಲಿ ವನ್ನಿಪುರದ ರಘುರಾಮಾಂಕಿತವಿದೆ.

No. 767. ಮಂಗಳಾಷ್ಟಕ.
MAṄGAḶĀṢṬAKA.

Substance, Śrītāla. Size, 13⅛ × 2⅝ inches. Pages, 2. Lines, 12 on a page. Character, Kannaḍa. Condition, much injured. Appearance, old. Mode of writing, good.

Complete.

Begins a fol. 69-*a* of the Ms. described under Sanskrit Descriptive No. 125.

Contains eight stanzas written in praise of Śiva.

Beginning :—

ರಾಗರಾಮಕ್ರಿ || (? ನಾದನಾಮಕ್ರಿಯೆ) || ಪಲ್ಲ ||

ಮಂಗಳಂ ಭಕ್ತಜನರಂತರಂಗದೊಳಿಪ್ಪ । ಲಿಂಗಂಗೆ ಸಕಲದೇವರ ದೇವರೊಡೆ
[ಯಂಗೆ ||

ಮಂಗಳಂ ಗುರುಪುರದ ಮಲ್ಲಿನಾಥಂಗೆ ಸ । ರ್ವಂಗೆ ಸರ್ವೇಶ್ವರಂಗೆ ||
ಜಯ ಜಯ ಮಂಗಳಂ || ಪದ ||

ಶ್ರೀಮದಗಣಿತಗುಣಸ್ತೋಮಂಗೆ ಸೋಮಂಗೆ ।
ಸೋಮಭೂಷಂಗೆ ಸೋಮಾಗ್ನಿರವಿನೇತ್ರಂಗೆ ।
ಕಾಮಜಿತಕಂಗಮೃತನಾಮಂಗೆ ಮೀಱಿವ ನಿಸ್ಸೀಮಂಗೆ ನಿಷ್ಕಾಮಿಗೆ ||
ಭೀಮಂಗೆ ಭರ್ಗಂಗೆ ಶಂಕರಂಗತಿ ಸರ್ವ್ವ ।
ನಾಮಂಗೆ ಅಭವಂಗೆ ರುದ್ರಂಗೆ ಅಮಯಂಗೆ ।
ನಂಮ್ಮ ಗೌರೀಮನಃಪ್ರೇಮಂಗೆ ಶ್ರುತಿವಿತತಿಗೇಯಂಗನಾಮಯಂಗೆ ||

*　　*　　*　　*

End :—

ಗಣದೊಳಾಧಾರ ಸ್ವಾಧಿಷ್ಠಾನ ಮಣಿಪೂರ ||
ಕನಹತ ವಿಶುದ್ಧಿಯಾ[ಗ್ನಿಯ] (ಜ್ಞಾ ಚಕ್ರಮೆಂದೆಂಬ)
ಗಣನೆಯಿಂ ನವಮಾಟದಿಂ ಮಾಟಕೂಟದ ಮೇಲೆ ತೊಳತೊಳಗುವ ||
ಅಣಿಯಂಗಗಣಿತಂಗೆ ಯೆಣೆಯಿಲ್ಲದಿಪ್ಪ ಚಿ ।
ನ್ಮಣಿಗೆ ದೇವರ ಶಿರೋಮಣಿಗೆ ಅಗ್ರಣಿಗೆ ಬಲು ||
ಗುಣಿಗೆ ನಿರ್ನೀತ ಸರ್ವಂಗೆ ಸರ್ವೇಶ್ವರಂಗೆ || ೮ ||

(ವಿ-ವಿ.)—

೮ ಪದ್ಯಗಳಿವೆ.

ಈ ಮಂಗಳಪದ್ಯಗಳು ಶಿವನ ಪರವಾಗಿವೆ.

No. 768. ಮಡಿವಾಳಯ್ಯನ ಸಾಂಗತ್ಯ.

MAḌIVĀḶAYYANA SĀṄGATYA.

Substance, palm-leaf. Size, $11\frac{1}{4} \times 1\frac{5}{16}$ inches. Pages, 44. Lines, 4 — 5 on a page. Character, Kannaḍa. Condition, injured. Appearance, old. Mode of writing, good.

Begins on fol. 84-*a* of the Ms. The other works herein are :—(1) Kirātārjunīya (Telugu) fol. 1-*a*. (2) Sītākalyāṇa fol. 50-*a* (Telugu).

Two Sandhis complete.

Describes the story of Maḍivāḷayya, a devotee of Śiva.

Beginning :—

ಶಿವಯೆನ್ನಿ ಶಿವಯೆನ್ನಿ ಶಿವ ಶರಣುಯೆನ್ನಿ । ಭವಸಾಗರವ ದಾಂಟುವರೆ ॥
ಶಿವನರಿಯದ ಮಾನವರು ನರಗುರಿಗಳು । ಭವಹರಿವುದು ಕೇಳಿ ಜನರು ॥ ೧ ॥
ಬಾಯಲ್ಲಿ ಮೂರು ಕಾಲಾರು ಮಸ್ತಕ ನವ । ಬಾಯಿ ನ್ರೊಂಬತ್ತು ಬಾಲವೆರಡು ॥
ಕೈಗಳೆ ನಾಲ್ಕು ಕಂಗಳು ಹದಿನೆಂಟವಗೆ । ವೈಯಿಕ್ಕಿ ನಾನೆರಗುವೆನು ॥
ಭವಿಯು ಬಿಜ್ಜಳನ ಕಪ್ಪಡವ ತೊಳೆಯಲೊಲ್ಲದೆ
ಅವಗಾಢದಾನೆಯು ಮುಱಿದಾ ॥
ಭುವನದೊಳಗೆ ಮಡಿವಾಳನ ಪ್ರತಾಪವ ।
ಶಿವಶರಣರು ಚಿತ್ತೈಸಿ ॥
ಪೊಡವಿಯೊಳಗೆ ಕಲ್ಯಾಣಪಟ್ಟಣದೊಳು
ಮೃಡನ ಶರಣರೊಪ್ಪುತಿಹರು ॥
ಕಡುಗಲಿ ವೀರಾವತಾರನ ಕಥೆಯನು ।
ಗಡಣ ಲಾಲಿಸಿ ಭಕ್ತಜನರು ॥

* * * *

End :—

ಮಲೆತ ದೂಷಕರ ಮುರಿದು ಮಡಿವಾಳಯ್ಯ ।
ಬಲುಹುಳ್ಳ ರಾಯಬಿಜ್ಜಳನಾ ॥
ನೆಲೆಗಾಣಿಸಿ ಪಟ್ಟಗಟ್ಟಿದ ಕಥೆಯಿದು ।
ಚಲುವನ ಚರಿತ್ರ ಸಂಪೂರ್ಣ ॥ ೫೪ ॥

* * * *

ಮಡಿವಾಳಯ್ಯನ ಕೃತಿಯು ಕೇಳ್ವವರೆಲ್ಲ ।
ಯಡಹಿ ಕಾಂಬರು ನಿಧಾನವನು ॥
ಮೃಡನು ವಲಿದು ಸಂಪದಗಳ ಕೊಡುವನು ।
ಬಿಡದೆ ಕೇಳದ ಭಕುತರಿಗೆ ॥
ಈಶಕಥೆಯನೋದಿ ಕೇಳ್ದರಿಗೆ ಪಾಪ ।
ನಾಶನವಹುದು ನಿಮುಷಕೆ (?) ॥
ಲೇಸಾಗಿ ಕೊಡುವ ಕೈಲಾಸ ಪದವಿಯನು ।
ಯೊಶನೊಲಿದು ಕರುಣದಲಿ ॥
ಬರೆದೋದಿದವರಿಗೆ ಪರಮ ಪದವನೀವ ।
ಹರುಷದಿಂದಲಿ ಕೇಳ್ವವರಿಗೆ ॥
ದುಗಿತವಿನಾಶಹ ನೆರೆ ಕರ್ಮ ಹರಿವುದು ।
ಶರಣನ ಕೃತಿಯು ಕೇಳ್ವರಿಗೆ ॥

Colophone :—

ಅಂತು ಸಂಧಿ ೨ ಕ್ಕೆ ಪದನು ೧೨೩ ಕ್ಕಂ ಮಂಗಳ ಮಹಾ ಶ್ರೀ ॥

(ಪಿ.ವಿ.)—

ಸಮಗ್ರ. ೨ ಸಂಧಿಗಳೂ ೧೨೩ ಪದ್ಯಗಳೂ ಇವೆ.

ಮಡಿವಾಳಯ್ಯನೆಂಬ ಶಿವಭಕ್ತನ ಕಥೆಯನ್ನು ಹೇಳುತ್ತದೆ.

No. 769. ಮಂತ್ರಗೋಪ್ಯ.

MANTRAGŌPYA.

Substance, palm-leaf. Size, $9\frac{7}{16} \times 1$ inch. Pages, 6. Lines, 4 on a page. Character, Kannada. Condition, much injured. Appearance, old. Mode of writing good.

Incomplete.

Describes the relation between Linga (Supreme soul) and Aṅga (body) according to the Vīraśaiva system. From the Colophon it appears that Prabhudeva is the author.

Beginning :—

ಹೃತ್ಕಮಲಕರ್ಣಿ . . ವಾಗಿರುತಿರ್ಪ ।
ಇಕ್ಕೆಹಕ್ಕೆಗಳ ತಾನೊಂದು ಮಾಡಿ ॥
ಸಿಕ್ಕಿಲ್ಲ ತೊಡಕಿಲ್ಲದಕ್ಕ ಜನಪಂಜರವ ।
ಮಿ . . . . . ಮೀಱಿಯೆ ನಿಂದ ಪರಮಯೋಗಿ ॥ ॥ ೧ ॥

ಕುಸುಮ । ಅಂಗಕಳೆ ಲಿಂಗದಲಿ। ಲಿಂಗಕಳೆಯಂಗದಲಿ ॥
ಅಂಗಲಿಂಗವು ಎಂಬವುಭಯದೊಳಗೆ ॥
ಮಂಗಳ ಮಹಾಬೆಳಗಿನಾ ಬೆಳಗಿನೊಳಗೆ
ಕಂಗಳೇ ಪ್ರಾಣವಾಗಿರುತಿರ್ದ್ದನು ॥ ॥ ೧೩ ॥

ನಿತ್ಯನಿಜದಾ ಬೆಳಗಿನಾ ಬೆಳಗಿನೊಳಗೆ ।
ಮುತ್ತುಮಾಣಿಕ್ಯನವರತ್ನದಲ್ಲಿ ॥
ಸುತ್ತಿರ್ದ ಅಮರಗಣತಿಂತಿಣಿಯನೇ ಕಂಡು ।
ನಿಶ್ಚಿಂತದಿಂದ ನಿಬ್ಬೆರಗಾದೆನು ॥

* * * *

End :—

ಮುಖಕಮಲಶಿಖರಸಿಂಹಾಸನಾಗ್ರದ ಮೇಲೆ ।
ಮಕರತೋರಣಾವರ ಕೆಲಕೆಲದಲಿ ॥
ಸಕಲಗಣತಿಂತಿಣಿಯು ।
ಜಯತು ಜಯತೆಂದೆನಲು ॥
ಸುಖಿ ಗುಹೇಶ್ವರಶರಣ ಸಿದ್ಧರಾಮ ॥

Colophon :—

ಪ್ರಭುದೇವರು ನಿರೂಪಿಸಿದ ಮಂತ್ರಗೋಪ್ಯ ಸಮಾಪ್ತ ।
ಮಂಗಳ ಮಹಾ ಶ್ರೀ ಶ್ರೀ ॥

(ವಿ-ವಿ.)—

ಸಮಗ್ರವಾದರೂ (ಅಂತ್ಯಭಾಗವಿದ್ದರೂ) ಆದಿಭಾಗವಿಲ್ಲ. ಕುಸುಮ ಷಟ್ಪದಿಯಲ್ಲಿದೆ. ೬೭ ಪದ್ಯಗಳಿವೆ.

ಪ್ರಭುದೇವರು ಗ್ರಂಥಕರ್ತರಾಗಿರಬೇಕೆಂದು ಸಮಾಪ್ತಿವಾಕ್ಯದಿಂದ ತಿಳಿಯುತ್ತದೆ. ಪ್ರಾಸಾದಿ ವಿಷಯಗಳನ್ನು ಗಮನಿಸಿಲ್ಲ. ಲಿಂಗಾಂಗ ಸಂಬಂಧವೇ ಮೊದಲಾದ ವಿಷಯಗಳನ್ನು ವಿವರಿಸುತ್ತವೆ.

No. 770. ಮಂತ್ರಗೋಪ್ಯ.

MANTRAGŌPYA.

Substance, palm-leaf. Size, 9½ × 1 inch. Pages, 2. Lines, 4 on a page. Character, Kannaḍa. Condition, very much injured. Appearance, old. Mode of writing, not bad.

Begins on fol. 44-*a* of the Ms. desribed under No. 286 ante, wherein this work has been omitted to be included in the list of other works.

Incomplete.

Similar to the work described above ; by Prabhudēva.

(ವಿ-ವಿ.)—

ಅಸಮಗ್ರ. ಒಂದೇ ಒಂದು ಓಲೆಯಿದೆ. ೩ ಪದಗಳಿವೆ. ಅವನ್ನಿಲ್ಲಿ ಉದ್ಧರಿಸಿ ಬರೆಯಲಾಗಿದೆ.

ರಾಮ ಕೇಳದ . ತ್ಮ . ರು ಕೇಳನುಭವ ಸಿದ್ಧ
ರಾಮ ಕೇಳಾನಂದದಿಂದ ನಿಜವ ॥
ಎಂಟೆಸಳ ಕಮಲದಾ ನವ ಬ್ರಹ್ಮಪುರದೊಳಗೆ ।
ಎಂಟು ಬೀದಿಯೊಳೆಂಟು ಕರಿಗಳುಂಟು ॥
ಎಂಟು ಕರಿಗಳ ಸುಟ್ಟು ಕಂಟಕಂಗಳ ಗೆಲಿದು ।
ದಾಂಟಿದನು ಸಂಸಾರಸಾಗರವನು ॥ ॥ ೧ ॥

ದಶವಾಹನಂಗಳಂದೆಸೆದು ದೀರೇಳ್ಭುವನ ।
ಅಸುರಪಡೆ ಅಱುವತ್ತ ಆಱುಕೋಟಿ ।
ರಸವಳಿದು ಬೇಳಾಗಿ ಬೆಂಡಾಗಿ ಸಂತೈಸಿ ।
ಸ . ಯ ಸ . . . . ದಿನದಲಿ ॥ ॥ ೨ ॥

ಐದು ಮುಖ ವೈದು ಕಳೆ ಯೈದು ಸಮರಸದಲ್ಲಿ
ನಾದ ಬಿಂದುವಿನ ಕಳೆ ಶಿವಕಳೆಯೊಳು ॥
ಎಯ್ದಿ ಅರಕ್ಷರದ . . ಐ ಪಳ . . . ।
ದಕವಪ್ಪ ನಿಜವಿಪ್ಪುದು ॥ ॥ ೩ ॥

ಅತ್ಯಂತ ಶಿಥಿಲವಾದುದು. ಲಿಪಿ ಸಾಮಾನ್ಯವಾಗಿದೆ. ಇದರೊಡನೆ ರಾಜನೀತಿ (ಭಾರತಾಂತರ್ಗತ), ಮೈದುನ ರಾಮಯ್ಯನ ರಗಳೆ, ಲಿಂಗಾರ್ಚನ ರಗಳೆ ಇವೂ ಇವೆ.

ಇದು ಪದ್ಯರೂಪವಾಗಿದೆ. ಈ ಗ್ರಂಥವು ಎಷ್ಟು ಭಾಗವುಳ್ಳುದೆಂಬುದು ತಿಳಿಯುವುದಿಲ್ಲ. ಹಿಂದೆ ವರ್ಣಿತವಾಗಿರುವ ಗ್ರಂಥದಲ್ಲಿರುವ ವಿಷಯವೇ ಇದಕ್ಕೂ ಉಕ್ತವಿಷಯವು. ಇದನ್ನು ಬರೆದವನು ಪ್ರಭುದೇವನೆಂಬುವನು. ಇವನ ಕಾಲವು ಸು. ೧೧೬೦ ಎಂದು ಕವಿಚರಿತ್ರಕಾರರ ಮತವು. ಈ ಬಗೆಗೆ ಉಳಿದ ವಿಷಯಗಳನ್ನು ಕವಿಚರಿತ್ರೆ (ಪ್ರಥಮ ಸಂಪುಟ) ಯನ್ನು ನೋಡಿ ತಿಳಿಯುವುದು.

No. 771. ಮಲ್ಲಿಕಾಮಾಲೆ.

MALLIKĀMĀLE.

Substance, palm-leaf. Size, $13\frac{3}{8} \times 1\frac{3}{8}$ inches. Pages, 6. Lines, 4 on a page. Character, Kannaḍa. Condition, much injured. Appearance, old. Mode of writing, good.

Complete.

Begins on fol. 35-*a* of the Ms. described under No. (Sanskrit D.) 6990.

Same work as that described under No. 640 ante.

Beginning :—

ಮಲ್ಲಿಕಾಮಾಲೆ ॥

ಇಂದ್ರ ಚಂದ್ರ ದಿನೇಂದ್ರ ಸರಸಿಜ ಸ್ಕಂದ ಮೊದಲಾದುಪೇಂದ್ರರು ॥
ಸಿಂಧುನಂದ ಮುನೀಂದ್ರ ನಿರ್ಜರ ವೃಂದ ಪೇದ್ಯಗಣೇಂದ್ರರು ॥
ಛಂದ ಛಂದದ ರುದ್ರಪ್ರಮಥರು ಕುಂದದೋಲೈಸಿಕೊಂಡಿಹ ॥
ಸಾಂದ್ರಮುಕ್ತಿ ಫಣೀಂದ್ರ ಕಂಕಣ ಚಂದ್ರಮಾಳಿಯನರ್ಚಿಪೆಂ ॥

*　　*　　*　　*

End :—

ಭಾವಿಪೊಡೆ ಕರುಣಾದಿಗುಣಗಳ ಗಾವಳಿ ಎಲ್ಲವನಿಲ್ಲಿಸಿ ॥
ಆವರಿಸುವ ಪ್ರಪಂಚವೆಲ್ಲವ ನೀಗಿ ನಿಚ್ಚ (ಕ್ಕ ?) ಲಚಿತ್ತದಿಂ ॥
ಓವಿದಷ್ಟವಿಧಾರ್ಚನೆಗಳನು ಭಾವನಿಜಸದ್ಭಕ್ತಿಯಿಂ ॥
ತೀವಿ ಶಾಂತಮಲ್ಲೇಶಸದ್ಗುರುದೇವನಂಘ್ರಿಯನರ್ಚಿಪೆಂ ॥ ॥ ೧೧ ॥

ಶಂಬು ಶಾಂತನು ಲಿಂಗಪೂಜೆಗೆ ಸಂಭ್ರಮದಿ ಮಲ್ಲಿಕಮಾಲೆಯಾ ॥
ನೆಂಬ ಪುಷ್ಪಕದಂಬವೃತ್ತವ ಕುಂಭಿನಿಯೊಳಾವನಾದೊಡಂ ॥
ಮುಂಬರಿದು ಬರೆದೋದಿ ಭಾವಿಸಿ ಬೆಂಬಿಡದೆ ಪಾಠಗೆಯ್ಯಲು ॥
ಅಂಬಿಕಾಶ್ರಯನೀವನವರಿಗೆ ಶಂಬರಾರಿಯ ಭಾಗ್ಯಮಂ ॥ (?)

Colophon :—

ಮಲ್ಲಿಕಾಮಾಲೆ ಸಮಸ್ತಂ (? ಮಾಪ್ತಂ) ಮಂಗಳ ಮಹಾ ॥

(ಪ-ಪ.)—

ಸಮಗ್ರ. "ಶಾಂತಮಲ್ಲೇಶ" ನೆಂಬ ಅಂಕಿತವು ಕಂಡುಬರುತ್ತದೆ. ಶಾಂತ ಅಥವಾ ಶಾಂತ ಮಲ್ಲನೆಂಬುವನು ಕರ್ತೃವಾಗಿದ್ದರೂ ಇರಬಹುದು. ಇದು ಹಿಂದೆ ೬೪೦ ನೆಯ ನಂಬರಿನಲ್ಲಿ ವರ್ಣಿತವಾದ ಗ್ರಂಥವೇ ಆಗಿದೆ.

No. 772. ಮಹಾದೇವನ ರಗಳೆ.

MAHĀDĒVANA RAGAḶE.

Substance, palm-leaf. Size, 13⅜ × 1⅛ inches. Pages, 6. Lines, 6 on a page. Character, Kannaḍa. Condition, injured. Appearance, old. Mode of writing, good.

Complete.

Begins on fol. 45-*a* of the Ms. described under No. (Sanskrit, D.) 6990..

Same work as that described under No. 644 ante with some slightly different readings.

Beginning :—

ಮಹಾದೇವನ ರಗಳೆ.

ಕಂದ ॥ ನರಜನ್ಮದ (? ವೆ)ಂಬುದತಿಶಯಾ ।
ಹರಭಕ್ತಿಯೊಳಧಿಕವಾದ ಅರಿವಾಗವಂ ॥
ಕರಭ್ರಾಂತನಾಗಿ ಪೋಗದೆ ।
ಪರಮನ ಕೀರ್ತಿಯನು ಮೆರೆದ ಗುರುವಿಶ್ವೇಶಂ ॥

ರಗಳೆ ॥ ಶ್ರೀಸಮಸ್ತಲೋಕಜೀವಭಾವಭರಿತ ಮಹಾದೇವ ।
ಈಶ ನೀನು ಭಕ್ತಿರವಿಯೊಳ್ಪರಶಿ ಬೆಳೆವೆ ಮಹಾದೇವ ॥
ಉಪಮತೀತನಗ್ರಗಣ್ಯ ಆದಿಲಿಂಗ ಮಹಾದೇವ ।
ಜಪತಪಕೆ ಮುಂದು ನೀನು ಮೂಲಮೂರ್ತಿ ಮಹಾದೇವ ॥

* * * *

End :—

ಮುನ್ನ ಹುಟ್ಟಿ ಜನ್ಮಪಾಪ ನಾಶ ಮಹದೇವ ॥
ಅನ್ಯಕೆಳಸದಂತೆ ಭಕ್ತಿದಯವು ಮಾಡು ಮಹಾದೇವ ॥
ಗುರುವಿನೊಲುಮೆಯಿಂದ ಹರನೆ ನಿಮ್ಮನರಿದೆ ಮಹಾದೇವ ।
ಪರಮತತ್ವಪದವನೆನಗೆ ಕರುಣಿಸಯ್ಯಾ ಮಹಾದೇವ ॥
ಗುರುವೆ ಪರವೆ ಶಿವನೆ ಶಿವನೆ ಹರನೆ ಹರನೆ ಮಹದೇವ ॥
ಜಯತು ಜಯತು ಮಹಾದೇವ ಜಯವು ಯೆನ್ನ ಮಹಾದೇವ ।

ಕಂದ ॥ ದೇವಾ ನಿಮ್ಮಯ ಮಹಿಮೆಯ ।
ನಾಮಸ್ಥಳವಿಟ್ಟು ಭವವ ಕಾಣಲ್ಬಹುದೆ ॥
ಆವಾವ ಮನಕೆ ಗೋಚರ ।
ದೇವಾ ರಕ್ಷಿಪ್ಪುದೆನ್ನ ಗುರು ವಿಶ್ವೇಶಂ (? ಶಾ) ॥

Colophon:—

ಮಹದೇವನ ರಗಳೆ ಸಮಾಪ್ತಂ ॥

(ವಿ-ವಿ·)—

ಸಮಗ್ರ ಹಿಂದೆ ವರ್ಣಿತವಾದ ಗ್ರಂಥವಾಗಿದೆ. D. No. 644 ನ್ನು ನೋಡುವುದು.

No. 773. ಮಾದೇಶ್ವರನ ಸಾಂಗತ್ಯ.

MĀDĒSVARANA SĀṄGATYA.

Substance, palm-leaf. Size, $8\frac{5}{8} \times 1\frac{3}{8}$ inches. Pages, 24. Lines, 4 to 6 on a page. Character, Kannaḍa. Condition, much injured. Appearance, old. Mode of writing, bad.

*In*complete.

Begins on fol. 1-*a*. of the Ms. The other work herein is Cōḷarājasāṅgatya fol. 13-*a*.

Gives an account of Mādēśvara, a devotee of Śiva. The author is Gurusiddhappa.

Beginning :—

ಶ್ರೀ ಗುರು ಸಿದ್ಧಲಿಂಗೇಶ ಮಹೇಶನೆ । ನಾಗರಶಯನನಮಿತ್ರನೆ ।
ಯೋಗೀಶ್ವರ ಜನಸಂಸ್ತ್ಯ ರೇವಣ . ಯ್ಯ । ಬೇಗ ಕೊಡೆನಗೆ ಮತಿಯನು ॥
ಮಂದರಗಿರಿಯ ನಿವಾಸ ಮಾದೇಶ್ವರ ಬಂದೆನ್ನ ಹೃದಯಾದಿ ನೆಲಸಿ ॥
ಚಂದ(ದೊಳೆನ್ನನೀಕ್ಷ) . . . . ತಿಉ ನು ಪೇಳೆಂದು ।
ವಿಂ(ಇಂ)ನು ಧರನು ಕೊಟ್ಟ ವ ವ

ಎಡದಲ್ಲಿ ವಿಷ್ಣು ಬಲದಲಿ ಬ್ರಹ್ಮನು ಮಿಗೆ। ನಡು ಹೃದಯದಲಿ . . ॥
ಸಡಗರದಿಂ ಪೆತ್ತ ಪರಶಿವ ನಡಸೆನ್ನ ದೃಡದಿಂದ ನಾನೀಗುವೆನು ॥
ದೇವರು ಮೂವರುಂಟೆಂಬರು ಲೋಕದ । ಗಾವಿಲಮನುಜರಱಿಯದೆ ॥
ದೇವನೊಬ್ಬನೆಯಲ್ಲವೆ ಮೂಜಗಕೆಂದು ಭಾವಿಸಿ ಶ್ರುತಿ ಸಾರುತಿಹುದು ॥

* * * *

ವಾಣಿ ಮೆಚ್ಚಿದಳು ಮುನ್ನಿನ ಕವಿಗಳಿಗೀಗ । ಮಾಣದೆ ಸವಿನುಡಿಯಿಂದ ॥
ಜಾಣೆ ಕೊಡೆನಗೆ ಮತಿಯ ಬೇಗ ಬ್ರಹ್ಮನ । ರಾಣಿಯನಾ ಬಲಗೊಂಬೆ ॥

* * * *

ಬಾಣ ಮಯೂರನುದ್ಭಟಕಾಳಿದಾಸರ । ಜಾಣನ ರಾಘವಾಂಕನನು ॥
ಕ್ಷೋಣಿಯೊಳಗೆ ಹರೀಶ್ವರಕವಿಯಂಘ್ರಿಗೆ । ಮಾಣದೆ ನಾನೆಱಗುವೆನು ॥
ಶಿವಕವಿಗಳ ಬಲಗೊಂಡು ಭುವನದೊಳು । ವಿವರಿಸಿದೆನು ಯೀ ಕೃತಿಯ ॥
ಭವಹರ ಮಾದೇಶ್ವರನ ಮಹಿಮೆಯನು । ತವೆ ಪೊಗಳ್ವಡೆ ಶೇಷಗರಿದು ॥
ವಿದ್ಯವ ಕಲಿಸಿ ಯೆನಗೆ ಮೇಲ್ಬುದ್ಧಿಯ । ಶುದ್ಧಾಂಗವಾಗಿ ಪೇಳುವರ ॥
ಇದ್ದಾದ[ಂವ್ರಚ] (? ಪಂಚ)ನೆ ಮಾಡದ ಭಕ್ತರಿ । ಗೆದ್ದು ವಂದಿಸಿ ಪೇಳುವೆನು ॥
ಹಲುಗೂರ ಅಕ್ಕನಾಲಯು ವೇ(ದೇ)ವಣ್ಣನು । ಸಲೆಸುತ ಗುರುಸಿದ್ಧನಿಗೆ ॥
ವಲಿದು ವರವ ಕೊಟ್ಟನು ಮಾದೇಶ್ವರ । ನಲಿದು ಪೇಳ್ದೆನೀ ಕತೆಯ ॥

* * * *

End :—

ಹೆಜ್ಜೆವಿಡಿಸು ಕಾಡೆಮ್ಮೆಯ ಹೊತಕೊಂಡು । ನಿಝ್ರ ರವಿಡಿದು ನಡೆದನು ॥

* * * *

(ವಿ-ಪ.)—

ಅಸಮಗ್ರ. ಆದಿಯಿಂದ ೯೬ ಪದ್ಯಗಳೂ ೯೩ ನೆಯ ಪದ್ಯದ ಅರ್ಧವೂ ಇವೆ. ಕವಿ ಗುರುಸಿದ್ಧಪ್ಪ ನೆಂಬುವನು.

No. 774. ಮೈದುನ ರಾಮಯ್ಯನ ರಗಳೆ.

MAIDUNA RĀMAYYANA RAGAḶE.

Substance, palm-leaf. Size, $6\frac{1}{4} \times 1\frac{3}{16}$ inches. Pages, 24. Lines, 7 on a page. Character, Kannaḍa. Condition, very much injured. Appearance, old.

Complete.

Begins on fol. 46-*a* of the manuscript described under No. 465 ante.

Describes the story of Maiduna Rāmayya, which runs as follows :— Seeing that all the boys of his age were inviting their sisters and brothers-in-law for the Dīpāvaḷi festival, Maiduna Rāmayya asked his mother why he should not also invite his sister and brother-in-law. Since Rāmayya had no sister, his mother told him that Pārvati was his sister and Paramēśwara his brother-in-law. Thereupon Maiduna Rāmayya went to Kailāsa, brought Pārvati and Paramēśvara and celebrated the Dīpāvaḷi festival.

Maiduna Rāmayya lived at Bhīmarati (? Bhīmāvātī). His parents were Sōmanātha and Mahādēvi. From the stanzas at the beginning

and at the end of the work, it appears that Śaṅkaradēva is the author.

Beginning :—

ಕಂ ॥ ಪುರಮಥನಂ ಪುಷ್ಪಾಯುಧ ।
ಹರನಂ ಕರಿವೈರಿ ಹರುಷದಿಂ ಮಿಗೆ ಮೆರೆದಂ ॥
ಶರಣಾಂ ಮೈದುನರಾಮನ ।
ವರಕಥನವ ಪೊಗಳ್ವೆ ನಮ್ಮ ಶಂಕರ ಲಿಂಗ ॥

ರಗಳೆ ॥ ಶ್ರೀಮದುತ್ತರದಿಶಾಭಾಗದೊಳಗೆಸೆದಿಹುದು ।
ಭೀಮರತಿಯೆಂಬ ನಗರಂ ಧರೆಗೆ ಮೆರೆದಿಹುದು ॥
ಅಲ್ಲಿರ್ಪನೊರ್ವ ಶರಣಂ ಶಂಕರಪ್ರೇಮಿ ।
ಬಲ್ಲಹಂ ಬ್ರಾಹ್ಮಣೋತ್ತಮನಧಿಕ ನಿಷ್ಕಾಮಿ ॥
ಸೋಮನಾಥಂ ತನಗೆ ಸತಿ ಮಹಾದೇವಿಯೆನೆ ।
ಭೂಮಿಯೊಳು ರಂಜಿಪುದು ಕಾಮಪಭಿರಾಮವೆನೆ ॥
ತಾವಿಬ್ಬರುಂ ಮಹಾಲಿಂಗಪದಸೇವಕರು ।
ಆವಗಂ ಶಿವಪುರಾಣಾರ್ಥರಸಭಾವಕರು ॥
ನಡೆವಲ್ಲಿ ನುಡಿವಲ್ಲಿ ಪಂಚಾಕ್ಷರೀ ಜಪಂ ।
ಉಡುವಲ್ಲಿ ತೊಡುವಲ್ಲಿ ಪಂಚಾಕ್ಷರೀಜಪಂ ॥
ತಮಗೆ ಕುಲದೈವ ರುದ್ರಾಕ್ಷೆ ಭಸಿತಂ ನೋಡ ॥
ತಮಗೆ ಮನೆ (ಗೃಹ) ದೈವ ಗುರುಲಿಂಗ ಜಂಗಮ ನೋಡ ॥

* * * *

ಈ ತೆರದೊಳೆಸೆವ ದಂಪತಿಗಳುದರದೊಳೊಂದು ।
ನೂತನಮಹಾರತ್ನ ಪುರುಷವುದಯಿಸಲಂದು ॥
ರಾಮನಾಥನ ನಾಮಕರಣಮಂ ಮಾಡುತಂ ।
ಪ್ರೇಮದಿಂ ಶರಣರೊಡನಾಡುತಂ ಪಾಡುತಂ ॥
ಇರೆ ಕೆಲವು ದಿವಸದಿಂ ಮೇಲೆ ಶಿವಲೋಕಕ್ಕೆ ।
ಭರದಿಂದ ಸೋಮನಾಥಂ [ಸಕರ] ಸಲಲು ನಿಮಿಷಕ್ಕೆ ॥
ಶರಣರ ಸಮಕ್ಷದಿಂದಾತನ ಶರೀರಮಂ ।
ಧರಣಿಯೊಳಗಿಂಬಿಟ್ಟು ಗೃಹದ ಭರಭಾರಮಂ ॥
ತಾನೆ ಧರಿಸಿವಳು ಮಹದೇವಿ ಅನುರಾಗದಿಂ ।
ಮಾನಿನಿ ಮಹಾದೇವಿ ಪತಿಯ ನಿಜಯೋಗದಿಂ ॥
ವರಧಾನ್ಯಮಂ ತಂದು ತನಯನಂ ಹೊರೆವುತಂ ।
ಹರುಷದಿಂ[ದ] ಲಿಂಗಪೂಜೆಗೆ ಮನಂ ಬೆರಸುತಂ ॥
ಇರೆ ಕೆಲವು ತರುವಕ್ಕಳೋದುತಿರೆ ಕಂಡಲ್ಲಿ ।
ತರುಣನಂ ತಂದೋದಕುಳ್ಳಿರಿಸಲಂತಲ್ಲಿ ॥
ಎಲ್ಲರಿಗೆ ಮುನ್ನವಕ್ಷರವಿದ್ಯೆಯಾಗುತಿರೆ ।
ಯೆಲ್ಲರಿಂದತಿ [ಬರೆಹ] ಬೇಗದಿಂ[ದಾಭರದಿ] ಬರೆಹವಾಗುತಿರೆ ॥

ಆಶ್ವಯುಜಶುದ್ಧಚತುರ್ದಶಿಯು ದಿನದಲ್ಲಿ ।
ಶಾಶ್ವತಂ ಹಿಂದ ಬರೆಯಲು ಬೇಕೆನುತ್ತಲ್ಲಿ ॥
ಬಂದೊಂದು ವೃಕ್ಷದಡಿಯಲಿ ಬಾಲಕರ್ನೆರೆದು ।
ಚಂದದಿಂದವರವರ ಹೆಸರುಗೊಳುತಂ ಕರೆದು ॥
ಬಂದುದಿನ್ನೇನು ಹದಿನೈದು ದಿನ ದೀವಳಿಗೆ ।
ಅಂದಿಗೆಮ್ಮಕ್ಕನಂ ಬಾವನಂ ಕರೆದಿಳಿಗೆ ॥
ಹೊಸತೆನಿಪ ಹಬ್ಬಮಂ ಮಾಡಬೇಕೆಂದೊಬ್ಬ ।
ಶಿಶು ನುಡಿಯೆ ಕಂಡವನ ಕಂಡವಂ ಮಗುದೊಬ್ಬ ॥
ಎಲ್ಲರುಂ ಅಕ್ಕನಂ ಬಾವನಂ ಕರೆವೆವೆನೆ ।
ಮೆಲ್ಲಮೆಲ್ಲನೆ ನುಡಿದರಾ ರಾಮನಂ ಚೋದ್ಯವೆನೆ ॥
ಎಮಗಕ್ಕನುಂ ಬಾವನುಮುಂಟು ಕರೆತಹೆವೆನಲು ।
ತಮತಮಗೆ ಮಕ್ಕಳೆಲ್ಲರು ನೆರೆದು ಭೋಂಕೆನಲು ॥

* * * *

ಅಕ್ಕನುಂ ಬಾವನುಂ ನಿನಗಿಲ್ಲವೆ ಮಗನೆ ।
ಮಕ್ಕಳರಿಯದೆ ನುಡಿದೊಡದಕೆ ನೋವುದೆ ಮಗನೆ ॥
ನಿಮ್ಮಕ್ಕನುಂ ಬಾವನುಂ ಜನನ ಮರಣಕ್ಕೆ ।
ಯೊಮ್ಮೆಯುಂ ಬಾರರೀ ನರರ ಮನದರಿತಕ್ಕೆ ॥

* * * *

ನಿಮ್ಮಕ್ಕ ಗೌರಿ ಬಾವಂ ಮಲ್ಲಿನಾಥನೆನೆ ।
ಯುಮ್ಮಳಿಕೆಯುಡುಗಿ ತಾಯ್ಪೇಳ್ದ ನಿಜವಾಕ್ಯವನೆ ॥
ಹೃದಯದೊಳಗಿಂಬಿಟ್ಟು ಸದನಮಂ ಪೊರಮಟ್ಟು ।
ಮದಮಾಯವುಂ ಸುಟ್ಟು ಶಿವಮೋಹಕೆಡೆಗೊಟ್ಟು ॥
ಜನನಿಗುಸುರದೆ ವ್ರೋದಿಪರ್ಗೆ ಪೇಳದೆ ಮರೆದು ।
ಮನೆಯನೆಣಿಸದೆ ತನ್ನ ದೇಹಸುಖವಂ ಮರೆದು ॥
ಪುರವ ಹೊರವಂಟು ದಕ್ಷಿಣದಿಶಾಮುಖನಾಗಿ ।
ಹರಷದಿಂ ಪರ್ವತಾಶ್ರಮಕಮಭಿಮುಖನಾಗಿ ।
ಮಲ್ಲಬಾವ ! ಮಲ್ಲಭಾವಾ । ಬಾರೈ ಬಾವ ॥
ಎಲ್ಲ ದೇವರಿಗೆ ವಲ್ಲಭನೆ ಬಾರೈ ಬಾವ ॥

* * * *

ಮಡದಿ ಕೇಳೆಲೆ ಗಿರಿಜೆ ವೇದಶಾಸ್ತ್ರಗಳರಸಿ ।
ಕಡೆಯ ಕಾಣವು ನಿಮ್ಮನಿನಿತು ಕಾಲಂ ಭಜಿಸಿ ॥
ಇವನ ಬೈಗುಳು ನಮಗೆ ಸ್ತೋತ್ರ ಕರಿಮುಖನಾಣೆ ।
ಯಿವನ ನಿಂದೆಯು ಸರ್ವಪೂಜೆ ಗಣಕುಲದಾಣೆ ॥
ಎಂದು ನಂದೀಶಾದಿಪ್ರಮಥರೊಳು ಪುರಹರಂ ।
ಚಂದದಿಂ ಬೆಸಸುತಂ ವಂದ್ಯಗಿರಿಜಾವರಂ ॥

ವಿಳು ಮೈದುನರಾಮ ಪುಷ್ಪಕವನೇರೆನಲು ।
ಲೀಲೆಯಿಂ ನುಡಿದನಾ ಪ್ರಮಥಗಣವರಿದೆನಲು ॥
ಎಮ್ಮಕ್ಕ (ನ) ಸಹಿತ ನೀವೆಮ್ಮ ಪುರಕೆಯ್ತಂದು ।
ಸುಮ್ಮಾನದಿಂ ಪ್ರಮಥನಿಕರ ಸಹಿತಂ ಬಂದು ॥
ಎಮ್ಮವ್ವೆಯುಂ ನೋಡಿ ದೀವಳಿಗೆಯುಂ ಮಾಡಿ ।
ನಿಮ್ಮ ಕೈಲಾಸಕ್ಕೆ ಹೋಹುದೆ ನಡೆ ನೋಡಿ ॥
ಸಕಲಗಣಸಹಿತಮಭಿಮುಖನಾಗಿ ಯೈತಂದು ।
ಸುಕರದಿಂ ರಾಮನಂ ಮುಂದೆ ಕಳುಪಲು ಬಂದು ॥

End :—

ಜನನಿಯಾಡಿದ ನುಡಿಗೆ ಮನವ ನಿಲಿಸಿದರುಂಟೆ ।
ಯೆನಗೆ ಮೈದುನನಾಗಿ ಹಳದು ನುಡಿದವರುಂಟೆ ॥
ಗಣಕುಲಕೆ ನಮಗೆ ಹಬ್ಬವ ಮಾಡಿದವರುಂಟೆ ।
ಯುಣಲುಡಲು ಕೊಟ್ಟೆಮ್ಮ ಮನವ ದಣಿಸಿದರುಂಟೆ ॥
ತವರುಮನೆಯಾಯ್ತೆಮಗೆ ಹೊಗುಮನೆಯುಯೆಮಗಾಯ್ತು ।
ಪ್ರಮಥರಿಗೆ ನೋಡಿ ಹರುಷವನೆಯ್ದುವಂತಾಯ್ತು ॥
ಭಾಪು ! ಮೈದುನರಾಮ ಪೂತು ! ಮೈದುನರಾಮ ।
ಭಾಪು ! ಮಝು ! ಭಾಪು ! ಮಝು ! ಭಾಪು ! ಮೈದುನರಾಮ ।
ಎಂದು ಕೊಂಡಾಡುತಂ ನೋಡಿ ಮುಂಡಾಡುತಂ ।
ಸಂದ ಗಣಕುಲದೊಳಗೆ ಒಲಿದು ಕೊಂಡಾಡುತಂ ॥
ಜನನಿಗಂ ತನಯಗಂ ಗಣಪದವಿಯುಂ ಕೊಟ್ಟು ।
ಅನುಪಮ ಸುಖಾಗಾರದೊಳಗವರನಿಂಬಿಟ್ಟು ॥
ದೇವ ನೊಪ್ಪಿದ ಮಹಾದೇವನಿಧಿಯೊಪ್ಪಿದಂ ॥
ಯಿಾವನೊಪ್ಪಿದ ಜಗವ ಕಾವ ಸುಧೆಯೊಪ್ಪಿದಂ ॥
ಪಂಚಮುಖನೊಪ್ಪಿದಂ ಫಣಿಕಟಕನೊಪ್ಪಿದಂ ।
ಪಂಚೇಂದ್ರಿಯಾದಿವಿಷಯಾತೀತನೊಪ್ಪಿದಂ ।
ಪುರಮಥನನೊಪ್ಪಿದಂ ವರಕಥನನೊಪ್ಪಿದಂ ।
ಪರಮ ಪ್ರಸನ್ನ ಶಂಕರಲಿಂಗ ನೊಪ್ಪಿದಂ ॥

ಕಂ ॥ ಒಲವಿಂ ಮೈದುನ ರಾಮನ ।
ಛಲ ಪದವುಂ ಭಕ್ತಿನಿಷ್ಠೆಯುಂ ನಿಜದಿಂ[ದಂ] ನಿ
ರ್ಮಲಮುಕ್ತಿಯನೆನಗಂ ಕುಡು ।
ಸಲೆ ಭವಭವದೊಳ್ ಪ್ರಸನ್ನಶಂಕರಲಿಂಗಾ ॥

Colophon :—

ಮೈದುನ ರಾಮಯ್ಯನ ರಗಳೆ ಸಮಾಪ್ತಂ.

(ವಿ-ವಿ.)—

ಸಮಗ್ರವಾಗಿದೆ. ಅತ್ಯಂತ ಶಿಥಿಲವಾಗಿದೆ. ಲಿಪಿ ಉತ್ತಮವಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಅವಾವುವೆಂಬುದನ್ನು 465 ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ರಗಳೆಯಲ್ಲಿ ಬರೆದಿದೆ. ಗ್ರಂಥದಾದ್ಯಂತ್ಯಗಳಲ್ಲಿ ಒಂದೊಂದು ಕಂದಪದ್ಯವಿದೆ. ದೀಪಾವಳಿಗೆ ಹುಡುಗರೆಲ್ಲ ತಮ್ಮ ತಮ್ಮ ಅಕ್ಕಬಾವಂದಿರನ್ನು ಕರೆತರುವುದನ್ನು ತಿಳಿದು ತಾನೂ ತನ್ನ ಅಕ್ಕ ಬಾವಂದಿರನ್ನು ಕರೆತರಬೇಕೆಂದು ಮೈದುನ ರಾಮಯ್ಯನು ತನ್ನ ತಾಯಿಯನ್ನು ಕೇಳಲು, ಆಕೆಯು ಆತನಿಗೆ ಪಾರ್ವತೀ ಪರಮೇಶ್ವರರೇ ಅಕ್ಕಬಾವಂದಿರು ಎಂದು ಹೇಳಲಾಗಿ ರಾಮನು ಕೈಲಾಸಕ್ಕೆ ಹೋಗಿ ಪಾರ್ವತಿಯನ್ನೂ ಶಂಕರನನ್ನೂ ಕರೆದುಕೊಂಡು ಬಂದು ಹಬ್ಬವನ್ನು ನಡೆಸಿಸುವನೆಂಬುದೇ ಕಥಾಸಾರವು. ಪರಮೇಶ್ವರನನ್ನು ಈತನು ಬಾವನನ್ನಾಗಿ ಮಾಡಿಕೊಂಡುದರಿಂದ ಇವನಿಗೆ ಮೈದುನರಾಮಯ್ಯನೆಂದು ಹೆಸರಾಯಿತು. ಇವನ ತಂದೆ ಸೋಮನಾಥ, ತಾಯಿ ಮಹಾದೇವಿ. ಊರು ಭೀಮರತಿ (ಭೀಮಾವತಿ, ಇನ್ನೊಂದು ಪುಸ್ತಕದಲ್ಲಿ). ಈ ವಿಷಯಗಳಿಗಾಗಿ ಉದಾಹೃತಭಾಗಗಳನ್ನು ನೋಡುವುದು. ಗ್ರಂಥಾಂದ್ಯಂತ್ಯ ಪದ್ಯಗಳಲ್ಲಿ 'ಪ್ರಸನ್ನ ಶಂಕರಲಿಂಗ' ಎಂದು ಅಂಕಿತವಿರುವುದರಿಂದ ಕವಿ ಶಂಕರದೇವನಾಗಿರಬಹುದು.

No. **775.** ಮೈದುನ ರಾಮಯ್ಯನ ರಗಳೆ-

MAIDUNA RĀMAYYANA RAGAḶE.

Substance, paper. Size, $10\frac{9}{16} \times 9\frac{1}{2}$ inches. Pages, 9. Lines, 20 on a page. Character, Kannaḍa. Condition, fair. Appearance, new.

Begins on page 129 of the manuscript described under No. 457 ante. This is a copy of the manuscript described under the next number (776).

Incomplete.

(ವಿ-ವಿ.) --

ಇದು ಅಸಮಗ್ರ. ಕಾಗದದ ಪ್ರತಿ. ಮುಂದಣ ೭೭೬ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿರುವುದು. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಕೂಡಿವೆ. ಆ ವಿಷಯವಾಗಿ ೪೫೭ ನೆಯ ನಂಬರಿನಲ್ಲಿ ನೋಡುವುದು.

No. **776.** ಮೈದುನ ರಾಮಯ್ಯನ ರಗಳೆ-

MAIDUNA RĀMAYYANA RAGAḶE.

Substance, palm-leaf. Size, $14\frac{5}{16} \times 1\frac{7}{16}$ inches. Pages, 10. Lines, 6 on a page. Character, Kannaḍa. Condition, much injured. Appearance, old.

Begins on fol. 77-*a* of the manuscript described under No. 456 ante. Incomplete. Wants the last portion only. Otherwise complete.

Same work as that described under No. 774 ante.

(ವಿ-ವಿ.)—

ಅಸಮಗ್ರ. ಕೊನೆಯಲ್ಲಿ ಸ್ವಲ್ಪಮಾತ್ರ ಹೋಗಿದೆ. ಅತಿ ಶಿಥಿಲವಾದ ಪ್ರತಿ. ಇದಕ್ಕೂ ಇತರ ಪ್ರತಿಗಳಿಗೂ ಹೆಚ್ಚು ಪಾಠಾಂತರವಿರುವಂತಿದೆ. ಇದರೊಡನೆ ಇನ್ನೂ ಅನೇಕ ಪುಸ್ತಕಗಳಿವೆ. ಆ ಬಗೆಗೆ ೪೫೬ ನೆಯ ನಂಬರನ್ನು ನೋಡುವುದು.

ಇದು ಹಿಂದೆ ೭೭೪ ಯ ನಂಬರಿನಲ್ಲಿ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 777. ಮೈದುನ ರಾಮಯ್ಯನ ರಗಳೆ.

MAIDUNA RĀMAYYANA RAGAḶE.

Substance, palm-leaf. Size, 9½ × 1 inch. Pages, 8. Lines, 4 on a page. Character, Kannaḍa. Condition, very much injured. Appearance, old. Mode of writing, not bad.

Begins on fol. 31-*a* of the manuscript described under No. 286 ante. Incomplete.

Same work as that described above.

(ವಿ-ವಿ.)—

ಅಸಮಗ್ರ. ಆದಿಯ ಕೆಲವು ಪದ್ಯಗಳೂ ಅಂತ್ಯದ ಕೆಲವು ಪದ್ಯಗಳೂ ಇವೆ. (ಆದ್ಯಂತ ಭಾಗಗಳವೆ). ನಡುವೆ ತುಂಬಾ ಹೋಗಿದೆ. ೪ ಓಲೆಗಳು ಮಾತ್ರವೇ ಇವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಇದರೊಡನೆ ರಾಜನೀತಿ (ಭಾರತಾಂತರ್ಗತ), ಲಿಂಗಾರ್ಚನರಗಳೆ, ಪ್ರಭುದೇವರ ಮಂತ್ರಗೋಪ್ಯ ಇವೂ ಇವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 778. ಮೈದುನ ರಾಮಯ್ಯನ ಸುವ್ವಿ.

MAIDUNA RĀMAYYANA SUVVI.

Substance, palm-leaf. Size, 8 × 1$\frac{1}{16}$ inches. Pages, 146. Lines, 4 on a page. Character, Kannaḍa. Condition. very much injured. Appearance, old. Mode of writing, not good.

Complete in 2 sandhis.

Similar to the work described above.

Beginning :—

ತ್ರಿಪದಿ॥ ಶ್ರೀಪುರುಷ ಪಾವನ ಶ್ರೀಪತಿನಯನ
ಶ್ರೀಪುಣ್ಯನಿಧಿಯ ಧರಿಸಿದ ಪರಮೇಶ್ವರನ
ಶ್ರೀಪಾದಕೆ ಶರಣೆಂಬೆ ॥

* * *

ಮೇದಿನಿಯೊಳ್ . ಮೆಗಿದ ಗೌರಮ್ಮನ
ಭೇದಿಸಿ ರಾಮ ಕರೆತಂದು ಕೈಲಾಸಕೆ ಯೆಲ್ಲರು
ಹೋದ ಕಥೆಕೇಳೆ ॥
ಉತ್ತರ ದೇಶದಲಿ ಉತ್ತಮ ಪುರವುಂಟು
ಮರ್ತ್ಯಕೆ . . . . ಗಳಸವು ಭೀಮಾವತಿಯ
ಪು . ಲಯ ಪು . ದಧೀಶರೆಂತೊ ॥
ಭೀಮವತಿಯೆಂಬ ಪಟ್ಟಣದೊಳೊಬ್ಬ
ಬ್ರಾಹ್ಮಣಗೊ . ದ ಶಿವಭಕ್ತ ಸೋಮಯ್ಯನಿಗೆ
ಪ್ರೇಮದ ಸತಿಯು ಮಹಾದೇವಿ ॥

ಅರಸಿ ಮಹಾದೇವಿಗೆ ಘರುಷ ಸೋಮಯ್ಯನು
ಹರುಷದಿಂದೊಬ್ಬ ಮಗನುಂಟು ರಾಮಯ್ಯ ರಾಮಯ್ಯ . ಡೆ ॥
ದರು ಧರ್ಮದ ಶಿವನಿಗೆ ॥

* * * *

ಬಂದು . . . . . ವರು ಯೆಡಬಲದಲಿ
ವಂದನೆಯ ಮಾಡಿ ಕೊಳುತ . . . . ಯೆಂಬಲ್ಲಿಗೆ
ಸಂಧಿ . . . . ॥

Colophon :—

ಪ್ರಥಮಸಂಧಿ ಸಮಾಪ್ತಂ.

End :—

ಅಲ್ಲಿಗಲಿಗೆ ಪದನು ಚೆಲ್ಲಿದ . . ದೊ ಚೆನ್ನ
ಮಲ್ಲಿಕಾರ್ಜುನಕೃಪೆಯಿಂದ ಕೈಲಾಸವೆಂ ॥
ಬಲ್ಲಿಗೆ ಸಂಧಿ ಪೂರಾಯ ॥

Colophon :—

ಉಭಯ ಸಂಧಿ ೨ ಕ್ಕಂ ಪದನು ೪೫೧ ಕ್ಕಂ ಸಂಪೂರ್ಣಂ.

(ವಿ.ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿಲ್ಲ.

ಇದು ತ್ರಿಪದಿಯಲ್ಲಿ ಬರೆದಂತೆ ತೋರುತ್ತದೆ. ಸಂಧಿಗಳು ೨. ಪದ್ಯಗಳು ೪೫೧. ಹಿಂದಣ ನಂಬರುಗಳಲ್ಲಿ ಉಕ್ತವಾಗಿರುವ ಮೈದುನ ರಾಮಯ್ಯನ ಕಥೆಯೇ ಇದಕ್ಕೂ ವಿಷಯವಾದುದು.

No. 779. ರುದ್ರ ಟೀಕೆ.

RUDRA ṬĪKE.

Substance, Śrītāla. Size, 13⅛ × 2⅝ inches. Pages, 16. Lines, 16 on a page. Character, Kannaḍa. Condition, injured. Appearance, old. Mode of writing, good.

Complete.

Begins on fol. 24-a of the Ms. described under Sanskrit D. No. 125.

Same work as that described under No. 125 of the Sanskrit Descriptive Catalogue. The author is Saṅgana Cennavīra, son of Guruliṅganandi.

Beginning :—

ಶ್ರೀರುದ್ರದ ಟೀಕು.

ಶ್ರೀಯಾಗಂಟೀಶ ಶರಭಂ ನತ್ವಾ ನಂಬ್ಯಣ್ಣ ದೇಶಿಕಂ ॥
ಸಂಗಣ್ಣ ಚೆನ್ನವೀರಃ ಶ್ರೀರುದ್ರಟೀಕಾಂ ಕರೋಮ್ಯಹಂ ॥

ಅವತಾರಿಕೆ ॥ ಆದಿಯಲ್ಲಿ ವಿಷ್ಣುಮಾಯೆಯಲ್ಲಿ ಶಿವಂ ತನ್ನ ಸುವರ್ಣರೇತಮಂ ಬಿತ್ತಲದು ಹಿರಣ್ಯಾಂಡವಾಯ್ತು. ಅದರಲ್ಲಿ ಪಂಚಮುಖದ ಬ್ರಹ್ಮಪುಟ್ಟಿ ಸೃಷ್ಟಿಯಂ ಮಾಡುವಿಚ್ಛೆಯಿಂ

ತಪವನೆಸಗಲಾತಂಗೆ ಶಿವಂ ಮೆಚ್ಚಿ ತನ್ನ ವಾಮಭಾಗದ ಶಕ್ತ್ಯಂಶಮಂ ಪಾರಿಸಲದಂನೆಲದ ಮೇಲೆ ಬರದು ಜೀವಮಂ ಕೂಡಲದೆ ಸರಸ್ವತಿಯಾದಳ್. ಆವಳಂ ರಮಿಸುವೆನೆಂದು ಬರಲವಳ್ ಮೃಗಿಯಾಗಿ ತಂದೆಯಂ ರಮಿಸಿಕೊಳ್ಳಲೊಲ್ಲದೆ ಯೋಡುತ್ತಿರಲವಂ ಮೃಗನಾಗಿ ಬೆಂಬತ್ತೆ ಮೃಗಿ ಶಿವನಂ ಸ್ತುತಿಸೆ ಶಿವಂ ಕಿರಾತನಾಗಿ ಬಂದು ಮೃಗವಂ ಚಕ್ರಬಾಣದಿಂ ಶಿರವಂ ಹರಿಯಲೆಸೆಯಲಾ ಶಿರಂ ತಿರುಗುತ್ತೆ ಶಿವನಂ ಶಿವನ ಕೋಪಮಂ ಶಿವನ ಆಯುಧಂಗಳಂ ಶಿವನ ಲೀಲೆಗಳಂ ಶಿವನ ಗುಣಂಗಳಂ ಪೊಗಳಿ ಪುನಃ ಪಂಚಮುಖ ಬ್ರಹ್ಮತ್ವಮಂ ಪಡೆದು ಸರಸ್ವತಿಯಂ ಸತಿಯಾಗಿ ಪಡೆದು (?) ಸೃಷ್ಟಿಕರ್ತನಾದನೆಂದು ಲೈಂಗ್ಯದೊಳ್ಪೇಳ್ದುದಾ ಪ್ರಸ್ತಾವದಲ್ಲಿ ಪುಟ್ಟಿದ ರುದ್ರಮಂ ಜಪಿಸಲ್ ಭುಕ್ತಿಮುಕ್ತಿಯಹುದು.

ಬ್ರಹ್ಮಾ ಉವಾಚ=ಬ್ರಹ್ಮನುಡಿದನು ।
ಓಂ ನಮಸ್ತೇ ರುದ್ರಮನ್ಯವ ಉತೋ ತ ಇಷವೇ ನಮಃ ।
ನಮಸ್ತೇ ಅಸ್ತುಧನ್ವನೇ ಬಾಹುಭ್ಯಾಮುತ ತೇ ನಮಃ ॥

ಟೀ ॥ ಓಂ, ಮಂಗಲ ಸ್ವರೂಪನಾದ । ರುದ್ರ, ಎಲೆ ಶಿವನೆ । ತೇ, ನಿನ್ನ । ಮನ್ಯವೇ, ಕೋಪಕ್ಕೆ । ನಮಃ, ಶರಣಾರ್ತಿ ॥ ಉತ, ಮತ್ತೆ । ತೇ, ನಿನ್ನ । ಇಷವೇ, ಅಂಬಿಂಗೆ । ನಮಃ, ಶರಣಾರ್ತಿ ॥ ಉತ, ಮತ್ತೆ । ತೇ, ನಿನ್ನ । ಧನ್ವನೇ, ಬಿಲ್ಗೆ ॥ ನಮಃ, ಶರಣಾರ್ತಿ। ಉತ, ಮತ್ತೆ । ತೇ, ನಿನ್ನ । ಬಾಹುಭ್ಯಾಂ, ತೋಳ್ಗಳ್ಗೆ । ನಮಃ, ಶರಣಾರ್ತಿ । ಅಸ್ತು, ಆಗಲಿ ॥

* * * *

End :—

ಯಶ್ಚನೋ ದ್ವೇಷ್ಟಿ ತಂ ವೋ ಜಂಭೇ ದಧಾಮಿ ॥

ಟೀ॥ ಯಃ, ಆವನೊಬ್ಬನು। ವಃ, ಎಲೆಗಣಂಗಳಿರಾ ನಿಮ್ಮನು । ನಃ ಚ, ಎಮ್ಮನು। ದ್ವೇಷ್ಟಿ, ಮತ್ಸರಿಸುವನೋ । ತಂ, ಆತನನ್ನು । ಜಂಭೇ, ಕೊಂದಪೆವು । ದಧಾಮಿ, ತಿಂಪೆವು ॥

ಓಂಶಾಂತಿಃ ಶಾಂತಿಃ ಸರ್ವ್ವಶಾಂತಿರಸ್ತು ॥

ಟೀ ॥ ಈ ರುದ್ರಟೀಕಾಮೂಲವಂ ಬರೆದರ್ಗೆ ಪಠಿಸಿದರ್ಗೆ ಕೇಳ್ದರ್ಗೆ ತ್ರಿವಾಚಾ ಸರ್ವಶಾಂತಿಯಾಗಲಿ ಯೆಂಬ ಯಜುರ್ವೇದ ಪುರುಷನ ಆಶೀರ್ವಾದವು ॥

Colophon :—

ಶ್ರೀಮದ್ಯಾಗಂಟೇಶ್ವರ [ ] (ಶರ)ಭೇಶ್ವರಾವತಾರಾತ್ರೇಯಶಿವಲೆಂಕಮಂಚನಪಂಡಿತಾರಾಧ್ಯಾನ್ವಯಕೆ ಕೋಕಿಲಾಕುಂಜ ಪುರಮಠ ಸಂಗನ ಗುರುಲಿಂಗನಂದ್ಯಂಬಾತನ ತನಯ ಚೆನ್ನಂನವೀರದೇವಕೃತಾ ಶ್ರೀರುದ್ರ ಕರ್ಣಾಟ ಟೀಕಾ ಲೇಖಕಪಾಠಕಯೋರ್ಭದ್ರಂ ಕ್ರಿಯಾತ್ ॥ ಶ್ರೀರುದ್ರಟೀಕು ಸಮಾಪ್ತ । ಮಂಗಳ ಮಹಾ ॥

(ವಿ-ವಿ.)—

ಸಮಗ್ರ “ಸಂಸ್ಕೃತ ಡಿಸ್ಕ್ರಿಪ್ಟಿವ್ ಕ್ಯಾಟಲಾಗ್”ನ ೧೦೫೫ನೆಯ ನಂಬರಿನಲ್ಲಿ ವರ್ಣಿತವಾದುದಾಗಿದೆ. ಆದರೆ ಅಲ್ಲಿ ಕೊಟ್ಟಿರುವ ಭಾಗಗಳು ತಪ್ಪುತಪ್ಪಾಗಿ ಇರುತ್ತಿದ್ದುದರಿಂದ ಇಲ್ಲಿ ಪುನಃ ವರ್ಣಿಸಿದುದಾಗಿದೆ ॥ ಅಂತ್ಯದಲ್ಲಿ ಚಮಕ ಟೀಕೆಯೂ ಗಾಯತ್ರೀಮಂತ್ರವೂ ಇದೆ.

ಸಂಗನ ಚೆನ್ನವೀರನೆಂಬುವನು ಈ ಗ್ರಂಥಕರ್ತನು. ಇವನು ವೀರಶೈವಮತದವನು. “ಗುರುಲಿಂಗನಂದಿ” ಯೆಂಬವನ ಮಗನು.

No. 780. ರುದ್ರಭಾರತ.

RUDRABHĀRATA.

Substance, paper. Size, 8⅜ × 5⅜ inches. Pages, 103. Lines, 18 to 21 on a page. Character, Kannaḍa. Condition, very much injured. Appearance, old.

Complete.

In the form of a conversation between Nandi and Paraśiva, this work describes the incarnation of Trimūrtis (Brahma, Viṣṇu and Śiva), the creation of the Universe, the nature of the innumerable souls, details about the four castes and sub-castes, the greatness of the Vīraśaiva system, etc.

Beginning :—

ಶ್ರೀಪರಶಿವಮೂರ್ತಿಯು ಸಿಂಹಾಸನಾರೂಢನಾಗಿದ್ದ ಸಮಯದಲ್ಲಿ ಹರಿಹರಬ್ರಹ್ಮಾದಿ ದೇವತೆಗಳು ಓಲೈಸುವಲ್ಲಿ ನಂದಿನಾಥದೇವರು ಆ ಪರಶಿವನಿಗೆ ನಮಸ್ಕಾರವನ್ನು ಮಾಡಿ ಭಯ ಭಕ್ತಿಯಿಂದ ಬಿ[ನ್ನೈ ಸಿ] (ನ್ನವಿ) ಸುತ್ತಿದ್ದಾನದೆಂತೆಂದೊಡೆ—ದೇವ ದೇವ ! ಶ್ರೀರುದ್ರಭಾರತ ದಲ್ಲಿ ಮೂಲತತ್ವ ಹೇಗೆ ಉತ್ಪತ್ತಿಯಾಯಿತು ? ಸರ್ವಮೂಲಬೀಜಾಂಕುರಗಳು ಹೇಗೆ 'ಜನಿ ಸಿದುವು ? ಪಂಚತತ್ವಾಕ್ಷರಂಗಳು ಹೇಗೆ ನಿರ್ಮಿತವಾದುವು ಪಂಚಾಕ್ಷರಂಗಳು ಹೇಗೆ ಉದಯ ವಾದುವು ? ಅವರವರಭಿಧಾನಾಕ್ಷರಂಗಳು ಹೇಗೆ ಆಕರವಾದುವು ? ಮತ್ತಮದಲ್ಲದೆ ಬ್ರಹ್ಮಾಂಡ [ಅಜಾಂಡ]ಗಳು ಹೇಗೆ ಸೃಷ್ಟಿಯಾದುವು ?

End :—

ಭರತಖಂಡ, ರಸಖಂಡ, ಹೇಮಖಂಡ, ವನಮಾಲೆಖಂಡ, ಮುಕ್ತಿಮೂಲಖಂಡ, ಶಿವಭಕ್ತ ಮೂಲಖಂಡ, ಕುಂಡಲಖಂಡ, ರತ್ನಮೂಲಖಂಡ, ಅಮೂಲಖಂಡ, ಇಂತು ಯಿೞ ನವಖಂಡ ಒಂ ದೊಂದು ಎಷ್ಟೆಷ್ಟು ಅಂತರಯೋಜನವೆಂದರೆ ಹದಿನಾಲ್ಕು ಹದಿನಾಲ್ಕು ಸಾವಿರಯೋಜನದಂತ ರವು. ಇಂತೀ ವೊಂಬತ್ತು ಹದಿನಾಲ್ಕರೊಳಗೆ ಒಂದು ಸಾವಿರ ಕಡಮೆಯಾಗಿ ಸವಲಕ್ಷಗಾವುದ ಜಂಬೂದ್ವೀಪವು.

Colophon :—

ಅಂತು ಶ್ರೀರುದ್ರಭಾರತ ಸಮಾಪ್ತಂ.

(ವಿ-ವಿ.)—

ಸಮಗ್ರ. ಕಾಗದದ ಪ್ರತಿ. ಅತ್ಯಂತ ಶಿಥಿಲವಾಗಿದೆ. ಲಿಪಿ ಸಾಮಾನ್ಯ. ಮುಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿ ಇದರ ಪ್ರತಿಕೃತಿಯಾಗಿದೆ.

ಇದು ಗದ್ಯದಲ್ಲಿ ಬರೆದಿದೆ. ನಡುವೆ ಶ್ಲೋಕಗಳೂ ಇವೆ. ಇದರಲ್ಲಿ ತ್ರಿಮೂರ್ತಿಗಳ ಅವತಾರ, ಮುಂತಾದುವು, ಜಲಪ್ರಳಯ, ಬ್ರಹ್ಮಾಂಡೋತ್ಪತ್ತಿ, ೮೪ ಲಕ್ಷ ಜೀವರಾಶಿಗಳ ವಿವರ, ಚಾತುರ್ವರ್ಣ್ಯವಿವರ, ಇವುಗಳನಂತರ ಜಾತಿವಿವರ ಈ ಮುಂತಾದುವುಗಳ ನಿರೂಪಣದೊಡನೆ ಇತರ ಮತಗಳಿಗಿಂತ ವೀರಶೈವಮತದ ಹೆಮ್ಮೆಯು ನಂದಿಪರಶಿವಪ್ರಶ್ನೋತ್ತರ ರೂಪದಲ್ಲಿ ಉಕ್ತವಾಗಿದೆ.

No. 781. ರುದ್ರಭಾರತ.

RUDRABHĀRATA.

Substance, paper. Size, $10\frac{7}{16} \times 9\frac{1}{2}$ inches. Pages, 118. Lines, 20 on a page. Character, Kannaḍa. Condition, good. Appearance, new. Mode of writing, good.

Complete.

This is a copy of the manuscript described under the previous number (780).

(ವಿ.ವಿ.)—

ಸಮಗ್ರ. ಕಾಗದದ ಪ್ರತಿ. ಹಿಂದಿನ ೭೮೦ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ = ಪ್ರತಿಕೃತಿಯಾಗಿದೆ. ಲಿಪಿ ಚೆನ್ನಾಗಿದೆ.

No. 782. ರುದ್ರಾಕ್ಷಸ್ಥಲ ವಿಷಯ.

RUDRĀKṢASTHALA VIṢAYA.

Substance, Śrītāla. Size, $8\frac{5}{16} \times 1\frac{7}{16}$ inches. Pages, 4. Lines, 5 on a page. Character, Kannaḍa. Condition, much injured. Appearance, old. Mode of writing, good but not free from mistakes.

Begins on fol. 4-a of the manuscript described under No. 615 ante.

Complete.

Describes the origin of Rudrākṣa, its greatness and where to wear it.

Beginning :—

ರಾಗ ತಿಲಕ ಕಾಂಬೋಧಿ.

ಭೋ. । ಷ. ಮಂತ್ರಮೂಲ ಗೂಢಪದದ ಚಿಂತಾಮಣಿ ರುದ್ರಾಕ್ಷಿಗಳದ ।
ರಂತುವಱಿ ದುಧರಿಸಬಲ್ಲಡಾತ ರುದ್ರನು ॥ ಪಲ್ಲ ॥
ಮಾರಮಥನ ತ್ರಿಪುರದಹನ । . ರಣದೊಳು ನೋಡೆ ನಯನ ।
ವಾರಿಬಿಂದು ಬೀಳಲುದಯವಾಗಿ ಮರ್ತ್ಯರಾ ।
ಘೋರ ಪಾತಕಂಗಳನ್ನು ದಹಿಸಿ ಭಕ್ತಜನದೊಳೊಪ್ಪಿ ।
ತೋಱುತಿರ್ಪ ಶ್ರೀರುದ್ರಾಕ್ಷೆ ಪುಣ್ಯಾಪುಂಜವು ॥ ೧ ॥
ಸ್ಮರಿಸೆದುರಿತಹ [ರ] (ಱಿ)ವುದೀಕ್ಷಿಸಲ್ಕೆ ಕರ್ಮವಳಿವುದೊಲಿದು ।
ಸ್ಪರುಶನವನು ಮಾಡೆ ಜನ್ಮಪಾಶ ಪಱಿವುದು ॥
ಧರಿಸೆ ರುದ್ರಪದವಿಯಱಿದು ಸ್ಮರಿಸೆ ಜಪಿಸೆ ಸದ್ಯೋಮುಕ್ತಿ ।
ಪರಮ ವೀರಶೈವಮತದ ಮೂಲಭೂಷಣಾ ॥

End :—

ಪರಮಶಿವನ ಪರಮಬ್ರಹ್ಮ ದೇಹದಲ್ಲಿ ತೊಡಿಗೆಯಾಗಿ ।
ಪರಮಪುಣ್ಯಾ ಪುಂಜಮಾಲೆ ಯೆನಿಸಿಯೊಪ್ಪುವಾ ॥
ಶರಣಜನ ಮನೋನುರಥವೆನಿಪ್ಪ ಶ್ರೀರುದ್ರಾಕ್ಷೆಗಳನು ।
ಧರಿಸಿಯಾನು ಬದುಕಿದೇ ಸಂಗಯ್ಯ ನಿಮ್ಮೊಳು ॥ ೫ ॥

(ವಿ-ವಿ.)—

ಸಮಗ್ರ. ಅತಿಶಿಥಿಲ. ಗ್ರಂಥಪಾತವಿದೆ. ತಪ್ಪಿದೆ. ಹಾಡಿನಲ್ಲಿದೆ. ಇದರಲ್ಲಿ ಐದು ಹಾಡುಗಳವೆ. ಇದು ರುದ್ರಾಕ್ಷಿಯ ಉತ್ಪತ್ತಿ, ಮಹಿಮಾತಿಶಯ, ಧಾರಣಸ್ಥಲಗಳನ್ನುಪದೇಶಿಸುತ್ತದೆ. ಹಾಡು ಸಂಗಯ್ಯಾಂಕಿತವಾಗಿರುವುದು. ಹೆಚ್ಚಿನ ವಿಷಯಗಳನ್ನು ಉದಾಹೃತಾಂಶದಿಂದ ತಿಳಿಯುವುದು.

No. 783. ರೇವಣಸಿದ್ಧೇಶ್ವರ ರಗಳೆ.

RĒVAṆASIDDHĒŚVARA RAGAḶE.

Substance, Śrītāla. Size, $15\frac{3}{4} \times 1\frac{1}{8}$ inches. Pages, 47. Lines, 4 to 5 on a page. Character, Kannaḍa. Condition, very much injured. Appearance, old. Mode of writing, good.

Complete.

Written by Hariharadēva of Hampe, this work gives an account of Rēvaṇasiddhēśvara.

Beginning :—

ರೇವಣ ಸಿದ್ಧೇಶ್ವರ ರಗಳೆ.

ಕಂದ ॥ ತ್ರಿಣಯನನ ಪ್ರಮಥನ ಕಾರುಣಿ ।
ಕನನೊಲಿಯು . . ಹಂಪೆಯ ವಿರೂಪಾಕ್ಷಂ ॥
ಗುಣನಿಳಯಂ ಮೆಱೆದಂರೇ- ॥
ವಣಸಿದ್ಧನನಂ । ಬುನಿಧಿಪರಿವೃತ್ತಾವನಿಯೊಳಂ ॥
ರಗಳೆ ॥ ಶ್ರೀರಜತಗಿರಿಯ ಸಭೆಯೊಳು ಚಂದ್ರಶೇಖರಂ ॥
ಕಾರುಣ್ಯನಿಧಿ ಹಂಪೆಯರಸನೊಪ್ಪಿರೆ ಕರಂ ॥
ನಂದೀಶ ವೀರಭದ್ರಾದಿಗಣತತಿಯೊಪ್ಪೆ
ಸಂದಣಿ . . . . ರೇಣುಕಂ ದಾರುಕಾದಿಗಳೊಪ್ಪೆ ॥

* * * *

End : —

. . . ನನೊಲವಿಂ ಮೆರೆದಂ ರೇ ।
ವಣಸಿದ್ಧನ ಕಂದನೆಂದು ಹಂಪೆಯ ದೇವಂ !
ರೇವಣಸಿದ್ಧ ದೇವರ ರಗಳೆ ಸಮಾಪ್ತಂ.

Colophon :—

(ವಿ-ವಿ.)—

ಸಮಗ್ರ. ಹಂಪೆಯ ಹರಿಹರನು ಬರೆದಂತೆ ತಿಳಿಯುತ್ತದೆ.

No. 784. ಲಿಂಗಪುರಾಣದ ನಾಂದ್ಯ.

LIṄGAPURĀṆADA NĀNDYA.

Substance, Śrītāla. Size, $13\frac{1}{2} \times 2\frac{3}{8}$ inches. Pages, 3. Lines, 18 on a page. Character, Kannaḍa. Condition, much injured. Appearance, old. Mode of writing, good.

Complete in 23 stanzas.

Begins on fol. 68-*a* of the Ms. described under Sanskrit Descriptive Catalogue No. 125.

These verses seem to belong to the work described under No. 653 ante.

Beginning :—

ಲಿಂಗಪುರಾಣದ ನಾಂದ್ಯ.

ವಾರ್ಧಿಕ ॥ ಪಲ್ಲ ॥.

ಬಸವೇಶ ಸದ್ಗುಣೋತ್ತುಂಗ ಕರುಣಾಪಾಂಗ ।
ಬಸವಣ್ಣ ಸಂಹೃತಾನಂಗ ಸತ್ರತಾಭಂಗ ।
ಬಸವ ಸದ್ಭಕ್ತಿಪುಂಗವ ಬಸವ ಸಂಗೀತರಂಗ ವೇದಪ್ರಸಂಗ ॥
ಬಸವ ಸಾಕ್ಷಾನ್ಮಹೇಶಾಂಗ ಸದ್ಗುರುಲಿಂಗ ।
ಬಸವ ಚರಲಿಂಗ ಪದಪದ್ಮವಿಲಸದ್ಭೃಂಗ! ॥
ಬಸವ ಪಶುಪತಿಚರಣನಿಹಿತಾಂತರಂಗ ಮದ್ಭರ್ತ್ ಮತ್ರಾತ ಬಸವಾ! ॥

*   *   *   *

End :—

ಪ್ರಭುವಂ ಶ್ರುತಿತ್ರಯಪ್ರಭುವಂ ಶಿವಾಹ್ವಯ ।
ಪ್ರಭುವಂ ಚಿದದ್ವಯಪ್ರಭುವಂ ಶುಭೋದಯ ॥
ಪ್ರಭುವಂ ನಿರಾಮಯಪ್ರಭುವಂ ಜಿತೇಂದ್ರಿಯಪ್ರಭುವಂ ಪ್ರಸನ್ನಮುಖದ ॥
ಪ್ರಭುವಂ ಚರಾಚರಪ್ರಭುವಂ ಸಲಕ್ಷಣ
ಪ್ರಭುವಂ ಗಣವ್ರಜಪ್ರಭುವಂ ಕುತೂಹಲ ॥
ಪ್ರಭುವಂ ನಿಜಾಕ್ಷಯಪ್ರಭುವಂ ಗೊಹೇಶ್ವರ ಪ್ರಭುವ ನುತಿಗೆಯ್ದುವಿಲ್ಲ ॥೨೩॥

ಲಿಂಗಪುರಾಣದ ನಾಂದ್ಯ ಸಮಾಪ್ತ.

Colophon :—

(ವಿ-ವಿ.)—

೨೩ ಪದ್ಯಗಳಿವೆ. ಹಿಂದೆ ಡಿ. ೬೫೩ ನೆಯ ನಂಬರಿನಲ್ಲಿ ವರ್ಣಿತವಾದ ಗ್ರಂಥಕ್ಕೆ ಸಂಬಂಧಪಟ್ಟ ಪದ್ಯಗಳಾಗಿವೆಯೆಂದು ತೋರುತ್ತದೆ.

No. **785.** ಲಿಂಗಾರ್ಚನ ರಗಳೆ.

LIṄGĀRCANA RAGAḶE.

Substance, palm-leaf. Size, $13\frac{3}{8} \times 1\frac{3}{8}$ inches. Pages, 13. Lines, 4 on a page. Character, Kannaḍa. Condition, injured. Appearance, old. Mode of writing, good.

Complete.

Begins on fol. 8-*a* of the Ms. described under D. No. 6990 (Sanskrit Descriptive Catalogue).

Same work as that described under No. 657 ante, with some slightly different readings.

Beginning :—

ಲಿಂಗಾರ್ಚನ ರಗಳೆ.

ಕಂದ ‖ ಇಂದುಧರ ನಿಮ್ಮ ಚರಣ।
ದ್ವಂದ್ವಮನನವರತಮರ್ಚಿಸುತ್ತೀ ಸುಖಮಂ ‖
ತಂದೆ ಭವಭವದೊಳೀವ್ರುದು।
ಕಂದರ್ಪಮದನಾರಿ ಹಂಪೆಯ ವಿರೂಪಾಕ್ಷಾ ! ‖

ರಗಳೆ ‖ ಶ್ರೀಗುರುವೆ ಹಂಪೆಯ ವಿರೂಪಾಕ್ಷ ಕೇಳಯ್ಯ :
ನಾಗಭೂಷಣ ನಿಮ್ಮ ವೇಳ್ಪಿಯೊಳು ನಾನಯ್ಯ ‖
ಸಲುಗೆಯಿಂ ಬಿನ್ನಪಂ ಗೆಯ್ವಪೆಂ ನಾನಯ್ಯ !।
ಒಲವಿಂದ ಲೆನಗೆ ವಿರುಪಾಕ್ಷ ಕರುಣಿಪ್ಪುದಯ್ಯ ‖ !

*   *   *

End :—

ಕಂದ। ಕೇಳ್ಕೆಯ್ಯ ವಿರೂಪಾಕ್ಷ ಕೃ !
ಪಾಳುವೆ ನಿಮ್ಮಡಿಯ ತೊತ್ತು ತೊತ್ತಿನ ಭೃತ್ಯಂ।
ಗಾಳನೊಳಾಳನೊಳಾಳ್ಗಂ।
ಯೇಳೇಳ್ಗಂ ಬವರ ಹಂಪೆಯ ವಿರೂಪಾಕ್ಷಾ ! ‖

Colophon :—

ಲಿಂಗಾರ್ಚನೆಯ ರಗಳೆ ಸಮಾಪ್ತಂ.

(ವಿ-ವಿ.)—

ಹಿಂದೆ ೬೫೭ ನೆಯ ನಂಬರಿನಲ್ಲಿ ವರ್ಣಿತವಾದ ಗ್ರಂಥವಾಗಿದೆ.

No. 786. ಲಿಂಗಾರ್ಚನ ರಗಳೆ.

LIṄGĀRCANA RAGAḶE.

Substance, palm-leaf. Size, 9½ × 1 inch. Pages, 14. Lines, 4 on a page. Character, Kannaḍa. Condition, very much injured. Appearance, old. Mode of writing, not bad.

Begins on fol. 37-*a*. The other works herein are :—(1) Rājanīti, 1-*a*. (2) Maidunarāmayyana ragaḷe, 31-*a*. (3) Mantragōpya by Prabhudēva, 44-*a* (one fol.).

Incomplete.

Same work as that described under No. 657 ante.

(ವಿ-ವಿ.)—

ಅಸಮಗ್ರ. ಕಡೆಯಲ್ಲಿ ಸ್ವಲ್ಪಭಾಗವಿಲ್ಲ. ಅತ್ಯಂತ ಶಿಥಿಲವಾದ ಪ್ರತಿ ಲಿಪಿ ಸಾಮಾನ್ಯವಾಗಿದೆ. ಇದರೊಡನೆ ರಾಜನೀತಿ (ಭಾರತಾಂತರ್ಗತ), ಮೈದುನರಾಮಯ್ಯನ ರಗಳೆ, ಪ್ರಭುದೇವರ ಮಂತ್ರಗೋಪ್ಯ (ಒಂದೇ ಓಲೆ) ಇವೂ ಇವೆ

ಇದು ಹಿಂದೆ ೬೫೭ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 787. ವಚನಗಳು.

VACANAGAḶU.

Substance, paper. Size, $10\frac{5}{16} \times 9\frac{9}{16}$ inches. Pages, 85. Lines, 20 on a page. Character, Kannaḍa. Condition, good. Appearance, new. Mode of writing, good.

This is a copy of the manuscript described under numbers 498, 506, 507, 518, 519, 526, 537—543, 551, 563, 564, 571, 574—579, 581—584, 586—589 and 593—604 ante.

Complete in 43 Vacanas.

(ವಿ-ವಿ.)—

ಶಿವಭಕ್ತರು ಕೆಲವರ ವಚನಗಳು ಸಮಗ್ರವಾಗಿವೆ. ಒಟ್ಟು ೪೩ ವಚನಗಳಿವೆ. ಇದು ಹಿಂದಣ ೪೯೮, ೫೦೬, ೫೦೭, ೫೧೮, ೫೧೯, ೫೨೬, ೫೩೭—೫೪೩, ೫೫೧, ೫೬೩, ೫೬೪, ೫೭೧, ೫೭೪—೫೭೯, ೫೮೧—೫೮೪, ೫೮೬—೫೮೯, ೫೯೩—೬೦೪ ನೆಯ ನಂಬರುಗಳಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ.

No. 788. ವಣಿಗುತ್ಪತ್ತಿ.

VAṆIGUTPATTI.

Substance, paper. Size, $8\frac{7}{8} \times 6\frac{3}{8}$ inches. Pages, 6. Lines, 17 on a page. Character, Kannaḍa. Condition, much injured. Appearance, old. Mode of writing, good and free from mistakes.

Begins on fol. 18-*a*. The other works herein are :—(1) Bhāvaciṅtā-ratna, 1-*a*. (2) Eppatteraḍukēṇiyutpatti, 21-*a*. (3) Vaṇigutpatti, 29-*b*.

Complete.

The story in this runs as follows:—Once a Rākṣasa, by name Gōmukha, molested Vīragaṅdharva, King of Yōvalli and his subjects. Balidēvi, daughter of Vīragandharva did penance with the object of getting a husband who would destroy Gōmukha. God Śiva pleased with her penance created Gaṇēśa and instructed him to destroy Gōmukha. Gaṇēśa killed Gōmukha and married Balidēvi by whom he had a son by name Mukhāli. Mukhāli once went to the nether world and after defeating the King of Snakes married his daughter. He had five sons with her and having divided the kingdom among them, he retired from life. The followers of those sons became the Vaṇigs or he trading community.

Beginning :—

ಶ್ರೀಶಿವಭಕ್ತಿ ವಾಣಿಜ್ಯೋತ್ಪತ್ತ್ಯ (ವಣಿಗುತ್ಪತ್ತಿಃ) ಆಗಮೋಕ್ತಾ । ವೇದೋಕ್ತಾ ಯಜು ರ್ವೇದಶ್ರೀರುದ್ರಭಾಷ್ಯದ್ವಿತೀಯಾನುವಾಕಮಂತ್ರಿಣೇ ವಾಣಿಜಾಯ ಕಕ್ಷಾಣಾಂ ಪತಯೇ ನಮಃ । ಬಾಹ್ಯಮಂತ್ರಿಣೇ . . . .

* * * *

ತದೇವದಾನವ ಶ್ರೇಷ್ಠ . . . ವೀರ ಗಂಧರ್ವ ಆತ್ಮಜಾ .
ಬಲಿದೇವಿ ಮಹಾರಾಜ್ಞೀ . . ಜಾತಮುಖಾಲಿನಾ ॥

* * * *

. . . ಶಾಖೇಯೀ (ಯಃ) ಪ್ರಮಥಾನ್ವಿತಃ ॥

ಟೀಕು॥ ಕ್ರೌಂಚದ್ವೀಪದ ಯೋವಲ್ಲಿಯೆಂಬ ಪಟ್ಟಣದೊಳಗೆ ವೀರಗಾಂ (ಗಂ) ಧರ್ವ ನೆಂಬರಸು ಸುಖಸಂಪತ್ತಿನಲ್ಲಿ ರಾಜ್ಯವನಾಳುತ್ತಿರಲು ಗೋಮುಖ ನೆಂಬ ರಾಕ್ಷಸನು ಭುಜ ಬಲಪ್ರತಾಪದಿಂದ ಕೊಬ್ಬಿ ಆ ಪಟ್ಟಣವನಾಳುವ ವೀರಗಾಂ(ಗಂ) ಧರ್ವನೆಂಬರಸನಂ ಕೈಸೆರೆ ವಿಡಿದು ಆಪಟ್ಟಣವನಾಳುತ್ತ ವಿಭೂತಿ, ರುದ್ರಾಕ್ಷಿ, ಶಿವಲಿಂಗ [ಧಾರಿಣಿಕರಿಗೆ] (ಧಾರಿಗಳಿಗೆ) ವಿರೋಧಿಯಾಗಿಯಿರುತ್ತಿರಲು ಅಲ್ಲಿ ಇದ್ದ ದೇವ, ದಾನವ, ಮಾನವ ರೆಲ್ಲರು ಇಂತಪ್ಪ ಶಿವ ದ್ರೋಹಿಯು ಸಂಹರಿಸುವರಾರುಯಿಲ್ಲಾ ಯೆಂದು ಶಿವನಿಗೆ ಮೊರೆಯಿಡಲು, ಮತ್ತಂ

* * * *

ಆ ಬಲಿದೇವಿ ಮಹಾರಾಣಿ ಪಂಚಮುಖಗಣೇಶ್ವರ ಯಿರ್ವರಿಗೂ ಮುಖಾಲಿ ಯೆಂಬ ಮಗ ನು ಹುಟ್ಟಿಯಿರುತ್ತಿರಲು . . . .

* * * *

End :—

ಅವರು ತಮ್ಮ ತಮ್ಮ ಜ್ಞಾನದಲ್ಲಿ ಸುಖಸಂಪತ್ತಿನಲ್ಲಿಯಿರುತ್ತಿಹರು. ಅವರ ಸಂಪ್ರ ದಾಯಕರೇ [ವಾಣಿಜರಕ್ಕು] (ವಣಿಜರಕ್ಕು). ಆ [ವಾ] (ವ)ಣಿಜರಿ . . . ವಾತೂಲಾನಂದೀಶ್ವರಗೋತ್ರ. . ವೀರಶೈವಪ್ರವರ ಪ್ರಮಥರಶಾಖೆ. ವಾತೂಲಾಗಮೋಕ್ತ [ವಾಣಿಜ್ಯೋತ್ಪತ್ತ್ಯವು] (ವಣಿಗುತ್ಪತ್ತಿಯು).

(ವಿ-ವಿ.)—

ಲಿಪಿ ಚೆನ್ನಾಗಿದೆ. ತಪ್ಪುಗಳಿವೆ. ಕಾಗದದ ಪ್ರತಿ. ಅನುಷ್ಟುಪ್ ಶ್ಲೋಕಗಳಿಗೆ ಟೀಕಾರೂಪವಾಗಿ ಬರೆದ ವಚನಗ್ರಂಥವು.

ಕಥಾಸಾರ :—

:. ವೀರಗಂಧರ್ವನೆಂಬರಸನು ಯೋವಲ್ಲಿಯೆಂಬ ಪುರವನ್ನು ಆಳುತ್ತಿರಲು ಭುಜಬಲದೃಪ್ತ ನಾದ ಗೋಮುಖನೆಂಬ ರಾಕ್ಷಸನು ಆ ಅರಸನನ್ನು ಸೆರೆಹಿಡಿದು ಸಿಂಹಾಸನವನ್ನೇರಿ ವೀರಶೈವ ವಿರೋಧಿಯಾಗಿ ರಾಜ್ಯವನ್ನಾಳುತ್ತಿದ್ದನು. ವೀರಶೈವರು ಈತನ ಹಾವಳಿಯಿಂದ ನಮ್ಮನ್ನು ದ್ಧರಿಸೆಂದು ಶಿವನಿಗೆ ಮೊರೆಯಿಟ್ಟರು. ವೀರಗಂಧರ್ವನ ಮಗಳಾದ ಬಲಿದೇವಿಯು "ಗೋ ಮುಖನನ್ನು ಕೊಲ್ಲುವವನೆ ನನಗೆ ಪತಿಯಾಗತಕ್ಕವ" ನೆಂದು ಪ್ರತಿಜ್ಞೆಮಾಡಿ ಕಠೋರತಪ ಸ್ಸನ್ನಾಚರಿಸತೊಡಗಿದಳು. ಶಿವನು ಮೊರೆ ಮತ್ತು ತಪಸ್ಸುಗಳಿಗೆ ಒಲಿದು ಆ ರಕ್ಕಸನನ್ನು

ಕೊಲ್ಲಬೇಕೆಂದೆಣಿಸಲು “ಪಂಚಮುಖನೆಂಬ ಗಣೇಶನು ಅವನ ಮುಖದಿಂದ ಉತ್ಪನ್ನನಾದನು. ಶಂಭುವು ಅವನನ್ನು ನೋಡಿ “ನೀನು ಆ ದಾನವನನ್ನು ಸಂಹರಿಸಿ ಬಾ” ಎಂದು ನಿರೂಪವನ್ನೀಯಲು ಆತನು ಆ ರಕ್ಕಸನನ್ನು ಕೊಂದು ಬಲಿದೇವಿಯನ್ನು ಮದುವೆಯಾಗಿ ಸುಖದಿಂದ ರಾಜ್ಯಭಾರ ಮಾಡುತ್ತಿರಲು ಅವನಿಗೆ “ಮುಖಾಲಿ” ಎಂಬ ಪುತ್ರನುದಿಸಿದನು. ಮುಖಾಲಿಯೊಂದುದಿನ ಎಲೆ, ಅಡಿಕೆ, ಅರಸಿನ, ಶ್ರೀತಾಳಿ ಇವು ಇಲ್ಲಿಂದು ತಂದೆಗೆ ಹೇಳಲು “ಅವು ಪಾತಾಳದಲ್ಲಿವೆ, ಅಲ್ಲಿಂದತಾ” ಎಂದಪ್ಪಣೆಯಿತ್ತನು. ಕೂಡಲೆ ಆತನು ಪಾತಾಳಕ್ಕೆ ಹೋಗಿ “ಶೇಷ” ನನ್ನು ಯುದ್ಧದಲ್ಲಿ ಸೋಲಿಸಿ ಅವನ ಮಗಳಾದ ನಾಗಕನ್ನಿಕೆಯನ್ನು ಮದುವೆಯಾಗಿ ಎಲೆ, ಅಡಿಕೆ, ಅರಸಿನ, ಶ್ರೀತಾಳಿಗಳನ್ನು ತೆಗೆದುಕೊಂಡು ಪುರಕ್ಕೆ ಬಂದು ಸುಖದಿಂದಿರಲು, ಅವನಿಗೆ ಆ ನಾಗಕನ್ನಿಕೆಯಲ್ಲಿ ಮಿಂಡ್ಯಗುದ್ದಲಿಸೆಟ್ಟಿ, ಗುತ್ತಸೆಟ್ಟಿ, ಗುಡಿ ಸೆಟ್ಟಿ, ಹಸಿಬಿ ಸೆಟ್ಟಿ, ನಾಡನಾಳುವ ಸೆಟ್ಟಿ ಎಂಬ ಐವರು ಮಕ್ಕಳು ಹುಟ್ಟಿದರು. ಮುಖಾಲಿಯು ಮಿಂಡ್ಯಗುದ್ದಲಿ ಸೆಟ್ಟಿಗೆ ಉತ್ತರ ದಿಕ್ಕನ್ನೂ, ಗುತ್ತಸೆಟ್ಟಿಗೆ ಪೂರ್ವ ದಿಕ್ಕನ್ನೂ, ಗುಡಿಸೆಟ್ಟಿಗೆ ದಕ್ಷಿಣದಿಕ್ಕನ್ನೂ ಹಸಿಬಿ ಸೆಟ್ಟಿಗೆ ಪಶ್ಚಿಮದಿಕ್ಕನ್ನೂ, ನಾಡನಾಳುವ ಸೆಟ್ಟಿಗೆ ಸ್ವಸ್ಥಾನವನ್ನೂ ಕೊಟ್ಟು, ತಾನು ಸತಿಯೊಡನೆ ನಿಜಸ್ಥಾನವನ್ನೈದಿದನು. ಆ ಮೇಲೆ ಆ ಐವರು ಸುಖದಿಂದ ರಾಜ್ಯಭಾರಮಾಡುತ್ತಿದ್ದರು. ಅವರ ಸಂಪ್ರದಾಯದವರೇ ಈಗಣ ವಣಿಜರು.”

ಕವಿಯ ವಿಷಯವಾಗಿ ಯಾವ ಅಂಶವೂ ಈ ಗ್ರಂಥದಿಂದ ತಿಳಿಯಬರುವುದಿಲ್ಲ. ಗ್ರಂಥಾಂತ್ಯದಲ್ಲಿ “ವಾತೂಲಾಗಮೋಕ್ತವಣಿಗುತ್ಪತ್ತಿ” ಎಂದಿರುವುದರಿಂದಲೂ, ಸಂಸ್ಕೃತ ಶ್ಲೋಕಗಳಿಗೆ ಟೀಕಾರೂಪವಾಗಿ ಇದು ಬರೆಯಲ್ಪಟ್ಟಿರುವುದರಿಂದಲೂ ವಾತೂಲತಂತ್ರಟೀಕೆಯನ್ನು ಬರೆದ ಗುಬ್ಬಿಯ ಮಲ್ಲಣಾರ್ಯ (ಸು 1475 ಎ. ಡಿ.) ಇದರ ಕರ್ತೃವಾಗಿದ್ದರೂ ಇರಬಹುದು.

No. 789. ವಣಿಗುತ್ಪತ್ತಿ.

VAṆIGUTPATTI.

Substance, paper. Size, 9 × 6 inches. Pages, 3½. Lines, 19 on a page. Character, Kannaḍa. Condition, much injured. Appearance old. Mode of writing, good but not free from mistakes.

Begins on fol. 29-*b* of the manuscript described under No. 788 ante. Complete.

Similar to the work described above.

Beginning :—

ವಾತೂಲಾಗಮ ಗ್ರಂಥದಲ್ಲಿ ಹೇಳಿದ ಪ್ರಕಾರ ಭಾಮಿನಿ(?)ಷಟ್ಪದಿಯಲ್ಲಿ ಮಾಡಿದ[ವಾಣಿಜ್ಯೋತ್ಪತ್ತ್ಯ] (ವಣಿಗುತ್ಪತ್ತಿ) ವಿವರ.

ವಾರ್ಧಕ ಷಟ್ಪದಿ

ಧರೆಗಧಿಕ ಕ್ರೌಂಚದ್ವೀಪದಲಿರುವ ಯೋವಲ್ಲಿ ।
ಪುರವ ಮಳನೆ . ವೀರಗಂಧರ್ವನೆಂಬರಸು[ನಿಜ] ।
ಪರಿವಾರಸುತಸಹೋದರದಿಂದೆ ರಾಜ್ಯವಂ ಪಾಲಿಸುತ್ತಿರುತಿರ್ದನು ॥
ಕ್ರೂರ ಗೋಮುಖನೆಂಬ ರಕ್ಕಸನು ಭುಜಬಲದಿ ।
ನರಪತಿಯು ಸೆರೆಪಿಡಿದು ಸಾಮ್ರಾಜ್ಯವಾಳುತಿರೆ । [ಶಿವನೆ ॥ ೧ ॥
ಹರಭಕ್ತಿಯುಕ್ತರ್ಗೆ ಕರಕಷ್ಟವಾಗುತಿರೆ ಮೊರೆ [ಯಿಡು.] (ಯಿಟ್ಟ) ರವರು

ಬಲನುದಿಸಿ ನಮ್ಮ ಕುಲವನುನಾ (ಶ) ಮಾಡಿವನು ।
ಗೆಲುವ ಪರಿಯೆಂತೆಂದು ಮನದೊಳಗೆ ಚಿಂತಿಸುತ ।
ಮಲಹರನ ಧ್ಯಾನದಿಂದಲ್ಲದಾಗದುಯೆಂದು ಛಲಬುದ್ಧಿವಿಡಿದುನಿಂದು ॥
ಬಲಿದೇವಿ ಮಹರಾಣಿ ರಕ್ಕಸನ ಕೊಂದವನ ।
ಗೆಲವಿನಿಂ ಮದುವೆಯಾಗುವೆನೆಂದು ಪರಶಿವನ ।
ಹಲವು ಪೂಜೆಯು ಮಾಡಿ ಬ(ಲಿತ್ರ) ತದ್ಧ್ಯಾನದೊಳು ತಪಮಿರ್ದಳೆಂದು
[ದೃಢದಿ ॥

*   *   *   *

ಕೊರಗಿದ ಶರೀರದಿಂದಿರುವ ತರುಣಿಯು ಕಂಡು ।
ವರವಾವುದೆಂದು ಕೇಳಲು ನೀವೆ ವರವೆನಗೆ ।
ಕರೆದುಕೊಂಡೊಯ್ದರಮನೆಗೆ ವಿವಾಹವನಾಗಿ ಸುಖದಿಂದಮಿರುತಿರ್ದರು ॥
ಪರಮದಂಪತಿಗಳ್ಗೆ ಮುಖಾಲಿಕುವರಂ ಪುಟ್ಟಿ ।
ಹರುಷದಿಂ ಪಟ್ಟವಂ ಕಟ್ಟಿ ಸುಖದಿಂದಿರಲು ।
ಯೊರೆದನೆಲೆ ಗುರುವೆ ! ಯೆಲೆಯಡಿಕೆಯುರಸಿನ ತಾಳತರುಗಳಿಮಗಿಲ್ಲವೆಂದೂ ॥

*   *   *   *

End :—

ಇರುತಿರಲು ವುರಗಸುತೆ ಪತಿಯೊಡನೆ ಸುಖದಿಂದೆ ।
ಯುರುತರದ ಪುತ್ರರುದ್ಭವಿಸಿದರು ಪೆಸರೆನಲ್ ॥
ಹಿರಿಯ ಮಗ ಮಿಂಡ್ವಗುದ್ದಲಿ ಗುತ್ತ ಗುಡಿಸೆಟ್ಟಿ ಹಸಬ ಧರನಾಳ್ವ
(ಯಾಳ್ವ) ಸೆಟ್ಟಿ ॥
ತರವರಿದು ನಾಲ್ವರಿಗೆ ದೇಶವೃತ್ತರಾದಿಗಳ । ?
ಯಿರದಿತ್ತು ಧರೆಯಾಳ್ವಸೆಟ್ಟಿ ಸ್ವಸ್ಥಾನದಲಿ
ಯಿರಿಸಿ ತಾಂ ಹರಪುರವ ನೈದೆಯಿವರಂ . . . ರು ವಾಣಿಜರು ಕೇಳು
[ತನಯಾ ! ॥
ವಾತೂಲಾಗಮದಲ್ಲಿ ಗ್ರಂಥ—ಶ್ರೀವೀರಶೈವ ಸಿದ್ಧಾಂತಂ . . .

*   *   *   *

ಸರ್ವೇಷಾಂ ಮಮಭಕ್ತಾನಾಮಿದಮೇಕಂ ಪ್ರಯೋಜನಂ ।
ಲಿಂಗಭಕ್ತಿರ್ಲಿಂಗ ಪೂಜಾ ಲಿಂಗಧಾರಣಮೇವಚ ॥

Colophon :—

(ವಿ-ವಿ.)—

ಲಿಪಿ ಉತ್ತಮವಾಗಿದೆ. ತಪ್ಪುಕಡಿಮೆ. ವಾರ್ಧಕಷಟ್ಪದಿರೂಪವಾಗಿ ಬರೆದ ವಣಿಗುತ್ಪತ್ತಿಯಾಗಿದೆ. ಪದ್ಯ ಸಂಖ್ಯೆ 7. ಕೊನೆಗೆ 5 ಅನುಷ್ಟುಪ್ ಶ್ಲೋಕಗಳೂ ಇವೆ.

ಕಥಾಸಾರವನ್ನು ಹಿಂದಣ ನಂಬರಿನಲ್ಲಿ ನೋಡಿ ತಿಳಿದುಕೊಳ್ಳುವುದು.

ಕವಿ ಯಾರೆಂದು ತಿಳಿಯಬರುವುದಿಲ್ಲ.

No. 790. ವಾರಕೊಂಡ ಷಟ್ಪದಿ.

VĀRAKOṆḌA ṢAṬPADI.

Substance, Śrītāla. Size, 13⅛ × 2⅝ inches. Pages, 2. Lines, 13 on a page Character, Kannaḍa. Condition, much injured Appearance, old. Mode of writing, good.

Complete.

Begins on fol. 23-*a* of the Ms. described under No. 125 (Sanskrit Descriptive Catalogue).

Describes the greatness of Śiva.

Beginning :—

ವಾ । ಷ ॥ ಕೇಳರೈ ಸುಜನ ಜನಾಳಗಳು ಉತ್ತರವ ।
ಬೇಳ ವೇದಾಢ್ಯಪುರುಷರು ಪುಣ್ಯಮಾನಿಸ(?ನುಷ)ರು ॥
ಲೀಲೆಯಿಂ ಸರ್ವದೇವಃ ಶಿವಃ ಶಂಭೋ ಯೆಂಭಾಳಾಕ್ಷಗಿಲ್ಲ ಹತ್ಯಾ ॥
ಪಲ್ಲ ॥ (?)

ಪದನು ॥ ಹುಟ್ಟುವಾಗಲು ಬ್ರಹ್ಮಗೊಂದು ಮುಖ ಹರಿಜಗಳ ॥
ದಟ್ಟಹಾಸದಲಿ ನಾಲ್ಕೊಗನಾದನವನೊಲ್ಮೆ ॥
ಹೆಟ್ಟಿರುಗಳನು ಬೇಡಿ ಕಲಿಜಟಾಸುರ ಲೋಕಸೃಷ್ಟಿಗೆ [ನ ಕೋ]
(ನೆ ಕೂ) ರ ಘೋರ ॥
ಕಟ್ಟುಗ್ರತಪಮಿರ್ದು ಊರ್ಧ್ವಮುಖನಾದ ಸುರ ॥
ಜ್ಯೇಷ್ಠಗೈಮುಖನೆಂಬ ಶಬ್ದ ವೇದದಲುಂಟಿ ॥
ಪುಟ್ಟಿದಾಗಮ ಶಾಸ್ತ್ರವರಿಯದಾಡುವ ಶಬ್ದಭ್ರಷ್ಟರುಗಳದ ಬಲ್ಲರೆ ॥ ೧ ॥

*   *   *   *

End :—

ಲೆಕ್ಕವಿಲ್ಲದ ಬ್ರಾಹ್ಮಣರನು ಕೊಂದುದಕೆಯಿಲ್ಲ (?) ।
ಅಕ್ಕಟಾ! ಅಂಗಹೀನನ ಮಾಡಿದೊಡೆ ಬಂತೆ ।
ಮುಕ್ಕದಲೆ ಬ್ರಹ್ಮ ಸತ್ತರೆಯಿಲ್ಲ ಬ್ರ[ಹ್ಮತ್ಯ] (ಹ್ಮೇತಿ; ನಾಯುದಿರೆ
[ಬ್ರಹ್ಮತ್ಯವೆ] (ಬ್ರಹ್ಮೇತಿಯೇ) ? ॥
ಋಕ್ಕಿಗರು ಪೇಳ್ವ ನುಡಿಯಲ್ಲದಿದು ಚತುರ್ವೇದ ।
ವಾಕ್ಯದೊಳಗಿಲ್ಲ ಮಹದೇವಂಗೆ ಬ್ರಹ್ಮತ್ಯ ।
ಸಕ್ಕಜದ ಕರೆ ವೀರನೊಡೆಯ ರಾಮೇಶ್ವರನು ಅಧಿಕ ದೈವಗಳಗೆಲ್ಲಾ ॥
ಈ ಶ್ರುತಿಯು ತರ್ಕಪರ ತಾಣ ಗಂಟಲ ಗಾಣ ।
ಈ ಶ್ರುತಿಯು ಯಿದಿಂಪರ ಜಾಲಮಾಸ್ತಿಕಶೂಲ ।
ಈ ಶ್ರುತಿಯು ವಾದಿಪರಿಗೆದೆಗೊಂತ ಚೌದಂತ ವೇದಾಂತ ಸಿದ್ಧಾಂತವು ॥
ಈ ಶ್ರುತಿಯು ಸೆಣಸುವರುಗಳ ಬಾಗ ಬಾಯ್ಬೀಗ ।
ಈ ಶ್ರುತಿಯು ಮಚ್ಚರಿಪರಾಟ ನಾಲಿಗೆಗೂಟ
ಈ ಶ್ರುತಿಯು ಪ್ರಳಯಕಾಲದ ರೌದ್ರ ಮಹರುದ್ರ ದಕ್ಷಮುಖ ವೀರಭದ್ರ ॥೧೫॥
ವಾರಕೊಂಡ ಷಟ್ಪದಿ ಸಂಪೂರ್ಣಂ ॥ ಮಂಗಳ ಮಹಾ ಶ್ರೀ.

Colophon :—

(ವಿ-ವಿ.)—

ಈ ಪಾರ್ಥಿಕ ಷಟ್ಪದಿಗಳು ಶಿವನ ವೈಶಿಷ್ಟ್ಯವನ್ನು ತೋರಿಸುವುದರೊಡನೆ ಶಿವನಲ್ಲಿ, ಬ್ರಹ್ಮಹತ್ಯಾದೋಷವನ್ನು ವರ್ಣಿಸುವ ಶೈವೇತರ ಪುರಾಣಾದಿಗಳನ್ನು ದೂಷಿಸುತ್ತವೆ.

No. 791. ವಿವೇಕಚಿಂತಾಮಣಿ.

VIVĒKACINTĀMAṆI.

Substance, paper. Size, $8\frac{1}{4} \times 6$ inches. Pages, 348. Lines, 18 to 28 on a page. Character, Kannaḍa. Condition, much injured. Appearance, old. Mode of writing, not bad and not free from mistakes.

Complete.

Same work as that described under No. 608 ante.

(ವಿ-ವಿ.)—

ಸಮಗ್ರ. ಬಹಳ ಶಿಥಿಲ. ಕಾಗದದ ಪ್ರತಿ. ಬೈಂಡುಮಾಡುವವರ ಅಜಾಗ್ರತೆಯಿಂದಾಗಿ ಪುಟಗಳು ಹಿಂದು ಮುಂದಾಗಿರುವುವು. ಬರೆವಣಿಗೆಯು ಅಷ್ಟು ಚೆನ್ನಾಗಿಲ್ಲ. ತಪ್ಪುಗಳಿವೆ.

ಇದು ಹಿಂದೆ 608 ನೆಯ ನಂಬರಿನಲ್ಲಿ ವಿವರಿಸಿದ ಗ್ರಂಥವೇ ಸರಿ. ಕವಿ ನಿಜಗುಣ ಶಿವಯೋಗಿಯೆಂಬುವನು.

No. 792. ವೀರಶೈವ ತತ್ವ.

VĪRAŚAIVA TATVA.

Substance, paper. Size, $8\frac{5}{8} \times 6\frac{1}{4}$ inches. Page, 1. Lines, 18 on a page Character, Kannaḍa. Condition, injured. Appearance, old. Mode of writing, good.

Begins on p. 123, of the Ms. described under No. 213 ante. The other works herein are :—(1) Vidyāraṇyakālajñāna, p. 1. (2) Vidyāraṇyaśaka, p. 18. (3) Vidyā-raṇyakālajñāna, p. 22. (4) Vidyāraṇyakālajñāna, p. 24. (5) Pāla-nāthasiddhasaṁhite, p. 30. (6) Vidyāraṇyakōśa, p. 35. (7) Ānegondi Tāmraśāsana (copper plate) p. 45. (8) Kālajṇana, p. 51. (9) Śivayyā-tanda Kālajñāna, p. 52. (10) Paṇḍita Dēvayyana Granthagaḷu, p. 52. (11) Viparyaya-sthiti, p. 53. (12) Manīṣāpañcaka, p. 55. (13) Puṣhkarakhaṇḍa p. 56. (14) Mārvāḍilipi, p. 64. (15) Saptaprabañdha, (with kannada Tīkā) p. 67. (16) Arasugaḷa-paramparo, p. 95. (17) Bhūtapaṇḍyarāyana vaṁśa, p. 101. (18) Gērusoppeya saṁsthānaviṣaya, p. 103. (19) Prabhuliṅgalīle, p. 106.

Nos. 1 to 12 and 15 in this list are sanskrit works.

Incomplete.

Deals with the details about the initiation into Vīraśaivism.

Beginning :—

ವೀರಶೈವ ದೀಕ್ಷೆಯಾದೊಡೆ, ಆಜ್ಞಾದೀಕ್ಷೆ, ಉಪಮಾದೀಕ್ಷೆ, ಸ್ವಸ್ತಿರೋಹಣದೀಕ್ಷೆ, ಕಳಶಾಭಿಷೇಕ, ವಿಭೂತಿಯ ಪಟ್ಟ, ಲಿಂಗಾಯತ, ಲಿಂಗಸ್ವಾಯತ ಮೆಂದು ಸಪ್ತವಿಧವಾಗಿಹುದು.

* * * *

End :—

ಶುದ್ಧ ಶೈವನಿಗೆ ತನ್ನಿಷ್ಟಲಿಂಗವು ಚೋರಾದಿಗಳಿಂ ಪೋಗಿ ದೊರಕದಿರ್ದೊಡೊಂದು ಲಕ್ಷ ಅಘೋರಮಂತ್ರಜಪದಿಂ . ಶುದ್ಧಾತ್ಮನಾಗಿ ಮೇಲಾಚಾರ್ಯನಿಂ ವಿಧ್ಯುಕ್ತವಾಗಿ ಮತ್ತೆ ಪಡೆವುದು.

(ವಿ-ವಿ.)—

ಅಸಮಗ್ರ. ವೀರಶೈವದ ದೀಕ್ಷೆಯ ವಿವರವನ್ನು ಹೇಳುತ್ತದೆ. ಅಂತ್ಯದಲ್ಲಿ ೩ ಸಂಸ್ಕೃತ ಶ್ಲೋಕಗಳಿವೆ.

No. 793. ವೀರಶೈವ ವಿಷಯ.

VĪRAŚAIVA VIṢAYA.

Substance, Śrītāla. Size, $13\frac{3}{4} \times 1\frac{3}{4}$ inches. Pages, 4. Lines, 7 or 8 on a page. Character, Kannaḍa. Condition, much injured. Appearance, old. Mode of writing, good.

• Begins on fol. 61-*a* of the Ms. described under No. 592 ante, where in this work has been omitted to be mentioned as the other work.

Incomplete.

Deals with the Vīraśaiva system ; details regarding the title of the work, author, etc., are not available.

Beginning :—

ಸ್ಮರಹರನ ಪೂಜಿಸುವೆ ನಾ ಹರುಷದಿಂದುರಗ ॥
ಧರನ ಪೂಜಿಸುವೆ ಸರಸಿಜಸಂಭವಕಪಾಲ ॥
ಕರನ ಪೂಜಿಸುವೆ ಶುಭಕರನ ಪೂಜಿಸುವೆ ಶಂಕರನ ಸಲೆ ಪೂಜಿಸುವೆನು ॥
ನೋಡುತಂ ಶಿವನ ಮೆಲ್ಲಡಿಗಳಂ ಮನವೆಚ್ಚಿ ಕೊಂ (? ಮುದದಿ ಕೊಂ)
ಡಾಡುತಂ ಕುಕಿಲಿಬಿದು ಕುಣಿಕುಣಿದು ಸುಗತಿಗಳ ॥
ಗಾಡುತಂ ನಲಿನಲಿದು ಸರಿಗಮಪಧನಿಯೆಂಬ ಸಪ್ತಸ್ವರಂಗಳಿಂದಾ ॥
ಪಾಡುತಂ ಪರಮಸುಖಲೀಲಾವಿನೋದದಿಂ ।
ಕೂಡುತಂ ನಿರುಪಮನಿಜಾನಂದಭಕ್ತಿಯಿಂ ॥
ಬೇಡುತಂ ಭೀತಿರಸದೊಳು ಮುಳುಗುತಂ ಚಂದ್ರಜೂಟನಂ ಪೂಜಿಸುವೆನು ॥೨೪॥

* * * *

ತಿರುನೀಲಕಂಠ ತಿರುನಾಳ್ಪಾವಮಾನ ಕಂ - ॥
ಟರಮ ಣ್ಣ(ನ್ನ) ಯಕ್ಕರಸಿ ಯಾನಯಿನಾರ್ಪೆನೆಯ ॥
ಧರಪಿಟ್ಟ ನಾಗರೋಹಿಣಿ ಪರವೆನಾಚಿಯರು ಚಂಡೇಶ ವಾಗೀಶನು ॥
ಕರಿಯೂರ ಚೋಳ ಸಿರಿಯಾಳ ಕಡವಲ ನಂಬಿ ॥
ತಿರುಕುರುಬ ತೊಂಡಲೇಕಾಳ ಸೋಮಾಸಿ ಮಾ - ॥
ರುರು ಮುಖ್ಯರಱುವತ್ತು ಮೂವರಂ ನೆನೆವುತಂ ಶಿವ ನಿಮ್ಮ ಪೂಜಿಸುವೆನು ॥

* * * *

End :—

ಆಹಾ ಪುರಾತರತ್ಯುನ್ನತಿಯು ಪರಮದಾ . ॥
ಸೋಹ ವೆಂದಾ . . ಹೋಯಿತೆಂಬೆಂಬ ॥
ಕಾಹುರದ ನುಡಿಯು ಮಾಣಿಸಿ ಜಂಗಮಕೆ ಮಾಟ್ಪಿ ವೀರಮದ್ದಪ್ಪಯ್ಯನು ।
ಮೋಹಮಾಯಾರಹಿತ ಚೆಲ್ಲಪ್ಪ ವಿಪ್ರಳನಿ ॥
ದೇಹಿ ಗುಬ್ಬಿಯು . .

(ವಿ-ವಿ.)—

ಅಸಮಗ್ರ. ವಾರ್ಧಿಕಷಟ್ಪದಿಯಲ್ಲಿದೆ. ಯಾವ ಗ್ರಂಥದ ಭಾಗವೆಂದು ತಿಳಿಯ ಬರುವುದಿಲ್ಲ.

No. 794. ವೀರಶೈವ ವಿಷಯ.

VĪRAŚAIVA VIṢAYA.

Substance, Śrītāla. Size, $9\frac{5}{8} \times 2$ inches. Pages, $5\frac{1}{2}$. Lines, 11 on a page. Character, Kannaḍa. Condition, much injured. Appearance, old. Mode of writing, good.

Begins on fol. 37-*a* of the Ms. described under No. 268 ante, whereunder the list of other works contained in that bundle has been omitted. That list of other works is given under D. No. 307 which is one of the other works in the bundle of D. No. 268.

Incomplete.

Deals with the principles of Vīraśaivism.

Beginning :—

ಪ್ರಸಾದದೊಳಗಿದ್ದು ಮುಕ್ತಿಯ ಚಿಂತೆ ಯಾಕೊ। ಕರಸ್ಥಳದೊಳಗೆ ಲಿಂಗವಿರ್ದ ಬಳಿಕ ಇನ್ನಾವ ಚಿಂತೆ ಯಾಕೊ । ಗುಹೇಶ್ವರಾ ॥ ೬ ॥

ಬವಿಯೊಂದು ಕುಲಭಕ್ತನೊಂದು ಕುಲವೆಂದು ವಿವರಣೆಯ ಮಾಡಿದ ಬಳಿಕ ಮರಳಿ ಬವಿಯ ನಂಟನೆಂದು ಬೆರಸಿದಡೆ ಪಂಚಮಹಾಪಾತಕವ್ರೊ ಬಸವಾ ॥

* * * *

ಲಿಂಗಕ್ಕೆ ಪ್ರಾಣವಾ ಗುರುಸೇವೆಯರಿ ತಾನು । ಜಂಗಮಾರ್ಚನೆಯಲಾ ಧನ ಸವೆಯೆ ಸುಖಿಯೆನಿಸುವಂ ॥ ಹುಸಿ ಹುರಡು ಹಸಿವು ತೃಷೆ ಹಿಸುಣತನಮಂ ಬಿಟ್ಟು । ವ್ಯಸನ ವಿಷಯಾದಿಗಳ ಹೆಸರಿಲ್ಲದಿರೆ ಸುಟ್ಟು । ಪಶುಪಾಕ ಪಶುಶೇಶ(?ಷ)ಪಶುಸಂಗಮಂ ಜರೆದು । ಪಶುಗೋಷ್ಠಿ ಪಶುದೃಷ್ಟಿಯೆಂಬವಂ ನೆರೆ ತೊರೆದು । ಅನ್ಯದೈವಸ್ಮರಣೆಮಾತ್ರವಂ ಪರಿಹರಿಸಿ । ತನ್ನ ಮನ ವಚ್ಚ ತಾನಾಗಿಪ್ಪ ದಾಯತವೆರಸಿ । ಸುಖಿಯಾಗಿ ಸುಖಿಯಾಗಿ ನಿಂದೆವಂದನೆಗಳಗೆ । ಅಚಳಿತಂತ್ರನಾಗಿ ಇರಬೇಕು ತನ್ನೊಳಗೆ ॥

* * * *

End :—

ಎನಲುಗುರುವಿಗೆ ಶಿಷ್ಯ ಮಗುಳೆ ಬಿನ್ನವಿಸಿದಂ ॥
ಮನವಲಿದು ಭಕ್ತಿಕಿಂಕರತೆಯಂ ರಚಿಸಿದಂ ॥
ಮಾಯೆಯುಳ್ಳನ್ನ ಸದ್ಯಸ್ಮುಕ್ತಿ (?ಸದ್ಯೋಮುಕ್ತಿ) ಯೆಲ್ಲಿಯದು ॥

(ವಿ.-ವಿ.)—

ಅಸಮಗ್ರ. ಆದಿಯಲ್ಲಿ ಗುಹೇಶ್ವರನನ್ನು ಸಂಬೋಧಿಸಿದ ವಚನಗಳೂ, ಆ ಮೇಲೆ ಕೂಡಲ ಸಂಗಯ್ಯನನ್ನು ಸಂಭೋಧಿಸಿದ ವಚನಗಳೂ ಕಡೆಗೆ "ರಗಳೆಯಧಾಟಿ" ಗೆ ಸರಿ ಬರುವ ಭಾಗವೂ ಇವೆ. ವೀರಶೈವತತ್ವಗಳನ್ನು ಬೋಧಿಸುತ್ತವೆ.

No. 795. ವೀರಶೈವ ವಿಷಯ.

VĪRAŚAIVA VIṢAYA.

Substance, Srītāla. Size, $9\frac{3}{16} \times 1\frac{7}{16}$ inches. Pages, 78. Lines, 7 on a page. Character, Kannaḍa. Condition, much injured. Appearance, old. Mode of writing, good.

Begins on fol. 14-*a* of the Ms. described under No. 750 ante.

Incomplete.

Similar to the work described above.

Beginning :—

. . . ಯುನಾ ಯಾತಿ ವಿಶ್ರಾಂತಿಂ ವೈಷ್ಣವೇನ ತು ॥ ಇದನರಿದು ಭಜಿಸು ಮದನನ ಮದಹರನ ನೀನು । ಕುದಿಯದಿರು ದಮಿ(?ದೈ)ವಗಳ ಬೆದಡೆಯುಂ ಬಿಡು ನೀನು । ಎಲ್ಲಿ ಹುಟ್ಟುವವೆಲ್ಲವೆಲ್ಲಿ ಲಯವಹವೆಲ್ಲ । ಅಲ್ಲಲ್ಲದಿಲ್ಲ ಭವಬಂಧ ಹರ ನಿನಗೆಲ್ಲ । ಆರು ಲೋಕಂಗಳಾಧಾರವಹರವಿಂದ । ಘೋರ ಸಂಸಾರಮಂ ನಿಗ . ದೆಸೆಯಿಂದ । ಇದಕ್ಕೆ ಸಾಕ್ಷಿ ।

"ಆಕಾಶಂ ಲಿಂಗಮಿತ್ಯಾಹುಃಪೃಥ್ವೀ ತಸ್ಯ ಚಪೀಠಿಕಾ ॥
ಆಲಯಂ ಸರ್ವಭೂತಾನಾಂ ಲಯನಾಂ ಲಿಂಗಮುಚ್ಯತೇ ।
ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಂ ॥
ಲಿಂಗ ಬಾಹ್ಯಾತ್ಪರಂ ನಾಸ್ತಿ ತಸ್ಮಾಲ್ಲಿಂಗಂ ಪ್ರಪೂಜಯೇತ್ ॥

* * * *

. . . . ಷಿತಃ ॥
ಶುಭೇ ಸತತಂ ವಿಷ್ಣುಃ ಭಸ್ಮದಿಗ್ಧತನೂಲತಃ ॥
ತ್ರಿಪುಂಡ್ರಾಂಕಿತಸರ್ವಾಂಗೋ ಜಟಾಮಂಡಲಮಂಡನಃ ॥
ಇತಿ ತತ್ರೈವ ವಿಷ್ಣುವ್ಯಾವರ್ಣನ(ಂ) ।
ಕೇಳು ಪಿತಾಮಹನಂ ನಿಜಕಾಯವ ।
ಪೇಳುವೆ ಭೂತಿ ರುದ್ರಾಕ್ಷೆಯ ದಾಯವ ।
ಮೂರೆರಡರ ವದನಗಳ ಜಟಾಳಿಯ ।
ಹಾರದ ಲಯವಂ ಭಸಿತರುದ್ರಾಕ್ಷೆಯ ।

* * * *

End :—

ಬುದ್ಧಿ ತೋರಿತ್ತೆನ್ನ ಮನಕೆ ಮತ್ತೆ ವಿಚಾರ ।
ಇದರ್ದಂ ಪೇಳದಿರ್ದಡೆ ಮುಂದೆನಗೆ ಭಾರ ।

ಹಿಂದೆ ಭವತಾಪದೊಳು ಬೆಂದು ಸಾವಗೆ ಗುರುವೆ ।
ತಂದೆಯಿತ್ತಲಿ ಕರುಣದಿಂದ ಭಕ್ತಿಯಗುರುವೆ ।
ಕರುಣಿ ನೀವೆನಗೆ ಬುದ್ಧಿಯ ಬೆಸಸಿದುದರೊಳಗೆ ।

(ವಿ-ವಿ.)—

ಅಸಮಗ್ರ. ವೀರ ಶೈವಮತತತ್ವಗಳನ್ನು ಬೋಧಿಸುವ ಕನ್ನಡ ಪದ್ಯಗಳೂ, ಪ್ರತಿಯೊಂದು ಪದ್ಯದ ಅನಂತರ ಇದರ ಆಧಾರಕ್ಕಾಗಿ ಉದ್ಧೃತವಾದ ಸಂಸ್ಕೃತ ಶ್ಲೋಕಗಳೂ ಇವೆ. ಅಲ್ಲಲ್ಲಿ ರಗಳೆ ಮೊದಲಾದ ಬಂಧಗಳೂ ಇವೆ.

No. 796. ವೀರಶೈವಾಗಮ.

VĪRAŚAIVĀGAMA.

Substance, paper. Size, $8\frac{3}{4} \times 4\frac{1}{2}$ inches. Pages, 3. Lines, 14 on a page. Character, Kannaḍa. Condition, very much injured. Appearance, old. Mode of writing, not bad.

Begins on page 316 of the manuscript described under No. 742 ante. Complete.

Purports to uphold the supremacy of Śiva over Viṣṇu. The author is not known.

Beginning :—

ವಾ ॥ ಷ ॥ ಶ್ರೀವರನೆ ಪರಬೊಮ್ಮವೆಂದು ನುಡಿವರು ಕೇಳ ।
ಭಾವಜಾರಿಯ ಪಾದಸೇವೆನಿಮಿತ್ತದಿಂ ವಿಷ್ಣು ।
ತಾವರೆಸಹಸ್ರವನ್ನರ್ಪಿಸಲೊಂದು ಕುಂದಲು ನಯನ ಕಮಲವಾಗೆ ॥
ದೇವಗರ್ಪಿಸಿ ಪಡೆದ ಶಂಖಚಕ್ರಂಬುದವು ।
ಕೇವಲಂ ವಿಷ್ಣುತ್ವ ಶಿವನಿಸಾದುದೆ ಸತ್ಯ ।
ದೇವ ದೇವರ ದೇವ ರುದ್ರನದ್ವಿತಿಯೆಂದು ಮುಂಡಿಗಿಕ್ಕೆದೆನಿಳೆಯೊಳು ॥

End :—

ವೀರಶೈವಾಗಮದ ಸಾರಾಮೃತದ ಸ್ತೋತ್ರ ।
ಚಾರು ಮನ . ಕ್ತ ಶಿವಶರಣ ಸುತ್ತತಿಗಳು ಪ್ರೊ ।
ರಾಯದಿಂದೋದಿ ಬರೆದು ಪಠಿಸಿದರರ್ಥಸಾರಾಯವುಂ ತಿಳವೊಡೆ ॥
ಸೇರಿಕೊಂಬುದು ಭೋಗಮೋಕ್ಷಸಂಪದಸಿದ್ಧಿ ।
ಯಾರ್ಯೆದು ಕೊಂ[ಡಿಹುದ] (ಡ)ವರ ಬಾ. ಲೊಳು ಕರಮುಗಿದು ।
ಸಾರಾಧಿಪತಿ ಸೌರ್ಯವೀರಭದ್ರರು ರುದ್ರರಾರ್ಯೆದು ಬಿಗಿಯಪ್ಪವರ್ ॥

(ವಿ-ವಿ.)—

ಸಮಗ್ರ. ಕಾಗದದ ಪ್ರತಿ. ಅತ್ಯಂತ ಶಿಥಿಲವಾಗಿದೆ. ಲಿಪಿ ಸಾಮಾನ್ಯವೆನ್ನಬಹುದು. ಮುಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿ ಇದರ ಪ್ರತಿಕೆಯು. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ಹಿಂದಣ 742 ನೆಯ ನಂಬರನ್ನು ನೋಡುವುದು.

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ. ೧೧ ಪದ್ಯಗಳಿವೆ. ಇದರಲ್ಲಿ ಶಿವನು ಪರಬ್ರಹ್ಮವಲ್ಲದೆ ವಿಷ್ಣುವಲ್ಲವೆಂಬುದು ಉಕ್ತವಾಗಿದೆ. ಕವಿ ಯಾರೆಂಬುದು ಗೊತ್ತಾಗುವುದಿಲ್ಲ.

No. 797. ವೀರಶೈವಾಗಮ.

VĪRAŚAIVĀGAMA.

Substance, paper. Size, $10\frac{7}{16} \times 9\frac{1}{2}$ inches. Pages, 4. Lines, 20 on a page. Character, Kannaḍa. Condition, good. Appearance, new. Mode of writing, good.

Begins on page 381 of the manuscript described under No. 743 ante. Complete.

This is a copy of the Ms. described above. (No. 726.)

(ವಿ-ವಿ.)—

ಸಮಗ್ರ. ಇದು ಇದರ ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೃಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ಹಿಂದಣ 743 ನೆಯ ನಂಬರನ್ನು ನೋಡುವುದು.

No. 798. ವೀರಶೈವಾಗಮ.

VĪRAŚAIVĀGAMA.

Substance, paper. Size, $12\frac{7}{8} \times 8$ inches. Pages, 3. Lines, 21 on a page. Character, Kannaḍa. Condition, slightly injured. Appearance, old. Mode of writing, good.

Begins on page 330 of the manuscript described under No. 744 ante.

Almost complete.

This also is a copy of the manuscript described under No. 796 ante.

(ವಿ-ವಿ.)—

ಸಮಗ್ರವೆನ್ನಬಹುದು. ಸ್ವಲ್ಪ ಮಟ್ಟಿಗೆ ಶಿಥಿಲವಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದು ಹಿಂದಣ 796 ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೃಯಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ಹಿಂದಣ 744 ನೆಯ ನಂಬರನ್ನು ನೋಡುವುದು.

No. 799. ವೀರಸಂಗಯ್ಯನ ಚರಿತ್ರ.

VĪRASAṄGAYYANA CARITRE.

Substance, palm-leaf. Size, $6\frac{1}{8} \times 1\frac{1}{8}$ inches. Pages, 146. Lines, 6 on a page. Character, Kannaḍa. Condition, very much injured. Appearance, old. Mode of writing, good.

Begins on fol. 1-*a* of the manuscript described under No. 702 ante.

Complete in 5 sandhis.

Describes the story of Vīrasaṅgayya, a devotee of Śiva. The author is Siddhamallēśa, a Vīraśaiva and a disciple of Vīrabhadra. He lived in about 1650 A.D.

Beginning :—

ಕಂ ॥ ಶ್ರೀಗುರುವರ ಕರನಿಧಿಯುಂ ।
ಶ್ರೀಗುರುವರ ತಿಮಿರಭಾನು ಶ್ರೀಗುರುಲಿಂಗಂ ॥
ಶ್ರೀಗುರು ವರಕರನಭಯುಂ ।
ಶ್ರೀ ಗುರುವೇ ಸಲಹು ಮಲ್ಲಿಕಾರ್ಜುನ ಪ್ರಭುವೇ ॥ (೧)
ವಸುಧೆಯೊಳ್‌ಂ ಕಲ್ಯಾಣದಿ ।
ಬಸವೇಶ [ನೆಂದಡೆ] (ನಿರತ್ನ) ಸತತ ಬಿಜ್ಜಳರಾಯುಂ ॥
ಬೆಸಗೊಂಡನು ಶಿವಭಕ್ತರೊ
ಳೆಸೆವ ಧೀರರೊಳ್ಗಾ । ರುಂಟೆನಲು ॥ (?)

* * * *

ಬಲ್ಲಿದ ಶಂಕರದಾಸಯ್ಯ ।
ಬಲ್ಲಿದ ಮಡಿವಾಳ ತೆಲುಗ ಬೊಮ್ಮನು ಚೋಳಂ ॥
ಬಲ್ಲಿದನೀ ಧರೆಯೊಳಗತಿ ।
ಬಲ್ಲಿದ [ನಂ] (ನಾ) ವೀರಸಂಗನೆಂಬ ಮಹಾತ್ಮಂ ॥

End :—

ಸಾಂಗತ್ಯ ॥ ವರವೀರಸಂಗನ ಚರಿತೆಯಹೇಳ್ವದ ।
ಶರಣಾನದಾರು ಎಂದೆನಲು ॥
ಗುರು ವೀರಭದ್ರನ ಕರುಣ ಕರಾಬ್ಜದ ।
ವರಸುತ ಸಿದ್ಧಮಲ್ಲೇಶ ॥
ಫುಲ್ಲಶರಾರಿಯ ಮೆಲ್ಲಡಿಗಳು ದಕ್ಷ
ದಲ್ಲಣನಡಿಗೆ ನಮೋಸ್ತು ॥
ಇಲ್ಲಿ ರಕ್ಷಿಪ ನಮ್ಮ ವಲ್ಲಭ ಗುರುಸಿದ್ಧ ।
ಮಲ್ಲಿಕಾರ್ಜುನ ಶರಣಾರ್ತಿ ॥
. . . . ಶರಣು ಚರ
ಲಿಂಗ ಶರಣು ಚರಣ ಮುಕ್ತಿಸುಖದಾಸ ॥ (?)
ಸಂಗಸುಖದೊಳು ಸಲಹುವ ಮಹಾಘನ ।
ಲಿಂಗ ಶರಣು ಶರಣಾರ್ತಿ ॥

Colophon :—

ಅಂತು ಸಂಧಿ ೫ ಕ್ಕಂ ಪದನು ೪೮೭ ಕ್ಕಂ ಕಂದ ವೃತ್ತ ೨೭ ಉಭಯ ಪದ ೫೧೪ ಕ್ಕಂ ಮಂಗಳ ಮಹಾಶ್ರೀ.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ.' ಆ ಬಗೆಗೆ ಹಿಂದಣ 702 ನೆಯ ನಂಬರನ್ನು ನೋಡುವುದು.

ಇದು ಸಾಂಗತ್ಯದಲ್ಲಿ ಬರೆದಿದೆ. ಆದರೆ ಕೆಲವು ಕಂದಗಳೂ ವೃತ್ತಗಳೂ ಇವೆ. ಬಿದಿರೂರ ಕೋಟೆಯ ಕಾಮಣ್ಣ ಸೋಮಲದೇವಿಯರ ಮಗ ವೀರಸಂಗಯ್ಯನೆಂಬ ಶಿವಭಕ್ತನಿಗೆ ನಿಶ್ಚಯಿಸಿದ್ದ ಚಂದ್ರಿಣಿಯನ್ನು ಓಂಕಾರಪಟ್ಟಣದರಸು ಮಾಧವರಾಯನು ಮಗ ಭಾಸ್ಕರನು ತನಗೆ ಕೊಡಬೇಕೆಂದು ಪೀಡಿಸಲು ಅವನನ್ನು ಓಡಿಸಿ ವೀರ ಸಂಗಯ್ಯನಿಗೇ ಕೊಟ್ಟರು. ಅದರಿಂದ ಕುಪಿತನಾದ ಭಾಸ್ಕರನು, ವೀರಸಂಗಯ್ಯನು ಪತ್ನಿಯೊಡನೆ ಹೋಗುತ್ತಿರುವಾಗ ವೀರಶೈವ ವೇಷದಿಂದ ಬಂದು ಅವನನ್ನು ಇದಿರಿಸಲು ವೀರಸಂಗಯ್ಯನು ವಂದಿಸಿ ಶಿವನನ್ನು ಮೆಚ್ಚಿಸಿ ಸರ್ವರೊಡನೆ ಕೈಲಾಸಕ್ಕೆ ತೆರಳಿದನು ಎಂಬುದು ಈ ಕಥೆಯ ಸಾರವು.

ಕವಿ ಸಿದ್ಧಮಲ್ಲೇಶನೆಂಬುವನು. ವೀರಶೈವಮತದವನು. ಇವನ ಗುರು ವೀರಭದ್ರನೆಂಬುವನು ಇವನ ಕಾಲವು ಸುಮಾರು ೧೬೫೦ ಎಂದು ಕವಿಚರಿತ್ರೆಯಲ್ಲಿ ಹೇಳಿದೆ.

No. 800. ವೀರಸಂಗಯ್ಯನ ಚರಿತ್ರೆ.

VĪRASAṄGAYYANA CARITRE.

Substance, paper. Size, 10⅝ × 9½ inches. Pages, 51. Lines, 20 on a page. Character, Kannaḍa. Condition, good. Appearance, new. Mode of writing, good.

Begins on page 1 of the manuscript described under No. 703 ante.

Complete in 5 sandhis.

This is a copy of the manuscript described under the previous number.

(ವಿ-ವಿ.)—

ಸಮಗ್ರ. ಇದು ಇದರ ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ಹಿಂದಣ 703 ನೆಯ ನಂಬರನ್ನು ನೋಡುವುದು.

No. 801. ವೃಷಭೇಶ್ವರಸ್ತುತಿ.

VṚṢABHĒŚVARASTUTI.

Substance, Śrītāla. Size, 12 × 2 inches. Pages, 30. Lines, 12 on a page. Character, Kannaḍa. Condition, injured. Appearance, old. Mode of writing, good.

Incomplete.

Begins on fol. 35-*a* of the manuscript described under No. 761 ante.

Written in praise of Basava, Sōmēśa, etc. The author is not known

Beginning :—

ಪುತ್ತದೊಳಗಣಿ ದೀರ್ಘಪೃಷ್ಠಮಂ ತೆಗೆದ ಮಹಿ
ಮೋತ್ತಮನ ಪಿತನ ಸತಿಯತ್ತಿಗೆಯ ಮಗನ ಕೃಪೆ
ವೆತ್ತ ತಚ್ಛಿಷ್ಯನಿಂ ಪಾಳಾದ ಪಟ್ಟಣಾಧಿಪನ ಜನಕನ ಪುತ್ರರಂ ॥
ಹೆತ್ತವ್ವೆಯಾತ್ಮಜಳ ಸುತನಿಂದೆ ಕಲ್ಮಣ್ಣ ।
ತತ್ತ ಕಾರ್ಯಕ್ಕೆ ಪೊರಿಸಿದನಂಗನೆಯನೊಯ್ದ
ನೊತ್ತಿನಲಿ ಜನಿಸಿದಗೆ ಕೃಪೆಯಾದನಾತ್ಮಜನ ಪೆತ್ತಳಯ್ಯಂಗೆರಗುವೆ ॥

ಟೀ ॥ ಪುತ್ತದೊಳಗಣಿ = ವಲ್ಮೀಕದೊಳಗಣಿ, ದೀರ್ಘ = ನಿಡಿದಾದ, ಪೃಷ್ಠಮಂ = ಬಾಲವನ್ನು (?) ಳ್ಳ ಸರ್ಪವನ್ನು, ತೆಗೆದ = ಆಕರಿ(ರ್ಷ.)ಸಿದ, ಮಹಿಮೋತ್ತಮನ = ಮಹತ್ವಾತಿಶಯವನುಳ್ಳ ಬಾಲಸಂಗಯ್ಯನ, ಪಿತನ = ತಂದೆಯಾದ ಬಸವೇಶ್ವರನ, ಸತೀ = ಸ್ತ್ರೀಯಳಾದ ನೀಲಲೋಚನೆಯ, ಅತ್ತಿಗೆಯ = ಪ್ರಿಯಾಂಬಿಕೆ [ಯಾದ] ಅಕ್ಕ (ಯ) ನಾಗಲಾಂಬಿಕೆಯ, ಮಗನ = ಕುಮಾರನಾದ ಚೆನ್ನಬಸವೇಶ್ವರನ ಕೃಪೆವೆತ್ತ = ಕರುಣಿವನು ಹಡೆದ ಸಿದ್ಧರಾಮೇಶ್ವರನ ॥ ತತ್ = ಆ ಸಿದ್ಧರಾಮೇಶ್ವರನ, ಶಿಷ್ಯನಿಂ = ದೀಕ್ಷಿತನಾದ ಬ(?)ಲ್ಲೇಶಬೊಮ್ಮಣ್ಣ ನಿಂದೆ, ಪಾಳಾದ = ಹಾಳಾದ, ಪಟ್ಟಣಿ = ಸಂಯಮಿಯೆಂಬ ನಗರಕ್ಕೆ, ಅಧಿಪನ = ಅಧಿಷ್ಠಾನ ಕರ್ತರ್ನಾದ ಯಮನ, ಜನಕ= ತಂದೆಯಾದ ಸೂರ್ಯನ, ಪುತ್ರರಂ = ಮಕ್ಕಳಾದ ವಾಲಿಸುಗ್ರೀವರನ್ನು, ಹೆತ್ತವ್ವೆಯ = ಹಡೆದ ಜನನಿಯಾದ ಅಹಲ್ಯೆಯ, ಆತ್ಮಜಳ = ಮಗಳಾದ ಅಂಜನಾದೇವಿಯ, ಸುತನಿಂದೆ = ಕುಮಾರನಾದ ಹನುಮಂತ್ಯನಿಂದೆ, ಕಲ್ಮಣ್ಣ = ಮೃತ್ತಿಕೆ ಪಾಷಾಣಗಳನ್ನು, ತತ್ತ, ಕಾರ್ಯಕ್ಕೆ = ಆಸೇತುವೆಯ ನಿಮಿತ್ತಕ್ಕೆ, ಪೊರಿಸಿದನ = ಹೊರಿಸಿದಂಥ ರಾಮಭದ್ರನ, ಅಂಗನೆಯ = ಸ್ತ್ರೀಯಳಾದ ಸೀತಾದೇವಿಯ,ವೈದವನ = ಕದ್ದುಕೊಂಡುಹೋದಂಥಾ ರಾವಣಾಸುರನ, ವತ್ತಿನಲಿ ಜನಿಸಿದವಗೆ = ಒಡಹುಟ್ಟಿದ ವಿಭೀಷಣಗೆ, ಕೃಪೆಯಾದನ = ಕರುಣವಾದಂಥಾ ರೇವಣಸಿದ್ಧೇಶ್ವರನ ॥ ಆತ್ಮಜನ = ಮಗನಾದ ರುದ್ರ ಮುನಿಸ್ವಾಮಿಗಳ, ಪೆತ್ತಳ = ಹಡೆದಂಥಾ ಸೌಂದರ ನಾಚಿಯಮ್ಮನ ॥ ಅಯ್ಯಂಗೆ = ತಂದೆಯಾದ ರಾಜೇಂದ್ರ ಚೋಳರಾಯಂಗೆ ॥ ಎರಗುವೆ = ಪ್ರಣಾತೆ ಯೆಂದು ಪ್ರಣತಂಗೆಯ್ವೆನು ॥ ೧ ॥

* * * *

ತರುಣಿಯಳಪೆಸರು ತಾರಜೆಯಾಣ್ಮನಗ್ರಜನ ।
ಪಿರಿಯಯ್ಯನರ್ಧಾಂಗಿಯಳಿ ನಾಮದಿಟವಣೆ ।
ತೆರನರಿದು ಜಮೆಗೊಳಲು ದಶನುಮೆತಾರೆಯಿಂದೆಸೆವನ ಶಿರಂಗಳೊಳಗೆ ॥
ಎರಡೆರಡನುಳದೊಂದನೆಯ ಮೂರ್ಧ್ನಿಯಿಂಪಿಡಿದು ।
ಪರಬ್ರಹ್ಮ ಪರಾತ್ಪರಮ ಪಾವನಮೂರ್ತಿ ॥
ಗಿರಿರಾಜ ಪುತ್ರಿಯ ಮುಖಕಮಲದಿವಧವನೆ ಕರಿಸುರಾಹರ ಜಯ ಜಯ ॥

ಟೀ ॥ ತರುಣಿಯಳ, ಸ್ತ್ರೀಯಳ,ಹೆಸರು, ಅಭಿಧಾನವು, ತಾರಜೆ, ನಿರ್ಮಲಾಭಿಧಾನವನುಳ್ಳ ಸುಭದ್ರೆಯ, ಆಣ್ಮನ, ವಲ್ಲಭನಾದ ಅರ್ಜುನನ, ಅಗ್ರಜನ, ಅಣ್ಣನಾದ ಧರ್ಮರಾಯನ, ಪಿರಿಯಯ್ಯನ, ದೊಡ್ಡಪ್ಪನಾದ ಶಶಿಯನು, ಅರಿದು, ತಿಳಿದು, ಜಮೆಗೊಳಲು, ವಟ್ಟಮಾಡಲು, ದಶನುಮೆ ತಾರೆಯಿಂದೆ, ಹತ್ತನೆಯ ನಕ್ಷತ್ರವಾದ ಮೊಗ ನಕ್ಷತ್ರವಾದ, ಮೊಗನಕ್ಷತ್ರಾಭಿಧಾನವನುಳ್ಳ ಮೊಗದಿಂದೆ, ಎಸೆವನ, ಶೋಭಿತ ನಾದಂಥಾ, * * * * ಪರಾತ್ಪರಮ

ಅವಕ್ಕೆ ಪರನಾದಂಥಾ, ಪಾವನಮೂರ್ತಿ, ನಿರ್ಮಲಸ್ವರೂಪನಾದಂಥಾ, ಗಿರಿರಾಜಪುತ್ರಿಯು, ಪೆಣ್ಣಾಗಿಯು, ಮುಖಕಮಲ, ವಕ್ತ್ರಕಮಲಕ್ಕೆ, ದಿವಧವನ, ಸೂರ್ಯೋಪಮಾನವಾದಂಥಾ, ಕರಿಸುರ ಹರ, ನಷ್ಟವ ಮಾಡಿದಂಥಾ ದೇವನೆ, (?) ಜಯ ಜಯ ॥ ೨೪ ॥

*   *   *   *

ಬಸವೇಶ್ವರನ ಪಂಚಸ್ತೋತ್ರ ಭಾವನೆ ।
ಜಯ ಜಗತ್ತ್ರಯರಕ್ಷದಕ್ಷನೆ ।
ಜಯ ಜನಾರ್ದನ ಸ್ತೋತ್ರ ಪಾತ್ರನೆ ।
ಜಯತು ಘನಚಿತ್ತೋಷ ದಿವ್ಯಪ್ರಕಾಶ ಬಸವೇಶಾ ! ॥

End :—

ಹಂಸಶ್ರವಣನ ಕಲಿತ್ರಹಂಸನ ।
ಹಂಸಪಾದನೆ ಹಂಸಸಿರಕರ ।
ಹಂಸಗೊಂದಣಹೃದಯಹಂಸವಿ ನೆಲಸಿದಕಲಂಕಾ ! ॥
ಹಂಸಪಾವಕಹಂಸಲೋಚನ ।
ಹಂಸಗಮನಸಖ ಹಂಸರಿಪುಪಿತ ।
ಹಂಸರೂಪನೆ ಹಂಸವೀವುದು ನಿಮ್ಮ ಕೃಪೆಯೊಲಿದು ॥

ಟೀ ॥ ಹಂಸ ಶ್ರವಣನ, ಕಣ್ಣೆ ಕಿವಿಯಾಗುಳ್ಳ ಸರ್ಪಗಳಿಂದ, ಕಲಿತ್ರ ಕೂಡಿರುತಿರ್ದಂಥಾ, ಹಂಸನ, ನಾರಾಯಣನ, ಹಂಸ, ನಯನವೆ, ಪಾದನೆ, ಚರಣದಲ್ಲುಳ್ಳಂಥಾ, ಹಂಸಶಿರಕರ, ಹಂಸ, ಬ್ರಹ್ಮನ, ಶಿರ, ಮಸ್ತಕವೆ, ಕರ, ಹಸ್ತದಲ್ಲುಳ್ಳಂಥಾ, ಹಂಸ, ಯತೀಶ್ವರರುಗಳ, ಗೊಂದಣ, ಸಮೂಹದ, ಹೃದಯಹಂಸದಿ, ಹೃತ್ಕಮಲದಲ್ಲಿ, ನೆಲಸಿದ, ಇಂಬುಗೊಂಡ, ಅಕಳಂಕ, ಕಳಂಕರಹಿತನಾದಂಥಾ, ಹಂಸ, ಸೂರ್ಯ, ಪಾವಕ, ಅಗ್ನಿ, ಹಂಸ, ಚಂದ್ರರೆ, ಲೋಚನ, ನಯನಗಳಾಗುಳ್ಳಂಥಾ, ಹಂಸ ಕುದುರೆಯ ಮೇಲೆ, ಗಮನ, ಗಮಿಸುತಿರ್ದ ಕುಬೇರನೆ, ಸಖ, ಕೆಳೆಯನಾಗುಳ್ಳಂಥಾ, ಹಂಸ, ಯಜ್ಞಕ್ಕೆ, ರಿಪು, ವೈರಿಯಾದ ವೀರಭದ್ರಸ್ವಾಮಿಗಳಿಗೆ, ಪಿತ ತಂದೆಯಾದಂಥಾ, ಹಂಸರೂಪನೆ, ಮೋಕ್ಷಸ್ವರೂಪನಾದ ದೇವನೆ, ನಿಮ್ಮ ಕೃಪೆಯೊಲಿದು, ನಿಮ್ಮ ಕರುಣ ಪುಟ್ಟಿ, ಹಂಸ ॥

(ವಿ-ವಿ.)—

ಅಸಮಗ್ರ. ೨೪ ವಾರ್ಧಿಕ ಷಟ್ಪದಿಗಳೂ ೧೭ ಭಾಮಿನಿಷಟ್ಪದಿಗಳೂ ಇವೆ. ಬಸವೇಶ, ಸೋಮೇಶ ಮೊದಲಾದವರ ಸ್ತುತಿಯಾಗಿದೆ. ಅನುಪ್ರಾಸದಲ್ಲಿ ಬಹಳವಾಗಿ ಈ ಕವಿಯು ಗಮನವನ್ನಿಟ್ಟಂತೆ ಕಾಣುತ್ತದೆ. ಕೆಲವೆಡೆ ವ್ಯಾಖ್ಯಾನವಿಲ್ಲದೆ ಅರ್ಥವಾಗದಂತಿದೆ. ಕವಿಯ ಹೆಸರು ಮೊದಲಾದುವು ತಿಳಿದು ಬರುವುದಿಲ್ಲ.

No. 802. ವೇದಾಂತ ವಿಷಯ.

VĒDĀNTA VIṢAYA.

Substance, Śrītāla. Size, $12\frac{1}{4} \times 2\frac{1}{8}$ inches. Page, 1. Lines, 12. Character, Kannaḍa. Condition, much injured. Appearance, old. Mode of writing, good.

Incomplete.

Begins on fol. 6-*b* of the manuscript described under No. 125 (Sanskrit Descriptive Catalogue).

Contains prose passages on the Vīraśaiva system.

Beginning :—

. . . . ದೆ ಆಱೂಡಿಯ ಕೊಟ ಸಮನಿಸದು ಕೇಳಾ ॥ ೯೭ ॥ ಇಂತು ಗುರುವಿಲ್ಲದೆ ತನ್ನಿಂದ ತಾನಾಗದೆಂದು ಮುಕ್ತ್ಯಾಯಾಕ್ಕಗಳು ಬಿನ್ನೈಸಲು ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ—ಗುರುವಿಂಗೂ ಶಿಷ್ಯಂಗೂ ಆವುದು ದೂರ, ಆವುದು ಸಾರೆಯೆಂಬುದನಾರು ಬಲ್ಲರು, ಗುರುವೆ ಶಿಷ್ಯನಾದ ತನ್ನ ವಿನೋದಕ್ಕೆ ಶಿಷ್ಯನೆ ಗುರುವಾದ ತನ್ನ ವಿನೋದಕ್ಕೆ ಕರ್ಮವೆಂಬ ಕಂಟಕವು ಎಲ್ಲಯೆಡೆವ್ರೊಕ್ಕ ಕಾರಣ ಭಿನ್ನವಾಗಿಯಿದ್ದಿತೆಂದರೆ, ಅದು, ನಿಶ್ಚಯವಹುದೆ ? ಆದಿ ಅನಾದಿಯಿಂದ ತತ್ತ್ವ ಮುನ್ನಲಾದ ಪರತತ್ವಮಂ ತಿಳಿದು ನೋಡಲು ನೀನೆ ಸ್ವಯಂಜ್ಯೋತಿಃ ಪ್ರಕಾಶನೆಂದಱಿಯಲು ನಿನಗೆ ನೀನೇ ಗುರುವಲ್ಲದೆ ನಿನ್ನಿಂದಧಿಕವಪ್ಪ ಗುರುವುಂಟೆ ? ॥

* * * *

End :—

. . . ನಿಃ ಪತಿಯಲ್ಲ ನೋಡಾ, ಯನ್ನ ಅಜಗಣ್ಣತಂದೆ ಶಬ್ದಕ್ಕೆ ಹೇಸಿ ಮುಗ್ಧನಾದನು ॥ ೧೦೨ ॥ ನಿನ್ನನಿ ।

(ವಿ-ವಿ.)—

ಅಸಮಗ್ರ. ಅತ್ಯಂತ ಶಿಥಿಲ. ವೀರಶೈವ ವೇದಾಂತವಿಷಯವನ್ನು ಬೋಧಿಸುವ ವಚನಗಳಾಗಿವೆ.

No. 803. ಶಿವಗಣ ಚಾರಿತ್ರ.

ŚIVAGAṆA CĀRITRA.

Substance, palm-leaf. Size, $11\frac{5}{8} \times 1\frac{1}{8}$ inches. Pages, 392. Lines, 6 to 7 on a page. Character, Kannaḍa. Condition, injured. Appearance, old. Mode of writing, good.

Begins on fol. 1-*a* of the manuscript. The other work herein is :— Turaṅgadhāṭī (Skt.), fol. 197-*a*.

Complete.

Gives the story of the attendants of Śiva and explains the greatness of the Vīraśaivas and devotion to Śiva. The author is Śāntavīra or Śāntavīra-dēśika.

Beginning :—

ಶಿವಗಣಚಾರಿತ್ರ ಶಾರ್ದೂಲ ವೃತ್ತ ॥

ಶ್ರೀಸದ್ಭಕ್ತಮನೋನಿವಾಸ ಶರಣಾನಂ . . . ಯಂ ।
ದೋಃಖಾರಣ್ಯಕೃಶಾನು ಕೋಮಲಶರೀರಂ ಕೋಟಿಸೂರ್ಯಪ್ರಭಂ ॥
ಐಶ್ವರ್ಯಾಸ್ಪದ ಪನ್ನಗೇಂದ್ರ . ಚೇಷು ಭಸ್ಮಾಲತೋ ॥
ಲ್ಲಾಸಂ ಪ್ರೇಮದೊಳೆನ್ನನೊಲ್ದು ಸಲಹೈ ಶ್ರೀಶಾಂತವೀರೇಶ್ವರಾ ॥

ಸಾಂ ॥ ಶ್ರೀಮತ್ಪಂಚವದನ ಧನದಾಯಕ । ಪ್ರೇಮ ಪ್ರಮಥಗಣವರದ ॥
ಸೋಮಾರ್ಧಜೂಟ . ಶ್ರೀ . . . ಯ ಸಲಹೆನ್ನನೊಲಿದು ।
ಚಿತ್ರಾರಮಣಶತಪತ್ರಮಿತ್ರಾನಲ । ನೇತ್ರ ಪವಿತ್ರಚಾರಿತ್ರ ! ॥
ರಾತ್ರಿಂಚರಣ ಸೊ . . . . ಮಗೆ ಮಂಗಲವಾ ॥
ಅಧ್ವರ ತ್ರಿಪುರಾಸುರದ್ವಿಪ ವೈಸಾರಿಣಧ್ವಜ ದುರಿತಕೃತಾಂತ ॥
ವಿಧ್ವಂಸ ವಿಧಿ ವಿಷಜಾಕ್ಷ ಮಾ (?)
ಅಂಬಿಕಾಸ್ಯಾಂಭೋಜಾತಾರ್ಕ ಶರಣಕ । ದಂಬಕ್ಕೈರವಹಿಮಕಿರಣ ॥
ಶಂಬರ ಶತ್ರು ಕುಂಭಿನೀಧರ ಕುಲಿಶತ್ರಿ । ಯಂಬಕ . . . . ॥
ಪಕ್ಷಿಪತಾಕನಕ್ಷಿಕ್ರಮ ಕಾಳ್ಬಸ । ಭಕ್ಷ ಭಜಕಜನರಕ್ಷಾ ! ॥
ಮೋಕ್ಷಪ್ರದಾಯಕ ಷಡಕ್ಷರ ರೂಪಮಾ । ಪಕ್ಷಯ ಶಿವ ಶ ರ . . .

* * * *

ಓಂಕಾರಾರ್ತ್ಥವ ನೊಲಿದು ನಿರೂಪಿಸಿ । ಪಂಕಜೋದ್ಭವನ ತಿಳುಪಿದಾ ॥
ಶಂಕರಾರ್ಭಕಷಣ್ಮುಖನೀ ಕೃತಿಯನ । ಲಂಕಾರಗೆಯ್ದುನಡಸುಗೆ ॥
ವಾರಣವದನ ವಿದ್ಯಾಬ್ಧಿಶಶಾಂಕ ಕು । ಠಾರ ಮೋದಕಪಾಶಹಸ್ತಾ ॥
ಮಾರಮರ್ದನದಯಾಪಾರ ಗಣೇಶ ವಿ । ಸ್ತಾರ ಸನ್ಮತಿಯೀವುದೆನಗೆ ॥
ಭೃಂಗೀಶ್ವರನ ಕೀರ್ತಿಸಿ ನಂದೀಶ್ವರ । ನಂಘ್ರಿಗೆರಗಿ ವೀರೇಶಾ ॥
ಲಿಂಗ ಸತ್ಕೃತಿ ಪಡೆದೀ ಕೃತಿಯ ಸು । ಮಂಗಲವೆನಲುಸುರುವೆನು ॥
ರುದ್ರನನುಜ್ಞೆಯೊಳ್ಧರಣಿಗೆಳ್ತಂದು ವಿ । ರುದ್ಧವಾದಿಗಳ ಭಂಗಿಸಿದ ॥
ಅರ್ಧೇಂದುಮೌಳಿಯ ಸಮರೂಪ ತೋಂಟದ । ಸಿದ್ಧಲಿಂಗಾರ್ಯ ಮಾಂ [ಪಾಹಿ ॥
ಸೃಷ್ಟಿಯೊಳ್ ಜಂಗಮಾರ್ಚನೆಯಿಂದ ಮೆರೆದ ಬ । ಲ್ದಿಟ್ಟ ಹೋಳಸ ಹಂಪೆ [ಯಾಖ್ಯ ।
ಕಟ್ಟಿಗೆಸಂಗಯ್ಯ ಕೊಟ್ಟೂರ ಬಸವೇಶ । ನಿಷ್ಟಸಿದ್ಧಿಯನೀವುದೆಮಗೆ ॥
ಚಾಮರಾಜೇಂದ್ರನ ಸಭೆಯೊಳು ತರ್ಕಿಪ । ರಾಮದೀಕ್ಷಿತನ ಭಂಗಿಸಿದ ॥
ಶ್ರೀಮದ್ವೀರಣಾರಾಧ್ಯತನುಜ ಗುಣ । ಧಾಮ ಚೆನ್ನಾರ್ಯ್ಯ ರಕ್ಷಿಪುದು ॥
ಮಲ್ಲಣಾರಾಧ್ಯ ಕೆರೆಯಪದ್ಮಸಂಭವ । ದಲ್ಲಣ ಸೋಮಯ್ಯಮುಖ್ಯ
ಫುಲ್ಲಶರಾರಿಯ ಸತ್ಕವಿಗಳ ಪಾದ । ಪಲ್ಲವಕಾನು ವಂದಿಸುವೆ ।
ಪುದಿದಷ್ಟಾದಶವರ್ಣನರಸ ಚೆ । ಲ್ವೊದವಿದ ಸಂಧಿ ಸಮಾಸ ।
ಮುದದೊಳಱಿವ ಪ್ರಾಜ್ಞರೀ ಕೃತಿಯೊಳು ತ । ಪ್ಪುದಯಿಸೆ ತಿದ್ದಿ ಮೆರೆವುದು ।
ಪರಿಮಳಮಿಳತ್ರದಿವ್ಯಾಂಗದೊಳ್ ದುರ್ಗಂಧ । ಮರಸುವ ಮಕ್ಷಿಕನಂತೆ ॥
ಸರಸಸತ್ಕಾವ್ಯದಿ ಬಲ್ಲರಂದದಿ ತಪ್ಪ । ನರಸುತಲಿಹರು ದುರ್ಜನರು ॥
ಮಾಡಿದ ಕಾವ್ಯವ ಮನಮುಟ್ಟಿ ಕೇಳ್ದುಕೊಂ । ಡಾಡಿ ಹೋಗುತ ಪಿಂದೆ ಜರೆವಾ ।
ಮೂಢರಂತಿರಲಿ ವಿದಗ್ಧಸಂತತಿ ನಲಿ । ದಾಡಿ ಲಾಲಿಪುದೀ ಕೃತಿಯಾ ॥
ಯತಿಯಲಂಕಾರ ವಿಭಕ್ತಿ ಸಮಾಸೋ । ನ್ನತಿ ಶಬ್ದಾರ್ತ್ಥವನಱಿಯೆ ॥
ಶಿತಿಕಂಠ ಪೇಳ್ದಿನ ಲುಸುರ್ದೆನಲ್ಲದೆಯೆನ್ನ । ಮತಿಯೊಳೀ ಕೃತಿಯ ಪೇಳದೆನೆ ॥
ಅಂದಿನ ಕವಿಗಳು ಭವನನೊಲಿಸಿ ಕೊಂಡ । ರಿಂದಿನ ಕವಿಗಳೇನೆಂದು ॥

ನಿಂದ್ಯವಾಡದಿರಿ ಕವೀಂದ್ರರೊಳ್ಘನ ಕಿರಿದೆಂದಿಲ್ಲವಾವ ಕಾಲದೊಳು ॥
ನೋಡಿ ಪಠಿಸಬಹುದಖಿಳಶಾಸ್ತ್ರಂಗಳ । ನಾಡ ಮಾತುಗಳಾಡಬಹುದು ।
ಪ್ರೌಢಿಯಿಂ ಲಕ್ಷಣ್ಯ ಕಾವ್ಯಪ್ರಬಂಧವ । ಮಾಡುವ್ರದಾರಿಗೆ ಸಾಧ್ಯ ॥
ನಾನಾಲಂಕಾರ ನಾನಾವರ್ಣ ನಾ । ನೂನ ಸತ್ಕೃತಿಯನುಗೊಳಸಿ ॥
ನಾನಾಕಾವ್ಯವ ಮಾಳ್ಪ ಕವೀಂದ್ರಸಂ । ತಾನಕೆನ್ನಾನೆರಗುವೆನು ॥
ಒಂದು ಮಾತ ಮರೆಸಿ ನುಡಿವ್ರದಸಾಧ್ಯ ಚೆ । ಲ್ವೊಂದಿದ ಪದದಭೀಳವನು ॥
ಬಂಧಿಸಿ ಕಾವ್ಯವೆಂದೆನಿಸುವ ಭವಕೃಪೆ । ಯಿಂದಲ್ಲದೆನಗೆ ತೀರುವ್ರದೆ ॥

* * * *

ಶಿವಗಣಾಚರಿತವೆಂದೆನಿಪೀ ನಾಮದಿಂ । ದವನಿಯೊಳೆಸೆವೀ ಕೃತಿಯಾ ॥
ಸುವಿಲಾಸದಿಂ ಪೇಳ್ದನಾರೆನಲುಸುವರ್ಣ ಶಾಂ । ಭವ ಭರ್ಗ ಸತ್ಕೃಪೆಯಾಂತ ॥
ಶಿವಲಿಂಗಾರ್ಯನಾತ್ಮಜ ವೀರೇಶಾರ್ಯ । ನವನಾತ್ಮೋದ್ಭವನೆನಿಪ ॥
ಶಿವಪಾದಾಂಬುಜಯುಕ್ತ ಚೆನ್ನ ವೀರೇಶ್ವರ । ನವಿರಳಸುಖದೊಳೊಪ್ಪಿದನು ॥
ಅತನಣುಗ ಶಾಂತ ವೀರದೇಶಿಕನು ಸಂ । ಪ್ರೀತಿಯಿಂ ಪೇಳ್ದೀ ಕೃತಿಯಾ ॥
ಭೂತೇಶ ಸದ್ಭಕ್ತವ್ರಾತವಾಲಿಸಿ ಭವ । ಭೀತಿಯನಳಿದು ಬಾಳುವ್ರದು ॥

* * * *

End :—

ಮಣಿಗಣಖಚಿತವಿಮಾನದೊಳಗೆ ಸುರ । ಗಣರುಘೇಯೆನೆ ಮೂರ್ತಿಗೊಳಸಿ॥
ತ್ರಿಣಯ ಕೈಲಾಸಕೆ ಕೊಂಡೊಯ್ದು ಶ್ವೇತನ । ಗಣಪದವಿತ್ತಿರಿಸಿದನು ॥೫೦॥
ಸಕಲದೇವರ ಗಂಡನೊಪ್ಪಿದ ದಕ್ಷ್ಮಕ । ಮುಖಪುರಮಥನ ನೊಪ್ಪಿದನು ॥
ಅಖಿಳಬ್ರಹ್ಮಾಂಡವ ನಾಡಿಪ ಸೂತ್ರಧಾ । ರಕ ಶಿವ ಸುಖದೊಳೊಪ್ಪಿದನು ॥
ಶ್ರೀಶೈಲ ಕಾಶಿ ಕೇದಾರಕೆ ಹೋಗುತಿ । ರ್ಪಾಸಜಿತೇತಕೆ ಮನಮುಟ್ಟಿ ॥
ಈ ಶಿವಶರಣಕಥೆಯ ಕೇಳಲವರ್ಗೆ ವಿ । ಶೇಷಫಲವನೀಯದಿಹುದೆ ॥
ತಪದಾನಧರ್ಮ ನಾನಾವ್ರತ ಗಿರಿಜಾ । ಧಿಪಪ್ರಜೆ ಪಂಚಾಕ್ಷರಿಯಾ ॥
ಜಪಿಸಿದಖಿಳ ಫಲ . . . . . ಕೃತಿಗೇಳ್ವ । ತ್ರಿಪುರಾರಿಯ ಭಕ್ತಜನಕೆ ॥
ಕಂಜಮಿತ್ರನ ಕರವನು ಕಂಡು ಕತ್ತಲೆ । ಪುಂಜವೆದ್ದೋಡುವಂದದಲಿ ॥
ಭಂಜಿಪ್ರದೀ ಕಾವ್ಯವ ಕೇಳ್ವವರ್ಗಳ । ರಂಜಿಪ ದುರಿತಕಂಟಕವ್ರಾ ॥
ಬರೆಯಲು ಭಕ್ತಿ ಪಠಿಸೆ ಯುಕ್ತಿಯೋದಿ ವಿ । ಸ್ತರಿಸಲು ಸನ್ಮುಕ್ತಿ ಫಲವ್ರು ॥
ಕರುಷದಿಂ ಕೇಳಲ ಷ್ಟೈಶ್ವರ್ಯ ಸಿದ್ಧಿಯು । ದೊರೆಗೊಬುದಿಂತಿದು ಸತ್ಯ ।
ಓದುವವರ್ಗೆ ವಾಗ್ಭೂಷಣ ಕೇಳ್ವ ವಿ । ನೋದಿಗಳ್ಕರ್ಣಾ ಮೃತವ್ರು ॥
ಮೇದಿನಿಯೊಳಗೆ ರಾಜಿಪ್ರದೀ ಕಾವ್ಯ ತಾರಾಧೀಶಸೂರ್ಯರಾಳ್ವನಕ ॥

Colophon :—

ಮತ್ತೇಭ ॥ ಗುರುವಾರಾಧ್ಯ ಚರಿತ್ರ ಶ್ರೀ ಬಸವಪುರಾಣಂ ಗಣಾಡಂಬರಂ ॥
ಹರಿದೇವ್ರೋ . ಭೈರವೇಶ್ವರಕಥಾಚಿಂತಾಮಣೀ ಪೂರ್ವಸ ॥
ತ್ಪುರ ಮಾರಾಧ್ಯ ಪ್ರಸಾದ ವಾಕ್ಯಮುಳಿದಾ ವೃದ್ಧಾನು ಪತ್ತಿಕ್ರಮಾ ॥
ಚರಣಾ . . . ಳ ನೋಡಿ ಪೇಳ್ದೆನೊಲವಿಂದೀ ಭಕ್ತಸತ್ಕಾವ್ಯಮಂ ।

ಸಾಂ ॥ ಶಿವಕವಿ ಶಾಂತವೀರಾಹ್ವಯು ಪೇಳ್ದ । ಶಿವಗಣಚಾರಿತ್ರವನು ॥
ಭವಭರ್ಗನಣುಗರು ಕೇಳಿ ಸುಳ್ಳುದು । ತ್ಸವದೊಳ್ ಚತ್ವಾರಿಂಶ ಸಂಧಿ ॥

ಮತ್ತೇಭ ॥ ವರನಂಜುಂಡ ಚರಿತ್ರ . . . . ಬಿಕಾ ಸ್ತೋತ್ರಮು ॥
ಸ್ಧರ ಚಾರಿತ್ರ ವಿನಾಶಸೂಚನೆ ಸದಾಸದ್ಭಕ್ತಿಯುವ್ಯಕ್ತಿಯಾ ॥
ಚರಿತಂ ಸಜ್ಜನ . . . . ತ್ರಮಂ ಬಿಲ್ಲಮೇ ॥
ಶ್ವರ ಕಾವ್ಯಾವಳಿ ಮುಖ್ಯಮಿಂತಿವನು ಪೇಳ್ದಂ ಶಾಂತವೀರಾಹ್ವಯಂ ॥
ಅಂತು ಸಂಧಿ ೪೦ ಕ್ಕಂ ಪದನು . . . .
. . . .

(ವಿ-ವಿ.)—

ಸಮಗ್ರ. ಶಾಂತವೀರ ಅಥವಾ ಶಾಂತವೀರದೇಶಿಕನೆಂಬುವನು ಈ ಗ್ರಂಥವನ್ನು ಬರೆದನು. ಈತನು ವೀರಶೈವ ಕವಿ. ಅನೇಕ ಗ್ರಂಥಗಳನ್ನು ಬರೆದಿರುವಂತೆ ತಿಳಿಯುತ್ತದೆ. " ಹಿಂದಣ ಕವಿಗಳ ಕೃತಿಯಿರಲು ಈ ಕೃತಿಯೇಕೆ " ಎಂದು ತಾನಾಗಿ ಪ್ರಶ್ನೆಯನ್ನು ಹುಟ್ಟಿಸಿ " ಹಿಂದಣ ದೇವಾಲಯಗಳಿದ್ದರೂ ಹೊಸ ಹೊಸ ದೇವಾಲಯಗಳನ್ನು ಅಲ್ಲಲ್ಲಿ ಕಟ್ಟಿ ಶಿವಲಿಂಗ ಪ್ರತಿಷ್ಠೆಯನ್ನು ಮಾಡುವಂತೆ, ಹಿಂದಣ ಕಾವ್ಯಗಳಿದ್ದರೂ ನಾನೂ ಕಾವ್ಯವನ್ನು ಹೇಳುವೆನು " ಎಂದು ಕವಿಯು ಆ ಪ್ರಶ್ನೆಗೆ ಸಮಾಧಾನವನ್ನಿತ್ತನು. ಈ ಕಾವ್ಯದ ಉತ್ಕೃಷ್ಟತೆಯನ್ನು ಕುರಿತು ಕವಿಯು " ಕನ್ನಡಿಯಂತೆ ಕಲ್ಪದ್ರುಮದಂತೆ ಬಾ । ವನ್ನದ ಪರಿಮಳದಂತೆ॥ ಚೆನ್ನಾದುದೀ ಕಾವ್ಯವೆಂದು ರಸಿಕರಘಿ। ವರ್ಣಿಸುವರು ತಮ ತಮಗೆ ॥ " ಎಂಬ ಪದ್ಯದಲ್ಲಿ ಹೇಳಿರುವನು.

ಶಿವಗಣಚರಿತೆಯೆಂದು ಗ್ರಂಥದ ಹೆಸರು. " ಒಡಲಾಸೆಗೋಸ್ಕರ ವಲಿಸಿ ಮಾನವರ ಬೆಂ । ಬಿಡದೆ ಬಣ್ಣಿಸಿ ಭವಾಂಬುಧಿಗೆ ॥ ಕೆಡೆದು ಕೆಟ್ಟವರಂತಲ್ಲ ಪಿಂತೀ ಕೃತಿ । ಮೃಡಶರಣರ ಚಾರಿತ್ರ ॥ ಎಂಬುದರಲ್ಲಿ ಶಿವಗಣರನ್ನು ವರ್ಣಿಸಿ ತಾನು ಗ್ರಂಥವನ್ನು ಬರೆವೆನಲ್ಲದೆ ಒಡಲಾಸೆಗೋಸ್ಕರ ಬರೆದ ಗ್ರಂಥವಲ್ಲವೆಂದಿರುವನು. ಇದರಿಂದ ಶಿವಭಕ್ತಿಯ ಪ್ರಸಾರವೇ ಈ ಗ್ರಂಥದ ಮುಖ್ಯೋದ್ದೇಶವಾಗಿದ್ದಂತೆ ಕಾಣುತ್ತದೆ.

No. 804. ಶಿವಗಣ ಚಾರಿತ್ರ.

ŚIVAGAṆA CĀRITRA.

Substance, paper. Size, $10\frac{3}{8} \times 9\frac{7}{16}$ inches. Pages, 182. Lines, 20 on a page. Character, Kannaḍa. Condition, good. Appearance, old. Mode of writing, good.

Incomplete.

Same work as that described above.

(ವಿ-ವಿ.)—

ಅಸಮಗ್ರ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ. ೨೩ ಸಂಧಿಗಳಿವೆ.

No. 805. ಶಿವದರುಶನದ ಅಷ್ಟಕ.
ŚIVADARUŚANADA AṢṬAKA.

Substance, Śrītāla. Size, 13⅛ × 2⅝ inches. Page, 1. Lines, 7. Character, Kannaḍa. Condition, much injured. Appearance, old. Mode of writing, good.

Complete.

Begins on fol. 69-*b* of the manuscript described under (Sanskrit Descriptive Catalogue) No. 125.

Describes the experiences of a devotee when he realizes the Supreme Being.

Beginning :—

ಕಂದ ॥ ಕೈರವದ ಕಳಾಧರನಂ ।
ಹೇರುಳಿಯು ಸಾರಹೃದಯು ಗುರುಶಂಕರನಂ ॥
ಚಾರು ಚಂಪಕದ ಚದುರನ ।
ಓರಂತಿರೆ ಕಂಡೆನೆನ್ನ ಕರಸರಸಿಜದೊಳ್ ॥ ೧ ॥
ಮರುಗದ ಪಚ್ಚೆಯು ದವನದ ।
ಗರುವನು ಮೂಂದಳಿರ ಮಹಿಮ ಗುರುಶಂಕರನಂ ।
ಸುರಗಿಯು ಸುರಹೊನ್ನೆಯು ಸುಲ ॥
ಬರ ದೇವನ ಕಂಡೆನೆನ್ನ ಕರಸರಸಿಜದೊಳ್ ॥

* * *

End :—

ವಿಕಸಿತ . . . ಪ್ರ ॥
ಷ್ಪಕದಂಬಕವೊದವೆ ಧೀರಗುರುಶಂಕರನಂ ।
ಅಕುಳದ ಬಕುಳದ ಸೊಬಗಿನ ।
ಸುಖನಿಧಿಯುಂ ಕಂಡೆನೆನ್ನ ಕರಸರಸಿಜದೊಳ್ ॥
ಶಿವದರುಶನದಷ್ಟಕ ಕಂ ॥
ದವನೋದಿದವರ್ಗೆಯೊಲಿದು ಕೇಳದವರ್ಗಂ ॥
ಅವಿರಳಭಕ್ತಿ . . . . ।
. . . ದ ಕೊಂಬುವಯ್ಯಾಗುರು . . ಶಂಕರಲಿಂಗಾ ।

(ವಿ-ವಿ.)—

ಸಮಗ್ರ. "ಶಿವದರ್ಶನದ ಅಷ್ಟಕ" ವೆಂದು ಗ್ರಂಥದ ಹೆಸರು. ಶಿವನ ಸಾಕ್ಷಾತ್ಕಾರವು ಕರದಲ್ಲಾದಾಗ ಭಕ್ತನಿಗಾಗುವ ಅನುಭವವನ್ನು ಹೇಳುವ ಪದ್ಯಗಳಿವು.

No. 806. ಶಿವನಾಮ ಮಾಹಾತ್ಮ್ಯ.
ŚIVANĀMA MĀHĀTMYA.

Substance, Śrītāḷa. Size, 13⅛ × 2⅝ inches. Pages, 2. Lines, 16 on a page. Character, Kannaḍa. Condition, much injured. Appearance, old. Mode of writing, good.

Begins on fol. 13-*b* of the manuscript described under No. 125 (Sanskrit Descriptive Catalogue).

On the greatness of Śiva's name.

Beginning :—

ರಾಗ ॥ ಕುಲವೇಕೆ ಹದಿನೆಂಟು ಕುಲದೊಳಾರಾದೊಡಂ
ಸಲೆ ಶಿವಾ ಎಂಬವರಿಗಾನೆರಗುವೆ ॥ ಪದ ॥
ಸಟೆಯಿಂದಲಾದೊಡಂ ಕುಟಿಲದಿಂದಾದೊಡಂ ।
ಅಟಮಟವ್ಯಾಪಾರದಿಂದಾದೊಡಂ ॥
ಕಟಕಿಯಿಂದಾದೊಡಂ ನಿಟಿಲನಯನನ ನೆನೆವ ।
ಪಟುಪುರುಷರಂಘ್ರಿಗಳಿಗಾನೆರಗುವೆಂ ॥ ೧ ॥
ಮದಮುಖಂ ತಾನಾಗಲಧಿಕದುರ್ವ್ಯಸನನಾ ।
ರುಧಿಯೊಳಗೆ ಮುಳುಗಿದವ ತಾನಾಗಲಿ ॥
ಪದುಳದಿಂದೆಮ್ಮ ಶಿವಪದವ ನೆನೆವವರಡಿಗೆ ।
ಉದಯ ಮಧ್ಯಾಹ್ನರಾತ್ರಿಯೊಳೆಱಗುವೆಂ ॥
ಯೆ (?ಎ)ಲ್ಲಿ ಶಮೆ ದಮೆ ಶಾಂತಿ ಯೆಲ್ಲಿ ಸಾತ್ವಿಕಸತ್ವ ॥
ಯೆ (?ವೆ)ಲ್ಲಿ ಸೈರಣೆ ಸಮಾಧಾನ ಚಿತ್ತ ॥
ಯೆಲ್ಲಿ ದಯೆ ದಾಕ್ಷಿಣ್ಯಯೆಲ್ಲಿ ಭಯಭಕ್ತಿಯಿ ॥
ದ್ದಲ್ಲಿ ಸಾಕ್ಷಾತ್ಶಿವನೆಂದೆಱಗುವೆ ॥

* * *

End :—

ಶಿವನ ನೆನೆವವನಾವನವನೆನ್ನ ಕುಲದೈವ ।
ನವನೆನ್ನ ಮನದೈವ ಯಿಷ್ಟದೈವ ॥
ಅವನೆನ್ನ ಮಾತೃಪಿತೃ ಅವನೆನ್ನ ಪರಮಗುರು ।
ಅವನೆನ್ನ ದಾತಾರನೆಂದೆಱಗುವೆ ॥

(ವಿ-ವಿ.)—

೭ ಪದ್ಯಗಳಿವೆ.

ಇವು "ಶಿವನಾಮ" ಮಾಹಾತ್ಮ್ಯವನ್ನು ಬೋಧಿಸುತ್ತವೆ.

No. 807. ಶಿವಭಕ್ತ ವಿಷಯ.
ŚIVABHAKTA VIṢAYA.

Substance, Śrītāḷa. Size, 13⅛ × 2⅝ inches. Pages, 1½. Lines, 13 on a page Character, Kannaḍa. Condition, much injured. Appearance, old. Mode of writing, good.

Incomplete.

Begins on fol. 33-*a* of the manuscript described under No. 125 (Sanskrit Descriptive Catalogue).

Deals with the devotees of Śiva.

Beginning :—

ರಾಗದೇಶಿ ॥ ಜಾತಿಭೇದವ ನುಡಿವರೇತಕಜ್ಞರು ತಾವೆ
ಓತು ಹದಿನೆಂಟು ಜಾತಿಗಳಾಗಿರಲು ಅಧಮ ॥
ಪಾತಕರ ನುಡಿಯ ಕೇಳುವರೆ ಗುರುಕರಪದ್ಮ ॥
ಜಾತ ಶೈವಾತ್ಮರುಗಳು ॥ ಪದ ॥

ಶಿಖಿ ರುದ್ರ ಶಿರ ಬ್ರಹ್ಮ ಕರ್ಣ ಗೊಲ್ಲಂ ನೇತ್ರ ।
ವಕಳಂಕ ಕ್ಷತ್ರಿಯಂ ಘ್ರಾಣ ಬಣಜಿಗನವರ ।
ಪ್ರಕಟತರ ವೈಶ್ಯಗಳ ಕುಂಬಾರ ಬೆನ್ನಸಗಯೆದೆ ಚಿಪ್ಪಿಗಂ ಚಮರ್ವೊ ।
ನಿಖಿಳ ವಸ್ತ್ರವ ನೆಯ್ವಜೇಡ ಕೈ ಕಮ್ಮಾರ ॥
ನಡುವೆ ನಾಯಿಂದ ನೊಡಲೆ ಡೊಂಬನೊಳುದೊಡೆಯೆ ॥
ಸಕಲಕೆಲ್ಲ ನೀರ ವೊಣಕಾಲು ವಕ್ಕಲಿಗ ಕಣಕಾಲು ತಾ ಕುಱುಂಬಾ ॥ ೧ ॥

End :—

ಹರಿಯು ಮೇಲಿಡೆದ ಹಸ್ತವನಿರಿಸಿ ಕಮಲಜನ ।
ಶಿರದೊಳಗೆ ಬಲದ ಕರವಿಟ್ಟು ॥
ಮುರುರೆ ದುರುರೇ ರಾವುರೇಯೆಂಬ ಭರವಸದಿ ।
ಗುರುಂಯು ಯೆನ್ನ ಕರಸ್ಥಳಕೆಯ್ದಿ ಬಂದಂ ॥
ಮಂಗಳರವಂಗಳಂ ಮಾಡಿ ಮಜ್ಜನ ಭೋಜ ।
ನಂಗಳಂ ಮಾಡಿ ಮುದದಿಂದ ॥
ಗಂಗಾವರದ ರಮಣ ಗುರು ಶಂಕರೇಶ ಎ-
ನ್ನಂಗೈಯ್ಯ ಮೇಲೆ ಹೆರೆ ಹಿಂಗದಿರ್ದಂ ॥

(ವಿ-ವಿ.)—

ಅಸಮಗ್ರ. ಈ ಪದ್ಯಗಳು ಶಿವಭಕ್ತರ ವಿಷಯವನ್ನು ತಿಳಿಸುತ್ತವೆ. "ಸಂಸ್ಕೃತ ಡಿಸ್ಕ್ರಿಪ್ಟಿವ್ ಕ್ಯಾಟಲಾಗ್" ನಲ್ಲಿ ೧೦೫೫ ನೆಯ ನಂಬರಿನ ವಿವರಣೆಯಲ್ಲಿ ಈ ಗ್ರಂಥದ ಹೆಸರನ್ನು "ಜಯಂತೀಶ ವಿಷಯ" ಎಂಬುದಾಗಿ ಕೊಟ್ಟಿದೆ. ಆದರೆ ಈ ಭಾಗದಲ್ಲಿ ಜಯಂತೀಶಯೆಂಬ ಹೆಸರು ಕಂಡು ಬರುವುದಿಲ್ಲ.

No. 808. ಶಿವಪಾರಮ್ಯವಿಷಯ.

ŚIVAPĀRAMYAVIṢAYA.

Substance, palm-leaf. Size, $16\frac{1}{4} \times 1\frac{3}{16}$ inches. Pages, 4. Lines, 6 on a page. Character, Kannaḍa. Condition, very much injured. Appearance, old. Mode of writing, good.

Begins on fol. 29-*a* of the manuscript described under No. 683 ante.

Incomplete.

On the greatness of Śiva.

Beginning :—

ಪಲ್ಲವಿ ॥ ನಮೋ ನಮೋ ನಮಶ್ಶಿವಾಯ ಎಂದು
ನಿಮ್ಮ ವೇದಗಳು ಸಾರುತಲಿದೆಕೊ ॥ಪಲ್ಲ॥
ಭರ್ಗೋದೇವ ಎನುತ ಗಾಯತ್ರಿಯು
ಸ್ವರ್ಗಮರ್ತ್ಯದೊಳು ಸಾರುತಲಿದೆಕೊ
ದುರ್ಗುಣ ದ್ವಿಜರೆಲ್ಲ ವ್ರೋದಿ ಕೇಳಿ ಮೋಕ್ಷ
ಮಾರ್ಗವರಿಯದೇಕೆ ಮತಿಭ್ರಷ್ಟರಾದರೊ ॥೧॥

ಅಗ್ನಿಮೀಳೇ ಪುರೋಹಿತಂ ಎಂದು
ಋಗ್ವೇದವು ಕೊಂಡಾಡುತಲಿದೆಕೊ
ತಜ್ಞರು ಹೀಗೆಂದು ತಾವೆಯೋದಿ ಕೆಟ್ಟ
ಅಜ್ಞಾನಿಗಳಿಗೆ ನಾನೆಂಬೆ ಶಿವನೆ ॥೧॥
ರತಿವಿಶ್ವಾಧಿಕೋ ರುದ್ರ ಎನುತ ಯಜು
ಶ್ರುತಿ ವಿಶ್ವತೋಚಕ್ಷುರುತ ವೆನುತಿರಲು
ಅತಿಬುದ್ಧಿಯಿಂದೀಶ್ವರೋಃ ಮುಖವೆಂದೆಂಬ
ಶ್ರುತಿಮತ್ತವರಿಯರೆ ಶುದ್ಧವೈದಿಕರು ॥೨॥

End :—

. . . . ನುತ್ರಂ
ಪುಂಡರೀಕಾಕ್ಷ ಬ್ರಹ್ಮಾದಿಗಳೆಲ್ಲರು
ಖಂಡೇಂದುಧರನ ವೀರ್ಯದಿ ಪುಟ್ಟಿದರೆಂದು
ಕೊಂಡಾಡೆ ಶಿವಸಂಕಲ್ಪವುಪನಿಷತ್ತು ॥
ಯೋವಾ ಮಹಾದೇವೋ ಮಾತರ್ಗಂಗು ' (?)
ಆ ವಿಶೇಷದಿಂದತಿ ಬ . ಯಿಂದವೆ ।
ತೇವಿಕ . . . . ।
. . . . ನೆ ॥
ಪ್ರಣವವೆ ಯಜ್ಞಸ್ಥಾನಕೆಂದೆನಲು
ಪ್ರಣವವೆ ಯಾವಾಸ್ಥಾನಕೆಂದೆನಲು
ಪ್ರಣವಸ್ವರಸ್ಯ ಮಹೇಶ್ವರೋ ಎನೆ
ಪ್ರಣವಸ್ವರೂಪ ಶಿವನ ಭಜಿಸಿರೋ ॥
ಮಂಗಳಮಹಿಮನು ಮುದ್ಗರು ಅವಧೂತ
ಲಿಂಗವಲ್ಲದೆ ಬೇರಿಲ್ಲ . . . . . . ।
. . . . ಷ್ಟಾರ್ಥ ।
ನಾಂಗುಲವೆಂದೆಂಬ ವೇದವೆ ಸಾಕ್ಷಿ ॥

(ವಿ.ವಿ.)—

ಇದರಲ್ಲಿ 37 ಪದಗಳೂ ಒಂದು ಪಲ್ಲವಿಯೂ ಇವೆ. ಶಿವಪಾರಮ್ಯವನ್ನು ಪ್ರತಿಪಾದಿಸುವುದಾದುದರಿಂದ ಇದಕ್ಕೆ ಶಿವಪಾರಮ್ಯವಿಷಯ ಎಂದು ಹೆಸರು ಕೊಡಲಾಗಿದೆ. ಇದು ಅತ್ಯಂತ ಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ. ಕವಿ ವೀರಶೈವಮತದವನಾಗಿರಬೇಕು. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗ್ಗೆ 683 ನೆಯ ನಂಬರನ್ನು ನೋಡುವುದು.

No. 809. ಶಿವಪಾರಮ್ಯವಿಷಯ.

ŚIVAPĀRAMYAVIṢAYA.

Substance, Śrītāḷa. Size, $7\frac{5}{16} \times 2\frac{1}{16}$ inches. Pages, 12. Lines, 8 to 9 on a page. Character, Kannaḍa. Condition, injured. Appearance, old. Mode of writing, good.

Begins on fol. 1-*a* of the manuscript. The other work herein is (1) Liṅga stōtra ṣaṭpada, fol. 7-*a*.

Incomplete.

Similar to the work described above.

Beginning :—

ಬಕಮಧ್ಯಸ್ಥಿತೋ ಹಂಸಃ ಕಾಕಮಧ್ಯಸ್ಥಿತೋ ಪಿಕಃ (?)
ಮೃಗಮಧ್ಯಸ್ಥಿತೋ (?ತಃ) ಸಿಂಹಃ ಜಗ[ಮ] (ನ್ಮ)ಧ್ಯಸ್ಥಯೋಗಿನಾಂ॥

ಟೀಕೆ ॥ ಬೆಳ್ಳಕ್ಕಿಯ ಮಧ್ಯದಲ್ಲಿ ಹಂಸಯಿದ್ದಹಾಂಗೆ, ಕಾಗೆಗಳ ಮಧ್ಯದಲ್ಲಿ ಕೋಗಿಲೆ ಯಿದ್ದಹಾಂಗೆ, ಮೃಗಮಧ್ಯದಲ್ಲಿ ಸಿಂಹವಿದ್ದಹಾಂಗೆ, ಜಗತ್ತಿನ ಮಧ್ಯದಲ್ಲಿ ಶಿವಯೋಗಿಗಳು ಹಾಂಗೆಯಿ[ಹುದು](ಹರು) ॥

* * * * *

End :—

ವಿಷ್ಣುಭಕ್ತಶ್ಚ ಮದ್ಭಕ್ತೋ ನಾಸ್ತಿನಾಸ್ತಿ ಪರಾ ಗತಿಃ ॥
ಶಂಭು ಭಕ್ತ್ಯೇವ ಸರ್ವೇಷಾಂ ತ್ರಸ್ಯಾಮೇವ ಮಯೋದಿತಂ ॥

ಟೀ ॥ ವಿಷ್ಣುಭಕ್ತಿಯ ಮಾಡಿದಡೆಯು ಎನ್ನ ಭಕ್ತಿಯ ಮಾಡಿದಡೆಯು ನರಕವುಂಟು । ಶಿವಭಕ್ತಿಯ ಮಾಡಿದಡೆಯು ಮುಕ್ತಿಯುಂಟು ಸಂದೇಹವಿಲ್ಲವೆಂದು ಬ್ರಹ್ಮ ನುಡಿದ ವಾಕ್ಯವು ॥

(ವಿ.ವಿ.)—

ಅಸಮಗ್ರ. ಶಿವಭಕ್ತರ ಮತ್ತು ಶಿವ ಭಕ್ತಿಯ ಉತ್ಕೃಷ್ಟತೆಯನ್ನು ಬೋಧಿಸುವ ಸಂಸ್ಕೃತಶ್ಲೋಕಗಳೂ, ಅವುಗಳ ಕನ್ನಡವ್ಯಾಖ್ಯಾನವೂ ಇವೆ. ಯಾವ ಗ್ರಂಥದ ಭಾಗವೆನ್ನುವುದು ಗೊತ್ತಾಗುವುದಿಲ್ಲ.

No. 810. ಶಿವಭಕ್ತರ ವಚನ.

ŚIVABHAKTARA VACANA.

Substance, Śrītāḷa. Size, 9⅞ × 2 inches. Pages, 48. Lines, 8 to 10 on a page. Character, Kannaḍa. Condition, much injured. Appearance, old. Mode of writing, good.

Incomplete.

Contains the sayings of Śaiva saints.

Beginning :—

. . ದೇವರ ಬೆಸಗೊಳಲು ಆ ಪ್ರಭುದೇವರು ಮರಳಿ ಚಿಕ್ಕದಣ್ಣಾಯಕರ ಬೆಸಗೊಂಬ ಪ್ರಸ್ತಾವದ ವಚನ ॥ ಅದ್ವೈತವೆಂಬ ಶಿಶುವೆನ್ನ ಕರಸ್ಥಳವ ಸೋಂಕಲೊಡನೆ ಎನ್ನ ತನ್ನಂತೆ ಮಾಡಿತ್ತಾಗಿ, ಯೆನ್ನನಾನೆಂಬ ವಿಚಾರವು ಅಱತು ಹೋಯಿತ್ತು ಕೇಳಾ, ಮತ್ತೆ ಅನ್ಯವಿಚಾರವನೆಂತೂ ಅಱಿಯೆ । ಎನ್ನ ಪೂರ್ವಾಪರವ ನಿಮ್ಮಿಂದ ಅಱಿಯಲೆಂದು ಬಂದು ನಿಮ್ಮ ಅಱಿಹೊಕ್ಕೆನಾಗಿ ಸಂಗನ ಬಸವಣ್ಣನ ಮಹಿಮೆಯ ನಾನೆತ್ತಬಲ್ಲೆನು । ಗೊಗೇಶ್ವರ (? ಗೊಹೇಶ್ವರ, ಗುಹೇಶ್ವರ) ಸಾಕ್ಷಿಯಾಗಿ ಸಂಗನ ಬಸವಣ್ಣ ನಿನ್ನಂತರಂಗದೊಳಗೆ ಬೆಳಗುತ್ತೈರ್ಧಾನೆ । ಯೆನಗೊಮ್ಮೆ ಬಸವಣ್ಣನ ಘನವ ತಿಳುಹಿ ಕೊಡಾ ಚೆನ್ನಬಸವಣ್ಣಾ ॥ ೬೫೦ ॥

ಮತ್ತಂ ಆದಿಯ ತೋಱಿ ಅನಾದಿಯ ನಱುಹಿದೆ । ಇಹವ ಕೆಡಿಸಿದೆ । ಪರವ ನಿಲಿಸಿದೆ । ಗೊಹೇಶ್ವರನ ಶರಣ ಸಂಗನ ಬಸವಣ್ಣನ ಪೂರ್ವಾಪರವ ಹೇಳಿ ಯೆನ್ನನುಳುಹಿಕೊಳ್ಳಾ । ಚೆನ್ನಬಸವಣ್ಣಾ । ೬೫೧ ॥

ಇಂತು ಬಸವರಾಜದೇವರ ನಿಲವನರುಹೆಂದು ಪ್ರಭುದೇವರು ಬೆಸಗೊಳ್ಳಲು ಅದಕ್ಕೆ ಚಿಕ್ಕದಣ್ಣಾಯಕರು, ಪ್ರಭುದೇವರೊಡನೆ ಬಸವರಾಜದೇವರ ಪೂರ್ವಾಪರಸಂಬಂಧಮಂ ಸುಜ್ಞಾನದೃಷ್ಟಿಯಿಂದೀಕ್ಷಿಸಿ ಬಿನ್ನೈಸುತಿರ್ದ್ದನದೆಂತೆನೆ ॥

* * * *

End :—

ಅನಿತರೊಳಗೆ ಮಾರಯ್ಯಗಳ ಸತಿ ಬಸವಾದಿ ಅಸಂಖ್ಯಾತರ ಹೃತ್ಕಮಲಮಧ್ಯದಲ್ಲಿ ಮಹಾಜ್ಞಾನದಿಂ ನಿರೀಕ್ಷಿಸಿ ಅವರವರ ಆಯತದ ಪದಾರ್ತ್ಥವ ನಿಮಿಷದೊಳನುಗೆಯ್ದು ವಿಭೂತಿಯ ಸಂಬಂಧಿಸಿ, ಕರತಹುದೆಂದು ಬಿನ್ನೈಸಲು, ಅದಕ್ಕೆ ಮಾರಯ್ಯಗಳು ಸತ್ಯವೆಂಬ ತಟ್ಟೆಯಲ್ಲಿ ಮಹಾಜ್ಞಾನವೆಂಬ ವಿಭೂತಿಯನಿಟ್ಟು ದಳದಳನೆ ಹರಿದು ತಂದು ಬಸವಾದಿ ಅಸಂಖ್ಯಾತ ಪ್ರಭುದೇವರ ಮುಂದೆ ವಿಭೂತಿಯನಿಟ್ಟು ಅಸಂಖ್ಯಾತರ್ಗೆ ಮುಖ್ಯವಾದ ಬಸವ ರಾಜದೇವರು “ ಅಮಲೇಶ್ವರಲಿಂಗದ ಮನೆಯಲ್ಲಿ ಪ್ರಸಾದ ಸಲಿಸುವ ಬಾರಾ ಸಂಗನ ಬಸ ವಣ್ಣಾ ” ಎಂದು ಕರೆವ ಪ್ರಸ್ತಾವದ ವಚನ ಸತ್ಯವೆಂಬ ತಟ್ಟೆಯಲ್ಲಿ ಚಿತ್ತಶುದ್ಧಿಯೆಂಬ ವಿಭೂ ತಿಯ ಬೈಚಿಟ್ಟು ಸಕಲ ಸಂಪದಪ್ರಮುಖರು ಮುಂತಾಗಿ ಅಮಲೇಶ್ವರ ಲಿಂಗದ ಆಶ್ರಯದಲ್ಲಿ ಪ್ರಸಾದವ ಕೊಂಬುದಕ್ಕೆ ಬಾರಾ ಸಂಗನ ಬಸವಣ್ಣಾ ॥೨೩ ॥

• ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ—ಅಲ್ಲಾಯೆನ್ನಬಾರದು, ಅಹುದೆನ್ನ ಬಾರದು.

(ವಿ-ವಿ.)—

ಅಸಮಗ್ರ. ಈ ವಚನಗಳು ಅನೇಕಭಕ್ತರಿಂದುಕ್ತವಾದುವುಗಳು.

ಚೆನ್ನಬಸವಣ್ಣಾ, ಅಲ್ಲಮಪ್ರಭುವೇ, ಕಲಿದೇವಾ ಎಂದು ಮೊದಲಾಗಿ ಈ ವಚನಗಳು ಅಂತ್ಯವಾಗುತ್ತವೆ. ಇದರಲ್ಲಿ ಪ್ರಭುದೇವ, ಚಿಕ್ಕದಣ್ಣಾಯಕರು, ಮಡಿವಾಳ ತಂದೆ, ಬಸವ, ಅಯಿದಕ್ಕಿಯ ಮಾರಯ್ಯ, ಅಯಿದಕ್ಕಿ ಮಾರಯ್ಯನ ಸತಿ ಮೊದಲಾದವರ ವಚನಗಳವೆ. ಕಾಲಚಕ್ರ ಮೊದಲಾದ ವಿಷಯಗಳವೆ.

No. 811. ಶಿವತತ್ವಸಾರ.

ŚIVATATVASĀRA.

Substance, Śrītāḷa. Size, 11⅝ × 2 inches. Pages, 42. Lines, 8 to 9 on a page. Character, Kannaḍa. Condition, much injured. Appearance, old. Mode of writing, good.

Begins on fol. 166-*a* of the manuscript described under No. 745 ante.

Incomplete.

Deals with the principles of Vīraśaivism. The author is Mallikārjuna Paṇḍitārādhya, who is also the author of the same work in Telugu.

Beginning :—

ಭುವನದೊಳು ರುದ್ರ . . . .
. . . . . . ॥ ೧೮೩ ॥
ಶ್ರುತಿಯಿಂದೀ ಪರಿ ನೋಡಲ್ ॥
ಕ್ಷಿತಿಯೊಳ್ ಸಂದೇಹಮಿಲ್ಲ ಶಿವಭಕ್ತರ್ ವಿ- ॥

ಶ್ರುತವಾಗಿ ಮನುಜಚರ್ಮ ॥
ವೃತಗುದ್ರುರೆಯಹರು ತತ್ವವಿದ್ವೃಷ್ಟಿಗಳಂ ॥
ಭಾವಿಸೆ ಭಕ್ತ ತ್ರಿಜಗ ॥
ತ್ಪಾವನರು ಭವಾಂಧಕಾರಪಟಳವಿಘಟನೋ ॥
ದ್ಭಾವಿತ್ರ ಮಹಿಮಾನರ್ಕವಿ ॥
ಭಾವನರವಿನಾಶರತಿಕೃಪಾಪರರೆಂದುಂ ॥
ಮಾನುಷಚರ್ಮಂ ವೃದುಗಿ ॥
ದೀರ್ ನೆವದಿಂದಿಪ್ಪ ರುದ್ರುರೀಶ್ವರಭಕ್ತರ್ ॥
ಮಾನುಷರೆ ಯಿವರು ಲೋಕದ ॥
ಆನೇಕಾಚಾರ್ಯ್ಯರೀಶ್ವರಾಜ್ಞಾಧಾರರ್ ॥
ಮಾನಿಸಲಾಗಲ್ " ಮದ್ಭ ॥
ಕ್ತಾ ನ ವಿನಶ್ಯಂತಿ "ಯೆನಲು ಯೋಗ್ಯಮೆ ಯೋಗೀ ॥
ಶಾನ! ಭವತ್ಕಾರುಣ್ಯಾಂ ॥
ಭೋನಿಧಿಯೊಳಗದ್ದಿ ಮುಕ್ತನಂ ಮಾಡು ಶಿವಾ!

* * * *

" ದೇವಲಕನು. "

ಶ್ರುತಿಶಾಸ್ತ್ರಮನೋ[ದಿ](ದ)ದ ಡೀ ॥ (? ದೀ)
ಕ್ಷಿತನಂಟಲು ಬಾರದಾಗಿರಭಜಕನುಮದೀ ॥
ಕ್ಷಿತನುಂ ಮುಟ್ಟಲು ಬಾರದು ।
ಸತತಂ ಶಿವಲಿಂಗಮುಂ ಶಿವಾಗಮವಿಧಿಯಿಂ ॥ ೨೩೪ ॥

* * * *

ಗತಜನ್ಮದ ಸಂಸ್ಕಾರ
ಸ್ಥಿತಿಯಿಂ ನಿಜಭಕ್ತಿಯಿಂದ ಪೂಜಿಸುವಂಗೀ ॥
ಕ್ಷಿತಿಯೊಳ್ ಶಂಕರನೇ ಗುರು ॥
ಮತ ಶಾಂಭವ ದೀಕ್ಷೆಯಲ್ಲಿ ಬಲ್ಲಗಲ್ಲಂ ॥

* * * *

ಕ್ರಿಯಾಸಂಪಾದನೆ :—

ಜ್ಞಾನಿಯೆನಿಪ್ಪಂ ಭಕ್ತಿ ವಿ- ॥
ಹೀನಂ ತಾನಾಗೆ ಮುಕ್ತಿಗೆಯ್ದಂ ನೃಪತಿ ॥
ಜ್ಞಾನಮಿರಲ್ ಪೋಷಿಸುವನೆ ।
ಮಾನವಪತಿ ಸೇವೆಗೆಯ್ಯದಿರೆ ಮಾನವನಂ ॥

* * * *

ಅನ್ಯೋನ್ಯಪ್ರಿಯಭಾಷಣ ।
ರನ್ಯೋನ್ಯಗುಣಾನಚರಿತ ರನ್ಯೋನ್ಯಮಹಾ ॥
ಮಾನ್ಯರು ನಿಜಗಣನಾಯಕ ॥
ರನ್ಯೋನ್ಯನಮಸ್ಕೃತಮಹಾತ್ಮರು ರುದ್ರಾ! ॥೩೯೭॥

ಅರಿದೆನೆ ಪುರಾಣತತಿಯೊಳ್ ।
ಪರಿವಿಡಿಯಿಂ ಮುನ್ನ ಪೇಳದಂತೆ ಗಣಾಢಂ ॥
ಬರಮಂ ವರ್ಣಿಸಿದೆಂ ಶಿವ ।
ಪರಮಸದಾನಂದ ಯನ್ನ ಬಲ್ಲನಿತಱೊಳಂ ॥
ಶಿವಸಂಸ್ಕಾರಾರ್ಣವದಿಂ ॥
ದವೆ ಪೊಱಮಡೆ ತೆಗೆದು ಗಣಸಮೂಹದೊಳಿರಿಸೆಂ ॥
ನ್ನವನೀತಂ ಕಂಡಿರೆಯೆನು ।
ತವೆ ಭವ ನೀಂ ಪ್ರಮಥಲೋಕವಱಿಯಲ್ಕೆನ್ನಂ ।
ಧರೆಯೊಳಗೆ ಮಲ್ಲಿಕಾರ್ಜುನ ॥
ವರಪಂಡಿತ ನೆನಿಸುತಿಹುದರಿಂ ನಿಸ್ಸಾಜ್ಞಾ ॥
ಭರವೆಸೆಯಲ್ಪ್ರಮಥರೊಳಾ ॥
ನಿರಲೆಂದೀಕ್ಷಿಸುವೆ ನಿಮ್ಮ ಬಯಸುವೆ ನೀಶಾ !

* * * *

ಪುರಾತನ ಚರಿತೆ—

ಆವಂಚದಿಂದೆ ಭಕ್ತ ।
ಭಾರ್ವಿಸಲಾ ತೆಱದಿನವರ ನವಿರತವಮಂ ನ್ಯಾ ॥
ಭಾವಿಕ ವೈಭವದಿಂದಂ ॥
ಕಾವೆ ಲಸತ್ಪದವನೀವೆ ಪರಮಾನಂದಾ ! ॥ ೪೦೨ ॥

* * * *

ಘನಭಕ್ತಿಯ ನಿಜದಯೆಯಿಂ ।
ದನುವಾಗಲ್ ಮಲೆಯರಾಜನೆಯ್ದಿದನಾಗಳ್ ॥
ಜನರೆಲ್ಲಂ ಕೂಡಲ್ ನಿಜ ॥
ತನುವೆರಸಿಯೆ ಶಿವಪುರಕ್ಕೆ ಜಗವರಿಯಲಜಾ ! ॥ ೪೨೧ ॥
ಹರಲೀಲಾಸ್ತವರಚನಾ ॥
ಸ್ಥಿರನಿರುಪಮ ಭಕ್ತಿಯಿಂದ ನಿಜಪುರಸಹಿತಂ ॥
ಸುರುಚಿರವಿಮಾನದೊಳ್ ನಿಜ ।
ಪುರಕುದ್ಭಟನೆಯ್ದನೇ ಮಹಾಮಹಿಮ ಶಿವಾ !

* * * *

ವೀರಮಾಹೇಶ್ವರ ಸ್ಥಲ ॥

ವಿಹಿತಕ್ರಿಯೆಯುಂ ಭಕ್ತಿವಿ ।
ರಹಿತಮುಮಾಗೊಡೆರಿಸಲ್ಕದಕ್ಕಂ ದುಃಖಾ ॥
ವಹಮುಂ ದಕ್ಷಂ ಮಾಡಿದ
ವಿಹಿತಕ್ರಿಯೆ ಯೆಂತದಂತೆ ಸರ್ವಾರ್ಧೀಶಾ ॥

* * * *

End :—

ವಿದಿತ ಶುಭಾಶುಭಬೋಧಾ ॥
ಸ್ಪದಮಾನವನಾಗಿ ಪುಟ್ಟಿ ಹರನಂ ಭಜಿಸಲ್ ॥

ಮುದ ಮಿಲ್ಲದೊರೆ ವಸುಗಳ (?)
ಗುದಿವರಿಯುಲ್ಕೆಂದು ಬಗೆದು ಭಜಿಸೀಶ್ವರನಂ ॥
ಶಿಷ್ಟಾಚಾರಮನುಳಿಯು
. . . . ಸಿಲ್ಲದೆ ಗರ್ವ ॥
ವಷ್ಟಂಭವೃತ್ತಿಯಿಂದಿರ ॥
ದಿಷ್ಟದೆ ನೀ ಭಜಿಸು ಭಕ್ತಿಯಿಂ ಶಂಕರನಂ । ೨೪೦ ॥
ಆಲಸ್ಯದಿನಿರದೆ ಕರಂ . . .

(ವಿ-ವಿ.)—

ಅಸಮಗ್ರ. ಮಲ್ಲಿಕಾರ್ಜುನಪಂಡಿತಾರಾಧ್ಯನಿಂದ ರಚಿತವಾದುದು. ತತ್ವಸಾರವೆಂದು ಈ ಗ್ರಂಥದ ಹೆಸರಾಗಿರುವಂತೆ ಕಾಣುತ್ತದೆ. ತೆಲುಗಿನಲ್ಲಿರುವ ತತ್ವಸಾರವೆಂಬ ಏತತ್ಕವಿ ಕೃತವಾದ ಗ್ರಂಥಕ್ಕೆ ಸರಿಹೋಲುತ್ತದೆ. ಪ್ರೌಢವಾಗಿದೆ. ೧೯೩ ನೆ ಯದು ಆರಂಭದ ಪದ್ಯವಾಗಿದೆ. ೨೪೦ ನೆಯದೆ ಕೊನೆಯ ಪದ್ಯ.

ಇದರಲ್ಲಿ ವೀರಶೈವತತ್ವಗಳು ಉಕ್ತವಾಗಿವೆ. ಇದರಲ್ಲಿ “ಭಕ್ತಗಣೋತ್ತರತ್ವ, ದೇವಲಕ, ಪ್ರಸಾದ ಸ್ಥಲ, ಕ್ರಿಯಾಸಂಪಾದನೆ, ಶಿವಕ್ಷೇತ್ರ ಮಾಹಾತ್ಮ್ಯ, ಪಾಷಂಡಿಲಕ್ಷಣ, ಗಣಾಡಂಬರ ಚರಿತೆ, ಪುರಾತನ ಚರಿತೆ, ಶಿವಭಕ್ತಿ, ಬೋಧೆ, ವೀರ ಮಾಹೇಶ್ವರಸ್ಥಲ ವೆಂಬ ಭಾಗಗಳವೆ.

ಈ ಕವಿಯ ಕಾಲವು ಸು. A.D. 12 ನೆಯ ಶತಮಾನವು.

No. 812. ಶಿವಲೋಕಾಸ್ಥಾನ-
ŚIVALŌKĀSTHĀNA.

Substance, palm-leaf. Size, 7⅛ × 1 inch. Pages, 53. Lines, 4 on a page. Character, Kannaḍa. Condition, slightly injured. Appearance, old. Mode of writing, good.

Begins on fol. 2-*a* of the manuscript described under No. 443 ante. Complete.

Describes the greatness of the World of Śiva and His Court as explained by Nandīśa to Nārada. The author is not known.

Beginning :—

ಸೂಚನೆ.

ಭಾ. ಷಟ್ಪದಿ ॥

ಶಿವಲೋಕವಮಂ ಶಿವನ ಸಭೆಯವಿಸ್ತಾರವಮಂ ।
ಶಿವಪುರಾಣದ ರುದ್ರಕೋಟಿಸಂಹಿತೆ ಯೊಳಗಂ ।
ವಿವರಿಸಿದ ನಂದೀಶ ಬ್ರಹ್ಮನಂದನಗಿದಂ ಕೇಳಿ ಕೃತಕೃತ್ಯರಹುದು ॥

ಪದ್ಯ. ಎಲೆಮುಹಿಮ ! ನಂದೀಶ ! ನಿಮ್ಮ ಕಾರುಣ್ಯದಿಂ ।
ತಿಳಿದೆವಾಂಬ್ರಹ್ಮಾಂಡದೊಳಗಖಿಲಲೋಕವಮಂ ।
ನೆಳೆಯ ನರಿದಪೆನಿನ್ನು ಶಿವಲೋಕವೆನಿತೆಂಬ ಪವಣನಾ ವಿಸ್ತಾರವಮಂ ॥

ಸುಲಭವಲ್ಲುಳಿದರ್ಗೆ ಶಿವಮಹಿಮೆ ನಿಮ್ಮಡಿಯು ।
ಸಲುಗೆಯು ಕುಮಾರಂ ಸನತ್ಕುಮಾರಕನೆಂದು ।
ಕುಲಗುರುವೆ ಕರುಣಿಪ್ಪುದೆನಲೊಲಿದು ಪೇಳ್ದವನ ಚರಣಾಂಬುಜಕ್ಕೆ ಶರಣು ॥
ಆದಡಿದನೇಕಚಿತ್ರದಿ ಕೇಳು ಮುನಿವರನೆ! ।
ವೇದಗರ್ಭಾಂಡದಿಂ ಮೇಲಿಹುದು ಶಿವಲೋಕ ।
ವಾದರದೆ [ನೊರ್ಪ] (ನೋಳ್ಪ)ತಾ ವೃದ್ಧಮೂವತ್ತೆರಡುಕೋಟಿ ವಿಸ್ತಾರ ಮನಿತು ॥
ವಾಡತರ್ಕಂಗಳುಪಮೆಗೆ ನಿಲುಕದಿಪ್ಪುದದು ।
ಹೋದ ಹೊಲಬರಿಯರಾ ಪುರವ ಸಾಮಾನ್ಯರುಗ ।
ಳಾದಿಸಿದ್ಧಾಂತವಿದ ತಿಳಿಯಕೇಳೆಂಬವ [ಚ] ನ ಚರಣಾಂಬುಜಕ್ಕೆಶರಣು ॥

* * * *

ಶಿವಲೋಕವದರ ಮಧ್ಯದಲಿ ಸಾವಿರಕೋಟಿ ।
ರವಿಯ ತೇಜದೊಳ [ಗ] ಭವ ನರಮನೆಯು ಮಣಿಗೃಹಗ ।
ಳವರ ಪರಿವಳಯ ವೈದುಕೋಟಿಯ ಹರಹು ನಾಲ್ಕು ಗೋಪುರಗಳಲ್ಲಿ ॥(?)॥
ನವರತುನ ದಿವ್ಯತೇಜೋಮಯದ ಕೋಟಿಗಳು ।
ವಿವಿಧಚಿತ್ರದ ಜ್ಯೋತಿರ್ಮಯದುಪ್ಪರಿಗೆಗಳ ।
ವಿವರಿಸುವಡೆಳವೆ ತನಗೆಂಬ ನಂದೀಶ್ವರನ ಚರಣಾಂಬುಜಕ್ಕೆ ಶರಣು ॥ ೧೫ ॥

* * * *

ಇದು ಸೇವ್ಯದಿಂ ರುದ್ರಕೋಟಿಸಂಹಿತೆಯೆನಿಪ್ಪ ।
ದಿದುವೆ ಶಿವಲೋಕವಿಸ್ತಾರವರ್ಣನೆಯು ಮುಂ ।
ತಿದನಧಿಕಭಕ್ತಿಯಿಂದಾವ ಕೇಳ್ವಂ ಪೇಳ್ವನಾಲಿಸುತ ನಲಿವ ಜನಕೆ ।
ಒದಗುಗುಂ ಜಾತಿಸ್ಮರತ್ವಸೌಭಾಗ್ಯವುಂ ।
ಮದನರೂಪಂ ಧಾತ್ರಿಗೊಡೆತನಂ ಬಹಳವಾತಿ ।
ವಿದಿತ ತಪ್ಪದುಮೆಂದು ಪೇಳ್ವ ನಂದೀಶ್ವರನ ಚರಣಾಂಬುಜಕ್ಕೆ ಶರಣು ॥
ಕೇಳ ಚರಿತಾರ್ಥನಾದೆಂ ಗುರುವೆ! ಪೇಳು ಶಿವ ।
ನೋಲಗದ ವಿಸ್ತರವನಾರಾರಿಹರು ಸಲುಗೆ ।
ವಾಳರಾರವರ ಪೆಸರೇನಿರುವ ತಾಣವಾವಾವೆಡೆಗಳೆಂದೆಂಬುದಂ ॥
ಲಾಲನೆಯೊಳೆನಗುಸುರ್ವುದೀ ಕಥೆಯ ಲೋಕಹಿತ ।
ಜಾಳಿಸುವ ದುಷ್ಕರ್ಮಜದ ಬಂಧನಂಗಳಂ ।
ಬಾಲಕನ ನುದ್ಧರಿಪುದೆನಲು ಪೇಳುವ ನಂದಿ [ಮಲಯ] ಚರಣಾಂಬುಜಕ್ಕೆಶರಣು ॥ (?)

* * * *

End :—

ಈ ಮಹಾಶಿವಲೋಕಮಂ ಶಿವಾಸ್ಥಾನಮಂ ।
ಸೋಮಧರನಂ ಗಿರಿಜೆಯ ಸಭೆಯ ವಿಸ್ತಾರಮಂ ।
ಪ್ರೇಮದಿಂದಿದ ಕಡೆಯ ನಾವ ಪೇಳ್ವಂ ಕೇಳ್ವ ಲಾಲಿಸುವ ಕೊಂಡಾಡುವಾ ।

ಆಮ ಹೋತ್ರಮರ ಸಂತಾನಾಭಿವೃದ್ಧಿಯಹು ।
ದೀ ಮಹಿಯೊಳ್ಳೈಶ್ವರ್ಯ ಪರದೊಳಮರತ್ವವೆಂ ।
ದಾಮಹಾನಂದೀಶ ವೇಳ್ದನಾತನ ವಿಮಲಚರಣಾಂಬುಜಕ್ಕೆರಣು ॥

Colophon :—

ಶಿವಲೋಕಾಸ್ಥಾನ [ಮಂ] (೦) ಸಂಪೂರ್ಣಂ . ಮಂಗಳಮಹಾಶ್ರೀ.

(ವಿ-ವಿ.)—

ಸಮಗ್ರ. ಸ್ವಲ್ಪಮಟ್ಟಿಗೆ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಸೇರಿವೆ. ಅವಾವುವೆಂಬುದನ್ನು ಹಿಂದಣ ೪೪೩ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ. ೪೭. ಪದ್ಯಗಳಿವೆ. ಶಿವಲೋಕಾಸ್ಥಾನವರ್ಣನೆಯೂ ಇದರಲ್ಲಿ ಉಕ್ತವಾಗಿದೆ. ಕವಿ ಯಾರೆಂಬುದು ಗೊತ್ತಾಗುವುದಿಲ್ಲ.

No. 813. ಶಿವಶರಣರ ಅಷ್ಟಕ.

ŚIVAŚARAṆARA AṢṬAKA.

Substance, palm-leaf. Size, $13\frac{3}{8} \times 1\frac{3}{8}$ inches. Pages, 3. Lines, 5 on a page. Character, Kannaḍa. Condition, much injured. Appearance, old. Mode of writing, good.

Complete.

Begins on fol. 6-*a* of the manuscript described under No. D. 6990 (Sanskrit Descriptive Catalogue).

Deals with the devotees of Śiva.

Beginning :—

ಸ್ತುತಿಸಿ ಬಾಳುವೆ ಪ್ರಮಥರೆಲ್ಲರ । ಪೃಥಿವಿಯೊಳಗತಿ ಮೆರೆದರಂ ॥
ಅತಿಶಯದ ಸಂಭ್ರಮದಿ ಲೋಕವ । ನಾಳ್ದರಂ ಸುಖ ಬಾಳ್ದರಂ ॥ ಪಲ್ಲ ॥

* * * *

End :—

ಈ ಗಣಾಷ್ಟಕೆಯಿಳಿಯೊಳತಿಸಂತೋಷದಿಂ ಸುವಿಲಾಸದಿಂ ।
ರಾಗರಚನೆಗಳಿಂದ ಪಾಡಲು ಭೋಗಮುಂ ಶಿವಯೋಗಮಂ ॥
ಬೇಗದಿಂದೊಲಿದೀವೆ ಭಕ್ತರ ಚೇಷ್ಟೆಯುಂ ಸಂತುಷ್ಟಿಯುಂ ॥
ಯೋಗಿಹೃದಯನಿವಾಸ ಶಾಂತಮಲ್ಲೇಶನಂ ಜಗದೀಶನಂ ॥

Colophon :—

ಗಣಾಷ್ಟಕಂ ಸಂಪೂರ್ಣಂ ಮಂಗಳ ಮಹಾ.

(ವಿ-ವಿ.)—

೯ ಪದ್ಯಗಳಿವೆ. ಇದಕ್ಕೆ ಗಣಾಷ್ಟಕವೆಂಬ ಹೆಸರೂ ಇದೆ. ಕವಿಕಾವ್ಯಗಳ ವಿಷಯವಾಗಿ ವಿಶಿಷ್ಟಾಂಶಗಳು ತಿಳಿದುಬರುವುದಿಲ್ಲ.

No. 814. ಶಿವಶರಣ ಪಂಚಕ.

ŚIVAŚARAṆA PAÑCAKA.

Substance, palm-leaf. Size, 6⅛ × 1⅛ inches. Pages, 5. Lines, 5 on a page. Character, Kannaḍa. Condition, very much injured. Appearance, old. Mode of writing, not bad.

Begins on fol. 85-a of the manuscript described under No. 702 ante.

Complete.

Contains 5 stanzas and one 'pallavi.'

Written in praise of Vīraśaiva Saints.

Beginning :—

ಪಲ್ಲವಿ ॥ ಸ್ತುತಿಸಿ ಬಾಳುವೆ ಪ್ರಮಥರೆಲ್ಲರ ಪೃಥ್ವಿಯೊಳಗತಿಮೆರೆದರಂ ।
ಅತಿಶಯದ ಸಂಭ್ರಮದಿ ಲೋಕವನಾಳ್ದರಂ ಸುಖಬಾಳ್ದರಂ ॥

ಪದ ॥ ಅಲ್ಲಮಪ್ರಭು ಅಮೃತನಾಥನು ಮೋಶನಂ ಪಂಡಿತೇಶನಂ ।
ಸಲ್ಲಲಿತ . . . ಸೋಮನಂ ಜ್ಞಾನಿಯಂ ತಿರುಜ್ಞಾನಿಯಂ ॥
ಮಲ್ಲಿಕಾರ್ಜುನ ಮಳೆಯದೇವಸಿದ್ಧೇಶನಂ ಸಕಳೇಶನಂ ।
ಬಲ್ಲಮನು ಬಲದೇವ ಬಸವದಂಡೇಶನಂ ಚಂಡೇಶನಂ ॥ ೧ ॥

* * * * *

End :—

ರುದ್ರಪಶುಪತಿ ನೀಲಕಂಠ ಕಕ್ಕಯ್ಯನಂ ಚಿಕ್ಕಯ್ಯನಂ ।
ಕದ್ರುವೆಯ ಕಲಿ . . ನಿಜಗುಣಶಾಂತನಂ . ಕಾಂತನಂ ॥
ಮುದ್ದುಸಂಗಮಯೋಗಿ ಶಿವಸಿದ್ಧರಾಮನಂ ಮರಿಭೀಮನಂ ।
ಕ್ಷುದ್ರದೈವಕೆ ನಮಿಸದಿಹ ಕಲ್ಲ . ಕೇತನಂ ಗಣನಾಥನಂ ॥ ೫ ॥

Colophon :—

ಶಿವಶರಣ ಪಂಚಕ ಸಮಾಪ್ತಂ.

(ವಿ-ವಿ.)—

ಸಮಗ್ರ. ಒಂದು ಪಲ್ಲವಿಯೂ ಐದು ಪದ್ಯಗಳೂ ಇವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ಹಿಂದಣ 702 ನೆಯ ನಂಬರನ್ನು ನೋಡುವುದು.

ಇದು ಪದ್ಯರೂಪವಾಗಿದೆ. ಸುಪ್ರಸಿದ್ಧ ವೀರಶೈವ ಶರಣರಸ್ತುತಿ ಇದರಲ್ಲಿ ಉಕ್ತವಾಗಿದೆ. ಇದನ್ನು ಬರೆದವರಾರೆಂಬುದು ಗೊತ್ತಾಗುವುದಿಲ್ಲ.

No. 815. ಶಿವಶರಣ ಪಂಚಕ.

ŚIVAŚARAṆA PAÑCAKA.

Substance, paper. Size, 10⅜ × 9½ inches. Pages, 2. Lines, 20 on a page. Character, Kannaḍa. Condition, good. Appearance, new. Mode of writing, good.

Begins on page 57 of the manuscript described under No. 703 ante.

Complete.

This is a copy of the manuscript described under the previous number.

(ವಿ-ವಿ.)—
ಸಮಗ್ರ. ಇದು ಇದರ ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪುತ್ರಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ಹಿಂದಣ 703 ನೆಯ ನಂಬರನ್ನು ನೋಡುವುದು.

No. 816. ಶಿವಾಧಿಕ್ಯಪುರಾಣ.

ŚIVĀDHIKYAPURĀṆA.

Substance, paper. Size, 8¾ × 4½ inches. Pages, 260. Lines, 15 on a page. Character, Kannaḍa. Condition, very much injured. Appearance, old. Mode of writing, not bad.

Begins on page 1 of the manuscript described under No. 742 ante. Complete.

Purports to establish the superiority of Śiva over Viṣṇu and other Gods. The author is Basavaliṅga, who wrote this work at the instance of Cennavīradēśika. He lived in 1611 A.D.

Beginning :—

ಶ್ರೀಮಚ್ಛಿವನಿಂದ ನಿರ್ಮಿತವಾದ ಬ್ರಹ್ಮಾಂಡದೊಳೊಪ್ಪುತ್ತಿರುವ ಲೋಕಾಲೋಕಪರ್ವತವೂ ಸಪ್ತಸಮುದ್ರಗಳೂ ಸಪ್ತದ್ವೀಪಗಳೂ ಆ ಸಪ್ತದ್ವೀಪಗಳೊಳು ಮಾತೃಸ್ಥಾನವೆನಿಸುವ ಜಂಬೂದ್ವೀಪವು ಒಪ್ಪುತ್ತಿರುವುದು. ಆ ಜಂಬೂದ್ವೀಪದ ಮಧ್ಯದಲ್ಲಿ ಕೋಟಿಸೂರ್ಯಚಂದ್ರಪ್ರಕಾಶವನ್ನು ಕೀಳ್ಪಡಿಸಿ ಬೆಳಗುವ ಮಹಾಮೇರುವು ಒಪ್ಪುತ್ತಿರುವುದು. * * * * ಇಂತಪ್ಪ ಪಟ್ಟಣವೆ ಪ್ರಥಮ ಕಲ್ಯಾಣವೆನಿಸಿತ್ತು. ಆ ನಗರದಲ್ಲಿ ಜೈನ ಚಾರ್ವಾಕಬೌದ್ಧನೈಯ್ಯಾಯಿಕ ಸಾಂಖ್ಯ ಷಟ್ಪ್ರಕಾರ ಮುಂತಾದ ಹದಿನೆಂಟು ಮತಂಗಳೆಂಬ ಹಸ್ತಿನಿಕರಕ್ಕೆ ಪಂಚಾಸ್ಯನೆನಿಸಿಕೊಳ್ಳುತ್ತಿಹ ವಿಶ್ವಾಚಾರ್ಯ ರೊಪ್ಪುತಿಹರು. * * * * ಆ ವಿಶ್ವಾಚಾರ್ಯರು ವೇದಾಗಮ ಪುರಾಣಶಾಸ್ತ್ರ ಶ್ರುತಿಸ್ಮೃತೀತಿಹಾಸಗಳಿಂದ ಉಪನಿಷದ್ವಾಕ್ಯಗಳಿಂದ ಹರಿಯನ್ನು ತೃಣೀಕರಿಸಿ ಶಿವಾಧಿಕ್ಯವನ್ನುಂಟುಮಾಡಿ ತೋರಲು ರಾಯನಿಗೆ ಜ್ಞಾನೋದಯವಾಗಿ ಭಯಭಕ್ತಿಯಿಂದ ಲಿಂಗವ ಧರಿಸೆನಲಾಗ ಲಿಂಗವನ್ನು ಧರಿಸಿದಾ ಕ್ಷಣವೆ ಶಂಭುವು ಪ್ರಸನ್ನನಾಗಿ ಮಹಾಲಿಗೆ ಬಿಜಯಂಗಯ್ಯಿದನೆಂದು ಪೇಳುವ ಕಥಾಸೂಚನೆ.

*   *   *   *

ವಾ ॥ ಷ ॥ ಇದು ಬಸವಲಿಂಗದೇಶಿಕ ಭಕ್ತರುಗಳೊಡನೆ ।
ಸದುವಿನಯ ಸಹಜವಚನದೊಳಿರ್ಪ ಕಾಲದೊಳು ।
ಮದಹರನು ನಿತ್ಯಮಾಧವನು ನಾಯುವನೆಂಬ ವಿಧವೆಂತು ಸ್ವಾಮಿಯೆನಲು ॥
ಮುದದಿಂದಲೊರೆದ ವಿಶ್ವಾಚಾರ್ಯರೊಳು ವಿಪ್ರ ।
ರೊದಗಿ ವಾದಿಸಲವರ ಭಂಗಿಸಿದ ಕಥನವನು ।
ತುದಿಮೊದಲುವಿಡಿದು ಭಕ್ತರಿಗೆ ಪಾಚೆಸಿದ ವಾಕ್ಯವಿದು ಶಿವಾಧಿಕ್ಯಕೃತಿಯು ॥

Colophon :—

ಅಂತು ಪ್ರಥಮಸಂಧಿ ಸಂಪೂರ್ಣಂ.

ವಾ॥ ಷ ॥ ಇದು ಬಸವಲಿಂಗ * * ಶಿವಾಧಿಕ್ಯಕೃತಿಯು ॥

ಅಂತು ಸಂಧಿ ೧೧ ಕ್ಕಂ ಪದನು ಗ್ರಂಥ ವೃತ್ತ ಕಂದ ಸಹ ೧೬೨೧ ಕ್ಕಂ ಮಂಗಳ ಮಹಾ ಶ್ರೀ.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ಹಿಂದಣ 742 ನೆಯ ನಂಬರನ್ನು ನೋಡುವುದು.

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ. ಸಂಧಿಗಳು ೧೧. ಪದ್ಯಗಳು ೧೬೨೧. ಇದರಲ್ಲಿ ಷಟ್ಪದಿಯಲ್ಲದೆ ಕಂದವೃತ್ತ ವಚನಗಳೂ ಇವೆ. ಹರಿಯನ್ನು ತೃಣೀಕರಿಸಿ ಶಿವಾಧಿಕ್ಯವನ್ನು ಹೇಳುವುದೇ ಇದರಲ್ಲಿ ಉಕ್ತವಿಷಯವು. ಬಸವಾದಿ ಪುರಾತನರನ್ನೂ ಶಿವಲೆಂಕಮಂಚಣ್ಣ ಮುಂತಾದ ಪೂರ್ವ ಕವಿಗಳನ್ನೂ ಗ್ರಂಥಕರ್ತನು ಸ್ಮರಿಸಿದ್ದಾನೆ.

ಕವಿ ಬಸವಲಿಂಗನೆಂಬುವನು. ವೀರಶೈವಮತದವನು. ಚೆನ್ನಮಲ್ಲೇಶನ ಕರಜಾತನು. ಚೆನ್ನವೀರದೇಶಿಕರ ಪ್ರೇರಣೆಯಿಂದ ಗ್ರಂಥವನ್ನು ರಚಿಸಿದನು. ಇವನ ಕಾಲ ೧೬೧೧ ಎಂದು ಕವಿ ಚರಿತ್ರಕಾರರು ಬರೆಯುತ್ತಾರೆ. ಉಳಿದ ವಿಷಯಗಳನ್ನು ಉದ್ಧೃತಭಾಗಗಳಿಂದಲೂ ಕವಿಚರಿತೆ (ದ್ವಿತೀಯ ಸಂಪುಟ) ಯಿಂದಲೂ ತಿಳಿಯುವುದು.

No. 817. ಶಿವಾಧಿಕ್ಯಪುರಾಣ-

ŚIVĀDHIKYA PURĀṆA.

Substance, paper. Size, $10\frac{7}{10} \times 9\frac{1}{2}$ inches. Pages, 340. Lines, 20 on a page. Character, Kannaḍa. Condition, good. Appearance, new. Mode of writing, good.

Begins on page 1 of the manuscript described under No. 743 ante.

Complete.

This is a copy of the manuscript described under the previous number.

(ವಿ-ವಿ.)—

ಸಮಗ್ರ. ಇದು ಇದರ ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ಹಿಂದಣ ೭೪೩ ನೆಯ ನಂಬರನ್ನು ನೋಡುವುದು.

No. 818. ಶಿವಾಧಿಕ್ಯಪುರಾಣ-

ŚIVĀDHIKYA PURĀṆA.

Substance, paper. Size, $12\frac{7}{8} \times 8$ inches. Pages, 266. Lines, 19 to 23 on a page. Character, Kannaḍa. Condition, slightly injured. Appearance, old. Mode of writing, good.

Begins on page 1 of the manuscript described under No. 744 ante.

Complete.

This also is a copy of the manuscript described under No. 816 ante.

(ವಿ-ವಿ.)—

ಸಮಗ್ರ. ಇದು ಹಿಂದಣ ೮೧೬ ನೆಯ ನಂಬರಿನಲ್ಲಿ ವರ್ಣಿತನಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಕಾಗದದ ಪ್ರತಿ. ಸ್ವಲ್ಪಮಟ್ಟಿಗೆ ಶಿಥಿಲವಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ಹಿಂದಣ ೭೪೪ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 819. ಶಿವಾಷ್ಟೋತ್ತರ ನಾಮ-

ŚIVĀṢṬŌTTARA NĀMA.

Substance, palm-leaf. Size, 13⅜ × 1⅜ inches. Pages, 5. Lines, 4 or 5 on a page. Character, Kannaḍa. Condition, much injured. Appearance, old. Mode of writing, good, but full of mistakes.

Complete.

Begins on fol. 117-*a* of the manuscript described under No. 6990 (Sanskrit Descriptive Catalogue).

On the greatness of Śiva's name.

Beginning :—

ಸತನಾಮಃ (ಶತನಾಮ)

ವಂ ಶಿವಯೇ (? ವಾಯಃ) ನಮಾ (ಮಃ) ಮೆಹೇಸ್ವರಯು (ಮಹೇಶ್ವರಾಯ) ನಮಾಃ (ಮಃ) ॥ ಸಂಬುಯು ನಮಾ (? ಶಂಭವೇ ನಮಃ) ॥

* * * *

End :—

ತರಳಾಯುನಮಾ ॥ ಪರಮೇಶ್ವರಯೇ (ರಾಯ ನಮಃ) ನಮಾಹಃ (ಮಃ) ಚೆನ್ನಭಾಸವೇ (ಬಸವೇ)ಶ್ವರನ ಪದವೆ ಗತಿ ೧೦೮ ನಾಮಾಃ (ನಾಮಾನಿ) ॥ ಏಕಕಾಲಂ ದ್ವಿಕಾಲಂವಾ ತ್ರಿಕಾಲಂ ನಿಶ್ಯಮೇವಚ ॥ ಜಪೇದಷ್ಟ್ಟಶತಂ ದೇವಿ ಸದ್ಗತಿಂ ಲಭತೇ ನರಃ ॥

Colophon :—

ಈ ನೂರೆಂಟು ನಾಮವನು ಓದಿದರೆ ಕೇಳಿದರೆ ಸಾಕಲ್ಲ (? ಸಕಲ) ಕಾರ್ಯಸಿದ್ಧಿಯಕ್ಕು.

(ವಿ-ವಿ.)—

ಸಮಗ್ರ. ಬಹಳ ತಪ್ಪುಗಳಿವೆ.

ಗ್ರಂಥಾಂತ್ಯದ ಗದ್ಯವನ್ನು ಬಿಟ್ಟು ಉಳಿದ ಭಾಗವು ಸಂಸ್ಕೃತದಲ್ಲಿದೆ.

No. 820. ಷಟ್ಸ್ಥಲದ ವಚನ-

ṢAṬSTHALADA VACANA.

Substance, Śrītāḷa. Size, 13¼ × 2⅝ inches. Pages, 58. Lines, 13 on a page. Character, Kannaḍa. Condition, much injured. Appearance, old. Mode of writing, good.

Complete.

Begins on fol. 39-*b* of the manuscript described under No. 125 (Sanskrit Descriptive Catalogue).

This is about the Ṣaṭsthalas of the Vīraśaiva system. The author is Cennabasavēśvara.

Beginning :—

ಚೆನ್ನ ಬಸವೇಶ್ವರದೇವರು ನಿರೂಪಿಸಿದ ಷಟ್‌ಸ್ಥಲದ ವಚನ. ಈ ವಚನಗಳ ಸ್ಥಳಕುಳ ಹೇಂಗೆಂದು ಶಿಷ್ಯ ಶ್ರೀಗುರುವಿಂಗೆ ಬಿನ್ನೈಸಿದ ಬಿನ್ನಹ।

ಕಂದ ॥ ಆಚರಣೆಯು ಸ್ಥಲವನರಿ।
ದಾಚರಿಸಲ್ಬರದಾಗಿ ಷಟ್ಸ್ಥಲದನುಭಾವ ॥
ಸೂಚನೆಯನೆತ್ತಿ ಯೆನ್ನೊಳು ॥
ಯೋಚಿಸಿ ಸದ್ಗುರುವೆ ಚೆನ್ನಸಂಗ ಸದಾಶಿವ ॥ (?)

ಇದಕ್ಕೆ ಶ್ರೀಗುರು ನಿರೂಪ ॥

ಚೆನ್ನ ಬಸವಯ್ಯ ನನುಭಾ (? ಭ) ವ ॥
ಉನ್ನತ ಉಪದೇಶವಾಗಿ ನಿಮ್ಮ ಮನದ ತವು ॥
ವನ್ನಳಿಯಲ್ಕೆ ನಿರೂಪಿಸಿ ॥
ದುನ್ನತ ಸ್ವಯಮಂ ಕೇಳು ನೀನು ಚರಿತಾರ್ತ್ಥದೊಳಂ ॥
ಯೆಲ್ಲಾ (? ಎಲ್ಲಾ) ವಚನಾಗಮದೊಳ ॥
ಗುಳ್ಳ ಸ್ಥಳಕುಳವ ಸೂಕ್ಷ್ಮದನುಭವ ಷಟ್ಸ್ಥಲ ॥
ದಲ್ಲಿ ಸಂಪೂರ್ಣವಾಗಿಯೆ ॥
ಬಲ್ಲಂದದಿ ನಿನಗೆ ನಾನು ತಿಳಿಯಲ್ವೇಳ್ವೆಂ ॥

ಇದಕ್ಕೆ ಬಸವರಾಜದೇವರ ಆಚರಣೆಯು ಸ್ಥಲದ ವಚನಂಗಳು । ಶ್ರೀಗುರುನಿರೂಪ ॥

ಮೆಲ್ಲಮೆಲ್ಲನೆ ಭಕ್ತನೆನಿಸಿಕೊಂಬೆ, ಮೆಲ್ಲಮೆಲ್ಲನೆ ಮಹೇಶ್ವರನೆನಿಸಿಕೊಂಬೆ, ಮೆಲ್ಲಮೆಲ್ಲನೆ ಪ್ರಸಾದಿಯೆನಿಸಿಕೊಂಬೆ, ಮೆಲ್ಲಮೆಲ್ಲನೆ ಪ್ರಾಣಲಿಂಗಿಯೆನಿಸಿಕೊಂಬೆ, ಮೆಲ್ಲಮೆಲ್ಲನೆ ಶರಣನೆನಿಸಿಕೊಂಬೆ, ಮೆಲ್ಲಮೆಲ್ಲನೆ ಅಯಿಕ್ಯನೆನಿಸಿಕೊಂಬೆ, ಮೆಲ್ಲಮೆಲ್ಲನೆ ಷಟ್ಸ್ಥಲವ ಮೀರಿ ನಿರವಯ ಸ್ಥಲವನೆಯ್ದುವೆ ಕೂಡಲ ಸಂಗಮದೇವಾ ॥ ಯೊ ಹೀಗೆಂದು ಬಸವರಾಜ ದೇವರು ನಿರೂಪಿಸಲು ಈ ವಚನಾರ್ತ್ಥದನುಭಾವವನು ಚೆನ್ನಬಸವರಾಜದೇವರು ಷಟ್ಸ್ಥಲದನುಭಾವದ ವಚನಾರ್ತ್ಥದಲ್ಲಿ ಖಂಡಿಸಿ ನುಡಿದ ಅನುಭಾವಸ್ಥಲದ ವಚನಂಗಳು । ಮೆಲ್ಲಮೆಲ್ಲನೆ ಭಕ್ತ, ಮೆಲ್ಲಮೆಲ್ಲನೆ ಮಾಹೇಶ್ವರ, ಮೆಲ್ಲಮೆಲ್ಲನೆ ಪ್ರಸಾದಿ, ಮೆಲ್ಲಮೆಲ್ಲನೆ ಪ್ರಾಣಲಿಂಗಿ, ಮೆಲ್ಲಮೆಲ್ಲನೆ ಶರಣ, ಮೆಲ್ಲಮೆಲ್ಲನೆ ಅಯಿಕ್ಯರಾದೆನೆಂಬರು ನಿಮ್ಮ ಶರಣರು. ತಾವೇನು ಮರುಜವಣಿಯ ಕೊಂಡರೋ, ಅಮೃತವ ಸೇವನೆಯ ಮಾಡಿದರೋ ? ಆ ಸ್ಥಲದಲ್ಲಿ ನಿಂದರು, ಆ ಸ್ಥಲದಲ್ಲಿ ಷಟ್ಸ್ಥಲವಡಗದಿದ್ದರೆ ಆ ಭಕ್ತಿಯ ಬಾಯಲ್ಲಿ ಹುಡಿಯ ಹೊಯ್ವ ಹೋಗದೆ ಮಾಣ್ಬನೆ ನಮ್ಮ ಕೂಡಲ ಚೆನ್ನಸಂಗಮ ದೇವಾ ! ॥

* * * *

End :—

ಪದ ॥ ಅಂಗ ಲಿಂಗ ಲಿಂಗವಂಗವೆಂಬರತಿ । ಹಿಂಗದ ಸುಖಸಂಯೋಗದ ಶರಣರು । ಸಂಗನ ಬಸವೇಶ್ವರನನುಭಾವಸ್ಥ । ಲಂಗಳನರು (ಉ) ಹಿದ ಶ್ರೀಗುರುವೆ ! ॥ ೧ ॥

ಎಲ್ಲಿದ್ದಾ ಸ್ಥಲದಲ್ಲಿ ಯಲ್ಲದಿ । ನ್ನಿಲ್ಲ ಹಿಂದೆ ಮುಂದೆಂಬುವನು ॥
ಸಲ್ಲವಿಟ್ಟು ಸಂದಣಿಸಿ ಷಡುಸ್ಥಲ । ವೆಲ್ಲವ ತೋಱಿದ ಶ್ರೀಗುರುವೆ! ॥
ಆವಾವ ಸ್ಥಲದೊಳಗಾವಾವುದ । ನಾವಚ್ಚೆ೯ಸಬೇಕೆಂದರುಹಿ ॥
ಧಾವತಿಗೊಳಸಿದೆ ಮನಕೆ ಮಹಾಘನ । ದೇವನ ತಂದಿರಿಸಿದ ಶ್ರೀಗುರುವೆ! ॥
ನಿಂದ ನೀಲದೊಳೊಂದಿಹ ತಾಮಸವನು । ಕೊಂದು ಮುಂದೆ ಷಡ್ವಿಧ ಲಿಂಗ ॥
ವಂದೆ ಸರ್ವಾಂಗದೊಳಗೆ ಸಂದಳಿ ! ದಂದವನಱುಹಿದ ಶ್ರೀಗುರುವೇ ॥

ಆಱಂಗಸ್ಥಲದೊಳಗಾಱು ಮೂವತ್ತಾಱು ತೋಱಿಸಿಯಿನ್ನೂಱದಿಂ, ನಾಱು ಲಿಂಗದ ಬೆಳಗಿನೊಳು ಬೆರಸಿದ ಬೇರೂರಿದ ಶ್ರೀಗುರು ಸಂಗ ಸದಾಶಿವಾ ॥

ಚೆನ್ನಬಸವೇಶ್ವರನ ಷಟ್ಸ್ಥಲದ ವಚನ ಸಮಾಪ್ತ ॥ ಮಂಗಳ ಮಹಾ ॥ ಶ್ರೀ ॥

(ಪ-ವಿ.)—

ಸಮಗ್ರ.

ಚೆನ್ನಬಸವೇಶ್ವರನು ಗ್ರಂಥಕರ್ತನು. ಷಟ್ಸ್ಥಲದ ವಿಷಯಕವಾದ ಗ್ರಂಥವಾಗಿದೆ.

No. 821. ಸಹಸ್ರ ಗಣನಾಮ.

ŚAHASRA GAṆANĀMA.

Substance, Śrītāḷa. Size, $13\frac{1}{8} \times 2\frac{5}{8}$ inches. Pages, 7. Lines, 15 on a page, Character, Kannaḍa. Condition, much injured. Appearance, old. Mode of writing, good.

Complete.

Begins on fol. 14-*a* of the manuscript described under No. 125 (Sanskrit Descriptive).

On the various classes of devotees of Śiva. The author is Pālkurike Sōmanātha.

Beginning :—

ಕಂ ॥ ಶ್ರೀ ಮಲ್ಲಿಕಾರ್ಜುನಾರ್ಯ೯ಂ ।
ಧೀಮಂತಂ ಪಾಪರಹಿತ ಗಣಸಂಕುಳಮಂ ।
ಬ್ರೇಮದಿ ಸ್ತುತಿಪೆಂ ಸಾವಿರ ॥
ನಾಮದ ಜಪವೆಂದು ಪೊಗಳ್ದು ವಿಸ್ತರಿಸಿದಪೆಂ ॥

* * * *

ಕಂ ॥ ಶ್ರೀಮದಸಂಖ್ಯಾತಗಣ ॥
ಸ್ತೋಮದೊಳಾಂ ಗಣಸಹಸ್ರನಾಮಸ್ತವಮು ॥
ದ್ದಾಮರತಿಯಿಂದ ಬೇಳ್ವೆ ನ ।
ಯಾಮಂದಿರ ಚಿತ್ತವಿಪ್ಪುದು ಶಿವ ಬಸವೇಶಾ ॥
ಓಂ ಶ್ರೀನಂದಿ ಶಿವಕರಂ

* * *

ಕಂ ॥ ಇಂತಪ್ಪ ಪ್ರಮಥಗಣರಾ ॥
ದ್ಯಂತ್ಯವನಱಿಯಲ್ಕೆ ಹರಿವಿರಿಂಚಿಗಳಳವ ॥
ಲ್ಲಿಂತು ವಿರಚಿಸಿದನಮಮಾ ॥
ಸಂತತ ಪಾಲ್ಕುರಿಕೆಸೋಮ ಭಕ್ತಲಲಾಮಂ ॥ ೧ ॥

ಶ್ರೀಭುವನೇಶ್ವರಾದಿ ವಿಭೂತಿ, ಕಪಾಲಿ, ಭವಭೂತಿ.

* * * *

ಕಂ ॥ ಗಂಗೆಯ ಮಳಲಂ ಗಣಿತ ॥
ಕ್ಕಂಗವಿಸಲ್ಬಕ್ಕುಮೆಂತುಱಭವನ ಸಭೆಯೊಳ್ ॥
ಪಿಂಗದಿಹ ರುದ್ರಗಣಮಂ ।
ಕಂಗೊಳಿಸಿದನರರೆ ಸೋಮ ಶಿವಸುಖಧಾಮಂ ॥ ೨ ॥

ಶ್ರೀಮುದ್ಧಮನ । ವೇದಶಿಖಿ । ಜಟಾಮಾಲಿ ।

* * * *

ಕಂ ॥ ಉಸುರಿಕ್ಕೆ ದಿಕ್ತಟಂಗಳ್ ॥
ಬೆಸುಗೆಯ ಭೇದಿಸುವ ಧ್ರುವನ ಕುಸಿಯಿಪ ರವಿಯಂ ॥
ಮಸುಳಪ ಶಶಿಯಂ ನೊಸಲಿಪ ।
ವೃಷಭಗಣಾಚಾರ್ಯರೆಸೆದರಭವನ ಸಭೆಯೊಳ್ ॥ ೪ ॥

ತಿರುನೀಲಕಂಠರು, ತಿರುನೀಲನಕ್ಕರು, ತಿರುಮೂಲದೇವರು ।

* * * *

ಕಂ । ತೊಱವುದು ಭವಮದಗಜಮಂ ।
ಪಱಿವುದು . . . . ॥
ಅಱುವತ್ತುಮೂವ್ವರೆಂಬುದ
ನೆಱಿಪಿದ ಪಾಲ್ಕುರಿಕೆ ಸೋಮ ಶರಣ ಸ್ಮರಣಮಂ ॥

ಹೊನ್ನಯ್ಯ, ಪಾಂಡ್ಯನಾಯಕರು, ಗುಡ್ಡವ್ವೆ, ಕಿನ್ನರಬ್ರಹ್ಮಯ್ಯ, ಕೇತಲದೇವಿ, ಹಂದ್ಯೆಯ್ಯ, ಬೀತಿ ದೇವಯ್ಯ, ಬಿಜ್ಜಯ್ಯ, ಕಂದುಲಿಗೆಯ ನಾಗಿದೇವಯ್ಯ.

* * * *

ಕಂ ॥ ಪೋಳ್ವುದಘಗಿರಿಯ ನಿಮಿಷದಿ ।
ಸೀಳ್ವುದು ಮೃತ್ಯುವಿನ ವಾರಕದ ಲೇಖನಮಂ ॥
. . . . . . ।
. . . . ಡಷದ ಬೇಳ್ವ ಸೋಮನ ನಾಮಂ ॥

ಸಿಂಗಿದೇವನು ಬೊಮ್ಮಿಸೆಟ್ಟಿ, ಸಾತ್ವಿಕಸಂಗಯ್ಯ, ವೋಳಗೆಯನಿಜಸಂಗವ್ವೆ, ದೇವರಸರು. ಕನ್ನಮರಸಿ.

* * * *

ಕಂ ॥ ತೇರಸರುಂ ಸದ್ಗುಣವಿ ॥
ಸ್ತಾರಕರುಂ ವಿಶ್ವಪತಿಯ ನಿಷ್ಠಾವೃತ ಪರಿ ॥
ಪೂರಕರುಂ ಭೀಕರರೆಮ ॥
ದೂರಕರುಂ ಪೊಗಳ್ದ ಪಾಲ್ಕುರಿಕೆ ಸೋಮಾಂಕಂ ॥ ೭ ॥

* * * *

End :—

ಯೆಸೆವ ಗಣಸಹಸ್ರ ನಾಮಂಗಳ ।

ಪಸರಿಸಿದನು ಧರೆಯೊಳಗೆ ಪಾಲ್ಕುರಿಕೆ ಸೋಮ

ಶರಣನೊಪ್ಪುವ ಗಣಸಹಸ್ರನಾಮಂಗಳುಮಂ । ಗುರುಭಕ್ತಿಯಿಂ ಜಪವ ಮಾಡಿದೊಡೆ ಕೊಂಡಾಡಿದೊಡೆ ಒಲಿದು ಕೇಳದೊಡೆ ಓದಿದೊಡೆ ಪಠಿಸಿದೊಡೆ ಪೂಜಿಸಿದ್ದೊಡೆ ಬರದೊಡೆ ದುರಿತವಿಜೃಂಭಣದೂರವಾಗಿಹುದು, ಹರನ ಮಹಾಪ್ರಸಾದವಾಗಿಹು ನಂದದಾಗಿಹುದು, ಚಿರಮನೋರಥಫಲಸಿದ್ಧಿ ಹೊದ್ದುವುದು, ದುಃಸ್ವಪ್ನ ದುಃಕರ್ಮ ದುಃಶಕುನಂಗಳು, ಸರ್ವಗ್ರಹಾದಿ ದೋಷಂಗಳು, ಜ್ವಲನ, ಅಪಮೃತ್ಯು, ತಸ್ಕರ, ವೃಶ್ಚಿಕಾಹಿ ಜ್ವರ, ಮೃಗರೋಗ ರಾಕ್ಷಸ, ಚೋರ, ವಿಷ, ಭೂತ, ಪವನ, ಮಹೋಲ್ಕ ವಿಪಕ್ಷ, ದಾರಿದ್ರ್ಯ, ಅಪಮೃತ್ಯುಗಳು ಯಮನೃಪಬಾಧೆಗಳು ಪರಿಹರಮಕ್ಕುಂ ।

ಅರ್ಥಾರ್ಥಿಗಳು ತಾಂ, ಭಕ್ತಿಯಿಂ ಜಪವ ಮಾಡಿದೊಡೆ ಅರ್ಥಸಾಮರ್ಥ್ಯಸಮಗ್ರತ್ವವಹುದು. ಪುತ್ರಾರ್ಥಿಗಳು ತಾಂ ಭಕ್ತಿಯಿಂ ಜಪವ ಮಾಡಿದೊಡೆ ಪುತ್ರಾಭಿಜನನ ವಿಭೂತ್ವವಹುದು. ಭುಕ್ತಿ ಮುಕ್ತ್ಯರ್ಥಿಗಳು ತಾಂ ಭಕ್ತಿಯಿಂ ಜಪವ ಮಾಡಿದೊಡೆ ಭುಕ್ತಿಮುಕ್ತಿ ಸುಖಭೋಗಂಗಳಹವು ॥ ಶತ್ರುಕ್ಷಯಾರ್ಥಿಗಳು ತಾಂ ಭಕ್ತಿಯಿಂ ಜಪವ ಮಾಡಿದೊಡೆ ಶತ್ರುಕ್ಷಯೈಶ್ವರ್ಯ ಭಕ್ತಿಯೆಸವುದು. ದಿಕ್ತಟಾಯತೆ ಶಿವಕೀರ್ತಿ ಬಸವಪ್ರಮಥಾಯ ನಮೋ, ತ್ರಿಜಗತ್ಪ್ರಮಥನಪರಿಪಾಲನಾದಿರುದ್ರಾಯ ನಮೋ, ವಿಮಲಪುರಾತನನೂತನಸಮಸ್ತಭಕ್ತಾಯ ತೇ ಯೆನಲು ಶಿವನೊಲಿವಂ

ಕಂ ॥ ದಿಟವಿದು ಭವವಿದಳನಕೆ ॥
ಮರ್ತಕಾರಣಗಣಸಹಸ್ರನಾಮಂಗಳುಮಂ ।
ಪಠಿಯಿಸುವಾತಂ ಜನನಿಯ ।
ಜಠರಕಪಿಠ (ರ) ಕ್ಕೆ ಮರಳಿ ಬಾರಂ ದೂರಂ ॥

ಕಂ ॥ ಪ್ರಮಥಗಣರುದ್ರಗಣಭ ।
ಕ್ತಮಹಾಗಣ ದಿವ್ಯ ನಾಮ ಸಂಕೀರ್ತನಮ [ಂ] ॥
ಪ್ರಮುದಿತರತಿಯಿಂ ಪೇಳ್ವಂ ।
ಸುಮಹಾತಲವೆಂದು ಬಣ್ಣಿಪೆಂ ಬಸವೇಶಾ ! ॥

ಕಂ ॥ ಸುರತರುವಂ ಸುರಧೇನುವ[ಂ] ।
ವರಚಿಂತಾಮಣಿಗಳೆಂದು ಪೆಸರಂ ಪೇಳ್ವರ್ ॥
ಹರಗಣನಾಮವ ಜಪಿಸಲ್ ॥
ಭರದಿಂದಂ ಸಿದ್ಧಿಯಕ್ಕು ಶಿವ ಬಸವೇಶ ॥

Colophon :—

ಸಹಸ್ರಗಣನಾಮ ಸಮಾಪ್ತ ಮಂಗಳ ಮಹಾ ಶ್ರೀ

(ವಿ-ವಿ.)—

ಸಮಗ್ರ. ಪಾಲ್ಕುರಿಕೆಯ ಸೋಮನಾಥನೆಂಬುವನು ಗ್ರಂಥಕರ್ತೃವಾಗಿರುವನು. ಗಣಸಹಸ್ರನಾಮವೆಂದು ಗ್ರಂಥದ ಹೆಸರು.

No. 822. ಸಹಸ್ರ ಗಣನಾಮ.

SAHASRA GAṆANĀMA.

Substance, palm-leaf. Size, 13⅜ × 1⅜ inches. Pages, 34. Lines, 5 on a page. Character, Kannaḍa. Condition, very much injured. Appearance, old. Mode of writing, good.

Complete.

Begins on fol. 15-*a* of the manuscript described under No. D. 6990 (Sanskrit Descriptive Catalogue).

Same work as that described above.

Beginning :—

ಕಂದ ॥ ಶ್ರೀಮಲ್ಲಿಕಾರ್ಜುನಾರ್ಯ್ಯಂ ।
ಧೀಮಂತಂ ಪಾಪರಹಿತಗಣಸಂಕುಳಮಂ ॥
ಪ್ರೇಮದಿ ಸ್ತುತಿಯಿಪೆ ಸಾವಿರ ।
ನಾಮದ ಜಪವೆಂದು . . . ಸ್ಮರಿಪೆಂ ॥ ೧ ॥

* * * *

End :—

ಪ್ರಮಥಗಣ ರುದ್ರಗಣ ಭ ।
ಕ್ತಮಹಾಗಣದಿವ್ಯನಾಮಸಂಕೀರ್ತನಮಂ ॥
ಪ್ರಮುದಿತರತಿಯಿಂ ಪೇಳ್ದಂ ।
ಸುಮಹೋತ್ಸವವೆಂದು ಬಣ್ಣಿಪೆಂ [ಶಿವ] ಬಸವೇಶಾ ! ॥
ಸುರತರುವಂ ಸುರಧೇನುವ ।
ವರಚಿಂತಾಮಣಿಗಳೆಂದು ಪೆಸರಂ ಪೇಳ್ವರ್ ॥
ಹರಗಣಮಾಲೆಯ ಜಪಿಸಲ್ ।
ಭರದಿಂದಂ ಸಿದ್ಧಿಯಕ್ಕು ಶಿವ ಬಸವೇಶಾ ! ॥

Colophon :—

ಸಹಸ್ರ ಗಣನಾಮಂ ಸಂಪೂರ್ಣಂ ಮಂಗಳ ಮಹಾ ॥

(ಪಿ.ವಿ.)—

ಸಮಗ್ರ. "ಯೆಸೆವ ಗಣಸಹಸ್ರನಾಮಂಗಳ್ ಪಸರಿಸಿದನು ಪಾಲ್ಕುರಿಕೆಯಸೋಮ ಶರಣಂ" ಎಂಬುದರಿಂದ ಪಾಲ್ಕುರಿಕೆಯ ಸೋಮ, ಅಥವಾ ಸೋಮನಾಥನು ಗ್ರಂಥಕರ್ತನೆಂದು ತಿಳಿಯುತ್ತದೆ.

ಗ್ರಂಥಾಂತ್ಯದಲ್ಲಿ "ಮೇಲಣ ಗೌಪಿಯ್ಯ ಚೆಂನಾ ಬಸವೆಸರ ದೇವರ ಪಾದ್ದಪ್ರದಕ್ಕೆ ನಾವ ಸ್ಸೆನಾಮಾಃ । ಭೆಂಗಳೂರ ಚೆಂನಭಾಸವೆ ಸಾರದೆವರ ಪದವೆ ಗಾತಿ ಭೆಂಗಳೂರದೊಡಬಸವೆಸರ ದೆವಾರ ಪಾದಕೆ ನಾನು ನಾಮಃಸ್ಕರಾವ ಮಾಡಿ ಬರದೆಶ್ರಾನಾಮಾಸಾಮಸ್ತೆ ಮಂಗಳಾ ಮಾಸ್ತಾ" ಎಂದಿದೆ.

No. 823. ಸಿದ್ಧೇಶ್ವರನ ತ್ರಿವಿಧಿ.

SIDDHĒŚVARANA TRIVIDHI.

Substance, palm-leaf. Size, 13⅜ × 1⅜ inches. Pages, 11. Lines, 5 on a page. Character, Kannaḍa. Condition, much injured. Appearance, old. Mode of writing, good.

Complete.

Begins on fol. 52-*a* of the manuscript described under No. D. 6990 (Sanskrit).

Same work as that described under No. 686 ante.

Beginning :—

ಸಿದ್ಧೇಶ್ವರನ ತ್ರಿವಿಧಿ.

ಜಯಜಯ ಜಗದೀಶ ಜಯಜಯ ಅಘಹರನೆ ।
ಜಯಜಯ ನಿಗತ್ರತಿ ಗಳಿಗೆ ದುರ್ಲಭನೆ ಜಯತ್ರು ಸಿದ್ಧೇಶ ದಯವಾಗು ॥
ಆದಿನಿರಂಜನ ಮೇದಿನಿಯೊಳು ಬಂದು ।
ಬೋಧಿಸಿ ಶರಣಸಂತ್ರತಿಗೆ ಗುರುವಾದ ।
ನಾದಮಯಸಿದ್ಧ ಜಯವಾಗು ॥ ೧ ॥

*　　　*　　　*　　　*

End :—

ವರಸಿದ್ಧೇಶ್ವರನ ಉರುತರಸ್ತೋತ್ರವನು ।
ಬರೆದೋದಿ ಅರ್ಥವನು ಪೇಳಿ ಕೇಳ್ವದರಿಗೆ ।
ಪರಶಿವನೊಳು ಐಕ್ಯವಿದು ಸಿದ್ಧ ॥ ೫೩ ॥

Colophon :—

ಸಿದ್ಧೇಶ್ವರನ ತ್ರಿವಿಧಿ ಸಮಾಪ್ತ. ಮಂಗಳ ಮಹಾ ಶ್ರೀ.

(ವಿ.ವಿ.)—

ಸಮಗ್ರ. ಹಿಂದೆ ೬೮೬ ನೆಯ ನಂಬರಿನಲ್ಲಿ ವರ್ಣಿತವಾದ ಗ್ರಂಥವೇ ಆಗಿದೆ.

No. 824. ಸಿದ್ಧೇಶ್ವರನ ಪವಾಡದ ವಚನ.

SIDDHĒŚVARANA PAVĀḌADA VACANA.

Substance, palm-leaf. Size, 13⅜ × 1⅜ inches. Pages, 10. Lines, 6 on a page. Character, Kannaḍa. Condition, very much injured. Appearance, old. Mode of writing, good.

Incomplete.

Begins on fol. 139-*a* of the manuscript described under No. D. 6990 (Sanskrit).

On the greatness of Siddhēśvara, a devotee of Śiva.

Beginning :—

ಸಿದ್ಧೇಶ್ವರನ ಪವಾಡದ ವಚನ । [? ರಗಳೆ]
ಪೊಗಳಲೆನ್ನಳವೆ ನಿಮ್ಮ ಗಣಿತಮಹಿಮೆಯ ।
ಮೃಗಧರ ಜೂಟ ತೋಟದ ಸಿದ್ಧಲಿಂಗೇಶ ॥ ಪಲ್ಲ ॥

ಶಿಲೆಯು ನಂದಿಯು ನುಡಿಸಿದನೆ ಪ್ರಸಾದವ ।
ಶಿಲೆಯು ಬಸವಗೆ ಉಣಿಸಿದನೆ ಚೋರರ ।
ಶಿಲೆಯಿ ಬಸವನಿಂದೋಡಿಸಿದನೆ ಜೈನರ ।
ಶಿಲೆಯು ಬಸವನಿಂದ ಭಂಗಿಸಿದನೆ ಕೂಪ ।
ಜಲಕೆ ಕುಂಭವ ಹಾಯ್ಕಿ ಮೇಲಕೆಯ್ದಿಸಿದನೆ ।
ನಲಿದು ದೀಪಕ್ಕೆ ನೀರನೆರೆದು ಬೆಳಗಿದನೆ ।
ಹೊಲಿದವರೆಯು ಕಾಯು ಬದಣ್ಣೆಯು ಕಾಯುನು ॥

ಜಲವಗ್ನಿಯಿಂ ಬೇಯುದಂತಾಗೆ ಗೆಯ್ದನೆ ।
ಕಲುಕುಣಿಕೆಯೊಳು ತೀರ್ಥದಕುಂಭವೊಡೆಯುಲ ॥

ಮಲಲಿಂಗಮಂ ಮಾಡಿದನೆ ಫಣಿರಾಜನ ।
ಬಿಲದಿಂದ ಬರಿಸಿ ಪೋಗೆಂದು ಕಳುಹಿದನೆ ॥

ಹುಲಿಯುರಜ್ವರವಬಿಡಿಸಿದನೆ ಭಯದಿಂದ ।
ಮೊಲ ನೋಡೆ ನಿಲ್ಲಿಸಿದನೆ ಬೇಡನ ಕಾಲ ನೆ ಲುದೋಱಿ ॥

* * * *

End :—

ಕೊಡೆಯು ಕಪ್ಪೂರ ಬಯಲೊಳು ತಡೆಯುಹೋಗಿ ॥
ನಡುಬೀದಿಯೊಳಗೆ ವಿರಾಜಿಸುತ್ತಿರ್ದನೆ ॥

ಕಡಬದೊಳಿರ್ದಂತೆ ನಿಟ್ಟೂರಲಿಂಗದ ।
ಗುಡಿಗೆ ಯಿವನೋರ್ವನ ಕರಕೆ ಭಸಿತ ವಿತ್ತು ।
ಪೊಡವಿಪ ಭೈರನೊತ್ತಿಗೆ ಹೋಗಿ ಕರದಲ್ಲಿ ॥

ಕೊಡುಯೆಂದು ಕಳುಹಿದೊಡವನಿಯೊಳ್ ಭಸಿತಕ್ಕೆ ।
ಪೊಡಮಟ್ಟು ಮುವಿಯೊಯ್ಯನೆಯಾಗಬೇಕೆಂದು ।
ನಡೆತಂದು ಯೆನ್ನಿಷ್ಟವೀಯೆಂದು ನಿಮ್ಮ ಮೆ ॥

ಲ್ಲಡಿಗೆ ವಂದಿಸಲೀತನೇ ಕುರುಬರಿಟ್ಟ ।
ಯೆಡೆಯು ನಿಲ್ಲಿಸಿದನೇ ತಱುವಕಾವ ।
ಹುಡುಗರಿದಿರೊಳಿರ್ದ್ದನೇ ಅಱತೆಯು ಮೇಲೆ ।
ಮೃಡನ ವಹನರೂಪಿನಿಂದ ರಾಜಿಸಿದನೆ ॥

ಹೇಮಕೂಟವ ನೋಡಿ ವಿದ್ಯಾನಗರಿಯು ।
ಸೋಮವಾರದ ಬಸವಮ್ಮನ ಮನೆಯೊಳು ।
ನಾಮ . . . ರ ಪಾದತೀರ್ತ್ಥವ ಸಮೆದಿರ ॥

ಲಾಮನೆಗೊರ್ವನು ಕಾಶಿಯುದಕವನು ।
ತಾಮುಸವಿಲ್ಲದೆ ತರಲೆಂದು ಶರಣೆಂದು ।
ಪ್ರೇಮದಿ ಸೇವಿಸುತಿರೆ ಕಂಡು [ಹೆಸರಿಗೆ ತಕ್ಕಂತೆ] ॥

(ವಿ-ವಿ.)—

ಅಸಮಗ್ರ. ರಗಳೆಯಲ್ಲಿದೆ, ಮತ್ತು ಸಿದ್ಧೇಶ್ವರನ ಮಹತ್ವವನ್ನು ಹೆಚ್ಚಿಸುವ ಪವಾಡಗಳಿಂದ ತುಂಬಿದೆ. ಮೇಲಿನ ೩ ಓಲೆಗಳಲ್ಲಿ ಬಿಡಿಪದ್ಯಗಳಿವೆ.

No. 825. ಹರಗಣಮಾಲೆ.

HARAGAṆAMĀLE.

Substance, palm-leaf. Size, 13⅜ × 1⅜ inches. Pages, 6. Lines, 4 to 5 on a page. Character, Kannaḍa. Condition, much injured. Appearance, old. Mode of writing, good.

Complete.

Begins on fol. 32-*a* of the manuscript described under No. D. 6990 (Sanskrit).

Mentions the names of one hundred and eight devotees of Śiva.

Beginning :—

ಶ್ರೀಮದಗಜಾವಾರಲಿಂಗವ । (ಮದಗಜಾವರ) ?
ಪ್ರೇಮದಿಂ ತನುತ್ರಯದಿ ॥
ನಾಮಭೇದದಿ ನೆಲೆಗೊಳಿಸಿ ।
ತಮ ಸಂಗವನಳಿದು ॥
ವ್ಯೋಮಮೂರುತಿ ಯೊಳಹೊರಗೆಂಬ ।
ಆ ಮಹಾಘನವರಿದು ॥
ಯೀ ಮಹಿಮೆಯೊಳು ಮೆರೆವಾ ಘನ ।
ಸೋಮನಾಮವ ನೆನವೆ ॥ ೧ ॥

* * *

End :—

ಸುರತರುವಂ ಸುರಧೇನುವ ।
ವರಚಿಂತಾಮಣಿಗಳಿಂದು ಬೆಸರಂ ಬೇಳಲ್ ॥
ಹರಗಣಮಾಲೆಯ ಜಪಿಸಲ್ ।
ಭರದಿಂದಂ ಸಿದ್ಧಿಯಕ್ಕುದುಂ ಶಿವಬಸವ ॥ ೧೪ ॥

Colophon :—

ಹರಗಣಮಾಲೆ ಸಮಾಪ್ತಂ.

(ವಿ-ವಿ.)—

ಸಮಗ್ರ. ಒಂದೆಡೆ ಶಾಂತವೀರೇಶನೆಂಬ ಅಂಕಿತವು ಕಾಣುತ್ತದೆ. ಆದರೆ ಆ ಯೆಡೆಯಲ್ಲಿ ಅದು " ಶೂಲಿ " ಯೆಂಬ ಶಬ್ದಕ್ಕೆ ಅನ್ವಯಿಸುವುದಾಗಿದೆ. ೧೦೮ ಶಿವಭಕ್ತರ ಹೆಸರುಗಳನ್ನು ಇದರಲ್ಲಿ ಹೇಳಿದೆ.

AGENTS FOR THE SALE OF MADRAS GOVERNMENT PUBLICATIONS

IN INDIA

NEW BOOK COMPANY, Booksellers, etc., "Kitab Mahal," 18[illegible]0, Hornby Road, Bombay.
D. B. TARAPOREVALA SONS & CO., Bombay.
THACKER & CO. (LTD.), Bombay.
N. S. WAGLE, Circulating Agent and Bookseller, No. 6, Tribhuvan Road, Girgaon, Bombay.
THE BOOK COMPANY, Calcutta.
BUTTERWORTH & CO. (LTD.), 6, Hastings [illegible], Calcutta.
R. CAMBRAY & CO., Calcutta.
LAW BOOK SOCIETY, Publishers and Printers, 65/3, Harrison Road, Calcutta.
THACKER, SPINK & CO., 3, Esplanade East, Calcutta.
K. KRISHNA AYYAR BROTHERS, Booksellers, Publishers, etc., The Round, Trichur (Cochin State).
The Manager, THE HYDERABAD BOOK DEPOT, Hyderabad (Deccan).
The Secretary, OSMANIA UNIVERSITY STUDENTS' CO-OPERATIVE BOOK DEPOT, Lallaguda P.O., Hyderabad (Deccan).
The Director, "THE FRENCH INDIA GAZETTE," Karaikal.
M. R. APPADURAI, Bookseller, 57-A, Anderson Street, Esplanade, Madras.
THE CHRISTIAN LITERATURE SOCIETY FOR INDIA, Post Box No. 501, Park Town, Madras.
CITY BOOK COMPANY, Post Box No. 283, Madras.
C. COOMARASWAMI NAYUDU AND SONS, 27 and 35, Chinnathambi Street, Madras.
HIGGINBOTHAMS (LTD.), Mount Road, Madras.
THE SWADESAMITRAN (LTD.,) Mount Road, Madras.
MACMILLAN & CO. (LTD.), Mount Road, Madras.
G. A. NATESAN & CO., Madras.
V. RAMASWAMI SASTRULU & SONS, 292, Esplanade, Madras.
P. VARADACHARI & CO., Booksellers, 8, Lingha Chetti Street, Madras.
Agent, THE SOUTH INDIA SAIVA-SIDDHANTA WORKS PUBLISHING SOCIETY, LTD., 6, Coral Merchant Street, Madras.
VENKATRAMA & CO., Educational Publishers and Booksellers, Esplanade, Georgetown, Madras.
THE LITTLE FLOWER COMPANY, Educational Publishers and Booksellers, 56, Thambu Chetti Street, Georgetown, Madras, E.
V. PERUMALL CHETTY AND SONS, 5, Stringers Street, Georgetown, Madras.
MOHAMED ALI HUSAIN, Educational Publisher and Proprietor, "Madina Press," Triplicane P.O., Madras.
THE DECCAN PUBLISHING HOUSE, Huzur Road, Calicut (Madras).
THE EDUCATIONAL SUPPLIES CO., 142-A, Ponnurangam Street, R.S. Puram, Coimbatore (Madras).
Secretary, RAJAJI STATIONERY DEPOT, Devakottai (Madras).
SRINIVAS & CO., Town High School Road, Kumbakonam (Madras).
E. M. GOPALAKRISHNA KONE, Pudumantapam, Madura (Madras).
K. BHOJA RAO & CO., Booksellers, Kodialbail, Mangalore (Madras).
M. SESHACHALAM & CO., Proprietors, The Hindu Press, Masulipatam (Madras).
B. VENKATARAMAN, Correspondent, Permanent Fund Buildings, Neela South Street, Negapatam (Madras).
D. SRI KRISHNAMURTI, Editor of "Grama Paripalana," Ongole (Madras).
THE HINDUSTAN PUBLISHING CO., LTD., Rajahmundry (Madras).
THE MODERN STORES, Salem (Madras).
The Proprietor, THE HOUSE OF KNOWLEDGE, Booksellers and Publishers, Palliagraharam P.O., Tanjore (Madras).
SIVAGAMI PUBLISHING HOUSE, Booksellers and Publishers, Srivaikuntam, Tinnevelly (Madras).
S. KRISHNASWAMI & CO., Teppakulam Post, Trichinopoly Fort (Madras).
L. VAIDYANATHA AYYAR, Law Bookseller, Teppakulam P.O., Trichinopoly (Madras).
A. VENKATASUBBAN, Law Bookseller, Vellore (Madras).
BHAWNANI & SONS, Booksellers, etc., Connaught Place, New Delhi.
The Manager, THE INTERNATIONAL BOOK SERVICE, Booksellers, Publishers, News Agents and Stationers, Poona 4.
P. N. SWAMINATHA SIVAN & CO., Commission Agents, Booksellers, etc., Pudukkottai State. (Branches also at Karaikudi, Devakottai and Trichinopoly.)
The Proprietor, THE PUNJAB SANSKRIT BOOK DEPOT, Saidmitha Street, Lahore (Punjab).
MOHANLAL DOSSABHAI SHAH, Books Agent, etc., Rajkot.
B. S. MATHUR & CO., Chatur Vilas, Paota Civil Lines, Jodhpur (Rajputana).
THE BOOKLOVERS' RESORT, Booksellers and News Agents, Taikad, Trivandrum.

NOTICE.

Official publications may be obtained in the United Kingdom either direct from the office of the High Commissioner for India, India House, Aldwych, London, W.C. 2, or through any bookseller.